ವಿಷಯಾನುಕ್ರಮಣಿಕೆ

ಾಮರಾಜೇಂದ್ರಗ್ರಂಥರತ್ನಮಾಲಾ

ನಂ—೧೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ ಕಾಲಿಕಾಪುರಾಣಂ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದವಿವರಣೆಗಳೊಡನೆ)

ನಾಲ್ಕನೆಯ ಭಾಗ

(೭೬—೯೨ ಅಧ್ಯಾಯಗಳು)

ಅನುವಾದಕ:
ಹಾಸನದ ಪಂಡಿತ್ ವೆಂಕಟರಾವ್

ಮೈಸೂರು
ಶ್ರೀ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್
೧೯೪೪

ಮುನ್ನುಡಿ.

ನಾಲ್ಕನೆಯ ಭಾಗದ ಮುದ್ರಣದಿಂದ ಕಾಲಿಕಾಪುರಾಣವು ಪರಿಸಮಾಪ್ತಿಯಾಗಿರುವುದು. ಹಿಂದಿನ ಭಾಗಗಳ ಪೀಠಿಕೆಯಲ್ಲಿಯೇ ಈ ಪುರಾಣದ ಪ್ರಸ್ತಾವನೆಯನ್ನು ಸೂಕ್ಷ್ಮವಾಗಿ ಮಾಡಿರುವುದರಿಂದ ಇಲ್ಲಿ ಮತ್ತೆ ಹೇಳಬೇಕಾದ ವಿಶೇಷಾಂಶಗಳೇನೂ, ಇರುವುದಿಲ್ಲ. ಆದರೂ ದೇವಿಯ ಪೂಜೆಗಳಲ್ಲಿ ಅವಶ್ಯಕವಾಗಿ ಆಚರಿಸಬೇಕಾದ ನ್ಯಾಸಗಳ ವಿಷಯವಾಗಿ ಒಂದೆರಡು ಮಾತನ್ನು ಹೇಳಿ ಪ್ರಕೃತವಿಷಯವನ್ನು ಉಪಸಂಹರಿಸುವುದು ಉಚಿತವಾಗಿರುವುದು. ಶರೀರ ಶುದ್ಧಿಯಾಗಿ ದೇವತಾಪೂಜೆಗೆ ಅಧಿಕಾರಪ್ರಾಪ್ತಿಯಾಗುವುದೇ ನ್ಯಾಸದ ಮುಖ್ಯ ಉದ್ದೇಶವು. ಬೀಜಾಕ್ಷರಗಳಿಂದ ಆಯಾ ಅಂಗಗಳಲ್ಲಿ ನ್ಯಾಸಮಾಡುವುದರಿಂದ ಕಾಯಿಕ, ವಾಚಕ, ಮಾನಸವೆಂಬ ಮೂರುವಿಧವಾದ ಪಾಪಗಳು ನಿವೃತ್ತಿಯಾಗಿ ಶರೀರವು ಶುದ್ಧವಾಗುವುದಲ್ಲದೆ, ಆಯಾ ಅಂಗಗಳಲ್ಲಿ ದೇವತಾರಕ್ಷಣೆಯೂ ಉಂಟಾಗಿ, ಧ್ಯಾತೃ, ಧ್ಯೇಯ, ಧ್ಯಾನಗಳಲ್ಲಿ ಅಭೇದವು ಸ್ಫುರಿಸುವುದು. ಇದರಿಂದ ದೇವತೋಪಾಸನೆಗೆ ಬೇಕಾದ ಅಧಿಕಾರಪ್ರಾಪ್ತಿಯೂ ಮನಶ್ಶುದ್ಧಿಯೂ ಉಂಟಾಗುವುದು.

ನ್ಯಾಸವಿಧಾನವಲ್ಲಿ ಬಾಹ್ಯ, ಆಂತರಿಕ ಎಂದು ಎರಡು ವಿಧವು. ದೇವಿಯನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಬೀಜಾಕ್ಷರ ಮೊದಲಾದ ಮಂತ್ರಗಳಿಂದ ಶರೀರದ ಅವಯವಗಳನ್ನು ಸ್ಪರ್ಶನಮಾಡುವುದು ಬಾಹ್ಯನ್ಯಾಸವು. ಇದರಿಂದ ಶರೀರಶುದ್ಧಿಯಾಗುವುದು. ಧ್ಯಾತೃ, ಧ್ಯೇಯ, ಧ್ಯಾನಗಳಲ್ಲಿ ಅಭೇದವನ್ನು ಚಿಂತಿಸಿ, ಯೋಗಾಭ್ಯಾಸದ ರೀತಿಯಿಂದ ಶರೀರದ ಷಟ್ಚಕ್ರಗಳಲ್ಲಿಯೂ, ತ್ರಿನಾಡಿಗಳಲ್ಲಿಯೂ, ಅಂತಃಕರಣದಲ್ಲಿಯೂ ಮಂತ್ರಪೂರ್ವಕವಾಗಿ ಸೋಹಂಭಾವವನ್ನು ಚಿಂತಿಸುತ್ತಾ ನ್ಯಾಸಮಾಡುವುದು ಆಂತರಿಕಾನ್ಯಾಸವು. ಈ ಎರಡು ವಿಧವಾದ ನ್ಯಾಸಗಳನ್ನೂ ಸಾಧಕರು ಅವಶ್ಯಕವಾಗಿ ಮಾಡಬೇಕು.

ನ್ಯಾಸಗಳಲ್ಲಿ ಮಾತೃಕಾನ್ಯಾಸವು ಮುಖ್ಯವಾದುದು. ಇವನ್ನು ಸಾಧಾರಣವಾಗಿ ಎಲ್ಲ ಪೂಜೆಗಳಲ್ಲಿಯೂ ಮಾಡಲೇಬೇಕು. ಮಾತೃಕೆಗಳು (ವರ್ಣಗಳು) ಸಮಸ್ತ ದೇವತೆಗಳ ಬೀಜಾಕ್ಷರಗಳನ್ನು ಒಳಗೊಂಡಿರುವುದರಿಂದ, ಮಾತೃಕಾನ್ಯಾಸಮಾಡುವುದು ದೇವತೆಗಳೆಲ್ಲರನ್ನೂ ಆರಾಧಿಸಿ, ಅವರ ಅನುಗ್ರಹವನ್ನು ಪಡೆದಂತಾಗುವುದು. ಆದುದರಿಂದ ಪೂಜೆಮಾಡದೆ ಬರೀ ನ್ಯಾಸದಿಂದಲೇ ಪೂಜಾಫಲವನ್ನು ಸಾಧಕನು ಪಡೆಯುವನೆಂದು ಹೇಳಿರುವುದು. ಮಾತೃಕಾನ್ಯಾಸಮಾಡುವಾಗ ಅಕ್ಷರಗಳ ಸಂಯೋಜನದಲ್ಲಿ ಅಲ್ಪಸ್ವಲ್ಪ ಪ್ರಭೇದಗಳು ಹಲವು ತಂತ್ರಗಳಲ್ಲಿ ಕಂಡುಬಂದರೂ ಮುಖ್ಯವಿಷಯವು ಒಂದೇ ಆಗಿರುವುದು.

ಈ ಮಾತೃಕಾನ್ಯಾಸವಲ್ಲದೆ, ಕವಚನ್ಯಾಸ, ಅಷ್ಟಾಕ್ಷರೀಮಂತ್ರನ್ಯಾಸ, ದೇವತಾ ನ್ಯಾಸ, ಷಡಂಗನ್ಯಾಸ, ಋಷ್ಯಾದಿನ್ಯಾಸ, ಮೂಲಮಂತ್ರನ್ಯಾಸ, ಮೊದಲಾದ ಅನೇಕ ವಿಧವಾದ ನ್ಯಾಸಗಳಿರುವವು. ಈ ಗ್ರಂಥದಲ್ಲಿ ಮಾತೃಕಾನ್ಯಾಸ, ಕವಚನ್ಯಾಸ, ಅಷ್ಟಾಕ್ಷರೀನ್ಯಾಸ, ಮೂಲಮಂತ್ರನ್ಯಾಸಗಳಿಗೆ ವಿಶೇಷಪ್ರಾಧಾನ್ಯತೆಯನ್ನು ಕೊಟ್ಟಿರುವುದು. ಆದರೂ ಆಯಾ ದೇವತೆಗಳ ಪೂಜಾವಿಧಾನಗಳಲ್ಲಿ ವಿಶೇಷರೀತಿಯಿಂದ ಹೇಳಿರುವ ವಿಧಿನಿಯಮನುಗಳನ್ನನುಸರಿಸಿ, ಆಯಾ ಪೂಜೆಗೆ ಅವಶ್ಯಕವಾದ ನ್ಯಾಸಗಳನ್ನು ಆಚರಿಸಬೇಕು.

ಈ ಗ್ರಂಥಕ್ಕೆ ಪರಿಶಿಷ್ಟರೂಪವಾಗಿ, ವಿಧವಿಧವಾದ ನ್ಯಾಸಗಳೂ, ಬೀಜಾಕ್ಷರಗಳೂ, ಮಂತ್ರಗಳೂ, ಕವಚಗಳೂ, ಯಂತ್ರಗಳೂ, ಮುದ್ರೆಗಳೂ, ಅವುಗಳ ಚಿತ್ರಗಳೂ, ಇವೆಲ್ಲವನ್ನೂ ಸೇರಿಸಿ ಸಾಧಕರಿಗೆ ಉಪಯೋಗವಾಗುವಂತೆ ಒಂದು ಪ್ರತ್ಯೇಕ ಸಂಚಿಕೆಯನ್ನು ಮುದ್ರಿಸಬೇಕೆಂದು ಉದ್ದೇಶವಿದೆ. ದೇವಿಯ ಅನುಗ್ರಹದಿಂದ ಈ ಗ್ರಂಥಕ್ಕೆ ಬೇಕಾದ ವಿಷಯಗಳನ್ನು ಸಂಗ್ರಹಿಸಿ, ಸ್ವಲ್ಪಕಾಲದಲ್ಲಿಯೇ ಮುದ್ರಿಸಲಾಗುವುದು.

ದೇವತೋಪಾಸಕರಿಗೂ, ಭಕ್ತರಿಗೂ, ಉಪಯೋಗವಾಗಲೆಂದು ಇಂತಹ ಉತ್ತಮ ಗ್ರಂಥಗಳನ್ನು ಮುದ್ರಿಸಲು ನಮ್ಮನ್ನಾಳುವ **ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಅಪ್ಪಣೆಮಾಡಿರುವರು. ಪ್ರಭುಗಳ ಅಪ್ಪಣೆಯನ್ನು ಶಿರಸಾವಹಿಸಿ ಈ ಗ್ರಂಥವನ್ನು ಸಂಗ್ರಹವಾಗಿ ಬರೆದಿರುವೆನು. ಇದರ ಗುಣಾವಗುಣಗಳನ್ನು ಪ್ರಾಜ್ಞರು ಹಂಸಕ್ಷೀರನ್ಯಾಯದಂತೆ ಪರಿಗ್ರಹಿಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಮೈಸೂರು
ತಾರಣ ಸಂ॥ ಆಷಾಢಶುಕ್ಲ ದ್ವಾದಶಿ
ತಾ॥ 3-7-1944

ಪಾಸನದ ಪಂಡಿತ್ ವೆಂಕಟರಾವ್

ಶ್ರೀ

ಕಾಲಿಕಾಪುರಾಣದಲ್ಲಿ ನಾಲ್ಕನೆಯಭಾಗದ

ವಿಷಯಾನುಕ್ರಮಣಿಕೆ.

ಪುಟಸಂಖ್ಯೆ.

ಎಪ್ಪತ್ತಾರನೆಯ ಅಧ್ಯಾಯ—

ಕಾಮಾಖ್ಯಾದೇವಿಯ ಮಾಹಾತ್ಮ್ಯ ಕಥನ—ಕಾಮಾಖ್ಯಾದೇವಿಯ ಕವಚ ನಿರೂಪಣ—ಕವಚಮಹಾತ್ಮ್ಯವು. 1-19

ಎಪ್ಪತ್ತೇಳನೆಯ ಅಧ್ಯಾಯ—

ಮಾತೃಕಾನ್ಯಾಸಕಥನ— ಮಾತೃಕಾನ್ಯಾಸಮಾಹಾತ್ಮೆ 20-27

ಎಪ್ಪತ್ತೆಂಟನೆಯ ಅಧ್ಯಾಯ—

ಯೋನಿಮುದ್ರೆಯ ಎಂಟು ಪ್ರಭೇದಗಳು — ಮಂತ್ರಶುದ್ಧಿಕ್ರಮ— ವೈಷ್ಣವೀಅಷ್ಟಾಕ್ಷರೀ ಯಂತ್ರ ಮತ್ತು ಮಂತ್ರಜಪವಿಧಾನ— ತ್ರಿಪುರಾಯಂತ್ರ ಮತ್ತ ಜಪ— ಮಹಾಮಾಯಾ, ಶಾರದಾ, ಕಾಮೇಶ್ವರೀ ಈ ದೇವಿಯರ ಯಂತ್ರಗಳು ಮತ್ತು ಜಪ— ಜಪಮಾಹಾತ್ಮೆ — ಅಷ್ಟಾಕ್ಷರೀಮಂತ್ರಗಳಿಂದ ಅಷ್ಟಾಂಗನ್ಯಾಸ ಕ್ರಮ—ತ್ರಿಪುರಾದೇವಿಯ ಹದಿಮೂರು ಮಂತ್ರಗಳು — ಬಾಲಾ ತ್ರಿಪುರಾ ದೇವಿಯ ಮಂತ್ರ ಮತ್ತು ಯಂತ್ರ — ತ್ರಿಪುರಭೈ ರವೀದೇವಿಯ ಧ್ಯಾನಕ್ರಮ — ಬಾಲಾತ್ರಿಪುರಾದೇವಿಯ ಧ್ಯಾನ —ತ್ರಿಪುರಾಗಾಯತ್ರೀ —ಬಾಲಾತ್ರಿಪುರಾದೇವಿಯಪೂಜಾಕ್ರಮ — ತ್ರಿಪುರಭೈರವಿಯ ಧ್ಯಾನಕ್ರಮ — ತ್ರಿಪುರಭೈರವೀದೇವಿಯ ಪೂಜೆಯಲ್ಲಿ ಕೆಲವು ವಿಶೇಷ ಮಂತ್ರತಂತ್ರಗಳು — ದಕ್ಷಿಣಾಚಾ ರವಾಮಾಚಾರ ಪೂಜಾಕ್ರಮಗಳು— ತ್ರಿಪುರ ಭೈರವೀ ಪೂಜಾಕ್ರ ಮ — ಆದ್ಯಾತ್ರಿಪುರಾದೇವಿಯ ನ್ಯಾಸ — ವೈಷ್ಣವೀ ದೇವಿಯ ಮಂತ್ರಗಳು—ಜಪಪಾರಾಯಣ ಕ್ರಮವು. 28-74

ಪುಟಸಂಖ್ಯೆ.

ಎಪ್ಪತ್ತೊಂಭತ್ತನೆಯ ಅಧ್ಯಾಯ--

ತ್ರಿಪುರಾದೇವಿಯ ಪುರಶ್ಚರಣವಿಧಿ ಮತ್ತು ಕವಚನಿರೂಪಣೆಯು --- ಕವಚಪಠನಕ್ರಮ ಮತ್ತು ಆದರಮಹಿಮೆ 75-94

ಎಂಭತ್ತನೆಯ ಅಧ್ಯಾಯ---

ಮಂತ್ರಶುದ್ಧಿಕಥನವು — ನಾಲ್ಕುವಿಧವಾದ ಮಂತ್ರಗಳು — ವರ್ಗಾದ್ಯಕ್ಷರಗಳು ಮತ್ತು ಬೀಜಾಕ್ಷರಗಳು --- ಈ ಎಂಟು ವರ್ಗಾದ್ಯಕ್ಷರಗಳು ಸೇರಿ ವೈಷ್ಣವೀ ಅಷ್ಟಾಕ್ಷರೀಮಂತ್ರವಾಗುವುದು — ಬೀಜಾಕ್ಷರಗಳನ್ನು ಉಚ್ಚರಿಸುವ ಕ್ರಮ — ವರ್ಣಚಕ್ರ — ವಶ್ಯಾದಿವಿಧಾನ — ವೇತಾಲ ಭೈರವರು ಕಾಮರೂಪಪೀಠಕ್ಕೆ ಹೋಗಿ ದೇವಿಯನ್ನು ಆರಾಧಿಸುವುದು. — ದೇವಿಯು ಅವರಿಗೆ ಪ್ರತ್ಯಕ್ಷಳಾಗಿ ವರಗಳನ್ನು ಕೊಡುವುದು. --- ವೇತಾಲ ಭೈರವರು ದೇವಿಯನ್ನು ಸ್ತೋತ್ರಮಾಡುವುದು— ಈಶ್ವರನು ಕಾಮರೂಪಕ್ಕೆ ಬಂದು ವೇತಾಲಭೈರವರಿಗೆ ಅಲ್ಲಿನ ವಿವಿಧ ಕ್ಷೇತ್ರಗಳನ್ನೂ, ತೀರ್ಥಗಳನ್ನೂ, ದೇವತೆಗಳನ್ನೂ, ವಿವರಿಸಿ ತೋರಿಸುವುದು. --- 95-127

ಎಂಭತ್ತೊಂದನೆಯ ಅಧ್ಯಾಯ —

ಕಾಮರೂಪಪೀಠದ ಇತರ ಭಾಗಗಳ ವಿವರಣೆಯು 128-149

ಎಂಭತ್ತೆರಡನೆಯ ಅಧ್ಯಾಯ---

ದರ್ಪಣವೆಂಬ ಪರ್ವತದಲ್ಲಿರುವ ತೀರ್ಥಕ್ಷೇತ್ರಾದಿಗಳ ವಿವರಣೆಯು 150-183

ಎಂಭತ್ತಮೂರನೆಯ ಅಧ್ಯಾಯ—

ಶೃಂಗಾಟಾಚಲ ಮೊದಲಾದ ಪರ್ವತಗಳಲ್ಲಿರುವ ತೀರ್ಥಕ್ಷೇತ್ರಾದಿಗಳ ಕಥನವು—ಕಾಮರೂಪಪೀಠದಲ್ಲಿರುವ ದೇವತೆಗಳನ್ನು ಪೂಜಿಸುವ ವಿಧಾನ — ಕಾಮೇಶ್ವರ, ತೀಕ್ಷ್ಣಕಾಂತಾ, ಉಗ್ರತಾರಾ, ಇವರ ಪೂಜಾವಿಧಾನ— ತೀಕ್ಷ್ಣಕಾಂತಾಗಾಯತ್ರೀ — ಲಲಿತಕಾಂತದೇವಿಯ ಧ್ಯಾನ, ಗಾಯತ್ರೀ, ಮತ್ತು ಪೂಜಾಕ್ರಮ — ಬ್ರಹ್ಮದೇವನ ಪೂಜಾಕ್ರಮ—ಬ್ರಹ್ಮದೇವನ ಧ್ಯಾನ—ಬ್ರಹ್ಮಗಾಯಿತ್ರೀ -- ವಿಷ್ಣುಪೂಜಾ — ವಿಷ್ಣುವಿನ ಅಂಗಪ್ರತ್ಯಂಗ ಮಂತ್ರಗಳು---ವಿಷ್ಣುವನ್ನು ಪ್ರಧಾನಮಂತ್ರದಿಂದ ಧ್ಯಾನಿಸುವ ಕ್ರಮ—

ಪುಟಸಂಖ್ಯೆ.

ಅಂಗಮಂತ್ರದಿಂದ ಧ್ಯಾನ—ಪ್ರತ್ಯಂಗಮಂತ್ರದಿಂದ ಧ್ಯಾನ—ಮಂಡಲರಚನಾಕ್ರಮ-ವಿಷ್ಣುವಿನಯೋಗಿ ಮತ್ತು ಯೋಗಿನೀದೇವತೆಗಳು ಬಲಭದ್ರ, ಮನ್ಮಥ, ವರಾಹಮೂರ್ತಿ, ಯೋಗಿದೇವತೆಗಳುಇವರ ಧ್ಯಾನ--ಆಯುಧ ಮೊದಲಾದವುಗಳ ಬೀಜಾಕ್ಷರ—ವಿಷ್ಣುಪೂಜೆಯಲ್ಲಿನ ನ್ಯಾಸಕ್ರಮ — ವಿಷ್ಣುಪೂಜೆಯಲ್ಲಿ ಅವಶ್ಯಕವಾದಮಂತ್ರಗಳು. ಪೂಜಾಸಾಮಗ್ರಿ, ನೈವೇದ್ಯ, ಪೂಜಾಕಾಲಮೊದಲಾದುವುಗಳು — ಕಾಮರೂಪಪೀಠಮಾಹಾತ್ಮೆ 186-223

ಎಂಭತ್ತನಾಲ್ಕನೆಯ ಅಧ್ಯಾಯ—

ಕಾಮೇಶ್ವರೀ ಪೀಠಯಾತ್ರಾವರ್ಣನೆಯು — ಕಾಮೇಶ್ವರೀಪೀಠಕ್ಕೆ ವಸಿಷ್ಠನ ಶಾಪವು. 224-232

ಎಂಭತ್ತೈದನೆಯ ಅಧ್ಯಾಯ—

ಕಾಮರೂಪಪೀಠದ ಸಮೀಪದಲ್ಲಿರುವ ಲೌಹಿತ್ಯನದದ ಉತ್ಪತ್ತಿಕಥನವು. ಪರುಶುರಾಮನು ಮಾತೃವಧದೋಷನಿವೃತ್ತಿಗಾಗಿ ಲೌಹಿತ್ಯನದದ ಬ್ರಹ್ಮಕುಂಡ ತೀರ್ಥದಲ್ಲಿ ಸ್ನಾನಮಾಡಿ ಶುದ್ಧನಾಗುವುದು. 239-249

ಎಂಭತ್ತಾರನೆಯ ಅಧ್ಯಾಯ—

ಪರಶುರಾಮನ ಜನನವೃತ್ತಾಂತ—ತಂದೆಯ ಆಜ್ಞೆಯಂತೆ ತಾಯಿಯನ್ನು ವಧಮಾಡಿದ ವಿಚಾರ — ಬ್ರಹ್ಮಕುಂಡದಲ್ಲಿ ಸ್ನಾನದಿಂದ ಮಾತೃಹತ್ಯಾದೋಷ ನಿವಾರಣೆ -- ಲೌಹಿತ್ಯನದದಲ್ಲಿ ಸ್ನಾನಮಾಡುವುದರ ಮಾಹಾತ್ಮ್ಯೆಯು 250-259

ಎಂಭತ್ತೇಳನೆಯ ಅಧ್ಯಾಯ—

ಔರ್ವಮುನಿಯು ಸಗರರಾಜನಿಗೆ ಹೇಳಿದ ರಾಜನೀತಿವಿವರಣೆಯು 260-288

ಎಂಭತ್ತೆಂಟನೆಯ ಅಧ್ಯಾಯ—

ರಾಜಧರ್ಮನಿರೂಪಣೆ -- ಬಲನೀರಾಜನವಿಧಿ. 289304

ಪುಟಸಂಖ್ಯೆ.

ಎಂಭತ್ತೊಂಬತ್ತನೆಯ ಅಧ್ಯಾಯ —

ಪುಷ್ಯಸ್ನಾನ ವಿಧಿಕಥನವು — ಪುಷ್ಯನಕ್ಷತ್ರಯುತವಾದ ತದಿಗೆಯಲ್ಲಿ ರಾಜನು ಮಾಡಬೇಕಾದ ಚಂಡಿಕಾದೇವಿಯ ಪೂಜಾಕ್ರಮ 305-332

ತೊಂಭತ್ತನೆಯ ಅಧ್ಯಾಯ —

ರಾಜನು ಯುದ್ಧಕಾಲದಲ್ಲಿ ಜಯಶೀಲನಾಗಲು ಮಾಡಬೇಕಾದ ಇಂದ್ರ ಪೂಜೆಯ ವಿಧಿನಿಯಮಗಳು — ಇಂದ್ರಧ್ವಜಪೂಜೆಯಿಂದ ರಾಷ್ಟ್ರಕ್ಕೆ ಶಾಂತಿಯಾಗುವುದು. 333-345

ತೊಂಭತ್ತೊಂದನೆಯ ಅಧ್ಯಾಯ —

ಜ್ಯೇಷ್ಠದಶಮಿಯಲ್ಲಿ ರಾಜನು ವಿಷ್ಣುವನ್ನು ಪೂಜಿಸಬೇಕು — ಪೂಜಾಕ್ರಮ — ಪ್ರಾಣಪ್ರತಿಷ್ಠಾಪನಮಂತ್ರ — ಶ್ರೀಪಂಚಮಿಯಲ್ಲಿ ಇಂದ್ರನನ್ನು ಲಕ್ಷ್ಮಿಯನ್ನೂ ಪೂಜಿಸಬೇಕು — ಪುತ್ರರಲ್ಲಿ ಅನೇಕ ಭೇದಗಳು — ರಾಜನು ನಿತ್ಯವೂ ಆಚರಿಸಬೇಕಾದ ಕೆಲವು ನಿಯಮಗಳು 346-361

ತೊಂಭತ್ತೆರಡನೆಯ ಅಧ್ಯಾಯ —

ಭೈರವನ ವಂಶಕಥನವು — ಖಾಂಡವನದಹನವಿಚಾರವು 362-392

ತೊಂಭತ್ತಮೂರನೆಯ ಅಧ್ಯಾಯ —

ವೇತಾಲನ ವಂಶಕಥನವು — ಕಾಲಿಕಾಪುರಾಣಶ್ರವಣಪಠನಾದಿಗಳ ಫಲನಿರೂಪಣೆಯು — ಮಂಗಳ. 393-402

॥ ಶ್ರೀ ॥

ಅಥ
॥ ಶ್ರೀ ಕಾಲಿಕಾಪುರಾಣೇ ಷಟ್‌ಸಪ್ತತಿತಮೋऽಧ್ಯಾಯಃ ॥

॥ ಶ್ರೀಭಗವಾನುವಾಚ ॥

ಕಾಮಾಖ್ಯಾಯಾಶ್ಚ ಮಹಾತ್ಮ್ಯಂ ಶೃಣುತಂ ಚ ವದಾಮಿ ವಾಂ ।
ಸಾಂಗಂ ತತ್ಸರಹಸ್ಯಂ ಚ ಶೃಣು ವೇತಾಲಭೈರವ ॥ ೧ ॥

ಏಕದಾ ಗರುಡೇನಾಶು ವಿಷ್ಣುರ್ವಿಷ್ಣುಪರಾಯಣಾ ।
ಗಚ್ಛನ್ ದೇವೀಂ ತು ಕಾಮಾಖ್ಯಾಂ ನೀಲಸ್ಥಾಮಾಸಸಾದ ಹ ॥ ೨ ॥

ಆಸಾದ್ಯ ತಂ ಗಿರಿಶ್ರೇಷ್ಠಮವಜ್ಞಾಯ ಸ ಕೇಶವಃ ।
ಗಚ್ಛ ಗಚ್ಛೇತಿ ಗರುಡಂ ಚೋದಯಾಮಾಸ ತಂ ಗತೌ ॥ ೩ ॥

ಎಪ್ಪತ್ತಾರನೆಯ ಅಧ್ಯಾಯವು

೧. ಪರಮೇಶ್ವರನು ಹೇಳಿದನು:—ಎಲೈ ವೇತಾಲ ಭೈರವರೇ ಈಗ ಕಾಮೇಶ್ವರೀದೇವಿಯ ಮಹಾತ್ಮ್ಯವನ್ನೂ, ಆ ದೇವಿಯ ಪೂಜಾಕ್ರಮಗಳ ರಹಸ್ಯಗಳನ್ನೂ ಸಾಂಗವಾಗಿ ನಿಮಗೆ ಹೇಳುವೆನು, ಕೇಳಿ.

೨. ಒಂದಾನೊಂದು ಕಾಲದಲ್ಲಿ ವಿಷ್ಣುವು ಬೇಗನೆ ಹೋಗಲಿಚ್ಛೆಯಿಂದ ಗರುಡನಮೇಲೆ ಕೂತುಕೊಂಡು ಆಕಾಶಮಾರ್ಗದಲ್ಲಿ ಹೋಗುತ್ತಾ ನೀಲಾಚಲವಲ್ಲಿರುವ ಕಾಮೇಶ್ವರೀ ದೇವಿಯ ಮೇಲುಗಡೆಯಲ್ಲಿ ಹೋಗುತ್ತಿದ್ದನು.

೩. ಆ ನೀಲಾಚಲದಲ್ಲಿ ವಾಸವಾಗಿರುವ ಕಾಮೇಶ್ವರೀದೇವಿಯನ್ನೂ, ಆ ಗಿರಿಯನ್ನೂ ಸಹ ಗಣನೆಗೆ ತಾರದೆ, ವಿಷ್ಣುವು ಗರುಡನನ್ನು ಇನ್ನೂ ವೇಗವಾಗಿ ಹೋಗುವಂತೆ ಪ್ರೇರಿಸಿದನು.

ತಂ ಚ ದೇವೀ ಮಹಾಮಾಯಾ ಕಾಮಾಖ್ಯಾ ಜಗತಾಂ ಪ್ರಸೂಃ ।
ಗರುಡೇನ ಸಮಂ ಕೃಷ್ಣಂ ಸ್ತಂಭಯಾಮಾಸ ರೋದಸಿ ॥ ೪ ॥

ಸ ತು ಗಂತುಂ ಮಹಾಮಾಯಾಮಾಯಯಾ ಪರಿಮೋಹಿತಃ ।
ನ ಗಂತುಮಥವಾ ಗಂತುಮಶಕದ್ಬದ್ಧವತ್ಸ್ಥಿತಃ ॥ ೫ ॥

ಅಶಕ್ತಂ ಗರುಡಂ ದೃಷ್ಟ್ವಾ ಗಮನೇ ಗರುಡಧ್ವಜಃ ।
ಕ್ರುದ್ಧಸ್ತಂ ಪರ್ವತಶ್ರೇಷ್ಠಮುತ್ಸಾರಯಿತುಮುದ್ಯತಃ ॥ ೬ ॥

ತತಃ ಕರಾಭ್ಯಾಂ ತಂ ಶೈಲಂ ಕ್ರೋಡೀಕೃತ್ಯ ಜಗತ್ಪತಿಃ ।
ಅಭೂತ್ ಕ್ಷಮಶ್ಚಾಲಯಿತುಂ ಮನಾಗಪಿ ನ ಕೇಶವಃ ॥ ೭ ॥

ತಂ ಚಿಚಾಲಯಿಷುಂ ಶೈಲಂ ಕಾಮಾಖ್ಯಾ ಕ್ರೋಧತತ್ಪರಾ ।
ಸಿದ್ಧಸೂತ್ರೇಣ ವೈಕುಂಠಂ ಬಬಂಧ ಗರುಡೇನ ಹಿ ॥ ೮ ॥

---

೪. ಜಗನ್ಮಾತೆಯಾದ ಕಾಮೇಶ್ವರೀದೇವಿಯು ಆ ಗರುಡನನ್ನೂ ವಿಷ್ಣುವನ್ನೂ ಸಹ ಬೆಟ್ಟದ ತಪ್ಪಲಿನಲ್ಲಿ ಚಲನವಲನಗಳಿಲ್ಲದಂತೆ ಸ್ತಂಭನಮಾಡಿದಳು.

೫. ಮಹಾಮಾಯೆಯ ಮಾಯೆಯಿಂದ ಮೋಹಿತನಾಗಿ, ಗರುಡನು ಮುಂದಕ್ಕೆ ಹೋಗುವುದಕ್ಕೂ, ಹೋಗದಿರುವುದಕ್ಕೂ ಕೂಡ ಶಕ್ತಿಯಿಲ್ಲದವನಾಗಿ ಕೈಕಾಲು ಕಟ್ಟಿದವನಹಾಗೆ ಸುಮ್ಮನೆ ನಿಂತುಬಿಟ್ಟನು.

೬. ಮುಂದಕ್ಕೆ ಹೋಗಲು ಗರುಡನು ಶಕ್ತಿಯಿಲ್ಲದವನಾಗಿರುವುದನ್ನು ವಿಷ್ಣುವು ನೋಡಿ ಕೋಪಗೊಂಡು, ಆ ಬೆಟ್ಟವನ್ನು ಆ ಸ್ಥಳದಿಂದ ಬೇರೆಯಕಡೆಗೆ ಕಿತ್ತೆಸೆಯಲು ಪ್ರಯತ್ನಮಾಡಿದನು.

೭-೯. ಜಗತ್ತಿಗೆ ಅಧಿಪತಿಯಾದ ವಿಷ್ಣುವು ಆಗ ತನ್ನ ಎರಡು ಕೈಗಳಿಂದಲೂ ಆ ಬೆಟ್ಟವನ್ನು ಅದುಮಿ ಹಿಡಿದುಕೊಂಡು ಕೀಳಲು ಯತ್ನಿಸಿದನು. ಎಷ್ಟು ಪ್ರಯತ್ನಪಟ್ಟರೂ ಅದನ್ನು ಕೊಂಚಮಟ್ಟಿಗಾದರೂ ಅಲ್ಲಾಡಿಸಲು ಸಾಧ್ಯವಾಗಲಿಲ್ಲ. ಇದನ್ನು ನೋಡಿ ಕಾಮೇಶ್ವರೀದೇವಿಯು ಕೋಪಗೊಂಡು ವಿಷ್ಣುವನ್ನೂ, ಗರುಡನನ್ನೂ ಸಹ

ತಂ ಬದ್ಧ್ವಾ ಸಿದ್ಧಸೂತ್ರೇಣ ಗ್ರಾಹೋಗ್ರೇ ಲವಣಾರ್ಣವೇ ।
ಚಿಕ್ಷೇಪ ಹೇಲಯಾ ದೇವೀ ಸಂಕ್ಷೇಪಾತ್ಪ್ರಾಪ ತತ್ತಲಂ ॥ ೯ ॥

ತಂ ಸಾಗರತಲಂ ಪ್ರಾಪ್ತಂ ಪುನರೇವ ಸ್ವಮಾಯಯಾ ।
ಯಂತ್ರಯಿತ್ವಾ ಸಮಾಕ್ರಮ್ಯ ಜಗ್ರಾಹಾಬ್ಧಿತಲಸ್ಥಿತಂ ॥ ೧೦ ॥

ಸ ಪ್ರಯತ್ನೇನ ಮಹತಾ ನೋತ್ಪ್ಲುತಿಂ ಕರ್ತುಮಿಷ್ಟವಾನ್ ।
ಮಹಾಯತ್ನಂ ಪ್ರಕುರ್ವಾಣಃ ಪುನರುನ್ಮಜ್ಜನೇ ಹರಿಃ ॥ ೧೧ ॥

ತಸ್ಯಾಸಾರಪ್ರಸಾರಂ ಚ ಕಾಮಾಖ್ಯಾ ಪ್ರತ್ಯಷೇಧಯತ್ ।
ಜ್ಞಾನೋದ್ಗಮನಮಪ್ಯಸ್ಯ ಸಾ ದೇವೀ ಪ್ರತ್ಯಷೇಧಯತ್ ॥ ೧೨ ॥

ತತಃ ಪ್ರಜ್ಞಾನರಹಿತಃ ಪ್ರಸಾರಾಸಾರವರ್ಜಿತಃ ।
ಗರುಡೇಪ ಸಮಂ ತೋಯಂ ತಲೇ ಶೀರ್ಣಮಭೂಚ್ಚಿರಂ ॥ ೧೩ ॥

ಮಾರ್ಗಮಾಣಸ್ತು ತಂ ಸ್ರಷ್ಟಾ ಸಾಗರಾಂತರಸಂಸ್ಥಿತಂ ।
ಹರಿಮಾಸಾದಯಾಮಾಸ ವಿಶೀರ್ಣಂ ಪ್ರಾಕೃತಂ ಯಥಾ ॥ ೧೪ ॥

ತನ್ನ ಸಿದ್ಧಸೂತ್ರದಿಂದ ಬಂಧಿಸಿ, ಅವರನ್ನು ಲೀಲೆಯಿಂದಲೇ ಭಯಂಕರವಾದ ಲವಣಸಮುದ್ರಕ್ಕೆ ಎಸೆಯಲು ಅವರು ಅದರಲ್ಲಿ ಮುಳುಗಿಹೋದರು.

೧೦-೧೨. ಬಳಿಕ ದೇವಿಯು ತನ್ನ ಮಾಯೆಯಿಂದ ಸಮುದ್ರತಳದಲ್ಲಿದ್ದ ವಿಷ್ಣುವನ್ನು ಕೈಯಿಂದ ಬಲವಾಗಿ ಹಿಡಿದುಕೊಳ್ಳಲು, ದೇವಿಯ ಕೈಯಿಂದ ಬಿಡಿಸಿ ಕೊಂಡು ಮೇಲಕ್ಕೇಳಬೇಕೆಂದು ವಿಷ್ಣುವು ಬಹುವಾಗಿ ಪ್ರಯತ್ನಮಾಡಿದರೂ ಸಾಧ್ಯ ವಾಗಲಿಲ್ಲ. ಇದನ್ನು ನೋಡಿ ದೇವಿಯು ವಿಷ್ಣುವಿಗೆ ಕೈಕಾಲುಗಳನ್ನು ಚಲಿಸಲೂ ಸಹ ಆಗದಂತೆ ಮಾಡಿ ಅವನ ಬುದ್ಧಿಯನ್ನೂ ಸಹ ಮಲಿನಗೊಳಿಸಿ, ಜ್ಞಾನರಹಿತ ನನ್ನಾಗಿ ಮಾಡಿದಳು.

೧೩. ಜ್ಞಾನಶೂನ್ಯನಾದುದರಿಂದ ವಿಷ್ಣುವು ಹಸ್ತಾದಿಗಳ ಚಲನವನ್ನೂ ಸಹ ಮಾಡಲು ಶಕ್ತಿಯಿಲ್ಲದೆ ಗರುಡನೊಡನೆ ಆ ಮಹಾಸಮುದ್ರದ ತಳದಲ್ಲಿ ಬಹುಕಾಲದ ವರಿಗೂ ನಿಶ್ಚೇಷ್ಟಿತನಾಗಿ ಬಿದ್ದಿದ್ದನು.

೧೪-೧೬. ಇತ್ತ ಬ್ರಹ್ಮನು ವಿಷ್ಣುವನ್ನು ಕಾಣದೆ, ಎಲ್ಲೆಲ್ಲಿಯೂ ಹುಡುಕುತ್ತಾ ಕಡೆಗೆ ಸಮುದ್ರತಳದಲ್ಲಿ ಸಾಮಾನ್ಯ ಮನುಷ್ಯನಂತೆ ನಿಶ್ಚೇಷ್ಟಿತನಾಗಿ ಬಿದ್ದಿರುವುದನ್ನು

ತಮಾಸಾದ್ಯ ಸತಾಕ್ಷ್ಯಂ ತು ಸ್ಪೃಷ್ಟಾ ಲೋಕಪಿತಾಮಹಃ ।
ಹಸ್ತಾಭ್ಯಾಂ ತಂ ಸಮಾದಾಯ ಪ್ರೋತ್ಪ್ಲವಯಿತುಮಿಷ್ಟವಾನ್ ॥ ೧೫ ॥

ತಮುತ್ಪ್ಲವಯಿತುಂ ಶಕ್ತೋ ನಾಭೂಲ್ಲೋಕಪಿತಾಮಹಃ ।
ಸ್ವಯಂ ಚ ದೇವೀಮಾಯಾಭಿರ್ಬದ್ಧಸ್ಸನ್ ವಿಸ್ಮಯಂ ಸ್ಥಿತಃ ॥ ೧೬ ॥

ಮಾರ್ಗಮಾಣಾಸ್ತು ತೌ ಸರ್ವೇ ದೇವಾಃ ಶಕ್ರಪುರೋಗಮಾಃ ।
ಚಿರೇಣ ಚಾಥ ಕಾಲೇನ ಸಮಾಸೇದುರ್ಜಲಾಂತರೇ ॥ ೧೭ ॥

ತಾನಾಸಾದ್ಯ ತತಸ್ಸರ್ವೇ ಸುರಾಶ್ಶಕ್ರಪುರೋಗಮಾಃ ।
ಸಮುತ್ಪ್ಲವಯಿತುಂ ಯತ್ನಂ ಚಕ್ರುರ್ನಾಶಕ್ನುವಂಶ್ಚ ತೇ ॥ ೧೮ ॥

ತತಸ್ಸರ್ವೇಽಪಿ ತೇ ದೇವಾ ಮಾಯಯಾ ಮೋಹಿತಾ ಭೃಶಂ ।
ವಿಧಿವಿಷ್ಣೂ ಸ್ಥಿತೌ ಯದ್ವತ್ತದ್ವತ್ತೇ ತತ್ರ ಸಂಸ್ಥಿತಾಃ ॥ ೧೯ ॥

ಮಾರ್ಗಮಾಣೋಽಥ ತಾರ್ ಸರ್ವಾರ್ ದೇವಾರ್ ದೇವಗುರುಸ್ತದಾ ।
ಬೃಹಸ್ಪತಿರ್ಮಾಂ ಹಿಮವತ್ಯಾಸದತ್ಸಾನುಸಂಸ್ಥಿತಂ ॥ ೨೦ ॥

ಕಂಡು, ಅವನನ್ನೂ, ಅವನೊಡನಿರುವ ಗರುಡನನ್ನೂ, ತನ್ನ ಕೈಗಳಿಂದ ಮೇಲಕ್ಕೆತ್ತ ಬೇಕೆಂದು ಅಪೇಕ್ಷಿಸಿ, ಪ್ರಯತ್ನಮಾಡಿನೋಡಿದನು. ಎಷ್ಟು ಪ್ರಯತ್ನಪಟ್ಟರೂ ಏನೂ ಉಪಯೋಗವಾಗಲಿಲ್ಲ. ಇದೇನಿರಬಹುದೆಂದು ಆಶ್ಚರ್ಯಪಡುತ್ತಿರುವಲ್ಲಿ, ದೇವಿಯು ಆ ಬ್ರಹ್ಮನನ್ನೂ ತನ್ನ ಮಾಯೆಯಿಂದ ಬಂಧಿಸಿದಳು.

೧೭-೧೯. ವಿಷ್ಣು ಬ್ರಹ್ಮರಿಬ್ಬರೂ ಕಾಣದಿರಲು, ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಇವರನ್ನು ಬಹುಕಾಲ ಹುಡುಕುತ್ತಲಿದ್ದು ಬಳಿಕ ನೀರಿನ ಮಧ್ಯ ದಲ್ಲಿ ಅವರನ್ನು ಕಾಣಲು, ಎಲ್ಲರೂ ಸೇರಿ ಅವರನ್ನು ಮೇಲಕ್ಕೆತ್ತಬೇಕೆಂದು ಪ್ರಯ ತ್ನಿಸಿ ವಿಫಲರಾದರು. ದೇವಿಯ ಮಾಯೆಯಿಂದ ಬ್ರಹ್ಮವಿಷ್ಣುಗಳಿಗೆ ಆದ ಗತಿಯೇ ಇವರಿಗೂ ಆಯಿತು.

೨೦-೨೧. ಇಷ್ಟಾದ ಮೇಲೆ ದೇವಗುರುವಾದ ಬೃಹಸ್ಪತಿಯು ದೇವತೆಗಳನ್ನು ಹುಡುಕಲು ಹೊರಟು, ಅಲ್ಲಲ್ಲಿ ಸುತ್ತುತ್ತಾ ಕಡೆಗೆ ಈ ಹಿಮವತ್ಪರ್ವತದ ತಪ್ಪಲಿನಲ್ಲಿ

ಸಮಾಸಾದ್ಯ ಸ ದೇವಾನಾಂ ವೃತ್ತಾಂತಂ ದೇವಪೂಜಿತಃ ।
ಪೃಷ್ಟವಾ್ ಸಾದರಂ ಸಮ್ಯಕ್ ಸ್ತುತ್ವಾ ನತ್ವಾ ಯಥಾವಿಧಿ ॥ ೨೦ ॥

॥ ಗುರುರುವಾಚ ॥

ಮಹಾದೇವ ಜಗದ್ಧಾಮ ಜಗತ್ಪ್ರಶಮಕಾರಣ ।
ಶಕ್ರಾದೀ್ ಮಾರ್ಗಮಾಣೋಽಹಂ ದೇವಾಂಸ್ತ್ವಾಂ ಸಮುಪಸ್ಥಿತಃ ॥ ೨೨ ॥

ಬ್ರಹ್ಮಾ ವಿಷ್ಣುಶ್ಚ ನ ಬ್ರಹ್ಮಸದನೇ ನಾಪಿ ನಾಕತಃ ।
ಸಂಸ್ಥಿತೌ ನಾಪಿ ಕುತ್ರಾಪಿ ಜ್ಞಾಯೇತೇ ಹ್ಯನ್ಯಥಾ ಯಥಾ ॥ ೨೩ ॥

ತಮಿಮಂ ಸಂಶಯಂ ದೇವ ಛಿಂದಿ ತ್ವಂ ದೇವ ದೇವತಾಃ ।
ಕುತ್ರ ತಿಷ್ಠಂತಿ ಕಸ್ಮಾದ್ವಾ ತಥಾ ಭೂತ್ವಾ ಹ್ಯವಸ್ಥಿತಾಃ ॥ ೨೪ ॥

ಅನುಯಾಸ್ಯಾಮಿ ತಾ್ ಸರ್ವಾನುಪದೇಶಾತ್ತವ ಪ್ರಭೋ ।
ತೇಷಾಂ ಸ್ಥಿತಿಂ ತ್ವಂ ಕಥಯ ಯದಿ ತೇ ವರ್ತತೇ ದಯಾ ॥ ೨೫ ॥

ಕುಳಿತಿರುವ ನನ್ನ ಬಳಿಗೆ ಬಂದು, ಯಥಾವಿಧಿಯಾಗಿ ಸ್ತೋತ್ರನಮಸ್ಕಾರಾದಿಗಳಿಂದ ನನ್ನನ್ನು ಪೂಜಿಸಿ ದೇವತೆಗಳವಿಚಾರವಾಗಿ ಹೀಗೆ ಪ್ರಶ್ನೆಮಾಡಿದನು.

೨೨-೨೫. ಎಲೈಮಹಾದೇವನೇ, ನೀನು ಜಗತ್ತೆಲ್ಲಕ್ಕೂ ಆಶ್ರಯನು, ಅದನ್ನು ಪ್ರಳಯಕಾಲದಲ್ಲಿ ನಾಶಮಾಡುವವನೂ ನೀನೇ. ಈಗ ನಾನು ಇಂದ್ರನೇ ಮೊದಲಾದ ದೇವತೆಗಳನ್ನು ಹುಡುಕಿಕೊಂಡು ನಿನ್ನ ಸಮೀಪಕ್ಕೆ ಬಂದಿರುವೆನು. ಬ್ರಹ್ಮನೂ, ವಿಷ್ಣುವೂ ಅವರವರ ಮನೆಗಳಲ್ಲಿಲ್ಲ. ಸ್ವರ್ಗದಲ್ಲಿಯೂ ಅವರು ಇದ್ದಂತೆ ಕಾಣಲಿಲ್ಲ. ಇನ್ನೆಲ್ಲಿರುವರೋ ನನಗೆ ಬೇರೆ ತಿಳಿಯದು. ದೇವತೆಗಳನ್ನು ಕೇಳೋಣ ವೆಂದರೆ ಅವರೂ ತಮ್ಮ ಸ್ಥಾನವಾದ ಸ್ವರ್ಗದಲ್ಲಿ ಇಲ್ಲ. ಹೀಗೆ ಎಲ್ಲರೂ ಎಲ್ಲಿ ಹೋಗಿರು ವರೆಂದು ತಿಳಿಯಲು ನಿನ್ನ ಬಳಿಗೆ ಬಂದಿರುವೆನು. ಎಲೈ ದೇವನೇ, ನನ್ನ ಸಂಶಯ ವನ್ನು ಪರಿಹಾರಮಾಡಿ, ಬ್ರಹ್ಮವಿಷ್ಣುಮೊದಲಾದ ದೇವತೆಗಳಿರುವ ಸ್ಥಳವನ್ನು ನನಗೆ ದಯವಿಟ್ಟು ತಿಳಿಸು. ನಿನ್ನಮಾತಿನಂತೆ ಅವರಿರುವ ಸ್ಥಳಕ್ಕೆ ಹೋಗಿ ಅವರನ್ನು ಕಾಣುವೆನು. ನನ್ನಲ್ಲಿ ನಿನಗೆ ದಯವಿದ್ದರೆ, ಅವರ ವೃತ್ತಾಂತವನ್ನು ನನಗೆ ತಿಳಿಸು. ಎಂದು ಬೇಡಿಕೊಂಡನು.

ತಸ್ಯ ತದ್ವಚನಂ ಶ್ರುತ್ವಾ ತದುದ್ದೇಶಮಹಂ ಪುನಃ ।
ತತ್ಸರ್ವಮುಕ್ತವಾ ಕಪರ್ದ ಯಥಾ ಬದ್ಧಾಶ್ಚ ಮಾಯಯಾ ॥ ೨೬ ॥

ಅವಜ್ಞಾತಾ ಮಹಾದೇವೀ ಮಹಾಮಾಯಾ ಜಗನ್ಮಯಿಾ ।
ತೇನ ತನ್ಮಾಯಯಾ ಬದ್ಧೋ ವಿಷ್ಣುಸ್ತಿಷ್ಠತಿ ಸಾಗರೇ ॥ ೨೭ ॥

ತಂ ಮಾರ್ಗಮಾಣಾಸ್ತ್ರಿದಶಾ ಬ್ರಹ್ಮಾದ್ಯಾ ಮಾಯಯಾ ಪುನಃ ।
ನಿಬದ್ಧಾ ನಿಕಟೇ ತಸ್ಯ ಸ್ಥಿತಾಶ್ಚಾತ್ಯಂತಸಂಯುತಾಃ ॥ ೨೮ ॥

ತಾಂಸ್ತು ಮಾರ್ಗಯಿತುಂ ಯಾಮಿ ಯದಿಹ ತ್ವಂ ಮಯಾ ವಿನಾ ।
ಬದ್ಧಸ್ತಥೈವ ತ್ವಂ ಚಾಪಿ ನಾಯಾತುಂ ಭವಿತಾಽಪ್ರಭುಃ ॥ ೨೯ ॥

ತಸ್ಮಾದ್ಗಚ್ಛಾಮ್ಯಹಂ ತತ್ರ ಯತ್ರಾಸ್ತೇ ಗರುಡಧ್ವಜಃ ।
ಬ್ರಹ್ಮೇಂದ್ರಾದ್ಯಾಸ್ತಥಾ ಗುಪ್ತಾ ಮೋಚಯಿಷ್ಯೇ ಚ ತಾ ಕ್ರಮಾತ್ ॥

---

೨೬. ನಾನು ಅವನ ಮಾತನ್ನು ಕೇಳಿ, ಅವನ ಉದ್ದೇಶವನ್ನು ತಿಳಿದು ಅವರು ಹೇಗೆ ಮಾಯೆಯಿಂದ ಬದ್ಧರಾದರೋ ಆ ವೃತ್ತಾಂತವೆಲ್ಲವನ್ನೂ ಅವನಿಗೆ ಹೇಳಿದೆನು.

೨೭-೨೯. ಮಹಾಮಾಯಾಸ್ವರೂಪಗಳಾದ ದೇವಿಯನ್ನು ವಿಷ್ಣುವು ಅವಮಾನಪಡಿಸಿದಕಾರಣ ದೇವಿಯು ಅವನನ್ನು ಮಾಯೆಯಿಂದ ಬಂಧಿಸಿ ಸಮುದ್ರ ತಲದಲ್ಲಿರಿಸಿರುವಳು. ಬ್ರಹ್ಮನೇ ಮೊದಲಾದ ದೇವತೆಗಳು ವಿಷ್ಣುವನ್ನು ಹುಡುಕಿ ಕೊಂಡು ಅಲ್ಲಿಗೆ ಹೋಗಿ, ಅವನನ್ನು ಬಿಡಿಸಲು ಪ್ರಯತ್ನಪಟ್ಟು ಸಾಧ್ಯವಾಗದೆ ತಾವೂ ಸಹ ಆದೇರೀತಿ ಮಾಯೆಯಿಂದ ಬದ್ದರಾಗಿ, ಆ ವಿಷ್ಣುವಿನ ಸಮೀಪದಲ್ಲಿಯೇ ನಿಶ್ಚೇಷ್ಟಿತರಾಗಿ ಬಿದ್ದಿರುವರು.

೨೯-೩೦. ಈಗ ನಾನೇ ಅವರ ಸಮೀಪಕ್ಕೆ ಹೋಗಬೇಕೆಂದಿರುವೆನು. ನಾನಿಲ್ಲದೆ ನೀನೊಬ್ಬನೇ ಅಲ್ಲಿಗೆ ಹೋದದ್ದಾದರೆ ನಿನಗೂ ಅವರಿಗೆ ಆದ ಗತಿಯು ಆಗಿ ಬದ್ಧನಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ನಾನೇ ಆ ಸ್ಥಳಕ್ಕೆ ಹೋಗಿ ವಿಷ್ಣುವನ್ನೂ, ಬ್ರಹ್ಮನೇ ಮೊದಲಾದ ದೇವತೆಗಳನ್ನೂ ಬಂಧನದಿಂದ ಬಿಡಿಸುವೆನು.

ಇತ್ಯುಕ್ತ್ವಾ ಗುರುಣಾ ಸಾರ್ಧಂ ಸಂಭೂಯ ವೃಷಭಧ್ವಜಃ ।
ದೇವೌಘಾ ಯತ್ರ ತಿಷ್ಠಂತಿ ಗತಸ್ತತ್ರ ಮಹೇಶ್ವರಃ ॥ ೩೧ ॥

ತತ್ರ ಗತ್ವಾ ಮಹಾದೇವೋ ವಿಷ್ಣುಮಾಭಾಷ್ಯ ವೇಧಸಂ ।
ಸರ್ವಾ೯ ತಾ೯ ಪರಿಪಪ್ರಚ್ಛ ಕಿಮರ್ಥಂ ಸಂಸ್ಥಿತಾಸ್ತ್ವಿಹ ॥ ೩೨ ॥

ಗತಾಗತವಿಹೀನಾಶ್ಚ ಜಡವತ್ ಜ್ಞಾನವರ್ಜಿತಾಃ ।
ಕಿಮರ್ಥಮಭವ೯ ದೇವಾಸ್ತನ್ಮೇ ಭಾಷಂತು ಸಂಪ್ರತಿ ॥ ೩೩ ॥

ತಸ್ಯ ತದ್ವಚನಂ ಶ್ರುತ್ವಾ ಮಹಾದೇವಸ್ಯ ಕೇಶವಃ ।
ಶನೈರ್ಭಗ೯ಮುವಾಚೇದಂ ಬ್ರಹ್ಮಾದೀನಾಂ ಪುರಸ್ತದಾ ॥ ೩೪ ॥

॥ ಭಗವಾನುವಾಚ ॥

ನೀಲಕೂಟಸ್ಯ ಶಿಖರಾದೂರ್ಧ್ವಭಾಗೇನ ಗಚ್ಛತಾ ।
ವಿಯತಾ ಗರುಡಸ್ಥೇನ ಮಯಾ ನೀಲೋ ಮಹಾಗಿರಿಃ ॥ ೩೫ ॥

---

೩೧. ಮಹೇಶ್ವರನು ಹೀಗೆ ಹೇಳಿ, ಬೃಹಸ್ಪತಿಯನ್ನೂ ಜೊತೆಯಲ್ಲಿ ಕರೆದು ಕೊಂಡು, ದೇವತೆಗಳೆಲ್ಲರೂ ಇರುವಲ್ಲಿಗೆ ಹೋದನು.

೩೨-೩೩. ಅಲ್ಲಿಗೆ ಹೋಗಿ ವಿಷ್ಣುವನ್ನು ಮಾತನಾಡಿಸಿ, ಬ್ರಹ್ಮನೇ ಮೊದಲಾದ ಎಲ್ಲಾ ದೇವತೆಗಳನ್ನೂ ಕಂಡು ಎಲೈ ದೇವತೆಗಳಿರಾ, ನೀವುಗಳು ಏತಕ್ಕಾಗಿ ಇಲ್ಲಿರುವಿರಿ? ನಿಮ್ಮನ್ನು ನೋಡಿದರೆ, ನಿಮಗೆ ತಿರುಗಾಡುವಷ್ಟು ಶಕ್ತಿಯೂ ಇರುವಂತೆ ಕಾಣುವುದಿಲ್ಲ. ದಡ್ಡರಂತೆ ಜ್ಞಾನವಿಲ್ಲದವರಾಗಿ ಬಿದ್ದಿರುವಿರಿ. ಹೀಗಾಗಲು ಕಾರಣವೇನೆಂಬುದನ್ನು ನನಗೆ ತಿಳಿಸಿ.

೩೪. ಮಹಾದೇವನ ಮಾತನ್ನು ಕೇಳಿ ವಿಷ್ಣುವು ಆಗ ಬ್ರಹ್ಮನೇ ಮೊದಲಾದ ದೇವತೆಗಳ ಮುಂದೆ ಮೆಲ್ಲನೆ ಶಿವನ ಸಂಗಡ ಈ ಮಾತನ್ನು ಹೇಳಿದನು.

೩೫-೪೦. ಭಗವಂತನಾದ ವಿಷ್ಣುವು ಹೇಳಿದನು:—ನೀಲಕೂಟದ ಶಿಖರದ ಮೇಲೆ ಆಕಾಶ ಮಾರ್ಗದಲ್ಲಿ ನಾನು ಗರುಡನಮೇಲೆ ಹೋಗುತ್ತಿರುವಾಗ ಗರುಡನ ಮಾರ್ಗಕ್ಕೆ ತೊಂದರೆಯಾಗಿರುವ ಈ ನೀಲಾಚಲವೆಂಬ ದೊಡ್ಡ ಬೆಟ್ಟವನ್ನು ಕೇಳುವುದಕ್ಕಾಗಿ ಕೈಗಳಿಂದ ಯತ್ನಮಾಡಿದೆನು. ಆಗ ಅಲ್ಲಿದ್ದ ಕಾಮರೂಪಿಣೀ, ಮಹಾ

ಧೃತಃ ಕರೇಣ ಚೋತ್ಪತ್ಯ ಗರುಡಾಗತಿವಾರಣೇ ।
ತತ್ರ ಮಾಂ ಸಾ ಮಹಾಮಾಯಾ ಕಾಮಾಖ್ಯಾ ಕಾಮರೂಪಿಣೀ ॥ ೫೬ ॥

ಯೋಗನಿದ್ರಾ ಸ್ವಯಂ ಧೃತ್ವಾ ಚಿಕ್ಷೇಪಾಂಬುಧಿಪುಷ್ಕರೇ ।
ತತೋಽಹಂ ತಲಮಾಸಾದ್ಯ ತೋಯರಾಶೇಸ್ಸವಾಹನಃ ॥ ೫೭ ॥

ಪತಿತೋ ನಿವಸಾಮ್ಯತ್ರ ಚಿರಮುಂಧಕಸೂದನ ।
ನಿವಸಾಮಿ ಚಿರಂ ಚಾಹಮತ್ರ ಸಾಗರತೋಯಕೇ ॥ ೫೮ ॥

ನಾದ್ಯಾಪಿ ಸಾ ಮಹಾಮಾಯಾ ನುದತೇ ಮಾಂ ಮಹೇಶ್ವರ ।
ಮದರ್ಥಮಾಗತಾ ದೇವಾ ಬ್ರಹ್ಮೇಂದ್ರಾದ್ಯಾಃ ಸಮಂತತಃ ॥ ೫೯ ॥

ತೇಽಪಿ ಬದ್ಧಾ ಮಹಾದೇವ್ಯಾ ಮಾಯಾಪಾಶೇನ ವೈ ಹತಾತ್ ।
ತಸ್ಮಾನ್ನೋ ಹ್ಯನುಗೃಹ್ಣೀಷ್ವ ನಯೇದಾನೀಂ ಶಿವಾಲಯೇ ॥ ೬೦ ॥

ತಾಂ ಚ ಪ್ರಸಾದಯಿಷ್ಯಾವಃ ಸಮ್ಯಗ್ಬಂಧವಿಹಿಂಸಯಾ ।
ಹರೇಸ್ತದ್ವಚನಂ ಶ್ರುತ್ವಾ ಜ್ಯಹಂ ಚ ಕರುಣಾಯುತಃ ॥ ೬೧ ॥

ಮಾಯಾ, ಯೋಗನಿದ್ರಾ ಮೊದಲಾದ ಹೆಸರುಗಳಿಂದ ಪ್ರಸಿದ್ಧಳಾದ ಕಾಮಾಖ್ಯಾ ದೇವಿಯು, ನನ್ನನ್ನು ಹಿಡಿದು ಬಂಧಿಸಿ, ಈ ಸಮುದ್ರದ ದೊಗರಿನಲ್ಲಿ ಎಸೆದಿರುವಳು. ಆಗಿನಿಂದ ಬಹುಕಾಲ ಕಳೆದರೂ ನಾನೂ ನನ್ನ ವಾಹನವಾದ ಗರುಡನೂ ಇಲ್ಲಿಯೇ ಬಿದ್ದಿರುವೆವು. ಈಗಲೂ ಸಹ ನನ್ನನ್ನು ಮೇಲಕ್ಕೆ ತರಲು ಆ ಮಹಾಮಾಯೆಯು ಪ್ರಯತ್ನ ಮಾಡುವಂತೆ ತೋರುವುದಿಲ್ಲ. ನನ್ನನ್ನು ಬಿಡಿಸಲು ಬಂದ ಬ್ರಹ್ಮಾದಿ ದೇವತೆಗಳೂ ಸಹ ಆ ದೇವಿಯ ಮಾಯಾಪಾಶದಿಂದ ಬದ್ಧರಾಗಿ ಇಲ್ಲಿ ನನ್ನ ಸುತ್ತಲೂ ಬಿದ್ದಿರುವರು. ಆದುದರಿಂದ ನಮ್ಮಮೇಲೆ ಅನುಗ್ರಹ ಮಾಡಿ ನಮ್ಮನ್ನು ಶಿವಾಲಯಕ್ಕೆ ಕರೆದುಕೊಂಡು ಹೋಗು. ಅಲ್ಲಿ ನಾವು ದೇವಿಯನ್ನು ಸ್ತೋತ್ರಾದಿಗಳಿಂದ ಪ್ರಸನ್ನಳನ್ನಾಗಿ ಮಾಡಿ ಬಂಧವಿಮೋಚನೆಗಾಗಿ ಪ್ರಾರ್ಥಿಸುವೆವು.

೪೧-೪೪. ವಿಷ್ಣುವಿನ ಆ ಮಾತನ್ನು ಕೇಳಿ ನಾನೂ ಕೂಡ ದಯೆಯಿಂದ ಬ್ರಹ್ಮ ವಿಷ್ಣು ಇಬ್ಬರನ್ನೂ ಬಹಳ ಪ್ರೀತಿಯಿಂದ ಮಾತನಾಡಿಸಿ, ಎಲೈ ವಿಷ್ಣುಬ್ರಹ್ಮರೇ ಕಾಮೇಶ್ವರೀದೇವಿಯ ಕವಚವನ್ನು ಮಂತ್ರಪುರಸ್ಸರವಾಗಿ ಶರೀರದಲ್ಲಿ ಧರಿಸಿದ್ದೀರಾದರೆ, ಅವರ ಪ್ರಭಾವದಿಂದ ನೀವು ಸಮುದ್ರತಲದಿಂದ ಮೇಲಕ್ಕೆದ್ದು ದೇವಿಯಬಳಿಗೆ

ಉವಾಚ ಪರಮಪ್ರೀತ್ಯಾ ವಿಧಿವಿಷ್ಣೂ ಪ್ರತಿ ಸ್ವಯಂ ।
ಈಶ್ವರ್ಯಾಃ ಕಾಮಪೂರ್ವಾಯಾಃ ಕವಚಂ ಸುಮನೋಹರಂ ॥ ೪೨ ॥

ಬದ್ಧ್ವಾ ಶರೀರೇ ಚಾಪ್ಲಾವ್ಯ ಪಶ್ಚಾದ್ಗಚ್ಛಂತು ತಾಂ ಪ್ರತಿ ।
ಅಹಂ ನಿಬದ್ಧಕವಚಸ್ತೇನಾಹಂ ಮಾಯಯಾ ತ್ವಿಹ ॥ ೪೩ ॥

ನ ಬದ್ಧೋ ಮಮ ಸಂಸರ್ಗಾತ್ತಥಾ ಚೇಹ ಬೃಹಸ್ಪತಿಃ ।
ತಸ್ಮಾದ್ಯೂಯಂ ತು ಕವಚಂ ಶೃಣುಧ್ವಂ ವಚನಾನ್ಮಮ ॥ ೪೪ ॥

ಯೇನ ಸೌಖ್ಯಾತ್ಸಮುತ್ಪ್ಲುತ್ಯ ದ್ರಕ್ಷ್ಯಾಮಃ ಪರಮೇಶ್ವರೀಂ ।
ಓಂ ಕಾಮಾಖ್ಯಾ ಕವಚಸ್ಯಾಸ್ಯ ಮುನಿರ್ಬೃಹಸ್ಪತಿಃ ಸ್ಮೃತಃ ॥ ೪೫ ॥

ದೇವೀ ಕಾಮೇಶ್ವರೀ ತಸ್ಯ ಅನುಷ್ಟುಪ್ ಛಂದ ಇಷ್ಯತೇ ।
ವಿನಿಯೋಗಃ ಸರ್ವಸಿದ್ಧೌ ತಚ್ಚ ಶೃಣ್ವಂತು ದೇವತಾಃ ॥ ೪೬ ॥

ಪೋಗಲು ಸಮರ್ಥರಾಗುವಿರಿ. ನಾನು ಕವಚವನ್ನು ಕಟ್ಟಿಕೊಂಡಿರುವೆನು. ಅದರ ಮಹಿಮೆಯಿಂದ ನಾನು ನಿಮ್ಮಂತೆ ಮಾಯಾಬದ್ಧನಾಗಿಲ್ಲ. ನನ್ನ ಸಹವಾಸದಿಂದ ಬೃಹಸ್ಪತಿಯೂ, ಬದ್ಧನಾಗಿಲ್ಲ. ಆದುದರಿಂದ ನೀವುಗಳು ನನ್ನ ಮಾತಿನಂತೆ ದೇವಿಯ ಕವಚವನ್ನು ಕೇಳಿರಿ. ಅನಂತರ ಆ ಕವಚದ ಮಹಿಮೆಯಿಂದ ಅನಾಯಾಸವಾಗಿ ಇಲ್ಲಿಂದ ಮೇಲಕ್ಕೆದ್ದು ಬಂದು ಪರಮೇಶ್ವರಿಯನ್ನು ನೋಡೋಣ. ನಿಮಗಾಗಿ ಆ ಕವಚದ ಸ್ವರೂಪವನ್ನು ವಿವರಿಸುವೆನು.

೪೨-೪೬. ಓಂ, ಈ ಕಾಮೇಶ್ವರಿಯ ಕವಚ ಮಹಾಮಂತ್ರಕ್ಕೆ ಬೃಹಸ್ಪತಿಯು ಋಷಿಯಾಗಿರುವನು; ಕಾಮೇಶ್ವರಿಯೇ ದೇವತೆಯು; ಅನುಷ್ಟುಪ್ ಛಂದಸ್ಸು. ಎಲ್ಲಾವಿಧವಾದ ಸಿದ್ಧಿಗಳನ್ನು ಪಡೆಯುವುದರಲ್ಲಿ ಇದರ ವಿನಿಯೋಗವು ಎಂದು ಉಕ್ತವಾಗಿರುವುದು. ಎಲೈ ದೇವತೆಗಳಿರಾ, ನೀವು ಈ ಕವಚವನ್ನು ಶ್ರದ್ಧೆಯಿಂದ ಕೇಳಿರಿ.

ಶಿವಾ ಕಾಮೇಶ್ವರೀ ದೇವೀ ಕಾಮಾಖ್ಯಾ ಚಕ್ಷುಷೀ ಮಮ ।
ಶಾರದಾ ಕರ್ಣಯುಗಲಂ ತ್ರಿಪುರಾ ವದನಂ ತಥಾ ॥ ೪೭ ॥

ಕಂಠಂ ಪಾತು ಮಹಾಮಾಯಾ ಹೃದಿ ಕಾಮೇಶ್ವರೀ ಪುನಃ ।
ಕಾಮಾಖ್ಯಾ ಜಠರೇ ಪಾತು ಶಾರದಾ ಮಾಂ ತು ನಾಭಿತಃ ॥ ೪೮ ॥

ತ್ರಿಪುರಾ ಪಾರ್ಶ್ವಯೋಃ ಪಾತು ಮಹಾಮಾಯಾ ತು ಮೇಹನೇ ।
ಗುದೇ ಕಾಮೇಶ್ವರೀ ಪಾತು ಕಾಮಾಖ್ಯೋರುದ್ವಯೇ ತು ಮಾಂ ॥ ೪೯ ॥

ಜಾನುನೋಃ ಶಾರದಾ ಪಾತು ತ್ರಿಪುರಾ ಪಾತು ಜಂಘಯೋಃ ।
ಮಹಾಮಾಯಾ ಪಾದಯುಗೇ ನಿತ್ಯಂ ರಕ್ಷತು ಕಾಮದಾ ॥ ೫೦ ॥

ಕೇಶೇ ಕೋಟೀಶ್ವರೀ ಪಾತು ನಾಸಾಯಾಂ ಪಾತು ದೀರ್ಘಿಕಾ ।
ಭೈರವೀ ದಂತಸಂಘಾತೇ ಮಾತಂಗ್ಯವತು ಚಾಂಗಯೋಃ ॥ ೫೧ ॥

---

೪೭. ಮಂಗಳಕರವಾದ ಕಾಮಾಖ್ಯಾ ಎಂದು ಹೆಸರುಳ್ಳ ಕಾಮೇಶ್ವರೀ ದೇವಿಯು ನನ್ನ ಕಣ್ಣುಗಳನ್ನು ರಕ್ಷಿಸಲಿ. ಶಾರದಾ ದೇವಿಯು ಎರಡುಕಿವಿಗಳನ್ನೂ, ತ್ರಿಪುರಾದೇವಿಯು ಮುಖವನ್ನೂ ಕಾಪಾಡಲಿ.

೪೮. ಮಹಾಮಾಯಾದೇವಿಯು ಕಂಠವನ್ನೂ, ಕಾಮೇಶ್ವರೀ ದೇವಿಯು, ಹೃದಯವನ್ನೂ, ಕಾಮಾಖ್ಯಾ ದೇವಿಯು ಜಠರವನ್ನೂ, ಶಾರದಾ ದೇವಿಯು ನಾಭಿಯನ್ನೂ ರಕ್ಷಿಸಲಿ.

೪೯. ತ್ರಿಪುರಾದೇವಿಯು ಎರಡು ಪಾರ್ಶ್ವಗಳಲ್ಲಿಯೂ, ನನ್ನನ್ನು ರಕ್ಷಿಸಲಿ, ಮಹಾಮಾಯೆಯು ಶಿಶ್ನವನ್ನೂ, ಕಾಮೇಶ್ವರೀ ದೇವಿಯು ಪೃಷ್ಠಭಾಗವನ್ನೂ, ಕಾಮಾಖ್ಯಾದೇವಿಯು ಎರಡು ತೊಡೆಗಳನ್ನೂ ಸಹ ರಕ್ಷಿಸಲಿ.

೫೦. ಶಾರದಾ ದೇವಿಯು ಎರಡು ಮಂಡಿಗಳನ್ನೂ, ತ್ರಿಪುರಾದೇವಿಯು ಎರಡು ಕಣಕಾಲುಗಳನ್ನೂ, ಮಹಾಮಾಯಾದೇವಿಯು ಎರಡು ಪಾದಗಳನ್ನೂ ಕಾಮದಾ ಎಂಬ ದೇವಿಯು ಎಲ್ಲಾ ಕಾಲಗಳಲ್ಲಿಯೂ ನನ್ನನ್ನು ರಕ್ಷಿಸಲಿ.

೫೧. ಕೋಟೀಶ್ವರೀ ದೇವಿಯು ನನ್ನ ತಲೆಯಕೂದಲನ್ನೂ, ದೀರ್ಘಿಕಾ ದೇವಿಯು ಮೂಗನ್ನೂ, ಭೈರವಿಯು ದಂತಪಂಕ್ತಿಯನ್ನೂ, ಮಾತಂಗಿಯು ಎಲ್ಲಾ ಅಂಗಗಳನ್ನೂ ಕಾಪಾಡಲಿ.

ಬಾಹ್ವೋರ್ಮಾಂ ಲಲಿತಾ ಪಾತು ಪಾಣ್ಯೋಸ್ತು ವನವಾಸಿನೀ ।
ವಿಂಧ್ಯವಾಸಿನ್ಯಂಗುಲೀಷು ಶ್ರೀಕಾಮಾ ನಖಕೋಟಿಷು ॥ ೫೨ ॥

ರೋಮಕೂಪೇಷು ಸರ್ವೇಷು ಗುಪ್ತಕಾಮಾ ಸದಾವತು ।
ಪಾದಾಂಗುಲೀಪಾರ್ಷ್ಣಿಭಾಗೇ ಪಾತು ಮಾಂ ಭುವನೇಶ್ವರೀ ॥ ೫೩ ॥

ಜಿಹ್ವಾಯಾಂ ಪಾತು ಮಾಂ ಸೇತುಃ ಕಃ ಕಂಠಾಭ್ಯಂತರೇಽವತು ।
ನಃ ಪಾತು ಚಾಂತರೇ ವಕ್ಷಃ ಇಃ ಪಾತು ಜಠರಾಂತರೇ ॥ ೫೪ ॥

ಸಾಮಿಾಂದುಃ ಪಾತು ಮಾಂ ವಸ್ತಾವಿಂದುಬಿಂದ್ವಂತರೇಽವತು ।
ಕಕಾರಸ್ತ್ವಚಿ ಮಾಂ ಪಾತು ರಕಾರೋಽಸ್ಥಿಷು ಸರ್ವದಾ ॥ ೫೫ ॥

ಲಕಾರಃ ಸರ್ವನಾಡೀಷು ಈ ಕಾರಃ ಸರ್ವಸಂಧಿಷು ।
ಚಂದ್ರಃ ಸ್ನಾಯುಷು ಮಾಂ ಪಾತು ಬಿಂದುರ್ಮಜ್ಜಾಸು ಸಂತತಂ ॥ ೫೬ ॥

---

೫೨. ಲಲಿತಾದೇವಿಯು ತೋಳುಗಳನ್ನೂ, ವನವಾಸಿನೀದೇವಿಯು ಎರಡು ಕೈಗಳನ್ನೂ, ವಿಂಧ್ಯವಾಸಿನಿಯು ಬೆರಳುಗಳನ್ನೂ, ಶ್ರೀಕಾಮಾದೇವಿಯು ಉಗುರುಗಳ ತುದಿಯನ್ನೂ ರಕ್ಷಿಸಲಿ.

೫೩. ಗುಪ್ತಕಾಮಾ ಎಂದು ಹೆಸರುಳ್ಳ ದೇವಿಯು, ಎಲ್ಲಾ ರೋಮಕೂಪಗಳನ್ನು ಕಾಪಾಡಲಿ. ಭುವನೇಶ್ವರೀದೇವಿಯು ಕಾಲು ಬೆರಳಿನ ಪಕ್ಕಗಳನ್ನು ರಕ್ಷಿಸಲಿ.

೫೪-೫೬. ಸೇತು ದೇವಿಯು ಅಥವಾ ಪ್ರಣವವು ನನ್ನ ನಾಲಿಗೆಯನ್ನೂ, ಕಃ ಎಂಬ ಅಕ್ಷರವು ಕುತ್ತಿಗೆಯ ಒಳಭಾಗವನ್ನೂ, ನಃ ಎಂಬ ವರ್ಣವು ಎದೆಯ ಒಳಭಾಗವನ್ನೂ, ಇಃ ಎಂಬ ಅಕ್ಷರವು ಹೊಟ್ಟೆಯಒಳಭಾಗವನ್ನೂ ರಕ್ಷಿಸಲಿ. ಪ್ಲುತವು ನನ್ನ ವಸ್ತಿಭಾಗವನ್ನೂ, ಅನುಸ್ವಾರವು ಒಳಭಾಗವನ್ನೂ ಕಕಾರವು ನನ್ನ ಚರ್ಮವನ್ನೂ, ರಕಾರವು ನನ್ನ ಮೂಳೆಯನ್ನೂ ಯಾವಾಗಲೂ ರಕ್ಷಿಸಲಿ. ಲಕಾರವು ಎಲ್ಲಾ ನಾಡಿಗಳಲ್ಲಿಯೂ, ಈಕಾರವು ಎಲ್ಲಾ ಸಂಧಿಗಳಲ್ಲಿಯೂ, ಚಂದ್ರನು ನರಗಳಲ್ಲಿಯೂ, ಬಿಂದುವು ಮಜ್ಜೆಯಲ್ಲಿಯೂ ರಕ್ಷಿಸಲಿ.

ಪೂರ್ವಸ್ಯಾಂ ದಿಶಿ ಚಾಗ್ನೇಯ್ಯಾಂ ದಕ್ಷಿಣೇ ನೈರ್ಋತೇ ತಥಾ ।
ವಾರುಣೇ ಚೈವ ವಾಯವ್ಯಾಂ ಕೌಬೇರೇ ಹರಮಂದಿರೇ ॥ ೫೭ ॥

ಅಕಾರಾದ್ಯಾಸ್ತು ವೈಷ್ಣವ್ಯಾ ಅಷ್ಟೌ ವರ್ಣಾಸ್ತು ಮಂತ್ರಗಾಃ ।
ಪಾಂತು ತಿಷ್ಠಂತು ಸತತಂ ಸಮುದ್ಭವನಿವೃದ್ಧಯೇ ॥ ೫೮ ॥

ಊರ್ಧ್ವಾಧಃ ಪಾತು ಸತತಂ ಮಾಂ ತು ಸೇತುದ್ವಯಂ ಸದಾ ।
ನವಾಕ್ಷರಾಣಿ ಮಂತ್ರೇಷು ಶಾರದಾ ಮಂತ್ರಗೋಚರೇ ॥ ೫೯ ॥

ನವಸ್ವರಂ ತು ಮಾಂ ನಿತ್ಯಂ ನಾಸಾದಿಷು ಸಮಂತತಃ ।
ವಾತಪಿತ್ತಕಫೇಭ್ಯಸ್ತು ತ್ರಿಪುರಾಯಾಸ್ತು ತ್ರ್ಯಕ್ಷರಂ ॥ ೬೦ ॥

ನಿತ್ಯಂ ರಕ್ಷತು ಭೂತೇಭ್ಯಃ ಪಿಶಾಚೇಭ್ಯಸ್ತಥೈವ ಚ ।
ತಸ್ಯೇತೂ ಸತತಂ ಪಾತಾಂ ಕ್ರವ್ಯಾದ್ಭ್ಯೋ ಮಾಂ ನಿವಾರಕೌ ॥ ೬೧ ॥

ನುಮಃ ಕಾಮೇಶ್ವರೀಂ ದೇವೀಂ ಮಹಾಮಾಯಾಂ ಜಗನ್ಮಯಿಾಂ ।
ಯಾ ಭೂತ್ವಾ ಪ್ರಕೃತಿರ್ನಿತ್ಯಂ ತನೋತಿ ಜಗದಾದ್ಯತಾಂ ॥ ೬೨ ॥

೫೭-೫೮. ಪೂರ್ವ, ಆಗ್ನೇಯ, ದಕ್ಷಿಣ, ನೈರುತ್ಯ, ವಾಯುವ್ಯ. ಪಶ್ಚಿಮ, ಉತ್ತರ, ಈಶಾನ್ಯ, ಎಂಬ ಈ ಎಂಟುದಿಕ್ಕುಗಳಲ್ಲಿ ವೈಷ್ಣವೀ ದೇವಿಯ ಮಂತ್ರಕ್ಕೆ ಸೇರಿದ ಅಕಾರವೇ ಮೊದಲಾದ ಅ, ಕ, ಚ, ಟ, ತ, ಪ, ಯ, ಶ, ಎಂಬ ಎಂಟು ಅಕ್ಷರಗಳು ನನ್ನ ಅಭಿವೃದ್ಧಿಗಾಗಿ ಯಾವಾಗಲೂ ನನ್ನನ್ನು ರಕ್ಷಿಸಲಿ. ಮೇಲುಭಾಗ, ಕೆಳಭಾಗ, ಈಕಡೆಗಳಲ್ಲಿ ನನ್ನನ್ನು ಯಾವಾಗಲೂ, ಎರಡು ಸೇತು ಮಂತ್ರಗಳು (ಓಂಕಾರ) ರಕ್ಷಿಸಲಿ.

೫೯. ಶಾರದಾಮಂತ್ರಕ್ಕೆ ಸಂಬಂಧಿಸಿದ ಮಂತ್ರಗಳಲ್ಲಿ ಒಂಭತ್ತು ಅಕ್ಷರಗಳೂ, ಒಂಭತ್ತು ಸ್ವರಗಳೂ ಸಹ, ನನ್ನನ್ನು ಯಾವಾಗಲೂ, ಮೂಗು ಮೊದಲಾದುವುಗಳಲ್ಲಿ ಎಲ್ಲಾಕಡೆಗಳಲ್ಲಿಯೂ ರಕ್ಷಿಸಲಿ.

೬೦-೬೧. ತ್ರಿಪುರಾದೇವಿಯ ಮಂತ್ರದಮೂರುವರ್ಣಗಳೂ, ವಾತ, ಪಿತ್ತ, ಕಫಗಳಿಂದ ನನ್ನನ್ನು ಕಾಪಾಡಲಿ. ಭೂತಗಳೂ, ಪಿಶಾಚಿಗಳೂ, ರಾಕ್ಷಸರೂ, ಇವರುಗಳ ಬಾಧೆಯಿಂದ ಆ ತ್ರಿಪುರಾದೇವಿಯ ಸೇತು ಮಂತ್ರಗಳೆರಡು ನನ್ನನ್ನು ಕಾಪಾಡಲಿ.

೬೨. ಯಾವ ಕಾಮೇಶ್ವರೀ ದೇವಿಯು ಯಾವಾಗಲೂ ತಾನು ಜಗತ್ತೆಲ್ಲಕ್ಕೂ ಆಧಾರಭೂತಳಾಗಿ ಅವುಗಳಿಗೆ ತಾನೇ ಮೂಲವೆಂಬುದನ್ನೂ ಮೊದಲನೆಯವಳೆಂಬು.

ಕಾಮಾಖ್ಯಾಮಕ್ಷಮಾಲಾಭಯವರದಕರಾಂ ಸಿದ್ಧಸೂತ್ರೈಕಹಸ್ತಾಂ ।
ಶ್ವೇತಪ್ರೇತೋಪರಿಸ್ಥಾಂ ಮಣಿಕನಕಯುತಾಂ ಕುಂಕುಮಾಂ ಪೀತವರ್ಣಾಂ।
ಜ್ಞಾನಧ್ಯಾನಪ್ರತಿಷ್ಠಾಮತಿಶಯವಿನಯಾಂ ಬ್ರಹ್ಮಶಕ್ರಾದಿವಂದ್ಯಾ ।
ಮಗ್ನೌ ಬಿಂದ್ವಂತಮಂತ್ರಪ್ರಿಯತಮವಿಷಯಾಂ ನೌಮಿ ಸಿದ್ಧ್ಯೈ ರತಿಸ್ಥಾಂ॥

ಮಧ್ಯೇ ಮಧ್ಯಸ್ಯ ಭಾಗೇ ಸತತವಿನಮಿತಾ ಭಾವಹಾವಾವಲೀಯಾ ।
ಲೀಲಾ ಲೋಕಸ್ಯ ಕೋಷ್ಠೇ ಸಕಲಗುಣಯುತಾ ವ್ಯಕ್ತರೂಪೈಕನಮ್ರಾ ।
ವಿದ್ಯಾ ವಿದ್ಯೈಕಶಾಂತಾ ಶಮನಶಮಕರೀ ಕ್ಷೇಮಕರ್ತ್ರೀ ವರಾಸ್ಯಾ ।
ನಿತ್ಯಂ ಪಾತಾಪವಿತ್ರಪ್ರಣವವರಕರಾ ಕಾಮಪೂರ್ವೇಶ್ವರೀ ನಃ ॥ ೬೪ ॥

ದನ್ನೂ ವಿಶದಪಡಿಸುವಳೋ ಅಂತಹ ಜಗನ್ಮೋಹಿನಿಯಾದ, ಮಹಾಮಾಯೆಯೆಂಬ ಕಾಮೇಶ್ವರೀ ದೇವಿಗೆ ನಮಸ್ಕಾರವನ್ನು ಮಾಡುವೆವು.

೬೩. ಈ ಕಾಮೇಶ್ವರೀ ದೇವಿಯು ತನ್ನ ನಾಲ್ಕು ಕೈಗಳಲ್ಲಿ, ಜಪಸರ, ಅಭಯ, ವರದ, ಸಿದ್ಧಸೂತ್ರ, ಇವುಗಳನ್ನು ಧರಿಸಿ, ಬಿಳಿಯದಾದ ಪ್ರೇತದ ಮೇಲುಗಡೆಯಲ್ಲಿರುವಳು. ಮತ್ತು ರತ್ನ, ಚಿನ್ನ, ಇವುಗಳ ಆಭರಣಗಳನ್ನು ಧರಿಸಿ ಕೆಂಪಿನಬಣ್ಣದಿಂದಲೂ, ಹಳದಿಯ ಬಣ್ಣದಿಂದಲೂ, ಇರುವ ತೇಜಸ್ಸಿನಿಂದ ಬೆಳಗುತ್ತಾ ಜ್ಞಾನ, ಧ್ಯಾನ, ಇವುಗಳಿಗೆ ಆಧಾರವಾಗಿ, ಹೆಚ್ಚಾದ ವಿನಯವನ್ನು ಭಕ್ತರಿಗೆ ಉಂಟು ಮಾಡುತ್ತಾ, ಬ್ರಹ್ಮ, ಇಂದ್ರ, ಇವರೇಮೊದಲಾದ ದೇವತೆಗಳಿಂದಲೂ, ನಮಸ್ಕಾರ ವನ್ನು ಸ್ವೀಕರಿಸುತ್ತಾ, ರತಿಯಭಿಮಾನಿದೇವತೆಯಾಗಿ, ಅಗ್ನಿ ಬೀಜಾಕ್ಷರವು ಬಿಂದು ವಿನೊಡನೆ ಸೇರಿಸಿದರೆ ಆಗುವ ಮಂತ್ರದಲ್ಲಿ ಬಹಳಪ್ರೀತಿಯಿಂದಿರುವಳು. ಇಂತಹ ಆ ಕಾಮೇಶ್ವರೀ ದೇವಿಯನ್ನು ಕಾರ್ಯಸಿದ್ಧಿಗಾಗಿ ನಾನು ನಮಸ್ಕಾರವನ್ನು ಮಾಡುವೆನು.

೬೪. ಈ ಕಾಮೇಶ್ವರೀದೇವಿಯು, ಯಾವಾಗಲೂ, ಲೋಕದ, ಮತ್ತು ದೇಹದ ಮಧ್ಯಭಾಗದಲ್ಲಿ ವಾಸಮಾಡುವವಳು. ಹಾವಭಾವಾದಿ ಅಭಿನಯಗಳಲ್ಲಿ ನಿಪುಣಳು. ಲೋಕಕ್ಕೆ ವಿಲಾಸವನ್ನುಂಟುಮಾಡುವವಳು. ಆಯಾಯ ಸಮಯಕ್ಕೆ ತಕ್ಕ ಗುಣಗಳಿಂದ ಕೂಡಿದವಳು. ಸ್ಪಷ್ಟವಾದ ಆಕಾರವುಳ್ಳವಳು. ಜ್ಞಾನಸ್ವರೂಪಳು. ಜ್ಞಾನದಿಂದ, ಉಪಶಾಂತಿಯನ್ನು ಹೊಂದುವಳು. ವಿಪತ್ತನ್ನು ನಾಶಮಾಡುವವಳು. ಕ್ಷೇಮವನ್ನುಂಟು ಮಾಡುವವಳು. ಶ್ರೇಷ್ಠವಾದ ಮುಖವುಳ್ಳವಳು. ಶ್ರೇಷ್ಠವಾದ

ಇತಿ ಪರಕೆವಚಂ ತನುಸ್ಥಿತಂ ಚ ।
ಶಮಯತಿ ವೈ ಶಮನಂ ತಥಾ ಯದಿ ।
ಇಹ ಗೃಹಾಣ ಯತಸ್ವ ವಿಮೋಕ್ಷಣೇ ।
ಸಹಿತ ಏಷ ವಿಧಿಃ ಸಹ ಚಾಮರೈಃ ॥ ೬೫ ॥

ಇತೀದಂ ಕವಚಂ ಯಸ್ತು ಕಾಮಾಖ್ಯಾಯಃ ಪಠೇದ್ಬುಧಃ ।
ಸಕೃತ್ತಂ ತು ಮಹಾದೇವೀ ತ್ವನುಪ್ರಜತಿ ನಿತ್ಯದಾ ॥ ೬೬ ॥

ನಾಧಿವ್ಯಾಧಿಭಯಂ ತಸ್ಯ ನ ಕ್ರವ್ಯಾದ್ಭ್ಯೋ ಭಯಂ ತಥಾ ।
ನಾಗ್ನಿತೋ ನಾಪಿ ತೋಯೇಭ್ಯೋ ನ ರಿಪುಭ್ಯೋ ನ ರಾಜತಃ ॥ ೬೭ ॥

ದೀರ್ಘಾಯುರ್ಬಹು ಭೋಗೀ ಚ ಪುತ್ರಪೌತ್ರಸಮನ್ವಿತಃ ।
ಆವರ್ತಯೇ ಶತಂ ದೇವೀಂ ಮಂದಿರೇ ಮೋದತೇ ಪರೇ ॥ ೬೮ ॥

ಮತ್ತು ಪವಿತ್ರವಾದ ಪ್ರಣವದಿಂದಕೂಡಿದ ಹಸ್ತವುಳ್ಳವಳು. ಈ ಮೇಲೆ ಹೇಳಿದ ಸಕಲಕಲ್ಯಾಣಗುಣವುಳ್ಳ ಕಾಮೇಶ್ವರೀ ದೇವಿಯು ನಮ್ಮನ್ನು ರಕ್ಷಿಸಲಿ.

೬೫. ಹೀಗೆ ಪರನು ಹೇಳಿದ ದೇವಿಯ ಕವಚವು ದೇಹದಲ್ಲಿದ್ದುದಾದರೆ ಅದು ಯಮನನ್ನೂ ನಾಶಮಾಡುವುದು. ಆದುದರಿಂದ ಎಲೈ ವಿಷ್ಣುವೇ ನೀನು ಈ ಕವಚವನ್ನು ತೆಗೆದುಕೋ. ದೇವತೆಗಳೂ ಬ್ರಹ್ಮನೂ, ಸಹ ಇದನ್ನು ಧರಿಸಿ ಕೊಂಡು ಈ ಬಂಧದಿಂದ ಮುಕ್ತರಾಗಲು ಪ್ರಯತ್ನ ಮಾಡಿರಿ.

೬೬. ಈ ರೀತಿ ಇರುವ ಕಾಮಾಖ್ಯಾದೇವಿಯ ಈ ಕವಚವನ್ನು ವಿವೇಕಿಯಾದ ಯಾವ ಪುರುಷನು ಒಂದು ಸಾರಿಯಾದರೂ ಪಠನಮಾಡುವನೋ ಅವನನ್ನು ಮಹಾದೇವಿಯು ಪ್ರತಿನಿತ್ಯವೂ ಅನುಸರಿಸಿ ಕಾಪಾಡುವಳು.

೬೭-೬೮. ಈ ಕವಚವನ್ನು ಒಂದುಸಾರಿಯಾದರೂ ಪಠನ ಮಾಡಿದವರಿಗೆ, ಮನೋವ್ಯಥೆ, ದೇಹದಲ್ಲಿನ ಖಾಯಿಲೆ, ರಾಕ್ಷಸರಿಂದ ಭಯ, ಬೆಂಕಿಯಿಂದಭಯ, ನೀರಿನಿಂದಭಯ ಶತ್ರುಗಳಿಂದ ಭಯ, ರಾಜನಿಂದಭಯ, ಇವುಗಳು ಪರಿಹಾರವಾಗುವುವು. ದೇವಿಯ ಮಂದಿರವಲ್ಲಿ ನೂರು ಆವರ್ತಿ ಇದನ್ನು ಪಾಠಮಾಡಿದರೆ, ಅವನು ತುಂಬಾ ಆಯುಷ್ಯವಂತನಾಗಿ, ಮಕ್ಕಳು, ಮೊಮ್ಮಕ್ಕಳು, ಇವರುಗಳಿಂದ ಕೂಡಿ ಬಹಳ ಸೌಖ್ಯವನ್ನು ಅನುಭವಿಸುವನು. ಮತ್ತು ಪರಲೋಕದಲ್ಲಿಯೂ ಸುಖವನ್ನು ಪೊಂದುವನು.

ಯಥಾ ತಥಾ ಭವೇದ್ಬದ್ಧಃ ಸಂಗ್ರಾಮೇಽನ್ಯತ್ರವಾ ಬುಧಃ ।
ತತ್ಕ್ಷಣಾದೇವ ಮುಕ್ತಸ್ಸ್ಯಾತ್ ಸ್ಮರಣಾತ್ಕವಚಸ್ಯ ತು ॥ ೬೯ ॥

॥ ಈಶ್ವರ ಉವಾಚ ॥

ಇತಿ ಶ್ರುತ್ವಾ ತು ಕವಚಂ ಹರಿಬ್ರಹ್ಮಾ ಸುರಾಸ್ತಥಾ ॥ ೭೦ ॥

ತೇ ತು ವಿನ್ಯಸ್ತಕವಚಾ ಮಹಾಮಾಯಾಪ್ರಭಾವತಃ ।
ಉತ್ಪ್ಲುತ್ಯ ಸಾಗರಸ್ಯಾಂಭ ಆಸೇದುಃ ಕ್ಷಿತಿಮಂಜಸಾ ॥ ೭೧ ॥

ಆಸಾದ್ಯ ಪೃಥಿವೀಂ ಸರ್ವೇ ಬ್ರಹ್ಮವಿಷ್ಣ್ವಾದಯಃ ಸುರಾಃ ।
ನೀಲಕೂಟಂ ಸಮಾಸಾದ್ಯ ಕಾಮಾಖ್ಯಾಂ ದ್ರಷ್ಟುಮಾಗತಾಃ ॥ ೭೨ ॥

ದೃಷ್ಟ್ವಾ ಕಾಮೇಶ್ವರೀಂ ದೇವೀಂ ಕೇಶವಸ್ತಾಂ ಜಗನ್ಮಯಾಂ ।
ಇದಮಾಪ ಸ್ವಯಂ ಜ್ಞಾತ್ವಾ ಪ್ರಭಾವಂ ತತ್ಪ್ರತಿಷ್ಠಿತಂ ॥ ೭೩ ॥

---

೬೯. ಯುದ್ಧದಲ್ಲಿಯಾಗಲಿ, ಬೇರೆಯ ಕಡೆಯಲ್ಲಿಯಾಗಲಿ ಬಂಧನದಲ್ಲಿರುವನು ಈ ಕವಚವನ್ನು ಸ್ಮರಿಸಿದ ಕ್ಷಣದಲ್ಲಿಯೇ ಬಿಡುಗಡೆಯನ್ನು ಹೊಂದುವನು.

೭೦. ವಿಷ್ಣುವೂ, ಬ್ರಹ್ಮನೂ, ದೇವತೆಗಳೂ, ಇಂದ್ರನೂ ಸಹ ಈ ಕವಚವನ್ನು ಕೇಳಿ ಎಲ್ಲರೂ ಬೇರೆಬೇರೆಯಾಗಿ ತಮ್ಮತಮ್ಮ ಶರೀರಗಳಲ್ಲಿ ಕವಚನ್ಯಾಸವನ್ನು ಮಾಡಿಕೊಂಡರು.

೭೧-೭೨. ಕವಚನ್ಯಾಸವನ್ನು ಮಾಡಿಕೊಂಡನಂತರ ಮಹಾಮಾಯಾ ದೇವಿಯ ಮಹಿಮೆಯಿಂದ ಅವರುಗಳು ಸಮುದ್ರದ ನೀರಿನಿಂದ ಬೇಗನೆ ಭೂಮಿಯ ಮೇಲಕ್ಕೆದ್ದು ಬಂದು, ನೀಲಾಚಲದ ಶಿಖರದಲ್ಲಿರುವ ಕಾಮೇಶ್ವರೀದೇವಿಯ ದರ್ಶನ ಕ್ಕಾಗಿ ಅಲ್ಲಿಗೆ ಬಂದುಸೇರಿದರು.

೭೩. ಜಗದ್ರೂಪಿಣಿಯಾಗಿರುವ ಕಾಮೇಶ್ವರೀದೇವಿಯನ್ನು ವಿಷ್ಣುವು ದರ್ಶನಮಾಡಿ ಆ ದೇವಿಯ ಮಹಿಮೆಯನ್ನು ತಾನು ಚೆನ್ನಾಗಿ ತಿಳಿದುಕೊಂಡು ಹೀಗೆ ಸ್ತೋತ್ರಮಾಡಿದನು.

ತ್ವಮೇವ ಪ್ರಕೃತಿರ್ದೇವೀ ತ್ವಮೇವ ಪೃಥಿವೀ ಜಲಂ ।
ತ್ವಮೇವ ಜಗತಾಂ ಮಾತಾ ತ್ವಮೇವ ಚ ಜಗನ್ಮಯೀ ॥ ೭೪ ॥

ತ್ವಂ ಕರ್ತ್ರೀ ಸರ್ವಜಗತಾಂ ವಿದ್ಯಾ ತ್ವಂ ಮುಕ್ತಿದಾಯಿನೀ ।
ಪರಾಪರಾತ್ಮಿಕಾ ದೇವೀ ಸ್ಥೂಲಸೂಕ್ಷ್ಮಾತ್ಮಿಕಾ ತಥಾ ॥ ೭೫ ॥

ಪ್ರಸೀದ ತ್ವಂ ಮಹಾದೇವೀ ಪ್ರಸನ್ನಾಯಾಂ ಶುಭೇ ತ್ವಯಿ ।
ದೇವಾಃ ಸರ್ವೇ ಪ್ರಸೀದಂತಿ ಚತುರ್ವರ್ಗಪ್ರದೇಽನಘೇ ॥ ೭೬ ॥

ಇತಿ ಶ್ರುತ್ವಾ ವಚಸ್ತಸ್ಯ ಕೇಶವಸ್ಯ ಮಹಾತ್ಮನಃ ।
ಪ್ರತ್ಯಕ್ಷರೂಪಾ ಕಾಮಾಖ್ಯಾ ಹರಿಮಾಭಾಷ್ಯ ಚಾಬ್ರವೀತ್ ॥ ೭೭ ॥

॥ ದೇವ್ಯುವಾಚ ॥

ಕೇಶವ ಬ್ರಹ್ಮಣಾ ಸಾರ್ಧಂ ಸರ್ವೈರ್ದೇವವರೈಸ್ತಥಾ ।
ಮದ್ಯೋನಿಸಲಿಲೇ ತ್ವದ್ಯ ಸ್ನಾನಂ ಪಾನಂ ಕುರು ದ್ರುತಂ ॥ ೭೮ ॥

೭೪-೭೫. ಎಲೈ ದೇವಿಯೇ, ನೀನೇ ಪ್ರಕೃತಿಯಾಗಿಯೂ, ನೀನೇ ಪೃಥಿವೀ, ಜಲ, ಇವುಗಳ ಸ್ವರೂಪದಿಂದಲೂ, ಇರುವೆ. ನೀನು ಜಗತ್ತಿಗೆ ತಾಯಿಯು, ಜಗದ್ರೂಪಳು, ಮತ್ತು ಜಗತ್ತನ್ನು ಸೃಷ್ಟಿಸಿದವಳು. ಮುಕ್ತಿಯನ್ನು ಕೊಡುವಳೂ ಜ್ಞಾನ ಸ್ವರೂಪದಿಂದಿರುವಳೂ, ನೀನೇ. ಅಲ್ಲದೆ, ನೀನು ಪರಾ ಮತ್ತು ಅಪರಾ, ಎಂಬ ಭೇದದಿಂದ, ಕೂಡಿದ ರೂಪವುಳ್ಳವಳು. ಮತ್ತು ಸ್ಥೂಲ ಸೂಕ್ಷ್ಮರೂಪದಿಂದ ಇರುವವಳು.

೭೬. ಪಾಪರಹಿತಳಾದ ಎಲೈ ಮಹಾದೇವಿಯೇ, ಮಂಗಳಕರಳಾದ ನೀನು ಪ್ರಸನ್ನಳಾದರೆ, ಚತುರ್ವರ್ಗಪ್ರದಳಾದ ನಿನ್ನ ಪ್ರಸನ್ನತೆಯಿಂದ ಎಲ್ಲಾ ದೇವತೆಗಳೂ, ಪ್ರಸನ್ನರಾಗುವರು.

೭೭. ಮಹಾಮಹಿಮೆಯುಳ್ಳ ಆ ವಿಷ್ಣುವಿನ ಸ್ತೋತ್ರವಚನಗಳನ್ನು ಕೇಳಿ, ಕಾಮೇಶ್ವರೀ ದೇವಿಯು ಪ್ರತ್ಯಕ್ಷಳಾಗಿ ಆ ವಿಷ್ಣುವಿನ ಸಂಗಡ ಮಾತನಾಡಿದಳು.

೭೮. ಎಲೈ ವಿಷ್ಣುವೇ ಕೇಳು. ನೀನು ಬ್ರಹ್ಮನೇ ಮೊದಲಾದ ದೇವತೆಗಳೊಡನೆ ನನ್ನ ಯೋನಿಮಂಡಲವೆಂಬ ತೀರ್ಥದ ಜಲದಲ್ಲಿ ಸ್ನಾನವನ್ನೂ ಪಾನವನ್ನೂ ಬೇಗನೆ ಮಾಡು.

ತತಸ್ತ್ವಂ ನಿರಹಂಕಾರಃ ಪರವೀರ್ಯಸಮನ್ವಿತಃ ।
ಆರುಹ್ಯ ಗರುಡಂ ಯಾಹಿ ತ್ರಿದಿವಂ ಸಹ ವೇಧಸಾ ॥ ೭೯ ॥

ಏವಮುಕ್ತೋ ಮಹಾದೇವ್ಯಾ ಕೇಶವಃ ಸಹ ವೇಧಸಾ ।
ಯೋನಿಮುಂಡಲತೋಯೇಷು ಸ್ನಾನಂ ಪಾನಂ ಚಕಾರ ಹ ॥ ೮೦ ॥

ಕೃತಸ್ನಾನಾವಸ್ತತೋ ದೇವಾಃ ಕೃತಸ್ನಾನಶ್ಚ ಕೇಶವಃ ।
ಗತಾ ದೇವ್ಯಾಶ್ಚ ಸಂಮತ್ಯಾ ತ್ರಿದಿವಂ ಪ್ರತಿ ಹರ್ಷಿತಾಃ ॥ ೮೧ ॥

ಗಚ್ಛಂತಸ್ತೇ ದೇವಗಣಾಃ ಸಹಿತಾಃ ಕೇಶವೇನ ಚ ।
ಬ್ರಹ್ಮಣಾ ಚ ತದಾದ್ರಾಕ್ಷುಃ ಕಾಮಾಖ್ಯಾಂ ತಾಂ ವಿಯದ್ಗತಾಂ ॥ ೮೨ ॥

ನೀಲಕೂಟಸಹಸ್ರಾಣಿ ಯೋನಿಭಿಃ ಸಹ ಸಂಗತಃ ।
ಊರ್ಧ್ವಾಧೋಭಾಗಯೋಗೇನ ದದೃಶುಃ ಸಂಸ್ಥಿತಾನಿ ಚ ॥ ೮೩ ॥

---

೭೯. ಅನಂತರ ಅಹಂಕಾರ ರಹಿತನಾಗಿ ಉತ್ಕೃಷ್ಟವಾದ ಶಕ್ತಿಯಿಂದ ಕೂಡಿ ಗರುಡನನ್ನು ಹತ್ತಿಕೊಂಡು, ಬ್ರಹ್ಮನೊಡನೆ ಸ್ವರ್ಗಲೋಕವನ್ನು ಕುರಿತು ಪ್ರಯಾಣವನ್ನು ಮಾಡು.

೮೦. ಮಹಾದೇವಿಯು ಹೀಗೆ ಹೇಳಲು, ವಿಷ್ಣುವು ಬ್ರಹ್ಮನೊಡನೆ ಯೋನಿಮಂಡಲದ ತೀರ್ಥದಲ್ಲಿ ಸ್ನಾನವನ್ನೂ ಪಾನವನ್ನೂ ಸಹ ಮಾಡಿದನು.

೮೧. ಅನಂತರ ದೇವತೆಗಳೂ, ಸಮುದ್ರದ ಮಧ್ಯದಿಂದ ಮೇಲಕ್ಕೆದ್ದು ಬಂದು ಎಲ್ಲರೂ ಸ್ನಾನಮಾಡಿದರು. ವಿಷ್ಣುವೂ, ದೇವತೆಗಳೂ ದೇವಿಯ ಅಪ್ಪಣೆಯನ್ನು ಪಡೆದು ಸಂತೋಷದಿಂದ ಸ್ವರ್ಗಕ್ಕೆ ತೆರಳಿದರು.

೮೨. ವಿಷ್ಣುವಿನ ಮತ್ತು ಬ್ರಹ್ಮನ ಜೊತೆಯಲ್ಲಿ ಹೋಗುತ್ತಿರುವಾಗ ೮ ದೇವತೆಗಳು ಅಂತರಿಕ್ಷದಲ್ಲಿ ಆಗ ಆ ಕಾಮೇಶ್ವರೀದೇವಿಯನ್ನು ನೋಡಿದರು.

೮೩. ಮೇಲುಭಾಗದಲ್ಲಿಯೂ; ಕೆಳಗಡೆಯಲ್ಲಿಯೂ, ಯೋನಿಮಂಡಲದೊಡನೆ ಇರುವ ಸಹಸ್ರಾರು ನೀಲಕೂಟ ಪರ್ವತಗಳನ್ನೂ ನೋಡಿದರು.

ತಾನಿ ಪ್ರತ್ಯೇಕತೋ ದೇವಾ ಆರುಹ್ಯಾರುಹ್ಯ ತತ್ ಕ್ಷಣಂ ।
ಪಪುಃ ಸಸ್ನುಃ ಪೂರ್ವವತ್ತೇ ಪ್ರೀತಿಮಾಪುಸ್ತಥಾತುಲಾಂ ॥ ೪೪ ॥

ನಿರಾಮಯಾಸ್ತಥಾ ಜಗ್ಮುರ್ನಿಸ್ಮಯಾಕೃಷ್ಟಚೇತನಾಃ ।
ಸ್ತುವಂತಃ ಪ್ರಸ್ತುವಂತಶ್ಚ ಕಾಮಾಖ್ಯಾಯೋನಿಮಂಡಲಂ ॥ ೪೫ ॥

ತತೋ ದೇವಗುರುರ್ನತ್ವಾ ಮಾಂ ಸ್ತುತ್ವಾ ಚ ಭಯಾತ್ಪುನಃ ।
ವಿಸೃಷ್ಟಸ್ತ್ರಿದಿವಂ ಯಾತೋ ಹರ್ಷೋತ್ಫುಲ್ಲವಿಲೋಚನಃ ॥ ೪೬ ॥

ಮಾಹಾತ್ಮ್ಯಮಿದೃಶಂ ದೇವ್ಯಾಃ ಕಾಮಾಖ್ಯಾಯಾಸ್ತು ಭೈರವ ॥ ೪೭ ॥

ಕವಚಂ ಚೇದೃಶಂ ಪ್ರೋಕ್ತಂ ತತ್ ತ್ವಮಾಸಾದ್ಯ ಪುತ್ರಕ ।
ಯಥೇಷ್ಟವಿನಿಯೋಗೇನ ತಾಮಾಸಾದ್ಯ ಸುಖೀಭವ ॥ ೪೯ ॥

ಕಾಮಾಖ್ಯಾಯಾಶ್ಚ ಮಾಹಾತ್ಮ್ಯಂ ಕಿಮನ್ಯತ್ಕಥಯಾಮಿ ತೇ ।
ಯಸ್ಯಾ ಯೋನಿಶಿಲಾಯೋಗಾಲ್ಲೋಹಾದ್ಯಾ ಯಾಂತಿ ಸ್ವರ್ಣತಾಂ ॥ ೫೦ ॥

೪೪-೪೫. ಆಕ್ಷಣದಲ್ಲಿಯೇ ದೇವತೆಗಳು ಆ ಶಿಖರಗಳನ್ನು ಬೇರೆಬೇರೆಯಾಗಿ ಪತ್ತಿ ಹಿಂದಿನಂತೆಯೇ ಸ್ನಾನವನ್ನೂ, ಪಾನವನ್ನೂ ಮಾಡಿದರು. ಅವರಿಂದ ಅವರಿಗೆ ಅಪರಿಮಿತಾನಂದವುಂಟಾಯಿತು. ರೋಗಾದಿ ಬಾಧೆಗಳು ಮಾಯವಾದವು. ಇದರಿಂದ ಆಶ್ಚರ್ಯಗೊಂಡು ಆ ದೇವತೆಗಳು ಕಾಮಾಖ್ಯಾ ಯೋನಿಮಂಡಲವನ್ನು ಬಾರಿಬಾರಿಗೂ ಸ್ತೋತ್ರಮಾಡುತ್ತಾ ಸ್ವರ್ಗವನ್ನು ಸೇರಿದರು.

೪೬. ಅನಂತರ ಬೃಹಸ್ಪತಿಯು ನನಗೆ ನಮಸ್ಕಾರವನ್ನು ಮಾಡಿ, ಭಯಭಕ್ತಿಗಳಿಂದ ತಿರುಗಿ ನನ್ನನ್ನು ಸ್ತುತಿಸಿ, ಸಂತೋಷದಿಂದ ಸ್ವರ್ಗಕ್ಕೆ ಹೋದನು.

೪೭-೪೯. ಎಲೈ ಭೈರವನೇ ಕೇಳು, ಕಾಮಾಖ್ಯಾದೇವಿಯ ಮಾಹಾತ್ಮ್ಯವು ಈರೀತಿಯಾಗಿರುವುದು. ಈ ದೇವಿಯ ಈ ವಿಧವಾದ ಕವಚವನ್ನು ನಿನಗೆ ಹೇಳಿರುವೆನು. ಎಲೈ ಪುತ್ರನೇ ಆ ಕವಚವನ್ನು ನೀನು ಪಡೆದು ಅದರ ನ್ಯಾಸದಿಂದ ಇಷ್ಟಸಿದ್ಧಿಯನ್ನು ಹೊಂದಿ ಸುಖವಾಗಿರು.

೫೦. ಆ ಕಾಮೇಶ್ವರೀದೇವಿಯ ಯೋನಿಶಿಲೆಯ ಸಂಬಂಧವಿಂದ ಲೋಹವೂ ಚಿನ್ನವಾಗುವುದು. ಅಸ್ಖಲಿತವಾದ ಮಹಿಮೆಯುಳ್ಳ ಕಾಮೇಶ್ವರೀ ದೇವಿಯ ಮಾಹಾತ್ಮ್ಯವನ್ನು ಹೇಳಿದ್ದಾಯಿತು. ಈಗ ಮತ್ತೇನನ್ನು ಹೇಳಲಿ?

ಯದ್ಯೋನಿಮಂಡಲೇ ಸ್ನಾತ್ವಾ ಸಕೃತ್ಪೀತ್ವಾ ಚ ಮಾನವಃ ।
ನೇಹೋತ್ಪತ್ತಿಮವಾಪ್ನೋತಿ ಪರಂ ನಿರ್ವಾಣಮಾಪ್ನುಯಾತ್ ॥ ೯೦ ॥

ಇತಿ ಶ್ರೀ ಕಾಲಿಕಾಪುರಾಣೇ ಕಾಮಾಖ್ಯಾಕವಚವರ್ಣನಂ ನಾಮ
ಷಟ್‌ಸಪ್ತತಿತಮೋಽಧ್ಯಾಯಃ

---

೯೦. ಕಾಮೇಶ್ವರೀದೇವಿಯ ಯೋನಿಮಂಡಲದಲ್ಲಿ ಒಂದುಸಾರಿ ಸ್ನಾನವನ್ನು ಮಾಡಿದ ಮಾತ್ರದಿಂದಲೇ ಮನುಷ್ಯನು ಈ ಲೋಕದಲ್ಲಿ ಮತ್ತೆ ಹುಟ್ಟಲಾರನು. ಅವನಿಗೆ ಪುನರ್ಜನ್ಮವೆಂಬುದಿಲ್ಲ. ಬಹಳ ಉತ್ತಮವಾದ ಮೋಕ್ಷವನ್ನು ಹೊಂದುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಪ್ಪತ್ತಾರನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಸಪ್ತಸಪ್ತತಿತಮೋऽಧ್ಯಾಯಃ ॥

॥ಭಗವಾನುವಾಚ॥

ಮಾತೃಕಾನ್ಯಾಸಮಧುನಾ ಶೃಣು ವೇತಾಲಭೈರವ ।
ಯೇನ ದೇವತ್ವಮಾಯಾತಿ ನರೋऽಪಿ ವಿಹಿತೇನ ವೈ ॥ ೧ ॥

ವಾಗ್ಬ್ರಹ್ಮಾಣೀಮುಖಾ ದೇವ್ಯೋ ಮಾತೃಕಾಃ ಪರಿಕೀರ್ತಿತಾಃ ।
ತಾಸಾಂ ಮುಂತ್ರಾಣಿ ಸರ್ವಾಣಿ ವ್ಯಂಜನಾನಿ ಸ್ವರಾಸ್ತಥಾ ॥ ೨ ॥

ಚಂದ್ರಬಿಂದುಪ್ರಯುಕ್ತಾನಿ ಸರ್ವಕಾಮಪ್ರದಾನಿ ಚ ।
ಋಷಿಸ್ತು ಮಾತೃಮುಂತ್ರಾಣಾಂ ಬ್ರಹ್ಮೈವ ಪರಿಕೀರ್ತಿತಃ ॥ ೩ ॥

ಎಪ್ಪತ್ತೇಳನೆಯ ಅಧಾಯವು.

೧. ಪರಮೇಶ್ವರನು ಹೇಳಿದನು:—ಎಲೈ ವೇತಾಲಭೈರವರೇ ಕೇಳಿರಿ, ನಾನು ಮಾತೃಕಾನ್ಯಾಸವನ್ನು ಈಗ ಹೇಳುವೆನು. ಇದನ್ನು ಮಾಡಿದರೆ ಮನುಷ್ಯನೂ ದೇವತೆಯಾಗುವನು.

೨. ಬ್ರಹ್ಮಾಣೀ, ಸರಸ್ವತೀ, ಮೊದಲಾದ ದೇವಿಯರು ಮಾತೃಕೆಯರೆಂದು ಪ್ರಸಿದ್ಧಿಯನ್ನು ಹೊಂದಿರುವರು. ಎಲ್ಲಾ ವ್ಯಂಜನಗಳೂ, ಮತ್ತು ಸ್ವರಗಳೂ ಸಹ ಆಯಾ ಮಾತೃಕಾದೇವಿಯರ ಮಂತ್ರಗಳಾಗಿರುವುವು. ಈ ಮಾತೃಕಾಕ್ಷರಗಳು ಅನುಸ್ವಾರ, ಮತ್ತು ಬಿಂದುಗಳಿಂದ ಕೂಡಿದವುಗಳಾಗಿ ಎಲ್ಲಾ ವಿಧವಾದ ಕಾಮಗಳನ್ನೂ ಕೊಡುವುವು.

೩-೪. ಮಾತೃಕಾಮಂತ್ರಗಳಿಗೆ ಬ್ರಹ್ಮನೇ ದೇವತೆಯು. ಗಾಯತ್ರೀ ಛಂದಸ್ಸು. ಸರಸ್ವತಿಯೇ ದೇವತೆಯಾಗಿರುವಳು. ಇವುಗಳ ವಿನಿಯೋಗದಿಂದ ಶರೀರ

ಪ್ರೋಕ್ತಾ ಛಂದಶ್ಚ ಗಾಯತ್ರೀ ದೇವತಾ ಚ ಸರಸ್ವತೀ ॥
ಶರೀರಶುದ್ಧಿಮುಖ್ಯೇ ತು ಸರ್ವಕಾಮಾರ್ಥಸಾಧನೇ ॥ ೪ ॥

ವಿನಿಯೋಗಃ ಸಮುದ್ದಿಷ್ಟೋ ಮಂತ್ರಾಣಾಂ ನ್ಯೂನಪೂರಣೇ ।
ಅಕಾರೇಣ ಸಮಂ ಕಾದಿರ್ವರ್ಗೋ ಯಃ ಪ್ರಥಮಃ ಸ್ಮೃತಃ ॥ ೫ ॥

ತೈಶ್ಚಂದ್ರಬಿಂದುಸಂಯುಕ್ತೈಸ್ತತ್ರಸ್ಥೈರಕ್ಷರೈರ್ಬಹಿಃ ।
ಅಕಾರಂ ಚ ತಥೋಚ್ಚಾರ್ಯ ಅಂಗುಷ್ಠಾಭ್ಯಾಂ ನಮಸ್ತಥಾ ॥ ೬ ॥

ಪ್ರಥಮಂ ಮಾತೃಕಾಮಂತ್ರಮಂಗುಷ್ಠದ್ವಯತೋ ನ್ಯಸೇತ್ ।
ಪರೇ ವರ್ಗಾಃ ಸ್ವರೈಃ ಸಾರ್ಧಂ ಯೇ ವಾನ್ಯೇ ನ್ಯಾಸಕರ್ಮಣಿ ॥ ೭ ॥

ತೇ ಸರ್ವೇ ಚಂದ್ರಬಿಂದುಭ್ಯಾಂ ಯುಕ್ತಾಃ ಕಾರ್ಯಾಸ್ತು ಸರ್ವತಃ ।
ಹ್ರಸ್ವೇಕಾರಶ್ಚವರ್ಗೇಣ ದೀರ್ಘೇಕಾರಾಂತಕೇನ ತು ॥ ೮ ॥

ಶುದ್ಧಿಯೂ, ಪೂಜೆಯಲ್ಲಿ ನ್ಯೂನಾಂಶ ಪೂರಣೆಯೂ, ಎಲ್ಲಾ ವಿಧವಾದ ಧರ್ಮ, ಕಾಮ, ಅರ್ಥ ಇವುಗಳ ಸಾಧನೆಯು ಸಹ ಲಭಿಸುವುದು.

೫-೬. ಮೊದಲು ಅಕಾರ, ಬಳಿಕ ಕಾವರ್ಗ, ಎಂದರೆ ಕ ಖ ಗ ಘ ಙ ಇವುಗಳೂ, ಆಮೇಲೆ ಆಕಾರ ಇವುಗಳಿಗೆ ಬಿಂದುಗಳನ್ನು ಸೇರಿಸಿ, ಉಚ್ಚರಿಸಿ ಅಂಗುಷ್ಠಾಭ್ಯಾಂ ನಮಃ ಎಂದು ಎರಡು ಅಂಗುಷ್ಠಗಳನ್ನೂ ಸ್ಪರ್ಶಮಾಡಿ ನ್ಯಾಸಮಾಡ ಬೇಕು. ಎಂದರೆ ಅಂ ಕಂ ಖಂ ಗಂ ಘಂ ಙಂ ಆಂ-ಅಂಗುಷ್ಠಾಭ್ಯಾಂ ನಮಃ॥ ಎಂದು ಹೇಳಬೇಕು. ಇದು ಮಾತೃಕಾನ್ಯಾಸದ ಮೊದಲನೆಯ ಮಂತ್ರವು.

೭-೮. ಬಳಿಕ ಮೇಲೆ ಹೇಳಿದಂತೆ ಇಕಾರ ಮುಂದಿನ ವರ್ಗವಾದ ಚ ಛ ಜ ಝ ಞ, ಆಮೇಲೆ ಈಕಾರ ಇವುಗಳಿಗೆ ಬಿಂದುವನ್ನು ಸೇರಿಸಿ ಕಡೆಯಲ್ಲಿ ಸ್ವಾಹಾ ಎಂಬ ಪದವನ್ನೂ ಸೇರಿಸಿ ಉಚ್ಚರಿಸಬೇಕು. ಈ ಮಂತ್ರವನ್ನು ತರ್ಜನೀ ಬೆರಳು ಗಳಲ್ಲಿ ನ್ಯಾಸಮಾಡಬೇಕು. ಮಂತ್ರ—ಇಂ ಚಂ ಛಂ ಜಂ ಝಂ ಞಂ ಈಂ ತರ್ಜ ನೀಭ್ಯಾಂ ಸ್ವಾಹಾ॥ ಇದು ಮಾತೃಕಾನ್ಯಾಸದ ಎರಡನೆಯ ಮಂತ್ರವು.

ತರ್ಜನ್ಯೋರ್ವಿನ್ಯಸೇತ್ಸಮ್ಯಕ್ ಸ್ವಾಹಾಂತೇನ ತು ಪೂರ್ವವತ್ ।
ಪ್ರಸ್ವೋಕಾರಷ್ಟವರ್ಗೇಣ ದೀಘೋರ್ಕಾರಾಂತಕೇನ ತು ॥ ೯ ॥

ಮಧ್ಯಮಾಯುಗಲೇ ಸಮ್ಯಗ್ವಷಂಡಂತೇನ ವಿನ್ಯಸೇತ್ ।
ಏಕಾರಾದಿತವರ್ಗಂ ತು ಐಕಾರಾಂತೇನ ಚೈವ ಹುಂ ॥ ೧೦ ॥

ನ್ಯಸೇದನಾಮಿಕಾಯುಗ್ಮೇ ನಿಯತಂ ತತ್ರ ಭೈರವ ।
ಓಂಕಾರಾದಿಪವರ್ಗಂ ತು ಔಕಾರಾಂತಮಶೇಷತಃ ॥ ೧೧ ॥

ವೌಷಡಂತಂ ಕನಿಷ್ಠಾಯಾಂ ವಿನ್ಯಸೇತ್ಕಾರ್ಯಸಿದ್ಧಯೇ ।
ಅಂಕಾರಾದಿಯಕಾರಾದಿವರ್ಗೇಣ ಕ್ಷಾಂತಕೇನ ತು ॥ ೧೨ ॥

---

೯. ಬಳಿಕ ಅದರಂತೆಯೇ ಉ ಊಕಾರಗಳನ್ನು, ಟವರ್ಗಕ್ಕೆ ಬಿಂದುವಿನೊಡನೆ ಸೇರಿಸಿ ಕಡೆಯಲ್ಲಿ ವಷಟ್ ಎಂಬ ಪದವನ್ನು ಸೇರಿಸಿ ಮಧ್ಯಮ ಬೆರಳುಗಳಲ್ಲಿ ನ್ಯಾಸಮಾಡಬೇಕು. ಮಂತ್ರ—ಉಂ ಟಂ ಠಂ ಡಂ ಢಂ ಣಂ ಊಂ ಮಧ್ಯಮಾಭ್ಯಾಂ ವಷಟ್ ॥ ಇದು ಮೂರನೆಯ ಮಂತ್ರವು.

೧೦: ಏ ಐಕಾರಗಳನ್ನೂ, ತವರ್ಗಾಕ್ಷರಗಳನ್ನೂ ಬಿಂದುಗಳೊಡನೆ ಸೇರಿಸಿ ಕಡೆಯಲ್ಲಿ ಹುಂ ಎಂದು ಉಚ್ಚರಿಸಿ, ಅನಾಮಿಕಾ ಬೆರಳುಗಳಲ್ಲಿ ನ್ಯಾಸಮಾಡಬೇಕು. ಮಂತ್ರ—ಏಂ ತಂ ಥಂ ದಂ ಧಂ ನಂ ಐಂ ಅನಾಮಿಕಾಭ್ಯಾಂ ಹುಂ॥ ಇದು ನಾಲ್ಕನೆಯ ಮಂತ್ರವು.

೧೧. ಓಕಾರ ಔಕಾರಗಳೂ, ಪವರ್ಗಾಕ್ಷರಗಳೂ, ಬಿಂದುವೂ, ಕಡೆಯಲ್ಲಿ ವೌಷಟ್ ಎಂಬ ಪದವೂ ಸೇರಿ ಐದನೆಯ ಮಂತ್ರವಾಗುವುದು. ಇದನ್ನು ಕನಿಷ್ಠಿಕಾ ಬೆರಳುಗಳಲ್ಲಿ ನ್ಯಾಸಮಾಡಬೇಕು. ಮಂತ್ರ—ಓಂ ಪಂ ಫಂ ಬಂ ಭಂ ಮಂ ಔಂ ಕನಿಷ್ಠಿಕಾಭ್ಯಾಂ ವೌಷಟ್.

೧೨-೧೩. ಆಮೇಲೆ ಅಂ ಎಂಬ ಅಕ್ಷರವೂ ಯಕಾರದಿಂದ ಕ್ಷಕಾರದವರೆಗಿನ ಅಕ್ಷರಗಳೂ ಬಿಂದುವಿನೊಡನೆ ಸೇರಿ ಕಡೆಯಲ್ಲಿ ಅಃ ಎಂಬ ಅಕ್ಷರವೂ ಅಸ್ತ್ರಮಂತ್ರವೂ ಸೇರಿ ಆರನೆಯ ಮಂತ್ರವಾಗುವುದು. ಇದನ್ನು ಹಸ್ತಗಳ ತಲಪೃಷ್ಠಭಾಗಗಳಲ್ಲಿ

ಅ ಇತ್ಯಂತೇನ ತಲಯೋರ್ವಿನ್ಯಸೇತ್ಪಾಣಿಪೃಷ್ಠಯೋಃ ।
ವಷಟ್ಕಾರಂ ಶೇಷಭಾಗೇ ಅಸ್ತ್ರನ್ಯಾಸೇ ನಿಯೋಜಯೇತ್ ॥ ೧೩ ॥

ಹೃದಯಾದಿಷಡಂಗೇಷು ಪೂರ್ವವತ್ಕ್ರಮತೋ ನ್ಯಸೇತ್ ।
ಅಂಗುಷ್ಠಾದ್ಯುಕ್ತವರ್ಗೈಸ್ತು ಕ್ರಮಾತ್ ಷಡ್ಭಿಸ್ತಥಾ ವಿಧೈಃ ॥ ೧೪ ॥

ಪುನಸ್ತಥಾ ಪಾದಜಾನುಸಕ್ಥಿಗುಹ್ಯೇಷು ಪಾರ್ಶ್ವಯೋಃ ।
ಬಸ್ತೌ ಚ ವಿನ್ಯಸೇನ್ಮಂತ್ರಾ ಕ್ರಮಾತ್ಪೂರ್ವವದಕ್ಷರೈಃ ॥ ೧೫ ॥

ಬಾಹ್ವೋಃ ಪಾಣ್ಯೋಸ್ತಥಾ ಪಟ್ಟ್ಯಾಂ ನಾಭೌ ಚ ಜತರೇ ತಥಾ ।
ಸ್ತನಯೋರಪಿ ವಿನ್ಯಾಸಂ ತಥಾ ಷಡ್ಭಿಃ ಸಮಾಚರೇತ್ ॥ ೧೬ ॥

ನ್ಯಾಸಮಾಡಬೇಕು. ಮಂತ್ರ---ಅಂ ಯಂ ರಂ ಲಂ ವಂ ಶಂ ಷಂ ಸಂ ಹಂ ಳಂ ಕ್ಷ್ಲಂ ಅಃ ಕರತಲಕರಪೃಷ್ಠಾಭ್ಯಾಂ ಅಸ್ತ್ರಾಯ ಫಟ್ ॥

೧೪. ಕರನ್ಯಾಸ ಮಾಡಿದಮೇಲೆ ಹೃದಯಾದಿ ಷಡಂಗಗಳಲ್ಲಿ ಹಿಂದೆ ಹೇಳಿದ ಮಂತ್ರಗಳಿಂದ ಅದೇ ಕ್ರಮದಂತೆ ಕ್ರಮವಾಗಿ ನ್ಯಾಸಮಾಡಬೇಕು. ಮಂತ್ರಕ್ರಮವು ಈರೀತಿ ಇರುವುದು---(೧) ಅಂ ಕಂ ಖಂ ಗಂ ಘಂ ಙಂ ಆಂ ಹೃದಯಾಯನಮಃ (೨) ಇಂ ಚಂ ಛಂ ಜಂ ಝಂ ಞಂ ಈಂ ಶಿರಸೇ ಸ್ವಾಹಾ. (೩) ಉಂ ಟಂ ಠಂ ಡಂ ಢಂ ಣಂ ಊಂ ಶಿಖಾಯೈ ವಷಟ್. (೪) ಎಂ ತಂ ಥಂ ದಂ ಧಂ ನಂ ಏಂ ಕವಚಾಯ ಹುಂ. (೫) ಓಂ ಪಂ ಫಂ ಬಂ ಭಂ ಮಂ ಔಂ ನೇತ್ರತ್ರಯಾಯ ವೌಷಟ್. (೬) ಅಂ ಯಂ ರಂ ಲಂ ವಂ ಶಂ ಷಂ ಸಂ ಹಂ ಳಂ ಕ್ಷ್ಲಂ ಅಸ್ತ್ರಾಯ ಫಟ್ ॥ ಈರೀತಿ ಹೃದಯಾದಿ ಷಡಂಗಗಳ ನ್ಯಾಸವನ್ನು ಮಾಡಬೇಕು.

೧೫. ಪಾದ, ಮಂಡಿ, ವೃಣಕಾಲು, ಗುಹ್ಯ ಪಾರ್ಶ್ವ, ಬಸ್ತಿ, ಎಂಬ ಈ ಆರು ಅಂಗಗಳಲ್ಲಿ ಮಂತ್ರಗಳನ್ನು ಕ್ರಮವಾಗಿ ಹಿಂದಿನಂತೆ ಅಕ್ಷರಗಳಿಂದ ನ್ಯಾಸ ಮಾಡಬೇಕು.

೧೬. ತೋಳುಗಳು, ಕೈಗಳು, ಕಟಿ, ನಾಭಿ, ಜೊಟ್ಟಿ, ಸ್ತನಪ್ರದೇಶ, ಇವು ಗಳಲ್ಲಿ ನ್ಯಾಸವನ್ನು ಹಿಂದಿನಂತೆಯೇ ಆರುವಿಧದಿಂದಲೂ ಮಾಡಬೇಕು.

ವಕ್ತ್ರೇ ಚ ಚಿಬುಕೇ ಗಂಡೇ ಕರ್ಣಯೋಶ್ಚ ಲಲಾಟಕೇ ।
ಅಂಸೇ ಕಕ್ಷೇ ಚ ಷಡ್ವರ್ಗೈಃ ಪೂರ್ವವನ್ನ್ಯಾಸಮಾಚರೇತ್ ॥ ೧೭ ॥

ರೋಮಕೂಪೇ ಬ್ರಹ್ಮರಂಧ್ರೇ ಗುದೇ ಜಂಘಾಯುಗೇ ತಥಾ ।
ನಖೇಷು ಪಾದಪಾರ್ಷ್ಣ್ಯೋರ್ಶ್ಚ ತಥಾ ಪೂರ್ವವದಾಚರೇತ್ ॥ ೧೮ ॥

ಏವಂ ತು ಮಾತೃಕಾನ್ಯಾಸಂ ಯಃ ಕುರ್ಯಾನ್ನರಸತ್ತಮಃ ।
ಸ ಸರ್ವಯಜ್ಞಪೂಜಾಸು ಪೂತೋ ಯೋಗ್ಯಸ್ತು ಜಾಯತೇ ॥ ೧೯ ॥

ನಾತಃ ಪರತರಂ ಮಂತ್ರಂ ವಿದ್ಯತೇ ಕ್ವಚಿದೇವ ಹಿ ।
ಯತ್ಸರ್ವಕಾಮದಂ ಪುಣ್ಯಂ ಚತುರ್ವರ್ಗಪ್ರಸಂ ಪರಂ ॥ ೨೦ ॥

ವಾಗ್ದೇವತಾಂ ಹೃದಿ ಧ್ಯಾತ್ವಾ ಮೂರ್ತಿಂ ಸರ್ವಾಕ್ಷರಾಣಿ ಚ ।
ತ್ರಿಧಾ ಚ ಮಾತೃಕಾಮಂತ್ರೈಃ ಸಕೃನ್ಮೈಶ್ಚ ಪಿಬೇಜ್ಜಲಂ ॥ ೨೧ ॥

---

೧೭. ಮುಖ, ಗಡ್ಡ, ಕಪೋಲಪ್ರದೇಶ, ಕಿವಿ, ಹಣೆ, ಹೆಗಲು, ಕಂಕಳು, ಇವುಗಳಲ್ಲಿ ಹಿಂದಿನಂತೆಯೇ ನ್ಯಾಸವನ್ನು ಮಾಡಬೇಕು.

೧೮. ರೋಮಕೂಪ, ಬ್ರಹ್ಮರಂಧ್ರ, ಗುದಪ್ರದೇಶ, ಕಣಕಾಲುಗಳೆರಡು, ಉಗುರು, ಕಾಲುಗಳು, ಪಾರ್ಶ್ವಗಳು ಇವುಗಳಲ್ಲಿ ಹಿಂದಿನಂತೆಯೇ ನ್ಯಾಸವನ್ನು ಮಾಡಬೇಕು.

೧೯. ಯಾವ ಮನುಷ್ಯನು ಹೀಗೆ ಮಾತೃಕಾನ್ಯಾಸವನ್ನು ಮಾಡುವನೋ ಅವನು ಎಲ್ಲಾವಿಧವಾದ ಯಜ್ಞದಲ್ಲಿಯೂ, ಪೂಜೆಯಲ್ಲಿಯೂ ಸಹ ಪರಿಶುದ್ಧನಾಗಿ ಯೋಗ್ಯನೂ, ಪುರುಷಶ್ರೇಷ್ಠನೂ ಆಗುವನು.

೨೦. ಸರ್ವಾಭೀಷ್ಟಗಳನ್ನೂ, ಧರ್ಮಾದಿಚತುರ್ವರ್ಗಪುರುಷಾರ್ಥಗಳನ್ನೂ ಕೊಡುವ ಮಂತ್ರಗಳಲ್ಲಿ ಇದಕ್ಕಿಂತ ಉತ್ತಮವಾವ ಬೇರೆ ಯಾವ ಮಂತ್ರವೂ ಇಲ್ಲ.

೨೧. ವಾಗ್ದೇವತೆಯಾವ ಸರಸ್ವತಿಯನ್ನೂ, ಆ ದೇವಿಯ ಆಕಾರವನ್ನೂ ಎಲ್ಲಾ ಅಕ್ಷರಗಳನ್ನೂ ಮನಸ್ಸಿನಲ್ಲಿ ಧ್ಯಾನಮಾಡಿ ಮಾತೃಕಾಮಂತ್ರಗಳಿಂದ ಮೂರು ಬಾರಿ ಧ್ಯಾನಮಾಡಿದನಂತರ ಅಭಿಮಂತ್ರಿಸಿದ ಆ ನೀರನ್ನು ಪಾನಮಾಡಬೇಕು. ಹೀಗೆ ಮಾಡಿದ ಪುರುಷನು ಮಾತಿನಲ್ಲಿ ಚತುರನೂ, ಪಂಡಿತನೂ, ಬುದ್ಧಿವಂತನೂ, ಉತ್ತಮ ಸಾದ ಕವಿಯೂ ಸಹ ಆಗುವನು.

ಸ ಏವಾಗ್ನೀ ಪಂಡಿತೋ ಧೀಮಾ೯ ಜಾಯತೇ ಚ ವರಃ ಕವಿಃ ।
ಚಂದ್ರಬಿಂದುಸಮಾಯುಕ್ತಾ೯ ಸ್ವರಾ೯ ಪೂರ್ವಂ ಪಠೇದ್ಬುಧಃ ॥ ೨೨ ॥

ವ್ಯಂಜನಾನಿ ತು ಸರ್ವಾಣಿ ಕೇವಲಾನಿ ಪಠೇತ್ತತಃ ।
ಅಕಾರಾದಿಕ್ಷಕಾರಾಂತಾನ್ಯೇವಂ ಶ್ವಾಸೈಶ್ಚ ಪೂರಕೈಃ ॥ ೨೩ ॥

ಜಲಂ ಕರತಲೇ ಗೃಹ್ಯ ಪಠಿತ್ವಾಕ್ಷರಸಂಘಕಂ ।
ಅಭಿಮಂತ್ರ್ಯ ತು ತತ್ತೋಯಂ ಪ್ರಥಮಂ ಪೂರಕೈಃ ಪಿಬೇತ್ ॥ ೨೪ ॥

ಕುಂಭಕೇನ ದ್ವಿತೀಯಂ ತು ತೃತೀಯಂ ತ್ವಥ ರೇಚಕೈಃ ।
ಏವಂ ಸಕೃತ್ತ್ರಿವಾರಂ ತು ಪೀತ್ವಾ ತೋಯಂ ವಿಚಕ್ಷಣಃ ॥ ೨೫ ॥

ದೃಢಾಂಗಃ ಪಂಡಿತೋ ಭೂಯಾತ್ಪುತ್ರಪೌತ್ರಸಮನ್ವಿತಃ ।
ತ್ರಿಸಂಧ್ಯಮಥ ಪೀತ್ವೈವ ಮಾತೃಕಾಮಂತ್ರಮಂತ್ರಿತಂ ॥ ೨೬ ॥

---

೨೨. ವಿವೇಕಿಯಾದವನು ಮೊದಲು ಎಲ್ಲಾ ಸ್ವರಗಳಿಗೂ ಬಿಂದು ಅನುಸ್ವಾರ ಗಳನ್ನು ಸೇರಿಸಿ ಹೇಳಿ, ಅನಂತರದಲ್ಲಿ ವ್ಯಂಜನಗಳನ್ನು ಮಾತ್ರ ಹೇಳಬೇಕು.

೨೩-೨೫. ರೇಚಕ-ಪೂರಕ ಕುಂಭಕ ಎಂಬ ಶ್ವಾಸಕ್ರಮಗಳಿಂದ ಕೈಯಲ್ಲಿ ನೀರನ್ನು ಇಟ್ಟುಕೊಂಡು ಅಕಾರದಿಂದ ಕ್ಷಕಾರದವರೆಗಿನ ಆ ಅಕ್ಷರಸಮುದಾಯವನ್ನು ಪಠಿಸಿ, ಆ ನೀರನ್ನು ಅಭಿಮಂತ್ರಿಸಿದನಂತರ ಪಾನಮಾಡಬೇಕು. ಮೊದಲು ಪೂರಕ ಕ್ರಮದಿಂದ ಪಾನಮಾಡಬೇಕು. ಅದರಂತೆಯೇ ಎರಡನೇಸಾರಿ ಕುಂಭಕದಿಂದಲೂ, ಮೂರನೇಸಾರಿ ರೇಚಕದಿಂದಲೂ, ಕಡೆಯಲ್ಲಿ ಈ ಮೂರೂ ಸೇರುವಕ್ರಮದಿಂದ ಮೂರುಸಾರಿ ಅಭಿಮಂತ್ರಿಸಿದ ನೀರನ್ನು ಪಾನಮಾಡಿದವನು ದೃಢಾಂಗನೂ, ಪಂಡಿತನೂ, ಆಗುವುದಲ್ಲದೆ ಅವನಿಗೆ ಪುತ್ರಪೌತ್ರಾದಿ ಸಂತತಿವೃದ್ಧಿಯೂ ಆಗುವುದು.

೨೬. ಹೀಗೆ ಮಾತೃಕಾಮಂತ್ರದಿಂದ ಅಭಿಮಂತ್ರಿಸಿದ ನೀರನ್ನು ಮೂರು ಸಂಧ್ಯೆಯಲ್ಲಿಯೂ ಪಾನಮಾಡಿದವನು ಕವಿತ್ವಶಕ್ತಿಯನ್ನೂ, ಇಷ್ಟಾರ್ಥಗಳನ್ನೂ ಪೊಂದುವನು.

ತೋಯಂ ಕವಿತ್ವಮಾಪ್ನೋತಿ ಸರ್ವಾ ಕಾಮಾಂಸ್ತಥೈವ ಚ ।
ಸತತಂ ಕುರುತೇ ಯಸ್ತು ಮಾತೃಕಾಮಂತ್ರಮಂತ್ರಿತಂ ॥ ೨೭ ॥

ತೋಯಪಾನಂ ಮಹಾಭಾಗ ಪೂರಕುಂಭಕರೇಚಕೈಃ ।
ಸ ಸರ್ವಕಾಮಾ೯ ಸಂಪ್ರಾಪ್ಯ ಪುತ್ರಪೌತ್ರಸಮೃದ್ಧಿಮಾ೯ ॥ ೨೮ ॥

ಭೂತ್ವಾ ಮಹಾಕವಿರ್ಲೋಕೇ ಬಲವಾ೯ ಸತ್ಯವಿಕ್ರಮಃ ।
ಸರ್ವತ್ರ ವಲ್ಲಭೋ ಭೂತ್ವಾ ಚಾಂತೇ ಮೋಕ್ಷಮವಾಪ್ನುಯಾತ್ ॥ ೨೯ ॥

ರಾಜಾನಮಥವಾ ರಾಜಪುತ್ರಂ ಭಾರ್ಯಾಮಥಾಪಿ ವಾ ।
ವಶೀಕರೋತಿ ನ ಚಿರಾನ್ಮಾತ್ರಿಕಾನ್ಮಂತ್ರಪಾನತಃ ॥ ೩೦ ॥

ನ್ಯಾಸಕ್ರಮೋ ಕ್ರಮಃಪ್ರೋಕ್ತೋ ವರ್ಗಕ್ರಮ ಇಜೈವ ತು ।
ಅಕ್ಷರಾಣಾಂ ಕ್ರಮೇಣಾಥ ತೋಯಮಪಾನಂ ಸಮಾಚರೇತ್ ॥ ೩೧ ॥

ಯೇ ಯೇ ಮಂತ್ರಾ ದೇವತಾನಾಮೃಷೀಣಾಮಥ ರಕ್ಷಸಾಂ ।
ತೇ ಮಂತ್ರಾ ಮಾತೃಕಾಮಂತ್ರೈರ್ನಿತ್ಯಮೇವ ಪ್ರತಿಷ್ಠಿತಾಃ ॥ ೩೨ ॥

೨೭-೨೯. ಎಲೈ ಭೈರವನೇ ಕೇಳು, ಯಾವನು ರೇಚಕ, ಕುಂಭಕ, ಪೂರಕ ಎಂಬ ಕ್ರಮದಿಂದ ಅಭಿಮಂತ್ರಿತವಾದ ನೀರನ್ನು ಯಾವಾಗಲೂ ಪಾನಮಾಡುವನೋ ಅವನು ಎಲ್ಲಾವಿಧವಾದ ಇಷ್ಟಾರ್ಥಗಳನ್ನೂ ಹೊಂದಿ ಮಕ್ಕಳು ಮರಿಮಕ್ಕಳು ಇವುಗಳ ಸಮೃದ್ಧಿಯಿಂದ ಕೂಡಿದವನಾಗುವನು. ಈ ಲೋಕದಲ್ಲಿ ದೊಡ್ಡ ಕವಿಯೂ, ಶಕ್ತಿಯುಳ್ಳವನೂ, ನಿಜವಾದ ಪರಾಕ್ರಮವುಳ್ಳವನೂ, ಎಲರಲ್ಲಿಯೂ ಪ್ರೀತಿಪಾತ್ರನೂ ಸಹ ಆಗಿದ್ದು, ಕೊನೆಯಲ್ಲಿ ಮೋಕ್ಷವನ್ನು ಹೊಂದುವನು.

೩೦. ಮಾತೃಕಾನ್ಯಾಸದಿಂದ ಅಭಿಮಂತ್ರಿಸಿದ ಜಲವನ್ನು ಪಾನಮಾಡಿದವನು ರಾಜ, ರಾಜಪುತ್ರ, ಭಾರ್ಯಾ ಇವರೆಲ್ಲರನ್ನೂ ಶೀಘ್ರದಲ್ಲಿಯೇ ತನ್ನ ವಶಮಾಡಿಕೊಳ್ಳುವನು.

೩೧. ವರ್ಗಾಕ್ಷರಗಳನ್ನೂ, ಇತರ ಅಕ್ಷರಗಳನ್ನೂ, ಸ್ವರಗಳನ್ನೂ ಸೇರಿಸಿ ನ್ಯಾಸಮಾಡುವ ಕ್ರಮವು ಹೇಳಲ್ಪಟ್ಟಿತು. ಈ ನ್ಯಾಸಕ್ರಮದಿಂದ ಅಭಿಮಂತ್ರಿಸಿದ ಜಲವನ್ನು ಪಾನಮಾಡಬೇಕು.

೩೨. ಋಷಿಗಳು, ದೇವತೆಗಳು, ರಾಕ್ಷಸರು ಇವರ ಸಂಬಂಧಿಯಾದ ಯಾವ ಯಾವ ಮಂತ್ರಗಳಿರುವವೋ, ಅವೆಲ್ಲವೂ ಯಾವಾಗಲೂ ಮಾತೃಕಾಮಂತ್ರದಲ್ಲಿರುವುವು.

ಸರ್ವಮಂತ್ರಮಯಶ್ಚಾಯಂ ಸರ್ವವೇದಮಯಸ್ತಥಾ ।
ಚತುರ್ವರ್ಗಪ್ರದಶ್ಚಾಯಂ ಮಾತೃಕಾಮಂತ್ರ ಉಚ್ಯತೇ ॥ ೩೩ ॥

ಇತಿ ತೇ ಕಥಿತಂ ಪುತ್ರ ಮಾತೃಕಾನ್ಯಾಸಮುದ್ಭುತಂ ।
ವಿಭಾಗಮಥ ಮುದ್ರಾಣಾಂ ಶೃಣು ವೇತಾಲಭೈರವ ॥ ೩೪ ॥

॥ ಇತಿ ಶ್ರೀ ಕಾಲಿಕಾಪುರಾಣೇ ಸಪ್ತಸಪ್ತತಿತಮೋಽಧ್ಯಾಯಃ ॥

---

೩೩. ಈ ಮಾತೃಕಾಮಂತ್ರವು ಸಮಸ್ತ ಮಂತ್ರಗಳ ಮತ್ತು ಸಮಸ್ತ ವೇದಗಳ ಸ್ವರೂಪವಾಗಿರುವುದು. ಈ ಮಂತ್ರವು ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸಿಕೊಡಬಲ್ಲುದೆಂದು ತಿಳಿದವರು ಹೇಳುವರು.

೩೪. ಎಲೈ ಪುತ್ರಸಾದ ವೇತಾಲ ಭೈರವನೇ ಕೇಳು, ಅತಿ ಶ್ರೇಷ್ಠವಾದ ಮಾತೃಕಾನ್ಯಾಸಕ್ರಮವನ್ನು ಹೇಳಿರುವೆನು. ಈಗ ಮುದ್ರೆಗಳ ವಿಭಾಗವನ್ನು ಹೇಳುವೆನು, ಕೇಳು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಪ್ಪತ್ತೇಳನೆಯ
ಅಧ್ಯಾಯವು ಮುಗಿದುದು.

ಅಥ

ಶ್ರೀ ಕಾಲಿಕಾಪುರಾಣೇऽಷ್ಟಸಪ್ತತಿತಮೋऽಧ್ಯಾಯಃ

॥ ಶ್ರೀ ಭಗವಾನುವಾಚ ॥

ಯಾ ಯೋನಿಮುದ್ರಾ ಕಥಿತಾ ಮುದ್ರಾವಿಭಜನೇ ಪುರಾ ।
ಅಷ್ಟಧಾ ಯೋನಿಮುದ್ರಾ ಸ್ಯಾತ್ಪ್ರಥಮಾ ಸಾ ತು ಕೀರ್ತಿತಾ ॥ ೧ ॥

ದ್ವಿತೀಯಾ ಖೇಚರೀ ಮುದ್ರಾ ಕಾಮಾಖ್ಯಾಯಾಸ್ತು ಭೈರವ ।
ತಾಂ ವಿದ್ಧಿ ಚಾದ್ಭುತಂ ಗುಹ್ಯಂ ಯೇನ ತುಷ್ಯತಿ ಚಂಡಿಕಾ ॥ ೨ ॥

ಅನಾಮಿಕಾಂ ದಕ್ಷಿಣಸ್ಯ ತರ್ಜನ್ಯಾಂ ವಾಮತೋ ನ್ಯಸೇತ್ ।
ವಾಮಾನಾಮಾಂ ದಕ್ಷಿಣಸ್ಯ ತರ್ಜನ್ಯಾಂ ವಿನಿವೇಶಯೇತ್ ॥ ೩ ॥

॥ ಎಪ್ಪತ್ತೆಂಟನೆಯ ಅಧ್ಯಾಯವು. ॥

೧. ಹಿಂದೆ ಮುದ್ರೆಗಳನ್ನು ಬೇರೆಬೇರೆಯಾಗಿ ವಿವರಿಸಿ ಹೇಳಿದಾಗ ಯೋನಿ ಮುದ್ರೆಯೆಂಬ ಒಂದು ಮುದ್ರೆಯನ್ನು ಹೇಳಿದ್ದನಷ್ಟೆ. ಅದು ಎಂಟು ವಿಧವಾಗಿರುವುದು. ಆ ಎಂಟು ವಿಧಗಳಲ್ಲಿ ಮೊದಲನೆಯದನ್ನು ಮಾತ್ರ ಆಗ ಹೇಳಿದೆನು.

೨. ಎಲೈ ಭೈರವನೇ ಕೇಳು:— ಎರಡನೆಯದೇ ಖೇಚರೀಮುದ್ರೆಯು. ಇದು ಕಾಮಾಖ್ಯಾದೇವಿಯ ಪೂಜೆಯಲ್ಲಿ ಉಪಯೋಗಿಸಲರ್ಹವಾದುದು. ಇದರ ಮಹಿಮೆಯು ಅದ್ಭುತವಾಗಿರುವುದು. ಈ ಮುದ್ರಾಪ್ರದರ್ಶನದಿಂದ ಚಂಡಿಕಾ ದೇವಿಯು ಸಂತುಷ್ಟಳಾಗುವಳು. ಆದುದರಿಂದ ಈ ಮುದ್ರೆಯು ಬಹಳ ರಹಸ್ಯವಾಗಿರುವುದು.

೩-೪. ಬಲಗಡೆಯ ಅನಾಮಿಕಾ ಬೆರಳನ್ನು ಎಡಗಡೆಯ ತರ್ಜನೀ ಬೆರಳಿಗೆ ಸೇರಿಸಬೇಕು. ಎಡಗಡೆ ಅನಾಮಿಕಾಬೆರಳನ್ನು ಬಲಗಡೆಯ ತರ್ಜನಿಗೆ ಸೇರಿಸಬೇಕು. ಇವೆರಡು ಬೆರಳುಗಳೂ ತರ್ಜನಿ ಬೆರಳುಗಳ ಮುಂದಕ್ಕೆ ತುದಿಗೆತುದಿಯು ಸೇರುವಂತೆ

ತೇ ದ್ವೇ ತಥಾ ತರ್ಜನೀಭ್ಯಾಂ ವೇಷ್ಟಯೇದಗ್ರತೋಗ್ರತಃ ।
ಮಧ್ಯೇ ದ್ವಯಂ ತು ವಿನ್ಯಸ್ಯ ಚೋರ್ಧ್ವಭಾಗೇ ತ್ವನಾಮಯೋಃ ॥ ೪ ॥

ತದಗ್ರಾಗ್ರೇಣ ಸಂಯೋಗಾತ್ತಥೈವ ಚ ಕನಿಷ್ಠಿಕೇ ।
ಅಗ್ರೇಣೈವ ಚ ಸಂಯುಕ್ತೇ ತಸ್ಮೂಲೇಂಗುಷ್ಠಕೇ ನ್ಯಸೇತ್ ॥ ೫ ॥

ಇಯಂ ತೇ ಖೇಚರೀಯೋನಿರ್ಯೋನಿಮುದ್ರಾ ತು ಕಾಮದಾ ।
ಏಷೈವಾಧಃ ಕನಿಷ್ಠೇ ದ್ವೇ ನಿಯೋಜ್ಯ ಯದಿ ಯುಜ್ಯತೇ ॥ ೬ ॥

ಗುಹ್ಯಯೋನಿಸ್ತು ಸಾ ಖ್ಯಾತಾ ಕಾಮೇಶ್ವರ್ಯಾಸ್ತು ತುಷ್ಟಿದಾ ।
ಸಂವೇಷ್ಟ್ಯ ಪೂರ್ವವತ್ಪಾಣ್ಯೋರ್ದ್ವೇ ಕನಿಷ್ಠೇ ತ್ವನಾಮಿಕೇ ॥ ೭ ॥

ಅಧೋಭಾಗೇ ನಿಯೋಜ್ಯಾಥ ಮಧ್ಯಮೇ ಚೋರ್ಧ್ವತಸ್ತಥಾ ।
ತಾಸಾಂ ಪರಸ್ಪರಶ್ಚಾಗ್ರೈರನ್ಯೋನ್ಯಂ ಯೋಜಯೇದ್ಯದಿ ॥ ೮ ॥

ಸೇರಿಸಬೇಕು. ಎರಡು ಮಧ್ಯದ ಬೆರಳನ್ನೂ ಅನಾಮಿಕಾಬೆರಳುಗಳ ಮೇಲುಗಡೆಗೆ ಸೇರುವಂತೆ ಇರಿಸಿಕೊಳ್ಳಬೇಕು. ಎರಡು ಕನಿಷ್ಠಿಕೆ ಬೆರಳುಗಳನ್ನು ಮಧ್ಯದ ಬೆರಳಿನ ತುದಿಗೆ ತುದಿಯು ಸೇರುವಂತೆ ಸೇರಿಸಿ ಅದರ ಬುಡವಲ್ಲಿ ಎರಡು ಹೆಬ್ಬೆರಳುಗಳನ್ನು ಇರಿಸಿಕೊಂಡರೆ ಅದು **ಖೇಚರೀಮುದ್ರೆ**ಯೆನಿಸುವುದು. ಯೋನಿಮುದ್ರೆಯ ಪ್ರಭೇದವಾದ ಈ ಖೇಚರೀ ಮುದ್ರೆಯು ಸಕಲ ಇಷ್ಟಾರ್ಥವನ್ನು ಕೊಡುವುದು.

೬. ಈ ಖೇಚರೀ ಮುದ್ರೆಯನ್ನು ಮಾಡುವಾಗ ಕನಿಷ್ಠಿಕಾ ಬೆರಳುಗಳನ್ನು ಮೂಲಭಾಗದಿಂದ ಸೇರಿಸಿದರೆ ಆಗ ಅದು **'ಗುಹ್ಯಯೋನಿ'** ಎನ್ನಿಸಿಕೊಳ್ಳುವುದು. ಇದು ಕಾಮೇಶ್ವರಿಗೆ ತುಷ್ಟಿಯನ್ನುಂಟುಮಾಡುವುದು.

೭-೯. ಎರುಡು ಕೈಗಳ ಕನಿಷ್ಠಿಕಾ ಅನಾಮಿಕಾ ಎಂಬ ಎರಿಡು ಬೆರಳುಗಳನ್ನೂ ಮೂಲಭಾಗದಿಂದ ಸುತ್ತಿಕೊಂಡು ಸೇರಿಸಿದನಂತರ ಎರಡು ಮಧ್ಯದ ಬೆರಳುಗಳನ್ನೂ, ಆ ಬೆರಳುಗಳ ತುದಿಗೆ ತುದಿಯು ಮೇಲುಗಡೆಯಿಂದ ಅನ್ಯೋನ್ಯವಾಗಿ ಸೇರುವಂತೆ ವಿನ್ಯಾಸಮಾಡಿ ಮಧ್ಯದ ಬೆರಳುಗಳ ಮಧ್ಯದಲ್ಲಿ ಅಂಗುಷ್ಠದ ಬೆರಳನ್ನೂ ತಳ್ಳಿ ತುದಿಯಮಾತ್ರ ಪರಸ್ಪರವಾಗಿ ಸೇರುವಂತೆ ಬೆರಳುಗಳ ವಿನ್ಯಾಸವು ಉಂಟಾದರೆ

ಮಧ್ಯಾಂ ಮಧ್ಯೇ ತಥಾಂಗುಷ್ಠೇ ನಿಃಕ್ಷಿಪ್ಯಾಗ್ರೇ ನಿಯೋಜಯೇತ್ ।
ಯೋನಿಸ್ತು ಶಾಂಕರೀ ಪ್ರೋಕ್ತಾ ತ್ರಿಪುರಾತುಷ್ಟಿದಾ ಮತಾ ॥ ೯ ॥

ಮಧ್ಯೇ ದ್ವೇ ಚ ತಥಾನಾಮೇಷ್ಟ್ವಾ ಪೂರ್ವವಚ್ಚಾಪ್ಯನಾಮಿಕಾ ।
ಕನಿಷ್ಠಾಭ್ಯಾಂ ಪುರೋ ನ್ಯಸ್ಯ ಅಂಗುಷ್ಠೌ ಮೂಲಯೋಸ್ತಯೋಃ ॥ ೧೦ ॥

ಮುದ್ರೇಯಂ ಶಾರದೀ ಪ್ರೋಕ್ತಾ ಶಾರದಾಯಾಸ್ತು ತುಷ್ಟಿದಾ ।
ಮೂಲಯೋನಿಸ್ತು ಕಥಿತಾ ವೈಷ್ಣವೀತಂತ್ರಗೋಚರೇ ॥ ೧೧ ॥

ತರ್ಜನ್ಯನಾಮಿಕಾಮಧ್ಯೇ ಕನಿಷ್ಠೇಽಪಿ ಕ್ರಮಾದಪಿ ।
ಕರಯೋರ್ಯೋಜಯಿತ್ವೈವ ಕನಿಷ್ಠಾಮೂಲದೇಶತಃ ॥ ೧೨ ॥

ಅಂಗುಷ್ಠಾಗ್ರಂ ತು ನಿಃಕ್ಷಿಪ್ಯ ಮಹಾಯೋನಿಃ ಪ್ರಕೀರ್ತಿತಾ ।
ಅಂಗುಷ್ಠೌ ಚಾಥ ಸಂವೇಷ್ಟ್ಯ ಸಂಯುಜ್ಯಾಥ ಕರಾಂಗುಲೀಃ ॥ ೧೩ ॥

ಅಗ್ರಭಾಗೈರ್ಮಧ್ಯಶೂನ್ಯಂ ತತ್ರ ಕುರ್ಯಾತ್ಕರದ್ವಯಂ ।
ಇಯಂ ತು ಯೋಗಿನೀಯೋನಿರ್ಯೋಗಿನೀನಾಂ ಪ್ರಿಯಂಕರೀ ॥ ೧೪ ॥

ಅದು ಯೋನಿಮುದ್ರೆಯ ಮತ್ತೊಂದು ಪ್ರಭೇದವಾದ **"ಶಾಂಕರೀ ಮುದ್ರೆ"** ಎನಿಸಿಕೊಳ್ಳುವುದು. ಇದು ತ್ರಿಪುರಾದೇವಿಗೆ ಸಂತೋಷವನ್ನುಂಟುಮಾಡುವುದು.

೧೦-೧೧. ಎರಡು ಮಧ್ಯದ ಬೆರಳುಗಳನ್ನು ಸುತ್ತಿಟ್ಟು, ಹಿಂದಿನಂತೆಯೇ ಅನಾಮಿಕಾ, ಕನಿಷ್ಠಿಕಾ ಈ ಬೆರಳುಗಳ ಮುಂದುಗಡೆಯಲ್ಲಿ ಸೇರಿಸಿ ಹೆಬ್ಬೆರಳುಗಳನ್ನು ಅವುಗಳ ಬುಡದಲ್ಲಿ ಸೇರಿಸಿದರೆ **"ಶಾರದೀಮುದ್ರೆ"**ಯೆನಿಸುವುದು. ಇದು ಶಾರದಾದೇವಿಗೆ ಸಂತೋಷವನ್ನುಂಟುಮಾಡುವುದು. ಈ ಶಾರದೀ ಮುದ್ರೆಯು ವೈಷ್ಣವೀ ತಂತ್ರದಲ್ಲಿ **"ಮೂಲಯೋನಿ"** ಎಂದು ಪ್ರಸಿದ್ಧವಾಗಿರುವುದು.

೧೨. ಎರಡು ಕೈಗಳ ತರ್ಜನೀ ಅನಾಮಿಕಾ ಬೆರಳುಗಳಮಧ್ಯದಲ್ಲಿ ಎರಡು ಕನಿಷ್ಠಿಕಾ ಬೆರಳುಗಳನ್ನು ಇರಿಸಿ ಆ ಕನಿಷ್ಠಿಕೆಯಬುಡದಲ್ಲಿ ಹೆಬ್ಬೆರಳನ್ನು ಇರಿಸಿದರೆ ಅದು **"ಮಹಾಯೋನಿ"** ಮುದ್ರೆ ಎನಿಸಿಕೊಳ್ಳುವುದು.

೧೩-೧೪. ಎರಡು ಹೆಬ್ಬೆರಳುಗಳನ್ನೂ ವೇಷ್ಟನೆಯಿಂದ ಕೈಯಿನ ಬೆರಳುಗಳೆಲ್ಲವನ್ನೂ ತುದಿಗೆ ತುದಿಯು ಮುಟ್ಟುವಂತೆ ಸೇರಿಸಿ, ಕೈಯಿನ ಮಧ್ಯಭಾಗದಲ್ಲಿ ರಂಧ್ರವು ಬರುವಂತೆ ಮಾಡಿದರೆ, ಅದು **"ಯೋಗಿನೀಯೋನಿ"** ಮುದ್ರೆಯೆನ್ನಿಸಿಕೊಳ್ಳುವುದು. ಇದು ಯೋಗಿನಿಯರಿಗೆ ಪ್ರೀತಿಯನ್ನುಂಟುಮಾಡುವುದು.

ಏತಾ ಅಷ್ಟೌ ಸಮಾಖ್ಯಾತಾಯೋನ್ಯಃ ಕಾಮೇಶ್ವರೀಪ್ರಿಯಾಃ ।
ಮೂರ್ತಿಭೇದೇನ ಚಾನ್ಯೇಷಾಂ ದೇವಿನಾಮಪಿ ತುಷ್ಟಿದಾಃ ॥ ೧೫ ॥

ಯಾತ್ರಾಯಾಂ ಯುದ್ಧವಿಷಯೇ ವಾಗ್ವಾದೇ ಕಲಹೇ ತಥಾ ।
ಅಷ್ಟೌ ಯೋನ್ಯಃ ಸ್ಮರೇದ್ಯಸ್ತು ಜಯಸ್ತಸ್ಯ ಸನಾತನಃ ॥ ೧೬ ॥

ವಿಸರ್ಜನೇ ಪೂಜನೇ ಚ ಸ್ಮರಣೇ ಕರ್ಮಭೇದತಃ ।
ಏತಾ ಯೋನ್ಯಃ ಸಮಾಖ್ಯಾತಾಶ್ಚಂಡಿಕಾ ಪೂಜನೇಷು ಚ ॥ ೧೭ ॥

ಏತಾಸ್ತು ಕಥಿತಾ ಯೋನ್ಯಃ ಕ್ರಮಾತ್ಕ್ರಮವಿಸರ್ಜನೇ ।
ರಹಸ್ಯಂ ವಾಮದಾಕ್ಷಿಣ್ಯಂ ಮುಂತ್ರಶುದ್ಧಿಂ ಶೃಣುಷ್ವ ಮೇ ॥ ೧೮ ॥

ಮುಂತ್ರೇಣ ಕ್ರಿಯತೇ ಯತ್ತು ಶಾರೀರಂ ಮುಂತ್ರಮುತ್ತಮಂ ।
ತದ್ರಹಸ್ಯಮಿತಿ ಪ್ರಾಹುರ್ಮುಂತ್ರೇಷು ಮುಂತ್ರಕೋವಿದಾಃ ॥ ೧೯ ॥

---

೧೫. ಈ ಎಂಟುವಿಧವಾದ ಮುದ್ರೆಗಳು ಕಾಮೇಶ್ವರಿಗೆ ಪ್ರಿಯವಾದವುಗಳು. ಮೂರ್ತಿಭೇದದಿಂದ ಬೇರೆಯರಾದ ದೇವಿಯರಿಗೂ ಕೂಡ ಇವುಗಳು ಸಂತೋಷವನ್ನುಂಟುಮಾಡುವುವು.

೧೬. ಯಾತ್ರೆಯಲ್ಲಿಯೂ, ಯುದ್ಧಕಾಲದಲ್ಲಿಯೂ, ವಾಗ್ವಾದವಲ್ಲಿಯೂ ಜಗಳದಲ್ಲಿಯೂ, ಸಹ ಈ ಎಂಟು ಯೋನಿಮುದ್ರೆಗಳನ್ನು ಸ್ಮರಿಸಿದವನಿಗೆ ಜಯವು ತಪ್ಪದೆ ಆಗುವುದು.

೧೭. ದೇವಿಯ ವಿಸರ್ಜನೆಯನ್ನು ಮಾಡುವಾಗಲೂ, ಪೂಜೆಯನ್ನು ಮಾಡುವಾಗಲೂ, ಸ್ಮರಣೆಯನ್ನು ಮಾಡುವಾಗಲೂ, ಆಯಾಯ ಕರ್ಮಗಳ ಭೇದಕ್ಕನುಸಾರವಾಗಿ ಈ ಯೋನಿಮುದ್ರೆಗಳು ಉಪಯೋಗಿಸಲ್ಪಡುವವು. ಇವುಗಳನ್ನು ಚಂಡಿಕಾ ದೇವಿಯ ಪೂಜೆಯಲ್ಲಿಯೂ ಉಪಯೋಗಿಸಬೇಕು.

೧೮. ವಾಮ ಮತ್ತು ದಕ್ಷಿಣಾಚಾರಗಳಿಗನುಸಾರವಾಗಿ, ಕ್ರಮವಾಗಿ ಈ ಯೋನಿಮುದ್ರೆಗಳ ಭೇದಗಳನ್ನೂ, ಇವುಗಳಕ್ರಮವನ್ನೂ ವಿಸರ್ಜನೆಯ ಕ್ರಮವನ್ನೂ ಸಹ ಹೇಳಿರುವೆನು. ಇನ್ನು ಮುಂದೆ ಮುಂತ್ರಶುದ್ಧಿಯ ಕ್ರಮವನ್ನು ಕೇಳು.

೧೯. ನ್ಯಾಸಾದಿಮಂತ್ರಗಳಿಂದ ಪರಿಶುದ್ಧವಾದ ಶರೀರವು ಮುಂತ್ರ ಶರೀರವೆಂದು ಹೇಳಲ್ಪಡುವುದು. ಈ ವಿಧವಾದ ಶರೀರವು ದೇವಿಯನ್ನು ಪೂಜಿಮಾಡುವ ವರಲ್ಲಿ ಅತಿಶ್ರೇಷ್ಠವೆಂದು ಮಂತ್ರಶಾಸ್ತ್ರರಹಸ್ಯವನ್ನು ಬಲ್ಲವರು ಹೇಳುವರು.

ಕಾಮಾಖ್ಯಾಯಾಸ್ತು ಷಟ್ಕೋಣಂ ಮುಂಡಲಸ್ಯ ದಲಾಂತರೇ ।
ತ್ರಿಧಾ ಲಿಖೇನ್ಮೂಲಮಂತ್ರಮೂರ್ಧ್ವಂ ತ್ರಿಷ್ವಪಿ ಸಂಧಿಷು ॥ ೨೦ ॥

ಅಥ ಸ್ತ್ರಿಸಂಧಿಷು ಪುನರ್ವಿಧಿಂ ಶಕ್ರಂ ಹರಂ ತಥಾ ।
ಸಹಿತಂ ಮದನೇನೈವ ಲಿಖೇದ್ಭೂರ್ಜತ್ವಚಿ ತ್ರಿಧಾ ॥ ೨೧ ॥

ತತ್ಸಮಾದಾಯ ಸಾಧಸ್ಯಂ ದಕ್ಷಿಣೇನ ಕರೇಣ ವೈ ।
ಮೂಲಾಮಪಿ ಸಮಾದಾಯ ಸಂಜಪೇದುತ್ತರಾಮುಖಃ ॥ ೨೨ ॥

ತದ್ಭುಜೇ ದಕ್ಷಿಣೇ ಧಾರ್ಯಂ ಬಾಹೌ ವಾ ಸಾಧಕೋತ್ತಮೈಃ ।
ಜಪಾಂತೇ ಲಿಖಿತಂ ಯಂತ್ರಂ ಪೇನ ಸರ್ವಜಯೀ ಭವೇತ್ ॥ ೨೩ ॥

ದೀರ್ಘಾಯುಃ ಸರ್ವವಶಕೃದ್ಧನಧಾನ್ಯಸಮೃದ್ಧಿಮಾನ್ ।
ಮೃತೋ ದೇವಿಗೃಹೇ ಯಾತಿ ಯಂತ್ರಯಂತ್ರಿತಬುದ್ಧಿಮಾನ್ ॥ ೨೪ ॥

---

೨೦. ಕಾಮಾಖ್ಯಾದೇವಿಯ ಯಂತ್ರದ ಷಟ್ಕೋಣವನ್ನು ಮುಂಡಲದ ದಳದ ಮಧ್ಯದಲ್ಲಿ ಬರೆದು, ಮೇಲುಗಡೆಯ ಮೂರು ಸಂಧಿಗಳಲ್ಲಿಯೂ, ಮೂರಾವರ್ತಿ ಮೂಲಮಂತ್ರವನ್ನು ಬರೆಯಬೇಕು.

೨೧. ಯಂತ್ರದ ಕೆಳಭಾಗದ ಮೂರು ಸಂಧಿಗಳಲ್ಲಿ ಮತ್ತೆ ಬ್ರಹ್ಮ, ಇಂದ್ರ, ಈಶ್ವರ, ಇವರುಗಳ, ಬೀಜಾಕ್ಷರಗಳನ್ನು ಕಾಮಬೀಜಾಕ್ಷರದೊಡನೆ ಸೇರಿಸಿ ಭೂರ್ಜ ಪತ್ರೆಯಲ್ಲಿ ಮೂರು ಸಾರಿ ಬರೆಯಬೇಕು.

೨೨-೨೪. ಸಾಧಕನಾದವನು ಅದನ್ನು ಬಲಗೈಯಿಂದ ಜಪಸರವನ್ನು ಹಿಡಿದು ಕೊಂಡು ಉತ್ತರಾಭಿಮುಖವಾಗಿ ಸಹಸ್ರಜಪವನ್ನು ಮಾಡಬೇಕು. ಜಪವು ಮುಗಿದ ನಂತರ ಆ ಯಂತ್ರವನ್ನು ಬಲಭುಜದಲ್ಲಿ ಯಾಗಲೀ, ಅಥವಾ ತೋಳಿನಲ್ಲಿ ಯಾಗಲೀ ಕಟ್ಟಿಕೊಳ್ಳಬೇಕು. ಇದರಿಂದ ಅವನು ಎಲ್ಲಾ ಕಾರ್ಯಗಳಲ್ಲಿಯೂ ಜಯಶೀಲ ನಾಗುವನು. ಧನಧಾನ್ಯಸಮೃದ್ಧಿಯಿಂದ ಸುಖವನ್ನೈದುವನು; ಸರ್ವರೂ ಇವನ ವಶವರ್ತಿಯಾಗುವರು. ಈರೀತಿ ಬಹುಕಾಲ ಸುಖದಿಂದ ಜೀವಿಸಿದ್ದು ಮೃತನಾದ ಮೇಲೆ ಈ ಯಂತ್ರದ ಮಹಿಮೆಯಿಂದ ಉತ್ತಮವಾದ ದೇವೀಲೋಕವನ್ನು ಹೊಂದುವನು.

ಷಟ್ಕೋಣಾನಂತರಕೃತಂ ವೇಷ್ಟಿತಾಷ್ಟದಲೇಷ್ವಥ ।
ಲಿಖಿತ್ವಾ ಭೂರ್ಜಪತ್ರೇಷು ವಿಲೀನೈರ್ಯಾವಕೋದಕೈಃ ॥ ೨೫ ॥

ಉತ್ತರಾದಿಕ್ರಮೇಣೈವ ವೈಷ್ಣವೀತಂತ್ರಸಂಗತಾ ।
ಅಷ್ಟೌ ವರ್ಣಾ ಮಧ್ಯಭಾಗೇ ಪೌರ್ವವತ್ಕಾಮರಾಜಕಂ ॥ ೨೬ ॥

ತ್ರೀಣಿ ವರ್ಣಾನಿ ನೇತ್ರಬೀಜಸ್ಯ ತ್ರಿಕೋಣಸ್ಯಾಗ್ರತೋ ಲಿಖೇತ್ ।
ಏವಂ ತ್ರಿಧಾ ಕೃತಂ ಯಂತ್ರಂ ಕೃತ್ವಾ ವಾಮಕರೇ ಸ್ಥಿತಃ ॥ ೨೭ ॥

ಜಪೇತ್ತ್ರಿಣಿ ಸಹಸ್ರಾಣಿ ಮಾಲಾಮಾದಾಯ ದಕ್ಷಿಣೇ ।
ಜಪಾಂತೇ ವೈಷ್ಣವೀರೂಪಧ್ಯಾನಂ ಕುರ್ಯಾದತಂದ್ರಿತಃ ॥ ೨೮ ॥

ಪ್ರಾಣಾಯಾಮಸಹಸ್ರಂ ತು ತತಸ್ತಂ ಲಿಖಿತೋತ್ತಮಂ ।
ಗ್ರೀವಾಯಾಂ ಧಾರಯೇದ್ಯಂತ್ರಂ ತೇನ ಸರ್ವಜಯೀ ಭವೇತ್ ॥ ೨೯ ॥

ರಾಜಪುತ್ರೋ ಭವೇದ್ರಾಜಾ ತದನ್ಯಃ ಸಚಿವೋ ಭವೇತ್ ।
ದ್ವಿಜರಾಜೋ ಭವೇದ್ವಿದ್ವಾನ್ ಕವಿರ್ವಾಗ್ಮೀ ಚ ವಾ ಭವೇತ್ ॥ ೩೦ ॥

೨೫-೨೯. ಸಾಧಕನು ಭೂರ್ಜಪತ್ರೆಯಲ್ಲಿ ಅರಗಿನ ನೀರಿನಿಂದ ಸುತ್ತಲೂ ಅಷ್ಟ ದಳಪದ್ಮವು ಇರುವಂತೆಯೂ, ಮಧ್ಯದಲ್ಲಿ ಆರುಕೋಣಗಳು ಇರುವಂತೆಯೂ, ಯಂತ್ರವನ್ನು ಬರೆದು ವೈಷ್ಣವೀ ಮಂತ್ರದ ಅ, ಕ, ಚ, ಟ, ತ, ಪ, ಯ, ಶ ಎಂಬ ಎಂಟು ಅಕ್ಷರಗಳನ್ನೂ, ಮಧ್ಯದಲ್ಲಿ ಕಾಮರಾಜಬೀಜವನ್ನೂ, ನೇತ್ರಬೀಜದ ಮೂರು ವರ್ಣಗಳನ್ನೂ ತ್ರಿಕೋಣದ ತುದಿಗೆ ಬರುವಂತೆ ಉತ್ತರಾದಿಕ್ರಮದಿಂದ ಬರೆಯಬೇಕು. ಹೀಗೆ ತ್ರಿದೇವತಾತ್ಮಕವಾದ ಬೀಜಾಕ್ಷರಗಳಿಂದ ಕೂಡಿದ ಯಂತ್ರವನ್ನು ಎಡದಕೈಯಲ್ಲಿಯೂ, ಜಪಸರವನ್ನು ಬಲದಕೈಯಿನಲ್ಲಿಯೂ ಹಿಡಿದುಕೊಂಡು ಮೂರುಸಾವಿರ ಜಪವನ್ನು ಮಾಡಬೇಕು. ಜಪಾಂತ್ಯದಲ್ಲಿ ಏಕಾಗ್ರಮನಸ್ಸಿನಿಂದ ವೈಷ್ಣವೀದೇವಿಯ ರೂಪವನ್ನು ಧ್ಯಾನಮಾಡುತ್ತಾ ಸಾವಿರ ಪ್ರಾಣಾಯಾಮಗಳನ್ನು ಮಾಡಬೇಕು. ಅನಂತರದಲ್ಲಿ ತಾನು ಬರೆದಿರುವ ಶ್ರೇಷ್ಠವಾದ ಯಂತ್ರವನ್ನು ತನ್ನ ಕಂಠದಲ್ಲಿ ಧರಿಸಬೇಕು. ಇದರಿಂದ ಸರ್ವಕಾರ್ಯದಲ್ಲಿಯೂ ಜಯಶೀಲನಾಗುವನು.

೩೦-೩೧. ಈರೀತಿಯಾಗಿ ಜಪಮಾಡಿ ಯಂತ್ರಧಾರಣ ಮಾಡುವವನು ರಾಜಪುತ್ರನಾಗಿದ್ದರೆ ರಾಜನಾಗುವನು; ಇತರ ಪುರುಷನಾದರೆ ಮಂತ್ರಿಯಾಗುವನು;

ರಾಕ್ಷಸೇಭ್ಯಃ ಪಿಶಾಚೇಭ್ಯೋ ಭೂತೇಭ್ಯಶ್ಚಾಪಿ ಚಾನ್ಯತಃ ।
ಸಾಧುಃ ಸಂವಿದ್ಯತೇ ತಸ್ಯ ನ ಕದಾಚಿತ್ಪರಾಜಯಃ ॥ ೩೧ ॥

ದೀರ್ಘಾಯುರ್ಬಲವಾ ಪ್ರಾಜ್ಞೋ ಮೃತೇ ಮೋಕ್ಷಮವಾಪ್ನುಯಾತ್ ।
ಸಂಪೂರ್ಣಮಂಡಲಂ ಕೃತ್ವಾ ಅಷ್ಟಪತ್ರಸಮನ್ವಿತಂ ॥ ೩೨ ॥

ಭೂರ್ಜತ್ವಚಿ ಶ್ರೀಫಲಸ್ಯ ನಿರ್ಯಾಸೈಸ್ತಸ್ಯ ಮಧ್ಯತಃ ।
ಷಟ್ಕೋಣಂ ವಿಲಿಖೇತ್ತಸ್ಯ ಪ್ರಾಗಗ್ರೇಷ್ವಥ ತ್ರಿಷ್ವಪಿ ॥ ೩೩ ॥

ವಿಲಿಖೇತ್ತ್ರಿಪುರಾವರ್ಣಾನಧೋಬೀಜಂ ತು ನೇತ್ರಕಂ ।
ದಳೇಷ್ವಷ್ಟಾಸು ತು ಪುನಃ ವೈಷ್ಣವೀತಂತ್ರಸಂಗತಾ ॥ ೩೪ ॥

ಅಷ್ಟಾವರ್ಣಾಂಸ್ತು ವಿಲಿಖೇತ್ತಥಾ ದ್ವಾರ್ಷು ಚತುರ್ಷ್ವಪಿ ।
ಷಟ್ಕೋಣೇಷೂತ್ತರಾಕೋಣಕ್ರಮೇಣೈಕಾಗ್ರಮಾನಸಃ ॥ ೩೫ ॥

ತದ್ಧೃತ್ವಾ ದಕ್ಷಿಣಕರೇ ವೈಷ್ಣವೀತಂತ್ರಮುತ್ತಮಂ ।
ಜಪೇತ್ತ್ರಿಭಿರ್ದಿನೈರೇವಾಯುತಂ ಸಂಯತಮಾನಸಃ ॥ ೩೬ ॥

ಬ್ರಾಹ್ಮಣನಾದರೆ ವಿದ್ವಾಂಸನೂ, ಕವಿಯೂ, ವಾಗ್ವಾದದಲ್ಲಿ ಚತುರನೂ ಆಗುವನು. ಈ ಜಪಮಾಡಿದವನಿಗೆ ರಾಕ್ಷಸ, ಪಿಶಾಚ, ಭೂತಾದಿಗಳಿಂದ ಯಾವ ವಿಧವಾದ ಭಯವೂ ಉಂಟಾಗುವುದಿಲ್ಲ. ಅವನಿಗೆ ಯಾರಿಂದಲೂ ಪರಾಜಯವೆಂಬುದೇ ಇಲ್ಲ. ಪ್ರಾಜ್ಞನೂ, ಬಲಶಾಲಿಯೂ ಆಗಿ ಬಹುಕಾಲ ಸುಖದಿಂದ ಜೀವಿಸಿದ್ದು, ಮೃತನಾದ ನಂತರ ಕೈವಲ್ಯಪದವಿಯನ್ನು ಪಡೆಯುವನು.

೩೨-೩೭. ಪ್ರಾಜ್ಞನಾದ ಸಾಧಕನು ಭೂರ್ಜಪತ್ರಿಯಲ್ಲಿ ತೆಂಗಿನಕಾಯಿನ ನೀರಿನಿಂದ ಮಧ್ಯದಲ್ಲಿ ಆರುಕೋಣಗಳು ಬರುವಂತೆ ಎಂಟು ದಳಗಳಿಂದ ಕೂಡಿರುವ ಒಂದು ಯಂತ್ರವನ್ನು ಬರೆದು, ಅದರ ಪೂರ್ವದಿಕ್ಕಿನಲ್ಲಿರುವ ಮೂರು ದಳಗಳಲ್ಲಿಯೂ ತ್ರಿಪುರಾ ಮಂತ್ರದ ಅಕ್ಷರಗಳನ್ನು ಬರೆದು ನೇತ್ರಮಂತ್ರದ ಬೀಜಾಕ್ಷರವನ್ನು ಅಧೋಮುಖವಾಗಿರುವಂತೆ ಬರೆಯಬೇಕು. ಎಂಟು ದಳಗಳಲ್ಲಿಯೂ ವೈಷ್ಣವೀ ಮಂತ್ರಕ್ಕೆ ಸಂಬಂಧಪಟ್ಟ ಎಂಟು ಅಕ್ಷರಗಳನ್ನು ಬರೆಯಬೇಕು. ನಾಲ್ಕು ದ್ವಾರಗಳಲ್ಲಿಯೂ ಆರು ಕೋಣಗಳಲ್ಲಿಯೂ ಉತ್ತರದಿಕ್ಕು ಮೊದಲಾಗಿ ವೈಷ್ಣವೀಮಂತ್ರದ ಎಂಟು ಅಕ್ಷರಗಳನ್ನೂ ಏಕಾಗ್ರಮನಸ್ಸಿನಿಂದ ಬರೆದು, ಅದನ್ನು ತನ್ನ ಬಲಗೈಯಲ್ಲಿರಿಸಿಕೊಂಡು,

ಸ್ತ್ರಾಣಾಯಾಮಸಹಸ್ರಾಣಿ ತ್ರೀಣಿ ಕೃತ್ವಾ ತು ಹರ್ಷಿತಃ ।
ಸಂಧ್ಯಾಕಾಲೇ ನವಮ್ಯಾಂ ತು ಶೀರ್ಷೇಣ ಧಾರಯೇದ್ಬುಧಃ ॥ ೩೭ ॥

ಶತಾಯುಃ ಸರ್ವದಮನೋ ಮತಿಮಾ೯ ಪಂಡಿತೋತ್ತಮಃ ।
ಬಲವೀರ್ಯಧನೈಶ್ವರ್ಯಯುಕ್ತಃ ಪಾರ್ಥಿವ ಏವ ವಾ ॥ ೩೮ ॥

ಪ್ರತ್ಯಕ್ಷತೋ ಮಹಾಮಾಯಾಂ ಕಾಮಾಖ್ಯಾಂ ತ್ರಿಪುರಾಮಪಿ ॥
ನಿತ್ಯಂ ಪಶ್ಯತಿ ಮೇಧಾವೀ ಮಹೋತ್ಸಾಹಾಂ ಚ ಶಾರದಾಂ ॥ ೩೯ ॥

ಸಿಂಹೋ ವ್ಯಾಘ್ರೋ ಭುಜಂಗೋ ವಾ ಯೇಽನ್ಯೇ ವಾ ತಸ್ಯ ಹಿಂಸಕಾಃ ।
ಸರ್ವೇ ತಸ್ಯ ತನುಂ ಪ್ರಾಪ್ಯ ವಿಷೀದಂತಿ ನ ಸಂಶಯಃ ॥ ೪೦ ॥

ಜಯಹೇತುರತೋಽನ್ಯಸ್ಮಾತ್ಸಂಗ್ರಾಮೇ ಶಾಸ್ತ್ರವಾದತಃ ।
ನ ವಿದ್ಯತೇ ತ್ರಿಭುವನೇ ತಸ್ಮಾತ್ಕುರ್ಯಾತ್ತು ಯಂತ್ರಕಂ ॥ ೪೧ ॥

ವೈಷ್ಣವೀತಂತ್ರದ ಮಂತ್ರಗಳನ್ನು ತ್ರಿಕರಣಶುದ್ಧನಾಗಿ ಮೂರುದಿನಗಳಲ್ಲಿ ಹತ್ತುಸಾವಿರ ಜಪವನ್ನೂ, ಮೂರುಸಾವಿರ ಪ್ರಾಣಾಯಾಮವನ್ನೂ ಮಾಡಿದನಂತರ ಸಂತೋಷದಿಂದ ನವಮಿಯದಿನ ಸಂಧ್ಯಾಕಾಲದಲ್ಲಿ ಆ ಯಂತ್ರವನ್ನು ತನ್ನ ಶಿರಸ್ಸಿನಲ್ಲಿ ಧರಿಸಬೇಕು.

೩೮-೩೯. ಈರೀತಿ ಯಂತ್ರವನ್ನು ಶಿರಸ್ಸಿನಲ್ಲಿ ಧರಿಸಿದವನು ತನ್ನ ಶತ್ರುಗಳನ್ನು ಜಯಿಸಿ ಬುದ್ಧಿವಂತನೂ, ಪಂಡಿತಶ್ರೇಷ್ಠನೂ ಆಗಿ, ನೂರು ವರ್ಷಗಳವರೆಗೆ ಬದುಕುವನು. ರಾಜನಾದರೆ ಬಲಪರಾಕ್ರಮಗಳಿಂದಲೂ, ಅತುಲೈಶ್ವರ್ಯದಿಂದಲೂ ಕೂಡಿ ಮಹಾಮಾಯಾಸ್ವರೂಪಳಾದ ಕಾಮಾಖ್ಯಾದೇವಿಯನ್ನೂ, ತ್ರಿಪುರಾ, ಮಹೋತ್ಸಾಹಾ, ಶಾರದಾ ಎಂಬ ದೇವಿಯರನ್ನೂ ಪ್ರತ್ಯಕ್ಷವಾಗಿ ನಿತ್ಯವೂ ನೋಡುವನು. ಬಹಳ ಬುದ್ಧಿಶಾಲಿಯಾಗುವನು.

೪೦-೪೧. ಸಿಂಹ, ಹುಲಿ, ಹಾವು ಮೊದಲಾದ ಹಿಂಸೆಯನ್ನು ಮಾಡುವ ದುಷ್ಟ ಪ್ರಾಣಿಗಳು ಇವನ ಶರೀರ ಸಂಸರ್ಗದಿಂದ ತಾವೇ ನಾಶವನ್ನೈದುವವು. ಇವನಿಗೆ ಯಾವ ಬಾಧೆಯನ್ನೂ ಮಾಡಲಾರವು. ಯುದ್ಧದಲ್ಲಿ ಜಯಶೀಲನಾಗಬೇಕೆಂದು ಅಪೇಕ್ಷಿಸುವವನಿಗೂ, ಶಾಸ್ತ್ರವಾದದಲ್ಲಿ ಗೆಲ್ಲಲು ಇಚ್ಛಿಸುವವನಿಗೂ ಈ ಯಂತ್ರವನ್ನು

ಅಂತೇ ದೇವಿಗೃಹಂ ಪ್ರಾಪ್ಯ ತತೋ ಮೋಕ್ಷಮವಾಪ್ನುಯಾತ್ ।
ಮಹಾಮಾಯಾ ಶಾರದಾಖ್ಯಾ ಕಾಮಾಖ್ಯಾ ತ್ರಿಪುರಾ ತಥಾ ॥ ೪೨ ॥

ಮಹೋತ್ಸಾಹಾ ತಥೈತೇಷಾಂ ಮಂತ್ರಾಣಾಂ ಯೋ ಗಣೋ ಭವೇತ್ ।
ಮಂಡಲಂ ಚಾಷ್ಟದಳಕಂ ತನ್ಮಧ್ಯೇ ವಿಲಿಖೇತ್ಪುನಃ ॥ ೪೩ ॥

ಲಿಖಿತ್ವಾ ಪೂರ್ವವತ್ಪೂರ್ವಂ ಪ್ರೋಕ್ತಂ ಮಂತ್ರಗಣಂ ಸಮಂ ।
ಅನ್ಯೇ ದ್ವಯಂ ದ್ವಾರದೇಶೇ ಕೋಣೇಷ್ವಕ್ಷರತೋ ಲಿಖೇತ್ ॥ ೪೪ ॥

ಶುಕ್ಲಕೌಶೇಯವಸ್ತ್ರೇಷು ರಸೈರ್ವಹ್ನಿಶಿಖಸ್ಯ ತು ।
ಉತ್ತರೀಯಂ ತು ತದ್ವಸ್ತ್ರಂ ಕೃತ್ವಾ ಜಪ್ಯಂ ಸಮಾಚರೇತ್ ॥ ೪೫ ॥

ಕೃತೋಪವಾಸಃ ಶುದ್ಧಶ್ಚ ಮಾತೃಕಾನ್ಯಾಸಪೂರ್ವಕಂ ।
ಪಂಚಾನಾಮಪಿ ವರ್ಗಾಣಾಂ ಸಹಸ್ರಾಣಿ ತು ಪಂಚ ವೈ ॥ ೪೬ ॥

ದಿವಸೈಃ ಪಂಭಿರ್ಜಪ್ತ್ವಾ ತದಂತೇ ಚ ಸಮಾಚರೇತ್ ।
ಸ್ರಾಣಾಯಾಮಸಹಸ್ರಾಣಿ ಪಂಚ ವೈ ಪಂಚಭಿರ್ದಿನೈಃ ॥ ೪೭ ॥

ಬಿಟ್ಟರೆ ಇದಕ್ಕಿಂತ ಉತ್ತಮವಾದ ಬೇರೊಂದು ಯಂತ್ರವು ಮೂರು ಲೋಕಗಳ ಲ್ಲಿಯೂ ಇಲ್ಲ. ಆದುದರಿಂದ ಈ ಯಂತ್ರವನ್ನು ಧಾರಣಮಾಡಿದವನು ದೇವೀಲೋ ಕದಲ್ಲಿ ಬಹುಕಾಲ ಸುಖವಾಗಿದ್ದು ಕಡೆಗೆ ಮೋಕ್ಷವನ್ನು ಪಡೆಯುವನು.

೪೨-೪೯. ಮಹಾಮಾಯಾ, ಶಾರದಾ, ಕಾಮೇಶ್ವರೀ, ತ್ರಿಪುರಾ, ಮಹೋ ತ್ಸಾಹಾ, ಎಂಬ ದೇವಿಯರ ಮಂತ್ರಗಳ ಸಮೂಹವನ್ನು ಎಂಟು ದಳವುಳ್ಳ ಮಂಡಲದ ಮಧ್ಯದಲ್ಲಿ ಹಿಂದೆಹೇಳಿದ ಕ್ರಮದಿಂದ ಬರೆಯಬೇಕು. ಅನಂತರ ದ್ವಾರಗಳಲ್ಲಿಯೂ, ಕೋಣಗಳಲ್ಲಿಯೂ ಬೇರೆ ಎರಡು ಮಂತ್ರಗಳನ್ನು ಅಕ್ಷರಕ್ರಮದಿಂದ ಬರೆಯಬೇಕು. ಈರೀತಿಯಾದ ಯಂತ್ರವನ್ನು ಬಿಳಿಯ ರೇಷ್ಮೆಯ ಬಟ್ಟೆಯಲ್ಲಿ ವಹ್ನಿಶಿಖಾ ಎಂಬ ಮೂಲಿಕೆಯ ರಸದಿಂದ ಬರೆದು, ಆ ವಸ್ತ್ರವನ್ನು ಹೊದ್ದುಕೊಂಡು ಜಪವನ್ನು ಮಾಡ ಬೇಕು. ಹೀಗೆ ಜಪಮಾಡುವಾಗ ಸಾಧಕನು ಮೊದಲು ಉಪವಾಸವನ್ನು ಮಾಡಿ ಪರಿಶುದ್ಧನಾಗಿ ಜಪಮಾಡಬೇಕು. ಮೊದಲು ಐದು ವರ್ಗಾಕ್ಷರಗಳಿಂದ ಕೂಡಿದ ಮಾತೃಕಾನ್ಯಾಸವನ್ನು ಐದು ದಿವಸಗಳಲ್ಲಿ ಐದುಸಾವಿರ ಜಪಮಾಡಿ ಆಮೇಲೆ

ಅಂತೇ ತು ಕವಚನ್ಯಾಸಂ ಕಾತ್ಯಾಯನ್ಯಾಃ ಸಮಾಚರೇತ್ ।
ತತಸ್ತು ಮಾತೃಕಾಮಂತ್ರೈಃ ಶ್ವಾಸರೋಧನಪೂರ್ವಕಂ ॥ ೪೮ ॥

ತ್ರಿಃ ಪಿಬೇತ್ಕಪಿಲಾಕ್ಷೀರಂ ಜಾಗೃವಾಂಶ್ಚ ತದಾ ನಿಶಿ ।
ಏವಂ ಯಃ ಕುರುತೇ ಯಂತ್ರಂ ಶರೀರೇ ಶುಕ್ಲವಾಸಸಾ ॥ ೪೯ ॥

ಸ್ತೋತ್ರಸಿದ್ಧಿಮವಾಪ್ನೋತಿ ದೇವೀಲೋಕಂ ಚ ಗಚ್ಛತಿ ।
ಯ ಉತ್ತರೀಯಂ ಬಿಭೃಯಾದ್ವಸ್ತ್ರಂ ಮಂತ್ರೇಣ ಮಂತ್ರಿತಂ ॥ ೫೦ ॥

ನಿತ್ಯಮೇವ ಮಹಾಭಾಗ ಪ್ರಭಾವಂ ತಸ್ಯ ವೈ ಶೃಣು ।
ನ ತಸ್ಯ ದೇಹೇ ಶಸ್ತ್ರಾಣಿ ಪ್ರವೇಕ್ಷ್ಯಂತಿ ಕದಾಚನ ॥ ೫೧ ॥

ನಾಗ್ನಿರ್ದಹತಿ ತತ್ಕಾಯಂ ನಾಪಃ ಸಂಕ್ಲೇದಯಂತಿ ಚ ।
ರಾಕ್ಷಸಾಶ್ಚ ಪಿಶಾಚಾಶ್ಚ ಭೂತಾದ್ಯಾ ಯೇ ತು ಹಿಂಸಕಾಃ ॥ ೫೨ ॥

ತೇ ತಂ ದೃಷ್ಟ್ವಾ ಮಹಾಭಾಗಂ ಭುವಂ ಗಚ್ಛಂತಿ ವೈ ಭಿಯಾ ।
ಗಚ್ಛೇದವಾರಿತಃ ಸೋಪಿ ಸರ್ವತ್ರ ಸಾಧಕೋತ್ತಮಃ ॥ ೫೩ ॥

ಐದು ದಿವಸಗಳಲ್ಲಿಯೇ ಐದುಸಾವಿರ ಪ್ರಾಣಾಯಾಮವನ್ನು ಮಾಡಬೇಕು. ಇದಾದ ಮೇಲೆ ಕೊನೆಯಲ್ಲಿ ಕಾತ್ಯಾಯಿನೀದೇವಿಯ ಕವಚವನ್ನು ನ್ಯಾಸಮಾಡಬೇಕು. ಅನಂತರ ಶ್ವಾಸರೋಧನಪೂರ್ವಕವಾಗಿ ಮಾತೃಕಾಮಂತ್ರದಿಂದ ಅಭಿಮಂತ್ರಿತವಾದ ಕಪಿಲಾಗೋವಿನ ಹಾಲನ್ನು ಮೂರುಸಾರಿ ಪಾನಮಾಡಬೇಕು. ರಾತ್ರಿ ಜಾಗರಣೆ ಮಾಡಬೇಕು. ಯಾವನು ಹೀಗೆ ಬಿಳಿಯಬಟ್ಟೆಯನ್ನು ಹೊದ್ದುಕೊಂಡು ಈ ಯಂತ್ರವನ್ನು ಈ ಕ್ರಮದಿಂದ ಮಾಡುವನೋ ಅವನು ಅಷ್ಟಸಿದ್ಧಿಯನ್ನೂ ಹೊಂದಿ ದೇವೀಲೋಕವನ್ನು ಹೊಂದುವನು.

೫೦-೫೪. ಮಂತ್ರದಿಂದ ಅಭಿಮಂತ್ರಿತವಾದ ಉತ್ತರೀಯವನ್ನು ನಿತ್ಯವಲ್ಲಿಯೂ ಧರಿಸುವ ಸಾಧಕನ ಮಹಿಮೆಯನ್ನು ಹೇಳುವೆನು ಕೇಳು. ಅಸ್ತ್ರಶಸ್ತ್ರಾದ್ಯಾಯುಧಗಳು ಅವನ ಶರೀರದಲ್ಲಿ ಪ್ರವೇಶಿಸಿ ಅವನಿಗೆ ಬಾಧೆಯನ್ನುಂಟುಮಾಡಲಾರವು. ಅವನ ಶರೀರವನ್ನು ಅಗ್ನಿಯು ಸುಡುವುದಿಲ್ಲ. ನೀರು ನೆನೆಯಿಸುವುದಿಲ್ಲ. ರಾಕ್ಷಸರು ಪಿಶಾಚಿಗಳು, ಭೂತವೇ ಮೊದಲಾದ ಹಿಂಸೆಮಾಡುವ ಪ್ರಾಣಿಗಳು ಅವನನ್ನು ನೋಡಿ ಭಯದಿಂದ ಭೂಮಿಯಲ್ಲಿ ಅಡಗಿಕೊಳ್ಳುವವು. ಗಮನಾಗಮನಗಳಲ್ಲಿ ಅವನಿಗೆ

ವಶೀಕರೋತಿ ದೇವಾಂಶ್ಚ ನೃಪಾನನ್ಯಾಂಶ್ಚ ಯೋಷಿತಃ ।
ಉತ್ಸಹೇದ್ಯದಿ ಮೇಧಾವೀ ವಾಗ್ಮೀ ರಾಜಾ ಚ ವೈ ಭವೇತ್ ॥ ೫೪ ॥

ಚಿರಂಜೀವೀ ಮಹಾಭಾಗೋ ಧನಧಾನ್ಯಸಮೃದ್ಧಿಮಾ೯ ।
ಕವಿಃ ಪ್ರಜ್ಞಾಸಮಾಯುಕ್ತಃ ಸೋಽಭೇದ್ಯೋ ಜಾಯತೇಽರಿಭಿಃ ॥ ೫೫ ॥

ಯಸ್ಮಿ೯ ಪುರೇ ಸ ನಿವಸೇದ್ವಜ್ರಪಾತೋ ನ ತತ್ರ ವೈ ।
ರಸೋ ಶರೀರಂ ಶಸ್ತ್ರಾಣಿ ದೃಢಮಪ್ಯೌತ್ಪಾತಾನ್ಯಸಿ ॥ ೫೬ ॥

ಏನಂ ನ ಘ್ನಂತಿ ಸತತಂ ಜಯಃ ಸರ್ವತ್ರ ಭೈರವ ।
ಅಪರಾಧ್ಯಂತಿ ಸತತಂ ತಸ್ಯ ಸರ್ವತ್ರ ಭೈರವ ॥ ೫೭ ॥

ನಾಧಯೋ ವ್ಯಾಧಯಸ್ತಸ್ಯ ಜಾಯಂತೇ ತು ಕದಾಚನ ।
ದೇವೀಪುತ್ರಃ ಸ ಮತಿಮಾ೯ ಮೃತೋ ಮೋಕ್ಷಮವಾಪ್ನುಯಾತ್॥ ೫೮ ॥

ತಡೆಯೇ ಇಲ್ಲ. ಎಲ್ಲಿಗೆ ಬೇಕಾದರೂ ಅಲ್ಲಿಗೆ ಹೋಗುವನು. ದೇವತೆಗಳು, ರಾಜರು, ಸ್ತ್ರೀಯರು, ಎಲ್ಲರೂ ಇವನ ವಶವರ್ತಿಯಾಗುವರು. ಇಷ್ಟಪಟ್ಟಲ್ಲಿ ಅವನು ಬುದ್ಧಿ ಶಾಲಿಯೂ, ವಾಗ್ಮಿಯೂ, ರಾಜನೂ ಸಹ ಆಗುವನು. ಧನಧಾನ್ಯ ಸಮೃದ್ಧಿಯಿಂದ ಕೂಡಿ ಎಲ್ಲರಿಂದಲೂ ಗೌರವಿಸಲ್ಪಡುತ್ತಾ ಬಹುಕಾಲ ಜೀವಿಸುವನು. ಅವನಿಗೆ ಕವಿತ್ವ ಸಾಮರ್ಥ್ಯವೂ, ನಿರ್ಮಲಜ್ಞಾನವೂ ಉಂಟಾಗುವುದಲ್ಲದೆ, ಶತ್ರುಗಳಿಗೆ ಅಭೇದ್ಯನಾಗುವನು. ಇವನು ವಾಸಮಾಡುವ ಪಟ್ಟಣದಲ್ಲಿ ಶಿಡಿಲಿನಿಂದ ಭಯವುಂಟಾಗಲಾರದು. ಆಯುಧಗಳು, ವಿಷಾದಿಪ್ರಯೋಗಗಳು ಯಾವುವೂ, ಎಷ್ಟೇ ಧೈರ್ಯದಿಂದ ಪ್ರಯೋಗಿಸಿದರೂ ಇವನ ಶರೀರವನ್ನು ಬಾಧೆಪಡಿಸಲಾರವು. ಇವನನ್ನು ಹೊಡೆಯಲು ಯಾರೂ ಅಸಮರ್ಥರು. ಯಾವ ಕಾರ್ಯದಲ್ಲಿಯೂ ಇವನಿಗೆ ತೊಂದರೆಯೆಂಬುದೇ ಇಲ್ಲ. ಎಲ್ಲಿಡೆಯಲ್ಲಿಯೂ ಜಯವೇ ಆಗುವುದು. ರೋಗರುಜಿನಾದಿಗಳು ಇವನಿಗೆ ಯಾವಾಗಲೂ ಪ್ರಾಪ್ತವಾಗುವುದಿಲ್ಲ. ದೇವಿಗೆ ಪುತ್ರನಂತೆ ಪ್ರೀತಿಪಾತ್ರನಾಗಿದ್ದು ಮೃತನಾದಮೇಲೆ ಮೋಕ್ಷವನ್ನು ಹೊಂದುವನು.

ಯಂತ್ರಿತಾ ಸ್ವಾಮಿನಾ ಯಂತ್ರಂ ಯಾ ದಧಾತಿ ಪತಿವ್ರತಾ ।
ಪುತ್ರೈಶ್ವರ್ಯಮವಾಪ್ನೋತಿ ದೀರ್ಘಾಯುಃ ಸಾ ವಧೂ ಭವೇತ್ ॥ ೫೯ ॥

ಪ್ರತ್ಯೇಕಮೇಕಂ ಸಂಹತ್ಯಾ ವರ್ದ್ಧನಾಸಹಿತೇನ ಚ ।
ಕ್ರಮಾದ್ವಿಂಶತಿಮಂತ್ರಾಣಿ ಕಥಿತಾನಿ ಮಯೇಹ ವೈ ॥ ೬೦ ॥

ತಾನಿ ಪ್ರತ್ಯೇಕತೋ ಬುದ್ಧ್ವಾ ಯೋ ನ್ಯಸೇತ್ಸರ್ವದಾ ಹೃದಿ ।
ಲಿಖಿತ್ವಾ ಸರ್ವಯಂತ್ರಾಣಿ ಬಿಭೃಯಾದ್ಯೋಽಥವಾ ಗಲೇ ॥ ೬೧ ॥

ದೇವೇಂದ್ರೋ ಜಾಯತೇ ಸ್ತೋತ್ರಪ್ರಭಾವೇಣೇಹ ಭೂತಲೇ ।
ಪೂರ್ವೋಕ್ತಾನಿ ಸಮಸ್ತಾನಿ ಫಲಾನ್ಯಾಪ್ನೋತಿ ತತ್ಕ್ಷಣಾತ್ ।
ಪಿಹಿತಃ ಸರ್ವಲೋಕಾಂಸ್ತ್ರೀನ್ನಿತ್ಯಮೇವ ಪ್ರಪಶ್ಯತಿ ॥ ೬೨ ॥

ಏವಂ ಸಾರ್ಧಂ ಯಂತ್ರವರ್ಗೈಃ ಸಮಸ್ತೈ
ರಷ್ಟಾಭಿರ್ಯತ್ಪೂರ್ವಮುಕ್ತಂ ಸಹಸ್ರಂ ।

---

೫೯. ಪತಿವ್ರತೆಯಾದ ಸ್ತ್ರೀಯು ಪತಿಯಿಂದ ಪ್ರೇರಿತಳಾಗಿ ಯಂತ್ರವನ್ನು ಧರಿಸಿದರೆ, ಅವಳು ಪುತ್ರರನ್ನೂ, ಐಶ್ವರ್ಯವನ್ನೂ ಹೊಂದಿ ದೀರ್ಘಾಯುಷ್ಯವುಳ್ಳವಳಾಗಿ ಬದುಕುವಳು.

೬೦-೬೨. ಬೇರೆಬೇರೆಯಾಗಿಯೂ, ಒಟ್ಟಾಗಿಯೂ, ಕ್ರಮವಾಗಿ ಇಪ್ಪತ್ತು ಮಂತ್ರಗಳನ್ನು ನಾನು ಇಲ್ಲಿ ಹೇಳಿರುವೆನು. ಅವುಗಳೆಲ್ಲವನ್ನೂ ಬೇರೆಬೇರೆಯಾಗಿ ಬುದ್ಧಿಯಿಂದ ಊಹಿಸಿ ತಿಳಿದುಕೊಂಡು ಯಾವನು ತನ್ನ ಹೃದಯದಲ್ಲಿ ಯಾವಾಗಲೂ ನ್ಯಾಸಮಾಡುವನೋ, ಅಥವಾ ಎಲ್ಲಾ ಯಂತ್ರಗಳನ್ನೂ ಬರೆದು ತನ್ನ ಕಂಠದಲ್ಲಿ ಧರಿಸುವನೋ ಅವನು ಭೂಮಿಯಲ್ಲಿ ಆಸ್ತೋತ್ರಮಹಿಮೆಯಿಂದ ದೇವೇಂದ್ರನಾಗುವನು. ಹಿಂದೆ ಹೇಳಿದ ಎಲ್ಲಾವಿಧವಾದ ಫಲಗಳನ್ನೂ ಅವನು ಆಕ್ಷಣವಲ್ಲಿ ಹೊಂದುವನು. ಅವನು ಕಣ್ಣು ಮುಚ್ಚಿಕೊಂಡು ಮೂರು ಲೋಕಗಳನ್ನೂ ಪ್ರತಿನಿತ್ಯದಲ್ಲಿಯೂ ನೋಡಲು ಸಮರ್ಥನಾಗುವನು.

೬೩. ಹೀಗೆಯೇ ಸಮಸ್ತ ಯಂತ್ರಸಮೂಹಗಳಿಂದ ಯುಕ್ತವಾದ ಸಾವಿರದೆಂಟು ಮಂತ್ರಗಳನ್ನು ಬಟ್ಟೆಯಮೇಲೆ ಬರೆದು ಯಾವನು ಆ ಬಟ್ಟೆಯನ್ನು ಯಾವಾಗಲೂ ಧರಿಸುವನೋ ಅವನು ಎಲ್ಲಾವಿಧವಾದ ಸಿದ್ಧಿಗಳನ್ನೂ ಹೊಂದುವನು.

ಶುಕ್ಲೇವಸ್ತ್ರೇ ಸಂಲಿಖಿತ್ವಾ ಸ್ವದೇಹೇ
ಧೃತ್ವಾ ನಿತ್ಯಂ ಪ್ರಾಪ್ನುಯಾದ್ವೈ ಸಮಸ್ತಂ ॥ ೬೩ ॥

ಯಃ ಕ್ಷತ್ರಜಾತಿರ್ಹೃದಯೇ ಸ ಕುರ್ಯಾ
ತ್ಸಂಗ್ರಾಮಕಾಲೇ ಕವಚೇಽಷ್ಟಧಾಮ್ನೀ।
ಮಂತ್ರಾಕ್ಷರಾಣ್ಯಾದಿಕೃತಾನಿ ದೇವ್ಯಾ ।
ಅಷ್ಟೌ ಬಹಿರ್ಗಾತ್ರವಿಶೇಷತಶ್ಚ ॥ ೬೪ ॥

ಗಲೇ ಹರಿಂ ವಕ್ಷಸಿ ವೈ ಲಿಖೇದ್ವಿಧಿಂ ।
ಸ್ತನದ್ವಯೇ ಪುತ್ರಯುತಂ ಮಹೇಶ್ವರಂ ।
ಬಾಹ್ವಂಸಸಂಧ್ಯೋಶ್ಚ ಹರಿಂ ಚ ವೈಷ್ಣವೀಂ ।
ಬಾಹ್ವೋಸ್ತು ಲಕ್ಷ್ಮೀಂ ಚ ಸರಸ್ವತೀಂ ಚ ॥ ೬೫ ॥

---

೬೪. ಕ್ಷತ್ರಿಯನಾದವನು ಯುದ್ಧಕಾಲದಲ್ಲಿ ತನಗೆ ಇಷ್ಟವಾದ ದೇವಿಯ ಕವಚದಿಂದ ತನ್ನ ಹೃದಯದಲ್ಲಿಯೂ, ತನ್ನ ದೇಹದ ಬಹಿರನಯವಗಳಲ್ಲಿಯೂ ಹಿಂದೆ ಹೇಳಿದ ದೇವಿಯ ಅಷ್ಟಾಕ್ಷರೀ ಮಂತ್ರಗಳಿಂದ ಅಷ್ಟಾಂಗನ್ಯಾಸ ಮಾಡಿಕೊಳ್ಳಬೇಕು.

೬೫. ಕಂಠದಲ್ಲಿ ವಿಷ್ಣುವನ್ನೂ, ಎದೆಯಲ್ಲಿ ಬ್ರಹ್ಮನನ್ನೂ ಸ್ತನಯುಗ್ಮದಲ್ಲಿ ಪುತ್ರನಿಂದ ಕೂಡಿರುವ ಮಹೇಶ್ವರನನ್ನೂ, ತೋಳುಗಳ, ಹೆಗಲುಗಳ ಸಂದಿಯಲ್ಲಿ ವಿಷ್ಣು ಮತ್ತು ವೈಷ್ಣವೀದೇವಿಯನ್ನೂ, ತೋಳುಗಳಲ್ಲಿ ಲಕ್ಷ್ಮಿಯನ್ನೂ, ಸರಸ್ವತಿಯನ್ನೂ ಸಹ ಬರೆಯಬೇಕು. ಕಂಠ, ಹೃದಯ, ದಕ್ಷಿಣಸ್ತನ, ವಾಮಸ್ತನ, ಬಲಭುಜ, ಎಡಭುಜ, ಬಲಬಾಹು, ಎಡಬಾಹು, ಈ ಎಂಟು ಪ್ರದೇಶಗಳಲ್ಲಿ ವೈಷ್ಣವೀ ಅಷ್ಟಾಕ್ಷರಿಯ ಬೀಜಾಕ್ಷರಗಳಾದ ಅ, ಕ, ಚ, ಟ, ತ, ಪ, ಯ ಶ, ಎಂಬ ಎಂಟು ಅಕ್ಷರಗಳನ್ನು ಕ್ರಮವಾಗಿ ನ್ಯಾಸಮಾಡಿಕೊಳ್ಳಬೇಕು. ಈ ಎಂಟು ಅಕ್ಷರಗಳು ಮೇಲೆ ಹೇಳಿದ ವಿಷ್ಣು, ಬ್ರಹ್ಮ ಮೊದಲಾದ ದೇವತೆಗಳ ಬೀಜಾಕ್ಷರಗಳು. ಈ ಎಂಟು ಬೀಜಾಕ್ಷರಗಳೂ ಸೇರಿ ವೈಷ್ಣವೀದೇವಿಯ ಅಷ್ಟಾಕ್ಷರೀ ಮಂತ್ರವಾಗುವುದು. ಈ ಮಂತ್ರದ ಅಕ್ಷರಗಳಿಂದ ಮೇಲಿಹೇಳಿದ ಅವಯವಗಳಲ್ಲಿ ನ್ಯಾಸಮಾಡುವ ಕ್ರಮಕ್ಕೆ ರಣಾಷ್ಟಾಂಗವೆಂದು ಹೆಸರು. ಇದನ್ನು ವಿಧ್ಯುಕ್ತವಾಗಿ ಮಾಡುವವನು ಯುದ್ಧದಲ್ಲಿ ಜಯಶೀಲನಾಗುವನು.

ಏವಂ ರಣಾಷ್ಟಾಂಗಮಿದಂ ವಿಧಾಯ
ಗಾತ್ರೇ ಸವರ್ಮಣ್ಯನುಚಿಂತಯೇಚ್ಛಿವಾಂ ।
ಲಿಖೇಲ್ಲಲಾಟೇ ತಿಲಕಾಂತರೇ ನರಃ ।
ಸಮಸ್ತಮಂತ್ರಾಕ್ಷರಯಂತ್ರಮುತ್ತಮಂ ॥ ೬೬ ॥

ತತೋ ಜಪೇದಷ್ಟಧಾ ತು ಪಾಣಿಂ ದತ್ತ್ವಾಷ್ಟಧಾಮಸು ।
ವೈಷ್ಣವೀತಂತ್ರಮುಂತ್ರಂ ತು ತತೋ ಗಚ್ಛೇದ್ರಣಾಜಿರಂ ॥ ೬೭ ॥

ಸ ತು ವೀರೋ ಮಮ ಸಮಃ ಸಂಗ್ರಾಮೇಷು ಚ ಜಾಯತೇ ।
ತೃಣಾನೀವ ಪರಾಸ್ತ್ರಾಣಿ ಜಾಯಂತೇಽಗ್ನೌ ತಥಾತ್ಮನಿ ।
ವಿನಿಸ್ಸರಂತಿ ರಿಪವೋ ಯಾಚಕಾ ಧನಿನೋ ಧನಂ ॥ ೬೮ ॥

ಸಿಂಹಾಗ್ರ್ಯಾನ್ನರಶಾರ್ದೂಲೋ ವೀರ್ಯವಾ೯ ಬಲವಾ೯ ಭವೇತ್ ।
ಇದಂ ರಹಸ್ಯಂ ಕಥಿತಂ ಕಾಮಾಖ್ಯಾಯಾಸ್ತು ಭೈರವ ॥ ೬೯ ॥

---

೬೬. ರಣಾಷ್ಟಾಂಗವೆಂಬ ಈ ನ್ಯಾಸಕ್ರಮವನ್ನು ಯುದ್ಧಕಾಲದಲ್ಲಿ ಮಾಡಿ ಕೊಂಡು ತನ್ನ ಶರೀರದಲ್ಲಿಯೂ, ಕವಚದಲ್ಲಿಯೂ, ಸಹ ದೇವಿಯನ್ನು ಧ್ಯಾನಮಾಡ ಬೇಕು. ಹಣೆಯಲ್ಲಿ ತಾನು ಧರಿಸಿರುವ ತಿಲಕದ ಮಧ್ಯವಲ್ಲಿ ಎಲ್ಲಾ ಅಕ್ಷರಗಳಿಂದ ಕೂಡಿದ ಶ್ರೇಷ್ಠವಾದ ಯಂತ್ರವನ್ನು ಬರೆದುಕೊಳ್ಳಬೇಕು.

೬೭-೬೮. ಅನಂತರ ಮೇಲೆಹೇಳಿದ ಕಂಠಾವಿ ಎಂಟು ಪ್ರದೇಶಗಳಲ್ಲಿ ಹಸ್ತವ ನ್ನಿರಿಸಿ, ಎಂಟಾವರ್ತಿ ವೈಷ್ಣವೀ ಮಂತ್ರವನ್ನು ಜಪಮಾಡಬೇಕು. ಹೀಗೆಮಾಡಿ ಯುದ್ಧಕ್ಕೆ ಹೊರಟರೆ ಅವನು ನನಗೆ (ಈಶ್ವರನಿಗೆ) ಸಮಾನನಾದ ವೀರನಾಗಿ ಯುದ್ಧ ವಲ್ಲಿ ಶತ್ರುವನ್ನು ಗೆಲ್ಲುವನು. ಶತ್ರುಗಳು ಅವನಮೇಲೆ ಪ್ರಯೋಗಿಸುವ ಆಯುಧಾ ಸ್ತ್ರಗಳು ಅವನನ್ನು ಏನೂ ಮಾಡಲಾರವು. ಬೆಂಕಿಯಲ್ಲಿ ಬಿದ್ದ ಹುಲ್ಲಿನಂತೆ ಅವುಗಳು ನಿಷ್ಪ್ರಯೋಜನವಾಗುವುವು. ಧನಿಕರಿಂದ ಯಾಚಕರು ಹಣವನ್ನು ತೆಗೆದುಕೊಂಡು ಹೊರಟುಹೋಗುವಂತೆ ಅವನ ಶತ್ರುಗಳು ಪರಾಭವವನ್ನು ಹೊಂದಿ ಓಡಿಹೋಗು ವರು. ಅಲ್ಲದೆ ಸಿಂಹವೇ ಮೊದಲಾದ ಬಲಿಷ್ಠ ಪ್ರಾಣಿಗಳಿಗಿಂತಲೂ ಅವನು ಶಕ್ತಿ ವಂತನೂ, ಪರಾಕ್ರಮಿಯೂ ಆಗುವನು.

೬೯-೭೦. ಕಾಮಾಖ್ಯಾ ಎಂಬ ದೇವಿಯ ಈ ರಹಸ್ಯವನ್ನು ಹೇಳಿದ್ದಾಯಿತು.

ವೈಷ್ಣವ್ಯಾತಂತ್ರಮುಖ್ಯೇಷು ತ್ರಿಪುರಾಯಾಸ್ತತಃ ಶೃಣು ।
ತಸ್ಯಾಸ್ತು ಸರ್ವಮಂತ್ರಾಣಿ ತ್ರಯೋದಶಯುತಾನಿ ವೈ ॥ ೭೦ ॥

ವಿಂಶತಿಂ ತು ಸಹಸ್ರಾಣಿ ತಂತ್ರಾದ್ಯಂ ವಾಗ್ಭವಂ ಸ್ಮೃತಂ ।
ದ್ವಿತೀಯಂ ಕಾಮರಾಜಾಖ್ಯಂ ಮೋಹನಂ ಚ ತೃತೀಯಕಂ ॥ ೭೧ ॥

ಆಮ್ರೇಡಿತಂ ವಾಗ್ಭವಂ ತು ಚತುರ್ಥಂ ಪರಿಕೀರ್ತಿತಂ ।
ನೇತ್ರಬೀಜಂ ದ್ವಿತೀಯಂ ತು ದ್ವಿರುಕ್ತಂ ವಾಗ್ಭವಂ ತಥಾ ॥ ೭೨ ॥

ಆದ್ಯಂ ತತ್ಪಂಚಮಂ ಪ್ರೋಕ್ತಂ ಚತುರ್ಭಿರಪಿ ಚಾಕ್ಷರೈಃ ।
ನೇತ್ರಬೀಜಂ ದ್ವಿತೀಯಂ ತು ಪ್ರಥಮಂ ಪರಿಕೀರ್ತಿತಂ ॥ ೭೩ ॥

ದ್ವಿತೀಯಂ ಕಾಮಬೀಜಂ ತು ತೃತೀಯಂ ವಾಗ್ಭವಂ ತಥಾ ।
ಏಭಿಸ್ತ್ರಿಭಿಸ್ತು ಯನ್ಮಂತ್ರಂ ತತ್ ಷಷ್ಠಂ ಪರಿಕೀರ್ತಿತಂ ॥ ೭೪ ॥

ಇನ್ನು ವೈಷ್ಣವೀದೇವಿಯ ಮುಖ್ಯವಾದ ತಂತ್ರದಲ್ಲಿ ತ್ರಿಪುರಾದೇವಿಯ ಮಂತ್ರಗಳನ್ನು ಹೇಳುವೆನು. ಮುಖ್ಯಮಂತ್ರಗಳು ಹದಿಮೂರು ಇರುವುವು.

೭೧. ಆ ತ್ರಿಪುರಾದೇವಿಯ ಮಂತ್ರಗಳೆಲ್ಲವೂ ಸೇರಿದರೆ ಒಟ್ಟು ಇಪ್ಪತ್ತು ಸಾವಿರವಾಗುವುವು. ಅವುಗಳಲ್ಲಿ ವಾಗ್ಭವವು (ಬೀಜವು) ಮೊದಲನೆಯದು, ಕಾಮರಾಜಮಂತ್ರವು ಎರಡನೆಯದು, ಮೋಹನವು ಮೂರನೆಯದು.

೭೨. ಎರಡನೆಯ ವಾಗ್ಭವಬೀಜವು ನಾಲ್ಕನೆಯ ಮಂತ್ರವೆಂದು ಹೇಳಲ್ಪಟ್ಟಿರುವುದು. ಎರಡನೆಯ ನೇತ್ರಬೀಜ, ಎರಡನೆಯ ವಾಗ್ಭವಾಕ್ಷರ ಎರಡಾವರ್ತಿ, ಬಳಿಕ ಮೊದಲನೆಯ ವಾಗ್ಭವಬೀಜ, ಈ ನಾಲ್ಕು ಅಕ್ಷರಗಳೂ ಸೇರಿ ಐದನೆಯ ಮಂತ್ರವಾಗುವುದು.

೭೩-೭೪. ಮೊದಲು, ಎರಡನೆಯ ನೇತ್ರಬೀಜವು, ಬಳಿಕ ಕಾಮರಾಜಬೀಜ, ಆಮೇಲೆ ವಾಗ್ಭವಬೀಜ, ಈ ಮೂರು ಅಕ್ಷರಗಳಿಂದ ಕೂಡಿರುವ ಮಂತ್ರವು ತ್ರಿಪುರಾದೇವಿಯ ಆರನೆಯ ಮಂತ್ರವೆಂದು ಹೇಳಲ್ಪಟ್ಟಿರುವುದು.

ನೈತ್ರಬೀಜಂ ದ್ವಿತೀಯಂ ತು ವಾಗ್ಭೆವಂ ತೇನ ಸಪ್ತಮಂ ।
ತದೇವಂ ವಾಗ್ಭವಾದ್ಯಂ ತು ಅಷ್ಟಮಂ ಪರಿಕೀರ್ತಿತಂ ॥ ೭೫ ॥

ವಾಗ್ಭವಂ ಕಾಮಬೀಜಂ ಚೇದೇತಾಭ್ಯಾಂ ನವಮಂ ಸ್ಮೃತಂ ।
ಕಾಮಬೀಜಂ ತಥೈವಾದ್ಯಂ ದ್ವಿತೀಯಂ ಚೈವ ಮೋಹನಂ ॥ ೭೬ ॥

ಏಕಾದಶಮಿದಂ ಪ್ರೋಕ್ತಂ ಡಾಮರಾದ್ಯಂ ತು ವಾಗ್ಭವಂ ।
ದ್ವಾದಶಂ ಕೀರ್ತಿತಂ ಮಂತ್ರಂ ಶೇಷತಸ್ತ್ರೈಪುರಂ ಮಹಃ ॥ ೭೭ ॥

ತನ್ಮಹಸ್ತ್ರೈಪುರಂ ಮಂತ್ರಂ ಶೃಣುಷ್ವೈಕಮನಾಸ್ತ್ವಿದಂ ।
ಸ್ಯಾಂತಾದಿಸ್ತಸ್ಯ ಚಾಸ್ಯಾದಿರ್ವಹ್ನಿ ರ್ವಾಗ್ಭವಸಂಧಿತಃ ॥ ೭೮ ॥

ಆದ್ಯಂ ತ್ರಿಪುರಭೈರವ್ಯಾಃ ಬೀಜಮಾದ್ಯಂ ಪ್ರಕೀರ್ತಿತಂ ।
ಉಪಾಂತಶ್ಚ ತದಾದಿಶ್ಚ ವ್ಯಂಜನಾದ್ಯಂ ವೃಷಾನನಃ ॥ ೭೯ ॥

ಚತುರ್ಥಸ್ವರಬಿಂದ್ವಿಂದುಯುತಶ್ಚೈತದ್ದ್ವಿತೀಯಕಂ ।
ಉಪಾಂತಶ್ಚ ತದಾದಿಶ್ಚ ವಹ್ನಿಶೇಷಸ್ವರಸ್ತಥಾ ॥ ೮೦ ॥

---

೭೫. ಎರಡನೆಯ ನೈತ್ರಬೀಜ, ಆಮೇಲೆ ವಾಗ್ಭವಬೀಜವೂ ಸೇರಿದರೆ ಏಳನೆಯ ಮಂತ್ರವಾಗುವುದು. ಅದೇ ಮಂತ್ರದ ಅಕ್ಷರಗಳು ಬದಲಾಗಿ ಎಂದರೆ ಮೊದಲು ವಾಗ್ಭವಬೀಜವೂ, ಆಮೇಲೆ ಎರಡನೆಯ ನೈತ್ರಬೀಜವೂ ಸೇರಿದರೆ ಎಂಟನೆಯ ಮಂತ್ರವಾಗುವುದು.

೭೬-೭೭. ವಾಗ್ಭವ, ಕಾಮಬೀಜ, ಇವೆರಡೂ ಸೇರಿ ಒಂಭತ್ತನೆಯ ಮಂತ್ರವಾಗುವುದು. ಮೊದಲು ಕಾಮಬೀಜ, ಬಳಿಕ ವಾಗ್ಭವ ಇವು ಸೇರಿ ಹತ್ತನೆಯ ಮಂತ್ರವಾಗುವುದು. ಮೊದಲು ಕಾಮಬೀಜ, ಎರಡನೆಯದು ಮೋಹನ ಇವು ಸೇರಿದರೆ ಹನ್ನೊಂದನೆಯ ಮಂತ್ರವಾಗುವುದು. ಮೊದಲು ಡಾಮರ, ಬಳಿಕ ವಾಗ್ಭವ ಬೀಜ ಇವು ಸೇರಿದರೆ ಹನ್ನೆರಡನೆಯ ಮಂತ್ರವಾಗುವುದು. ಉಳಿದ ಹದಿಮೂರನೆಯದೇ ತ್ರಿಪುರಾದೇವಿಯ ಮಹಾಮಂತ್ರವು.

೭೮-೮೧. ಎಲೈ ಭೈರವನೇ ತ್ರಿಪುರಾದೇವಿಯ ಹದಿಮೂರನೆಯ ಮಹಾ ಮಂತ್ರವನ್ನು ಹೇಳುವೆನು, ಏಕಾಗ್ರಮನಸ್ಸಿನಿಂದ ಕೇಳು. ಕಡೆಯ ಅಕ್ಷರವಾದ

ಸಮಾಪ್ತಿರ್ಬಿಂದುಸಹಿತಾ ಸಂಹಿತಸ್ತು ತೃತೀಯಕಃ ।
ಏತತ್ತತ್ತ್ವಂ ವಿಜಾನಾತಿ ಯೋ ನರೋ ಭುವಿ ಭೂಮಣಿಃ ॥ ೮೧ ॥

ಸಿದ್ಧವಿದ್ಯಾಧರೇಭ್ಯಸ್ತು ಸೋಽಧಿಕೋ ಮತ್ಸಮೋ ಭವೇತ್ ।
ಏತೇ ತ್ರಯೋದಶ ಪ್ರೋಕ್ತಾ ಮಂತ್ರಾ ಮಂತ್ರೇಷು ಚೋಜ್ಜ್ವಲಾಃ ॥೮೨॥

ವಿಂಶತೇಸ್ತು ಸಹಸ್ರೇಭ್ಯಃ ಪರಾಶ್ಚೈತೇ ಪ್ರಕೀರ್ತಿತಾಃ ।
ವಿಂಶತೇಸ್ತು ಸಹಸ್ರಾಣಾಮಾದ್ಯಮೇತತ್ಪ್ರಕೀರ್ತಿತಂ ॥ ೮೩ ॥

ತ್ರಿಪುರಾಯಾಸ್ತು ಬಾಲಾಯಾ ಮಂತ್ರಂ ತಚ್ಛೃಣು ಭೈರವ ।
ವಾಗ್ಭವಃ ಕಾಮರಾಜಸ್ತು ಉಪಾಂತಾದಿಃ ಸಂಬಿದುಕಃ ॥ ೮೪ ॥

ಹಕಾರ, ಅದರ ಒಂದಿನ ಅಕ್ಷರವಾದ ಸಕಾರ, ವಹ್ನಿಬೀಜಾಕ್ಷರವಾದ ರಕಾರ, ವಾಗ್ಭವ ಬೀಜವಾದ ಐ ಇವುಗಳುಸೇರಿ ತ್ರಿಪುರಾಭೈರವೀದೇವಿಯ ಮಹಾಮಂತ್ರದ ಮೊದಲನೆಯ ಬೀಜಾಕ್ಷರವಾಗುವುದು. (ಹ್ಸ್ರೈಂ) ಕಡೆಯ ಹಿಂದಿನವರ್ಣ, ಮೊದಲನೆಯ ವರ್ಣ, ಮೊದಲನೆಯ ವ್ಯಂಜನವಾದ ಕಕಾರ, ನಾಲ್ಕನೆಯ ಸ್ವರವಾದ ಈ ಕಾರ ಮತ್ತು ಬಿಂದು ಇವೆಲ್ಲವೂ ಸೇರಿ ಎರಡನೆಯ ಬೀಜಾಕ್ಷರವಾಗುವುದು. (ಹ್ಸ್ಕ್ರೀಂ) ಹಾಗೆಯೇ ಕಡೆಯ ಹಿಂದಿನ ವರ್ಣ, ಮೊದಲನೆಯ ವರ್ಣ, ವಹ್ನಿಬೀಜವಾದ ರಕಾರ, ಕಡೆಯ ಸ್ವರವಾದ ಔಕಾರ, ಕಡೆಯ ಅಕ್ಷರವಾದ ಹಕಾರ ಮತ್ತು, ಬಿಂದು, ಇವುಗಳು ಸೇರಿ ಮಹಾಮಂತ್ರದ ಮೂರನೆಯ ಬೀಜಾಕ್ಷರವಾಗುವುದು. (ಹ್ಸೌಂ) ಈ ಮೂರು ಅಕ್ಷರಗಳಿಂದ ಕೂಡಿರುವ ತ್ರಿಪುರಾದೇವಿಯ ಮಹಾಮಂತ್ರವನ್ನು ಭೂಮಿಯಲ್ಲಿ ಯಾವ ಮನುಷ್ಯನು ತಿಳಿದು ಅನುಷ್ಠಾನಮಾಡುವನೋ ಅವನು ಸಿದ್ಧವಿದ್ಯಾಧರರಿಗಿಂತ ಹೆಚ್ಚಿನ ಸಾಮರ್ಥ್ಯವುಳ್ಳವನಾಗಿ, ನನಗೆ (ಈಶ್ವರ) ಸಮಾನನಾಗುವನು.

೮೨-೮೩. ಸಮಸ್ತಮಂತ್ರಗಳಲ್ಲಿಯೂ ಬಹಳ ಪ್ರಕಾಶಮಾನವಾದ ಎಂದರೆ ಅತಿಶ್ರೇಷ್ಠವಾದ ಈ ಹದಿಮೂರು ಮಂತ್ರಗಳನ್ನು ಹೇಳಿರುವೆನು. ಹಿಂದೆ ಹೇಳಿದ ಇಪ್ಪತ್ತು ಸಾವಿರ ಮಂತ್ರಗಳಲ್ಲಿ ಈ ಹದಿಮೂರು ಮಂತ್ರಗಳೇ ಶ್ರೇಷ್ಠವಾದವುಗಳು. ಮತ್ತು ಆ ಮಂತ್ರಗಳಿಗಿಲ್ಲ ಈ ತ್ರಿಪುರಾಮಂತ್ರವೇ ಮೊದಲನೆಯದು.

೮೪-೮೫. ಎಲೈ ಭೈರವನೇ ಕೇಳು, ತ್ರಿಪುರಾಬಾಲಾದೇವಿಯ ಮಂತ್ರವನ್ನು ಹೇಳುವೆನು. ವಾಗ್ಭವಬೀಜವೂ, ಕಾಮರಾಜಬೀಜವೂ, ಕಡೆಯ ಹಿಂದಿನ ಅಕ್ಷರವಾದ ಸಕಾರವೂ ಕಡೆಯ ಸ್ವರವಾದ ಔಕಾರವೂ ಸೇರಿದರೆ, ತ್ರಿಪುರಾಬಾಲಾದೇವಿಯಮಂತ್ರವು

ಶೇಷಸ್ವರಸಮಾಪ್ತಿಭ್ಯಾಂ ಮಂತ್ರಮೇತತ್ಪ್ರಕೀರ್ತಿತಂ ।
ವಿಷಾ ತು ತ್ರಿಪುರಾಬಾಲಾ ಮಧ್ಯಾ ಪ್ರೋಕ್ತಾ ಪುರೈವ ಹಿ ॥ ೮೫ ॥

ಶೇಷಾ ತೇಜಸ್ವಿನೀ ಪ್ರೋಕ್ತಾ ಯೂಯಂ ತ್ರಿಪುರಭೈರವೀ ।
ಮಧ್ಯಾಯಾಃ ಪೂಜನಂ ಪ್ರೋಕ್ತಂ ಬಾಲಾಯಾಃ ಶೃಣು ಸಾಂಪ್ರತಂ ॥

ತಥಾ ತ್ರಿಪುರಭೈರವ್ಯಾಃ ಸರ್ವಸಿದ್ಧಿಪ್ರದಾಯಕಂ ।
ವಿಭಿದ್ಯ ಶಕ್ತ್ಯಾ ಶಂಭುಂ ತು ಶಕ್ತಿಂ ಚಾಪಿ ವಿಭೇದಯೇತ್ ॥ ೮೭ ॥

ಶಂಭವೇ ವರ್ಣಷಟ್ಕೋಣಂ ಕೇಸರಂ ತತ್ರ ಸಂಲಿಖೇತ್ ।
ಮಧ್ಯಾಯಾಸ್ತ್ರಿಪುರಾಯಾಸ್ತು ಯಾದೃಶೇ ದ್ವಾರಮಂಡಲೇ ॥ ೮೮ ॥

ತಾದೃಶೇಽತ್ರಾಪಿ ಕರ್ತವ್ಯಂ ಕೋಣೇಷು ಲಿಖಿತಂ ತಥಾ ।
ಪಾಪೋತ್ಸಾರಣಕರ್ಮಾಣಿ ಭೂಮ್ಯಾದೀನಾಂ ವಿಶೋಧನಂ ॥ ೮೯ ॥

(ಐಂ ಕ್ಲೀಂ ಸೌಃ) ಇದು ಬಾಲಾತ್ರಿಪುರಾದೇಯ ಮಂತ್ರವು. ಮಧ್ಯಾತ್ರಿಪುರಾಮಂತ್ರವನ್ನು ಹಿಂದೆಯೇ ಹೇಳಿದೆ. ಉಳಿದ ಮೂರನೆಯ ಮಹಾಮಂತ್ರವು ಈಗತಾನೆ ಹೇಳಿದ ತ್ರಿಪುರಾಭೈರವಿಯ ಮಂತ್ರವೇ ಆಗಿರುವುದು.

೮೬. ಮಧ್ಯಾತ್ರಿಪುರಾದೇವಿಯ ಪೂಜೆಯ ಕ್ರಮವು ಹೇಳಲ್ಪಟ್ಟಿರುವುದು. ಈಗ ಬಾಲಾದೇವಿಯ ಪೂಜೆಯ ಕ್ರಮವನ್ನೂ, ತ್ರಿಪುರಭೈರವಿಯ ಪೂಜಾಕ್ರಮವನ್ನೂ ಹೇಳುವೆನು. ಈ ದೇವಿಯರ ಪೂಜೆಯು ಸರ್ವಸಿದ್ಧಿಯನ್ನೂ ಸಾಧಿಸಿಕೊಡುವುದಾಗಿರುವುದು.

೮೭-೮೯. ಅಧೋಮುಖವಾದ ಮತ್ತು ಊರ್ಧ್ವಮುಖವಾದ ಕೋಣಗಳು ಒಂದರಮೇಲೊಂದು ಬರುವಂತೆ ಎರಡು ತ್ರಿಕೋಣಗಳನ್ನು ಬರೆದು, ಈ ಷಟ್ಕೋಣಗಳ ಸುತ್ತಲೂ ವೃತ್ತ, ಕೇಸರ, ಅಷ್ಟದಳ, ಪದ್ಮ, ಇವುಗಳನ್ನು ಅಲ್ಲಿ ಬರೆಯಬೇಕು. ಮಧ್ಯಾ ಎಂಬ ಭೇದವುಳ್ಳ ತ್ರಿಪುರಭೈರವಿಯ ಯಂತ್ರದ ದ್ವಾರವೂ, ಮಂಡಲವೂ ಯಾವರೀತಿಯಿಂದಿರುವುದೋ, ಅದೇರೀತಿಯಿಂದ ಇಲ್ಲಿಯೂ ಇರುವಂತೆ ಕೋಣಗಳನ್ನೂ, ಮಂಡಲವನ್ನೂ ಬರೆಯಬೇಕು.

೮೯-೯೦. ಪಾಪೋತ್ಸಾರಣ, ಭೂಮಿಶುದ್ಧಿ ಮೊದಲಾದ ಕರ್ಮಗಳು ಮುಂದೆಯೇ ಉತ್ತರ ತಂತ್ರವಲ್ಲಿ ತ್ರಿಪುರಾಪೀಠಪೂಜೆಯ ಸಂದರ್ಭದಲ್ಲಿಯೂ ಕಾಣಬರುವ್ಯಾ

ಪೂರ್ವಮುತ್ತರತಂತ್ರೋಕ್ತಂ ತ್ರಿಪುರಾಪೀಠಭಾಷಿತಂ ।
ಕಾಮಾಖ್ಯಾಪೂಜನೇ ಪ್ರೋಕ್ತಂ ಸರ್ವಂ ಕುರ್ಯಾತ್ತು ಸಾಧಕಃ ॥ ೯೦ ॥

ದಹನಪ್ಲವನಾದೀನಿ ಪ್ರತಿಪತ್ತಿಂ ಚ ಪಾತ್ರಕೇ ।
ಸರ್ವಂ ತು ಪೂರ್ವವತ್ಕಾರ್ಯಂ ಕಾಮಾಖ್ಯಾಪೂಜನೇ ಯಥಾ ॥ ೯೧ ॥

ಕೃತ್ವಾತ್ರ ದೇಹನ್ಯಾಸಂ ತು ಮಂತ್ರವರ್ಣೈಸ್ತಥಾಕ್ಷರೈಃ ।
ಸರ್ವೈಃ ಸ್ವರೈಸ್ತಥಾ ಕಾದ್ಯೈಸ್ತತೋ ರೂಪಂ ವಿಚಿಂತಯೇತ್ ॥ ೯೨ ॥

ಚತುರ್ಭುಜಾಂ ರಕ್ತವರ್ಣಾಂ ರಕ್ತವಸ್ತ್ರವಿಭೂಷಿತಾಂ ।
ದಕ್ಷಿಣೋರ್ಧ್ವೇ ಸ್ರಜಂ ಚಾಧೋ ಬಿಭ್ರತೀಂ ಪುಸ್ತಕೋತ್ತಮಂ ॥ ೯೩ ॥

ಅಭಯಂ ವಾಮಹಸ್ತಾಭ್ಯಾಂ ವರಂ ಚ ದಧತೀಂ ತಥಾ ।
ಸಹಸ್ರಸೂರ್ಯಸಂಕಾಶಾಂ ತ್ರಿನೇತ್ರಾಂ ಗಜಗಾಮಿನೀಂ ॥ ೯೪ ॥

ಪೀನತುಂಗಸ್ತನಯುಗಾಂ ಸಿತಪ್ರೇತಾಸನಸ್ಥಿತಾಂ ।
ಸ್ಮಿತಪ್ರಸನ್ನವದನಾಂ ಸರ್ವಾಲಂಕಾರಸಂಯುತಾಂ ॥ ೯೫ ॥

ದೇವಿಯ ಪೂಜೆಯಲ್ಲಿಯೂ ಹೇಳಲ್ಪಟ್ಟಿರುವುದು. ಸಾಧಕನು ಆ ಕ್ರಮಗಳನ್ನೇ ಇಲ್ಲಿ ಆಚರಿಸಬೇಕು.

೯೧. ದಹನ, ಪ್ಲಾವನ, ಇವೇ ಮೊದಲಾದ ಕರ್ಮಗಳು, ಪಾತ್ರೆಗಳಲ್ಲಿ ಪ್ರತಿಪತ್ತಿ ಕರ್ಮ, ಇವೆಲ್ಲವನ್ನೂ ಹಿಂದೆ ಹೇಳಿದ ಕಾಮಾಖ್ಯಾಪೂಜೆಯಲ್ಲಿ ಮಾಡಿದಂತಯೇ ಈ ತ್ರಿಪುರಾಪೂಜೆಯಲ್ಲಿಯೂ ಮಾಡಬೇಕು.

೯೨. ಮಂತ್ರದ ಅಕ್ಷರಗಳಿಂದಲೂ, ಸಮಸ್ತ ಸ್ವರ, ವ್ಯಂಜನಾಕ್ಷರಗಳಿಂದಲೂ, ದೇಹದಲ್ಲಿ ನ್ಯಾಸವನ್ನು ಮಾಡಿಕೊಂಡನಂತರ ದೇವಿಯ ರೂಪವನ್ನು ಧ್ಯಾನಮಾಡಬೇಕು.

೯೩-೯೭. ತ್ರಿಪುರಾಭೈರವೀದೇವಿಯ ಧ್ಯಾನಕ್ರಮವು ಹೀಗಿರುವುದು:— ಆ ದೇವಿಯು ನಾಲ್ಕುಭುಜಗಳಿಂದಲೂ, ಕೆಂಪಾದ ಶರೀರಕಾಂತಿಯಿಂದಲೂ, ಬೆಳಗುತ್ತಿರುವಳು. ರಕ್ತವಸ್ತ್ರದಿಂದ ಅಲಂಕೃತಳಾಗಿರುವಳು. ಬಲಗೈಗಳ ಪೈಕಿ ಮೇಲಿನ ಕೈಯಲ್ಲಿ ಜಪಸರವನ್ನೂ, ಕೆಳಗೈಯಲ್ಲಿ ಪುಸ್ತಕವನ್ನೂ, ಎಡಗೈಗಳಲ್ಲಿ ಅಭಯ ವರದ ಹಸ್ತಗಳನ್ನೂ ಧರಿಸಿರುವಳು. ಸಹಸ್ರ ಸೂರ್ಯರು ಏಕಕಾಲದಲ್ಲಿ ಉದಯಿಸಿದಂತೆ

ತಿಸೃಭಿರ್ಮುಂಡಮಾಲಾಭಿಃ ಶಿರೋವಕ್ಷಃಕಟೀಷು ಚ ।
ತ್ರಿಗುಣಾಂ ತ್ರಿಗುಣೇಭೂತೈಃ ಪ್ರತ್ಯೇಕಂ ಪರಿಭೂಷಿತಾಂ ॥ ೯೬ ॥

ಮದಿರಾಘೂರ್ಣನಯನಾಂ ರಕ್ತದಂತಚ್ಛದದ್ವಯಾಂ ।
ಚಿಂತಯೇದ್ವರದಾಂ ದೇವೀಮೇವಂ ತ್ರಿಪುರಭೈರವೀಂ ॥ ೯೭ ॥

ಬಾಲಾಯಾಸ್ತ್ರಿಪುರಾಯಾಸ್ತು ರೂಪಂ ಪೂರ್ವಂ ಪ್ರಪೂಜನೇ ।
ಉಕ್ತಃ ಕ್ರಮಃ ಪೀಠಯೋಗೇ ತಂತ್ರಾದಿ ಶೃಣು ಭೈರವ ॥ ೯೮ ॥

ಪುಷ್ಪಬಾಣಾಂಸ್ತು ಪಾಶಂ ಚ ಧತ್ತೇ ಪೌಷ್ಪಂ ಶರಾಸನಂ ।
ಪಾಶಂ ಚ ಕುಣಪಾರೂಢಾ ಸಾ ಬಾಲಾತ್ರಿಪುರಾ ಸ್ಮೃತಾ ॥ ೯೯ ॥

ಮನ್ಮಂತ್ರೇ ತ್ರಿಪುರೇ ದೇವೀಂ ವಿದ್ಮಹೇ ಪದಮಾದಿತಃ ।
ಕಾಮೇಶ್ವರೀಂ ಧೀಮಹಿ ತ್ವಾಮನು ತನ್ನಃ ಪ್ರಚೋದಯಾತ್ ॥ ೧೦೦ ॥

ಪ್ರಕಾಶಿಸುತ್ತಿರುವಳು. ಮೂರು ಕಣ್ಣುಗಳು, ಗಜವಂತೆ ಗಂಭೀರವಾದ ಮಂದ ಗಮನ, ಮುಂದಕ್ಕೆ ಉಬ್ಬಿ ದುಂಡಾಗಿರುವ ಸ್ತನಗಳು ಇವುಗಳಿಂದ ಶೋಭಿಸುತ್ತಾ ಬಿಳಿಯ ಶವಾಸನದಮೇಲೆ ಸರ್ವಾಲಂಕಾರಭೂಷಿತಳಾಗಿ, ಮಂದಹಾಸವನ್ನು ಸೂಸುತ್ತಾ ಕುಳಿತಿರುವಳು. ಶಿರಸ್ಸಿನಲ್ಲಿಯೂ, ನಡುವಿನಲ್ಲಿಯೂ ಸತ್ತ್ವರಜಸ್ತಮೋ ಭೂತಗಳಾದ ಮೂರು ಮುಂಡಮಾಲೆಗಳನ್ನು ಧರಿಸಿರುವಳು. ಮತ್ತು ಮದ್ಯಸೇವನೆಯಿಂದ ಈ ದೇವಿಯ ಕಣ್ಣುಗಳು ಆಲುತ್ತಿರುವವು. ಹಲ್ಲುಗಳೂ ತುಟಿಗಳೂ ಕೆಂಪಾಗಿರುವವು ಈ ರೀತಿ ಇರುವ ತ್ರಿಪುರಾಭೈರವೀದೇವಿಯನ್ನು ವರದಹಸ್ತಳಾಗಿರುವಂತೆ ಧ್ಯಾನಮಾಡಬೇಕು.

೯೮. ಎಲೈ ಭೈರವನೇ ಕೇಳು:—ಬಾಲಾತ್ರಿಪುರಾದೇವಿಯ ರೂಪವೂ, ಪೀಠಕ್ರಮವೂ, ತಂತ್ರಕ್ರಮವೂ ಮೊದಲು ಪೂಜಾಕ್ರಮವನ್ನು ಹೇಳಿದ ಕಾಲದಲ್ಲಿಯೇ ಹೇಳಿರುವುದು. ಆದರೂ ರೂಪವೂ, ಪೂಜೆಯ ಕ್ರಮವೂ, ಹೀಗಿರುವುದು.

೯೯. ಬಾಲಾತ್ರಿಪುರಾದೇವಿಯು ಪುಷ್ಪಬಾಣವನ್ನೂ, ಪುಷ್ಪಧನುಸ್ಸನ್ನೂ, ಪಾಶವನ್ನೂ, ಬತ್ತಳಿಕೆಯನ್ನೂ ಧರಿಸಿ ಶವಾಸನದಲ್ಲಿ ಕುಳಿತಿರುವಳು.

೧೦೦. ನಾನು ಹೇಳುವ ಸಂಪ್ರದಾಯದಲ್ಲಿ ತ್ರಿಪುರಾಗಾಯತ್ರೀ ಮಂತ್ರವು ಹೀಗಿರುವುದು. "ತ್ರಿಪುರೇ ದೇವಿ ವಿದ್ಮಹೆ" ಎಂಬುದು ಮೊದಲು ಇರಬೇಕು. ಅನಂತರ "ಕಾಮೇಶ್ವರೀ ಧೀಮಹಿ" ಎಂತಲೂ, ಅದರ ಮುಂದಕ್ಕೆ ತ್ವಾಮನುತನ್ನಃ

ಏಷಾ ತ್ರಿಪುರಗಾಯತ್ರೀ ತ್ಯಾವಾಹನವಿಶೇಷತಃ ।
ಸ್ನಾನಾದ್ಯೈಃ ಪೂಜಯೇತ್ಸಮ್ಯಗ್ಬಾಲಾಮನ್ಯಾಂಚ ಭೈರವ ॥ ೧೦೧ ॥

ಅಸ್ಯಾಃ ಕ್ರಮವಿಶೇಷೋ ಯೋ ನ್ಯಾಸೇ ಚೋತ್ತರಕರ್ಮಣಿ ।
ತತ್ಸರ್ವಂ ಸಹ ಮಂತ್ರೌಘೈಃ ಶೃಣು ವೇತಾಲಭೈರವ ॥ ೧೦೨ ॥

ಬ್ರಾಹ್ಮೇ ಮುಹೂರ್ತೇ ಉತ್ಥಾಯ ಚಿಂತಯೇತ್ಪರಮುಂ ಗುರುಂ ।
ತತೋನು ಸ್ವಗುರುಂ ಶುದ್ಧಂ ತತಸ್ತ್ರಿಪುರಭೈರವೀಂ ॥ ೧೦೩ ॥

ಚತುರ್ಭುಜಾಂ ಶುಕ್ಲವರ್ಣಾಂ ಪರದಾಭಯಪುಸ್ತಕಾಂ ।
ಅಕ್ಷಮಾಲಾಂ ಚ ಕ್ರಮತೋ ಧತ್ತೇ ವಾಮೇ ಚ ದಕ್ಷಿಣೇ ॥ ೧೦೪ ॥

ಸುವರ್ಣರತ್ನಖಚಿತೇ ಸಂಸ್ಥಿತಾಂ ಪ್ರವರಾಸನೇ ।
ಸೌವರ್ಣಮುತ್ತರೀಯಂ ತು ಧತ್ತೇ ಸೌವರ್ಣಕುಂಡಲೇ ॥ ೧೦೫ ॥

ಪ್ರಚೋದಯಾತ್ ಎಂದೂ ಇರಬೇಕು. ಎಂದರೆ—ತ್ರಿಪುರೇ ದೇವೀಂ ವಿದ್ಮಹೇ ಕಾಮೇಶ್ವರೀಂ ಚ ಧೀಮಹಿ । ತ್ವಾಮನು ತನ್ನಃ ಪ್ರಚೋದಯಾತ್ ॥ ಇದು ತ್ರಿಪುರಾ ಗಾಯತ್ರಿಯು. ದೇವಿಯ ಆವಾಹನೆ ಕಾಲದಲ್ಲಿ ಇದನ್ನು ಹೇಳಬೇಕು.

೧೦೧-೧೦೨. ಎಲೈ ವೇತಾಲಭೈರವನೇ, ಬಾಲಾದೇವಿಯನ್ನು ಸ್ನಾನ, ಆವಾಹನ ಮೊದಲಾದ ಉಪಚಾರಗಳಿಂದ ಚೆನ್ನಾಗಿ ಪೂಜಿಸಬೇಕು. ಈ ದೇವಿಯ ಪೂಜೆಯಲ್ಲಿ ಆಚರಿಸಬೇಕಾದ ವಿಶೇಷಕ್ರಮಗಳನ್ನೂ, ನ್ಯಾಸಕ್ರಮಗಳನ್ನೂ, ಪೂಜಾನಂತರ ಮಾಡಬೇಕಾದ ಉತ್ತರಕರ್ಮಗಳನ್ನೂ, ಆಯಾ ಕರ್ಮಗಳಲ್ಲಿ ಉಪಯೋಗಿಸುವ ಮಂತ್ರಗಳನ್ನೂ ಸಹ ಹೇಳುವೆನು, ಕೇಳು.

೧೦೩. ಬ್ರಾಹ್ಮಮುಹೂರ್ತದಲ್ಲಿ ಎದ್ದು ತನ್ನ ಪರಮಗುರುವನ್ನೂ, ಅನಂತರ ಶುದ್ಧನಾದ ತನ್ನ ಗುರುವನ್ನೂ, ನಂತರ ತ್ರಿಪುರಭೈರವೀದೇವಿಯನ್ನೂ, ಸಹ ಧ್ಯಾನ ಮಾಡಬೇಕು.

೧೦೪-೧೦೫. ಬಾಲಾದೇವಿಯ ಧ್ಯಾನಕ್ರಮ—ಈ ದೇವಿಗೆ ಚತುರ್ಭುಜ ಗಳಿರುವುವು. ಶುಭ್ರವಾದ ಶರೀರಕಾಂತಿಯಿಂದ ಪ್ರಕಾಶಿಸುತ್ತಿರುವಳು. ಬಲಗೈಗಳಲ್ಲಿ ಪುಸ್ತಕ, ಜಪಸರಗಳನ್ನೂ, ಎಡಗೈಗಳಲ್ಲಿ ವರಧಾಭಯಹಸ್ತಗಳನ್ನು ಧರಿಸಿ ರತ್ನಖಚಿತವಾದ ದಿವ್ಯಾಸನದಲ್ಲಿ ಕುಳಿತಿರುವಳು. ಸುವರ್ಣಮಯವಾದ (ಜರತಾರಿ) ವಸ್ತ್ರದಿಂದ ಅಲಂಕೃತಳಾಗಿರುವಳು. ಕಿವಿಗಳಲ್ಲಿ ಸ್ವರ್ಣಕುಂಡಲಗಳು ಝಗಝಗಿಸುತ್ತಿರುವವು. ಈರೀತಿ ಇರುವ ಬಾಲಾತ್ರಿಪುರಾದೇವಿಯನ್ನು ಧ್ಯಾನಮಾಡಬೇಕು.

ಸ್ವಗುರುಂ ವರ್ಣತೋ ಧ್ಯಾನಾತ್ತಥೈವ ಪರಿಚಿಂತಯೇತ್ ।
ಭೈರವೀಂ ಚಿಂತಯಿತ್ವಾ ತು ತತ ಉತ್ಥಾಯ ಚಾಚರೇತ್ ॥ ೧೦೬ ॥

ಮೈತ್ರಮಾಚಮನಂ ಚೈವ ದಂತಾನಾಂ ಶೋಧನಂ ತಥಾ ।
ಪ್ರಾತಸ್ಸ್ನಾನಂ ತತಃ ಕುರ್ಯಾತ್ತ್ರೈಪುರಂ ಯೋಜಯೇತ್ ಕ್ರಮಾತ್ ॥ ೧೦೭ ॥

ಸರ್ವತ್ರ ದೇವೀಮಂತ್ರೇಷು ವೈದಿಕೇಷ್ವಪಿ ಭೈರವೀಂ ।
ತ್ರಿಪುರಾಂ ಚಿಂತಯೇನ್ನಿತ್ಯಂ ದೇವಮಂತ್ರೇಷು ಚ ಕ್ರಮಾತ್ ॥ ೧೦೮ ॥

ತ್ರಿಭಿಸ್ತು ತ್ರಿಪುರಾಬೀಜೈಸ್ತ್ರಿಧಾ ಮಜ್ಜನಮಾಚರೇತ್ ।
ದೇವನಾಮಪಿ ಸರ್ವೇಷು ಭೈರವೇಷು ಪದಂ ಸದಾ ॥ ೧೦೯ ॥

---

೧೦೬. ತನ್ನ ಗುರುವನ್ನು ವರ್ಣೋಚ್ಚಾರಣೆಯಿಂದ ಧ್ಯಾನಮಾಡಬೇಕು. ಬಳಿಕ ಭೈರವೀದೇವಿಯನ್ನೂ ಧ್ಯಾನಮಾಡಿದನಂತರ ಎದ್ದು ಮುಂದಿನ ಕೆಲಸವನ್ನು ಮಾಡಬೇಕು.

೧೦೭. ಸಾಧಕನಾದವನು ತ್ರಿಪುರಾದೇವಿಯ ಉಪಾಸನಾಕ್ರಮವನ್ನು ಅನುಸರಿಸಬೇಕು. ಅವಕ್ಕನುಸಾರವಾಗಿ ಮೊದಲು ಮೈತ್ರವೆಂಬ ಆಚಮನವನ್ನು ಮಾಡಿ, ನಂತರ ದಂತಶೋಧನೆಯನ್ನು ಮಾಡಿಕೊಂಡು, ಪ್ರಾತಃಕಾಲದ ಸ್ನಾನವನ್ನು ಮಾಡಬೇಕು.

೧೦೮. ವೇದೋಕ್ತವಾದ ದೇವೀಮಂತ್ರಗಳನ್ನೂ, ಇತರ ದೇವಮಂತ್ರಗಳನ್ನೂ ಉಚ್ಚರಿಸುವಾಗಲೂ ಮತ್ತು ಪೂಜಾಕಾಲಗಳಲ್ಲಿಯೂ ಸಹ ತ್ರಿಪುರಾಭೈರವೀದೇವಿಯನ್ನೂ ಧ್ಯಾನಮಾಡಬೇಕು.

೧೦೯. ತ್ರಿಪುರಾದೇವಿಯ ಮೂರು ಬೀಜಮಂತ್ರಗಳಿಂದ ಮೂರುಸಾರಿ ಸ್ನಾನವನ್ನು ಮಾಡಿಸಬೇಕು. ದೇವಪದವು ಇರುವ ಕಡೆಗಳಲ್ಲಿ ಎಲ್ಲಾ ಮಂತ್ರಗಳಲ್ಲಿಯೂ "ಭೈರವೇಷು" ಎಂಬ ಪದವನ್ನು ಯಾವಾಗಲೂ ಸೇರಿಸಿ ಹೇಳಬೇಕು. ದೇವಪದವನ್ನು ಯಾವ ವಿಶೇಷಣವನ್ನೂ ಹೇಳದೆ ಉಚ್ಚರಿಸಬಾರದು. ಭೈರವಪದವನ್ನು ಸೇರಿಸಿಯೇ ಉಚ್ಚರಿಸಬೇಕು.

ಕುರ್ಯಾದ್ವಿಶೇಷಣಂ ನಿತ್ಯಂ ನೋಚ್ಚಾರ್ಯಂ ನಿರ್ವಿಶೇಷಣಂ ।
ಆಪಃ ಪುನಂತು ಪೃಥಿವೀಮುಕ್ತ್ವಾ ತ್ರಿಪುರಭೈರವೀಂ ॥ ೧೧೦ ॥

ಕುರ್ಯಾದಾಚಮನಂ ವಿಪ್ರೋ ದ್ರುಪದಾಯಾಂ ತಥಾಚರೇತ್ ।
ಇದಂ ವಿಷ್ಣುರ್ಭೈರವಸ್ತು ವಿಚಕ್ರಮ ಇತೀರಿತಂ ॥ ೧೧೧ ॥

ಮೃದಾಲಂಭನಕೃತ್ಯೇಷು ನಿತ್ಯಮೇವಾಪ್ಯುದೀರಯೇತ್ ।
ಗಾಯತ್ರೀಂ ತ್ರಿಪುರಾದ್ಯಾಂ ತು ಭೈರವೀಮಾಹ್ವಯೇಚ್ಛಿವಾಂ ॥ ೧೧೨ ॥

ಮಾರ್ತಂಡಭೈರವಾಯೇತಿ ಸೂರ್ಯಾಯಾರ್ಘ್ಯಂ ನಿವೇದಯೇತ್ ।
ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ ॥ ೧೧೩ ॥

ದೃಶೇ ವಿಶ್ವಾಯ ಸೂರ್ಯಂ ಶೇಷೇ ಭೈರವಮಿತಿ ಮಾರಯೇತ್ ।
ತರ್ಪಣಾದೌ ಪ್ರಯುಂಜೀತ ತೃಪ್ಯತಾಂ ಬ್ರಹ್ಮಭೈರವಃ ॥ ೧೧೪ ॥

೧೧೦-೧೧೧. ಸಾಧಕನಾದವನು "ಆಪಃ ಪುನಂತು ಪೃಥಿವೀಂ" ಎಂಬ ಮಂತ್ರವನ್ನು ಹೇಳುವಾಗ "ಪೃಥಿವೀಂ" ಎಂದು ಹೇಳಿದಮೇಲೆ "ತ್ರಿಪುರ ಭೈರವೀಂ" ಎಂದು ಸೇರಿಸಿ ಹೇಳಿ, ಆಚಮನವನ್ನು ಮಾಡಬೇಕು. ದ್ರುಪದಾದಿವ ಮುಂಚತು ಎಂಬ ಮಂತ್ರವನ್ನು ಹೇಳುವಾಗಲೂ ಹೀಗೆಯೇ "ತ್ರಿಪುರಭೈರವೀಂ" ಎಂಬ ಶಬ್ದವನ್ನು ಸೇರಿಸಿಯೇ ಹೇಳಬೇಕು. "ಇದಂ ವಿಷ್ಣುರ್ವಿಚಕ್ರಮೆ" ಎಂಬ ಮಂತ್ರದಲ್ಲಿಯೂ ಭೈರವಪದವನ್ನು ಸೇರಿಸಿ "ಇದಂ ವಿಷ್ಣುರ್ಭೈರವಸ್ತು ವಿಚಕ್ರಮೇ" ಎಂದು ಹೇಳಬೇಕು.

೧೧೨. ಮೃದಾಲಂಭನಕಾಲದಲ್ಲಿಯೂ, ಯಾವಾಗಲೂ ಹೀಗೆಯೇ ಹೇಳ ಬೇಕು. ತ್ರಿಪುರಾಭೈರವೀಗಾಯಿತ್ರೀ ರೂಪಳಾದ ಪಾರ್ವತೀದೇವಿಯನ್ನು ಆವಾಹನೆ ಮಾಡಿ ಧ್ಯಾನಮಾಡಬೇಕು.

೧೧೩-೧೧೬. "ಮಾರ್ತಾಂಡಭೈರವಾಯ" ಎಂದು ಹೇಳಿ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು. "ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ । ದೃಶೇ ವಿಶ್ವಾಯ ಸೂರ್ಯಂ" ಈ ಮಂತ್ರದ ಕೊನೆಯಲ್ಲಿ "ಸೂರ್ಯಂ" ಎಂಬ ಪದದ ಅನಂತರ "ಭೈರವಂ" ಎಂದು ಸೇರಿಸಿ ಹೇಳಬೇಕು ಎಂದರೆ "ದೃಶೇ ವಿಶ್ವಾಯ ಸೂರ್ಯಂ ಭೈರವಂ" ಎಂದು ಹೇಳಬೇಕು. ತರ್ಪಣಕೊಡುವಾಗ ಮೊದಲು

ಆವಾಹನೇ ಸ್ವಯಂ ಪಿತ್ರ್ಯೇ ಭೈರವಾನಿತಿ ಕೀರ್ತಯೇತ್ ॥ ೧೧೫ ॥

ತೃಪ್ಯತಾಂ ಭೈರವೀಮಾತಃ ಪಿತರ್ಭೈರವ ತೃಪ್ಯತಾಂ ॥ ೧೧೬ ॥

ಆದೌ ಚ ತ್ರಿಪುರಾಪೂರ್ವಂ ತರ್ಪಣೇಽಪಿ ಪ್ರಯೋಜಯೇತ್ ।
ಜ್ಯೋತಿಷ್ಟೋಮಾಶ್ವಮೇಧಾದೌ ಯತ್ರ ಯಂ ಯಂ ಪ್ರಪೂಜಯೇತ್ ॥

ತತ್ರ ಭೈರವರೂಪೇಣ ದೇವೀಮಪಿ ಚ ಭೈರವೀಂ ।
ಮದಿರಾಪಾತ್ರಮಾಲೋಕ್ಯ ರಕ್ತವಸ್ತ್ರಾಂ ಸ್ತ್ರೀಯಂ ತಥಾ ॥ ೧೧೮ ॥

ಶಿರೋ ನರಸ್ಯ ದೃಷ್ಟ್ವಾ ತು ಭೈರವೀಂ ಚಿಂತಯೇದ್ದ್ವಿಜಃ ।
ಸ್ತ್ರಿಯೋ ದೃಷ್ಟ್ವಾ ಹ್ಯಥೈಕತ್ರ ಯುವತೀಃ ಸುಮನೋಹರಾಃ ॥ ೧೧೯ ॥

ತಾಭ್ಯಸ್ತ್ರಿಪುರಭೈರವ್ಯಾಃ ಪ್ರೀತಯೇ ಚಂದನಾದಿಕಂ ।
ದದ್ಯಾದ್ಭಕ್ತ್ಯಾ ತು ಮನಸಾ ಚಿಂತಯನ್ನಥ ಭೈರವೀಂ ॥ ೧೨೦ ॥

"ತೃಪ್ಯತಾಂ ಬ್ರಹ್ಮಭೈರವಃ" ಎಂದು ಹೇಳಬೇಕು. ತನ್ನ ಪಿತೃಗಳ ಆವಾಹನೆ ಮಾಡುವಾಗ "ಭೈರವಾ" ಎಂದು ಸೇರಿಸಬೇಕು. ಅವರಿಗೆ ತರ್ಪಣ ಕೊಡುವಾಗ "ತೃಪ್ಯತಾಂ ಭೈರವೀ ಮಾತಃ" "ಪಿತರ್ಭೈರವ ತೃಪ್ಯತಾಂ" ಎಂದು ಸಂದರ್ಭಾನುಸಾರ ಹೇಳಬೇಕು. ತರ್ಪಣಮಾಡುವಾಗ ಮೊದಲು "ತ್ರಿಪುರಾ" ಎಂಬ ಶಬ್ದವನ್ನು ಪ್ರಯೋಗಿಸಿಯೇ ತರ್ಪಣಮಾಡಬೇಕು.

೧೧೭. ಜ್ಯೋತಿಷ್ಟೋಮ, ಅಶ್ವಮೇಧ ಇದೇ ಮೊದಲಾದ ಯಜ್ಞಗಳಲ್ಲಿ ಎಲ್ಲಿಎಲ್ಲಿ ಯಾವಯಾವ ದೇವತೆಯನ್ನು ಪೂಜಿಸಬೇಕೋ ಅಲ್ಲಲ್ಲಿ ಭೈರವರೂಪದಿಂದಿರುವ ದೇವತೆಯನ್ನೂ ತ್ರಿಪುರಾಭೈರವಿಯನ್ನೂ ಪೂಜಿಸಬೇಕು.

೧೧೮. ಮದ್ಯಪಾತ್ರೆಯನ್ನೂ, ಕೆಂಪುಬಟ್ಟೆಯನ್ನು ಧರಿಸಿರುವ ಸ್ತ್ರೀಯರನ್ನೂ ಕತ್ತರಿಸಿದ ಮನುಷ್ಯನ ತಲೆಯನ್ನೂ, ಕಂಡಕೂಡನೆಯೇ ಭಕ್ತನಾದವನು ದೇವಿಯನ್ನು ಧ್ಯಾನಮಾಡಬೇಕು.

೧೧೯-೧೨೦. ಭಕ್ತರಾದವರು ಯಾವುದಾದರೂ ಒಂದುಕಡೆಯಲ್ಲಿ ಸುಂದರಿಯರಾದ, ಯೌವನವತಿಯರಾದ ಹೆಂಗಸರನ್ನು ನೋಡಿದರೆ, ತ್ರಿಪುರಭೈರವೀಪ್ರೀತಿಗಾಗಿ ಗಂಧಪುಷ್ಪತಾಂಬೂಲಾದಿಗಳನ್ನು ಮನಸ್ಸಿನಿಂದಲೇ ಕೊಡಬೇಕು. ಅದನ್ನು ಕೊಡುವಾಗ ತ್ರಿಪುರಭೈರವೀದೇವಿಯನ್ನು ಧ್ಯಾನಮಾಡುತ್ತಾ ದಾನಮಾಡಬೇಕು.

ಭೈರವೀಂ ಪ್ರತಿಗೃಹ್ಣಾಮಿ ಭೈರವೋಽಹಂ ಪ್ರತಿಗ್ರಹೀ ।
ಕನ್ಯಾಯಾಂ ಭಾವಯೇದ್ಧೀಮಾ ತ್ರಿಪುರಾಯಾಃ ಸ್ಪಪೂಜಕಃ ॥ ೧೨೧ ॥

ಭೈರವಾಯ ದದಾಮ್ಯದ್ಯ ದೇವೀಂ ತ್ರಿಪುರಭೈರವೀಂ ।
ಇತೀರಯೇತ್ಪ್ರದಾನೇ ತು ಕನ್ಯಾಯಾಸ್ತ್ರಿಪುರಾಂ ತತಃ ॥ ೧೨೨ ॥

ತಸ್ಯಾಃ ಪೂಜೋಪಕರಣಪಾತ್ರಾದ್ಯಂ ಚಾನ್ಯಪೂಜನೇ ।
ಆಸನಾದ್ಯಂ ಚ ಸತತಂ ನೋಪಯೋಜ್ಯಂ ಕದಾಚನ ॥ ೧೨೩ ॥

ಸಕೃತ್ತು ದಾಪಯೇದನ್ಯೈರ್ಮದಿರಾಂ ಸಾಧಕೋ ದ್ವಿಜಃ ।
ಶೂದ್ರಾದಯಸ್ತು ಸತತಂ ದದ್ಯುರಾಸವಮುತ್ತಮಂ ॥ ೧೨೪ ॥

ಏವಂ ತು ವಾಮಭಾವೇನ ಯಜೇತ್ತ್ರಿಪುರಭೈರವೀಂ ।
ಬಾಲಾಂ ತು ವಾಮದಾಕ್ಷಿಣ್ಯಭಾವಾಭ್ಯಾಮಪಿ ಪೂಜಯೇತ್ ॥ ೧೨೫ ॥

೧೨೧-೧೨೨. ತ್ರಿಪುರಾದೇವಿಯನ್ನು ಪೂಜಿಸುವ ಬುದ್ಧಿಶಾಲಿಯು ಕನ್ಯೆಯನ್ನು ಸ್ವೀಕರಿಸುವ ಕಾಲದಲ್ಲಿ ಎಂದರೆ ಮದುವೆಯಲ್ಲಿ ಕನ್ಯಾಪ್ರತಿಗ್ರಹ ಕಾಲದಲ್ಲಿ, ಭೈರವನಾದ ನಾನು ಭೈರವಿಯಾದ ಈ ಕನ್ಯೆಯನ್ನು ಪ್ರತಿಗ್ರಹಮಾಡುವೆನು ಎಂಬ ಭಾವನೆಯಿಂದ ಕನ್ಯಾಪ್ರತಿಗ್ರಹ ಮಾಡಬೇಕು. ಕನ್ಯಾಪ್ರದಾನ ಕಾಲದಲ್ಲಿ ತ್ರಿಪುರ ಭೈರವೀದೇವಿಯನ್ನು ಭೈರವನಿಗಾಗಿ ದಾನಮಾಡುವೆನು ಎಂದು ಹೇಳಬೇಕು.

೧೨೩. ಆ ತ್ರಿಪುರಾದೇವಿಯ ಪೂಜಾಪಾತ್ರೆ, ಆಸನ ಇವುಗಳನ್ನು ಯಾವಾಗಲೂ ಬೇರೆ ದೇವರಪೂಜೆಗೆ ಉಪಯೋಗಿಸಬಾರದು.

೧೨೪. ಸಾಧಕನಾದ ಬ್ರಾಹ್ಮಣನು ಮದ್ಯವನ್ನು ಇತರರಿಂದ ಒಂದುಸಾರಿ ದೇವಿಗೆ ಕೊಡಿಸಬಹುದು. ಶೂದ್ರನೇ ಮೊದಲಾದವರು ಯಾವಾಗಲೂ ಶ್ರೇಷ್ಠವಾದ ಮದ್ಯವನ್ನು ದೇವಿಗೆ ತಾವೇ ಸಮರ್ಪಿಸಬೇಕು.

೧೨೫. ತ್ರಿಪುರಭೈರವೀದೇವಿಯನ್ನು ಹೀಗೆ ವಾಮಾಚಾರದಿಂದ ಪೂಜಿಸಬೇಕು. ಬಾಲಾದೇವಿಯನ್ನು ವಾಮಾಚಾರ, ದಕ್ಷಿಣಾಚಾರ, ಇವೆರಡರಿಂದಲೂ ಪೂಜಿಸಬೇಕು.

ಶ್ಮಶಾನಭೈರವೀಂ ದೇವೀಮುಗ್ರತಾರಾಂ ತಥೈವ ಚ ।
ಉಚ್ಛಿಷ್ಟಭೈರವೀಂ ಚಂಡೀಂ ತಾರಾಂ ತ್ರಿಪುರಭೈರವೀಂ ॥ ೧೨೬ ॥

ಏತಾಸ್ತು ವಾಮಭಾವೇನ ಪೂಜ್ಯಾ ದಕ್ಷಿಣತಾಂ ವಿನಾ ।
ಋಷೀ೯ ದೇವಾ೯ ಪಿತೄ೯ಂಶ್ಚೈವ ಮನುಷ್ಯಾ೯ ಸುತಸಂಚಯಾ೯ ॥ ೧೨೭ ॥

ಯೋ ಯಜೇತ್ಪಂಚಭಿರ್ಯಜ್ಞೈರ್ಋಣಾನಿ ಪರಿಶೋಧಯೇತ್ ।
ವಿಧಿವತ್ಸ್ನಾನದಾನಾಭ್ಯಾಂ ಕುರ್ವ೯ ಯದ್ವಿಧಿಪೂಜನಂ ॥ ೧೨೮ ॥

ಕ್ರೀಯತೇ ಸರಹಸ್ಯಂ ತು ತದ್ದಾಕ್ಷಿಣ್ಯಮಿಹೋಚ್ಯತೇ ।
ಸರ್ವೇ೯ ಚ ಪಿತೃದೇವಾದ್ಯಾ ಯಸ್ಮಾದ್ಭವತಿ ದಕ್ಷಿಣಃ ॥ ೧೨೯ ॥

ದೇವೀ ಚ ದಕ್ಷಿಣಾ ಯಸ್ಮಾತ್ತಸ್ಮಾದ್ದಕ್ಷಿಣ ಉಚ್ಯತೇ ।
ಯಾ ಪುನಃ ಪೂಜ್ಯಮಾನಾ ತು ದೇವಾದೀನಾಂ ಚ ಪೂರ್ವತಃ ॥ ೧೩೦ ॥

---

೧೨೬. ಶ್ಮಶಾನಭೈರವೀ, ಉಗ್ರತಾರಾ, ಉಚ್ಛಿಷ್ಟಭೈರವೀ, ಚಂಡೀ, ತಾರಾ, ತ್ರಿಪುರಭೈರವೀ ಈ ದೇವಿಯರನ್ನು ಯಾವಾಗಲೂ ವಾಮಾಚಾರಕ್ರಮದಿಂದ ಪೂಜಿಸ ಬೇಕು. ದಕ್ಷಿಣಾಚಾರರೀತಿಯಲ್ಲಿ ಮಾಡಕೂಡದು.

೧೨೭-೧೨೯. ಎಲೈ ವೇತಾಲಭೈರವನೇ ಕೇಳು—ದಕ್ಷಿಣಾಚಾರಕ್ರಮವನ್ನು ಹೇಳುವೆನು. ಋಷಿಗಳು, ದೇವತೆಗಳು, ಪಿತೃಗಳು, ಮನುಷ್ಯರು, ಪುತ್ರರು ಇವರು ಗಳನ್ನು ಪಂಚಮಹಾಯಜ್ಞಗಳಿಂದ ಪೂಜಿಸಿ, ದೇವರ್ಷಿಪಿತೃಋಣಗಳೆಂಬ ಮೂರು ಋಣಗಳನ್ನು ಕಳೆದುಕೊಂಡು, ವಿಧಿಪೂರ್ವಕವಾಗಿ ಸ್ನಾನಾದಿಗಳಿಂದ ಇಷ್ಟದೇವತೆ ಯನ್ನು ಪೂಜಿಸುವ ಕ್ರಮಕ್ಕೆ, ದಕ್ಷಿಣಾಚಾರಕ್ರಮವೆಂದು ಹೆಸರು. ಪಿತೃಗಳು, ದೇವತೆಗಳು, ಮೊದಲಾದವರು ಈ ದಕ್ಷಿಣಾಚಾರವಿಧಿಯಿಂದ ಮಾಡುವ ಪೂಜೆಯಿಂದ ಸಂತುಷ್ಟರಾಗುವರು. ದೇವಿಯೂ ಸಹ ಅವರಂತೆ ಸಂತುಷ್ಟಳಾಗುವುದರಿಂದ ಈ ಕ್ರಮವು ದಕ್ಷಿಣಾಚಾರವೆನಿಸುವುದು.

೧೩೦. ದೇವತೆಗಳನ್ನು ಪೂಜಿಸುವುದಕ್ಕೆ ಮೊದಲೇ ದೇವಿಯನ್ನು ಪೂಜಿಸಿ ದರೆ ದೇವಿಯು ತಾನೇ ಬಂದು ಯಜ್ಞಭಾಗವನ್ನು ಸ್ವೀಕರಿಸುವಳು. ಈ ಕ್ರಮವು ವಾಮಾಚಾರವೆಂದು ಹೇಳಲ್ಪಡುವುದು.

ಯಜ್ಞಭಾಗಂ ಸ್ವಯಂ ಧತ್ತೇ ಸಾ ವಾಮಾ ತು ಪ್ರಕೀರ್ತಿತಾ ।
ಪೂಜಕೋಽಪಿ ಭವೇದ್ವಾಮಸ್ತತ್ರೈವ ಸತತಂ ಸುತ ॥ ೧೩೧ ॥

ಪಂಚಯಜ್ಞಾನ್ನವಾ ಕುರ್ಯಾದ್ಯದ್ವಾ ವಾಮ್ಯಪ್ರಪೂಜನೇ ।
ಅನ್ಯಸ್ಯ ಪೂಜಾಭಾಗಂ ಹಿ ಯತೋ ಗೃಹ್ಣಾತಿ ವಾಮಿಕಾ ॥ ೧೩೨ ॥

ಯತ್ಪೂಜಯೇದ್ವಾಮಭಾವೈರ್ನ ತು ಸ್ಯಾದೃಣಶೋಧನಂ ।
ಪಿತೃದೇವನರಾದೀನಾಂ ಜಾಯತೇ ನ ಕದಾಚನ ॥ ೧೩೩ ॥

ಸೋಽಭ್ಯಸ್ಯ ತ್ರಿಪುರಾಯೋಗಂ ತೇನ ಯೋಗೇನ ಸಂಯುತಃ ।
ಜಾಯತೇ ಯದಿ ಸುಪ್ರಾಜ್ಞಸ್ತದಾ ಮೋಕ್ಷಮವಾಪ್ನುಯಾತ್ ॥ ೧೩೪ ॥

ಸ ಚ ಮೋಕ್ಷಶ್ಚಿರೇಣೈವ ಜಾಯತೇಽತ್ರ ಪುನಃ ಪುನಃ ।
ಋಣಶೋಧನಜೈಃ ಪಾಪೈರಾಕ್ರಾಂತಶ್ಚೈವ ಭೈರವ ॥ ೧೩೫ ॥

---

೧೩೧. ಎಲೈ ಪುತ್ರನೇ ಕೇಳು, ಪಂಚಮಹಾಯಜ್ಞಗಳನ್ನು ಮಾಡಲಿ, ಮಾಡದಿರಲಿ, ವಾಮಾಚಾರದಿಂದ ಪೂಜೆಮಾಡುವಾಗ ಸಾಧಕನು ಯಾವಾಗಲೂ ವಾಮಾಚಾರಕ್ರಮವನ್ನೇ ಅನುಸರಿಸಿ ಪೂಜೆಮಾಡಬೇಕು.

೧೩೨-೧೩೩. ವಾಮಾಚಾರದಲ್ಲಿ ಪಂಚಯಜ್ಞಗಳನ್ನು ಮಾಡಬೇಕೆಂಬ ನಿಯಮವೇನೂ ಇಲ್ಲ. ಇತರ ದೇವತೆಗಳಿಗೆ ಮಾಡುವ ಪೂಜೆಗಳೆಲ್ಲವನ್ನೂ ದೇವಿಯು ತಾನೇ ಸ್ವೀಕರಿಸುವುದರಿಂದ ಪಂಚಯಜ್ಞಗಳ ಅವಶ್ಯಕತೆಯೇ ಇರುವುದಿಲ್ಲ. ದೇವರ್ಷಿ ಪಿತೃಋಣಗಳ ಋಣವಿಮೋಚನವು ಈ ವಾಮಾಚಾರಪೂಜೆಯಿಂದ ಆಗುವುದಿಲ್ಲ. ಆದುದರಿಂದ ಪಂಚಯಜ್ಞಗಳನ್ನು ಮಾಡಿದರೂ, ಮಾಡದಿದ್ದರೂ ಸಾಧಕನು ದೇವೀ ಪೂಜೆಯ ಫಲವನ್ನು ಸಂಪೂರ್ಣವಾಗಿ ಪಡೆಯುವನು.

೧೩೪. ವಾಮಾಚಾರದಿಂದಿರುವವನು ತ್ರಿಪುರಾಯೋಗವನ್ನು ಅಭ್ಯಾಸಮಾಡಿ ಅದರಿಂದ ಪ್ರಾಜ್ಞನಾದರೆ, ಆಗ ಅವನು ಮೋಕ್ಷವನ್ನು ಹೊಂದುವನು.

೧೩೫-೧೩೬. ಆ ಸಾಧಕನಿಗೆ ಮೋಕ್ಷವೂ ಕೂಡ ಬೇಗನೆ ಲಭಿಸುವುದು. ಋಣತ್ರಯ ವಿಮೋಚನದಿಂದ ಉಂಟಾಗುವ ಪಾಪವು ಪರಿಹಾರವಾಗದಿದ್ದರೂ, ದೇವಿಯನ್ನು ವಾಮಾಚಾರವಿಧಿಯಿಂದ ಪೂಜೆಮಾಡಿದ ಫಲವಾಗಿ ಆ ಸಾಧಕನಿಗೆ ಈ

ಇಹಲೋಕೇ ಸುಖೈಶ್ವರ್ಯಯುಕ್ತಃ ಸರ್ವತ್ರ ವಲ್ಲಭಃ ।
ಮದನೋಪಮಕಾಂತೇನ ಶಾರೀರೇಣ ವಿರಾಜತಾ ॥ ೧೩೬ ॥

ಸ ರಾಷ್ಟ್ರಕಂ ಚ ರಾಜಾನಂ ವಶೀಕೃತ್ಯ ಸಮಂತತಃ ।
ಮೋಹಯೇ ವನಿತಾಃ ಸರ್ವಾಃ ಸರ್ವಾಶ್ಚ ಮದವಿಹ್ವಲಾಃ ॥ ೧೩೭ ॥

ಸಿಂಹಾ ವ್ಯಾಘ್ರಾಂಸ್ತರಕ್ಷೂಂಶ್ಚ ಭೂತಪ್ರೇತಪಿಶಾಚಕಾ ।
ವಶೀಕುರ್ವಂ ವಿಚರತಿ ವಾಯುವೇಗೋದ್ಯತಸ್ತತಃ ॥ ೧೩೮ ॥

ಬಾಲಾಂ ವಾ ತ್ರಿಪುರಾಂ ದೇವೀಂ ಮಧ್ಯಾಂ ವಾಪ್ಯಥ ಭೈರವೀಂ ।
ಯೋ ಯಜೇತ್ಪರಯಾ ಭಕ್ತ್ಯಾ ಯಶ್ಚ ಬಾಣೋಪಮಾಕೃತಿಃ ॥ ೧೩೯ ॥

ಕಾಮೇಶ್ವರೀಂ ಕಾಮರೂಪಾಂ ಪೂಜಯೇತ್ತು ಯಥೇಚ್ಛಯಾ ।
ದಾಕ್ಷಿಣ್ಯಾದ್ವಾಮಭಾವಾದ್ವಾ ಸರ್ವಥಾ ಸಿದ್ಧಿಮಾಪ್ನುಯಾತ್ ॥ ೧೪೦ ॥

ಮಹಾಮಾಯಾಂ ಶಾರದಾಂ ಚ ಶೈಲಪುತ್ರೀಂ ತಥೈವ ಚ ।
ಯಥಾ ತಥಾ ಪ್ರಕಾರೇಣ ದಾಕ್ಷಿಣ್ಯಾದೇವ ಪೂಜಯೇತ್ ॥ ೧೪೧ ॥

ಲೋಕದಲ್ಲಿ ಸುಖೈಶ್ವರ್ಯಗಳು ಯಾವಾಗಲೂ ಲಭಿಸುವುವು. ಅವನ ಶರೀರವು ಮನ್ಮಥನಂತೆ ಸುಂದರವಾದ ಶರೀರಕಾಂತಿಯಿಂದ ಬೆಳಗುವುದು. ರಾಜನೂ, ದೇಶದ ಜನರೂ ಎಲ್ಲರೂ ಇವನ ವಶವರ್ತಿಯಾಗುವರು. ಸುಂದರಿಯರಾದ ವನಿತೆಯರು ಕಾಮಾತುರರಾಗಿ ಇವನನ್ನು ಮೋಹಿಸಿ ಇವನಿಗೆ ಅಧೀನರಾಗುವರು. ಸಿಂಹ, ಪುಲಿ, ಕರಡಿ ಮೊದಲಾದ ದುಷ್ಟಮೃಗಗಳೂ, ಭೂತಪ್ರೇತಪಿಶಾಚಾದಿಗಳೂ ಸಹ ಇವನಿಗೆ ಯಾವ ಬಾಧೆಯನ್ನೂ ಮಾಡದೆ ಇವನಿಗೆ ವಶವರ್ತಿಯಾಗುವವು. ವಾಯುವೇಗ ದಿಂದ ಎಲ್ಲಿಗೆ ಹೋಗಬೇಕೆಂದರೆ ಅಲ್ಲಿಗೆ ಹೋಗಲು ಸಮರ್ಥನಾಗುವನು.

೧೩೯. ಬಾಲಾದೇವಿಯನ್ನೂ, ಮಧ್ಯಾತ್ರಿಪುರಾದೇವಿಯನ್ನೂ, ತ್ರಿಪುರಭೈರವಿ ಯನ್ನೂ ಯಾರು ಭಕ್ತಿಯಿಂದ ಪೂಜಿಸುವರೋ ಅವರು ಬಾಣಾಸುರನಿಗೆ ಸಮನಾದ ಸುಂದರಾಕಾರವುಳ್ಳವರಾಗುವರು.

೧೪೦. ಕಾಮೇಶ್ವರಿಯನ್ನೂ, ಕಾಮಾಖ್ಯಾದೇವಿಯನ್ನೂ, ದಕ್ಷಿಣಾಚಾರದಿಂ ದಲಾಗಲಿ, ವಾಮಾಚಾರದಿಂದಲಾಗಲಿ ತನ್ನ ಇಚ್ಛಾನುಸಾರವಾಗಿ ಪೂಜಿಸಿದರೂ ಸಿದ್ಧಿ ಯನ್ನು ಹೊಂದಬಹುದು.

೧೪೧. ಮಹಾಮಾಯಾ ಎಂಬ ದೇವತೆಯನ್ನೂ, ಶಾರದಾದೇವಿಯನ್ನೂ, ಪಾರ್ವತಿಯನ್ನೂ ಸಹ ವಿಧಿನಿಯಮಗಳಿಂದ ದಕ್ಷಿಣಾಚಾರದಿಂದಲೇ ಪೂಜಿಸಬೇಕು.

ಯೋ ದಾಕ್ಷಿಣ್ಯಂ ವಿನಾ ಭಾವಂ ಮಹಾಮಾಯಾಂ ಸಮರ್ಚತಿ ।
ಸ ಪಾಪಃ ಸ್ವರ್ಗಲೋಕೇಭ್ಯಶ್ಚ್ಯುತೋ ಭವತಿ ರೋಗಧೃಕ್ ॥ ೧೪೨ ॥

ಅನ್ಯಾಸ್ತು ಶಿವದೂತಾದ್ಯಾಃ ದೇವ್ಯೋ ಯಾಃ ಪೂರ್ವಮೀರಿತಾಃ ।
ತಾಸ್ತು ವಾಂ ಪಾತು ದಾಕ್ಷಿಣ್ಯಾತ್ಪೂಜಿತವ್ಯಾಸ್ತು ಸಾಧಕೈಃ ॥ ೧೪೩ ॥

ಕಿಂತು ಯಃ ಪೂಜಕೋ ವಾಮಃ ಸೋಽನ್ಯಾಸಾಂ ಪರಿವರ್ಜಿತಃ ।
ಸರ್ವಾಸಾಂ ಪೂಜಕಃ ಸ್ಯಾತ್ತು ದಕ್ಷಿಣಸ್ತೇನ ಉತ್ತಮಃ ॥ ೧೪೪ ॥

ಅಥ ತ್ರಿಪುರಭೈರವ್ಯಾ ನ್ಯಾಸಂ ಚ ಶೃಣು ಭೈರವ ।
ಯೇನ ವಿನ್ಯಾಸಮಾತ್ರೇಣ ದೇವವಜ್ಜಾಯತೇ ನರಃ ॥ ೧೪೫ ॥

ಭೈರವೀತಂತ್ರಮಂತ್ರಸ್ಯ ಋಷಿರ್ದಕ್ಷಿಣ ಉಚ್ಯತೇ ।
ಛಂದಃ ಪಂಕ್ತಿಃ ಸಮಾಖ್ಯಾತಾ ದೇವೀ ತ್ರಿಪುರಭೈರವೀ ॥ ೧೪೬ ॥

---

೧೪೨. ಯಾವನು ದಕ್ಷಿಣಾಚಾರವನ್ನು ಬಿಟ್ಟು ಬೇರೆ ವಿಧದಿಂದ ಮಹಾ ಮಾಯಾದೇವಿಯನ್ನು ಪೂಜಿಸುವನೋ, ಅವನು ಪಾಪಿಷ್ಠನಾಗಿ ರೋಗದಿಂದ ನರಳು ವನು. ಅವನಿಗೆ ಸ್ವರ್ಗಲೋಕಪ್ರಾಪ್ತಿಯಿಲ್ಲ.

೧೪೩. ಶಿವದೂತಿಯೇ ಮೊದಲಾದ ಯಾವ ದೇವಿಯರು ಪೂರ್ವದಲ್ಲಿ ಹೇಳ ಲ್ಪಟ್ಟಿರುವರೋ ಅವರೆಲ್ಲರೂ ನಿಮ್ಮನ್ನು (ಸಾಧಕರನ್ನು) ರಕ್ಷಿಸಲಿ. ಅವರನ್ನು ಯಾವಾಗಲೂ ದಕ್ಷಿಣಾಚಾರದಿಂದ ಮಾತ್ರವೇ ಪೂಜಿಸಬೇಕು.

೧೪೪. ಆದರೆ ಯಾವನು ವಾಮಾಚಾರದಿಂದ ಪೂಜಿಸುವನೋ, ಅವನು ಇತರ ದೇವತೆಗಳ ಪೂಜೆಗೆ ಅರ್ಹನಲ್ಲ. ಎಲ್ಲ ದೇವತೆಗಳ ಪೂಜೆಗೂ ಅರ್ಹವಾದ ದಕ್ಷಿಣಾಚಾರದಿಂದ ಪೂಜಿಸುವ ಸಾಧಕನು ಉತ್ತಮನೆನಿಸಿಕೊಳ್ಳುವನು.

೧೪೫. ಎಲೈ ಭೈರವನೇ ಕೇಳು, ಯಾವ ಬೀಜಾಕ್ಷರಗಳ ನ್ಯಾಸಮಾತ್ರದಿಂದ ಮನುಷ್ಯನು ದೇವತೆಯಂತೆ ಆಗುವನೋ ಅಂತಹ ಮಹಿಮೆಯುಳ್ಳ ತ್ರಿಪುರಾಭೈರವೀ ದೇವಿಯ ನ್ಯಾಸವನ್ನು ಹೇಳುವೆನು.

೧೪೬. ಭೈರವೀ ತಂತ್ರಮಂತ್ರಗಳಿಗೆ ದಕ್ಷಿಣ ಋಷಿಯು. ಪಂಕ್ತಿಯೆಂಬು ವುದು ಛಂದಸ್ಸು. ತ್ರಿಪುರಭೈರವೀದೇವಿಯೇ ಈ ಮಹಾಮಂತ್ರದ ದೇವತೆಯಾಗಿ ರುವಳು. ಇಷ್ಟಾರ್ಥಸಾಧನೆಗಾಗಿ ಈ ಮಹಾಮಂತ್ರವನ್ನು ವಿನಿಯೋಗಿಸಬೇಕು ಎಂದು ಹೇಳಲ್ಪಟ್ಟಿರುವುದು.

ಕಾಮಾರ್ಥಯೋಃ ಸಾಧನೇ ಚ ವಿನಿಯೋಗಃ ಪ್ರಕೀರ್ತಿತಃ ।
ಹಕಾರಂ ವಿನ್ಯಸೇನ್ನಾಭೌ ಮಕಾರಂ ಬಸ್ತಿತೋ ನ್ಯಸೇತ್ ॥ ೧೪೭ ॥
ವಕಾರಂ ಶೇಫೇ ವಿನ್ಯಸ್ಯ ಏಕಾರಂ ಚ ಗುದೇ ತಥಾ ।
ಪುನರೂರ್ಧ್ವೇಸ್ತಥೈವಾದ್ಯಂ ಜಾನುಯುಗ್ಮೇ ದ್ವಿತೀಯಕಂ ॥ ೧೪೮ ॥
ತೃತೀಯಾ ಜಂಘಯೋರ್ನ್ಯಸ್ಯ ಚತುರ್ಥಂ ಪಾದಯೋರ್ನ್ಯಸೇತ್ ।
ತ್ರಿವಿಧಂ ವಿನ್ಯಸೇದ್ದೇವಂ ನಾಭ್ಯಾದೇಃ ಪಾದಸಂಗತಂ ॥ ೧೪೯ ॥
ದ್ವಿತೀಯಸ್ಯ ತು ಬೀಜಸ್ಯ ಆದ್ಯಂ ಹೃದ್ಯೇವ ವಿನ್ಯಸೇತ್ ।
ವಾಮೇ ಸ್ತನೇ ದ್ವಿತೀಯಂ ತು ತೃತಿಯಂ ದಕ್ಷಿಣೇ ಸ್ತನೇ ॥ ೧೫೦ ॥
ಚತುರ್ಥಮುದರೇ ನ್ಯಸ್ಯ ಪಂಚಮಂ ಪಾರ್ಶ್ವಯೋರ್ನ್ಯಸೇತ್ ।
ಷಷ್ಠಂ ನಾಭೌ ಪರಿನ್ಯಸ್ಯ ನ್ಯಸೇಚ್ಚಾಪಿ ತ್ರಿಧಾ ತ್ರಿಧಾ ॥ ೧೫೧ ॥
ತೃತೀಯಸ್ಯ ತು ಬೀಜಸ್ಯ ಮೂರ್ಧ್ನಿ ಚಾದ್ಯಂ ತು ವಿನ್ಯಸೇತ್ ।
ದ್ವಿತೀಯಂ ನ್ಯಸ್ಯ ಕೇಶಾಂತೇ ತೃತೀಯಂ ವದನೇ ನ್ಯಸೇತ್ ॥ ೧೫೨ ॥

೧೪೭-೧೪೯. "ಹ" ಕಾರವನ್ನು ನಾಭಿಯಲ್ಲಿಯೂ, "ಮ" ಕಾರವನ್ನು ವಸ್ತಿಯಲ್ಲಿಯೂ, "ವ" ಕಾರವನ್ನು ಬೀಜಗಳಲ್ಲಿಯೂ, "ಏಕಾರವನ್ನು" ಗುದ ದಲ್ಲಿಯೂ, ಎರಡು ತೊಡೆಗಳಲ್ಲಿ ಪುನಃ "ಹ" ಕಾರವನ್ನೂ, ಎರಡು ಮಂಡಿಗಳಲ್ಲಿ "ಮ" ಕಾರವನ್ನೂ ನ್ಯಾಸಮಾಡಬೇಕು. ಮೂರನೆಯ ಅಕ್ಷರವನ್ನು ಜಂಘೆಯಲ್ಲಿ ಯೂ, ನಾಲ್ಕನೆಯ ಅಕ್ಷರವನ್ನು ಪಾದಗಳಲ್ಲಿಯೂ ನ್ಯಾಸಮಾಡಬೇಕು. ಹೀಗೆಯೇ ನಾಭಿಯಿಂದ ಪಾದದವರೆಗೆ ಮೂರುಸಲ ನ್ಯಾಸಮಾಡಬೇಕು.

೧೫೦-೧೫೧. ಎರಡನೆಯ ಬೀಜಾಕ್ಷರಮಂತ್ರದ ಮೊದಲನೆಯ ಅಕ್ಷರವನ್ನು ಹೃದಯದಲ್ಲಿಯೂ, ಎರಡನೆಯದನ್ನು ಎಡಗಡೆಯ ಸ್ತನದಲ್ಲಿಯೂ, ಮೂರನೆಯ ಅಕ್ಷರವನ್ನು ಬಲಗಡೆಯ ಸ್ತನದಲ್ಲಿಯೂ, ನಾಲ್ಕನೆಯ ಬೀಜಾಕ್ಷರವನ್ನು ಹೊಟ್ಟೆ ಯಲ್ಲಿಯೂ, ಐದನೆಯದನ್ನು ಪಕ್ಕಗಳಲ್ಲಿಯೂ, ಆರನೆಯದನ್ನು ನಾಭಿಯಲ್ಲಿಯೂ. ಇಟ್ಟು, ಮೂರು ಮೂರು ಸಾರಿ ನ್ಯಾಸವನ್ನು ಮಾಡಬೇಕು.

೧೫೨. ಮೂರನೆಯ ಬೀಜಾಕ್ಷರಮಂತ್ರವ ಮೊದಲಕ್ಷರವನ್ನು ತಲೆಯಮೇಲೆ ನ್ಯಾಸಮಾಡಿಕೊಂಡು, ಎರಡನೆಯ ಅಕ್ಷರವನ್ನು ಕೂದಲಿನ ತುದಿಯಲ್ಲಿ ನ್ಯಾಸಮಾಡಿದ ನಂತರ, ಮೂರನೆಯ ಬೀಜಾಕ್ಷರವನ್ನು ಮುಖವಲ್ಲಿ ನ್ಯಾಸಮಾಡಬೇಕು. ನಾಲ್ಕ ನೆಯ ಅಕ್ಷರವನ್ನು ಹೃದಯದಲ್ಲಿ ಮೂರು ಮೂರುಸಾರಿ ನ್ಯಾಸಮಾಡಬೇಕು.

ಚತುರ್ಥಂ ಹೃದಯೇ ನ್ಯಸ್ಯ ಯಥಾ ಸ್ಯಾತ್ತು ತ್ರಿಧಾ ತ್ರಿಧಾ ।
ಆದ್ಯಾದ್ಯಂ ದಕ್ಷಿಣಾಂಗುಷ್ಠೇ ದ್ವಿತೀಯಂ ತರ್ಜನೀಂ ಪುನಃ ॥ ೧೫೩ ॥

ತೃತೀಯಂ ಚ ಮಧ್ಯಮಾಯಾಮನಾಮಾಯಾಂ ಚತುರ್ಥಕಂ ।
ತೃತೀಯಾದ್ಯಂ ಕನಿಷ್ಠಾಯಾಂ ವಾಮಾಂಗುಷ್ಠೇ ದ್ವಿತೀಯಕಂ ॥ ೧೫೪ ॥

ತೃತೀಯಾಂ ವಾಮತರ್ಜನ್ಯಾಂ ಚತುರ್ಥಂ ಮಧ್ಯಮಾತನೌ ।
ಅನಾಮಾಯಾಂ ಪಂಚಮಂ ತು ಷಷ್ಠಂ ಶೇಷೇತು ವಿನ್ಯಸೇತ್ ॥ ೧೫೫ ॥

ಏವಂ ತ್ರಿಧಾ ತು ವಿನ್ಯಸ್ಯ ತೃತೀಯಮಥ ಬೀಜಕಂ ।
ಉಭಯೋರ್ಹಸ್ತಯೋಃ ಕೃತ್ವಾ ಅಂಗುಷ್ಠಾದ್ಯಂ ಯುಗಂ ಯುಗಂ ॥

ತೃತೀಯಂ ಬೀಜವರ್ಣಾಂಸ್ತು ವಿನ್ಯಸೇತ್ಕ್ರಮತೋ ಬುಧಃ ।
ಪಿಂಡಿತಂ ಸರ್ವಬೀಜಂ ತು ವಿನ್ಯಸೇತ್ತು ಕನಿಷ್ಠಯೋಃ ॥ ೧೫೭ ॥

---

೧೫೩. ಮೊದಲನೆಯ ಮಂತ್ರದ ಮೊದಲಕ್ಷರವನ್ನು ಬಲಗಡೆಯ ಅಂಗುಷ್ಠದಲ್ಲಿಯೂ, ಎರಡನೆಯದನ್ನು ತರ್ಜನಿಯಲ್ಲಿಯೂ, ಮೂರನೆಯ ವರ್ಣವನ್ನು ಮಧ್ಯದ ಬೆರಳಿನಲ್ಲಿಯೂ, ಅನಾಮಿಕಾಬೆರಳಿನಲ್ಲಿ ನಾಲ್ಕನೆಯ ವರ್ಣವನ್ನೂ ನ್ಯಾಸಮಾಡಬೇಕು.

೧೫೪-೧೫೫. ಮೂರನೆಯ ಬೀಜಾಕ್ಷರಮಂತ್ರದ ಮೊದಲನೆಯ ವರ್ಣವನ್ನು ಬಲಗಡೆಯ ಕನಿಷ್ಠಿಕೆಯಲ್ಲಿಯೂ, ಎರಡನೆಯ ಅಕ್ಷರವನ್ನು ಎಡಗಡೆಯ ಹೆಬ್ಬೆರಳಿನಲ್ಲಿಯೂ, ಮೂರನೆಯ ವರ್ಣವನ್ನು ಎಡಗಡೆಯ ತರ್ಜನಿಯಲ್ಲಿಯೂ, ನಾಲ್ಕನೆಯ ವರ್ಣವನ್ನು ಮಧ್ಯದ ಬೆರಳಿನಲ್ಲಿಯೂ, ಐದನೆಯ ವರ್ಣವನ್ನು, ಅನಾಮಿಕೆಯಲ್ಲಿಯೂ ಆರನೆಯವರ್ಣವನ್ನು ಉಳಿದಕಡೆಯಲ್ಲೂ, ನ್ಯಾಸಮಾಡಬೇಕು.

೧೫೬-೧೫೮. ಹೀಗೆ ಮೂರುಸಾರಿ ವಿನ್ಯಾಸಮಾಡಿ, ಮೂರನೆಯ ಬೀಜವನ್ನು ಎರಡು ಕೈಗಳಲ್ಲಿಯೂ ನ್ಯಾಸಮಾಡಿದ ನಂತರ ಪಂಡಿತನಾದವನು ಮೂರನೆಯ ಮಂತ್ರದ ಬೀಜಾಕ್ಷರಗಳನ್ನು ಎರಡೆರಡಾಗಿ ಅಂಗುಷ್ಠವೇ ಮೊದಲಾದ ಎಲ್ಲಾ ಬೆರಳುಗಳಲ್ಲಿಯೂ ಅಂಗುಷ್ಠಾಭ್ಯಾಂ ನಮಃ ಎಂದು ಮೊದಲುಮಾಡಿ ಅನಾಮಿಕಾಭ್ಯಾಂ ನಮಃ ಎಂದಿರುವವರೆಗೂ ಮಾಡಿ, ಬಳಿಕ ಎಲ್ಲಾ ಬೀಜಗಳನ್ನೂ ಒಟ್ಟಾಗಿ ಸೇರಿಸಿ,

ಆದ್ಯಂ ತು ತಲಯೋರ್ನ್ಯಸ್ಯ ಪೃಷ್ಠಯೋಶ್ಚ ದ್ವಿತೀಯಕಂ ।
ತಾಲತ್ರಯಂ ತತೋ ದತ್ತ್ವಾ ತೃತೀಯೇನಾಸ್ತ್ರವೇಷ್ಟನಂ ॥ ೧೫೮ ॥

ಕರ್ಣಯೊಶ್ಚಿಬುಕೇ ಗಂಡೇ ಮುಖೇ ದೃಜ್ನಾಸಯೋಸ್ತಥಾ ।
ಸ್ಕಂಧಯೋಶ್ಚ ಕಪೋಲೇ ಚ ಜಠರೇ ಶಿಶ್ನಮೂರ್ಧನಿ ॥ ೧೫೯ ॥

ಪಾದಯೋಃ ಪಾರ್ಶ್ವಯೋಶ್ಚೈವ ಹೃದಯೇ ಸ್ತನಯುಗ್ಮಕೇ ।
ಕಂಠದೇಶೇ ಚ ನ್ಯಸ್ತವ್ಯಾ ಮಂತ್ರವರ್ಣಕ್ರಮಾತ್ಪುನಃ ॥ ೧೬೦ ॥

ಲಿಂಗೇ ರತ್ಯೈ ನಮ ಇತಿ ವಾಗ್ಭವಾದ್ಯೇನ ವಿನ್ಯಸೇತ್ ।
ಓಂ ಕ್ಲೀಂ ಪ್ರೀತ್ಯೈ ನಮ ಇತಿ ಪಾದಯೋರ್ವಿನ್ಯಸೇತ್ತತಃ ॥ ೧೬೧ ॥

ನಮೋ ಭವಾಯೇತಿ ತತೋ ಭ್ರುವೋರ್ಮಧ್ಯೇ ತೃತೀಯಕಂ ।
ವಿನ್ಯಸೇತ್ತ್ರಿಪುರಾಬೀಜಂ ಸದ್ಯೋ ದೇವತ್ವ ಸಿದ್ಧಯೇ ॥ ೧೬೨ ॥

ಕನಿಷ್ಠಿಕೆಯ ಬೆರಳುಗಳಲ್ಲಿ ಕನಿಷ್ಠಿಕಾಭ್ಯಾಂ ನಮ· ಎಂದು ನ್ಯಾಸಮಾಡಬೇಕು. ಮೊದಲನೆಯ ವರ್ಣವನ್ನು ಕರಲತದಲ್ಲಿಯೂ, ಎರಡನೆಯ ವರ್ಣವನ್ನು ಕರಪೃಷ್ಠ ದಲ್ಲಿಯೂ, ಕರತಲಕರಪೃಷ್ಠಾಭ್ಯಾಂ ನಮ ಎಂದು ನ್ಯಾಸಮಾಡಿ, ಮೂರನೆಯ ವರ್ಣ ದಿಂದ ಅಸ್ತ್ರಾಯ ಫಟ್ ಎಂದು ಅಸ್ತ್ರವೇಷ್ಟನೆಯನ್ನು ಮಾಡಿದನಂತರ ಮೂರು ಚಪ್ಪಾಳೆಯನ್ನು ಹೊಡೆಯಬೇಕು.

೧೫೯-೧೬೦. ಕಿವಿಗಳು, ಗಡ್ಡ, ಕಪೋಲಪ್ರದೇಶ, ಮುಖ, ಕಣ್ಣು, ಮೂಗು, ಹೆಗಲು, ಕೆನ್ನೆಗಳು, ಹೊಟ್ಟೆ, ಶಿಶ್ನದತುದಿ, ಕಾಲುಗಳು, ಪಕ್ಕಗಳು, ಹೃದಯ, ಸ್ತನಗಳು, ಕಂಠದೇಶ, ಇವುಗಳಲ್ಲಿ ಮಂತ್ರದ ವರ್ಣಗಳನ್ನು ಕ್ರಮವಾಗಿ ನ್ಯಾಸಮಾಡ ಬೇಕು.

೧೬೧-೧೬೩. ತನ್ನ ಶಿಖಿದಲ್ಲಿ "ರತ್ಯೈನಮಃ" ಎಂದು ಹೇಳಿ ಮೊದಲನೆಯ ವಾಗ್ಭವಬೀಜದಿಂದ ನ್ಯಾಸಮಾಡಬೇಕು, "ಓಂ ಕ್ಲೀಂಪ್ರೀತ್ಯೈನಮಃ" ಎಂದು ಪಾದಗಳಲ್ಲಿ ನ್ಯಾಸಮಾಡಬೇಕು. ಅನಂತರ "ನಮೋ ಭವಾಯ" ಎಂಬ ಮಂತ್ರ ದಿಂದ ಹುಬ್ಬಿನ ಮಧ್ಯದಲ್ಲಿ ತ್ರಿಪುರಾದೇವಿಯ ಮೂರನೆಯ ಮಂತ್ರದ ಬೀಜಾಕ್ಷರ ವನ್ನು ನ್ಯಾಸಮಾಡಬೇಕು. ಇದರಿಂದ ಕೂಡಲೇ ದೇವತ್ವವು ಸಿದ್ಧಿಸುವುದು.

ಓಂ ಇಂ ಈಶಾನರೂಪಾಯ ತತ್ಪುರುಷಾಯ ನಮೋ ಭವಾಯ ವೈ ।
ನಮ ಇತ್ಯಂತತಃ ಪ್ರೋಕ್ತೋ ಮೂರ್ಧ್ನೀಶಾನಂ ನ್ಯಸೇತ್ಪುನಃ ॥ ೧೬೩ ॥

ವಕ್ತ್ರೇ ತತ್ಪುರುಷಂ ಚಾಪಿ ಬೀಜೇನ ಮಕರಧ್ವಜಂ ।
ಹೃದಯೇಽಘೋರಕಂದರ್ಪಮಾದ್ಯಬೀಜೇನ ವೈ ನ್ಯಸೇತ್ ॥ ೧೬೪ ॥

ಶಿಶ್ನೇ ವಾ ವಾಮದೇವಂ ತು ಮನ್ಮಥಂ ಚಾಪಿ ಚಿಂತಯೇತ್ ।
ಸದ್ಯೋಜಾತಂ ಪಾದದ್ವಯೇ ಕಾಮದೇವಂ ಚ ವಿನ್ಯಸೇತ್ ॥ ೧೬೫ ॥

ಓಂಕಾರಂ ಚ ಹಕಾರಂ ಚ ರೇಫಮೇಕತ್ರ ಸಂಧಿತಂ ।
ಪ್ರಾಂತಸ್ವರಂ ವಾಗ್ಭವಾದ್ಯಂ ಸ್ವರೈರ್ಹೃದ್ಯೈಸ್ತು ಪಂಚಭಿಃ ॥ ೧೬೬ ॥

ಓಂ ಇಂ ಈಶಾನರೂಪಾಯ ನಮಃ, ಓಂ ನಮೋ ಭವಾಯ ಎಂಬುದಾಗಿ ಹೇಳಿ ಶಿರಸ್ಸಿನಲ್ಲಿ ನ್ಯಾಸಮಾಡಬೇಕು.

೧೬೪. ಮುಖದಲ್ಲಿ ಬೀಜಮಂತ್ರದಿಂದ ತತ್ಪುರುಷನನ್ನೂ, ಬೀಜಮಂತ್ರದಿಂದ ಕಾಮನನ್ನೂ, ಹೃದಯದಲ್ಲಿ ಅಘೋರ, ಮನ್ಮಥ ಇವರನ್ನೂ ಮೊದಲನೆಯ ಬೀಜಮಂತ್ರದಿಂದ ನ್ಯಾಸಮಾಡಬೇಕು.

೧೬೫. ಶಿಶ್ನದಲ್ಲಿ ವಾಮದೇವನನ್ನೂ, ಮನ್ಮಥನನ್ನೂ ಎಂದರೆ ಆ ದೇವನ ಬೀಜಾಕ್ಷರವನ್ನು ನ್ಯಾಸಮಾಡಬೇಕು. ಸದ್ಯೋಜಾತಕಾಮದೇವ ಬೀಜಾಕ್ಷರಗಳನ್ನು ಎರಡು ಕಾಲುಗಳಲ್ಲಿ ನ್ಯಾಸಮಾಡಬೇಕು.

೧೬೬-೧೬೮. ಓಂಕಾರವನ್ನೂ, ಹಕಾರ ಮತ್ತು ಕಡೆಯ ಸ್ವರವಾದ ಔಕಾರ ಸೇರಿ ಆಗುವ ಹ್ರೌಂ ಎಂಬ ವರ್ಣವನ್ನೂ ಮೊದಲನೆಯ ವಾಗ್ಭವಬೀಜವಾದ ಐಂ ಎಂಬ ವರ್ಣವನ್ನೂ ಪ್ರಥಮದಲ್ಲಿ ಉಚ್ಚರಿಸಿ ಬಳಿಕ ಹ್ರಸ್ವಸ್ವರಗಳಾದ ಅಂ, ಇಂ, ಉಂ, ಋಂ, ಲೃಂ, ಎಂಬ ಐದು ವರ್ಣಗಳಲ್ಲಿ ಒಂದೊಂದು ಮಂತ್ರಕ್ಕೆ ಒಂದೊಂದರಂತೆ ಸೇರಿಸಿ, ಹಿಂದೆಹೇಳಿದ ಪರಮೇಶ್ವರನ ಈಶಾನಾದಿ ಪಂಚವಕ್ತ್ರಗಳನ್ನು ಒಂದೊಂದಾಗಿ ಉಚ್ಚರಿಸುತ್ತಾ ತನ್ನ ಮುಖದಲ್ಲಿ ಮತ್ತು ಸುತ್ತಲೂ ಪೂರ್ವ, ದಕ್ಷಿಣ, ಉತ್ತರ, ಪಶ್ಚಿಮದಿಕ್ಕುಗಳಲ್ಲಿ ನ್ಯಾಸಮಾಡಬೇಕು. ಮಂತ್ರಕ್ರಮವು ಹೀಗಿರುವುದು:—

ಓಂ ಹ್ರೌಂ ಐಂ ಅಂ ಈಶಾನಾಯ ನಮಃ (ಮುಖೇ)
ಓಂ ಹ್ರೌಂ ಐಂ ಇಂ ತತ್ಪುರುಷಾಯ ನಮಃ (ಪೂರ್ವಮುಖೇ)
ಓಂ ಹ್ರೌಂ ಉಂ ಅಘೋರಾಯನಮಃ (ದಕ್ಷಿಣಮುಖೇ)

ಏಭಿಸ್ತು ಪಂಚಭಿರ್ಮಂತ್ರೈರೀಶಾನಾದೀನಿ ವಿನ್ಯಸೇತ್ ।
ವಕ್ತ್ರಾಣಿ ಪೂರ್ವಮುಕ್ತಾನಿ ಸ್ವಮುಖೋರ್ಧ್ವೇ ತು ಪೂರ್ವತಃ ॥ ೧೬೭ ॥

ದಕ್ಷಿಣೋತ್ತರಯೋಃ ಪಶ್ಚಾತ್ ಪಶ್ಚಿಮೇ ಚಾಪಿ ವಿನ್ಯಸೇತ್ ।
ಹೃದಯಾದಿಷಡಂಗಾನಿ ದೀರ್ಘೈರಾದ್ಯಸ್ವರೈಃ ಪುನಃ ॥ ೧೬೮ ॥

ನ್ಯಸೇತ್ತತಃ ಪಂಚಬಾಣಾನ್ಮೂರ್ಧಾದಿಷ್ವಥ ವಿನ್ಯಸೇತ್ ।
ಓಂ ಹ್ರಾಂ ಕ್ಲೀಂ ಸೌಂ ದ್ರಾವಣಾಯ ನ್ಯಸೇನ್ಮೂರ್ಧ್ನಿ ತತಃ ಪುನಃ ॥

ಓಂ ಹ್ರಾಂ ಕ್ಷೋಭಣಬಾಣಾಯ ಪದ್ಭ್ಯಾಂ ನಮ ಇತೀರಯೇತ್ ।
ಓಂ ಕ್ಲೀಂ ಪ್ಲೀಂ ಹ್ರೀಂ ಸಮಾಸ್ಯಂ ತು ವಷಟ್‌ಕಾರಾಂತಾರ್ಧಚಂದ್ರಕೈಃ ॥

ಓಂ ಹ್ರಾಂ ಐಂ ಋಂ ವಾಮದೇವಾಯ ನಮಃ (ಉತ್ತರಮುಖೇ)
ಓಂ ಹ್ರಾಂ ಐಂ ಲೃಂ ಸದ್ಯೋಜಾತಾಯ ನಮಃ (ಪಶ್ಚಿಮಮುಖೇ)
ಈರೀತಿ ನ್ಯಾಸಮಾಡಬೇಕು. ಹೃದಯಾದಿ ಷಡಂಗಗಳನ್ನು ದೀರ್ಘಸ್ವರಗಳಿಂದ ನ್ಯಾಸಮಾಡಬೇಕು. ಹೇಗೆಂದರೆ:—
ಓಂ ಹ್ರಾಂ ಐಂ ಆಂ ಹೃದಯಾಯನಮಃ (ಹೃದಯೇ)
ಓಂ ಹ್ರಾಂ ಐಂ ಈಂ ಶಿರಸೇಸ್ವಾಹಾ (ಶಿರಸಿ)
ಓಂ ಹ್ರಾಂ ಐಂ ಊಂ ಶಿಖಾಯೈ ವಷಟ್ (ಶಿಖಾಯಾಂ)
ಓಂ ಹ್ರಾಂ ಐಂ ಋಂ ಕವಚಾಯ ಹುಂ (ಭುಜಯೋಃ)
ಓಂ ಹ್ರಾಂ ಐಂ ೞಂ ನೇತ್ರತ್ರಯಾಯ ವೌಷಟ್ (ನೇತ್ರಯೋಃ)
ಓಂ ಹ್ರಾಂ ಐಂ ಅಂ ಆಂ ಇಂ ಈಂ ಉಂ ಊಂ ಋಂ ಋಂ ಲೃಂ ೞಂ ಅಸ್ತ್ರಾಯ ಫಟ್ ಎಂದು ನ್ಯಾಸಮಾಡಬೇಕು.

೧೬೯-೧೭೦. ಅನಂತರದಲ್ಲಿ ಕಾಮದೇವನ ಆಕರ್ಷಣ ಸಂಮೋಹನಾದಿ ಐದು ಬಾಣಬೀಜಾಕ್ಷರಗಳನ್ನೂ, ಶಿರಸ್ಸೇ ಮೊದಲಾದ ಅಂಗಗಳಲ್ಲಿ ನ್ಯಾಸಮಾಡಬೇಕು. "ಓಂ, ಹ್ರಾಂ, ಕ್ಲೀಂ, ಸೌಂ, ದ್ರಾವಣಾಯ" ಎಂದು ಬೀಜಾಕ್ಷರಗಳನ್ನು ಶಿರಸ್ಸಿನಲ್ಲಿ ಪುನಹ ನ್ಯಾಸಮಾಡಬೇಕು. "ಓಂ ಹ್ರಾಂ ಕ್ಷೋಭಣಬಾಣಾಯ ಪದ್ಭ್ಯಾಂ ನಮಃ" ಎಂದು ಕಾಲುಗಳಲ್ಲಿ ನ್ಯಾಸಮಾಡಬೇಕು. "ಓಂ ಕ್ಲೀಂ ಪ್ಲೀಂ ಹ್ರೀಂ" ಎಂಬ ಬೀಜಾಕ್ಷರಗಳನ್ನು ವಷಟ್ಕಾರ,ಬಿಂದ್ವನುಸ್ವಾರಗಳನ್ನೂ ಸೇರಿಸಿ ಓಂ ಕ್ಲೀಂ ಪ್ಲೀಂ ಹ್ರೀಂ ವಷಟ್ ಎಂದು ಮುಖದಲ್ಲಿ ನ್ಯಾಸಮಾಡಬೇಕು. ಶಿಷ್ಟದಲ್ಲಿ ಸಂಮೋಹನ ಬೀಜಾಕ್ಷರಗಳನ್ನು ನ್ಯಾಸಮಾಡಬೇಕು.

ವಕ್ತ್ರೇ ವಶೀಕೃತಂ ಲಿಂಗೇ ಸಂಮೋಹನಮುಧೋ ನ್ಯಸೇತ್ ।
ಆಕರ್ಷಣಂ ತಥಾ ಬಾಣಂ ಹೃದಿ ಮಂತ್ರೈಃ ಕ್ರಮಾನ್ನ್ಯಸೇತ್ ॥ ೧೭೧ ॥

ವಾಗ್ಭವಾದ್ಯಂ ತಕಾರಾಂತೋ ವಷಟ್ಕಾರಸಮನ್ವಿತಃ ।
ತ್ರಿಃ ಶೇಷಸ್ವರ ಏವಾತ್ರ ಚಂದ್ರಾರ್ದ್ಧೇ ಬಿಂದುಸಂಯುತಃ ॥ ೧೭೨ ॥

ಏಭಿಸ್ತು ಪಂಚಭಿರ್ಮಂತ್ರೈರಷ್ಟಶಕ್ತೀಃ ಕ್ರಮಾದಿಮಾಃ ।
ಏತೇಷು ಚಾಷ್ಟಸ್ಥಾನೇಷು ವಿನ್ಯಸೇನ್ಮಂತ್ರವಿತ್ಪುನಃ ॥ ೧೭೩ ॥

ಸುಭಗಾಂ ಚ ಭಗಾಂ ದೇವೀಂ ತೃತೀಯಾಂ ಭಗರೂಪಿಣೀಂ ।
ಭಗಮಾಲಾಂ ಚತುರ್ಥೀಂ ತು ಅನಂಗಕುಸುಮಾಂ ತತಃ ॥ ೧೭೪ ॥

ಅನಂಗಮೇಖಲಾಂ ಪಶ್ಚಾದನಂಗಮದನಾಂ ತಥಾ ।
ಅಷ್ಟಮೀಂ ಚ ತಥಾ ದೇವೀಂ ಮದವಿಭ್ರಮಮಂಥರಾಂ ॥ ೧೭೫ ॥

ರೂಪತೋ ಧ್ಯಾನತಶ್ಚೈಷಾ ಯಥಾ ತ್ರಿಪುರಾಭೈರವೀ ।
ಲಲಾಟಭ್ರೂಮಧ್ಯಭಾಗಮುಖಕರ್ಣಾಂತಕತಕೇ ॥ ೧೭೬ ॥

೧೭೧-೧೭೫. ಆಕರ್ಷಣ ಬಾಣವನ್ನು, ಅದರ ಬೀಜಾಕ್ಷರಗಳಿಂದ ಹೃದಯದಲ್ಲಿ ಕ್ರಮವಾಗಿ ನ್ಯಾಸಮಾಡಬೇಕು. ವಾಗ್ಭವಬೀಜಾಕ್ಷರವನ್ನು, ತವರ್ಗದ ವ್ಯಂಜನ ವರ್ಣಗಳಿಗೆ ವಷಟ್ಕಾರದೊಡನೆ ದೀರ್ಘವಾದ ಸ್ವರಗಳನ್ನೂ, ಬಿಂದು ಅನುಸ್ವಾರಗಳನ್ನೂ ಸೇರಿಸಿ ಆಗುವ ಐದು ಮಂತ್ರಗಳನ್ನು ಕ್ರಮವಾಗಿ ಈ ಎಂಟು ಶಕ್ತಿಗಳನ್ನೂ ಈ ಎಂಟು ಸ್ಥಾನಗಳಲ್ಲಿ ಮಂತ್ರಜ್ಞನಾದವನು ಕ್ರಮವಾಗಿ ಪುನಃ ನ್ಯಾಸಮಾಡಬೇಕು.

೧೭೪-೧೭೬. ಸುಭಗಾ, ಭಗಾ, ಭಗರೂಪಿಣೀ, ಭಗಮಾಲಾ, ಅನಂಗಕುಸುಮಾ, ಅನಂಗಮೇಖಲಾ, ಅನಂಗಮದನಾ, ಮದವಿಭ್ರಮಮಂಥರಾ ಎಂಬ ಈ ಎಂಟು ದೇವಿಯರನ್ನೂ ಅವರವರ ರೂಪಕ್ಕನುಸಾರವಾಗಿ ತ್ರಿಪುರಭೈರವೀದೇವಿಯನ್ನು ಧ್ಯಾನಮಾಡಿದಂತೆ ಧ್ಯಾನಮಾಡಬೇಕು. ಬಳಿಕ ಹಿಂದೆ ಹೇಳಿದ ಬೀಜಾಕ್ಷರಗಳಿಂದ ಈ ಎಂಟು ಶಕ್ತಿದೇವಿಯರನ್ನೂ ಹಣೆ, ಹುಬ್ಬಿನ ಮಧ್ಯಭಾಗ, ಮುಖ, ಕಿವಿಯಕೊನೆ, ಕುತ್ತಿಗೆ, ಹೃದಯ, ನಾಭಿ, ಲಿಂಗ ಎಂಬ ಎಂಟು ಪ್ರದೇಶಗಳಲ್ಲಿ ನ್ಯಾಸಮಾಡಬೇಕು.

ಹೃನ್ನಾಭಿಲಿಂಗೇಷ್ವೇವಾತ್ರ ನ್ಯಸ್ತವ್ಯಾ ಅಷ್ಟಶಕ್ತಯಃ ।
ಶಿರೋಲಲಾಟಭ್ರೂಯುಗ್ಮಕರ್ಣನೇತ್ರದ್ವಯೇಷು ಚ ॥ ೧೭೭ ॥

ಗಂಡಯೋರಥ ನಾಸಾಯಾಂ ದಂತವೀಥ್ಯಾಂ ಮುಖೇ ತಥಾ ।
ಚತುರ್ದಶ ಪದೇಷ್ವೇಷು ನ್ಯಸೇಚ್ಚತುರ್ದಶ ಸ್ವರಾನ್ ॥ ೧೭೮ ॥

ಚಿಬುಕೇ ತ್ವಥ ಗ್ರೀವಾಯಾಂ ಕಂಠದೇಶೇ ತು ಪಾರ್ಶ್ವಯೋಃ ।
ಸ್ತನಯೋಃ ಕಕ್ಷಯೋಶ್ಚಾಪಿ ಕಫೋಣ್ಯೋರ್ಹಸ್ತಯೋಸ್ತಥಾ ॥ ೧೭೯ ॥

ತತ್ಪೃಷ್ಠಯೋಸ್ತಥಾ ನಾಭೌ ಲಿಂಗೇ ಚೋರುದ್ವಯೇ ತಥಾ ।
ಅಷ್ಠೀವದೋರ್ಜಂಘಯೋಸ್ತು ಸ್ಫಿಚೋಸ್ತು ಪದಮೂಲಯೋಃ ॥೧೮೦॥

ಚರಣಾಂಗುಷ್ಠಯೋಃ ಕಾದಿಮದ್ಯಾನ್ ವರ್ಣಾಂಸ್ತು ವಿನ್ಯಸೇತ್ ।
ಮೇಖಲಾಯಾಂ ಕಂಠದೇಶೇ ಬಾಹುಭೂಷಣಭಾಗತಃ ॥ ೧೮೧ ॥

ಹರೇಃ ಸ್ರಜಿ ಕುಂಡಲೇ ಚ ಕೇಶಬಂಧೇ ತಥೈವ ಚ ।
ಚೂಡಾಮಣೌ ಚ ನ್ಯಸ್ತವ್ಯಾ ನಕಾರಾದ್ಯಾಃ ಕ್ರಮಾತ್ಪುನಃ ॥ ೧೮೨ ॥

೧೭೭-೧೭೮. ಶಿರಸ್ಸು, ಹಣೆ, ಎರಡು ಹುಬ್ಬುಗಳು, ಎರಡು ಕಿವಿ, ಎರಡು ಕಣ್ಣುಗಳು, ಎರಡು ಗಂಡಪ್ರದೇಶಗಳು, ಮೂಗು, ಮೇಲೆ ಕೆಳಗಿನ ಎರಡು ದಂತ ಪಂಗ್ತಿಗಳು, ಮುಖ ಈ ಹದಿನಾಲ್ಕು ಪ್ರದೇಶಗಳಲ್ಲಿ ಅಕಾರಾದಿ ಹದಿನಾಲ್ಕು ಸ್ವರಗಳನ್ನೂ ನ್ಯಾಸಮಾಡಬೇಕು.

೧೭೯-೧೮೦. ಚಿಬುಕ, ಕುತ್ತಿಗೆ, ಕಂಠಪ್ರದೇಶ, ಎರಡು ಪಾರ್ಶ್ವಗಳು, ಎರಡು ಕೈಗಳು, ಕೈಯಿನ ಹಿಂಬಾಗ, ನಾಭಿ, ಲಿಂಗ, ಊರುದ್ವಯ, ಊರುದ್ವಯದ ಸಂಧಿಪ್ರದೇಶ, ತೋಳು, ಜಂಘಾಪ್ರದೇಶ, ಕಟಿಪ್ರದೇಶ, ಕಾಲಿನ ಮೂಲಭಾಗ, ಕಾಲಿನ ಹೆಬ್ಬೆರಳು, ಈ ಇಪ್ಪತ್ತೈದು ಪ್ರದೇಶಗಳಲ್ಲಿ ಕಕಾರ ಮೊದಲಾಗಿ ಮಕಾರದ ವರೆಗೆ ಇರುವ ಇಪ್ಪತ್ತೈದು ಅಕ್ಷರಗಳನ್ನು ನ್ಯಾಸಮಾಡಬೇಕು.

೧೮೧-೧೮೨. ಸೊಂಟ, ಕುತ್ತಿಗೆ, ಭುಜಕೀರ್ತಿಯನ್ನು ಇಡುವ ಪ್ರದೇಶ, ಹಾರವನ್ನು ಹಾಕುವ ಜಾಗ, ಕುಂಡಲವನ್ನು ಇಡುವ ಜಾಗ, ತಲೆಗೂದಲಿನ ಗಂಟಿನ ಜಾಗ, ನೆತ್ತಿ ಈ ಪ್ರದೇಶಗಳಲ್ಲಿ ನಕಾರ ಮೊದಲಾಗಿರುವ ವರ್ಣಗಳನ್ನು ನ್ಯಾಸ ಮಾಡಬೇಕು.

ಮಂತ್ರಾಕ್ಷರಾಣಿ ತ್ರೀಣ್ಯೇವ ಸಂಧಿತಾನಿ ಪುನಸ್ತಥಾ ।
ಪ್ರಾತಿಲೋಮ್ಯೇನ ವಿನ್ಯಸ್ಯ ಮಂತ್ರೈಮೂರ್ಧ್ನಿ ತ್ರಿಧಾ ತ್ರಿಧಾ ॥ ೧೮೩ ॥

ಅಮೃತಾಂ ಯೋಗಿನೀಂ ವಿಶ್ವಯೋಗಿನೀಂ ಚಾಕ್ಷರಕ್ರಮಾತ್ ।
ತತೋ ಬೀಜತ್ರ್ಯಕ್ಷರಾಣಿ ಮೂರ್ಧ್ನಿ ಬಾಹೌ ತಥಾ ಹೃದಿ ॥ ೧೮೪ ॥

ವಿನ್ಯಸ್ಯ ಪೂರ್ವವತ್ಪೂಜಾಮಾರಭೇನ್ಮಂತ್ರವಿದ್ಬುಧಃ ।
ಪೂರ್ವವತ್ಪೂಜಯೇದ್ದೇವೀಂ ಪೀಠದೇವವಿವರ್ಜಿತಾಂ ॥ ೧೮೫ ॥

ವಿಶೇಷತೋ ಹ್ಯಷ್ಟಶಕ್ತೀಃ ಕ್ರಮಾತ್ತು ಸುಭಗಾದಿಕಾಃ ।
ಮಂಡಲಸ್ಯಾಷ್ಟದಿಗ್ಭಾಗೇ ಪೂರ್ವಾದೌ ಪರಿಚಿಂತಯೇತ್ ॥ ೧೮೬ ॥

ತ್ರಿಕೋಣಾಗ್ರೇಽಮೃತಾದ್ಯಾಸ್ತು ಸಂಪೂಜ್ಯಾಸ್ತು ತ್ರಿಯೋನಯಃ ।
ಮಧ್ಯೇಷ್ಟಭೂಷಣಾನ್ಯೇವ ಪೂಜೇಯತ್ತು ತತಃ ಪುನಃ ॥ ೧೮೭ ॥

೧೮೩-೧೮೪. ತ್ರಿಪುರಭೈರವಿಯ ಮೂರು ಬೀಜಾಕ್ಷರಗಳನ್ನು ಒಟ್ಟಿಗೆ ಸೇರಿಸಿ ಹಿಂದಿನಂತೆಯೇ ಪುನಹ ಪ್ರತಿಲೋಮ ಕ್ರಮದಿಂದ, ತಲೆಯಲ್ಲಿ ಮೂರು ಮೂರು ಸಾರಿ ನ್ಯಾಸಮಾಡಬೇಕು. ಅಮೃತಾ ಯೋಗಿನೀ, ವಿಶ್ವಯೋಗಿನೀ, ಇವರುಗಳನ್ನು ತ್ರಿಪುರಭೈರವಿಯ ಒಂದೊಂದು ಬೀಜಾಕ್ಷರದಿಂದ ಒಬ್ಬೊಬ್ಬರನ್ನು ನ್ಯಾಸಮಾಡ ಬೇಕು. ಅನಂತರದಲ್ಲಿ ಮೂರುಬೀಜಾಕ್ಷರಗಳನ್ನೂ ಸೇರಿಸಿ, ತಲೆ, ತೋಳು, ಹೃದಯ, ಇವುಗಳಲ್ಲಿ ನ್ಯಾಸಮಾಡಿದನಂತರ ಮಂತ್ರಜ್ಞನಾದವನು ಮೊದಲಿನಂತೆಯೇ ಪೂಜೆಯನ್ನು ಮಾಡಲು ಉಪಕ್ರಮಿಸಬೇಕು.

೧೮೫-೧೮೬. ಹಿಂದಿನಂತೆಯೇ ದೇವಿಯನ್ನು ಪೂಜಿಸಬೇಕು. ಆದರೆ ಈಗ ಪೀಠದೇವತೆಗಳ ಪೂಜೆಯನ್ನು ಮಾಡಬೇಕಾಗಿಲ್ಲ. ಕ್ರಮವಾಗಿ ಸುಭಗಾ ಮೊದಲಾದ ಎಂಟು ಶಕ್ತಿಗಳನ್ನು ಮಂಡಲದ ಪೂರ್ವವೇ ಮೊದಲಾದ ಎಂಟು ದಿಕ್ಕುಗಳಲ್ಲಿ ಧ್ಯಾನಮಾಡಬೇಕು.

೧೮೭. ತ್ರಿಕೋಣದ ತುದಿಯಲ್ಲಿ ಅಮೃತಾದಿಯಾದ ಮೂರು ಯೋಗಿನಿಯರನ್ನು ಎಂದರೆ, ಅಮೃತಾ, ಯೋಗಿನೀ, ವಿಶ್ವಯೋಗಿನೀ, ಎಂಬ ಯೋಗಿನಿಯರನ್ನು ಪೂಜಿಸಬೇಕು. ಮಧ್ಯದಲ್ಲಿ ಇಷ್ಟವಾದ ಆಭರಣಗಳನ್ನು ಇಟ್ಟು ಕೊನೆಯವರಿಗೂ ಪುನಃ ಪೂಜಿಸಬೇಕು.

ಈಶಾನಾದೀನಿ ವಕ್ತ್ರಾಣಿ ಮಮ ಭೈರವ ಮಧ್ಯತಃ ।
ಪೂಜಯೇತ್ತು ತಥಾ ತತ್ರ ಮನೋಭವಮುಖಾನಪಿ ॥ ೧೪೪ ॥

ಅನ್ಯಚ್ಚ ಪೂಜನೇ ತತ್ರ ಕ್ರಮಃ ಪೂರ್ವೋದಿತಶ್ಚ ಯಃ ।
ಸ ಏವಂ ಸತತಂ ಗ್ರಾಹ್ಯಃ ತ್ರಿಪುರಾಪರಿಪೂಜನೇ ॥ ೧೪೫ ॥

ನಿರ್ಮಾಲ್ಯಧಾರಿಣೀ ದೇವೀ ವೈ ತಸ್ಯಾಃ ಶೃಣು ಭೈರವೀ ।
ವಿಸರ್ಜನಂ ಚೋತ್ತರಸ್ಯಾಂ ತ್ಯಕ್ತ್ವಾ ನಿರ್ಮಾಲ್ಯಮಾಚರೇತ್ ॥ ೧೪೦ ॥

ತ್ರಿಮೂರ್ತಿಂ ಪೂಜಯೇತ್ತ್ವಾಂ ತು ದೇವೀಂ ತ್ರಿಪುರಾಭೈರವೀಂ ।
ನ ಜಪೇತ್ತ್ರಿಶತಾನ್ನ್ಯೂನಂ ಸಾಧಕಸ್ತು ಕದಾಚನ ॥ ೧೪೧ ॥

ಅಂಗುಷ್ಠಮಧ್ಯಮಾನಾಮಾಂಗುಲೀಭಿಸ್ತ್ರಿಸೃಭಿಃ ಪುನಃ ।
ಸದಾ ಪುಷ್ಪಾದಿಕಂ ದದ್ಯಾನ್ಮಾಲಾಂ ತು ತ್ರಿಗುಣಾಂ ಚರೇತ್ ॥ ೧೪೨ ॥

---

೧೪೪. ಈಶಾನ ಮೊದಲಾದ ನನ್ನ (ಈಶ್ವರನ) ಐದು ಮುಖಗಳನ್ನೂ ಭೈರವನ ಮಧ್ಯದಲ್ಲಿ ಪೂಜಿಸುವುದಲ್ಲದೆ ಕಾಮದೇವ ಮೊದಲಾದವರನ್ನೂ ಪೂಜಿಸ ಬೇಕು.

೧೪೫. ಈಗ ಇಲ್ಲಿ ಹೇಳಿರುವ ಕ್ರಮವೂ ಹಿಂದೆ ಹೇಳಿರುವ ಕ್ರಮವೂ ತ್ರಿಪು ರಾದೇವಿಯನ್ನು ಪೂಜೆಮಾಡುವಾಗ ಯಾವಾಗಲೂ ಅನುಸರಿಸತಕ್ಕದ್ದಾಗಿರುವುದು.

೧೪೦. ಈ ದೇವಿಯ ನಿರ್ಮಾಲ್ಯವನ್ನು ಭೈರವೀದೇವಿಯು ಸ್ವೀಕರಿಸುವಳು. ಉತ್ತರದಿಕ್ಕಿನಲ್ಲಿ ನಿರ್ಮಾಲ್ಯವನ್ನು ತೆಗೆದಿಟ್ಟು ಅನಂತರ ವಿಸರ್ಜನೆಯನ್ನು ಮಾಡಬೇಕು.

೧೪೧. ತ್ರಿಪುರಭೈರವೀದೇವಿಯನ್ನು ತ್ರಿಕಾಲದಲ್ಲಿಯೂ ಪೂಜಿಸಬೇಕು. ಸಾಧಕನಾದವನು ಯಾವಾಗಲೂ ಮುನ್ನೂರಕ್ಕಿಂತ ಕಡಿಮೆಯಾಗಿ ಜಪವನ್ನು ಮಾಡಬಾರದು.

೧೪೨. ಅಂಗುಷ್ಠ, ಮಧ್ಯಮಾ, ಅನಾಮಿಕಾ, ಎಂಬ ಈ ಮೂರು ಬೆರಳು ಗಳಿಂದ ಯಾವಾಗಲೂ ಹೂವುಗಳನ್ನು, ದೇವಿಗೆ ಸಮರ್ಪಿಸಬೇಕು. ಹೂವಿನ ಮಾಲೆ ಯನ್ನು ಯಾವಾಗಲೂ ಮೂರು ಎಳೆಯುಳ್ಳದ್ದನ್ನಾಗಿ ಮಾಡಬೇಕು.

ಚರ್ಮಾಸನಮಧಿಷ್ಠಾಯ ಪಶ್ಚಾತ್ಕೃತ್ವಾ ಪದದ್ವಯಂ ।
ಪೂಜಯೇನ್ನಿರ್ಜನೇ ದೇಶೇ ಸಾಧಕೋಽನನ್ಯಮಾನಸಃ ॥ ೧೯೩ ॥

ಆಸಾದಯೇತ್ತು ಪುಷ್ಪಾದಿ ನೈವೇದ್ಯಾದಿ ಚ ಯದ್ಭವೇತ್ ।
ತದ್ಭಾವಮುಪಸ್ತಮುಖ್ಯೇನ ಸತತಂ ಸಾಧಕೋ ಬುಧಃ ॥ ೧೯೪ ॥

ತ್ರಿಚ್ಛಿದ್ರಾ ತ್ರಿಪುರಾ ಪ್ರೋಕ್ತಾ ನ ಸಮ್ಯಕ್ಪೂಜಿತಾ ಯದಿ ।
ಶರೀರೇ ನಿಂದಿತೋ ವ್ಯಾಧಿರ್ಜೀರ್ಯತೇಽವಶ್ಯಮೇವ ಹಿ ॥ ೧೯೫ ॥

ಅವಶ್ಯಾಃ ಪುತ್ರದಾರಾಶ್ಚ ಭೃತ್ಯಾದ್ಯಾಶ್ಚ ಭವಂತಿ ಹಿ ।
ಅಸ್ರಾದ್ಧೋತಾ ಭವೇತ್ಸ್ವಸ್ಯ ಪ್ರಾಣತ್ಯಾಗೋ ನ ಸಂಶಯಃ ॥ ೧೯೬ ॥

ತ್ರಿಚ್ಛಿದ್ರದಾಯಿನೀ ಚೈವಮನ್ಯಥಾ ಪೂಜಿತಾ ಯದಿ ।
ಇತಃ ಪ್ರಕಾರಾ ಸತತಂ ಸಮ್ಯಗ್ವೇತಾಲಭೈರವ ॥ ೧೯೭ ॥

---

೧೯೩. ಸಾಧಕನು ಚರ್ಮಾಸನವನ್ನು ಹಾಸಿ ಕೂತುಕೊಂಡು, ಎರಡು ಕಾಲುಗಳನ್ನೂ ಹಿಂದಕ್ಕೆ ಇಟ್ಟುಕೊಂಡು ಜನಸಂಚಾರವಿಲ್ಲದ ಪ್ರದೇಶದಲ್ಲಿ ಏಕಾಗ್ರ ಚಿತ್ತದಿಂದ ದೇವಿಯನ್ನು ಪೂಜಿಸಬೇಕು.

೧೯೪. ನೈವೇದ್ಯ, ಪುಷ್ಪ ಇವೇ ಮೊದಲಾದ ಪೂಜಾಸಾಮಗ್ರಿಗಳನ್ನು ಸಾಧಕನಾದವನು ತನ್ನ ಎಡಗೈಯಿಂದಲೇ ದೇವಿಗೆ ಒಪ್ಪಿಸಬೇಕು.

೧೯೫. ತ್ರಿಪುರಾದೇವಿಯು ತ್ರಿಚ್ಛಿದ್ರವುಳ್ಳವಳು ಎಂದರೆ, ಬಾಲಾತ್ರಿಪುರಾ, ಮಧ್ಯಾತ್ರಿಪುರಾ, ತ್ರಿಪುರಭೈರವೀ ಎಂದು ಮೂರು ರೂಪಗಳುಳ್ಳವಳು. ಇವಳು ಸರಿಯಾಗಿ ಪೂಜಿಸಲ್ಪಡದಿದ್ದಲ್ಲಿ ಶರೀರದಲ್ಲಿ ನಿಂದಿತವಾದ ರೋಗವು ಖಂಡಿತವಾಗಿಯೂ ಬರುವುದು.

೧೯೬. ಖಂಡಿತವಾಗಿಯೂ ಹೆಂಡತಿಯೂ, ಮಕ್ಕಳೂ, ಭೃತ್ಯರೂ ಸಹ ವ್ಯಾಧಿಗ್ರಸ್ತರಾಗುವರು. ಅಸ್ರದಿಂದ ಹೋಮಮಾಡುವುದಾದರೆ ಸಾಧಕನಾದ ತನಗೆ ಮರಣವಾಗುವುದು ನಿಜವು.

೧೯೭. ಎಲೈ ವೇತಾಲಭೈರವನೇ, ತ್ರಿಪುರಾದೇವಿಯು, ನಾನು ಈಗ ಹೇಳಿದ ರೀತಿಗಿಂತಲೂ ಬೇರೆಯ ರೀತಿಯಿಂದ ಪೂಜಿಸಲ್ಪಟ್ಟರೆ, ಆಗ ತ್ರಿಚ್ಛಿದ್ರವನ್ನು ಎಂದರೆ ರೋಗಾದಿಬಾಧೆಯನ್ನು ಕೊಡುವಳು, ಇದು ಖಂಡಿತವು.

ಏಷಾ ಚ ತ್ರಿಪುರಾದೇವೀ ಯಾಶ್ಚಾನ್ಯಾಃ ಪೂರ್ವಭಾಷಿತಾಃ ।
ಸರ್ವಾಸ್ತು ಮಾಯಾ ಭೈರವ್ಯಾ ಯೋಗನಿದ್ರಾ ಜಗತ್ಪ್ರಸೂಃ ॥ ೧೯೪ ॥

ತಸ್ಯಾಃ ಪ್ರಪಂಚರೂಪೈಸ್ತು ಬಹುಭಿಃ ಸೈವ ಕ್ರೀಡತಿ ।
ಮಹಾಮಾಯಾ ಮೂಲಭೂತಾ ತತಸ್ತು ಶಾರದಾಪುರಾ ॥ ೧೯೯ ॥

ಉಮಾ ತತಃ ಶೈಲಪುತ್ರೀ ಮತ್ಪ್ರಿಯಾಯಾಸ್ತತಸ್ತ್ವಮಾಃ ।
ಉಗ್ರಚಂಡಾ ಪ್ರಚಂಡಾದ್ಯಾಸ್ತ್ರಿಪುರಾದ್ಯಾಸ್ತಥೈವ ಚ ॥ ೨೦೦ ॥

ತಾಸಾಂ ಚಾಪಿ ಸದೈವಾಹಂ ಮಹಾಭೈರವರೂಪಧೃಕ್ ।
ನಾಯಕೋ ಸುತರಾಂ ತಾಭಿರ್ನಿತ್ಯಂ ನಿತ್ಯಂ ವಸೇದ್ಬುಧಃ ॥ ೨೦೧ ॥

ಮಮ ಭೈರವರೂಪಸ್ಯ ಮಂತ್ರಃ ಪೂರ್ವಂ ಮಯೋದಿತಃ ।
ರೂಪಂ ಚೋಕ್ತಂ ಪೂಜನೇಷು ತ್ರಿಪುರಾಯಾಃ ಕ್ರಮಃ ಸ್ಮೃತಃ ॥ ೨೦೨ ॥

೧೯೮-೨೦೦. ಈ ತ್ರಿಪುರಾದೇವಿಯೂ ಮತ್ತು ಯಾವ ಇತರ ದೇವಿಯರನ್ನು ನಾನು ಹೇಳಿದೆನೋ ಅವರೆಲ್ಲರೂ ಭೈರವೀದೇವಿಯ ಅಂಶದಿಂದ ಆದವರು. ಜಗತ್ತನ್ನು ಸೃಷ್ಟಿಮಾಡುವ ಯೋಗನಿದ್ರೆಯು ತನ್ನ ಅನೇಕ ವಿಧವಾದ ರೂಪಾಂತರಗಳಿಂದ ಕ್ರೀಡಿಸುತ್ತಿರುವಳು. ಮಹಾಮಾಯೆಯು ಮೂಲಕಾರಣಳಾಗಿರುವಳು. ಬಳಿಕ ಶಾರದಾದೇವಿಯೂ, ಆಮೇಲೆ ಉಮಾದೇವಿಯೂ, ನನಗೆ ಪ್ರೀತಿಪಾತ್ರಳಾದ ಶೈಲಪುತ್ರಿಯೂ, ಆಮೇಲೆ ಉಗ್ರಚಂಡಾ, ಪ್ರಚಂಡಾ, ತ್ರಿಪುರಾ ಇವರೇ ಮೊದಲಾದ ದೇವಿಯರು ಮಂತ್ರಶಾಸ್ತ್ರಕ್ರಮದಿಂದ ಹೇಳಲ್ಪಟ್ಟಿರುವರು.

೨೦೧. ನಾನು ಮಹಾಭೈರವನೆಂಬ ರೂಪವನ್ನು ಧರಿಸಿಕೊಂಡು ಯಾವಾಗಲೂ, ಅವರೆಲ್ಲರಿಗೂ ಪತಿಯಾಗಿರುವೆನು ಮತ್ತು ಅವರಜೊತೆಯಲ್ಲಿರುವೆನು. ಆದ್ದರಿಂದ ಸಾಧಕನು ಇದನ್ನು ತಿಳಿದು ಯಾವಾಗಲೂ ಪೂಜೆಮಾಡಬೇಕು.

೨೦೨-೨೦೩. ಭೈರವರೂಪವಿಂದಿರುವ ನನ್ನ ಮಂತ್ರವು ಮೊದಲು ನನ್ನಿಂದಲೇ ಹೇಳಲ್ಪಟ್ಟಿರುವುದು. ತ್ರಿಪುರಾದೇವಿಯ ರೂಪವೂ, ಪೂಜೆಯ ಕ್ರಮವೂ ಸಹ ನನ್ನಿಂದ ಹೇಳಲ್ಪಟ್ಟಿರುವುದು. "ಮಹಾ ಭೈರವಂ ವಿದ್ಮಹೇ ಕಾಲರುದ್ರಾಯ ಧೀಮಹಿ॥

ಮಹಾಭೈರವಂ ವಿದ್ಮಹೇ ಕಾಲರುದ್ರಾಯ ಧೀಮಹಿ ।
ತನ್ನಃ ಕಾಮೋ ಭೈರವಸ್ತು ಕ್ಲೀದೀಂ ನಿತ್ಯಂ ಪ್ರಚೋದಯಾತ್ ॥ ೨೦೩ ॥

ಏಷಾ ಭೈರವರೂಪಸ್ಯ ಗಾಯತ್ರೀ ಮೇ ಪ್ರತಿಷ್ಠಿತಾ ।
ಯಥೇಷ್ಟಮಾಂಸಮದ್ಯಾದಿ ಭೋಜನಾರ್ಥಂ ಮಯಾ ಧೃತಃ ॥ ೨೦೪ ॥

ಮಹಾಭೈರವಕಾಯೋಽಯಂ ತಥಾ ಸ್ತ್ರೀರತಿಸಂಗಮೇ ।
ಅಯಂ ತು ವಾಮ್ಯಭಾವೇನ ಪೂಜ್ಯೋ ಮದ್ಯಾದಿಭಿಃ ಸದಾ ॥ ೨೦೫ ॥

ವಾಮಃ ಕಾಯೋ ಬ್ರಾಹ್ಮಣೋಽಪಿ ಮಾಂಸಮದ್ಯಾದಿಮುಕ್ತಯೇ ।
ಕೃತೋ ಮಹಾಮೋಹನಾಮಾ ಚಾರ್ವಾಕಾದಿಪ್ರವರ್ತಕಃ ॥ ೨೦೬ ॥

ವಿಷ್ಣೋರ್ವಾಮಾತ್ಮಿಕಾ ಮೂರ್ತಿಃ ನಾರಸಿಂಹಾಹ್ವಯಾ ಭವೇತ್ ।
ಸ ತು ದಾಕ್ಷಿಣ್ಯವಾಮಾಭ್ಯಾಂ ಪೂಜನೀಯಃ ಸದಾ ಬುಧೈಃ ॥ ೨೦೭ ॥

ತನ್ನಃ ಕಾಮೋ ಭೈರವಸ್ತು ಕ್ಲೀದೀಂ ನಿತ್ಯಂ ಪ್ರಚೋದಯಾತ್" ಇದು ನನ್ನ ಸ್ವರೂಪವಾದ ಮಹಾಭೈರವಗಾಯತ್ರಿಯು.

೨೦೪-೨೦೫. ನನ್ನ ಇಷ್ಟಾನುಸಾರವಾಗಿರುವ ಮಾಂಸ, ಮದ್ಯ ಇವೇ ಮೊದಲಾದವುಗಳಿಂದ ಕೂಡಿದ ಭೋಜನಾದಿಗಳಿಂದಲೂ, ಹಾಗೆಯೇ ಸ್ತ್ರೀಸಹವಾಸವೇ ಮುಂತಾದ ವಿಹಾರಗಳಿಂದಲೂ ಮಹಾಭೈರವನೆಂಬ ಹೆಸರುಳ್ಳ ಈ ನನ್ನ ಶರೀರವು ಚೆನ್ನಾಗಿ ವೃದ್ಧಿಯನ್ನು ಹೊಂದುವುದು. ಈ ಆಕಾರವು ಯಾವಾಗಲೂ ಮದ್ಯವೇ ಮೊದಲಾದವುಗಳಿಂದ ಪೂಜೆಗೆ ಯೋಗ್ಯವಾದದ್ದು.

೨೦೬. ವಾಮಾಚಾರದಿಂದ ಪೂಜಿಸುವ ಬ್ರಾಹ್ಮಣನೂ ಕೂಡ, ದೇವಿಯ ಪೂಜೆಯನ್ನು ಮಾಡುವಾಗ ಮದ್ಯಮಾಂಸಾದಿಗಳನ್ನು ವರ್ಜಿಸಬೇಕು. ಹಾಗಲ್ಲದೆ ಮದ್ಯಮಾಂಸಾದಿಗಳಿಂದ ದೇವಿಯನ್ನು ನಿಷಿದ್ಧರೀತಿಯಲ್ಲಿ ಪೂಜಿಸಿದರೆ, ಮೋಹವನ್ನುಂಟುಮಾಡುವ ಚಾರ್ವಾಕಮತಪ್ರವರ್ತಕನಾಗಿ ಜನಿಸುವನು.

೨೦೭. ನರಸಿಂಹವೆಂಬ ವಿಷ್ಣುವಿನ ಮೂರ್ತಿಯು ವಾಮಾಚಾರದಿಂದ ಪೂಜಿಸಲ್ಪಡುವುದಾದರೂ, ಪ್ರಾಜ್ಞರಾದವರು ಆ ಮೂರ್ತಿಯನ್ನು ವಾಮದಕ್ಷಿಣಾಚಾರಗಳೆರಡರಿಂದಲೂ ಪೂಜಿಸುವರು.

ತಥೈವ ಬಾಲಗೋಪಾಲಮೂರ್ತಿರ್ಜರಾಯುವೇಷ್ಟಿತಾ ।
ಮದ್ಯಮಾಂಸಾಶನೋ ಭೋಗೀ ಲೋಲುಪಃ ಸ್ತ್ರೀಷು ಸರ್ವದಾ ॥ ೨೦೮ ॥

ಬಹ್ವ್ಯಸ್ತು ಚಂಡಿಕಾದೇವ್ಯಾ ವಾಮಿಕಾ ಮೂರ್ತಯಃ ಸ್ಮೃತಾಃ ।
ಲಕ್ಷ್ಮ್ಯಾಸ್ತು ವಾಮಿಕಾ ಮೂರ್ತಿರುಕ್ತಾ ದಹನಭೈರವೀ ॥ ೨೦೯ ॥

ಯಾಗ್ನಿದಾಹಂ ಪುರಗ್ರಾಮನುಂದಿರೇಷ್ವಕರೋದಿಯಂ ।
ಸುಪೂಜಿತಾ ಮಹಾಲಕ್ಷ್ಮೀರ್ದೇಹನ್ಯಾಸಾತ್ತು ಪೂಜಯೇತ್ ॥ ೨೧೦ ॥

ವಾಗ್ಭೈರವೀ ಸರಸ್ವತ್ಯಾ ವಾಮಿಕಾ ಮೂರ್ತಿರೀರಿತಾ ।
ತಸ್ಯಾ ಮಂತ್ರಂ ಪುರಾ ಪ್ರೋಕ್ತಂ ಶುಕ್ಲವರ್ಣಾ ತು ಸಾ ಸ್ಮೃತಾ ॥ ೨೧೧ ॥

ಮಧ್ಯಾಯಾಸ್ತ್ರಿಪುರಾಯಾಸ್ತು ರೂಪಂ ಧ್ಯಾನಮಿಹೋಚ್ಯತೇ ।
ಪೂಜಾಕ್ರಮಸ್ತಥೈವೋಕ್ತಃ ಸರ್ವತ್ರೈವ ತು ಭೈರವ ॥ ೨೧೨ ॥

---

೨೦೮. ಅವರಂತೆಯೇ ವಿಷ್ಣುವಿನ ಬಾಲಗೋಪಾಲಮೂರ್ತಿಯು ಮದ್ಯ ಮಾಂಸಗಳಲ್ಲಿಯೂ, ಸ್ತ್ರೀಯರಲ್ಲಿಯೂ ಯಾವಾಗಲೂ ಆಸಕ್ತನಾಗಿರುವುದರಿಂದ ಆ ಮೂರ್ತಿಯನ್ನು ಆರೀತಿಯಲ್ಲಿಯೇ ಪೂಜಿಸಬೇಕು.

೨೦೯. ಚಂಡಿಕಾದೇವಿಯ ಅನೇಕ ಆಕಾರಗಳು ವಾಮಾಚಾರಕ್ಕೆ ಸಂಬಂಧ ಪಟ್ಟವುಗಳು. ಲಕ್ಷ್ಮ್ಯಾಯ ವಾಮಮಾರ್ಗದ ಮೂರ್ತಿಯು, ದಹನಭೈರವೀ ಎಂದು ಹೆಸರುಳ್ಳದ್ದಾಗಿರುವುದು.

೨೧೦. ನಗರ, ಹಳ್ಳಿ ಮನೆ ಇವುಗಳಲ್ಲಿ ಈ ದಹನಭೈರವಿಯ ಮೂರ್ತಿಯು ಅಗ್ನಿಯಿಂದ ಸುಡುವ ಕಾರಣದಿಂದ ಈ ಲಕ್ಷ್ಮ್ಯಾಗೆ ಈ ಹೆಸರು ಬಂದಿತು. ಆದುದರಿಂದ ಈ ಲಕ್ಷ್ಮ್ಯಾಯ ದಹನಭೈರವೀಮೂರ್ತಿಯನ್ನು ದೇಹನ್ಯಾಸಾದಿಗಳಿಂದ ಪೂಜಿಸಬೇಕು.

೨೧೧. ಸರಸ್ವತೀದೇವಿಯ ವಾಮಾಚಾರದ ಮೂರ್ತಿಯು ವಾಗ್ಭೈರವೀ ಎನ್ನಿಸಿಕೊಳ್ಳುವುದು. ಅದು ಶುಕ್ಲವರ್ಣದಿಂದ ಕೂಡಿರುವುದು. ಆ ಮೂರ್ತಿಯ ಮಂತ್ರವು ಮೊದಲೇ ಹೇಳಲ್ಪಟ್ಟಿರುವುದು.

೨೧೨. ಮಧ್ಯಾತ್ರಿಪುರಾದೇವಿಯ ರೂಪವೂ, ಧ್ಯಾನವೂ ಇಲ್ಲಿ ಹೇಳಲ್ಪಡುವುದು. ಎಲ್ಲೆ ಭೈರವನೇ ಎಲ್ಲಾಕಡೆಯಲ್ಲಿಯೂ ಪೂಜಾಕ್ರಮವು ಹೇಳಲ್ಪಟ್ಟಿರುವುದು.

ಮಾರ್ತಂಡಭೈರವೋ ನಾಮ ಮೂರ್ತಿಃ ಸೂರ್ಯಸ್ಯ ಕೀರ್ತಿತಾ ।
ಗಣೇಶಸ್ಯಾಗ್ನಿವೇತಾಳಃ ಕಥಿತೋ ವಾಮನಾಮಕಃ ॥ ೨೧೩ ॥

ಏತೇ ವಾಮ್ಯೇನ ಭಾವೇನ ಪೂಜನೀಯಾ ವಿಶೇಷತಃ ।
ತ್ರಿಧಾದ್ಯಸ್ತು ಯಥಾ ಪೂರ್ವಂ ನಮಯೈರ್ಬಲವೈಸ್ತಥಾ ॥ ೨೧೪ ॥

ವಾಂತೈರ್ದ್ವಿರೇಫೈಃ ಸರ್ವತ್ರ ಯಥಾ ಕೃತ್ವಾ ತಥಾ ತಥಾ ।
ಅನುಸ್ವಾರವಿಸರ್ಗಾಭ್ಯಾಂ ಪ್ರಾಕ್ ಶೇಷೌ ಪರಿಕೀರ್ತಿತೌ ॥ ೨೧೫ ॥

ಮಧ್ಯೇ ತು ಕೇವಲಾಃ ಪೂರ್ವಂ ಸಾನುಸ್ವಾರವಿಸೃಷ್ಟಿಭಿಃ ।
ಪಶ್ಚಾದ್ದ್ವಿತ್ರಿಕ್ರಮಾದ್ಯಸ್ತು ವರ್ಣೈರೇಕೇನ ಚೈವ ಹಿ
ವ್ಯಸ್ತೈಃ ಸಮಸ್ತೈರಪಿ ಚದಕಾರಾದಿಷುಸಂಯುತೈಃ । ॥ ೨೧೬ ॥

ಆದ್ಯಾಯಾಸ್ತ್ರಿಪುರಾಯಾಸ್ತು ಮಂತ್ರವದ್ಯೋಜಿತೈಸ್ತಥಾ ।
ತಥಾ ತ್ರಿಪುರಭೈರವ್ಯಾ ಮಂತ್ರವಚ್ಚಾಕ್ಷರೈರಪಿ । ॥ ೨೧೭ ॥

---

೨೧೩. ಸೂರ್ಯನ ವಾಮಾಚಾರದ ಮೂರ್ತಿಗೆ ಮಾರ್ತಾಂಡಭೈರವನೆಂದು ಹೆಸರು. ಗಣೇಶನ ವಾಮಮಾರ್ಗದ ಮೂರ್ತಿಗೆ ಅಗ್ನಿವೇತಾಳನೆಂದು ಹೆಸರು.

೨೧೪-೨೧೫. ಈ ಮೂರ್ತಿಗಳೆಲ್ಲವೂ ವಿಶೇಷವಾಗಿ ವಾಮಾಚಾರವಿಂದಲೇ ಪೂಜೆಗೆ ಯೋಗ್ಯವಾಗಿರುವವು. ಮೊದಲು ಹೇಳಿದಂತೆ ನ, ಮ, ಯ, ಬ, ಲ, ವ, ಎಂಬ ಅಕ್ಷರಗಳಿಗೆ ಕಡೆಯಲ್ಲಿ ಎರಡು ರಕಾರಗಳನ್ನೂ, ಅನುಸ್ವಾರವನ್ನೂ ಸೇರಿಸಿ, ಮೂರು ಮೂರಾವರ್ತಿ ನ್ಯಾಸಮಾಡಬೇಕು ಮತ್ತು ಈ ಅಕ್ಷರಗಳಿಗೆ ಚವರ್ಗ ದವರ್ಗ ಗಳನ್ನು ಸೇರಿಸಿ ಬೇರೆಯಾಗಿಯೂ ಒಟ್ಟಿಗೆಸೇರಿಸಿಯೂ ನ್ಯಾಸಮಾಡಬೇಕು.

೨೧೬-೨೧೭. ಮೊದಲು ಅಂ ಎಂಬ ಅನುಸ್ವಾರವನ್ನೂ, ಮಧ್ಯದಲ್ಲಿ ಅನುಸ್ವಾರವಿಲ್ಲದಿರುವ ಕೇವಲ ವರ್ಣಗಳನ್ನು ಒಂದೊಂದಾಗಿಯೂ, ಎರಡೆರಡಾಗಿಯೂ, ಮೂರು ಮೂರಾಗಿಯೂ ಸೇರಿಸಿ ಕಡೆಯಲ್ಲಿ ಅಃ ಎಂಬ ವಿಸರ್ಗವನ್ನು ಸೇರಿಸಿ, ಅನುಲೋಮಪ್ರತಿಲೋಮಕ್ರಮಗಳಿಂದ ಅಕಾರಾದಿಯಾಗಿ ಕ್ಷಕಾರಾಂತವವರೆಗೆ ನ್ಯಾಸ ಮಾಡಬೇಕು. ಆದ್ಯಾತ್ರಿಪುರಾದೇವಿಯ ಮಂತ್ರದಂತೆ ಇಲ್ಲಿಯೂ ವರ್ಣಾಕ್ಷರಗಳಿಂದ ನ್ಯಾಸಮಾಡಬೇಕು.

ತ್ರಿಶ್ಚತುರ್ದಶಭಿಃ ಕೃತ್ವಾ ಡಾದೀಂಸ್ತ್ರೀಂಸ್ತು ವಿಶಾರಯೇತ್ ।
ದ್ವಿತೀಯಂ ದ್ವಿಗುಣಂ ಕೃತ್ವಾ ಶೇಷೇಽತ್ರಾದೌ ಚ ಯೋಜಯೇತ್ ॥ ೨೧೪ ॥

ವಿಂಶತಿಸ್ತು ಸಹಸ್ರಾಣಿ ಶೇಷೇ ಚಾಪಿ ತ್ರಯೋದಶ
ಆದ್ಯಮಾದ್ಯಂ ತತಃ ಪ್ರೋಕ್ತಂ ವಾಗ್ಭವಾದ್ಯಂ ತೃತೀಯಕಂ ॥ ೨೧೫ ॥

ಏವಂ ಚ ಪರಮಸ್ಯೈತನ್ಮಂತ್ರಾಣಾಂ ಚ ಚತುಷ್ಟಯಂ
ಏತತ್ ಜ್ಞಾತ್ವಾ ನರಃ ಕಾಮಾನಖಿಲಾ ಪ್ರಾಪ್ಯ ಸಂಗತಃ । ॥ ೨೨೦ ॥

ಮೃತೇ ದೇವೀಪುರಂ ಯಾತಿ ಕ್ರಮಾದೇವ ತು ಭೈರವ ॥ ೨೨೧ ॥

ಯಃ ಸಕೃತ್ತು ಜಪೇದೇತತ್ಸಕಲಂ ಮಂತ್ರಸಂಚಯಂ ।
ಪ್ರಥಮಂ ಕಾಮುಕೋ ನ್ಯಸ್ಯ ಸಾಧಕಸ್ತು ತ್ರಿಭಿರ್ದಿನೈಃ ॥ ೨೨೨ ॥

---

೨೧೪. ಆದ್ಯಾತ್ರಿಪುರಾಬೀಜಾಪ್ಪರದಂತೆಯೇ ತ್ರಿಪುರಭೈರವೀಮಂತ್ರದ ಅಕ್ಷರಗಳನ್ನೂ ಡಕಾರಾದಿಯಾಗಿ ಹದಿನಾಲ್ಕು ವರ್ಣಗಳನ್ನೂ, ಮೂರು ಮೂರು ವರ್ಣಗಳಂತೆ ಒಟ್ಟಿಗೆ ಸೇರಿಸಿ ನ್ಯಾಸಮಾಡಬೇಕು. ಎರಡನೆಯ ವರ್ಣಸಮೂಹವನ್ನು ಎರಡೆರಡರಂತೆ ಸೇರಿಸಿ ಆದಿಯಲ್ಲಿ ಉಪಯೋಗಿಸಿ ನ್ಯಾಸಮಾಡಬೇಕು.

೨೧೫-೨೨೧. ಈ ಮಂತ್ರಗಳೆಲ್ಲವೂ ಒಟ್ಟು ಸೇರಿದರೆ ಇಪ್ಪತ್ತುಸಾವಿರದ ಹದಿಮೂರು ಮಂತ್ರಗಳಾಗುವವು. ಇವುಗಳಲ್ಲಿ ಮೊದಲನೆಯ ಮಂತ್ರವೂ, ವಾಗ್ಭವ ಬೀಜಮಂತ್ರದಿಂದ ಪ್ರಾರಂಭವಾಗುವ ಮೂರನೆಯ ಮಂತ್ರವೂ, ಅದರ ಮುಂದಿನ ಮಂತ್ರವೂ ಒಟ್ಟು ನಾಲ್ಕು ಮಂತ್ರಗಳೂ ಹಿಂದೆಯೇ ಹೇಳಲ್ಪಟ್ಟಿರುವವು. ಎಲೈ ಭೈರವನೇ ಈ ಮಂತ್ರಕ್ರಮವನ್ನು ಯಾವ ಪುರುಷನು ಚೆನ್ನಾಗಿ ತಿಳಿದು ಒಂದಾವರ್ತಿಯಾದರೂ ಜಪಮಾಡುವನೋ ಅವನು ಈ ಲೋಕದಲ್ಲಿ ಸಮಸ್ತ ಇಷ್ಟಾರ್ಥಗಳನ್ನೂ ಪಡೆದು, ಮೃತನಾದಮೇಲೆ ದೇವೀಲೋಕವನ್ನು ಸೇರುವನು.

೨೨೨-೨೨೩. ಸಾಧಕನು ಮೊದಲು ತ್ರಿಪುರಭೈರವೀದೇವಿಯನ್ನು ಧ್ಯಾನಿಸುತ್ತಾ ಮೂರು ದಿನಗಳಲ್ಲಿ ನ್ಯಾಸವನ್ನು ಮಾಡಿ ಬಳಿಕ ಜಪಮಾಡಿದರೆ ಅವನು ಮನ್ಮಥನಂತೆ ಸುಂದರಾಕೃತಿಯನ್ನು ಪಡೆದು ಈ ಲೋಕದಲ್ಲಿ ಸಮಸ್ತ ಕಾಮಗಳನ್ನೂ

ಚಿಂತಯನ್ಮನಸಾ ದೇವೀಂ ಸಮ್ಯಕ್ತ್ರಿಪುರಭೈರವೀಂ ।
ಸ ಕಾಮಾನಖಿಲಾ ಪ್ರಾಪ್ಯ ಸ್ವರೂಪೇ ಮದನೋಪಮೇ ॥ ೨೨೩ ॥

ಧಾರ್ಮಿಕೋ ನೃಪತಿರ್ಭೂಯಾದ್ಬ್ರಾಹ್ಮಣೋ ದ್ವಿಜರಾಡ್ಭವೇತ್ ।
ಆರಾಧಿತಶರೀರಸ್ತು ಪಿಶಾಚಾದ್ಯೈಃ ಸದೈವ ಹಿ ॥ ೨೨೪ ॥

ನೀರೋಗಶ್ಚ ಚಿರಾಯುಶ್ಚ ಬಲವಾನಪಿ ಜಾಯತೇ ।
ಏವಂ ತ್ರಿಪುರಭೈರವ್ಯಾ ಮಯಾ ಪ್ರೋಕ್ತಸ್ತ್ವಯಂ ಕ್ರಮಃ ॥ ೨೨೫ ॥

ವೈಷ್ಣವ್ಯಾಸ್ತು ಮಹಾದೇವ್ಯಾಃ ಸಹಸ್ರಾಣಿ ತು ಷೋಡಶ ।
ಶೃಣು ಭೈರವ ಮಂತ್ರಾಣಿ ಶಿವೈಕಾಗ್ರಮನಾಃ ಪುನಃ ॥ ೨೨೬ ॥

ಅಷ್ಟೋತ್ತರಸಹಸ್ರಂ ತು ಚತುಃ ಷಷ್ಟಿಸ್ತಥಾ ತ್ರಯಃ ।
ಮಂತ್ರಾಃ ಪ್ರೋಕ್ತಾ ಮಹಾದೇವ್ಯಾ ಮೂರ್ತಿಭೇದೇನ ತಾಃ ಪುನಃ ॥

ಅನುಸ್ವಾರವಿಸರ್ಗಾಭ್ಯಾಂ ದ್ವಿಗುಣಾಸ್ತೇ ಪುನಃ ಸಮಾಃ ।
ಕಾದಿವ್ಯಂಜನಸಂಯೋಗಾದೂರ್ಧ್ವಾಧೋ ವ್ಯಸ್ತಭಾವತಃ ॥ ೨೨೮ ॥

ಅನುಭವಿಸಿ, ಮುಂದಿನ ಜನ್ಮದಲ್ಲಿ ಧಾರ್ಮಿಕನಾವ ರಾಜನಾಗುವನು. ಬ್ರಾಹ್ಮಣನಾದವನು ಈರೀತಿ ಜಪಮಾಡಿದರೆ ಬ್ರಾಹ್ಮಣರಿಗೆಲ್ಲಾ ಮುಖಂಡನಾಗುವನು.

೨೨೪-೨೨೫. ಪಿಶಾಚಿಗಳೇ ಮೊದಲಾವ ಭೂತಗಣಗಳು ಇವನನ್ನು ಯಾವಾಗಲೂ ಪೂಜಿಸುವವು. ರೋಗರಹಿತನೂ, ಪರಾಕ್ರಮಿಯೂ ಆಗಿ ಬಹುಕಾಲ ಜೀವಿಸುವನು.

೨೨೬-೨೨೭. ಈರೀತಿಯಾಗಿ ತ್ರಿಪುರಭೈರವಿಯ ಮಂತ್ರಕ್ರಮವನ್ನು ಹೇಳಿರುವೆನು. ಈಗ ಮಹಾದೇವಿಯಾದ ವೈಷ್ಣವಿಯ ಮಂತ್ರಗಳನ್ನು ವಿವರಿಸುವೆನು. ಎಲೈ ಭೈರವನೇ, ಇದನ್ನು ಏಕಾಗ್ರಮನಸ್ಸಿನಿಂದ ಕೇಳು. ಈ ವೈಷ್ಣವೀದೇವಿಯ ಮಂತ್ರಗಳು ಮೂರ್ತಿಭೇದಗಳಿಂದ ಹದಿನಾರುಸಾವಿರವೂ, ಸಾವಿರದ ಎಂಟೂ, ಅರವತ್ತುನಾಲ್ಕು ಮತ್ತು ಮೂರು ಎಂದರೆ ಒಟ್ಟು ಹದಿನೇಳುಸಾವಿರವ ಎಪ್ಪತ್ತೈದು ಮಂತ್ರಗಳಾಗುವುವು.

೨೨೮. ಈ ಮಂತ್ರಗಳನ್ನು ಅನುಸ್ವಾರ ವಿಸರ್ಗಗಳನ್ನು ಸೇರಿಸಿ ಉಚ್ಚರಿಸಿದರೆ, ಈಗ ಹೇಳಿರುವುದರ ಎರಡರಷ್ಟಾಗುವುದು, ಮಂತ್ರಜ್ಞನಾದವನು ಕಕಾರ ಮೊದ

ದ್ವಾಭ್ಯಾಂ ತ್ರಿಭಿಶ್ಚ ಸತತಮುದ್ಧರೇನ್ಮಂತ್ರವಿತ್ಪುನಃ ।
ಅಷ್ಟಾವಷ್ಟೌ ತತಃ ಕೃತ್ವಾ ಸಮಸ್ತವ್ಯಸ್ತಸಂಯುತೈಃ ॥ ೨೨೯ ॥

ವಿಸ್ವರೈಃ ಸಸ್ವರೈಶ್ಚಾಪಿ ಸಾನುಸ್ವಾರವಿಸರ್ಗಕೈಃ ।
ಕೇವಲೈರಪಿ ತತ್ತ್ವೈವ ದ್ವಿವ್ಯಸ್ತೈರನ್ತರೈಸ್ತಥಾ ॥ ೨೩೦ ॥

ಏವಮುಚ್ಚೋತ್ತರಂ ಯಾವತ್ಸಂಯೋಗಾಯೋಗಭಾವತಃ ।
ದೇವ್ಯಾಸ್ತು ಷಟ್ ಸಹಸ್ರಾಣಿ ಸಹಸ್ರಾಣಿ ತಥಾ ದಶ ॥ ೨೩೧ ॥

ಮಂತ್ರಾಸ್ತು ಸಂಖ್ಯಯಾ ಖ್ಯಾತಾಃ ಕ್ರಮಾದ್ವೇತಾಲಭೈರವ ।
ಸಮಸ್ತವ್ಯಸ್ತರೂಪೇಣ ವೈಷ್ಣವ್ಯಾ ಯೇ ಮಯೋದಿತಾಃ ॥ ೨೩೨ ॥

ತಾ೯ ಜ್ಞಾತ್ವಾ ಮಾನವೋ ಯಾತಿ ಮಮೈವ ಸದನಂ ಪ್ರತಿ ।
ಅಷ್ಟಮ್ಯಾಂ ಚ ನವಮ್ಯಾಂ ಚ ಸಹಸ್ರಾಣಿ ಚ ಷೋಡಶ ॥ ೨೩೩ ॥

ಲಾದ ವ್ಯಂಜನಗಳನ್ನು ಮೊದಲುಕಡೆಗಳಲ್ಲಿಯೂ, ಒಟ್ಟಾಗಿಯೂ, ಒಂದೊಂದಾಗಿಯೂ, ಎರಡೆರಡಾಗಿಯೂ, ಮೂರು ಮೂರರಂತೆಯೂ ಸೇರಿಸುತ್ತಾ ನ್ಯಾಸಜಪಗಳನ್ನು ಮಾಡಬೇಕು.

೨೨೯-೨೩೧. ಬಳಿಕ ಎಂಟೆಂಟು ಅಕ್ಷರಗಳನ್ನು ಒಂದೊಂದು ಗುಂಪಾಗಿ ಸೇರಿಸಿ, ಅವುಗಳಿಗೆ ಸ್ವರಗಳನ್ನು ಸೇರಿಸಿಯೂ, ಸೇರಿಸದೆಯೂ, ಅನುಸ್ವಾರ ವಿಸರ್ಗಗಳನ್ನು ಸೇರಿಸಿಯೂ, ಸೇರಿಸದೆ ಹಾಗೆಯೇ ಉಚ್ಚರಿಸುತ್ತಲೂ, ಎರಡೆರಡು ಅಕ್ಷರಗಳನ್ನು ಒಟ್ಟಾಗಿ ಸೇರಿಸಿ ಉಚ್ಚರಿಸುತ್ತಲೂ, ವ್ಯತ್ಯಾಸಮಾಡಿ ಉಚ್ಚರಿಸುತ್ತಲೂ ಇದ್ದರೆ, ಈ ಸಂಯೋಗ ವಿಯೋಗಕ್ರಮಗಳಿಂದ ಆಗುವ ವೈಷ್ಣವೀದೇವಿಯ ಮಂತ್ರಗಳೆಲ್ಲವೂ ಸೇರಿ ಆರುಸಾವಿರದ ನೂರೆಂಟು ಮಂತ್ರಗಳಾಗುವುವು.

೨೩೨. ನಾನು ಈಗ ಹೇಳಿದ ಸಮಸ್ತವ್ಯಸ್ತರೂಪಗಳಾದ ವೈಷ್ಣವೀದೇವಿಯ ಮಂತ್ರಗಳನ್ನು ಯಾವ ಪುರುಷನು ತಿಳಿಯುವನೋ ಅವನು ನನ್ನ ಲೋಕವನ್ನು (ಕೈಲಾಸವನ್ನು) ಹೊಂದುವನು.

೨೩೩-೨೩೬. ಎಲೈ ಭೈರವನೇ ಕೇಳು, ಯಾವನು ಅಷ್ಟಮಿಯಲ್ಲಾಗಲಿ, ನವಮಿಯಲ್ಲಾಗಲಿ ವೈಷ್ಣವೀಮೂರ್ತಿಯನ್ನು ಧ್ಯಾನಮಾಡುತ್ತಾ ಏಕಾಗ್ರಮನಸ್ಸಿನಿಂದ ಹದಿನಾರುಸಾವಿರ ಬೀಜಮಂತ್ರಗಳನ್ನು ಒಂದಾವರ್ತಿಯಾದರೂ ಜಪಮಾಡು

ಯೋ ಜಪೇನ್ಮಂತ್ರಬೀಜಾನಿ ಸಕೃದೇವ ತು ಭೈರವ ।
ಧ್ಯಾಯಂಸ್ತು ವೈಷ್ಣವೀಂ ಮೂರ್ತಿಂ ತದೇಕಾಗ್ರಮನಾಃ ಶೃಣು ॥ ೨೩೪ ॥

ನರರಾಜೋ ಭವೇದ್ಭೂಮೌ ಪಂಡಿತಶ್ಚಾತಿಹರ್ಷಿತಃ ।
ಚಿರಾಯುಃ ಸುಖಭೋಗೀ ಸ್ಯಾದುದ್ರಿಕ್ತೋ ಬಲವಾಹನೈಃ ॥ ೨೩೫ ॥

ತಾನ್ಯೇವ ಚಾಷ್ಟಧಾ ಜಪ್ತ್ವಾ ಸರ್ವಭೌಮೋ ನೃಪೋ ಭವೇತ್ ।
ಗಣಾಧ್ಯಕ್ಷೋ ಮೃತೇ ಸ ಸ್ಯಾತ್ತತೋ ಮುಕ್ತಿಮವಾಪ್ನುಯಾತ್ ॥

ಇತಿ ಸಕಲಗುಣೌಘೈರಸ್ತದೋಷಸ್ತು ನಿತ್ಯಂ ।
ಭವತಿ ಕುಲುಷಹಂತಾ ಶ್ರೀ ವಿವೃದ್ಧೈ ಸುಮಂತ್ರಃ ।
ಸತತಮಖಿಲವೇತ್ತಾ ಯೋ ಭವೇದೇತಯೋಸ್ತು
ಸ ಚ ಭವತಿ ಜಿತಾರೀ ರೋಗಶೋಕಪ್ರಮುಕ್ತೈಃ ॥ ೨೩೭ ॥

॥ ಇತಿ ಶ್ರೀಕಾಲಿಕಾಪುರಾಣೇಽಷ್ಟಸಪ್ತತಿತಮೋಽಧ್ಯಾಯಃ ॥

ವನೋ ಅವನಿಗೆ ಉಂಟಾಗುವ ಫಲವನ್ನು ಹೇಳುವೆನು. ಅವನು ಭೂಮಿಯಲ್ಲಿ ರಾಜನಾಗುವನು, ಬಹಳ ಸಂತೋಷಿಯೂ, ಜ್ಞಾನಿಯೂ, ದೀರ್ಘಾಯುವೂ ಆಗಿ, ವಾಹನಾದಿ ಸಮಸ್ತ ಭೋಗಗಳನ್ನೂ ಅನುಭವಿಸುವನು. ಅವುಗಳನ್ನು ಎಂಟುಸಾರಿ ಜಪಮಾಡಿದವನು ಚಕ್ರವರ್ತಿಯಾಗುವನು. ಅವನು ಮೃತನಾದಬಳಿಕ ಗಣಗಳಿಗೆ ಅಧಿಪತಿಯಾಗಿ, ಕಡೆಗೆ ಮೋಕ್ಷವನ್ನು ಹೊಂದುವನು.

೨೩೭. ವೈಷ್ಣವೀದೇವಿಯ ಮಂತ್ರಸ್ವರೂಪವನ್ನು ಈರೀತಿ ವಿವರಿಸಿರುವೆನು. ಈ ಮಂತ್ರವು ಸಮಸ್ತ ಗುಣಗಳಿಂದ ಕೂಡಿ, ದೋಷರಹಿತವಾಗಿರುವುದು. ಸಾಧಕರ ಪಾಪವನ್ನು ನಾಶಮಾಡಿ ಅವರಿಗೆ ಐಶ್ವರ್ಯಾಭಿವೃದ್ಧಿಯನ್ನುಂಟುಮಾಡುವುದು. ಈರೀತಿ ಶ್ರೇಷ್ಠಮಂತ್ರಗಳಾದ ತ್ರಿಪುರಭೈರವೀ ಮತ್ತು ವೈಷ್ಣವೀದೇವಿಯರ ಎರಡು ಮಂತ್ರಗಳನ್ನೂ ತಿಳಿದು ಯಾವ ಸಾಧಕನು ಅನುಷ್ಠಾನ ಮಾಡುವನೋ ಅವನು ತನ್ನ ಸಮಸ್ತ ಶತ್ರುಗಳನ್ನೂ ಜಯಿಸಿ, ರೋಗಶೋಕಾದಿರಹಿತನಾಗಿ ಸುಖದಿಂದ ಬಾಳುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಪ್ಪತ್ತೆಂಟನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ಶ್ರೀಕಾಲಿಕಾಪುರಾಣೇ ಏಕೋನಾಶೀತಿತಮೋऽಧ್ಯಾಯಃ॥

॥ ಶ್ರೀಭಗವಾನುವಾಚ ॥

ನಿಷ್ಪಲ್ಲವದ್ವಾದಶಭಿರ್ಲಕ್ಷೈರ್ಮಂತ್ರಜಪೈಸ್ತಥಾ ।
ಪುರಶ್ಚರೇತ್ಸಾಧಕಸ್ತು ಕಾಮಮಿಷ್ಟಾಪ್ತಿಹೇತವೇ ॥ ೧ ॥

ಜಾತೀಪುಷ್ಪಂ ಚ ವಕುಳಂ ಮಾಲತೀಪುಷ್ಪಮೇವ ಚ ।
ನಂದ್ಯಾವರ್ತಂ ಪಾಟಲಂ ಚ ಸಿತಪದ್ಮಮತಃ ಪರಂ ॥ ೨ ॥

ಆಜ್ಯಮನ್ನಂ ಪಾಯಸಂ ಚ ದಧಿ ಕ್ಷೀರಂ ತಥಾ ಮಧು ।
ಲಾಜಾಶ್ಚಾಪಿ ಸಕರ್ಪೂರಾ ಅಮೀ ಏವ ಚತುರ್ದಶ ॥ ೩ ॥

ಪುರಶ್ಚರಣಸಂಭೂತಾ ತ್ರಿಪುರಾಯಾಃ ಪ್ರಕೀರ್ತಿತಾಃ ।
ದ್ವಾದಶಸ್ವೇವ ಲಕ್ಷೇಷು ಜಪ್ತೇಷ್ವಪಿ ಚ ಸಾಧಕಃ ॥ ೪ ॥

ಎಪ್ಪತ್ತೊಂಭತ್ತನೆಯ ಅಧ್ಯಾಯ

೧. ಸರಮೇಶ್ವರನು ಹೇಳಿದನು:—ಸಾಧಕನಾದವನು ಹನ್ನೆರಡು ಲಕ್ಷವು ಸರಿಯಾಗಿ ಆಗುವಂತೆ ಈ ಮಂತ್ರವನ್ನು ತನ್ನ ಇಷ್ಟಸಿದ್ಧಿಗಾಗಿ ಜಪಮಾಡ ಬೇಕು.

೨-೪. ಜಾಜೀಹೂವು, ಬಕುಳದಹೂವು, ಮಾಲತೀಹೂವು, ನಂಜಬಟ್ಟಲು ಹೂವು, ಪಾದರಿಹೂವು, ಬಿಳಿಯತಾವರೆಹೂವು, ತುಪ್ಪ, ಅನ್ನ, ಪಾಯಸ, ಮೊಸರು, ಹಾಲು, ಜೇನುತುಪ್ಪ, ಅರಳು, ಕರ್ಪೂರ, ಈ ಹದಿನಾಲ್ಕು ಪದಾರ್ಥಗಳು ತ್ರಿಪುರಾ ದೇವಿಯ ಮಂತ್ರಪುರಶ್ಚರಣೆಗೆ ಬೇಕಾದ ಸಾಮಗ್ರಿಗಳೆಂದು ಪ್ರಸಿದ್ಧವಾಗಿರುವವು.

ಏತಾನಿ ಸರ್ವದ್ರವ್ಯಾಣಿ ಜುಹುಯಾದನಲೋಜ್ವಲೇ ।
ಲಕ್ಷತ್ರಯಂ ತು ಯೋ ಜಪ್ತ್ವಾ ಪುರಶ್ಚರಣಮಾಚರೇತ್ ॥ ೫ ॥

ಸ ತು ಸಾಜ್ಯಂ ಸಕರ್ಪೂರಂ ಜುಹುಯಾತ್ತು ಚತುಷ್ಟಯಂ ।
ದಶಭಿರ್ನವಲಕ್ಷೇಷು ದ್ರವ್ಯೈರ್ಮಂತ್ರೀ ಪುರಶ್ಚರೇತ್ ॥ ೬ ॥

ಜಪ್ತೇಷು ಚಾಷ್ಟಭಿಃ ಷಟ್ಸು ಸರ್ವೈಃ ಸರ್ವತ್ರ ಚಾಚರೇತ್ ।
ಹಸ್ತಮಾತ್ರಂ ತು ಕುಂಡಂ ಸ್ಯಾತ್ ಷಟ್ಕೋಣಂ ತ್ರ್ಯಂಗುಲಾಧಿಕಂ ॥ ೭ ॥

ತ್ರಿಪುರಾಯಾಸ್ತು ಮಧ್ಯಾಯಾ ಬಾಲಾಯಾಶ್ಚ ಸದೈವ ಹಿ ।
ತಥಾ ತ್ರಿಪುರಾಭೈರವ್ಯಾಃ ಕುಂಡಮಾನಂ ಪ್ರಕೀರ್ತಿತಂ ॥ ೮ ॥

ಚತುಷ್ಕೋಣಂ ಭವೇತ್ಕುಂಡಂ ಹಸ್ತಮಾತ್ರದ್ವಯೇಷು ಚ ।
ಅಷ್ಟಾಂಗುಲಾಧಿಕಂ ಪ್ರೋಕ್ತಂ ವೈಷ್ಣವ್ಯಾಸ್ತು ಪುರಶ್ಚರೇ ॥ ೯ ॥

ಸಾಧಕನಾದವನು ಹನ್ನೆರಡುಲಕ್ಷ ಜಪವನ್ನು ಮಾಡಿದನಂತರ ಈ ಎಲ್ಲಾ ಪದಾರ್ಥಗಳನ್ನೂ ಚೆನ್ನಾಗಿ ಜ್ವಲಿಸುತ್ತಿರುವ ಅಗ್ನಿಯಲ್ಲಿ ಹೋಮಮಾಡಬೇಕು.

೫. ಮೂರುಲಕ್ಷ ಜಪವನ್ನು ಮಾಡುವವನು ತುಪ್ಪದಿಂದಲೂ, ಕರ್ಪೂರದಿಂದಲೂ ಕೂಡಿದ ನಾಲ್ಕು ದ್ರವ್ಯಗಳನ್ನು ಹೋಮಮಾಡಬೇಕು.

೬. ಮಾಂತ್ರಿಕನು ಒಂಭತ್ತುಲಕ್ಷ ಜಪವನ್ನು ಮಾಡಿದರೆ, ಹತ್ತು ದ್ರವ್ಯಗಳನ್ನೂ, ಆರುಲಕ್ಷ ಜಪವನ್ನು ಮಾಡಿದರೆ ಎಂಟು ಪದಾರ್ಥಗಳನ್ನೂ ಹೋಮಮಾಡಬೇಕು. ಈ ಕ್ರಮವನ್ನು ಎಲ್ಲಾ ಜಪಗಳಲ್ಲಿಯೂ ಅನುಸರಿಸಬೇಕು.

೭-೮. ಮಧ್ಯಾತ್ರಿಪುರಾದೇವೀ, ಬಾಲಾದೇವೀ, ತ್ರಿಪುರಭೈರವೀ ಇವರುಗಳ ಮಂತ್ರಪುರಶ್ಚರಣೆಯನ್ನು ಮಾಡುವಾಗ, ಹೋಮದ ಕುಂಡವು ಒಂದುಹಸ್ತದ ಅಳತೆಗಿಂತ ಮೂರು ಅಂಗುಲ ಅಧಿಕವಾದದ್ದಾಗಿಯೂ, ಆರು ಕೋಣಗಳುಳ್ಳದ್ದಾಗಿಯೂ ಇರಬೇಕು.

೯. ವೈಷ್ಣವೀದೇವಿಯ ಮಂತ್ರಪುರಶ್ಚರಣೆಯಲ್ಲಿ ಕುಂಡವು ಎರಡುಹಸ್ತ ಪ್ರಮಾಣಕ್ಕಿಂತಲೂ, ಆರು ಅಂಗುಲ ಅಧಿಕವಾದದ್ದಾಗಿ ನಾಲ್ಕು ಕೋಣಗಳುಳ್ಳದ್ದಾಗಿ ಇರಬೇಕು.

ತ್ರಿಕೋಣಂ ಹಸ್ತಮಾತ್ರಂ ತು ಕಾಮಾಖ್ಯಾಯಾಸ್ತು ಕುಂಡಕಂ ।
ಏವಂ ಸರ್ವಪ್ರಪಂಚಾನಾಮಾಸಾಮಪಿ ತಥಾ ತಥಾ ॥ ೧೦ ॥

ಸಂಸ್ಕುರ್ಯಾದನಲಂ ವೃದ್ಧಂ ವಿಧಿವದ್ವೈಷ್ಣವೀಕೃತೌ ।
ಕಾಮಾಖ್ಯಾಯಾಸ್ತಥಾ ಕುರ್ಯಾಜ್ಜ್ಯೋತಿಷ್ಟೋಮಾದಿವತ್ಸುತ ॥ ೧೧ ॥

ಆದೌ ತ್ರಿಪುರಭೈರವ್ಯಾಶ್ಚತುರ್ಭಿರ್ದಶಭಿಸ್ತಥಾ ।
ಜುಹುಯಾದನಲೇ ವೃದ್ಧೇ ಆಹುತೀಶ್ಚ ಚತುರ್ದಶ ॥ ೧೨ ॥

ಪಶ್ಚಾತ್ತು ಮೂಲಮಂತ್ರೇಣ ಅಷ್ಟೋತ್ತರಶತತ್ರಯಂ ।
ಹೋಮಯೇನ್ನವ ನಾ ತೇನ ಶತಾನಿ ನವ ನಾಥವಾ ॥ ೧೩ ॥

ಜಪಾಂತೇ ತು ಬಲಿಂ ದದ್ಯಾದ್ವೈಷ್ಣವ್ಯಾ ಬಲಿದಾನತಃ ।
ರತ್ನಕರ್ಪೂರಕನಕಾನ್ಯತ್ರೈವ ಗುರುದಕ್ಷಿಣಾಃ ॥ ೧೪ ॥

---

೧೦. ಕಾಮಾಖ್ಯಾದೇವಿಯ ಮಂತ್ರಹೋಮದಲ್ಲಿ ಕುಂಡವು ಒಂದು ಹಸ್ತ ಮಾತ್ರವಿರಬೇಕು ಮತ್ತು ತ್ರಿಕೋಣಾಕಾರವಾಗಿರಬೇಕು. ಈ ಎಲ್ಲಾ ದೇವಿಯರ ವಿಷಯದಲ್ಲಿ ಹೋಮಕುಂಡವು ಈ ರೀತಿ ಶಾಸ್ತ್ರಕ್ಕನುಸಾರವಾಗಿರಬೇಕು.

೧೧. ವೈಷ್ಣವೀದೇವಿಯ ಮಂತ್ರಪುರಶ್ಚರಣವಿಷಯದಲ್ಲಿ ಜ್ಯೋತಿಷ್ಟೋಮಾದಿಗಳಲ್ಲಿ ಮಾಡುವಂತೆ ಅಗ್ನಿಸಂಸ್ಕಾರಾದಿಗಳನ್ನು ಮಾಡಿ, ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಹೋಮಮಾಡಬೇಕು. ಕಾಮಾಖ್ಯಾದೇವಿಯ ಪುರಶ್ಚರಣಹೋಮದಲ್ಲಿಯೂ ಸಹ ಇದೇ ಕ್ರಮವನ್ನೇ ಅನುಸರಿಸಬೇಕು.

೧೨-೧೩. ತ್ರಿಪುರಭೈರವೀದೇವಿಯ ಮಂತ್ರಪುರಶ್ಚರಣಹೋಮದಲ್ಲಿ ಮೊದಲು ಹದಿನಾಲ್ಕು ದ್ರವ್ಯಗಳಿಂದ ಹದಿನಾಲ್ಕು ಆಹುತಿಗಳನ್ನು ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಹೋಮಮಾಡಬೇಕು. ಬಳಿಕ ಮೂಲಮಂತ್ರವೆಂದ ನೂರೆಂಟು ಹೋಮುಗಳನ್ನು ಮೂರಾವರ್ತಿ ಮಾಡಬೇಕು ಅಥವಾ ನೂರೊಂಭತ್ತು ಹೋಮುಗಳನ್ನಾಗಲಿ, ಕಡೆಗೆ ಒಂಭತ್ತು ಹೋಮುಗಳನ್ನಾಗಲಿ ಮಾಡಬೇಕು.

೧೪. ವೈಷ್ಣವೀಮಂತ್ರದ ಜಪದ ಕೊನೆಯಲ್ಲಿ ಬಲಿಯನ್ನು ಕೊಡಬೇಕು. ಬಲಿಯನ್ನು ಕೊಟ್ಟನಂತರ ರತ್ನ, ಕರ್ಪೂರ, ಚಿನ್ನ ಇವುಗಳನ್ನು ಗುರುವಿಗೆ ದಕ್ಷಿಣೆಯಾಗಿ ಕೊಡಬೇಕು.

ಅಲಾಭೇ ದಧಿಪುಷ್ಪಾಜ್ಯಲಾಜೈರ್ದೇವ್ಯಾಃ ಪುರಶ್ಚರೇತ್ ।
ಲಾಭೇ ಚತುರ್ದಶದ್ರವ್ಯೈರ್ಜುಹುಯಾದ್ವಿಧಿಪೂರ್ವಕಂ ॥ ೧೫ ॥

ಅಸ್ಯಾ ಯಂತ್ರಂ ರಹಸ್ಯೇನ ಶೃಣು ವೇತಾಲಭೈರವ ।
ಯತ್ಕೃತ್ವೈವಾಖಿಲಾ ಕಾಮಾ ಲಭತೇ ನರಸತ್ತಮಃ ॥ ೧೬ ॥

ಷಟ್ಕೋಣಂ ಮಂಡಲಂ ಕೃತ್ವಾ ತತ್ತು ಕೋಣತ್ರಯೇ ಲಿಖೇತ್ ।
ಮಂತ್ರಂ ತ್ರಿಪುರಭೈರವ್ಯಾಸ್ತ್ರಿವರ್ಣಾಂಸ್ತು ತತಸ್ತ್ವಧಃ ॥ ೧೭ ॥

ಆದ್ಯಾಯಾಸ್ತ್ರಿಪುರಾಯಾಸ್ತು ತ್ರಿಬೀಜಾನಿ ಲಿಖೇದನು ।
ಮಧ್ಯಬೀಜತ್ರಯಂ ಮಧ್ಯೇ ಲಿಖಿತ್ವಾ ಪೀಠಯಂತ್ರಕೇ ॥ ೧೮ ॥

ಸರ್ವೇಷ್ತು ಮಾತೃಕಾವರ್ಣೈಸ್ತ್ರಿಧಾ ಸಂವೇಷ್ಟಯೇದನು ।
ಲಾಕ್ಷಾರಸೈರ್ಲಿಖಿತ್ವಾ ತು ತ್ರಿಲೋಹೈರ್ವೇಷ್ಟಯೇತ್ತತಃ ॥ ೧೯ ॥

---

೧೫. ಹಿಂದೆ ಹೇಳಿದ ಹದಿನಾಲ್ಕು ಹೋಮದ್ರವ್ಯಗಳು ದೊರೆಯದಿದ್ದರೆ ಮೊಸರು, ಪುಷ್ಪ, ಅರಳು, ಇವುಗಳಿಂದ ಹೋಮಮಾಡಬೇಕು. ಎಲ್ಲ ದ್ರವ್ಯಗಳೂ ದೊರೆಯುವ ಸಂದರ್ಭದಲ್ಲಿ ಹದಿನಾಲ್ಕು ದ್ರವ್ಯಗಳಿಂದಲೂ ಹೋಮಮಾಡಬೇಕು.

೧೬. ಎಲೈ ವೇತಾಲಭೈರವನೇ ಕೇಳು, ರಹಸ್ಯವಾದ ಈ ದೇವಿಯ ಯಂತ್ರವನ್ನು ಹೇಳುವೆನು. ಈ ದೇವಿಯ ಯಂತ್ರವನ್ನು ಬರೆದು, ಅದನ್ನು ಆರಾಧಿಸುವ ಪುರುಷನು ಸಕಲವಿಧವಾದ ಕಾಮುಗಳನ್ನೂ ಹೊಂದುವನು.

೧೭-೧೯. ಆರು ಕೋಣವುಳ್ಳ ಮಂಡಲವನ್ನು ಬರೆದು, ಅದರಲ್ಲಿ ತ್ರಿಕೋಣವನ್ನು ಬರೆಯಬೇಕು. ಅನಂತರ ಅದರಲ್ಲಿ ತ್ರಿಪುರಭೈರವೀದೇವಿಯ ಮಂತ್ರವನ್ನೂ, ಅವರ ಕೆಳಭಾಗದಲ್ಲಿ ಮಂತ್ರದ ಮೂರು ವರ್ಣಗಳನ್ನೂ ಬರೆಯಬೇಕು. ಬಳಿಕ ಆದ್ಯಾತ್ರಿಪುರಾದೇವಿಯ ಮೂರು ಬೀಜಮಂತ್ರವನ್ನೂ, ಅದಕ್ಕನುಸಾರವಾಗಿ ಬರೆಯಬೇಕು. ಪೀಠಯಂತ್ರದ ಮಧ್ಯದಲ್ಲಿ ಮಧ್ಯಾತ್ರಿಪುರಾದೇವಿಯ ಮೂರು ಬೀಜಾಕ್ಷರಗಳನ್ನು ಬರೆಯಬೇಕು. ಅಕಾರಾದಿಯಾಗಿ ಕ್ಷಕಾರದವರೆಗಿನ ಎಲ್ಲ ಮಾತೃಕಾವರ್ಣಗಳನ್ನೂ ಸುತ್ತಲೂ ಮೂರುಮೂರುಸಾರಿ ಬರಿಯಬೇಕು. ಮೂರು ಲೋಹದಿಂದ ಮಾಡಿದ ತಗಡಿನಲ್ಲಿ ಅರಗಿನ ರಸದಿಂದ ಬರೆದು ಅದನ್ನು ಮುಚ್ಚಳದಿಂದ ಮುಚ್ಚಬೇಕು.

ತದ್ಧಾರ್ಯಂ ಮೂರ್ಧ್ನಿ ಸತತಂ ತೇನ ಸರ್ವಜಯೀ ಭವೇತ್ ।
ರೂಪವಾ ಬಲವಾ ವಾಗ್ಮೀ ಧನರತ್ನಯುತಸ್ಸದಾ ॥ ೨೦ ॥

ದೀರ್ಘಾಯುಃ ಕಾಮಭೋಗೀ ಚ ಸುಪ್ರಜಃ ಸ ಚ ಜಾಯತೇ ।
ಮಧ್ಯೇ ಬೀಜಂ ಲಿಖಿತ್ವೈಕಂ ಮೂರ್ಧ್ನಿ ಚಾಧಸ್ತಥಾ ಪರಂ ॥ ೨೧ ॥

ಆದ್ಯಾಯಾಸ್ತದ್ವದೇವಾತ್ರ ಭೈರವ್ಯಾಸ್ತದ್ವದೇವ ಹಿ ।
ಇಮಾನಿ ಷಟ್ಕಮುಂತ್ರಾಣಿ ಕ್ರಮಾದ್ವೇತಾಲಭೈರವ ॥ ೨೨ ॥

ಪೂರ್ವವತ್ಸಂಲಿಖಿತ್ವೈವ ಸಂವೇಷ್ಟ್ಯಾಥ ತ್ರಿಲೋಹಕೈಃ ।
ವಾಮಬಾಹೌ ದಕ್ಷಿಣೇ ಚ ಹೃದಿ ಕಂಠೇ ಕರೇ ತಥಾ ॥ ೨೩ ॥

ಮೂರ್ಧ್ನಿ ಧಾರ್ಯಾಣಿ ಕ್ರಮತಃ ಫಲಮೇತಚ್ಚ ತದ್ಭವಂ ।
ಸಂಪತ್ಸೌಭಾಗ್ಯಸಂಸ್ತಂಭವಶೀಕರಣಮೋಹನಂ ॥ ೨೪ ॥

---

೨೦. ಈರೀತಿ ಬರೆದ ಯಂತ್ರವನ್ನು ಸಾಧಕನು ತನ್ನ ಶಿರಸ್ಸಿನಲ್ಲಿ ಧರಿಸಬೇಕು. ಅದರಿಂದ ಅವನು ಸರ್ವಕಾರ್ಯಗಳಲ್ಲಿಯೂ ಜಯಶೀಲನಾಗುವುದಲ್ಲದೆ, ರೂಪ, ಬಲ, ವಾಕ್ಚತುರತೆ, ಧನಧಾನ್ಯಗಳು, ಸುಪುತ್ರರು, ಇವುಗಳಿಂದ ಕೂಡಿ ಸಮಸ್ತ ಸುಖವನ್ನೂ ಅನುಭವಿಸುತ್ತಾ ದೀರ್ಘಾಯುವಾಗಿ ಜೀವಿಸುವನು.

೨೧-೨೨. ಎಲೈ ವೇತಾಲಭೈರವನೇ ಕೇಳು. ಇನ್ನೊಂದು ಯಂತ್ರವನ್ನು ಹೇಳುವೆನು. ಆದ್ಯಾತ್ರಿಪುರಭೈರವೀದೇವಿಯ ಬೀಜಮಂತ್ರವನ್ನು ಮಧ್ಯದಲ್ಲಿಯೂ, ಇನ್ನೊಂದು ಬೀಜಮಂತ್ರವನ್ನು ಯಂತ್ರದಮೇಲುಗಡೆಯಲ್ಲಿಯೂ ಕೆಳಗಡೆಯಲ್ಲಿಯೂ, ಹಿಂದಿನಂತೆ ಆರು ಮಂತ್ರಗಳನ್ನೂ ಕ್ರಮವಾಗಿ ಬರೆಯಬೇಕು.

೨೩-೨೪. ಹಿಂದಿನ ಯಂತ್ರದಂತೆಯೇ, ಬರೆದು, ಮೂರುಲೋಹದ ತಗಡಿನಿಂದ ಸುತ್ತಿ ಎಡಶೋಳು, ಬಲತೋಳು, ಹೃದಯ, ಕುತ್ತಿಗೆ, ಕೈಗಳು, ತಲೆ, ಇವುಗಳಲ್ಲಿ ಕ್ರಮವಾಗಿ ಧರಿಸಬೇಕು. ಇವರಿಂದ ಲಭಿಸುವ ಫಲವನ್ನು ಹೇಳುವೆನು. ಐಶ್ವರ್ಯವೂ, ಸೌಭಾಗ್ಯವೂ, ಇತರರನ್ನು ಸ್ತಂಭನೆ ಮಾಡುವುದೂ, ಇತರರನ್ನು ವಶಪಡಿಸಿಕೊಳ್ಳುವುದೂ, ಇತರರನ್ನು ಮೋಹಗೊಳಿಸುವುದೂ, ಕವಿತ್ವವೂ ಇವೆಲ್ಲವೂ ಈ ಮಂತ್ರವನ್ನು ಯಂತ್ರರೂಪದಿಂದ ಉಪಯೋಗಿಸಿದಾಗ ಉಂಟಾಗುವುದು.

ಕವಿತ್ವಮಥ ಸರ್ವತ್ರ ಭವೇದೇತನ್ನ ಸಂಶಯಃ ।
ಯಂತ್ರಮಂತ್ರಾಣಿ ತಂತ್ರಾಣಿ ತ್ರೈಪುರಾಣಿ ತು ಭೈರವ ॥ ೨೫ ॥

ಸಪಂಚಷಟ್ಸಹಸ್ರಾಣಿ ಮಂತ್ರೌಘೈಸ್ತ್ರಿಗುಣೇಕೃತೈಃ ।
ತಜ್ಜ್ಞಾತ್ವಾ ಸಾಧಕೋ ಧೀಮಾ೯ ಪರತ್ರೇಹ ನ ಸೀದತಿ ॥ ೨೬ ॥

ಮಂತ್ರೌಘೈಸ್ತಂತ್ರಮಂತ್ರೈರವಿಚಲಿತಪದಂ ತ್ರೈಪುರಂ ಯತ್ಪ್ರಧಾನಂ ।
ಯದ್ವಿಪ್ರಾದ್ಯೈರದೇಯಂ ವಿಗತಭಯಪದಂ ಯತ್ಕವಿತ್ವಪ್ರದಾತೃ ।
ತ್ರೈವರ್ಗ್ಯಯಂತ್ರರೂಪಂ ತ್ರಿದಿವಮಥ ಸುರಾ ಯತ್ರ ಸಂತಿ ತ್ರಯೋಽಪಿ ।
ತಜ್ಜ್ಞಾನೌಘೈಃ ಸುಭೂತಂ ಸಕಲಶುಭಫಲಂ ಯನ್ಮಹಸ್ತ್ರೈಪುರಾಖ್ಯಂ ॥

ಕವಚಂ ತ್ರಿಪುರಾಯಾಸ್ತು ಶೃಣು ವೇತಾಲ ಭೈರವ ।
ಯಜ್ಜ್ಞಾತ್ವಾ ಮಂತ್ರವಿತ್ಸಮ್ಯಕ್ಫಲಮಾಪ್ನೋತಿ ಪೂಜನೇ ॥ ೨೯ ॥

೨೫-೨೬. ಎಲೈ ಭೈರವನೇ ಕೇಳು, ತ್ರಿಪುರಾದೇವಿಯ ಸಂಬಂಧವಾದ ತಂತ್ರಗಳೂ, ಯಂತ್ರಗಳೂ, ಮತ್ತು ಮಂತ್ರಗಳೂ ಒಂದೊಂದೂ ಹನ್ನೊಂದುಸಾವಿರ ಗಳಾಗುವುವು. ಒಟ್ಟು ಮೂವತ್ತಮೂರುಸಾವಿರ ಮಂತ್ರಗಳಾಗುವುವು. ಇವನ್ನು ತಿಳಿದ ಸಾಧಕನು ಇಹಪರಗಳಲ್ಲಿ ಶ್ರೇಯಸ್ಸನ್ನು ಪೊಂದುವನು.

೨೭. ಈ ತ್ರಿಪುರಾದೇವಿಯ ತಂತ್ರಮಂತ್ರಗಳಿಂದ ವಿಧ್ಯುಕ್ತವಾಗಿ ರಚಿಸಿದ ಯಂತ್ರವನ್ನು ಬ್ರಾಹ್ಮಣನಾದವನು ಯೋಗ್ಯರಲ್ಲದವರಿಗೆ ಕೊಡಕೂಡದು. ಈ ಯಂತ್ರವು ಸಾಧಕನ ಭಯವನ್ನು ನಿವಾರಣೆಮಾಡಿ, ಕವಿತ್ವ ಶಕ್ತಿಯನ್ನೂ ಸಮಸ್ತ ಶುಭಫಲಗಳನ್ನೂ ಕೊಡುವುದು. ಈ ಮಹಾಮಂತ್ರದಲ್ಲಿ ಬ್ರಹ್ಮವಿಷ್ಣುಮಹೇಶ್ವರರೂ, ಸಕಲದೇವತೆಗಳೂ ಸರ್ವದಾ ನೆಲಸಿರುವರು. ಜ್ಞಾನಪ್ರದವಾದ ತ್ರಿಪುರಾದೇವಿಯ ಈ ಮಹಾಮಂತ್ರವನ್ನು ಪಡೆಯುವುದರಿಂದ ಸಾಧಕನು ಸರ್ವವಿಧವಾದ ಶುಭಫಲಗಳನ್ನು ಪಡೆಯುವನು.

೨೯. ಎಲೈ ವೇತಾಲಭೈರವನೇ ಕೇಳು. ತ್ರಿಪುರಾದೇವಿಯ ಕವಚಮಂತ್ರವನ್ನು ಹೇಳುವೆನು. ಇದನ್ನು ತಿಳಿಯುವುದರಿಂದ ಸಾಧಕನು ಉತ್ತಮವಾದ ಫಲವನ್ನು ಪೊಂದುವನು.

ಉಪಚಾರಾಃ ಪುರಾ ಪ್ರೋಕ್ತಾ ಯೇನ ಏವಾತ್ರ ಪೂಜನೇ ।
ಪ್ರತಿಪತ್ತಿಸ್ತು ಸೈವಾತ್ರ ಕೀರ್ತಿತಾ ನಿತ್ಯಪೂಜನೇ ॥ ೨೯ ॥

ಕವಚಸ್ಯ ಚ ಮಾಹಾತ್ಮ್ಯಂ ಅಹಂ ಬ್ರಹ್ಮಾ ನ ಕೇಶವಃ ।
ವಕ್ತುಂ ಕ್ಷಮಸ್ತ್ವನಂತೋಽಪಿ ಬಹುಜಿಹ್ವಃ ಕಪಾಚನ ।
ಕ್ರವ್ಯಾದ್ಭಯಂ ನ ಲಭತೇ ತಥಾ ತೋಯಪರಿಪ್ಲವೇ ॥ ೩೦ ॥

ಕವಚಸ್ಮರಣಾದೇವ ಸರ್ವಕಲ್ಯಾಣಮಾಪ್ನುಯಾತ್ ।
ತ್ರಿಪುರಾಕವಚಸ್ಯಾಸ್ಯ ಋಷಿರ್ದಕ್ಷಿಣ ಉಚ್ಯತೇ ॥ ೩೧ ॥

ಛಂದಶ್ಚಿತ್ರಾಹ್ವಯಂ ಪ್ರೋಕ್ತಂ ದೇವೀ ತ್ರಿಪುರಭೈರವೀ ।
ಧರ್ಮಾರ್ಥಕಾಮಮೋಕ್ಷಾಣಾಂ ವಿನಿಯೋಗಸ್ತು ಸಾಧನೇ ॥ ೩೨ ॥

ಯಥಾದ್ಯಾತ್ರಿಪುರಾಖ್ಯಾಯಾ ಬೀಜಾನಿ ಕ್ರಮತಃ ಸುತ ।
ನಾಮತೋ ವಾಗ್ಭವಾದೀನಿ ಕೀರ್ತಿತಾನಿ ಮಯಾ ಪುರಾ ॥ ೩೩ ॥

---

೨೯. ಈ ದೇವಿಯ ಪೂಜೆಯಲ್ಲಿ ಹಿಂದೆ ಯಾವ ಉಪಚಾರಗಳೂ, ಪ್ರತಿಪತ್ತಿ ಕ್ರಮವೂ ಹೇಳಲ್ಪಟ್ಟಿರುವುವೋ ಅವುಗಳನ್ನು ನಿತ್ಯಪೂಜೆಯಲ್ಲಿಯೂ ಆಚರಿಸತಕ್ಕದ್ದು.

೩೦. ಈ ತ್ರಿಪುರಾದೇವಿಯ ಕವಚದ ಮಾಹಾತ್ಮ್ಯವನ್ನು ನಾನೂ, ಬ್ರಹ್ಮನೂ, ವಿಷ್ಣುವೂ ಸಹ ಸಂಪೂರ್ಣವಾಗಿ ತಿಳಿದಿರುವುದಿಲ್ಲ. ಸಾವಿರನಾಲಿಗೆಯುಳ್ಳ ಆದಿಶೇಷನೂ ಸಹ ಇವರ ಮಾಹಾತ್ಮ್ಯವನ್ನು ಹೇಳಲಸಮರ್ಥನು. ಈ ಕವಚದ ಸ್ಮರಣಮಾತ್ರದಿಂದಲೇ ದುಷ್ಟಪ್ರಾಣಿಗಳ ಭಯವೂ ನೀರಿನಿಂದ ಉಂಟಾಗುವ ಭಯವೂ ಉಂಟಾಗುವುದಿಲ್ಲ. ಕವಚಸ್ಮರಣಮಾಡಿದವನಿಗೆ ಸಕಲಮಂಗಳಗಳೂ ಉಂಟಾಗುವವು.

೩೧-೩೨. ಈ ತ್ರಿಪುರಾದೇವಿಯ ಕವಚಕ್ಕೆ ದಕ್ಷಿಣಾಮೂರ್ತಿಯು ಋಷಿಯು. ಚಿತ್ರಾ ಎಂಬುದು ಛಂದಸ್ಸು. ತ್ರಿಪುರಭೈರವಿಯೇ ದೇವತೆಯಾಗಿರುವಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಸಾಧನೆಯೇ ಇವರ ಫಲವಾಗಿರುವುದು.

೩೩-೩೪. ಎಲೈ ಪುತ್ರನೇ ಕೇಳು, ನಾನು ಆದ್ಯಾತ್ರಿಪುರಾದೇವಿಯ ವಾಗ್ಭವವೇ ಮೊದಲಾದ ಮೂರು ಬೀಜಾಕ್ಷರಗಳನ್ನು ಹಿಂದೆಯೇ ಹೇಳಿರುವೆನಷ್ಟೆ. ಇವರು

ತಥಾ ತ್ರಿಪುರಭೈರವ್ಯಾ ಬೀಜಾನಾಮಪಿ ನಾಮತಃ ।
ವಾಗ್ಭವಃ ಕಾಮರಾಜಶ್ಚ ತಥಾ ತ್ರೈಲೋಕ್ಯಮೋಹನಃ ॥ ೩೪ ॥

ಅವತು ಸಕಲಶೀರ್ಷಂ ವಾಗ್ಭವಂ ವಾಚಮುಗ್ರಾಂ
ನಿಖಿಲರಚಿತಕಾರ್ಮಾ ಕಾಮರಾಜೋಽವತಾನ್ಮೇ ।
ಸಕಲಕರಣವರ್ಗಂ ಡಾಮರಃ ಪಾತು ನಿತ್ಯಂ
ತನುಗತಬಹುತೇಜೋ ವರ್ಧಯನ್ ಬುದ್ಧಿಹೇತುಃ ॥ ೩೫ ॥

ಕೂಟೈಸ್ತು ಪಂಚಭಿರಿದಂ ಗದಿತಂ ಹಿ ಯಂತ್ರಂ
ಮಂತ್ರಂ ತತೋಽನು ಸತತಂ ಮಮ ತೇಜ ಉಗ್ರಂ ।
ತೇಜೋಮಯಂ ಮಹತಿ ನಿತ್ಯಪರಾಯಣಸ್ಥಂ
ತನ್ಮೇ ಹೃದಿ ಪ್ರವಿತತಂ ತನುತಾಂ ಸುಬುದ್ಧಿಂ ॥ ೩೬ ॥

ಆಧಾರೇ ವಾಗ್ಭವಃ ಪಾತು ಕಾಮರಾಜಸ್ತಥಾ ಹೃದಿ ।
ಭ್ರುವೋರ್ಮಧ್ಯೇ ಚ ಶೀರ್ಷೇ ಚ ಪಾತು ತ್ರೈಲೋಕ್ಯಮೋಹನಾ ॥ ೩೭ ॥

ತೆಯೇ ತ್ರಿಪುರಭೈರವೀದೇವಿಯ ಬೀಜಾಕ್ಷರಮಂತ್ರವೂ ಸಹ ವಾಗ್ಭವ, ಕಾಮಬೀಜ, ತ್ರೈಲೋಕ್ಯಮೋಹನ ಎಂಬ ಮೂರು ಬೀಜಾಕ್ಷರಗಳಿಂದ ಕೂಡಿರುವುದು.

೩೫. ಮಂತ್ರಗಳೆಗೆಲ್ಲ ಶಿಖರಪ್ರಾಯವಾದ ವಾಗ್ಭವಬೀಜವು ಕ್ರೂರವಾದ ಮಾತುಗಳಿಂದ ನನ್ನನ್ನು ರಕ್ಷಿಸಲಿ. ನನ್ನ ಎಲ್ಲಾ ವಿಧವಾದ ಕಾಮಗಳನ್ನೂ ಕಾಮರಾಜ ಬೀಜಾಕ್ಷರವು ರಕ್ಷಿಸಲಿ. ಮತ್ತು ನನ್ನ ಬುದ್ಧಿಗೆ ಕಾರಣವಾಗಿಯೂ, ದೇಹ ಗತವಾದ ತೇಜಸ್ಸನ್ನು ಹೆಚ್ಚಿಸುವುದಾಗಿಯೂ, ಇರುವ ಡಾಮರಬೀಜಾಕ್ಷರವು ನನ್ನ ಎಲ್ಲಾ ಇಂದ್ರಿಯಗಳನ್ನೂ ರಕ್ಷಿಸಲಿ.

೩೬. ಈ ತ್ರಿಪುರಾದೇವಿಯ ಐದು ಕೂಟಗಳಿಂದ ಕೂಡಿ, ಮಹಾತೇಜಸ್ಸಿನಿಂದ ಯುಕ್ತವಾದ ಯಂತ್ರವನ್ನು ಹೇಳಿದ್ದಾಯಿತು. ಈ ದೇವಿಯ ತೇಜೋಮಯವಾದ ಮಂತ್ರವೂ ಸಹ ನಿತ್ಯದಲ್ಲಿಯೂ ಜಪಿಸುವ ಸಾಧಕನಾದ ನನ್ನ ಹೃದಯದಲ್ಲಿ ಸದಾ ನೆಲಸಿ ನನಗೆ ಸದ್ಬುದ್ಧಿಯನ್ನು ಅನುಗ್ರಹಿಸಲಿ.

೩೭. ಮೂಲಾಧಾರವೆಂಬ ನಡುವಿನಲ್ಲಿರುವ ಚಕ್ರಸ್ಥಾನದಲ್ಲಿ ವಾಗ್ಭವಬೀಜಾಕ್ಷರವು ನನ್ನನ್ನು ಕಾಪಾಡಲಿ. ಕಾಮರಾಜ ಬೀಜಾಕ್ಷರವು ಹೃದಯದಲ್ಲಿ ರಕ್ಷಿಸಲಿ.

ವಿತತಕುಲಕಲಾಜ್ಞಾ ಕಾಮಿನೀ ಭೈರವೀ ಯಾ
ತ್ರಿಪುರಪುರದಹಾಖ್ಯಾ ಸರ್ವಲೋಕಸ್ಯ ಮಾತಾ ।
ವಿತರತು ಮಮ ನಿತ್ಯಂ ನಾಭಿಪದ್ಮೇ ಸಕುಕ್ಷೌ
ವನಗತವನಿತಾನಾಂ ರೋಗಹಾನಿಂ ಸುಖಂ ಚ ॥ ೩೮ ॥

ಯೋಗೈರ್ಜಗಂತಿ ಪರಿಮೋಹಯತೀವ ನಿತ್ಯಂ
ಜಾಗರ್ತಿ ಯಾ ತ್ರಿಪುರಭೈರವಭಾಮಿನೀತಿ ।
ಸಾಯಂ ಚ ಭಾವಕಲಿತಾ ಮಮ ಪಂಚಭಾಗೇ
ನಾಸಾಕ್ಷಿಕರ್ಣರಸನಾತ್ವಚಿ ಪಾತು ನಿತ್ಯಂ ॥ ೩೯ ॥

ಆದ್ಯಾ ತು ತ್ರಿಪುರೇಯಂ ಯಾ ಮಧ್ಯಾ ಯಾ ಕಾಮದಾಯಿನೀ ।
ತ್ರಿಧಾ ತು ಹ್ಯವತಾಂ ನಿತ್ಯಂ ದೇವೀ ತ್ರಿಪುರಭೈರವೀ ॥ ೪೦ ॥

ತ್ರೈಲೋಕ್ಯಮೋಹನಾ ಎಂಬ ಬೀಜಾಕ್ಷರವು ಹುಬ್ಬುಗಳ ಮಧ್ಯಭಾಗದಲ್ಲಿಯೂ, ತಲೆಯಲ್ಲಿಯೂ ರಕ್ಷಿಸಲಿ.

೩೮. ಈ ತ್ರಿಪುರಭೈರವಿಯು ಸಮಸ್ತ ಕಲೆಗಳಿಂದ ಕೂಡಿದವಳು. ಕಾಮಾಖ್ಯಾ, ಭೈರವೀ, ತ್ರಿಪುರಪುರದಹಾ, ಎಂದು ಅನೇಕ ಹೆಸರುಗಳಿಂದ ಪ್ರಸಿದ್ಧಳಾದವಳು. ಸಮಸ್ತ ಲೋಕಗಳಿಗೂ ತಾಯಿಯಾದವಳು. ಇಂತಹ ದೇವಿಯು ನಾಭಿಯಲ್ಲಿಯೂ, ಉದರದಲ್ಲಿಯೂ ನನ್ನನ್ನು ಸರ್ವದಾ ರಕ್ಷಿಸಲಿ. ಹಾಗೆಯೇ ಅರಣ್ಯಾದಿದುರ್ಗಸ್ಥಳಗಳಲ್ಲಿ ಕಷ್ಟದಿಂದಿರುವ ಸ್ತ್ರೀಯರ ರೋಗಾದ್ಯುಪದ್ರವಗಳನ್ನು ನಾಶಮಾಡಿ ಸುಖವನ್ನುಂಟುಮಾಡಲಿ.

೩೯. ತ್ರಿಪುರಭೈರವಸ್ವಾಮಿಯ ಭಾಮಿನಿ ಎಂದು ಪ್ರಸಿದ್ಧಳಾಗಿ, ಯಾವ ದೇವಿಯು ಯಾವಾಗಲೂ ಯೋಗದಿಂದ ಪ್ರಪಂಚವನ್ನು ಮೋಹಗೊಳಿಸುತ್ತಿರುವಳೋ ಮತ್ತು ಸೃಷ್ಟಿ, ಸ್ಥಿತಿ, ಲಯ, ಇತ್ಯಾದಿ ಕಾರ್ಯಗಳನ್ನು ನಡೆಸುವಳೋ, ಆ ದೇವಿಯು ನನ್ನ ಮೂಗು, ಕಣ್ಣು, ನಾಲಿಗೆ, ಕಿವಿ, ಚರ್ಮ ಇವುಗಳನ್ನು ಯಾವಾಗಲೂ ಕಾಪಾಡಲಿ.

೪೦. ಆದ್ಯಾತ್ರಿಪುರಾ, ಮಧ್ಯಾತ್ರಿಪುರಾ, ತ್ರಿಪುರಭೈರವೀ ಎಂದು ಪ್ರಸಿದ್ಧಳಾಗಿ ಸಾಧಕರ ಇಷ್ಟಾರ್ಥಗಳನ್ನು ಕೊಡುವವಳಾದ, ಮೂರು ರೂಪದಿಂದಿರುವ ತ್ರಿಪುರ ಭೈರವೀದೇವಿಯು ನನ್ನನ್ನು ರಕ್ಷಿಸಲಿ.

ಉದಯದಿಶಿ ಸದಾ ಮಾಂ ಪಾತು ಬಾಲಾ ತು ಮಾತಾ
ಯಮದಿಶಿ ಮಮ ಮಧ್ಯಾ ಭದ್ರಮುಗ್ರಂ ವಿದಧ್ಯಾತ್ ।
ವರುಣಪವನಕಾಷ್ಠಾಮಧ್ಯಕೋ ಭೈರವೀ ಮಾಂ
ಅವತು ಸಕಲರಕ್ಷಾಂ ಕುರ್ವತೀ ಸುಂದರೀ ಮೇ ॥ ೪೧ ॥

ಮಹಾಯೋನಿರ್ಮಹಾಯೋನೇರ್ವಿಶ್ವಯೋನಿಃ ಸದೈವ ತು ।
ಸಾ ಪಾತು ತ್ರಿಪುರಾ ನಿತ್ಯಂ ಸುಂದರೀ ಭೈರವೀ ಚ ಯಾ ॥ ೪೨ ॥

ಲಲಾಟೇ ಸುಭಗಾ ದೇವೀ ಪೂರ್ವಸ್ಯಾಂ ದಿಶಿ ಕಾಮದಾ ।
ನಿತ್ಯಂ ತಿಷ್ಠತು ರಕ್ಷಂತೀ ಸದಾ ತ್ರಿಪುರಸುಂದರೀ ॥ ೪೩ ॥

ಭ್ರುವೋರ್ಮಧ್ಯೇ ತಥಾಗ್ನೇಯ್ಯಾಂ ದಿಶಿ ಮಾಂ ತ್ರಿಪುರಾ ಚ ಯಾ ।
ವರ್ಧಯಂತೀ ಭಗಗಣಾ ಪಾತು ತ್ರಿಪುರಭೈರವೀ ॥ ೪೪ ॥

---

೪೧. ಜಗನ್ಮಾತೆಯಾದ ಬಾಲಾದೇವಿಯು ಪೂರ್ವದಿಕ್ಕಿನಲ್ಲಿ ನನ್ನನ್ನು ರಕ್ಷಿಸಲಿ. ದಕ್ಷಿಣದಲ್ಲಿ ಮಧ್ಯಾತ್ರಿಪುರಾದೇವಿಯು ಹೆಚ್ಚಾದ ಮಂಗಳವನ್ನುಂಟು ಮಾಡಲಿ. ತ್ರಿಪುರಭೈರವೀ ಎಂಬ ಸುಂದರಿಯಾದ ದೇವಿಯು ಎಲ್ಲಾವಿಧವಾದ ರಕ್ಷಣೆಯನ್ನುಂಟುಮಾಡುವವಳಾಗಿ, ಪಶ್ಚಿಮ ಮತ್ತು ವಾಯವ್ಯ ದಿಕ್ಕುಗಳಲ್ಲಿಯೂ, ಮಧ್ಯದಲ್ಲಿಯೂ ನನ್ನನ್ನು ರಕ್ಷಿಸಲಿ.

೪೨. ಮಹಾಯೋನಿ ಎಂದು ಪ್ರಸಿದ್ಧಳೂ, ಸಮಸ್ತಪ್ರಪಂಚವನ್ನು ಸೃಷ್ಟಿಸುವವಳೂ ಆದ ತ್ರಿಪುರಸುಂದರೀ ಎಂಬ ಭೈರವಿಯು ನನ್ನನ್ನು ಯಾವಾಗಲೂ ರಕ್ಷಿಸಲಿ.

೪೩. ಇಷ್ಟಾರ್ಥಪ್ರದಳಾದ ತ್ರಿಪುರಸುಂದರೀದೇವಿಯು ಯಾವಾಗಲೂ ಪೂರ್ವ ದಿಕ್ಕಿನಲ್ಲಿ ಸುಭಗಾ ಎಂಬ ಹೆಸರಿನಿಂದ ನನ್ನ ಹಣೆಯನ್ನು ರಕ್ಷಿಸುತ್ತಾ ಇರಲಿ.

೪೪. ತ್ರಿಪುರಭೈರವೀದೇವಿಯು, ತ್ರಿಪುರಾ ಎಂಬ ಹೆಸರಿನಿಂದ ಕೂಡಿದವಳಾಗಿ ಷಡ್ಗುಣೈಶ್ವರ್ಯಗಳನ್ನು ಹೆಚ್ಚಿಸುತ್ತಾ, ನನ್ನ ಹುಬ್ಬಿನ ಮಧ್ಯದಲ್ಲಿಯೂ, ಆಗ್ನೇಯ ದಿಕ್ಕಿನಲ್ಲಿಯೂ ರಕ್ಷಿಸಲಿ.

ವದನೇ ದಕ್ಷಿಣಸ್ಯಾಂ ಚ ದಿಶಿ ಮಾಂ ಭಗಸರ್ಪಿಣೀ ।
ತ್ರಿಪುರಾ ಯಮದೂತಾದೀ೯ ವಾರಯಂತೀ ಸದಾವತು ॥ ೪೫ ॥

ಕರ್ಣಯೋಃ ಪಶ್ಚಿಮಾಯಾಂ ತು ದಿಶಿ ಮಾಂ ಭಗಮಾಲಿನೀ ।
ಅಯೋನಿಜಾ ಜಗದ್ಯೋನಿರ್ಬಾಲಾ ಮಾಂ ತ್ರಿಪುರಾವತು ॥ ೪೬ ॥

ಅನಂಗಕುಸುಮಾ ಕಂಠೇ ಪ್ರತೀಚ್ಯಾಂ ದಿಶಿ ಸುಂದರೀ ।
ತ್ರಿಪುರಾಭೈರವೀ ಮಾಯಾ ನಿತ್ಯಂ ಪಾತು ಮಹೇಶ್ವರೀ ॥ ೪೭ ॥

ಹೃದಿ ಮಾರುತಕಾಷ್ಠಾಯಾಂ ದೇವೀ ಜಾನಂಗಮೇಖಲಾ ।
ನಾಭಾವುದೀಚ್ಯಾಂ ದಿಶಿ ಮಾಂ ಮಾತಂಗೀ ತ್ರಿಪುರಾ ಪುರಾ ॥ ೪೮ ॥

ಅನಂಗಮದನಾ ದೇವೀ ಪಾತು ತ್ರಿಪುರಭೈರವೀ ।
ಐಶಾನ್ಯಾಂ ದಿಶಿ ಲಿಂಗೇ ಚ ಮದವಿಭ್ರಮಮಂಥರಾ ॥ ೪೯ ॥

---

೪೫. ಭಗಸರ್ಪಿಣೀ ಎಂದು ಪ್ರಸಿದ್ಧಳಾದ ತ್ರಿಪುರಾದೇವಿಯು ದಕ್ಷಿಣದಿಕ್ಕಿನಲ್ಲಿ ನನ್ನ ಮುಖವನ್ನು, ಯಮದೂತರೇ ಮೊದಲಾದವರನ್ನು ತಡೆದು ರಕ್ಷಿಸಲಿ.

೪೬. ಸ್ವಯಂ ಉದ್ಭವವನ್ನು ಹೊಂದಿ, ಜಗತ್ತಿಗೆ ಕಾರಣಳಾಗಿರುವ ತ್ರಿಪುರಾ ಬಾಲಾದೇವಿಯು ಭಗಮಾಲಿನೀ ಎಂಬ ಹೆಸರಿನಿಂದ ಪ್ರಸಿದ್ಧಳಾಗಿ ಪಶ್ಚಿಮದಿಕ್ಕಿನಲ್ಲಿ ನನ್ನ ಕಿವಿಗಳನ್ನು ರಕ್ಷಿಸಲಿ.

೪೭. ತ್ರಿಪುರಾಭೈರವೀ, ಮಾಯಾ, ಮಹೇಶ್ವರೀ, ತ್ರಿಪುರಸುಂದರೀ ಎಂಬ ಹೆಸರಿನಿಂದ ಪ್ರಸಿದ್ಧಳಾದ ದೇವಿಯು ಅನಂಗಕುಸುಮಾ ಎಂಬ ಹೆಸರಿನ ಅಂಗದೇವತೆಯೊಡನೆ ಇದ್ದುಕೊಂಡು ಕಂಠದಲ್ಲಿಯೂ, ಪಶ್ಚಿಮದಿಕ್ಕಿನಲ್ಲಿಯೂ ರಕ್ಷಿಸಲಿ

೪೮. ಅನಂಗಮೇಖಲಾ ಎಂಬ ಪರಿವಾರದೇವತೆಯೊಡನೆ ಇರುವ, ಮಾತಂಗೀ ತ್ರಿಪುರಾ, ಪುರಾ ಎಂಬ ಹೆಸರಿನಿಂದ ಪ್ರಸಿದ್ಧಳಾದ ದೇವಿಯು ಹೃದಯದಲ್ಲೂ, ವಾಯವ್ಯದಿಕ್ಕಿನಲ್ಲಿಯೂ ನಾಭಿಯಲ್ಲಿಯೂ, ಉತ್ತರದಿಕ್ಕಿನಲ್ಲಿಯೂ ಸದಾ ರಕ್ಷಿಸಲಿ.

೪೯. ಅನಂಗಮದನಾದೇವಿಯಿಂದ ಕೂಡಿದ ತ್ರಿಪುರಭೈರವೀದೇವಿಯು ಈಶಾನ್ಯದಿಕ್ಕಿನಲ್ಲಿಯೂ, ಮದವಿಭ್ರಮಮಂಥರಾ ಎಂಬ ದೇವಿಯು ನನ್ನ ಗುಹ್ಯೇಂದ್ರಿಯವಿಷಯದಲ್ಲಿಯೂ ರಕ್ಷಿಸಲಿ.

ವಾಗ್ವಾದಿನೀ ರಕ್ಷತು ಮಾಂ ಸದಾ ತ್ರಿಪುರಭೈರವೀ ।
ಗುಪಮೇಢ್ರಾಂತರೇ ಪಾತು ರತಿಸ್ತ್ರಿಪುರಭೈರವೀ ॥ ೫೦ ॥

ಹೃದಯಾಭ್ಯಂತರೇ ಪ್ರೀತಿಃ ಪಾತು ತ್ರಿಪುರಸುಂದರೀ ।
ಭ್ರೂನಾಸಯೋರ್ಮಧ್ಯದೇಶೇ ನಿತ್ಯಂ ಪಾತು ಮನೋಭವಃ ।
ದ್ರಾವಣಃ ಶತ್ರುತಃ ಪಾತು ವಾಣೇ ಮಾಂ ದುರ್ಗಮೂರ್ಧನಿ ॥ ೫೧ ॥

ಕ್ಷೋಭಣೋ ಮಾಂ ಸದಾ ಪಾತು ಕ್ರವ್ಯಾದೋಭ್ಯೋನಿಷ್ಟಭೀತಿತಃ ।
ವಶೀಕರಣಬಾಣೇ ಮಾಮಗ್ನಿತಃ ಪಾತು ರಾಜತಃ ॥ ೫೨ ॥

ಆಕರ್ಷಣಾರ್ಥಯಾ ಬಾಣೇ ಮಾಂ ಪಾತು ಶಸ್ತ್ರಘಾತತಃ ।
ಮೋಹನಃ ಸರ್ವಭೂತೇಭ್ಯಃ ಪಿಶಾಚೇಭ್ಯೋ ಜಲಾತ್ತಥಾ ॥ ೫೩ ॥

ನಿತ್ಯಂ ಪಾತು ಮಹಾಬಾಣಸ್ತ್ವನಃ ಕಾಮಮುತ್ತಮಂ ।
ಮಾಲಾ ಮಾಂ ಶಾಸ್ತ್ರಬೋಧಾಯ ಶಾಸ್ತ್ರವಾದೇ ಸದಾವತು ॥ ೫೪ ॥

---

೫೦. ವಾಗ್ವಾದಿನೀದೇವಿಯೂ, ತ್ರಿಪುರಭೈರವೀದೇವಿಯೂ, ನನ್ನನ್ನು ಯಾವಾಗಲೂ ರಕ್ಷಿಸಲಿ. ತ್ರಿಪುರಭೈರವೀದೇವಿಯೂ, ರತಿಯೂ ಸಹ ನನ್ನ ಗುಪ್ತ, ಮೇಢ್ರ ಇವುಗಳ ಮಧ್ಯದಲ್ಲಿ ರಕ್ಷಿಸಲಿ.

೫೧-೫೩. ಪ್ರೀತಿಸ್ವರೂಪಿಣಿಯಾದ ತ್ರಿಪುರಸುಂದರಿಯು ನನ್ನ ಹೃದಯವನ್ನು ರಕ್ಷಿಸಲಿ. ಕಾಮಬೀಜಾಕ್ಷರವು ಹುಬ್ಬು, ಮೂಗು, ಇವುಗಳ ಮಧ್ಯಪ್ರದೇಶವನ್ನು ರಕ್ಷಿಸಲಿ. ದ್ರಾವಣಬಾಣದ ಬೀಜಾಕ್ಷರವು ನನ್ನನ್ನು ಶತ್ರುವಿನ ದೆಸೆಯಿಂದ ಕಾಪಾಡಲಿ. ಕ್ಷೋಭಣಬಾಣದ ಬೀಜಾಕ್ಷರವು ನನ್ನನ್ನು ಯಾವಾಗಲೂ, ರಾಕ್ಷಸರಿಂದಲೂ, ಕೆಟ್ಟಭಯದಿಂದಲೂ ಕಾಪಾಡಲಿ. ವಶೀಕರಣಬಾಣದ ಬೀಜಾಕ್ಷರವು ನನ್ನನ್ನು ಅಗ್ನಿದೆಸೆಯಿಂದಲೂ, ರಾಜನ ದೆಸೆಯಿಂದಲೂ, ಕಾಪಾಡಲಿ, ಆಕರ್ಷಣಬಾಣದ ಬೀಜಾಕ್ಷರವು ನನ್ನನ್ನು ಶಸ್ತ್ರಘಾತದಿಂದ ಕಾಪಾಡಲಿ, ಮೋಹನ ಬಾಣದ ಬೀಜಾಕ್ಷರವು ಎಲ್ಲಾ ಭೂತಗಳಿಂದಲೂ, ಪಿಶಾಚಿಗಳು, ಮತ್ತು ನೀರು ಇವುಗಳಿಂದಲೂ ರಕ್ಷಿಸಲಿ.

೫೪. ದೇವಿಯ ಮಹಾಬಾಣಬೀಜಾಕ್ಷರವು ಶ್ರೇಷ್ಠವಾದ ಕಾಮವನ್ನುಂಟುಮಾಡುವುದಾಗಿ ಯಾವಾಗಲೂ ಕಾಪಾಡಲಿ. ಜಪಸರವು ಶಾಸ್ತ್ರದ ತಿಳುವಳಿಕೆಯನ್ನು ಕೊಟ್ಟು ಶಾಸ್ತ್ರವಾದವಿಷಯದಲ್ಲಿ ರಕ್ಷಿಸಲಿ.

ಪುಸ್ತಕಂ ಪಾತು ಮನಸಿ ಸಂಕಲ್ಪಂ ವರ್ಧಯನ್ಮಮ ।
ವರಃ ಪಾತು ಸದಾ ಸ್ಥಾಮ್ನಿ ಸ್ಥಾಮತೇಜೋ ವಿವರ್ಧಯೇ ॥ ೫೫ ॥

ಪ್ರಭಯಂ ಚಾಭಯಂ ಧತ್ತಾಂ ಸರ್ವೇಭ್ಯೋ ಭೂತಿಭಾವನಂ ॥ ೫೬ ॥

ಊರ್ಧ್ವಾಧೋಭಾವಭೂತಸ್ಥಿರತರಕಿರಣೈ ರಕ್ತಕೀರ್ಣಾ ಸುಚಕ್ರಾ ।
ಕಾಲಾಗ್ನಿಪ್ರಖ್ಯದೋಚಿಃ ಸಕಲಸುರಗಣೈರರ್ಚಿತಾ ಮುಂಡಮಾಲಾ ।
ಜ್ಞಾನಧ್ಯಾನೈಕತಾನಾ ಪ್ರಬಲಬಲಕರಂ ತತ್ತ್ವಭೂತಪ್ರತಿಷ್ಠಂ ।
ಪಾತಾದೂರ್ಧ್ವಂ ತಥಾಧಃ ಸಕಲಭಯಭೃತೋ ಭೋಗಭೀರೋಸ್ತು ವಿದ್ಯಾ ॥

ಭೂಃ ಪಾತು ಹೃದಿ ಮಾಂ ನಿತ್ಯಂ ಸಃ ಶೀರ್ಷೇ ಪಾತು ನಿತ್ಯತಃ ।
ವಃ ಪಾತು ಗುಹ್ಯದೇಶೇ ಮಾಂ ಸೌಃ ಪಾತು ಕಂಠಪಾರ್ಶ್ವಯೋಃ ॥ ೫೭ ॥

೫೫-೫೬. ದೇವಿಯ ಕೈಯಲ್ಲಿರುವ ಪುಸ್ತಕವು ನನ್ನ ಮನಸ್ಸಿನ ಸಂಕಲ್ಪವನ್ನು ಹೆಚ್ಚಿಸುತ್ತಾ ರಕ್ಷಿಸಲಿ. ದೇವಿಯ ವರದಹಸ್ತವು ಯಾವಾಗಲೂ ಸ್ಥಿತಿಯನ್ನೂ ತೇಜಸ್ಸನ್ನೂ ಹೆಚ್ಚಿಸಿ ಸ್ಥಿತಿಯ ವಿಷಯದಲ್ಲಿ ರಕ್ಷಿಸಲಿ. ಅಭಯಹಸ್ತವು ಸಮಸ್ತ ಪ್ರಾಣಿಗಳಿಂದ ಸಂಭವಿಸುವ ಭಯವನ್ನು ಪರಿಹರಿಸಿ ಎಲ್ಲರಿಗೂ ಐಶ್ವರ್ಯವನ್ನುಂಟು ಮಾಡಲಿ.

೫೭. ಊರ್ಧ್ವ ಮತ್ತು ಅಧೋಭಾಗಗಳಲ್ಲಿ ತನ್ನ ಕಿರಣಗಳಿಂದ ವ್ಯಾಪಿಸಿ ರಕ್ತವನ್ನು ಪ್ರಸವಿಸುತ್ತಲೂ, ಕಾಲಾಗ್ನಿಯಂತೆ ಪ್ರಕಾಶಮಾನವಾಗಿಯೂ, ಸಮಸ್ತ ದೇವತೆಗಳಿಂದಲೂ ಪೂಜಿಸಲ್ಪಡುವ, ಜ್ಞಾನಧ್ಯಾನಗಳಿಗೆ ಆಶ್ರಯಭೂತವಾದ, ದೇವಿಯು ಧರಿಸಿರುವ ಯಾವ ಮುಂಡಮಾಲೆಯುಂಟೋ ಅದು ನಮ್ಮ ಸಕಲ ಭಯವನ್ನೂ ನಿವಾರಣೆಮಾಡಿ, ಶಕ್ತಿಜ್ಞಾನಾದಿಗಳನ್ನು ಕೊಟ್ಟು ಮೇಲಿನ ಮತ್ತು ಕೆಳಭಾಗದ ಪ್ರದೇಶಗಳಲ್ಲಿ ನಮ್ಮನ್ನು ರಕ್ಷಿಸಲಿ.

೫೮-೫೯. ಭೂಃ ಎಂಬ ಬೀಜಾಕ್ಷರವು ನನ್ನ ಹೃದಯವನ್ನು ರಕ್ಷಿಸಲಿ. ಸಃ ಎಂಬುದು ಯಾವಾಗಲೂ ಶಿರಸ್ಸಿನಲ್ಲಿ ಕಾಪಾಡಲಿ. ವಃ ಎಂಬ ಅಕ್ಷರವು ಗುಹ್ಯದೇಶದಲ್ಲಿಯೂ, ಸೌಃ ಎಂಬುದು ಕಂಠ ಪಾರ್ಶ್ವಗಳಲ್ಲಿಯೂ, ವಕಾರವು ನನ್ನ ನಾಡಿಗಳ

ವಕಾರೋ ಮುಮು ನಾಡೀಷು ಶಿರಃ ಸೌಃ ಪಾತು ಸರ್ವದಾ ।
ಶಕ್ರಃ ಪಾತು ಸದಾ ಕಾಶೇ ಬ್ರಹ್ಮಾ ರಕ್ಷತು ಸರ್ವತಃ ॥ ೫೯ ॥

ವಿದ್ಯಾವಿದ್ಯಾಭಾವಿನೀ ಕಾಮರೂಪಾ
ಸ್ಥೂಲಾ ಸೂಕ್ಷ್ಮಾ ಮಾಯಯಾ ಯಾದಿಮಾಯಾ ।
ಬ್ರಹ್ಮೇಂದ್ರಾದ್ಯೈರರ್ಚಿತಾ ಭೀತಿಹಂತ್ರೀ
ರಕ್ಷಾಂ ಕುರ್ಯಾತ್ಸರ್ವತೋ ಭೈರವೀ ಮಾಂ ॥ ೬೦ ॥

ಆದ್ಯಾ ಮಧ್ಯಾ ಭಾವಿನೀ ನೀತಿಯುಕ್ತಾ
ಸಮ್ಯಕ್ ಜ್ಞಾನಜ್ಞೇಯರೂಪಾ ಪರಾ ಯಾ ।
ಆದಾವಂತೇ ಮಧ್ಯಭಾಗೇವತಾರಾ
ಪಾಯಾದ್ದೇವೀ ತ್ರೈಪುರೀ ಭೈರವೀ ಯಾ ॥ ೬೧ ॥

ಯನ್ಮಂತ್ರಭಾಗತಂತ್ರಾಣಾಂ ಯಂತ್ರಾಣಾಮಪಿ ಕೇಶವಃ
ಬ್ರಹ್ಮಾ ರುದ್ರಶ್ಚ ಜಾನಾತಿ ತತ್ತ್ವಂ ನಾನ್ಯೋ ನಮೋಽಸ್ತು ತಾಂ ॥ ೬೨ ॥

ಲ್ಲಿಯೂ, ಸೌಃ ಎಂಬ ಬೀಜಾಕ್ಷರವು ನನ್ನ ತಲೆಯನ್ನೂ ರಕ್ಷಿಸಲಿ. ಇಂದ್ರನು ಯಾವಾಗಲೂ ಆಕಾಶದಲ್ಲಿ ಕಾಪಾಡಲಿ. ಬ್ರಹ್ಮನು ಎಲ್ಲಾ ಕಡೆಯಲ್ಲಿಯೂ ರಕ್ಷಿಸಲಿ.

೬೦. ಈ ಭೈರವೀದೇವಿಯು ವಿದ್ಯಾ ಮತ್ತು ಅವಿದ್ಯಾಸ್ವರೂಪಳು. ತನಗೆ ಬೇಕಾದ ರೂಪಗಳನ್ನು ಧರಿಸುವವಳು. ಆದಿಮಾಯೆಯೆಂದು ಪ್ರಸಿದ್ಧಗೊಂಡು ಸ್ಥೂಲರೂಪದಿಂದಲೂ, ಸೂಕ್ಷ್ಮರೂಪದಿಂದಲೂ ಇರುವವಳು. ಬ್ರಹ್ಮಾದಿ ದೇವತೆಗಳಿಂದ ಪೂಜಿಸಲ್ಪಡುವವಳು. ಸಮಸ್ತ ಪ್ರಾಣಿಗಳ ಭಯವನ್ನು ಪರಿಹಾರಮಾಡುವವಳು. ಇಂತಹ ಭೈರವೀದೇವಿಯು ನನ್ನನ್ನು ಎಲ್ಲಕಡೆಯಲ್ಲಿಯೂ ರಕ್ಷಿಸಲಿ.

೬೧. ಈ ಭೈರವೀದೇವಿಯು, ಬಾಲಾತ್ರಿಪುರಾ, ಮಧ್ಯಾತ್ರಿಪುರಾ, ತ್ರಿಪುರ ಭೈರವೀ ಎಂಬ ಮೂರು ಮೂರ್ತಿಭೇದಗಳಿಂದ ಕೂಡಿರುವಳು. ಜ್ಞಾನಸ್ವರೂಪಳೂ, ಜ್ಞೇಯವಸ್ತುವೂ ಆದ ಪರಬ್ರಹ್ಮಸ್ವರೂಪಿಣಿಯಾಗಿರುವಳು. ಸೃಷ್ಟಿಸ್ಥಿತಿಲಯ ಕಾಲಗಳಲ್ಲಿ ಅವತರಿಸಿ ಜಗತ್ತನ್ನು ರಕ್ಷಿಸುವವಳು. ಇಂತಹ ತ್ರಿಪುರಭೈರವೀದೇವಿಯು ನನ್ನನ್ನು ರಕ್ಷಿಸಲಿ.

೬೨. ಯಾವದೇವಿಯ ಮಂತ್ರ, ತಂತ್ರ, ಯಂತ್ರಗಳ ಸ್ವರೂಪವನ್ನೂ ಮತ್ತು ರಹಸ್ಯವನ್ನೂ, ಬ್ರಹ್ಮ, ವಿಷ್ಣು, ರುದ್ರ ಇವರುಗಳು ಮಾತ್ರ ತಿಳಿದಿರುವರೋ, ಇತರರು ತಿಳಿಯಲಸಮರ್ಥರೋ ಅಂತಹ ದೇವಿಗೆ ನಮಸ್ಕಾರವನ್ನು ಮಾಡುವೆನು.

ತ್ವಂ ಬ್ರಹ್ಮಾಣೀ ಭವಾನಿ ವಿಶ್ವಭವಿತುರ್ಲಕ್ಷ್ಮೀ ರತಿರ್ಯೋಗಿನೀ
ತ್ವಂ ವಾಗ್ಮೀ ಸುಭಗಾ ಭವಾಯುತಯುಗಂ ಮಂತ್ರಾಕ್ಷರಂ ನಿಷ್ಕಲಂ ।
ವರ್ಣಾಸ್ತೇ ನಿಖಿಲಾಸ್ತನಾವಚಲಿತಸ್ತ್ವಂ ಕಾಮಿನೀ ಕಾಮದಾ
ತ್ವಂ ದೇವೀ ತ್ರಿಪುರೇ ಕವಿತ್ವಮಮಲಂ ಸೌಭಾಗ್ಯಮುಚ್ಚೈಃ ಕುರು ॥ ೬೩ ॥
ಇದಂ ತು ಕವಚಂ ದೇವ್ಯಾ ಯೋ ಜಾನಾತಿ ಸ ಮಂತ್ರವಿತ್ ।
ನಾಧಯೋ ವ್ಯಾಧಯಸ್ತಸ್ಯ ನ ಭಯಂ ಚ ಸನಾ ಕ್ವಚಿತ್ ॥ ೬೪ ॥
ಇತೀ ತೇ ಪರಮಂ ಗುಹ್ಯಮಾಖ್ಯಾತಂ ಕವಚಂ ಪರಂ ।
ತಂ ಭಜಸ್ವ ಮಹಾಭಾಗ ತತಃ ಸಿದ್ಧಿಮವಾಪ್ಸ್ಯಸಿ ॥ ೬೫ ॥
ಇದಂ ಪವಿತ್ರಂ ಪರಮಂ ಪುಣ್ಯಂ ಕೀರ್ತಿವಿವರ್ಧನಂ ।
ತ್ರಿಪುರಾಯಾಸ್ತ್ರಿಮೂರ್ತೇರ್ಮಸ್ತು ಕವಚಂ ಮಯಕೋದಿತಂ ॥ ೬೬ ॥

---

೬೩. ಓ ದೇವಿ, ನೀನು ಬ್ರಹ್ಮನ ಬ್ರಹ್ಮಾಣೀ ಎಂಬ ಶಕ್ತಿಸ್ವರೂಪಳು. ರುದ್ರನ ಭವಾನೀಶಕ್ತಿಯು, ವಿಷ್ಣುವಿನ ಲಕ್ಷ್ಮೀಶಕ್ತಿಯು, ಸಮಸ್ತ ಜಗತ್ತಿಗೂ ಮಾತೃ ಸ್ವರೂಪಳು, ಕಾಮನ ರತಿಶಕ್ತಿಯು, ಯೋಗಿನಿಯು, ವಾಕ್ಚತುರಳು, ಪೂಜ್ಯಳು, ನಿನ್ನ ಸ್ತನಗಳು ನಿನ್ನ ಇಪ್ಪತ್ತುಸಾವಿರ ಮಂತ್ರಗಳ ವರ್ಣಾತ್ಮಕವಾಗಿ ಭಕ್ತರಿಗೆ ಇಷ್ಟಾರ್ಥಗಳನ್ನು ಕೊಡುತ್ತಿರುವುವು. ಇಂತಹ ಸ್ವರೂಪವುಳ್ಳ ಓ ತ್ರಿಪುರಾದೇವಿಯೇ, ನನಗೆ ಶ್ರೇಷ್ಠವಾದ ಕವಿತಾಸಾಮರ್ಥ್ಯವನ್ನೂ, ವಿಶೇಷವಾದ ಸೌಭಾಗ್ಯಸಂಪತ್ತುಗಳನ್ನೂ ಅನುಗ್ರಹಿಸುವವಳಾಗು.

೬೪. ಇದು ದೇವಿಯ ಕವಚವು. ಇದನ್ನು ಯಾವನು ತಿಳಿದಿರುವನೋ ಅವನು ಸಮಸ್ತ ಮಂತ್ರವನ್ನೂ ತಿಳಿದವನಾಗುವನು. ಅವನಿಗೆ ಯಾವಾಗಲೂ ಆಧಿವ್ಯಾಧಿಗಳ ಭಯವಿಲ್ಲ. ಈ ಶ್ರೇಷ್ಠವಾದ ಕವಚವನ್ನು ರಹಸ್ಯವಾದರೂ ನಿನಗೋಸ್ಕರ ಹೇಳಿರುವೆನು.

೬೫-೬೬. ತ್ರಿಪುರಾದೇವಿಯು ಆದ್ಯಾ, ಮಧ್ಯಾ, ತ್ರಿಪುರಭೈರವೀ ಎಂಬ ಮೂರು ರೂಪದಿಂದಿರುವಳು. ಎಲೈ ಅದೃಷ್ಟಶಾಲಿಯೇ, ಈ ಕವಚವು ಪರಿಶುದ್ಧವಾದದ್ದು. ಉತ್ಕೃಷ್ಟವಾದದ್ದು. ಪುಣ್ಯವನ್ನುಂಟುಮಾಡುವುದು. ಕೀರ್ತಿಯನ್ನು ಹೆಚ್ಚಿಸುವುದು. ಈಪ್ರಕಾರವಾಗಿರುವ ತ್ರಿಪುರಾದೇವಿಯ ಈ ಕವಚವನ್ನು ನಾನು ಹೇಳಿರುವೆನು, ಇದನ್ನು ನೀನು ತಿಳಿದು ಚೆನ್ನಾಗಿ ಆರಾಧಿಸು, ಆದರಿಂದ ಸಿದ್ಧಿಯನ್ನು ಪಡೆಯುವೆ.

ಯಃ ಪಠೇತ್ ಪ್ರಾತರುತ್ಥಾಯ ಸ ಪ್ರಾಪ್ನೋತಿ ಮನೋಗತಂ ।
ಲಿಖಿತಂ ಕವಚಂ ಯಸ್ತು ಕಂಠೇ ಗೃಹ್ಣಾತಿ ಮಂತ್ರವಿತ್ ॥ ೬೭ ॥

ನ ತಸ್ಯ ಗಾತ್ರಂ ಕೃಂತಂತಿ ರಣೇ ಶಸ್ತ್ರಾಣಿ ಭೈರವ ।
ಸಂಗ್ರಾಮೇ ಶಾಸ್ತ್ರವಾದೇ ಚ ವಿಜಯಸ್ತಸ್ಯ ಜಾಯತೇ ॥ ೬೮ ॥

ಇದಂ ಕವಚಮಜ್ಞಾತ್ವಾ ಯೋ ಜಪೇತ್ತ್ರಿಪುರಾಂ ನರಃ ।
ಸ ಶಸ್ತ್ರಘಾತಮಾಪ್ನೋತಿ ಭೈರವೀಂ ಸುಂದರೀಮಪಿ ॥ ೬೯ ॥

ಬೀಜಮುಚ್ಚಾರಯೇತ್ ಸ್ಪಷ್ಟೋ ಗತವಾಗ್ದೋಷನಿಶ್ಚಿತಃ ।
ಸಂಯೋಗಜೋಧಃ ಪ್ರತ್ಯೇಕಭೇದಶ್ರವಣಗೋಚರಃ ॥ ೭೦ ॥

ಯಥೈವ ಜಾಯತೇ ಸಮ್ಯಗ್ಯಚ್ಛಾದಿದೋಷವರ್ಜಿತಃ ।
ಯಸ್ಯೋಚ್ಚಾರಣಕೃತ್ಯೇಷು ಸಂಯೋಗೋ ಜೋಧದೂಷಣಂ ॥ ೭೧ ॥

೬೭-೬೮, ಯಾವನು ಬೆಳಿಗ್ಗೆ ಎದ್ದು ಈ ಕವಚವನ್ನು ಪಠನಮಾಡುವನೋ, ಅವನು ತನ್ನ ಇಷ್ಟಾರ್ಥವನ್ನು ಹೊಂದುವನು. ಮಂತ್ರಜ್ಞನಾವವನು ತಾನು ಬರೆದಿರುವ ಈ ಕವಚವನ್ನು ತನ್ನ ಕಂಠದಲ್ಲಿ ಧರಿಸಿದರೆ, ಯುದ್ಧದಲ್ಲಿ ಅವನ ಶರೀರವನ್ನು ಆಯುಧಗಳು ಕತ್ತರಿಸುವುದಿಲ್ಲ. ಎಲೈ ಭೈರವನೇ ಕೇಳು, ಅವನಿಗೆ ಯುದ್ಧದಲ್ಲಿಯೂ ಶಾಸ್ತ್ರವಾದದಲ್ಲಿಯೂ ಜಯವು ತಪ್ಪದೇ ಉಂಟಾಗುವುದು,

೬೯. ಈ ಕವಚವನ್ನು ತಿಳಿಯದೆ ಯಾವ ಮನುಷ್ಯನು ತ್ರಿಪುರಾದೇವಿಯನ್ನು ಧ್ಯಾನಮಾಡುತ್ತಾ ಜಪಮಾಡುವನೋ, ಅವನಿಗೆ ಯುದ್ಧದಲ್ಲಿ ಶಸ್ತ್ರಘಾತವು ಉಂಟಾಗುವುದು.

೭೦. ಸಾಧಕನು ಬೀಜಾಕ್ಷರಗಳಲ್ಲಿರುವ ಒತ್ತಕ್ಷರಗಳ ಉಚ್ಚಾರಣೆಯು ಸ್ಪಷ್ಟವಾಗಿ ಬೇರೆಬೇರೆಯಾಗಿ ಕೇಳಿಬರುವಂತೆ, ತನ್ನ ಉಚ್ಚಾರಣಾಶಕ್ತಿಯನ್ನು ಸರಿಪಡಿಸಿಕೊಂಡು ಬೀಜಾಕ್ಷರಗಳನ್ನು ಉಚ್ಚರಿಸಬೇಕು. ಆ ಉಚ್ಚಾರಣಾಕ್ರಮದಿಂದ ಅವನು ಮಾಡುವ ಪೂಜೆಯಲ್ಲಿ ಸಂಭವಿಸಬಹುದಾದ ಲೋಪದೋಷಗಳು ಪರಿಹಾರವಾಗುವವು.

೭೧. ಯಾಂತ್ರಿಕನು ಅಕ್ಷರಗಳನ್ನು ಉಚ್ಚರಿಸುವಾಗ, ಆಯಾಯ ಒತ್ತಕ್ಷರಗಳು ಸ್ಪಷ್ಟವಾಗಿ ತಿಳಿಯುವಂತೆ ಹೇಳದಿರುವುದು ದೋಷವಾಗುವುದು. ಪ್ರತ್ಯೇಕವಾಗಿ

ಪ್ರತ್ಯೇಕಭಿನ್ನತಾ ಬೋಧಃ ಸ ಕುಷ್ಠೀ ಜಾಯತೇ ನರಃ ।
ನ್ಯಾಸಾನಾಂ ಪ್ರಚುರತ್ವೇ ತು ಫಲಾನಾಮಪಿ ಭೂರಿತಾ ॥ ೭೨ ॥

ಉಕ್ತೇನ್ಯಾಸೋ ನ ಹಿ ತ್ಯಾಜ್ಯೋ ಹ್ಯಧಿಕಂ ತು ಸಮಾಚರೇತ್ ।
ಮಯೋಕ್ತಂ ನ್ಯಾಸಮಜ್ಞಾತ್ವಾ ನ ಕೃತ್ವಾ ವಾ ಪ್ರಮಾದತಃ ॥ ೭೩ ॥

ಯಃ ಕುರ್ಯಾತ್ಪೂಜನಂ ದೇವ್ಯಾ ಆಪ್ನುಯಾತ್ಸ ಮಹಾಪದಂ ।
ಮಂತ್ರಾಕ್ಷರಸ್ಯ ವಿನ್ಯಾಸಃ ಸರ್ವಮಂತ್ರೇಷು ಕೀರ್ತಿತಃ ॥ ೭೪ ॥

ವೈಷ್ಣವೇ ಚಾಥವಾ ರೌದ್ರೇ ಮಹಾಭಾಗೇಽಥವಾ ಪುನಃ ।
ಮಂತ್ರೇ ಕಳೇಬರಗತೇ ಮಹಾಮಾಯಾಪ್ರಪೂಜನೇ ॥ ೭೫ ॥

ಅಕ್ಷರಗಳನ್ನು ಚೆನ್ನಾಗಿ ತಿಳಿಯುವಂತೆ ಉಚ್ಚರಿಸದಿದ್ದರೆ ಅವನು ಕುಷ್ಠರೋಗಿಯಾಗುವನು. ಆದುದರಿಂದ ಒತ್ತಕ್ಷರವಿರುವ ಬೀಜಾಕ್ಷರಗಳನ್ನು ಉಚ್ಚರಿಸುವಾಗ ಸ್ಪುಟವಾಗಿ ಆಯಾಯ ಒತ್ತಕ್ಷರಗಳ ಉಚ್ಚಾರಣೆಯು ಎಷ್ಟರಮಟ್ಟಿಗೆ ಆಗಬಹುದೋ ಅಷ್ಟು ಮಾತ್ರ ಅದನ್ನು ಉಚ್ಚರಿಸಬೇಕು.

೭೨. ಬೀಜಾಕ್ಷರದ ನ್ಯಾಸವನ್ನು ಹೆಚ್ಚಾಗಿ ಮಾಡಿದರೆ ಫಲವೂ ಹೆಚ್ಚಾಗುವುದು. ನ್ಯಾಸವನ್ನು ನಾನು ಎಷ್ಟು ಹೇಳಿರುವೆನೋ ಅಷ್ಟನ್ನೂ ಬಿಡಬಾರದು. ಇನ್ನೂ ಅದಕ್ಕಿಂತ ಹೆಚ್ಚಾಗಿ ಮಾಡಬೇಕು.

೭೩. ನಾನು ಹೇಳಿದ ನ್ಯಾಸಕ್ರಮವನ್ನು ತಿಳಿದುಕೊಳ್ಳದೆ ಯಾವನು ಪ್ರಮಾದವಶವಿಂದ ಆ ನ್ಯಾಸವನ್ನು ಮಾಡದೆ ದೇವಿಯ ಪೂಜೆಯನ್ನು ಮಾಡುವನೋ ಅವನು ಬಹಳ ವಿಪತ್ತನ್ನು ಹೊಂದುವನು.

೭೪-೭೫. ಮಂತ್ರಾಕ್ಷರದ ವಿನ್ಯಾಸವು ಎಲ್ಲಾ ಮಂತ್ರಗಳಲ್ಲಿಯೂ ಕೇಳಿರುವುದು. ವೈಷ್ಣವಮಂತ್ರ, ಶಿವಮಂತ್ರ, ದೇವಿಯಮಂತ್ರ ಇವೆಲ್ಲದರಲ್ಲಿಯೂ, ಈ ನ್ಯಾಸಕ್ರಮವು ಉಕ್ತವಾಗಿರುವುದು. ಮಂತ್ರವು ದೇಹಕ್ಕೆ ಸೇರಿ ಶರೀರಶುದ್ಧಿಯಾಗುವಂತೆ ಮಹಾಮಾಯಾದೇವಿಯ ಪೂಜೆಯನ್ನು ಮಾಡುವಾಗಾಗಲಿ, ಅಥವಾ ಬೇರೆಯಕಾಲದಲ್ಲಾಗಲಿ, ಬೀಜಾಕ್ಷರನ್ಯಾಸವನ್ನು ಮಾಡಬೇಕು. ಮಂತ್ರನ್ಯಾಸವಿಂದಲಾದರೂ ಪೂಜೆಯನ್ನು ಮಾಡಬೇಕು.

ಮಂತ್ರನ್ಯಾಸೇನ ವಾ ಕುರ್ಯಾತ್ಕುರ್ಯಾದ್ವಾನ್ಯತ್ರ ವಾಚರೇತ್ ।
ಅಂಗರಾಗೇಷು ಸಿಂಧೂರಂ ಪಾನೇಷು ಮದಿರಾ ತಥಾ ॥ ೭೬ ॥

ವಸ್ತ್ರಂ ರಕ್ತಂ ತು ಕೌಶೇಯಂ ತ್ರಿಪುರಾಪ್ರೀತಿದಂ ಮತಂ ।
ತ್ರಯೋ ದೀಪಾಃ ಪ್ರದಾತವ್ಯಾಃ ಪಂಚ ವಾ ಸಪ್ತ ಭೈರವ ॥ ೭೭ ॥

ಇತೋ ನ್ಯೂನಂ ನ ಪ್ರದದ್ಯಾತ್ತ್ರಿಪುರಾಯೈ ಕದಾಚನ ।
ಮಲ್ಲಿಕಾ ಮಾಲತೀ ಕುಂದಂ ಬಕೋ ದ್ರೋಣಃ ಸಿತಾಂಬುಜಂ ॥ ೭೮ ॥

ಶುಕ್ಲಪುಷ್ಪಾಣಿ ತ್ರಿಪುರಾಪ್ರೀತಿದಾನಿ ತು ಭೈರವ ।
ರಕ್ತಾಂಬುಜಂ ಯಮಾ ರಕ್ತಾಃ ಕರವೀರೋಽಥ ಕೋಮಲಃ ॥ ೭೯ ॥

ರಕ್ತಂ ತ್ರಿಪುರಭೈರವ್ಯಾಃ ಪ್ರೀತಿದಾಃ ಸ್ನೇಹಕಾಂಚನೈಃ ।
ಇದಂ ತೇ ಕಥಿತಂ ಪುತ್ರ ಸಂಕ್ಷೇಪಾದೇವ ಭೈರವ ॥ ೮೦ ॥

---

೭೬. ಅಲಂಕಾರದದ್ರವ್ಯಗಳಲ್ಲಿ ಚಂದ್ರನೂ, ಪಾನಮಾಡುವ ಪದಾರ್ಥಗಳಲ್ಲಿ ಮದ್ಯವೂ, ವಸ್ತ್ರಗಳಲ್ಲಿ ಕೆಂಪಾದ ಬಟ್ಟೆ ಅಥವಾ ರೇಷ್ಮೆಯ ಬಟ್ಟೆಯೂ ತ್ರಿಪುರಾದೇವಿಗೆ ಪ್ರೀತಿಯನ್ನುಂಟುಮಾಡುವುದೆಂದು ತಿಳಿದವರು ಹೇಳುವರು.

೭೭. ತ್ರಿಪುರಾದೇವಿಯ ಪೂಜೆಯಲ್ಲಿ ಮೂರು, ಐದು, ಏಳು, ದೀಪಗಳಿರಬೇಕು. ಎಲೈ ಭೈರವನೇ ಕೇಳು, ಇದಕ್ಕಿಂತಲೂ ಕಡಿಮೆಯಾದ ದೀಪಗಳನ್ನು ಇಡಬಾರದು.

೭೮-೭೯. ಎಲೈ ಭೈರವನೇ ಕೇಳು, ಮಲ್ಲಿಗೆ, ಜಾಜಿ, ಮಾಘಮಲ್ಲಿಗೆ, ಬಕುಳ ಹೂವು, ತುಂಬೆಹೂವು, ಬಿಳಿಯ ಕಮಲ, ಇವೇ ಮೊದಲಾದ ಬಿಳಿಯ ಹೂವುಗಳು ತ್ರಿಪುರಾದೇವಿಗೆ ಪ್ರೀತಿಯನ್ನುಂಟುಮಾಡುವುವು. ಕೆಂಪುತಾವರೆಯಹೂವು, ಕೆಂಪು ಅಕ್ಷತೆ, ಕಣಿಗಲೇಹೂವು, ಇವುಗಳೂ, ಕೆಂಪಿನಿಂದ ಕೂಡಿದ ಚಿನ್ನದ ಆಭರಣೆಗಳು, ಇವುಗಳೂ, ತ್ರಿಪುರಭೈರವೀದೇವಿಗೆ ಪ್ರೀತಿಯನ್ನುಂಟುಮಾಡುವವು.

೮೦-೮೧. ಎಲೈ ಪುತ್ರನಾದ ಭೈರವನೇ ಕೇಳು, ಈ ತ್ರಿಪುರಭೈರವೀಮಂತ್ರವನ್ನು ನಿನಗೆ ಹೇಳಿರುತ್ತೇನೆ. ನೀನು ಇದನ್ನು ಆಚರಿಸಿ ಹೆಚ್ಚಾದ ಸಿದ್ಧಿಯನ್ನು ಹೊಂದಿದರೆ; ನೀನೇ ಇದನ್ನು ವಿಸ್ತಾರವಾಗಿ ಹೇಳಲು ಸಮರ್ಥನಾಗುವೆ. ನೀನು

ಅವಾಪ್ಯ ಸಿದ್ಧಿಂ ಪರಮಾಂ ಸ್ವಯಂ ವಿಸ್ತಾರಯಿಷ್ಯಸಿ ।
ಆರಾಧ್ಯ ತ್ವಂ ಮಹಾಮಾಯಾಮವಾಪ್ಯ ಚ ಗಣೇಶತಾಂ ॥ ೮೧ ॥

ಕಲ್ಪಮಂತ್ರೌಘಮಂತ್ರಾಣಿ ಭವಿಷ್ಯಸಿ ವಿತಾನಕಃ ।
ಅಸ್ಯಾಸ್ತ್ರಿಪುರಭೈರವ್ಯಾಃ ಶುಕ್ಲರೂಪಾಣಿ ಯಾನಿ ತು ॥ ೮೨ ॥

ತಾನಿ ಸಾರಸ್ವತಾಖ್ಯಾನಿ ಮಂತ್ರಾಃ ಸಮ್ಯಗುದೀರಿತಾಃ ।
ಸರಸ್ವತೀ ತು ಯಾ ದೇವೀ ವೀಣಾಪುಸ್ತಕಧಾರಿಣೀ ॥ ೮೩ ॥

ಸ್ರಕ್ಕಮಂಡಲುಹಸ್ತಾ ಚ ವಕ್ಷಿಣೇ ಶುಕ್ಲವರ್ಣಿಕಾ ।
ಮಹಾಚಲಸ್ಯ ಪೃಷ್ಠಸ್ಥಾ ಸಿತಪದ್ಮೋಪರಿ ಸ್ಥಿತಾ ॥ ೮೪ ॥

ಶುಕ್ಲವರ್ಣಾ ಶುಕ್ಲವಸ್ತ್ರಾ ಶುಕ್ಲಾಭರಣಭೂಷಿತಾ ।
ತಸ್ಯಾಸ್ತು ವಾಗ್ಭವಾದ್ಯಾಭ್ಯಾಂ ನೇತ್ರಬೀಜಂ ದ್ವಿತೀಯಕಂ ॥ ೮೫ ॥

ಕೃತ್ವಾಂತೇ ವಿನಿಯೋಜ್ಯೈವ ಮಂತ್ರಂ ಪ್ರಾಕ್ಪ್ರತಿಪಾದಿತಂ ।
ವರದಾಭೀಯಹಸ್ತಾ ಚ ಮಾಲಾಪುಸ್ತಕಧಾರಿಣೀ ॥ ೮೬ ॥

ದೇವಿಯನ್ನು ಪೂಜಿಸಿ ಗಣಾಧಿಪತಿಯಾಗಿ ದೇವಿಯ ತಂತ್ರಮಂತ್ರಗಳ ಶಾಸ್ತ್ರಗಳನ್ನು ಬರೆಯುವವನೂ, ಹೇಳುವವನೂ ಸಹ ಆಗುತ್ತೀಯೆ.

೮೨-೮೫. ತ್ರಿಪುರಭೈರವೀದೇವಿಯ ಶುಕ್ಲವರ್ಣದ ಯಾವ ರೂಪಗಳಿರುವವೋ ಅವುಗಳು ಸಾರಸ್ವತಗಳೆನಿಸುವವು. ಆ ದೇವಿಯರ ಮಂತ್ರಗಳನ್ನೂ ವಿಸ್ತಾರವಾಗಿ ಹೇಳಿರುವೆನು. ವೀಣೆ, ಪುಸ್ತಕ, ಸ್ರಕ್ಕು, ಕಮಂಡಲು, ಇವುಗಳನ್ನು ನಾಲ್ಕು ಕೈಗಳಲ್ಲಿ ಧರಿಸಿಕೊಂಡು, ಶುಭ್ರವರ್ಣದಿಂದ ಕೂಡಿ, ಮೇರುವಿನ ತಪ್ಪಲಿನಲ್ಲಿ ಬಿಳಿಯ ದಾದ ಪದ್ಮದಮೇಲೆ ಕುಳಿತು, ಬಿಳಿಯ ವಸ್ತ್ರವನ್ನೂ, ಬಿಳಿಯ ಆಭರಣಗಳನ್ನೂ ಧರಿಸಿರುವ ದೇವಿಯು ಸರಸ್ವತೀ ಎನಿಸಿಕೊಂಡಿರುವಳು. ಆ ಸರಸ್ವತೀದೇವಿಯ ವಾಗ್ಭವವೇ ಮೊದಲಾದ ಬೀಜಮಂತ್ರಗಳಿಗೆ ಎರಡನೆಯ ನೇತ್ರಬೀಜಮಂತ್ರವನ್ನೂ ಸೇರಿಸಿ, ನಿನಗೆ ನಾನು ಮೊದಲೇ ಹೇಳಿರುವೆನು.

೮೬-೮೭. ವರದ, ಅಭಯಹಸ್ತ, ಜಪಸರ, ಪುಸ್ತಕ ಇವುಗಳನ್ನು ಧರಿಸಿ ಕೊಂಡು ಬಿಳಿಯದಾದ ಪದ್ಮದಮೇಲೆ ಕುಳಿತಿರುವವಳು ಸರಸ್ವತಿಯ ಮತ್ತೊಂದು ರೂಪವಾದ ವಾಕ್ಸರಸ್ವತಿಯು. ಮಾಲಾಬೀಜದ ಮೊದಲನೆಯ ಅಕ್ಷರಕ್ಕೆ ಅನುಸ್ವಾರ

ಶುಕ್ಲಪದ್ಮಾಸನಗತಾ ಸಾ ಪರಾ ವಾಕ್ಸರಸ್ವತೀ ।
ಮೂಲಾಬೀಜಾದ್ಯಕ್ಷರಂ ತು ದ್ವಿರುಕ್ತಂ ಚಾರ್ಧಚಂದ್ರಕಂ ॥ ೮೭ ॥

ಮಂತ್ರಮಸ್ಯಾಃ ಪುರಾ ಪ್ರೋಕ್ತಂ ತನ್ತ್ರಂ ಸಾಮಾನ್ಯಮೀರಿತಂ ।
ಏಷಾ ತು ಯಾ ರಕ್ತವರ್ಣಾ ಮುಂಡಮಾಲಾವಿಭೂಷಿತಾ ॥ ೮೮ ॥

ತಸ್ಯಾಃ ಪ್ರೋಕ್ತೇಃ ಪುರಾ ಮಂತ್ರಃ ಸಾ ತು ವೃದ್ಧಾ ಸರಸ್ವತೀ ।
ಷಷ್ಠೋ ಮಂತ್ರಸ್ತಥೈತಸ್ಯಾಸ್ತ್ರಯೋದಶನಿರೂಪಣೇ ॥ ೮೯ ॥

ಏತಾಃ ಕವಿತ್ವಶಾಸ್ತ್ರೌಘತತ್ತ್ವಸಾಧನನಿಶ್ಚಯೇ ।
ಸುಖಸಂಪತ್ಕರಾಃ ಪ್ರೋಕ್ತಾ ನಿತ್ಯಮೇವ ತು ಭೈರವ ॥ ೯೦ ॥

ಅಸ್ಯಾಶ್ಚಸ್ರೋ ಮೃತಃ ಸಮಸ್ತೈಶ್ಚ ಶುಕ್ಲರಕ್ತಾದಿಭೇದತಃ ।
ಚತುಃಷಷ್ಟಿರ್ಮೂರ್ತಯಶ್ಚ ತ್ರೈಪುರಾದುತ ವಾಗ್ಭವಂ ॥ ೯೧ ॥

ವನ್ನು ಸೇರಿಸಿ ಎರಡಾವರ್ತಿ ಹೇಳಿದನೆ, ಈ ದೇವಿಯ ಮಂತ್ರವಾಗುವುದು. ಈ ಮಂತ್ರವನ್ನು ನಾನು ಮೊದಲು ಹೇಳುವೆನು. ತಂತ್ರವನ್ನೂ ಸಾಮಾನ್ಯವಾಗಿ ಹೇಳಿರುವೆನು.

೮೮. ಕೆಂಪುಬಣ್ಣದಿಂದಕೂಡಿ, ಮುಂಡಮಾಲೆಯಿಂದ ಅಲಂಕರಿಸಲ್ಪಟ್ಟ ಯಾವ ದೇವಿಯ ಆಕಾರವು ಇರುವುದೋ ಅದು ವೃದ್ಧಾಸರಸ್ವತೀ ಎನ್ನಿಸಿಕೊಳ್ಳುವುದು. ಆ ದೇವಿಯ ಮಂತ್ರವು ಹಿಂದೆ ಹೇಳಲ್ಪಟ್ಟಿರುವುದು.

೮೯-೯೦. ಈ ದೇವಿಯ ಮಂತ್ರಗಳನ್ನು ಚೆನ್ನಾಗಿ ವಿಮರ್ಶೆಮಾಡುವಾಗ ಆಗುವ ಹದಿಮೂರರಲ್ಲಿ ಆರನೆಯ ಮಂತ್ರವು ಹಿಂದೆ ಹೇಳಲ್ಪಟ್ಟಿರುವುದು. ಎಲೈ ಭೈರವನೇ ಕೇಳು. ಈ ಮಂತ್ರಗಳು ಯಾವಾಗಲೂ, ಕವಿತ್ವ, ಶಾಸ್ತ್ರವಾದ ಇವುಗಳಲ್ಲಿ ಸಾಮರ್ಥ್ಯವನ್ನೂ, ಜ್ಞಾನವನ್ನೂ ಉಂಟುಮಾಡುವುದಲ್ಲದೆ, ಸುಖವನ್ನೂ ಐಶ್ವರ್ಯವನ್ನೂ ಯಾವಾಗಲೂ, ಕೊಡುವುದು, ಎಂದು ಶಾಸ್ತ್ರದಲ್ಲಿ ಹೇಳಿರುವುದು.

೯೧. ತ್ರಿಪುರಾದೇವಿಯ ಸಂಬಂಧಿಯಾದ ಮೂರ್ತಿಗಳು ಶುಕ್ಲ, ರಕ್ತ, ಎಂಬ ಭೇದಗಳಿಂದಲೂ, ಅಸ್ಯಾದಿ ಭೇದಗಳಿಂದಲೂ, ವಾಗ್ಭವಬೀಜಪೂರೇರಿ ಈ ದೇವಿಯ ಮೂರ್ತಿಗಳು ಅರವತ್ತನಾಲ್ಕು ಆಗುವವು.

ಮಹಾಮಾಯಾ ಯೋಗನಿದ್ರಾ ಮೂಲಭೂತಾ ಜಗತ್ಪ್ರಸೂಃ ।
ಜಗನ್ಮಾತಾ ಜಗದ್ಧಾತ್ರೀ ವಿದ್ಯಾವಿದ್ಯಾ ಪರಾತ್ಮಿಕಾ ॥ ೯೨ ॥

ತಸ್ಯಾ ಏವ ಮಹಾಭಾಗ ತ್ರಿಪುರಾದ್ಯಾ ವಿಭೂತಯಃ ।
ಪ್ರಸ್ತುತಾಃ ಕಥಿತಾ ನಿತ್ಯಂ ತಾಃ ಸ್ವಯಂ ಗತ ಏವ ಹಿ ॥ ೯೩ ॥

ಇತೀ ತೇ ಕಥಿತಂ ಪುತ್ರ ಮಹಾದೇವ್ಯಾ ಮನೋಹರಂ ।
ರಹಸ್ಯಂ ವಾಮದಾಕ್ಷಿಣ್ಯಂ ಮಂತ್ರಸಿದ್ಧಿಂ ಶೃಣುಷ್ವ ಮೇ ॥ ೯೪ ॥

॥ ಇತಿ ಶ್ರೀಕಾಲಿಕಾಪುರಾಣೇ ಏಕೋನಾಶೀತಿತಮೋಽಧ್ಯಾಯಃ ॥

೯೨-೯೩. ಮಹಾಮಾಯಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿಯೂ ಜಗತ್ತನ್ನು ಸೃಷ್ಟಿಮಾಡುವಳಾಗಿಯೂ, ಜಗತ್ತನ್ನು ಪೋಷಿಸುವಳಾಗಿಯೂ, ಜ್ಞಾನ, ಅಜ್ಞಾನ ಪರಾ, ಇವುಗಳ ಸ್ವರೂಪವಾಗಿಯೂ, ಇರುವ ಯೋಗನಿದ್ರೆಯೆಂಬ ದೇವಿಯು ಇವೆಲ್ಲಕ್ಕೂ ಕಾರಣವಾಗಿರುವಳು. ಎಲೈ ಅದೃಷ್ಟಶಾಲಿಯೇ, ತ್ರಿಪುರಾ ದೇವಿಯೇ ಮೊದಲಾದವರ ಮಹಿಮೆಯು, ಆ ದೇವಿಯ, ಮಹಿಮೆಯಲ್ಲಿ ಅಡಗಿರುವುದು. ಇವುಗಳೆಲ್ಲವನ್ನೂ ನಾನು ಈ ಪ್ರಕರಣದಲ್ಲಿ ಹೇಳಿರುವೆನು. ಅವುಗಳಲ್ಲಿ ಇದು ಅಂತರ್ಭವಿಸಿರುವುದು.

೯೪. ಎಲೈ ಪುತ್ರನೇ, ಕೇಳು. ಮಹಾದೇವಿಯ ಮನೋಹರವಾಗಿಯೂ ರಹಸ್ಯವಾಗಿಯೂ, ಇರುವ ಪೂಜಾಕ್ರಮಗಳಲ್ಲಿ ವಾಮದಕ್ಷಿಣಾಚಾರಕ್ರಮಗಳನ್ನು ನಿನಗೆ ಹೇಳಿರುವೆನು. ಇನ್ನು ಮಂತ್ರಸಿದ್ಧಿಯನ್ನು ಹೇಳುವೆನು ಕೇಳು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಪ್ಪತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಅಶೀತಿತಮೋऽಧ್ಯಾಯಃ ॥

॥ ಶ್ರೀಭವಾನುವಾಚ ॥

ಮಂತ್ರಶುದ್ಧಿಮವೇಕ್ಷೈವ ಗೃಹ್ಣೀಯಾನ್ಮಂತ್ರಮುತ್ತಮಂ ।
ತತ್ರ ಸಿದ್ಧಂ ಸುಸಿದ್ಧಂ ಚ ಸಾಧ್ಯಶತ್ರುತ್ವಮೇವ ಚ ॥ ೧ ॥

ಮಂತ್ರಂ ಚತುರ್ವಿಧಂ ಪ್ರೋಕ್ತಂ ತದ್ವಿದ್ಧ್ಯಕ್ಷರಭೇದತಃ ।
ವರ್ಣಕ್ರಮಃ ಶಾತ್ವತಸ್ತು ಯೋ ಮಯಾ ಭಾಷಿತಃ ಪುರಾ ॥ ೨ ॥

ತಮಾದೌ ಭೈರವ ಜ್ಞಾತ್ವಾ ಪಶ್ಚಾಚ್ಚಕ್ರಂ ಶೃಣುಷ್ವ ಮೇ ।
ವರ್ಣಾನಾಂ ತು ಯುಗಾದೀನಾಂ ವೈಷ್ಣವೀತಂತ್ರಸಂಜ್ಞಕಃ ॥ ೩ ॥

ಯಃ ಪ್ರೋಕ್ತೋಽಭೂನ್ಮಹಾಮಂತ್ರಸ್ತಸ್ಯಾ ಯಾನ್ಯಕ್ಷರಾಣಿ ತು ।
ಮೂಲಭೂತಾನಿ ತಾನ್ಯೇವ ತತೋऽನ್ಯಾನಪಿ ವರ್ಧಯೇತ್ ॥ ೪ ॥

ಎಂಭತ್ತನೆಯ ಅಧ್ಯಾಯ

೧. ಪರಮೇಶ್ವರನು ಹೇಳಿದನು:—ಮಂತ್ರವನ್ನು ಉಪಾಸನೆಮಾಡುವುದಕ್ಕೆ ಮೊದಲು, ಸಾಧಕನು ಪ್ರಾರಂಭದಲ್ಲಿ ಆಚರಿಸಬೇಕಾದ ವಿಧಿನಿಯಮಗಳನ್ನು ಅನುಷ್ಠಾನಮಾಡಿ, ಮಂತ್ರಶುದ್ಧಿಯನ್ನು ನೋಡಿಕೊಂಡು, ಬಳಿಕ ಮಂತ್ರವನ್ನು ಸ್ವೀಕರಿಸಬೇಕು. ಮಂತ್ರಗಳು ಸಿದ್ಧ, ಸುಸಿದ್ಧ, ಸಾಧ್ಯ, ಶತ್ರು ಎಂದು ಅಕ್ಷರಗಳ ಭೇದಕ್ಕನುಸಾರವಾಗಿ ನಾಲ್ಕುವಿಧವಾಗಿರುವವು.

೨. ಅಕಾರಾದಿಯಾಗಿ ಕ್ಷಕಾರದವರೆಗೆ ಇರುವ ವರ್ಣಕ್ರಮವು ಯಾವಾಗಲೂ ನಿತ್ಯವಾಗಿರುವುದು. ಇದನ್ನು ನಾನು ಹಿಂದೆಯೇ ಹೇಳಿರುವೆನು. ಇದನ್ನು ಮೊದಲು ತಿಳಿದು, ಬಳಿಕ ನಾನು ಈಗ ಹೇಳುವ ಚಕ್ರಸ್ವರೂಪವನ್ನು ಕೇಳಿ ತಿಳಿದುಕೋ.

೩-೪. ವೈಷ್ಣವೀ ಮಂತ್ರವೆಂದು ಹೆಸರುಳ್ಳ ಮಹಾಮಂತ್ರಕ್ಕೆ ಸಂಬಂಧಿಸಿದಂತೆ ಹೇಳಿರುವ ಅಕ್ಷರಗಳನ್ನು ಎರಡೆರಡಾಗಿ ಸೇರಿಸಿ ಉಚ್ಚರಿಸಬೇಕು. ಈಮಂತ್ರವ

ಅಕಾರಶ್ಚ ಕಕಾರಶ್ಚ ಚಟಕಾರೌ ತಥೈವ ಚ ।
ತಪಕಾರೌ ಯಶಾಶ್ಚೈವ ವರ್ಗಾದ್ಯಾಃ ಪರಿಕೀರ್ತಿತಾಃ ॥ ೫ ॥

ಆ ಈ ಋ ೠ ಇ ಉ ಋೂ ಲೃ ಲ್ವ ಏತೇ ದೀರ್ಘದೀರ್ಘಕಾಃ ।
ಏ ಐ ಓ ಔ ವಿಸರ್ಗಶ್ಚ ಬಿಂದ್ವಾದಿರ್ಯಾಜ್ಞಿಕಸ್ತಥಾ ॥ ೬ ॥

ಅಕ್ಷರಗಳೇ ಇತರ ಮಂತ್ರಗಳಿಗೆ ಮೂಲಭೂತವಾಗಿರುವವು. ಈ ಅಕ್ಷರಗಳಿಂದಲೇ ಇತರ ಮಂತ್ರಗಳನ್ನು ರಚಿಸಿಕೊಳ್ಳಬೇಕು.

೫. ಅ, ಕ, ಚ, ಟ, ತ, ಪ, ಯ, ಶ, ಎಂಬ ಅಕ್ಷರಗಳು ವರ್ಗಗಳ ಆದ್ಯಕ್ಷರ ವೆನಿಸಿಕೊಳ್ಳುವುವು. ಇಲ್ಲಿ ಅಕಾರವು ಹದಿನಾಲ್ಕು ಸ್ವರಗಳಿಗೆ ಆದಿಯಾಗಿರುವುದರಿಂದ ಸ್ವರಾಕ್ಷರಗಳೆಂಬ ವರ್ಗಕ್ಕೆ ಇದು ಆದಿಯು. ಇದರಂತೆಯೇ ಕಕಾರವು ಕ, ಖ, ಗ, ಘ, ಙ, ಎಂಬ ಐದು ಅಕ್ಷರಗಳಿಂದ ಕೂಡಿದ ಕವರ್ಗಕ್ಕೂ, ಚಕಾರವು ಚವರ್ಗಕ್ಕೂ, ಟಕಾರವು ಟವರ್ಗಕ್ಕೂ, ತಕಾರವು ತವರ್ಗಕ್ಕೂ, ಪಕಾರವು ಪವರ್ಗಕ್ಕೂ, ಆದ್ಯಕ್ಷರಗಳು. ಯಕಾರವು ಯ, ರ, ಲ, ವ, ಎಂಬ ಅಕ್ಷರಗಳಿಂದ ಕೂಡಿದ ವರ್ಗಕ್ಕೆ ಆದಿಯು. ಶಕಾರವು ಶ, ಷ, ಸ, ಹ, ಳ, ಕ್ಷ, ಎಂಬ ಅಕ್ಷರಗಳಿಗೆ ಆದಿಯು. ಈ ಕ್ರಮವನ್ನು ಅನುಸರಿಸಿ ಈ ವರ್ಗಾದಿಯಾವ ಎಲ್ಲ ಅಕ್ಷರಗಳನ್ನೂ ಬಿಂದುವಿನೊಡನೆ ಸೇರಿಸಿದರೆ ವೈಷ್ಣವೀದೇವಿಯ ಅಂ, ಕಂ, ಚಂ, ಟಂ, ತಂ, ಪಂ, ಯಂ, ಶಂ, ಎಂಬ ಅಷ್ಟಾಕ್ಷರೀಮಹಾಮಂತ್ರವಾಗುವುದು. ಈ ಎಂಟು ಬೀಜಾಕ್ಷರಗಳಿಗೂ ಎಂಟು ಅಧಿದೇವತೆಗಳಿರುವರು. ಹೇಗೆಂದರೆ:—ಅಕಾರವು ವಾಸುದೇವಬೀಜಾಕ್ಷರವು, ಕಕಾರವು ಬ್ರಹ್ಮಬೀಜಾಕ್ಷರವು, ಚಕಾರವು ಚಂದ್ರಶೇಖರಬೀಜಾಕ್ಷರವು, ಟಕಾರವು ಗಣಪತಿ ಬೀಜಾಕ್ಷರವು, ತಕಾರವು ಆದಿತ್ಯಬೀಜಾಕ್ಷರವು, ಪಕಾರವು ಶಕ್ತಿಬೀಜಾಕ್ಷರವು, ಯಕಾರವು ಮಹಾಲಕ್ಷ್ಮೀಬೀಜಾಕ್ಷರವು, ಶಕಾರವು ಸರಸ್ವತೀಬೀಜಾಕ್ಷರವು, ಈರೀತಿ ಶಕ್ತಿಪಂಚಾಯತನ ದೇವತೆಗಳ ಮತ್ತು ಮಹಾಮಾಯಾ, ಸರಸ್ವತೀ ಈ ದೇವಿಯರ ಬೀಜಾಕ್ಷರಗಳನ್ನೊಳಗೊಂಡಿರುವ ಈ ಎಂಟು ಬೀಜಾಕ್ಷರಗಳು ವೈಷ್ಣವೀದೇವಿಯ ಅಷ್ಟಾಕ್ಷರೀಮಹಾಮಂತ್ರವೆನಿಸುವುದು. ಇದರ ವಿವರಣೆಯು ೫೮ನೇ ಅಧ್ಯಾಯದಲ್ಲಿರುವ ಮಹಾಮಾಯಾಕವಚನಿರೂಪಣೆಯಲ್ಲಿ ಬೇರೆಲ್ಪಟ್ಟಿರುವುದು.

೬-೧೨. ಅ, ಇ, ಉ, ಋ, ಲೃ, ಎಂಬ ಹ್ರಸ್ವಸ್ವರಗಳೂ, ಆ, ಈ, ಊ, ೠ, ೡ, ಏ, ಐ, ಓ, ಔ, ಎಂಬ ದೀರ್ಘಸ್ವರಗಳೂ, ಅನುಸ್ವಾರ ವಿಸರ್ಗಗಳೂ

ಧನೇರಂತರಜಾಶ್ಚೇತಿ ಕೀರ್ತಿತಾಸ್ತು ಸ್ವರಾ ಅಮೀ ।
ಖಕಾರಶ್ಚ ಗಕಾರಶ್ಚ ಘಜಿಝೋ ವರ್ಗಃ ಪ್ರಕೀರ್ತಿತಃ ॥ ೭ ॥
ವ್ಯಂಜನಶ್ಚಕಕಾರಾದಿ ಛಜೌ ಝಞೌ ಪರಃ ಸ್ಮೃತಃ ।
ಟಕಾರಶ್ಚ ಡಕಾರಶ್ಚ ಭೈರವ ಶಬ್ದಾದಿರೇವ ಚ ॥ ೮ ॥
ಣಕಾರಾಂತಸ್ತೃತೀಯೋಽಯಂ ವರ್ಗೇಷ್ಟಾದಿಃ ಪ್ರಕೀರ್ತಿತಃ ।
ಥಕಾರಶ್ಚ ದಕಾರಶ್ಚ ಧರ್ಮಶಬ್ದಾದಿರೇವ ಚ ॥ ೯ ॥
ನವಶಬ್ದಸ್ಯ ಚೈವಾದಿಶ್ಚತುರ್ಥೋ ವರ್ಗ ಉಚ್ಯತೇ ।
ಫಲಶಬ್ದಸ್ಯ ಯಶ್ಚಾದಿರ್ಬಹು ಶಬ್ದಾದಿರೇವ ಚ ॥ ೧೦ ॥
ಭಕಾರೋ ಮನಶಬ್ದಾದಿಃ ಪಂಚಮೋ ವರ್ಗ ಉಚ್ಯತೇ ।
ಯಕಾರಶ್ಚ ರಕಾರಶ್ಚ ಲಕಾರೋ ವಸ್ತುಭೈವ ಚ ॥ ೧೧ ॥
ಏಭಿಶ್ಚತುರ್ಭಿರ್ವರ್ಗೋಽಯಂ ಷಷ್ಠೋ ಭೈರವ ಉಚ್ಯತೇ ।
ಶಷಸಾಹಃ ಕ್ಷಕಾರಶ್ಚ ಸಂಯೋಗಃ ಪರಿವೇದಕಃ ॥ ೧೨ ॥

ಸೇರಿ ಸ್ವರವರ್ಗವೆನಿಸುವುದು. ಕಕಾರವು ಆದಿಯಾಗಿರುವ ವರ್ಗಕ್ಕೆ ಖ, ಗ, ಘ,ಜ, ಎಂಬ ಅಕ್ಷರಗಳು ಸೇರಿರುವವು. ಚವರ್ಗಕ್ಕೆ ಛ, ಝ, ಜ, ಞ, ಎಂಬ ಅಕ್ಷರಗಳು ಸೇರಿದವು. ಠ, ಡ, ಢ, ಣ, ಎಂಬ ಅಕ್ಷರಗಳು ಟಕಾರವು ಆದಿಯಾಗಿರುವ ಮೂರನೆ ವರ್ಗಕ್ಕೆ ಸೇರಿದವುಗಳು, ಥ, ದ, ಧ, ನ, ಈ ಅಕ್ಷರಗಳು ತವರ್ಗವೆಂಬ ನಾಲ್ಕನೆಯ ವರ್ಗಕ್ಕೆ ಸೇರಿದವುಗಳು. ಫ, ಬ, ಭ, ಮ, ಎಂಬ ವರ್ಣಗಳು ಐದನೆಯವರ್ಗಕ್ಕೆ ಸೇರಿದವುಗಳು. ಯ, ರ, ಲ, ವ, ಎಂಬ ನಾಲ್ಕು ಅಕ್ಷರಗಳಿಂದ ಕೂಡಿದ ಈ ವರ್ಗವು ಆರನೆಯದೆನಿಸುವುದು. ಶ, ಷ, ಸ, ಹ, ಕ್ಷ, ಎಂಬ ಅಕ್ಷರಗಳು ಒಟ್ಟುಗೂಡಿ ಐದಕ್ಷರಗಳಿಂದ ಈ ಏಳನೆಯ ವರ್ಗವಾಗುವುದು ಎಂದರೆ ವರ್ಗಗಳನ್ನು ಹೀಗೆ ವಿಂಗಡಿಸ ಬಹುದು---

ಅಕಾರಾದಿ ಸ್ವರವರ್ಗ---ಅ, ಆ, ಇ, ಈ, ಉ, ಊ, ಋ, ೠ, ಌ, ೡ, ಏ, ಐ, ಓ, ಔ, ಅಂ, ಅಃ---

ಕವರ್ಗ---ಕ, ಖ, ಗ, ಘ, ಙ. ಪವರ್ಗ---ಪ, ಫ, ಬ, ಭ, ಮ.
ಚವರ್ಗ---ಚ, ಛ, ಜ, ಝ, ಞ. ಯವರ್ಗ---ಯ, ರ, ಲ, ವ.
ಟವರ್ಗ---ಟ, ಠ, ಡ, ಢ, ಣ. ಶವರ್ಗ---ಶ, ಷ, ಸ, ಹ, ಕ್ಷ.
ತವರ್ಗ---ತ, ಥ, ದ, ಧ, ನ. ಈರೀತಿ ಒಟ್ಟು ಎಂಟುವರ್ಗಗಳಿರುವವು.

ಪಂಚಭಿಃ ಶೇಷವರ್ಗೋಽಯಂ ಸಪ್ತಮಃ ಪರಿಕೀರ್ತಿತಃ ।
ಸಂಯೋಗಾಯೋಗಸಂಲೋಮಪ್ರತಿಲೋಮೈರಿಮೇ ಸುತ ॥ ೧೩ ॥

ವರ್ಣಾಃ ಸ್ಯುರ್ಮಂತ್ರನಾಮಾದೌ ವಾಜ್ಞಾತ್ಕ್ರೋಽಪಿ ಚ ಭೈರವ ।
ಚತುರ್ವರ್ಗಪ್ರದಾ ವರ್ಣಾಃ ಸುಖದುಃಖಕರಾಸ್ತಥಾ ॥ ೧೪ ॥

ರೋಗಂ ಚ ತೇಜಸ್ಸಂಪೂಜ್ಯಪೂಜಕಾಃ ಪರಿಕೀರ್ತಿತಾಃ ।
ಅಹಂ ವಿಷ್ಣುಶ್ಚ ಬ್ರಹ್ಮಾ ಚ ಗಾಯತ್ರೀ ಬ್ರಹ್ಮಮಾತೃಕಾಃ ॥ ೧೫ ॥

ಅಪರಬ್ರಹ್ಮವರ್ಣಾರ್ಥೇ ಪರಬ್ರಹ್ಮಸುಖಪ್ರದಂ ।
ಅಪರಬ್ರಹ್ಮಕುಶಲಃ ಪರಂ ಬ್ರಹ್ಮಾಧಿಗಚ್ಛತಿ ॥ ೧೬ ॥

೧೩-೧೪. ಎಲೈ ಭೈರವ, ಅಕಾರಾದಿ ಕ್ಷಕಾರಾಂತ ವರ್ಣಗಳು ಬೇರೆಬೇರೆಯಾಗಿಯೂ, ಒಂದು ಅಕ್ಷರವು ಮತ್ತೊಂದು ಅಕ್ಷರದೊಂದಿಗೆ ಸೇರಿ ಸಂಯುಕ್ತಾಕ್ಷರ (ಒತ್ತಕ್ಷರ) ವಾಗಿಯೂ, ಅನುಲೋಮಪ್ರತಿಲೋಮಕ್ರಮಗಳಿಂದಲೂ, ಎಂದರೆ ಅಕಾರಾದಿಯಾಗಿ ಕ್ಷಕಾರದವರೆಗೂ ಉಚ್ಚರಿಸುವ ಅನುಲೋಮಕ್ರಮವೂ, ಕ್ಷಕಾರದಿಂದ ಹಿಂದೆ ಹಿಂದಕ್ಕೆ ಎಂದರೆ ಕ್ಷ, ಳ, ಹ, ಸ, ಎಂದು ಮೊದಲಾಗಿ ಅಕಾರದವರೆಗೆ ಉಚ್ಚರಿಸುವ ಪ್ರತಿಲೋಮಕ್ರಮಗಳಿಂದಲೂ, ಸಹ ಸೇರಿ ಅನೇಕ ಮಂತ್ರಗಳಾಗುವವು. ಇವುಗಳನ್ನು ವಾಗವಯವಗಳಾದ ಜಿಹ್ವಾ, ದಂತ, ತುಟಿ, ತಾಲು, ಮೊದಲಾದವುಗಳ ಸಹಾಯದಿಂದ ಸ್ಪಷ್ಟವಾಗಿ ಉಚ್ಚರಿಸಿ ಜಪಮಾಡಿದರೆ ಈ ಮಂತ್ರಗಳು ಸಾಧಕರಿಗೆ ಚತುರ್ವರ್ಗಪುರುಷಾರ್ಥಗಳನ್ನೂ, ಸುಖವನ್ನೂ, ತೇಜಸ್ಸನ್ನೂ ಕೊಡುವವು. ಸ್ಪಷ್ಟೋಚ್ಚಾರಣೆಯಿಲ್ಲದೆ, ಮಂತ್ರಲೋಪ, ಅಕ್ಷರಲೋಪ, ವ್ಯತ್ಯಸ್ತಕ್ರಮ, ಇವುಗಳುಂಟಾದಲ್ಲಿ, ದುಃಖಪ್ರಾಪ್ತಿಯೂ, ರೋಗವೂ ಉಂಟಾಗುವವು. ಆದುದರಿಂದ ಸಾಧಕರು ಈ ಬೀಜಾಕ್ಷರಮಂತ್ರಗಳನ್ನು ಪೂಜನೀಯಭಾವನೆಗಳಿಂದ ಜಪ ಮಾಡಬೇಕು.

೧೫-೧೬. ನಾನು, (ಈಶ್ವರ) ವಿಷ್ಣು, ಬ್ರಹ್ಮ, ಗಾಯಿತ್ರೀ, ಬ್ರಹ್ಮಮಾತೃಕಾ, ಅಪರಬ್ರಹ್ಮ ಇವೆಲ್ಲವನ್ನೂ ಈ ವರ್ಣಗಳು ಹೇಳುವವು. ಪರಬ್ರಹ್ಮವೆಂಬುದು ಯಾವಾಗಲೂ ಸುಖಸ್ವರೂಪವಾಗಿಯೇ ಇರುವುದಾದ್ದರಿಂದ ಅದು ಸುಖವನ್ನು ಕೊಡುವುದು. ಬ್ರಹ್ಮಸ್ವರೂಪಧ್ಯಾನದಲ್ಲಿ ಕುಶಲನಾದವನು ಕೊನೆಗೆ ಪರಬ್ರಹ್ಮಪ್ರಾಪ್ತಿರೂಪವಾದ ಮೋಕ್ಷವನ್ನು ಹೊಂದುವನು.

ಸಿಸೃಕ್ಷುರೀಶ್ವರೋ ವರ್ಣಾ ಜಗಂತಿ ಸ್ವೇಚ್ಛಯಾ ಪುನಃ ।
ಸಸರ್ಜ ಮಮ ವಕ್ತ್ರೇ ತಾ ಬ್ರಹ್ಮವಕ್ತ್ರೇ ಚ ವೈ ನ್ಯಧಾತ್ ॥ ೧೭ ॥

ಅಹಂ ತು ಸಕಲಾ ವರ್ಣಾ ನ್ಯಸ್ಯ ಭೈರವ ತಂತ್ರಕಂ ।
ಅಕಾರ್ಷಂ ಬಹುಲಂ ಪುತ್ರ ಜ್ಞಾನಮಾರ್ಗಂ ವಿವರ್ಧಯನ್ ॥ ೧೮ ॥

ತ ಇಮೇ ಗದಿತಾ ವರ್ಣಾ ಮಯಾ ವರ್ಣವಿನಿಶ್ಚಯೇ ।
ಮಂತ್ರಶುದ್ಧಿವಿವೇಕಾರ್ಥಂ ವರ್ಣಚಕ್ರಂ ತತಃ ಶೃಣು ॥ ೧೯ ॥

ಶಕ್ತಿಶಂಭುಸ್ವರೂಪಿಣ್ಯೌ ರೇಖೇ ದ್ವೇ ಪ್ರಥಮಂ ನ್ಯಸೇತ್ ।
ತನ್ಮಧ್ಯತಃ ಪುನಾ ರೇಖೇ ವಿಷ್ಣುಲಕ್ಷ್ಮ್ಯೀತಲೇ ತಥಾ ॥ ೨೦ ॥

ತಯೋಸ್ತು ರೇಖಯೋರ್ಮಧ್ಯೇ ದ್ವೇ ರೇಖೇ ಸಮತೋ ನ್ಯಸೇತ್ ।
ತಸ್ಯ ಚಕ್ರಸ್ಯ ಚಾರೇಷು ರೇಖಾಸ್ತು ಪರಿಸಂಖ್ಯಯಾ ॥ ೨೧ ॥

---

೧೭. ಪರಬ್ರಹ್ಮನು ವರ್ಣಾಕ್ಷರಗಳನ್ನೂ, ಜಗತ್ತನ್ನೂ ಸೃಷ್ಟಿಮಾಡಲು ಇಚ್ಛಿಸಿ, ಅದರಂತೆ ಅಕ್ಷರಗಳನ್ನು ಸೃಷ್ಟಿಸಿ ಅವುಗಳನ್ನು ನನ್ನ (ಈಶ್ವರನ) ಮತ್ತು ಚತುರ್ಮುಖಬ್ರಹ್ಮನ ಮುಖದಲ್ಲಿ ಇರಿಸಿದನು.

೧೮. ನಾನು ಆರೀತಿ ಪಡೆದ ಸಕಲ ವರ್ಣಗಳನ್ನೂ ತಂತ್ರಶಾಸ್ತ್ರದಲ್ಲಿ ಇರಿಸಿ, ಜನರಿಗೆ ಜ್ಞಾನವೃದ್ಧಿಯಾಗುವಂತೆ ಮಾಡಿರುವೆನು.

೧೯. ನಾನು ವರ್ಣಗಳನ್ನು ನಿರ್ಣಯಮಾಡಿ ಈ ಅಕ್ಷರಗಳನ್ನು ಹೇಳಿರುವೆನು. ಮಂತ್ರಶುದ್ಧಿಯನ್ನು ತಿಳಿಯುವುದಕ್ಕೆ ಮೊದಲು, ವರ್ಣಚಕ್ರವನ್ನು ತಿಳಿದುಕೊಳ್ಳಬೇಕು. ಅದನ್ನು ಹೇಳುವೆನು ಕೇಳು.—

೨೦-೨೩. ಮೊದಲು, ಶಕ್ತಿ, ಶಂಭು ಇವರ ಸ್ವರೂಪವೆನಿಸಿದ ಎರಡು ಗೆರೆಗಳನ್ನು ಬರಿಯಬೇಕು. ಅವುಗಳ ಮಧ್ಯದಲ್ಲಿ ಪುನಃ ವಿಷ್ಣು, ಲಕ್ಷ್ಮಿ ಎಂಬ ಇನ್ನೆರಡು ಗೆರೆಗಳನ್ನು ಬರೆಯಬೇಕು. ಅವೆರಡು ಗೆರೆಗಳ ಮಧ್ಯದಲ್ಲಿ ಸಮನಾಗಿರುವ ಮತ್ತೆರಡು ಗೆರೆಗಳನ್ನು ಬರೆಯಬೇಕು. ಆ ಚಕ್ರದಸುತ್ತಲೂ ಇರುವ ದಳಗಳ ಸಂಖ್ಯೆಯಷ್ಟು ಗೆರೆಗಳನ್ನು ಬರೆದು ಮಧ್ಯದಲ್ಲಿ ನಾಲ್ಕು ಗೆರೆಗಳನ್ನು ಬರೆಯಬೇಕು. ಮಧ್ಯದಲ್ಲಿ ಸ್ವರಾಕ್ಷರಗಳನ್ನು ಬರೆದು ಎಂಟು ಸಂಧಿಗಳಲ್ಲಿ ಬೇರೆಬೇರೆ ವರ್ಣಗಳನ್ನು ಬರೆಯಬೇಕು. ಈರೀತಿ ಎಂಟು ದಳಗಳಿಂದಲೂ ನಾಲ್ಕು ನೇಮಿ (ಪಟ್ಟಿ) ಗಳಿಂದಲೂ

ಚತಸ್ರಸ್ತು ಪ್ರದಾತವ್ಯಾಃ ಸ್ವರಮಧ್ಯೇ ತು ಭೈರವ ।
ಭಿನ್ನಾನಾಂ ಚ ತಥಾ ವರ್ಣಾಃ ಸಂಧಯೋಷ್ಟೌ ಪ್ರಕೀರ್ತಿತಾಃ ॥ ೨೨ ॥

ನೇಮಯಸ್ತು ಚತಸ್ರೋಽಸ್ಯ ಸಂಧಿಮಧ್ಯೇಷು ಕೀರ್ತಿತಾಃ ।
ಅಷ್ಟಾರಸಂಯುತಂ ಚಕ್ರಂ ಚತುರ್ನೇಮಿಸಮನ್ವಿತಂ ॥ ೨೩ ॥

ಬಹಿರ್ವೇಷ್ಟನಸಂಯುಕ್ತಂ ವರ್ಣಚಕ್ರಂ ಪ್ರಕೀರ್ತಿತಂ ।
ಮೇಷಾದೀನಾಂ ಚ ರಾಶೀನಾಮುದಯಾಸ್ತಪ್ರತಿಜ್ಞಯಾ ॥ ೨೪ ॥

ಇದಮೇವ ಭವೇಚ್ಚಕ್ರಂ ಜ್ಞಾನಶ್ರೀವೃದ್ಧಿಕಾರಕಂ ।
ಇದಂ ಚಕ್ರಂ ಲಿಖಿತ್ವಾ ತು ಸಮಭೂಮಾವುದಙ್ಮುಖಃ ॥ ೨೫ ॥

ಪ್ರಾಙ್ಮುಖೋ ವಾ ಲಿಖೇದ್ವರ್ಣಾ ಶುಚಿರಿಷ್ಟಂ ನಮರ್ ಗುರುಂ ।
ಪ್ರದಕ್ಷಿಣಂ ಲಿಖೇತ್ತಸ್ಮಿ ವರ್ಣಾಂಸ್ತೇಷ್ವೇವ ತು ಕ್ರಮಾತ್ ॥ ೨೬ ॥

ಪುರೋ ನೇಮಾವಕಾರಂ ತು ರಕಾರಂ ಚಾಪಿ ವೈ ಲಿಖೇತ್ ।
ಆಕಾರಂ ವರ್ಜಯೇದ್ದೀರ್ಘಂ ಈಕಾರಂ ಚ ಸ್ವರೇಷು ವೈ ॥ ೨೭ ॥

ಸುತ್ತಲೂ ವೇಷ್ಟನೆ (ವೃತ್ತಾಕಾರವಾಗಿರುವ ಗೆರೆ) ಯಿಂದಲೂ ಕೂಡಿರುವ ಈ ಚಕ್ರವು ವರ್ಣಚಕ್ರವೆಂದು ಹೇಳಲ್ಪಟ್ಟಿರುವುದು.

೨೪. ಮೇಷವೇ ಮೊದಲಾದ ರಾಶಿಗಳಿಗೂ, ಉದಯಾಸ್ತಕ್ರಮದಿಂದ ಈ ಚಕ್ರವು ಜ್ಞಾನ ಐಶ್ವರ್ಯಗಳ ವೃದ್ಧಿಯನ್ನುಂಟುಮಾಡುವುದು.

೨೫-೨೬. ಹೆಚ್ಚುತಗ್ಗುಗಳಿಲ್ಲದೆ ಮಟ್ಟವಾಗಿ ಸಮವಾಗಿರುವ ಭೂಮಿಯಲ್ಲಿ ಈ ಚಕ್ರವನ್ನು ಬರೆದು, ಉತ್ತರಮುಖವಾಗಿಯಾಗಿಲಿ, ಪೂರ್ವಮುಖನಾಗಿಯಾಗಲಿ ಕೂತುಕೊಂಡು ಪರಿಶುದ್ಧನಾಗಿ ತನ್ನ ಗುರುವನ್ನು ನಮಸ್ಕರಿಸಿ, ಬಳಿಕ ಆ ಚಕ್ರದಲ್ಲಿ ಪ್ರದಕ್ಷಿಣಾಕಾರವಾಗಿ ವರ್ಣಗಳನ್ನು ಬರೆಯಬೇಕು.

೨೭-೩೦. ಮುಂದುಗಡೆಯ ಸಾಲಿನಲ್ಲಿ ಅಕಾರವನ್ನೂ, ರಕಾರವನ್ನೂ ಬರೆಯಬೇಕು. ಸ್ವರಗಳಲ್ಲಿ ಆಕಾರ, ಈಕಾರಗಳನ್ನು ಬಿಡಬೇಕು. ಕ್ಷಾ, ಇ, ನ, ಮ, ಣ, ಈ ಅಕ್ಷರಗಳನ್ನು ಬಿಟ್ಟು ಅಕಾರ ಆದಿಯಾಗಿ ಕ್ಷಕಾರವು ಕೊನೆಯಾಗಿರುವ ವರ್ಣಗಳ ಸಮುದಾಯವನ್ನು ಪ್ರದಕ್ಷಿಣಕ್ರಮವಾಗಿ ಬರೆಯಬೇಕು. ಅನಂತರ ತನ್ನ ಹೆಸರಿನ

ಆಕಾರಾದಿ ಕ್ಷಕಾರಾಂತಂ ಕ್ಷ್ರೌ ಇ ನ ಈ ಣ ವರ್ಜಿತಂ।
ಪ್ರದಕ್ಷಿಣಕ್ರಮಾದೇವ ಲಿಖಿತ್ವಾ ವರ್ಣಸಂಚಯಂ ॥ ೨೮ ॥

ಸ್ವನಾಮಾದ್ಯಕ್ಷರಂ ಗೃಹ್ಯ ಕುರ್ಯಾತ್ತು ಗಣನಕ್ರಮಂ।
ಮಂತ್ರಸ್ಯಾದ್ಯಾಕ್ಷರಂ ಯಾವತ್ಸಿದ್ಧಾದ್ಯಂ ತತ್ರ ಯೋಜಯೇತ್ ॥ ೨೯ ॥

ನವೈಕಪಂಚಕೇ ಸಿದ್ಧಃ ಸಾಧ್ಯಃ ಷಡ್ಯುಗ್ಮಪಂಕ್ತಿಷು।
ತ್ರಿಸಪ್ತೈಕಾದಶೇಷ್ವೇವ ಸುಸಿದ್ಧಃ ಪರಿಕೀರ್ತಿತಃ ॥ ೩೦ ॥

ದ್ವಾದಶಾಷ್ಟಚತುರ್ಥೇಷು ಶಾತ್ರವಃ ಪರಿಕೀರ್ತಿತಃ।
ಸಿದ್ಧೇನೈವಾಚಿರಾತ್ಸಿದ್ಧಿಃ ಸಾಧ್ಯಃ ಕಾಲೇನ ಸಿದ್ಧ್ಯತಿ ॥ ೩೧ ॥

ಕ್ರಮಾನ್ನಾಶಯತೇ ಶತ್ರುಃ ಸುಸಿದ್ಧಃ ಸಿದ್ಧಿದೋಽಚಿರಾತ್।
ಯೋ ಯೋ ವರ್ಣಕ್ರಮಃ ಪ್ರೋಕ್ತೋ ಮಂತ್ರೇ ದಾಕ್ಷಿಣ್ಯಗೋರೇ ॥ ೩೨ ॥

ಮೊದಲಕ್ಷರದಿಂದ ಮಂತ್ರದ ಮೊದಲಕ್ಷರದವರೆಗೂ ಎಣಿಸಬೇಕು. ಹೀಗೆ ಲೆಖ್ಖ ಮಾಡಿಕೊಂಡು ಅಲ್ಲಿಗೆ ಸಿದ್ಧ, ಸಾಧ್ಯ, ಸುಸಿದ್ಧ, ಶತ್ರು ಎಂಬುದನ್ನು ವಿಮರ್ಶೆಮಾಡ ಬೇಕು. ಹೀಗೆ ಲೆಖ್ಖಮಾಡುವಲ್ಲಿ ಒಂಭತ್ತು, ಐದು, ಒಂದು ಇವುಗಳಲ್ಲಿ ತನ್ನ ಹೆಸರಿನ ಮೊದಲನೆಯವರ್ಣವೂ, ಮಂತ್ರಾಕ್ಷರವೂ ಇದ್ದರೆ ಅದು ಸಿದ್ಧವೆನಿಸುವುದು. ಮೇಲಿಹೇಳಿದ ಎರಡೂ, ಆರು ಮತ್ತು ಸಮಸಂಖ್ಯೆಯಲ್ಲಿದ್ದರೆ ಸಾಧ್ಯವೆನಿಸುವುದು. ಮೂರು, ಏಳು, ಹನ್ನೊಂದರಲ್ಲಿದ್ದರೆ ಆ ಮಂತ್ರವು ಸುಸಿದ್ಧವೆನಿಸುವುದು. ಹನ್ನೆರಡು ಎಂಟು, ನಾಲ್ಕರಲ್ಲಿದ್ದರೆ ಶತ್ರುವೆನಿಸುವುದು.

೩೧. ಸಿದ್ಧ ಎಂಬ ಮಂತ್ರದಿಂದ ಬೇಗನೆ ಸಿದ್ಧಿಯುಂಟಾಗುವುದು. ಸಾಧ್ಯ ವೆಂಬ ಮಂತ್ರವು ಸ್ವಲ್ಪಕಾಲದನಂತರ ಸಿದ್ಧಿಸುವುದು. ಶತ್ರುಮಂತ್ರವು ಕ್ರಮವಾಗಿ ನಾಶವನ್ನುಂಟುಮಾಡುವುದು. ಸುಸಿದ್ಧಮಂತ್ರವು ಬೇಗನೆ ಸಿದ್ಧಿಸುವುದು.

೩೨. ಈಗ ಹೇಳಿದ ಈ ಕ್ರಮವೆಲ್ಲವೂ ದಕ್ಷಣಾಚಾರರೀತಿಯಾಗಿರುವುದು. ಇನ್ನು ವಾಮಾಚಾರದಿಂದ ಆರಾಧಿಸುವ ಮಂತ್ರಕ್ರಮವನ್ನು ಹೇಳುವೆನು, ಕೇಳು.

ವಾಮ್ಯಾರಾಧನಮಂತ್ರೇಷು ಕ್ರಮಂ ಶೃಣ್ವೆಹ ಭೈರವ ।
ಋಲೃದ್ವಯಂ ಜ ಞ ಣ ನಾ ವರ್ಜ್ಯಾಶ್ಚ ವರ್ಣಗೋಚರೇ ॥ ೩೩ ॥

ಲಿಖೇದ್ವಾಮಕ್ರಮೇಣೈವ ತತ್ರ ವರ್ಣಾಂಸ್ತು ಮಂತ್ರವಿತ್ ।
ನೃಸಿಂಹಾರ್ಕವರಾಹಾಣಾಂ ಪ್ರಾಸಾದಪ್ರವಣಸ್ಯ ಚ ॥ ೩೪ ॥

ಏಕಾಕ್ಷರದ್ವ್ಯಕ್ಷರಾಣಾಂ ನ ಸಿದ್ಧಾದಿವಿಚಿಂತನಂ ।
ಬೀಜೇಷು ಚಾಪಿ ಸರ್ವೇಷು ದೀಕ್ಷಾರ್ಥೇಷು ಚ ಭೈರವ ॥ ೩೫ ॥

ಸಿದ್ಧಾದಿ ಚಿಂತಾ ನೋ ಕಾರ್ಯಾ ಗ್ರಾಹ್ಯಾಸ್ತು ದಶ ವಶ್ಯಕಂ ।
ಸುಸಿದ್ಧಂ ಕಾಮದಂ ಗ್ರಾಹ್ಯಂ ಸಾಧ್ಯಸಿದ್ಧವಿಚಾರಣಾತ್ ॥ ೩೬ ॥

ನ ಗ್ರಾಹ್ಯಶ್ಶಾತ್ರವೋ ಧೀರೈಃ ಗೃಹೀತ್ವಾಪ್ನೋತಿ ಚಾಪದಂ ।
ಯೋ ಯಸ್ಯೈಕಾಕ್ಷರೋ ಮಂತ್ರಸ್ತನ್ನಾಮ್ನಾ ಸ ನಿಗದ್ಯತೇ ॥ ೩೭ ॥

---

೩೩. ವರ್ಣಮಾಲೆಯಲ್ಲಿ ಋ, ಇ, ಎಂಬ ಎರಡಕ್ಷರಗಳನ್ನೂ, ಜ, ಞ, ಣ, ನ ಇವುಗಳನ್ನೂ ಬಿಟ್ಟು ಉಳಿದ ವರ್ಣಗಳನ್ನು ಎಡಗಡೆಯಕ್ರಮದಿಂದ (ಅಪ್ರದಕ್ಷಿಣಾಕಾರವಾಗಿ) ಮಂತ್ರಶಾಸ್ತ್ರಜ್ಞನು ಬರೆಯಬೇಕು.

೩೪. ನರಸಿಂಹ, ಸೂರ್ಯ, ವರಾಹ, ಪ್ರಾಸಾದಮಂತ್ರ, ಪ್ರಣವಮಂತ್ರ. ಏಕಾಕ್ಷರಮಂತ್ರ, ಎರಡಕ್ಷರದಮಂತ್ರ ಇವುಗಳಿಗೆ ಸಿದ್ಧಾದಿಯನ್ನು ವಿಚಾರಿಸ ಬೇಕಾಗಿಲ್ಲ.

೩೫-೩೬. ಎಲೈ ಭೈರವನೇ ಕೇಳು, ಏಕ್ಷಾರ್ಥವಾವ ಎಲ್ಲ ಬೀಜಾಕ್ಷರಗಳಲ್ಲಿ ಸಿದ್ಧಾದಿ ವಿಷಯಕವಾದ ವಿಮರ್ಶೆಯನ್ನು ಮಾಡಬೇಕಾಗಿಲ್ಲ. ವಶ್ಯವೇ ಮೊದಲಾದ ಹತ್ತುವಿಧವಾದ ಕರ್ಮಗಳು ಗ್ರಾಹ್ಯವಾಗಿರುವುವು. ಸಾಧ್ಯ, ಸಿದ್ಧ, ಎಂಬ ವಿಚಾರ ಕ್ರಮದಿಂದ ಸುಸಿದ್ಧವೆಂಬುದು ಇಷ್ಟಾರ್ಥವನ್ನು ಕೊಡುವುದು. ಆದುದರಿಂದ ಅವನ್ನು ತೆಗೆದುಕೊಳ್ಳಬೇಕು.

೩೭. ಧೀರರಾದವರು ಶತ್ರುವೆಂಬ ಮಂತ್ರವನ್ನು ತೆಗೆದುಕೊಳ್ಳಬಾರದು. ಅದನ್ನು ತೆಗೆದುಕೊಂಡರೆ ವಿಪತ್ತುಂಟಾಗುವುದು. ಯಾವುದು ಒಂದಕ್ಷರದ ಮಂತ್ರವೋ ಅದು ಅವನ ಹೆಸರಿನ ಮೊದಲನೆಯ ಅಕ್ಷರದಿಂದ ಕೂಡಿರತಕ್ಕದ್ದು. ಹೆಸರಿನ ಮೊದ

ಸಹಿತಶ್ಚಂದ್ರಬಿಂದುಭ್ಯಾಂ ತದ್ಬೀಜಮಿತಿ ಗದ್ಯತೇ ।
ಯಥಾ ಶಕ್ರೋ ನಕಾರಸ್ಸ್ಯಾತ್ ಸಾರ್ಧಚಂದ್ರಸ್ಸಬಿಂದುಕಃ ॥ ೩೮ ॥

ಸ ಏವ ಶಕ್ರಬೀಜಂ ಸ್ಯಾತ್ತಥಾನ್ಯತ್ರಾಪಿ ಯೋಜಯೇತ್ ।
ಮುಂತ್ರೋದ್ಧಾರೇಷು ಸರ್ವತ್ರ ಪರತಃ ಪರತಃ ಪುರಃ ॥ ೩೯ ॥

ಪೂರ್ವತೋಽಪಿ ಪರೇ ಕಾರ್ಯಮನುಕ್ತಃ ಪೂರ್ವಪಕ್ಷಕಃ ।
ಯದಾ ಷೋಡಶಸಾಹಸ್ರಂ ವೈಷ್ಣವ್ಯಾ ಮಂತ್ರಸಂಚಯಂ ॥ ೪೦ ॥

ಚಕ್ರೇ ನಿರೀಕ್ಷ್ಯತೇ ತತ್ರ ಷೋಡಶಾರಂ ತು ಚಕ್ರಕಂ ।
ವಿಶಂತಿಸ್ತು ಸಹಸ್ರಾಣಿ ತ್ರಿಪುರಾಯಾ ಯದೀಕ್ಷತೇ ॥ ೪೧ ॥

ಲನೆಯ ಅಕ್ಷರಕ್ಕೆ ಬಿಂದುಅನುಸ್ವಾರಗಳನ್ನು ಸೇರಿಸಿದರೆ ಅದು ಆ ಮುಂತ್ರದ ಬೀಜಾಕ್ಷರವಾಗುವುದು.

೩೮. ನಕಾರವು ಇಂದ್ರದೇವತಾಕವಾದ ಮಂತ್ರವು. ಆ ನಕಾರಕ್ಕೆ ಅರ್ಧ ಚಂದ್ರ, ಬಿಂದು ಇವುಗಳನ್ನು ಸೇರಿಸಿದರೆ ಅದು ಇಂದ್ರ (ಶಕ್ರ) ಬೀಜಾಕ್ಷರವಾಗುವುದು. ಹೀಗೆಯೇ ಬೇರೆಯಕಡೆಯಲ್ಲಿಯೂ ವಿಮರ್ಶೆಮಾಡಬೇಕು.

೩೯. ಎಲ್ಲಾಕಡೆಯಲ್ಲಿಯೂ, ಮುಂದಿನ ಅಕ್ಷರಕ್ಕೆ ಮುಂದೆ ಇರುವುದನ್ನು ಗ್ರಹಿಸಬೇಕು. ಹಿಂದಿನದಕ್ಕಿಂತ ಮುಂದಿನ ವರ್ಣವನ್ನು ಗ್ರಹಿಸಬಹುದು. ಯಾವುದನ್ನೂ ಹೇಳದಿದ್ದರೆ ಹಿಂದಿನ ಅಕ್ಷರವನ್ನು ಗ್ರಹಿಸಬಹುದು. ಇದು ಮಂತ್ರಶಾಸ್ತ್ರದಲ್ಲಿ ಮಂತ್ರೋದ್ಧಾರಕ್ರಮದ ಪರಿಭಾಷೆ.

೪೦. ವೈಷ್ಣವೀದೇವಿಯ ಹದಿನಾರುಸಾವಿರ ಮಂತ್ರಗಳನ್ನು ಚಕ್ರದಲ್ಲಿ ಬರೆಯಬೇಕು. ಆಗ ಅಲ್ಲಿ ಚಕ್ರವನ್ನು ಹದಿನಾರು ಪಟ್ಟಿಗಳುಳ್ಳದ್ದನ್ನಾಗಿ ಬರೆಯಬೇಕು.

೪೧. ತ್ರಿಪುರಾದೇವಿಯ ಮಂತ್ರಗಳು ಇಪ್ಪತ್ತುಸಾವಿರವನ್ನೂ, ಚಕ್ರದಲ್ಲಿ ಬರೆಯುವಾಗ ಮಂತ್ರಶಾಸ್ತ್ರಜ್ಞರು ಮೂವತ್ತೆರಡು ಪಟ್ಟಿಗಳು ಇರುವಂತೆ ಬರೆಯಬೇಕು.

ದ್ವಾತ್ರಿಂಶಾರಂ ತತ್ರ ಚಕ್ರಂ ಲೇಖನೀಯಂ ಸದಾ ಬುಧೈಃ ।
ಇದಮೇವ ಮಹಾಚಕ್ರಂ ಷೋಡಶಾರಾದಿಕಂ ಕೃತೀ ॥ ೪೨ ॥

ಕುರ್ಯಾದಧಿಕರೇಖಾಭಿರ್ಮಂತ್ರಶುದ್ಧ್ಯಂತರೇ ಸುತ ।
ಇಯಂ ತೇ ಕಥಿತಾ ಪುತ್ರ ಮಂತ್ರಸಿದ್ಧಿರಭೀಷ್ಟದಾ ॥ ೪೩ ॥

ಜಾನಾತಿ ಸಮ್ಯಕ್ ಯ ಇಮಾಂ ಸ ಜಯೀ ಕಾಮಮಾಪ್ನುಯಾತ್ ।
ರಹಸ್ಯಂ ಪರಮಂ ಪುತ್ರ ಪ್ರಯೋಗಾದಿಪ್ರಕಾರತಃ ॥ ೪೪ ॥

ವಕ್ಷ್ಯಾಮಿ ತತ್ಸಮಾಸೇನ ಶೃಣು ವೇತಾಲಭೈರವ ।
ದಂತಃ ಪಕ್ಷಬಿಡಾಲಸ್ಯ ತತ್ವ್ವಚಾ ಪರಿವೇಷ್ಟಿತಃ ॥ ೪೫ ॥

ನಿರ್ಮಾಲ್ಯೇನ ತು ವೈಷ್ಣವ್ಯಾ ತತ್ಸಂವೇಷ್ಟ್ಯ ಗುಣತ್ರಯಂ ।
ತತ್ತದ್ವ್ವಾಮಸೂತ್ರಸ್ಯ ತತ್ತನ್ಮಂತ್ರೇಣ ಮಂತ್ರಿತಂ ॥ ೪೬ ॥

ಗೃಹೀತ್ವಾ ದಕ್ಷಿಣೇ ಪಾಣೌ ಮಂತ್ರಾಣಾಂ ಶತಮಾದಿತಃ ।
ಸಂಜಪೇದಥ ವೈಷ್ಣವ್ಯಾ ಅಷ್ಟಮ್ಯಾಂ ನಿಯತೇಂದ್ರಿಯಃ ॥ ೪೭ ॥

---

೪೨. ಹದಿನಾರು ಪಟ್ಟಿಗಳುಳ್ಳ ಈ ಮಹಾಮಂತ್ರವನ್ನು ಸಾಧಕನು ಮಂತ್ರ ಶುದ್ಧಿಗಾಗಿ ಇನ್ನೂ ಹೆಚ್ಚಾದ ರೇಖೆಗಳಿಂದ ಬರೆಯಬಹುದು.

೪೩. ಎಲೈ ಪುತ್ರನೇ ಕೇಳು, ಇಷ್ಟಸಿದ್ಧಿಯನ್ನುಂಟುಮಾಡುವ ಮಂತ್ರಸಿದ್ಧಿ ಕ್ರಮವು ಓಗೆ ಹೇಳಲ್ಪಟ್ಟಿರುವುದು. ಯಾವನು ಇದನ್ನು ಚೆನ್ನಾಗಿ ತಿಳಿಯುವನೋ ಅವನು ಜಯಶೀಲನಾಗಿ ತನ್ನ ಇಷ್ಟಾರ್ಥವನ್ನು ಪಡೆಯುವನು.

೪೪. ಇನ್ನು ವಶ್ಯಾದಿಪ್ರಯೋಗಗಳ ವಿಧಾನಕ್ರಮಗಳನ್ನೂ, ಅವುಗಳ ಪರಮರಹಸ್ಯಗಳನ್ನೂ ಹೇಳುವೆನು, ಕೇಳು.

೪೫-೪೭. ಬೆಕ್ಕಿನ ಹಲ್ಲನ್ನು ಅದರ ಚರ್ಮದಿಂದ ಸುತ್ತಿ ವೈಷ್ಣವೀದೇವಿಯ ನಿರ್ಮಾಲ್ಯದಿಂದ ಮೂರುಸುತ್ತು ಬರುವಂತೆ ಕಟ್ಟಿ, ಅದನ್ನು ವಾಮಾಚಾರದಲ್ಲಿ ಹೇಳಿರುವ ಆಯಾಯ ಮಂತ್ರಗಳಿಂದ ಅಭಿಮಂತ್ರಿಸಿ ಬಲಗೈಯಲ್ಲಿ ಹಿಡಿದುಕೊಂಡು, ಅಷ್ಟಮಿಯದಿವಸ ಜಿತೇಂದ್ರಿಯನಾಗಿ ವೈಷ್ಣವೀದೇವಿಯ ಮಂತ್ರಗಳಲ್ಲಿ ಮೊದಲಿನಿಂದ ಐದುನೂರು ಪುರಶ್ಚರಣೆಯನ್ನು ಮಾಡಬೇಕು. ಅನಂತರ ಆ ಉತ್ತಮವಾದ ಯಂತ್ರವನ್ನು ಬಲದತೋಳಿನಲ್ಲಿ ಧರಿಸಬೇಕು.

ತತಸ್ತು ದಕ್ಷಿಣೇ ಬಾಹೌ ಧಾರ್ಯಂ ಯಂತ್ರೋತ್ತಮಂ ಬುಧೈಃ ।
ತತೋ ದ್ವಾದಶ ಸಿದ್ಧಿಸ್ಸ್ಯಾದ್ಧರ್ತಾ ಜೈತ್ರಾಯ ತಿತ್ತಿಲೀಂ ॥ ೪೮ ॥

ಜಯಃ ಸಂಗ್ರಾಮವಾದೇಷು ಶರೀರಸ್ಯಾಪ್ಯರೋಗಿತಾ ।
ವಶಕೃದ್ರಾಜಪುತ್ರಾಣಾಂ ರಾಜ್ಞಾಮಪಿ ಚ ಸಂತತಿಂ ॥ ೪೯ ॥

ಭೂತಪ್ರೇತಪಿಶಾಚಾಶ್ಚ ನೋ ಯಾಂತಿ ನೇತ್ರಗೋಚರೇ ।
ಯೋಷಿತಾಂ ಸಮದಾನಾಂ ತು ವಶಕೃಚ್ಚಿಂತನಾತ್ಸಕೃತ್ ॥ ೫೦ ॥

ರುಧಿರಾಣಾಂ ಶ್ಲೇಷ್ಮಣಾಂ ಚ ಧಾತೂನಾಂ ಸ್ತಂಭನಂ ತಥಾ ।
ತೇಜಸಾಂ ಸ್ತಂಭಕಂ ಚೈವ ಚಕ್ಷುಸ್ತೇಜಃಪ್ರದಂ ತಥಾ ॥ ೫೧ ॥

ಮೂರ್ಧ್ನಿ ಪಕ್ಷಬಿಡಾಲಸ್ಯ ಹಸ್ತಂ ದತ್ತ್ವಾ ಶತತ್ರಯಂ ।
ವೈಷ್ಣವೀತಂತ್ರಮಂತ್ರಂ ತು ಜಪ್ತ್ವಾ ತಂ ಸ್ಥಾಪಯೇದ್ಗೃಹೇ ॥ ೫೨ ॥

ತಂ ಬಿಡಾಲಂ ತು ಯಾ ಪಶ್ಯೇನ್ಮಲಿನೀ ವನಿತಾ ಸುತ ।
ನಾಪುತ್ರಾ ಸಾ ಭವಿತ್ರೀ ತು ಕದಾಚಿದಪಿ ಭೈರವ ॥ ೫೩ ॥

ತಾದೃಕ್ಪಕ್ಷಬಿಡಾಲಸ್ತು ಯಸ್ಯ ತಿಷ್ಠತಿ ಮಂದಿರೇ ।
ಮೃತಾಪತ್ಯಾಪಿ ತದ್ಗೇಹೇ ಜೀವತ್ಪುತ್ರಾ ಪ್ರಜಾಯತೇ ॥ ೫೪ ॥

೪೮-೫೧. ಅದರಿಂದ ಹನ್ನೆರಡು ವಿಧವಾದ ಸಿದ್ಧಿಗಳುಂಟಾಗುವವು. ಜೈತ್ರ ಯಾತ್ರೆಯಲ್ಲಿ ಆ ಬೆಕ್ಕನ್ನು ಜೊತೆಯಲ್ಲಿ ತೆಗೆದುಕೊಂಡು ಹೋದದ್ದಾದರೆ, ಯುದ್ಧ ಮತ್ತು ಶಾಸ್ತ್ರವಾದಗಳಲ್ಲಿ ಜಯವೂ, ದೇಹದಲ್ಲಿ ಆರೋಗ್ಯವೂ ಉಂಟಾಗುವುದಲ್ಲದೆ, ರಾಜರೂ, ರಾಜಪುತ್ರರೂ ವಶವರ್ತಿಯಾಗುವರು. ಭೂತ, ಪ್ರೇತ ಪಿಶಾಚಗಳು ಅವನಕಣ್ಣಿಗೆ ಕಾಣಿಸುವುದಿಲ್ಲ. ಒಂದುಸಾರಿ ಧ್ಯಾನಮಾಡಿದಮಾತ್ರದಿಂದಲೇ ಯೌವನ ಮದದಿಂದ ಗರ್ವಿತರಾದ ವಿಲಾಸಿನಿಯರು ಇವನಿಗೆ ಅಧೀನರಾಗುವರು. ಮತ್ತು ಈ ಯಂತ್ರವು ರಕ್ತ, ಶ್ಲೇಷ್ಮ, ಇವೇ ಮೊದಲಾದ ಧಾತುಗಳನ್ನೂ ತೇಜಸ್ಸನ್ನೂ ಸ್ತಂಭನ ಮಾಡುವುದು. ಮತ್ತು ಕಣ್ಣಿಗೆ ಕಾಂತಿಯನ್ನೂ ಕೊಡುವುದು.

೫೨-೫೪. ಬೆಕ್ಕಿನ ತಲೆಯಮೇಲೆ ತನ್ನ ಕೈಯನ್ನು ಇರಿಸಿ, ವೈಷ್ಣವೀಮಂತ್ರ ವನ್ನು ಮುನ್ನೂರುಸಾರಿ ಜಪಮಾಡಿದನಂತರ ಅದನ್ನು ಮನೆಯಲ್ಲಿ ಇರಿಸಿ ಕೊಳ್ಳಬೇಕು. ಈ ಬೆಕ್ಕನ್ನು ರಜಸ್ವಲೆಯಾದ ವನಿತೆಯು ನೋಡಿದರೆ ಅವಳು ಯಾವಾಗಲೂ ಪುತ್ರವತಿಯಾಗಿಯೇ ಇರುವಳು. ಈ ಬೆಕ್ಕು ಇರುವ ಮನೆಯಲ್ಲಿ ಹುಟ್ಟುವ ಮಕ್ಕಳು ಸಾಯುವುದಿಲ್ಲ. ಜೀವಂತರಾಗಿಯೇ ಇರುವರು.

ಕೋಕಿಲೋ ಭೃಂಗರಾಜೋ ವಾ ಚಕೋರೋ ವಾ ಶುಕೋಽಥವಾ ।
ವೈಷ್ಣವೀತಂತ್ರಮಂತ್ರೇಣ ಮಂತ್ರಿತೋ ಯತ್ರ ತಿಷ್ಠತಿ ॥ ೫೫ ॥

ವಿಘ್ನಂ ನ ಮಂದಿರೇ ತಸ್ಯ ಭವಿತೃಸುಪ್ರಜಾ ಭವೇತ್ ।
ನ ಸರ್ಪಾಸ್ತತ್ರ ಗಚ್ಛಂತಿ ಗತಾಃ ಖಾದಂತಿ ನೋ ನರಾ ॥ ೫೬ ॥

ನಾರೀ ನ ಬಂಧಕೀ ತಸ್ಯ ಮಂದಿರೇಽಪಿ ಪ್ರಜಾಯತೇ ।
ಪಂಚಮೂರ್ತೇರ್ಭಂಡಿಕಾಯಾ ನಿರ್ಮಾಲ್ಯಾನಿ ಚ ಪಂಚಮಃ ॥ ೫೭ ॥

ತೇಷಾಂ ಬಲೀನಾಂ ಮಾಂಸೇನ ಸ್ಥಾಲ್ಯಾಂ ಪಕ್ತ್ವಾ ದಿನತ್ರಯಂ ।
ಅಷ್ಟಮ್ಯಾಂ ತು ತತ್ಪುನರ್ದೇವ್ಯೈ ದತ್ತ್ವಾ ತನ್ಮಂತ್ರಮಂತ್ರಿತೈಃ ॥ ೫೮ ॥

ತೋಯೈರಭ್ಯುಕ್ಷ್ಯ ಭುಂಜೀಯಾನ್ಮನಸಾ ಚಿಂತಯೇಚ್ಛಿವಾಂ ।
ತಸ್ಮಿನ್ ಭುಕ್ತೇ ತು ದೀರ್ಘಾಯುರ್ಜರಾಶೋಕವಿವರ್ಜಿತಃ ॥ ೫೯ ॥

೫೫-೫೬. ಕೋಗಿಲೆ, ಉತ್ತಮವಾದ ದುಂಬಿ. ಚಕೋರಪಕ್ಷಿ, ಗಿಣಿ ಇವು ಗಳಲ್ಲಿ ಯಾವದಾದರೂ, ವೈಷ್ಣವಿಂತಂತ್ರಮಂತ್ರದಿಂದ ಅಭಿಮಂತ್ರಿತವಾಗಿ ಯಾವ ಮನೆಯಲ್ಲಿರುವುದೋ ಆ ಮನೆಯಲ್ಲಿ ವಿಘ್ನವು ಉಂಟಾಗುವುದಿಲ್ಲ ಆ ಮನೆಯಲ್ಲಿ ಒಳ್ಳೆಯ ಮಕ್ಕಳು ಹುಟ್ಟುವರು. ಹಾವುಗಳು ಆ ಮನೆಗೆ ಬರುವುದಿಲ್ಲ. ಬಂದರೂ ಜನರನ್ನು ಕಚ್ಚುವುದಿಲ್ಲ. ಹೆಂಗಸರೂ ಆ ಮನೆಯಲ್ಲಿ ವ್ಯಭಿಚಾರಿಣಿಯರಾಗಿರುವುದಿಲ್ಲ.

೫೭-೫೯. ಪಂಚಮನು ಚಂಡಿಕಾದೇವಿಯ ಪಂಚಮೂರ್ತಿಗಳ ನಿರ್ಮಾ ಲ್ಯವನ್ನು ಒಂದು ಪಾತ್ರೆಯಲ್ಲಿ ಹಾಕಿ, ಬಲಿಯ ಮಾಂಸದ ಜೊತೆಯಲ್ಲಿ ಮೂರುದಿನ ಗಳವರೆಗೂ ಚೆನ್ನಾಗಿ ಬೇಯಿಸಿ ಅದನ್ನು ಅಷ್ಟಮಿಯದಿನ ದೇವಿಗೆ ಪುನಃ ನೈವೇದ್ಯ ಮಾಡಿ, ಆ ದೇವಿಯ ಮಂತ್ರದಿಂದ ಅಭಿಮಂತ್ರಿತವಾದ ನೀರಿನಿಂದ ಪ್ರೋಕ್ಷಿಸಿ, ದೇವಿ ಯನ್ನು ಧ್ಯಾನಮಾಡಿ ತಿನ್ನಬೇಕು. ಆ ಮಾಂಸವನ್ನು ತಿಂದವನು ಮುಪ್ಪು, ಶೋಕ ಇವುಗಳಿಲ್ಲದೆ ದೀರ್ಘಾಯುವಾಗಿ ಬದುಕುವನು. ಮತ್ತು ಮುಖದಲ್ಲಿ ಕವಿಯಿಂದ ಕೂಡಿ, ಶಸ್ತ್ರನಿಗ್ರಹಮಾಡುವವನೂ, ಕವಿಯೂ, ವಾಕ್ಪತುರನೂ ಆಗುವನು.

ತೇಜಸ್ವೀ ಶತ್ರುದಮನಃ ಕವಿರ್ವಾಗ್ಮೀ ಚ ಜಾಯತೇ ।
ಲಲಾಟೇ ಮೂರ್ಧ್ನಿ ಕಂಠೇ ಚ ಬಾಹ್ವೋಃ ಪಾಣ್ಯೋಸ್ತಥಾ ಹೃದಿ ॥ ೬೦ ॥

ವೈಷ್ಣವೀತಂತ್ರಮಂತ್ರಸ್ಯ ಯಾನಿ ಚಾಷ್ಟಾಕ್ಷರಾಣಿ ಚ ।
ಲಿಖಿತ್ವಾ ತಾನಿ ಚೈತೇಷು ಸ್ಥಾನೇಷು ಮಂತ್ರವಿದ್ಬುಧಃ ॥ ೬೧ ॥

ಕುಂಕುಮಂ ಕ್ಷೀರಮಲಯಜಾತಪಂಕೈಃ ಸುಯಾವಕೈಃ ।
ಅಷ್ಟಮ್ಯಾಂ ಸಂಯತೋ ಭೂತ್ವಾ ನವಮ್ಯಾಂ ಪ್ರಥಮಂ ನರಃ ॥ ೬೨ ॥

ಪ್ರತಿಸ್ಥಾನೇ ನ್ಯಸ್ಯ ಕರೇ ಅಷ್ಟಾವಷ್ಟೌ ನ್ಯಸೇದ್ಬುಧಃ ।
ಆವರ್ತನೇನ ಮಂತ್ರಾಣಾಂ ತತೋಽನು ಪೂಜಯೇಚ್ಛಿವಾಂ ॥ ೬೩ ॥

ತತಸ್ತಸ್ಮಿನ್ ದಿನೇ ದೇವ್ಯೈ ವಿಜಾತೀಯಂ ಬಲಿತ್ರಯಂ ।
ದತ್ತ್ವಾ ಸಹಸ್ರಮಂತ್ರಸ್ಯ ಸಂಖ್ಯಯಾ ಜಪಮಾಚರೇತ್ ॥ ೬೪ ॥

ಜಪಾಂತೇ ತು ಹವಿರ್ಭುಕ್ತ್ವಾ ಸಂಯತೋ ರಜನೀಂ ನಯೇತ್ ।
ಏವಂ ಸಕೃತ್ಕೃತೇ ಪುತ್ರ ರಣೇ ತಸ್ಯ ಪರಾಜಯಃ ॥ ೬೫ ॥

ಕದಾಚಿದಪಿ ನೋ ಭೂಯಾನ್ನ ಚ ವಾದೇಷು ಶಾಸ್ತ್ರತಃ ।
ವಿಧಿಮೇವಂ ಸಕೃತ್ಕೃತ್ವಾ ರಣಕಾಲೇ ಯಥಾ ಯಥಾ ॥ ೬೬ ॥

೬೦-೬೪. ಮಂತ್ರಶಾಸ್ತ್ರವನ್ನು ಬಲ್ಲವನು ವೈಷ್ಣವೀತಂತ್ರದ ಮಂತ್ರಗಳ ಎಂಟು ಅಕ್ಷರಗಳನ್ನು ಹಣೆ, ತಲೆ, ಕುತ್ತಿಗೆ, ಎರಡು ತೋಳುಗಳು, ಎರಡು ಕೈಗಳು, ಎದೆ, ಈ ಎಂಟು ಪ್ರದೇಶಗಳಲ್ಲಿ ಬರೆದು, ಕುಂಕುಮ, ಹಾಲು, ಗಂಧ, ಇವುಗಳಿಂದ ಕೂಡಿದ ಮಂತ್ರಾಕ್ಷತೆಯಿಂದ ಅಷ್ಟಮಿಯಲ್ಲಿ ನಿಯಮದಿಂದ ಇದ್ದು, ನವಮಿಯದಿನ ದೇವಿಯನ್ನು ಪೂಜಿಸಿದನಂತರ ಮೊದಲು ತನ್ನ ಕೈಯನ್ನು ಹಿಂದೆಹೇಳಿದ ಲಲಾಟಾದಿ ಸ್ಥಾನಗಳಲ್ಲಿ ಇಟ್ಟು ಎಂಟಾವರ್ತಿ ನ್ಯಾಸಮಾಡಬೇಕು. ಆನಂತರ ಮಂತ್ರಗಳ ಪುನ ರಾವರ್ತಿಯಿಂದ ದೇವಿಯನ್ನು ಪೂಜಿಸಬೇಕು. ಸಹಸ್ರಸಂಖ್ಯೆಯುಳ್ಳ ಜಪವನ್ನು ಮಾಡಿ ಜಪಾನಂತರದಲ್ಲಿ ಹವಿಶ್ಶೇಷವನ್ನು ಭಕ್ಷಿಸಿ, ಆ ರಾತ್ರಿಯನ್ನು ನಿಯಮದಿಂದ ಕಳೆಯಬೇಕು.

೬೫-೬೬. ಹೀಗೆ ಒಂದುಸಾರಿ ಮಾಡಿದಮಾತ್ರಕ್ಕೆ ಅವನಿಗೆ, ಯಾವಾಗಲೂ, ಯುದ್ಧದಲ್ಲಿಯೂ, ಶಾಸ್ತ್ರವಾದದಲ್ಲಿಯೂ, ಅಪಜಯವು ಆಗುವುದೇ ಇಲ್ಲ. ಕ್ಷತ್ರಿಯ

ಸದಾ ಲಿಖೇತ್ ಕ್ಷತ್ರಿಯಸ್ತು ವಿಜಯಾಯ ರಣೇಷು ಚ ।
ಅಪರಂ ತು ರಣಾಷ್ಟಾಂಗಂ ಗುಹ್ಯಮೇತ್ಪ್ರಕೀರ್ತಿತಂ ॥ ೬೭ ॥

ಅನೇನೈವ ತು ಗುಹ್ಯೇನ ವಿಜಯೀ ತ್ವಂ ಭವಿಷ್ಯಸಿ ।
ಇತಿ ನೌ ಕಥಿತಂ ಸರ್ವಂ ಗುಹ್ಯಾದ್ಗುಹ್ಯತರಂ ಶುಭಂ ॥ ೬೮ ॥

ಸುಖಸಂಪತ್ಕರಂ ಮಂತ್ರಯಂತ್ರತಂತ್ರಸಮನ್ವಿತಂ ।
ಯಚ್ಛ್ರೋತುಂ ತ್ರಿದಶಾಃ ಸರ್ವೇ ನಿತ್ಯಂ ವಾಂಛಂತಿ ಚಾಮೃತಂ ॥ ೬೯ ॥

ತದಿದಂ ತೇ ಸಮಾಖ್ಯಾತಂ ಪುತ್ರ ವೇತಾಲ ಭೈರವ ।
ಏತತ್ಸರ್ವಂ ನರೋ ಜ್ಞಾತ್ವಾ ತತ್ತ್ವತಃ ಪುತ್ರ ಭೈರವ ॥ ೭೦ ॥

ಸ ಕಾಮಾನಖಿಲಾ ಪ್ರಾಪ್ಯ ನಿತ್ಯಂ ಕೈವಲ್ಯಮಾಪ್ನುಯಾತ್ ।
ಶೃಣೋತಿ ಯಃ ಸಕೃದಿದಂ ಕಥ್ಯಮಾನೋ ದ್ವಿಜೋತ್ತಮೈಃ ॥ ೭೧ ॥

ನಾದವನು, ಯುದ್ಧಸಮಯದಲ್ಲಿ ಜಯವು ಉಂಟಾಗುವುದಕ್ಕಾಗಿ ಯಾವಾಗಲೂ, ಹೀಗೆ ಬರೆಯಬೇಕು. ಯುದ್ಧಕ್ಕೆ ಬೇಕಾದ ಬೇರೆಯ ವಿಧವಾದ ರಣಾಷ್ಟಾಂಗವೆಂಬ ರಹಸ್ಯ ಮಂತ್ರವನ್ನು ಹಿಂದೆಯೇ ಹೇಳಿರುವೆನು. ಈ ರಹಸ್ಯ ಮಂತ್ರವನ್ನು ತಿಳಿದು ವಿಜಯಶೀಲನಾಗು.

೬೮-೬೯. ಈಗ ನಾನು ಹೇಳಿದ ಮಂತ್ರತಂತ್ರಯಂತ್ರಗಳೆಲ್ಲವೂ ಅತಿರಹಸ್ಯವಾದವುಗಳು. ಇವು ಸಾಧಕರಿಗೆ ಸುಖವನ್ನೂ ಸಂಪತ್ತನ್ನೂ ಉಂಟುಮಾಡುವವು. ಅಮೃತಸ್ವರೂಪವಾದ ಈ ಮಂತ್ರವನ್ನು ಕೇಳಲು ದೇವತೆಗಳು ಯಾವಾಗಲೂ, ಆಶಿಸಿಪಡುತ್ತಿರುವರು. ಇಂತಹ ಮಂತ್ರಗಳನ್ನು ನಿಮಗಾಗಿ ಈ ರೀತಿ ಹೇಳಿರುವೆನು.

೭೦. ಎಲೈ ಪುತ್ರರಾದ ವೇತಾಲ ಭೈರವರೇ ನಿಮಗಾಗಿ ಇದನ್ನು ಹೇಳಿದ್ದಾಯಿತು. ಇದೆಲ್ಲವನ್ನೂ ಮನುಷ್ಯನು ಚೆನ್ನಾಗಿ ತಿಳಿದುಕೊಂಡರೆ, ಅವನು ಸಮಸ್ತ ಇಷ್ಟಾರ್ಥವನ್ನು ಕಡೆಗೆ ಮೋಕ್ಷವನ್ನೂ ಪಡೆಯುವನು.

೭೧-೭೨. ಇದುವರೆಗೂ ಹೇಳಿದ ಈ ದೇವಿಯ ಪೂಜಾಕ್ರಮಗಳನ್ನೂ ಯಂತ್ರ ಮಂತ್ರಗಳ ಸ್ವರೂಪವನ್ನೂ ಯಾವ ಪುರುಷನು, ಶ್ರೇಷ್ಠರಾದ ಬ್ರಾಹ್ಮಣರ ಮುಖದಿಂದ ಶ್ರವಣಮಾಡುವನೋ ಅವನು ಸಮಸ್ತವಿಘ್ನಗಳನ್ನು ಜಯಿಸಿ, ಪುತ್ರವಂತ

ನ ತಸ್ಯ ವಿಘ್ನಾ ಜಾಯಂತೇ ನಾಪುತ್ರಃ ಸ ಚ ಜಾಯತೇ ।
ದೀರ್ಘಾಯುರ್ಬಲಯುಕ್ತಶ್ಚ ನಿತ್ಯಂ ಪ್ರಮುದಿತಸ್ಸುಖೀ ॥ ೭೨ ॥
ವಾಂಛಿತಾರ್ಥಮವಾಪ್ಯೇಹ ದೇವೀಗೃಹಮವಾಪ್ನುಯಾತ್ ।
ಗಚ್ಛತಂ ಕಾಮರೂಪಾಂತಃ ಪೀಠಂ ನೀಲಾಚಲಾಹ್ವಯಂ ॥ ೭೩ ॥
ಕಾಮಾಖ್ಯಾನಿಲಯಂ ಗುಹ್ಯಂ ಕುಬ್ಜಿಕಾಪೀಠಸಂಜ್ಞಕಂ ।
ಆಕಾಶಗಂಗಾಪಯಸಿ ತಜ್ಜಲೈರಭಿಷಿಚ್ಯ ಚ ॥ ೭೪ ॥
ತತ್ರಾರಾಧಯತಂ ಪುತ್ರೌ ಮಹಾಮಾಯಾಂ ಜಗನ್ಮಯಿಾಂ ।
ಸಾ ಪ್ರಸನ್ನಾಽ ಚಿರಾದ್ದೇವೀ ವರದಾಸೌ ಭವಿಷ್ಯತಿ ॥ ೭೫ ॥

॥ ಔರ್ವ ಉವಾಚ ॥

ಇತ್ಯುಕ್ತ್ವಾ ವೃಷಭಾರೂಢಸ್ತದಾ ವೇತಾಲಭೈರವೌ ।
ಸ ಪುತ್ರೌ ತು ಪರಿತ್ಯಜ್ಯ ತತ್ರೈವಾಂತರಧೀಯತ ॥ ೭೬ ॥
ತತಸ್ತೌ ನಾಟಕಂ ಶೈಲಂ ಪರಿತ್ಯಜ್ಯ ತಪಸ್ವಿನೌ ।
ಆಸೇದತುರ್ಮಹಾತ್ಮಾನಂ ವಸಿಷ್ಠಂ ಬ್ರಹ್ಮಣಃ ಸುತಂ ॥ ೭೭ ॥

ನಾಗಿಯೂ, ಶಕ್ತಿವಂತನಾಗಿಯೂ ಬಹುಕಾಲ ಜೀವಿಸಿದ್ದು ಯಾವಾಗಲೂ ಸುಖ ಸಂತೋಷಗಳಿಂದ ಬಾಳುವನು. ಈ ಲೋಕಗಳಲ್ಲಿ ತನ್ನ ಇಷ್ಟಾರ್ಥಗಳನ್ನೆಲ್ಲಾ ಪಡೆದು ಸುಖದಿಂದಿದ್ದು, ಮೃತನಾದಮೇಲೆ ದೇವೀಲೋಕವನ್ನು ಹೊಂದುವನು.

೭೩-೭೫. ಆದುದರಿಂದ ಎಲೈ ಪುತ್ರರೇ, ನಿವು ಕಾಮರೂಪದೇಶದಲ್ಲಿರುವ ನೀಲಾಚಲವೆಂಬ ಪರ್ವತಕ್ಕೆ ಹೋಗಿ ಅಲ್ಲಿ ಕಾಮಾಖ್ಯಾದೇವಿಯ ನಿಲಯವಾದ ಕುಬ್ಜಿಕಾಪೀಠವೆಂಬ ಹೆಸರಿನ ಸ್ಥಾನಕ್ಕೆ ಹೋಗಿ, ಅಲ್ಲಿ ಆಕಾಶಗಂಗೆಯ ನಿರ್ಮಲೋದಕದಲ್ಲಿ ಸ್ನಾನಮಾಡಿ, ಜಗನ್ಮಾತೆಯಾದ ಮಹಾಮಾಯೆಯನ್ನು ಭಕ್ತಿಯಿಂದ ಆರಾಧಿಸಿರಿ. ಆ ದೇವಿಯು ಬೇಗನೆ ಪ್ರಸನ್ನಳಾಗಿ ನಿನಗೆ ವರಗಳನ್ನು ಕೊಡುವಳು.

೭೬. ಔರ್ವಮುನಿಯು ಹೇಳಿದನು:—ಈರೀತಿ ಹೇಳಿ ವೃಷಭಾರೂಢನಾದ ಶಂಕರನು ತನ್ನ ಪುತ್ರರಾದ ವೇತಾಲಭೈರವರನ್ನು ಅಲ್ಲಿಯೇ ಬಿಟ್ಟು ಅಂತರ್ಧಾನನಾದನು.

೭೭-೭೯. ಆಬಳಿಕ ತಪಸ್ವಿಗಳಾದ ಆ ವೇತಾಲಭೈರವರು ನಾಟಕಶೈಲವನ್ನು ಬಿಟ್ಟು, ಹೊರಟು ಸಂಧ್ಯಾಚಲವಲ್ಲಿದ್ದ ಬ್ರಹ್ಮಮಾನಸಪುತ್ರನೂ, ಮಹಾತ್ಮನೂ ಆದ

ಸ ತು ಸಂಧ್ಯಾಚಲಗತಸ್ತೌ ದೃಷ್ಟ್ವಾ ಸಮುಪಸ್ಥಿತೌ ।
ಸಭಾಜಯಾಮಾಸ ಮುನಿಃ ಷಿಷ್ಯವತ್ತೌ ಹರಾತ್ಮಜೌ ॥ ೭೮ ॥

ತತಸ್ತಸ್ಯೋಪದೇಶೇನ ವಸಿಷ್ಠಸ್ಯ ಮಹಾತ್ಮನಃ ।
ಜಗ್ಮತುಸ್ತೌ ಮಹಾಶೈಲಂ ನೀಲಂ ಕಾಮಾಖ್ಯಯಾ ಗತಂ ॥ ೭೯ ॥

ತತ್ರ ಗತ್ವಾ ಮಹಾತ್ಮಾನೌ ವೈಷ್ಣವೀತಂತ್ರಗೋಚರಂ ।
ಆದಾಯ ಜಾತಾಂ ತಾಂ ದೇವೀಂ ಮಹಾಮಾಯಾಂ ಜಗನ್ಮಯಿಾಂ ॥

ಭೈರವಾಖ್ಯಸ್ಯ ಲಿಂಗಸ್ಯ ನಿಕಟಸ್ಥಾ ಶಿವಾತ್ಮನಃ ।
ಆಕಾಶಗಂಗಾಮಾಪ್ಲಾವ್ಯ ಸ್ಥಂಡಿಲೇ ಮಂಡಲೋತ್ತಮಂ ॥ ೮೦ ॥

ವಿಧಾಯ ನರಶಾರ್ದೂಲೌ ಜೇಪತುರ್ಮಂತ್ರಮುತ್ತಮಂ ।
ತಂ ಜಪ್ತ್ವಾ ವಿಧಿವನ್ಮಂತ್ರಂ ಸಿದ್ಧಮಷ್ಟಾಕ್ಷರಾತ್ಮಕಂ ॥ ೮೧ ॥

ವೇತಾಲಸ್ಯ ತಥಾ ಸಾಧ್ಯಮಷ್ಟಲಕ್ಷಾಣಿ ಸಂಖ್ಯಯಾ ।
ತ್ರಿಭಿರ್ವರ್ಷೈಸ್ತು ಲಕ್ಷಾಣಾಂ ಚತುರ್ಣಾಮಂತತಸ್ತತಃ ॥ ೮೨ ॥

ವಸಿಷ್ಠಮುನಿಯಬಳಿಗೆ ಬಂದು, ಅವನಿಂದ ಸತ್ಕೃತರಾಗಿ ಆ ಮುನಿಯ ಉಪದೇಶವನ್ನು ಪಡೆದು, ಕಾಮಾಖ್ಯಾದೇವಿಯು ನೆಲಸಿರುವ ನೀಲಕೂಟವೆಂಬ ಮಹಾಶೈಲಕ್ಕೆ ತೆರಳಿದರು.

೮೦. ಅಲ್ಲಿಗೆ ಹೋಗಿ, ಆ ಮಹಾತ್ಮರಾದ ವೇತಾಲಭೈರವರು ವೈಷ್ಣವೀತಂತ್ರದಲ್ಲಿ ಹೇಳಿದಂತೆ ಜಗದ್ರೂಪಳೂ, ಮಹಾಮಾಯೆಯೂ ಆದ ದೇವಿಯನ್ನು ಉಪಾಸಿಸಲು ಪ್ರಾರಂಭಿಸಿದರು.

೮೧. ಶಿವಸ್ವರೂಪಿಯಾದ ಭೈರವಲಿಂಗದ ಸನ್ನಿಧಿಯಲ್ಲಿರುವ ಆಕಾಶಗಂಗೆಯಲ್ಲಿ ಸ್ನಾನಮಾಡಿ ಸ್ಥಂಡಿಲದಲ್ಲಿ ಉತ್ತಮವಾದ ಮಂಡಲವನ್ನು ಕ್ರಮದಂತೆ ರಚಿಸಿ ಶ್ರೇಷ್ಠವಾದ ದೇವೀಮಂತ್ರವನ್ನು ಜಪಿಸತೊಡಗಿದರು.

೮೨-೮೩. ದೇವಿಯ ಅಷ್ಟಾಕ್ಷರೀಮಂತ್ರವನ್ನು ವಿಧಿಪೂರ್ವಕವಾಗಿ ಆ ವೇತಾಲಭೈರವರು ಎಂಟುಲಕ್ಷಸಂಖ್ಯೆಯ ಜಪಮಾಡಿದರು. ನಾಲ್ಕುಲಕ್ಷ ಜಪಮಾಡಿದಮೇಲೆ ಮೂರುವರ್ಷಗಳಕಾಲ ಭಕ್ತಿಯಿಂದ ಮೂರುವಿಧವಾದ ಎಂದರೆ, ಜಪ, ಹೋಮ, ತರ್ಪಣ ಎಂಬ ಮೂರು ಕ್ರಮಗಳಿಂದ ಕೂಡಿದ ಪುರಶ್ಚರಣವನ್ನು ಮಾಡಿದರು.

ತ್ರಿಧಾ ಪುರಶ್ಚರಣಂ ಚ ತೌ ಭಕ್ತ್ಯಾ ಸಮಕುರ್ವತಾಂ ।
ಯದ್ಯದೌತ್ತರತಂತ್ರೋಕ್ತಂ ಕಲ್ಪೋಕ್ತಂ ಪೂಜನೇ ಕೃತಂ ॥ ೪೪ ॥

ತತ್ಸರ್ವಂ ಚಕ್ರತುಸ್ತೌ ತು ತಂ ತ್ರಿಹಾಯನಸಂವೃತೌ ।
ಕಾಮಾಖ್ಯಾತ್ರಿಪುರಾದೀನಾಮನ್ಯಾಸಾಮಪಿ ಪೂಜನಂ ॥ ೪೫ ॥

ಸಕೃತ್ಕೃತ್ವಾ ಪೀಠಯಾತ್ರಾಂ ಚೇರತುರ್ವಿಧಿವತ್ತದಾ ।
ಏವಂ ತೌ ಬದ್ಧಕವಚೌ ಕೃತನ್ಯಾಸೌ ಹರಾತ್ಮಜೌ ॥ ೪೬ ॥

ಸುಪ್ರೀತಾ ಚಾನುಜಗ್ರಾಹ ಮಹಾಮಾಯಾಥ ತೌ ತದಾ ।
ಧ್ಯಾನಸ್ಥಯೋಸ್ತು ಜಪತೋರ್ಯಜತೋಶ್ಚ ಜಗನ್ಮಯಾ ॥ ೪೭ ॥

ಶಿವಲಿಂಗಂ ವಿನಿರ್ಭಿದ್ಯ ತದಾ ಪ್ರತ್ಯಕ್ಷತಾಂ ಗತಾ ।
ತಸ್ಯಾಂ ವಿನಿರ್ಗತಾಯಾಂ ತು ಶಿವಲಿಂಗಂ ತ್ರಿಧಾಭವತ್ ॥ ೪೮ ॥

೪೪-೪೫. ಮತ್ತು ಉತ್ತರತಂತ್ರದಲ್ಲಿ ಹೇಳಿರುವ ಕ್ರಮಗಳೆಲ್ಲವನ್ನೂ ತಪ್ಪದೆ ಆಚರಿಸುತ್ತಾ ಕಾಮಾಖ್ಯಾ, ತ್ರಿಪುರಾ ಮೊದಲಾದ ದೇವಿಯರ ಪೂಜೆಯನ್ನೂ, ಪೀಠ ಪೂಜೆಯನ್ನೂ ಸಹ ಮೂರುವರ್ಷಗಳವರೆಗೂ ವಿಧಿವತ್ತಾಗಿ ಮಾಡಿದರು.

೪೬-೪೭. ದೇವಿಯ ಕವಚವನ್ನು ಮಂತ್ರಪೂರ್ವಕವಾಗಿ ತಮ್ಮ ಶರೀರದಲ್ಲಿ ನ್ಯಾಸಮಾಡಿಕೊಂಡು ದೇವಿಯನ್ನು ಭಕ್ತಿಯಿಂದ ಆರಾಧಿಸುತ್ತಿರಲು, ಮಹಾಮಾಯಾ ಸ್ವರೂಪಳಾದ ಜಗನ್ಮಾತೆಯು ಸುಪ್ರೀತಳಾಗಿ ಶಿವಲಿಂಗವನ್ನು ಭೇದಿಸಿಕೊಂಡು ಹೊರ ಹೊರಟು, ತನ್ನನ್ನೇ ಧ್ಯಾನಿಸುತ್ತಾ ಜಪಮಾಡುತ್ತಿರುವ ಆ ವೇತಾಲಭೈರವರಿಗೆ ಪ್ರತ್ಯಕ್ಷಳಾದಳು.

೪೮. ದೇವಿಯು ಶಿವಲಿಂಗವನ್ನು ಭೇದಿಸಿ ಹೊರಹೊರಡಲು, ಆ ಲಿಂಗವು ಮೂರುಭಾಗವಾಯಿತು. ಅದರಿಂದ ಭೈರವ, ಭೈರವಿ, ಹೇರುಕ ಎಂಬ ಮೂರು ದೇವತೆಗಳಾದರು.

೪೯-೫೨. ವೇತಾಲಭೈರವರು ದೇವಿಯನ್ನು ಯಾವ ರೂಪ ಮತ್ತು ಆಯು ಧಾಲಂಕಾರಗಳಿಂದ ಕೂಡಿರುವಂತೆ ಧ್ಯಾನಮಾಡುತ್ತಲಿದ್ದರೋ, ಅದೇರೂಪವಿಂದ ದೇವಿಯು ಅವರಿಗೆ ಪ್ರತ್ಯಕ್ಷಳಾದಳು. ಪ್ರತ್ಯಕ್ಷಳಾದ ಆ ದೇವಿಯು ಸರ್ವಾಂಗ ಸುಂದರಿಯಾಗಿದ್ದಳು. ದುಂಡಾಗಿ ಉಬ್ಬಿರುವ ಸ್ತನಗಳು, ಕೈಗಳಲ್ಲಿ ಧರಿಸಿರುವ

ಭೈರವೋ ಭೈರವೀ ಚೇತಿ ಹೇರುಕಶ್ಚ ತಥಾ ತ್ರಯಃ ।
ತಾನ್ದದರ್ಶ ತಥಾ ದೇವೀಂ ವೇತಾಲೋ ಭೈರವಸ್ತದಾ ॥ ೮೯ ॥

ಯಥಾ ಧ್ಯಾನಗತಾ ದೃಷ್ಟಾ ಬಹಿಶ್ಚಾಪಿ ತಥಾ ತಥಾ ।
ತಾಂ ದೃಷ್ಟ್ವಾ ಚಾರುಸರ್ವಾಂಗೀಂ ಪೀನೋನ್ನತಪಯೋಧರಾಂ ॥ ೯೦ ॥

ವರದಾಭಯಹಸ್ತಾಂ ಚ ಸಿದ್ಧಸೂತ್ರಾಸಿಧಾರಿಣೀಂ ।
ರಕ್ತಪದ್ಮಪ್ರತೀಕಾಶಾಂ ಸಿತಪ್ರೇತಾಸನಸ್ಥಿತಾಂ ॥ ೯೧ ॥

ನಿಮೀಲ್ಯ ನಯನದ್ವಂದ್ವಂ ತದಾ ವೇತಾಲಭೈರವೌ ।
ತ್ರಾಹಿ ತ್ರಾಹಿ ಮಹಾಮಾಯೇ ಊಚತುಸ್ತೌ ಮುಹುರ್ಮುಹುಃ ॥ ೯೨ ॥

ತತಸ್ತಯಾ ಮಹಾದೇವ್ಯಾ ತೇಜಸಾಪ್ಯಾಯಿತೌ ತು ತೌ ।
ಪಸ್ಪರ್ಶ ವರಹಸ್ತಸ್ಯ ಚಾಗ್ರಭಾಗೇನ ವೈಷ್ಣವೀ ॥ ೯೩ ॥

ಆಪ್ಯಾಯಿತೌ ತತಸ್ತೌ ತು ಸ್ಪೃಷ್ಟಾವಪಿ ತಥಾ ಪುನಃ ।
ಆಸೇದುತಶ್ಚ ದೇವತ್ವಂ ಮನುಷ್ಯತ್ವಂ ವಿಹಾಯ ಚ ॥ ೯೪ ॥

ದೇವಭೂತೌ ತದಾ ತೌ ತು ಮಹಾಮಾಯಾಂ ಜಗನ್ಮಯೀಂ ।
ಸ್ತುತಿಭಿರ್ನತಿಭಿಶ್ಚೇತಿ ತದಾ ತುಷ್ಟುವತುಃ ಶಿವಾಂ ॥ ೯೫ ॥

ವರದಾಭಯಹಸ್ತಗಳು, ಸಿದ್ಧಸೂತ್ರ, ಖಡ್ಗ ಇವುಗಳಿಂದ ಶೋಭಿಸುತ್ತಾ ರಕ್ತಕಮಲದಂತೆ ಶರೀರಕಾಂತಿಯುಳ್ಳವಳಾಗಿ, ಬಿಳಿಯ ಶವಾಸನದಮೇಲೆ ಕುಳಿತಿದ್ದಳು. ಇಂತಹ ದಿವ್ಯಕಾಂತಿಯಿಂದ ಬೆಳಗುತ್ತಿರುವ ದೇವಿಯನ್ನು ವೇತಾಲಭೈರವರು ನೋಡಲಾರದೆ, ತಮ್ಮ ಕಣ್ಣುಗಳನ್ನು ಸ್ವಲ್ಪ ಮುಚ್ಚಿ, ಓ ಮಹಾಮಾಯೆ, ರಕ್ಷಿಸು ರಕ್ಷಿಸೆಂದು ಬಾರಿ ಬಾರಿಗೂ ಪ್ರಾರ್ಥಿಸಿದರು.

೯೩. ಆಬಳಿಕ ಮಹಾದೇವಿಯ ದಿವ್ಯತೇಜಸ್ಸನ್ನು ನೋಡಲಾರದೆ ದಿಗ್ಭ್ರಮೆಗೊಂಡ ವೇತಾಲಭೈರವರನ್ನು, ಆ ವೈಷ್ಣವೀದೇವಿಯು ತನ್ನ ವರದಹಸ್ತದ ಕೊನೆಯಿಂದ ಸ್ಪರ್ಶಮಾಡಿದಳು.

೯೪-೯೫. ದೇವಿಯ ವರದಹಸ್ತಸ್ಪರ್ಶದಿಂದ ಸಂತೋಷಗೊಂಡು ಮನುಷ್ಯತ್ವವನ್ನು ಬಿಟ್ಟು ದೇವಭಾವವನ್ನು ಹೊಂದಿ, ಜಗನ್ಮಾತೆಯೂ, ಮಂಗಳರೂಪಳೂ ಆದ ಮಹಾಮಾಯೆಯನ್ನು ನಮಸ್ಕಾರ ಸ್ತೋತ್ರಗಳಿಂದ ಹೀಗೆ ಸ್ತೋತ್ರಮಾಡಿದರು.

॥ ವೇತಾಲಭೈರವಾವೂಚತುಃ ॥

ಜಯ ಜಯ ದೇವಿ ಸುರಗಣಾರ್ಚಿತಪಾದಪಂಕಜೇ ।
ವಿಶ್ವಸ್ಯ ಭೂತಿಭಾವಿನಿ ಶಶಿಮೌಲಿಕೇಲಿವಿಭಾವಿನಿ ಗಿರಿಜೇ ॥ ೯೬ ॥

ನೇತತ್ರಯನಿರ್ಜಿತವಿವಸ್ವದ್ವಿಧುವಹ್ನಿ ಕಾಂತಿತುಲಿತಕಮಲಜೇ ।
ಮಧ್ಯನೇತ್ರನತಭ್ರೂಭಂಗಭಕ್ತರಕ್ತಮತಿಚಯಜ್ಞಾಯಕವಿಮಲಜೇ ॥

ಆಜ್ಞಾಚಕ್ರಾಂತಶಾಂತನವಕೋಟಿಕರೋಟಿತುಲ್ಯಕಾಂತಶಾಂತಶಶಧರೇ ।
ಬಹುಮಾಯಕಾಯಭೋಗಯೋಗತರಂಗಸಾರಸ್ಯಪದ್ಮವಸುಚರೇ ॥

ತ್ರಿನಾಡಿನೀತಮಧ್ಯಬದ್ಧವಿಷ್ಕಿರವಲ್ಲಭಶುಭಸುಷುಮ್ನಸಮಾಧಾರಪರೇ ।
ವಿಬುಧರತ್ನವಿಮೋದಿವಿಶ್ವಮೂರ್ತಿಮಹೋಮಯಾನವಾಸಿ
ಷಟ್ಚಕ್ರಧರೇ ॥ ೯೯ ॥

---

೯೬. ವೇತಾಲಭೈರವರು ಸ್ತೋತ್ರಮಾಡಿದರು:—ಓ ದೇವಿ, ನಿನ್ನ ಪಾವ ಕಮಲಗಳನ್ನು ದೇವತೆಗಳು ಅತಿ ಭಕ್ತಿಯಿಂದ ಪೂಜಿಸುವರು. ನೀನು ಸಮಸ್ತ ಪ್ರಪಂಚಕ್ಕೂ ಐಶ್ವರ್ಯಾದಿಗಳನ್ನು ಅನುಗ್ರಹಿಸುವವಳು, ಚಂದ್ರಶೇಖರನೊಡನೆ ಸಂತೋಷದಿಂದ ವಿಹರಿಸುವವಳು, ಇಂತಹ ಸ್ವರೂಪವುಳ್ಳ ಓ ಪಾರ್ವತಿ, ನಿನಗೆ ಜಯವು.

೯೭. ಓ ದೇವಿ, ನಿನ್ನ ನೇತ್ರತ್ರಯಗಳು ಸೂರ್ಯ, ಚಂದ್ರ, ಅಗ್ನಿ ಇವರು ಗಳ ಕಾಂತಿಯನ್ನು ಧಿಕ್ಕರಿಸುತ್ತಿರುವವು. ನೇತ್ರಗಳ ಮಧ್ಯದಲ್ಲಿರುವ ಭ್ರೂವಿಲಾಸ ದಿಂದ ಭಕ್ತರಿಗೆ ಅಭೀಷ್ಟಗಳನ್ನೆಸಗಿ, ಅವರು ನಿನ್ನಲ್ಲಿ ಅನುರಾಗವುಳ್ಳವರಾಗುವಂತೆ ಮಾಡುವ ಓ ದೇವಿ, ನಿನಗೆ ಜಯವು.

೯೮. ಓ ದೇವಿ, ನೀನು ದೇಹದಲ್ಲಿರುವ ಷಟ್ಚಕ್ರದಲ್ಲಿ ಒಂದಾದ ಆಜ್ಞಾಚಕ್ರ ದಲ್ಲಿ ನೆಲಸಿರುವವಳು, ಸ್ವಚ್ಛವಾಗಿ ಪ್ರಕಾಶಿಸುತ್ತಿರುವ ಒಂಭತ್ತುಕೋಟಿ ಚಂದ್ರರಿಗೆ ಸಮಾನವಾದ ಕಾಂತಿಯಿಂದ ಬೆಳಗುವವಳು, ಮಾಯಾಸ್ವರೂಪಳು, ಭೋಗಾಸಕ್ತ ರಾದ ಸಂಸಾರಿಗಳಿಗೂ, ಯೋಗಿಗಳಿಗೂ ಸಾರವಾದ-ವಸ್ತುವು ಎಂದರೆ ಪ್ರಾಪ್ಯವಸ್ತುವು, ಪದ್ಮವನದಲ್ಲಿ ಸಂಚರಿಸುವವಳು, ಇಂತಹ ಓ ದೇವಿ, ನಿನಗೆ ಜಯವುಂಟಾಗಲಿ.

೯೯. ಇಡಾ, ಪಿಂಗಳಾ, ಸುಷುಮ್ನಾ ಎಂಬ ಮೂರು ನಾಡಿಗಳಿಂದ ಬೇರೆ ಯಾಗಿ ತೆಗೆಯಲ್ಪಟ್ಟು ಮಧ್ಯದಲ್ಲಿ ಕಟ್ಟಿದ ಹಕ್ಕಿಯಂತಿರುವ ಜೀವನನ್ನು, ಮಂಗಳಕರ

ಆದಿಷೋಡಶಚಕ್ರಚುಂಬಿತಚಾರುದೇಹಪೀನತುಂಗಕುಚಾಚಲಾ
ಲಿಂಗಿತಭೂಮಿಮಧ್ಯನಾಗಶಾಕಗತೇ ।

ಸಿದ್ಧಿಸೂತ್ರವರಾಭಯಾಸಿಶಾಂತಪಾತಕಪಂಕಜಾತಕಮೂಲಮಣಿ
ಚತುರ್ಬಾಹುಯುತೇ ॥ ೧೦೦ ॥

ಜ್ಞಾನತಾಲಕಮಂತ್ರತಂತ್ರಯೋಗಿಯೋಗನಿಬದ್ಧಸಾರಭೂತ
ಭಂಗ ವಿನೋದಕೃತೇ ।

ಆತ್ಮತತ್ತ್ವಪರೈಕಶಾರರತ್ನಹಾರಕಮುಕ್ತಿಸೂಕ್ತಿವಿವೇಕನಿತ
ಪ್ರೇತರತೇ ॥ ೧೦೧ ॥

ವಾದ ಸುಷುಮ್ನಾ ಎಂಬ ನಾಡಿಯಿಂದ ಸರಿಯಾದ ಆಧಾರದಲ್ಲಿರಿಸಲು ಆಸಕ್ತಳಾಗಿರುವ ಎಲೈ ದೇವಿ, ನೀನು ದೇವಶ್ರೇಷ್ಠರಾದ ತ್ರಿಮೂರ್ತಿಗಳಿಗೆ ಸಂತೋಷವನ್ನುಂಟು ಮಾಡುವವಳು, ಅನೇಕ ರೂಪವುಳ್ಳವಳು, ತೇಜಸ್ಸಿನಿಂದ ಪ್ರಕಾಶಿಸುವವಳು, ಒಂಭತ್ತು ಖಡ್ಗಗಳಿಂದಲೂ, ಆರು ಚಕ್ರಗಳಿಂದಲೂ ಶೋಭಿಸುತ್ತಿರುವವಳು, ಇಂತಹ ದೇವಿಗೆ ನಮಸ್ಕಾರವು.

೧೦೦. ಹದಿನಾರು ಚಕ್ರಗಳಿಂದ ಕೂಡಿ ಸುಂದರವಾದ ನಿನ್ನ ಶರೀರದಲ್ಲಿರುವ, ಬೆಟ್ಟಗಳಂತೆ ಉನ್ನತವಾಗಿರುವ ಸ್ತನಗಳಿಂದಲೂ, ಭೂಮಿಯ ಮಧ್ಯದಲ್ಲಿರುವ (ಶರೀರದ ಆಧಾರಚಕ್ರದಲ್ಲಿರುವ) ಸರ್ಪಾಕಾರವಾದ ಕುಂಡಲಿನಿ ಎಂಬ ಶಕ್ತಿಯಿಂದಲೂ ಕೂಡಿರುವ ಓ ದೇವಿಯೇ, ಸಿದ್ಧಸೂತ್ರ, ವರ, ಅಭಯ, ಖಡ್ಗ ಇವುಗಳನ್ನು ಧರಿಸಿರುವ ನಿನ್ನ ನಾಲ್ಕು ಹಸ್ತಗಳು ಭಕ್ತರ ಪಾತಕಗಳನ್ನು ನಾಶಮಾಡಿ ತೇಜಸ್ಸಿನಿಂದ ಪ್ರಕಾಶಿಸುತ್ತಿರುವುವು, ಇಂತಹ ನಿನಗೆ ನಮಸ್ಕಾರವು.

೧೦೧. ಎಲೌ ದೇವಿ, ನೀನು ಜ್ಞಾನಕ್ಕೆ ಸಮಾನವಾದ ಮಂತ್ರಗಳನ್ನು ತಂತ್ರಾನುಸಾರವಾಗಿ ಆಚರಿಸುವ ಯೋಗಿಗಳಿಗೆ ಸಿದ್ಧಿಯನ್ನೂ, ಇದಕ್ಕೆ ವ್ಯತಿರಿಕ್ತವಾಗಿ ಆಚರಿಸುವವನಿಗೆ ಭಂಗವನ್ನೂ ಕೊಡುವ ವಿನೋದವೆಂದಿರುವವಳು. ಉಪದೇಶಗಳೆಂಬ ಮುತ್ತುಗಳಿಂದ ಕೂಡಿರುವ ಆತ್ಮತತ್ತ್ವವೆಂಬ ಮುಕ್ತಿನಕಾರವೆಂಬ ಶೋಭಿಸುತ್ತಾ ಶುಭ್ರವರ್ಣವುಳ್ಳ ಶವಾಸನದಲ್ಲಿ ಕುಳಿತಿರುವ ನಿನಗೆ ನಮಸ್ಕಾರವು.

ರತ್ನಸಾರಸಮಸ್ತಸಂಗತರಂಗರಾಗವಿಯೋಗಿಮುಂತ್ರಶಾಂತ
ಪೂರವಿಶೇಷಕೃತೇ ।
ಯೋಗಿನೀಗಣನೃತ್ಯಭೃತ್ಯಭಾವನನಿಬದ್ಧನಿದ್ಧಹಾರಕಂಕಣಮುಖ್ಯ
ಭೂಷಣಪತೇ ॥ ೧೦೨ ॥

ಸಾಟ್ಟಹಾಸನಿಸೋದಮೋದಿತಮುಕ್ತಕೇಶಸುರೇಶನಿಬದ್ಧದೇಹಪುಟೇ ।
ದೇಹಿ ದೇವಿ ವಿಶೋಕಶೋಚನಬಂಧಮೋಚನಪಾಪಶಾಪ
ಶುಭಗತೇ ॥ ೧೦೩ ॥

ಸರ್ವವಿದ್ಯಾತ್ಮಿಕಾಂ ಶುದ್ಧಾಂ ಮಂತ್ರಯಂತ್ರಮಯೀಂ ಶಿವಾಂ ।
ಪ್ರಣಮಾಮಿ ಮಹಾಮಾಯಾಂ ಲೋಕೇ ವೇದೇ ಚ ಕೀರ್ತಿತಾಂ ॥ ೧೦೪ ॥

ಪರಾಂ ಪರಾತ್ಮಿಕಾಂ ನಿತ್ಯಾಂ ಸಾಧ್ಯಾಧಾರೈಕಸಂಸ್ಥಿತಾಂ ।
ಕಾಮಮೋಹ್ಲಾದಕರೀಂ ಕಾಂತಾಂ ತ್ವಾಂ ನಮಾಮಿ ಜಗನ್ಮಯಿಾಂ ॥ ೧೦೫ ॥

---

೧೦೨. ರತ್ನಾದಿಸಮಸ್ತಸಾರವಸ್ತುಗಳಲ್ಲಿಯೂ ಅನುರಾಗವನ್ನು ತೊರೆದು, ಮಂತ್ರತಂತ್ರಗಳಿಗನುಸಾರವಾಗಿ ನಿನ್ನನ್ನು ಆರಾಧಿಸುವ ಯೋಗಿಗಳ ಆಕಾಂಕ್ಷೆಯನ್ನು ಪೂರ್ಣಮಾಡುವ ಓ ದೇವಿ, ನಿನಗೆ ಆಭರಣಪ್ರಾಯರಾದ ನೃತ್ಯಮಾಡುವ ಯೋಗಿನೀ ಗಣ, ಭೃತ್ಯಭಾವದಿಂದ ಸೇವಿಸುವ ಯೋಗಿನಿಯರು ಇವರುಗಳಿಂದ ಕೂಡಿ ವಿರಾಜಿಸುವ ನಿನಗೆ ನಮಸ್ಕಾರವು.

೧೦೩. ಅಟ್ಟಹಾಸಲೀಲೆಯಿಂದ ಮೆರೆಯುತ್ತಿರುವವನೂ, ಬಿಚ್ಚಿದ ಜಟೆಯುಳ್ಳವನೂ ಆದ ದೇವದೇವನಾದ ಶಂಕರನೊಡನೆ ಸೇರಿಕೊಂಡ ಶರೀರವುಳ್ಳ, ಓ ದೇವಿಯೇ, ಶೋಕ (ದುಃಖ) ನಾಶವನ್ನೂ, ಸಂಸಾರಬಂಧವಿಮುಕ್ತಿಯನ್ನೂ ಅನುಗ್ರಹಿಸು. ಮಂಗಳವಾದ ಗತಿಯುಳ್ಳ ಓ ದೇವಿ, ನಮ್ಮ ಪಾಪವನ್ನೆಲ್ಲಾ ನಾಶಗೊಳಿಸು.

೧೦೪. ಸಕಲ ವಿದ್ಯಾಸ್ವರೂಪಳೂ ಶುದ್ಧಳೂ, ಮಂತ್ರ ಮತ್ತು ಯಂತ್ರಗಳ ರೂಪಳೂ, ಮಂಗಳೆಯೂ, ಲೋಕದಲ್ಲಿಯೂ ವೇದದಲ್ಲಿಯೂ ಪ್ರಸಿದ್ಧಳಾದವಳೂ ಆದ ಮಹಾಮಾಯೆಯನ್ನು ನಮಸ್ಕರಿಸುವೆನು.

೧೦೫. ಸರ್ವೋತ್ಕೃಷ್ಟವಾದ ಬ್ರಹ್ಮಸ್ವರೂಪಳೂ, ಅತಿ ನಿಕೃಷ್ಟವಾದ ಜಗತ್ಸ್ವರೂಪಳೂ ಆಗಿರುವ ಮತ್ತು ನಿತ್ಯಳೂ, ಎಲ್ಲರೂ ಸಾಧಿಸಬೇಕಾಗಿರುವ ಬ್ರಹ್ಮಸ್ವರೂಪವಾದ ಒಂದೇ ಆಧಾರದಲ್ಲಿರುವವಳೂ, (ಮನ್ಮಥನಿಗೆ ಸಂತೋಷವನ್ನುಂಟುಮಾಡುವವಳೂ) ಭಕ್ತರಿಗೆ ಇಷ್ಟಾರ್ಥವನ್ನು ದಯಪಾಲಿಸಿ ಸಂತೋಷವನ್ನುಂಟು

ಪ್ರಪಂಚಪರಮವ್ಯಕ್ತಂ ಜಗದೇಕವಿವರ್ಧಿನಿ ।
ಪ್ರಭಾವೇನಾರ್ಧರಕ್ತಾಂಗಿ ದೇವಿ ತುಭ್ಯಂ ನಮೋಽಸ್ತು ತೇ ॥ ೧೦೬ ॥

ಕಾಮಾಖ್ಯಾ ನಿತ್ಯರೂಪಾಖ್ಯಾ ಮಹಾಮಾಯಾ ಸರಸ್ವತೀ ।
ಯಾ ಲಕ್ಷ್ಮೀರ್ವಿಷ್ಣುವಕ್ಷಃಸ್ಥಾ ಪ್ರಣಮಾಮ್ಯೋಽಚ್ಯುತಾಂ ಶಿವಾಂ ॥ ೧೦೭ ॥

ಮಂತ್ರಾಣಿ ಯಸ್ಯಾಸ್ತಂತ್ರಾಣಿ ಸಪಸ್ರಾಣಿ ಚ ಷೋಡಶ ।
ಮಂತ್ರಯಂತ್ರಾತ್ಮಕೇ ತುಭ್ಯಂ ನಮೋಽಸ್ತು ಮಮ ಪಾರ್ವತಿ ॥ ೧೦೮ ॥

ಇತಿ ಸ್ತುತಾ ತತಸ್ತಾಭ್ಯಾಂ ಮಹಾಮಾಯಾ ಜಗತ್ಪ್ರಸೂಃ ।
ಉವಾಚ ಮುದಿತಾ ಚೇತಿ ವರಂ ವರಯತಂ ಯುವಾಂ ॥ ೧೦೯ ॥

ಮಾಡುವವಳೂ, ಮನೋಹರಳೂ, ಜಗತ್ಪ್ರಾಪಳೂ ಆದ ಓ ದೇವಿಯೇ, ನಿನ್ನನ್ನು ನಮಸ್ಕರಿಸುವೆನು.

೧೦೬. ಸೃಷ್ಟ್ಯಾದಿಯಲ್ಲಿ ಅವ್ಯಕ್ತರೂಪವಾಗಿರುವ ಜಗತ್ತನ್ನು ತನ್ನ ಪ್ರಭಾವದಿಂದ ಅಭಿವೃದ್ಧಿಗೊಳಿಸಿ ವಿಸ್ತಾರವಾದ ಪ್ರಪಂಚರೂಪವಾಗಿ ಮಾಡುವವಳೂ, ಅರ್ಧಭಾಗ ಕೆಂಬಣ್ಣವಾದ ಶರೀರವುಳ್ಳವಳೂ ಆದ ಓ ದೇವಿಯೇ, ನಿನಗೆ ನಮಸ್ಕರಿಸುವೆನು.

೧೦೭. ನಿತ್ಯಸ್ವರೂಪಳೂ, ಸರಸ್ವತೀರೂಪಳೂ, ಮಹಾಮಾಯಾಸ್ವರೂಪಳೂ ಆಗಿರುವ ಯಾವ ಕಾಮಾಖ್ಯಾ ಎಂಬ ದೇವಿಯು, ಲಕ್ಷ್ಮಿಯ ರೂಪದಿಂದ ವಿಷ್ಣುವಿನ ಹೃದಯದಲ್ಲಿ ನೆಲಸಿರುವಳೋ ಅಂತಹ ಮಂಗಳರೂಪಳಾದ ಆ ದೇವಿಯನ್ನು ನಾವು ನಮಸ್ಕರಿಸುವೆವು.

೧೦೮. ಓ ದೇವಿಯೇ, ನಿನ್ನ ಮಂತ್ರ ಮತ್ತು ತಂತ್ರಗಳು ಹದಿನಾರುಸಾವಿರ ಇರುವುವು, ಇಷ್ಟು ಮಂತ್ರತಂತ್ರಸ್ವರೂಪಳಾದ ಓ ಗಿರಿಜೆ, ನಿನಗೆ ನಮಸ್ಕಾರ.

೧೦೯. ಈರೀತಿಯಾಗಿ ಆ ವೇತಾಲಭೈರವರು ಸ್ತುತಿಸಲು, ಜಗಜ್ಜನನಿಯಾದ ಮಹಾಮಾಯೆಯು ಸಂತೋಷಗೊಂಡು ಅವರನ್ನು ಕುರಿತು ಎಲೈ ವೇತಾಲಭೈರವರೇ, ನಿಮಗೆ ಬೇಕಾದ ವರವನ್ನು ಕೇಳಿಕೊಳ್ಳಿರಿ ಎಂದು ಹೇಳಿದಳು.

ಪ್ರತ್ಯಕ್ಷತೋ ಮಹಾಮಾಯಾಂ ಪೂರ್ವವದ್ಧ್ಯಾನಗೋಚರಾಂ ।
ತೌ ದೃಷ್ಟ್ವಾ ಭರ್ಗತನಯೌ ಪ್ರಾಹತುಶ್ಚೇದಮುತ್ತಮಂ ॥ ೧೧೦ ॥

॥ ವೇತಾಲಭೈರವಾವೂಚತುಃ ॥

ದೇವ್ಯನೇನ ಶರೀರೇಣ ಭವತ್ಯಾಃ ಶಂಕರಸ್ಯ ಚ ।
ಪ್ರಾರ್ಥಯೇ ಶಾಶ್ವತೀಂ ಸೇವಾಂ ನಿತ್ಯಂ ಯಾವದ್ರವಿಃ ಶಶೀ ॥ ೧೧೧ ॥

ನಾನ್ಯಂ ವರಂ ಸಾಧಯಾವೋ ಮಾಯೇ ತ್ವತ್ತೋ ಜಗನ್ಮಯಿ ।
ಅನ್ಯಥಾ ತವ ಭಕ್ತ್ಯೈವ ಸ್ಥಾಸ್ಯಾವೋ ಗಿರಿಕಂದರೇ ॥ ೧೧೨ ॥

ಏವಮುಕ್ತಾ ತತಸ್ತಾಭ್ಯಾಂ ಮಹಾಮಾಯಾ ಜಗನ್ಮಯಿ ।
ಏವಮಸ್ತ್ವಿತಿ ಚೋವಾಚ ಭವತ್ಪ್ರೇವಂ ಮುಹುರ್ಮುಹುಃ ॥ ೧೧೩ ॥

ಏವಂ ಸಿದ್ಧಿರ್ಜಗದ್ಧಾತ್ರೀ ಪ್ರೋಕ್ತ್ವಾ ಸ್ವಸ್ಯಾಥ ಚೂಚುಕೇ ।
ನಿಪೀಡ್ಯ ಕಾರಯಾಮಾಸ ಕ್ಷೀರಧಾರಾದ್ವಯಂ ಶಿವಾ ॥ ೧೧೪ ॥

---

೧೧೦. ಧ್ಯಾನದಲ್ಲಿ ಗೋಚರಿಸಿದಂತೆ ಪ್ರತ್ಯಕ್ಷವಾಗಿ ಎದುರಿಗೆ ನಿಂತಿರುವ ಮಹಾಮಾಯೆಯನ್ನು ನೋಡಿ ಶಂಕರಸುತರಾದ ಆ ವೇತಾಲಭೈರವರು ಹೀಗೆ ಹೇಳಿದರು.

೧೧೧. ವೇತಾಲಭೈರವರು ಹೇಳಿದರು:—ಓ ದೇವಿಯೇ, ನಾವು ಸೂರ್ಯ ಚಂದ್ರರಿರುವವರೆಗೆ ನಿನ್ನ ಮತ್ತು ಶಂಕರನ ಶಾಶ್ವತವಾದ ಸೇವೆಯನ್ನು ಮಾಡಿಕೊಂಡಿರುವಂತೆ ಅನುಗ್ರಹಿಸು.

೧೧೨. ಜಗದ್ರೂಪಳಾದ ಓ ಮಾಯೆಯೇ, ನಮಗಿನ್ನಾವ ವರವೂ ಬೇಡ, ಆ ವರವು ನಮಗೆ ಲಭಿಸದಿದ್ದರೆ ನಾವು ನಿನ್ನ ಭಕ್ತಿಯಿಂದಲೇ ಗಿರಿಯ ಗುಹೆಗಳಲ್ಲಿ ವಾಸಿಸುವೆವು.

೧೧೩. ಹೀಗೆ ಆ ಶಂಕರಪುತ್ರರು ಹೇಳಲು, ಜಗನ್ಮಾತೆಯಾದ ಮಹಾಮಾಯೆಯು, ಹಾಗೆಯೇ ಆಗಲಿ ಎಂದು ಪುನಃ ಪುನಃ ಹೇಳಿದಳು.

೧೧೪-೧೧೬. ಜಗತ್ಸೃಷ್ಟಿಕರ್ತಳೂ, ಸಿದ್ಧರೂಪಳೂ ಆದ ದೇವಿಯು ಹೀಗೆ ಹೇಳಿ, ತನ್ನ ಸ್ತನಾಗ್ರಗಳನ್ನು ಹಿಂಡಿ ಎರಡುತೊಟ್ಟು ಹಾಲನ್ನು ತೆಗೆದು, ಆ ಹಾಲನ್ನು

ತತಸ್ತು ನಿಃಸೃತಂ ಕ್ಷೀರಂ ಪಾಯಯಾಮಾಸ ಭೈರವಂ ।
ವೇತಾಲಂ ಚ ಮಹಾರಾಜ ಪಿಬತಸ್ತೌ ಚ ತತ್ತದಾ ॥ ೧೧೫ ॥

ಪೀತ್ವಾ ಚ ತೌ ತದಾಕ್ಷೀರಂ ದೇವತ್ವಂ ಪ್ರಾಪ್ಯ ಶಾಶ್ವತಂ ।
ಅಜರೌ ಚಾಮರೌ ಭೂತೌ ಮಹಾತೇಜಸ್ವಿನಾವುಭೌ ॥ ೧೧೬ ॥

ತಸ್ಯಾಸ್ತು ಕ್ಷೀರಮಮೃತಂ ತತ್ಪೀತ್ವಾ ತೌ ಮಹಾಬಲೌ ।
ಪಿಯೂಷಪಾನಾತ್ಸಂಜಾತೌ ತತಸ್ತೌ ಪ್ರಾಹ ವೈಷ್ಣವೀ ॥ ೧೧೭ ॥

ಗಣಾನಾಂ ದೇವದೇವಸ್ಯ ಭವತಶ್ಚಾಧಿಪೌ ಯುವಾಂ ।
ದ್ವಾಃಸ್ಥೌ ಚ ನಿತ್ಯಮಾಸನ್ನೌ ನಂದಿವದ್ಭವತಂ ಸುತೌ ॥ ೧೧೮ ॥

॥ ಔರ್ವ ಉವಾಚ ॥

ಇತ್ಯುಕ್ತ್ವಾ ಹರಸಮ್ಮತ್ಯಾ ಮಹಾಮಾಯಾ ಜಗನ್ಮಯಿ ।
ಯೋಗಿನೀಗಣಸಂಯುಕ್ತಾ ತತ್ರೈವಾಂತರಧೀಯತ ॥ ೧೧೯ ॥

ಅಂತರ್ಹಿತಾಯಾಂ ತಸ್ಯಾಂ ತು ತದಾ ವೇತಾಲಭೈರವೌ ।
ಮುದಿತೌ ಪರಮಪ್ರೀತೌ ಕೃತಕೃತ್ಯೌ ಬಭೂವತುಃ ॥ ೧೨೦ ॥

ವೇತಾಲ ಮತ್ತು ಭೈರವರಿಗೆ ಕುಡಿಸಿದಳು. ಅವರೂ ಸಹ ಆ ಹಾಲನ್ನು ಕುಡಿದು ನಿತ್ಯವಾದ ದೇವಭಾವವನ್ನು ಹೊಂದಿ ಜರಾ (ಮುಪ್ಪು) ಮರಣರಹಿತರೂ, ತುಂಬಾ ತೇಜಸ್ವಿಗಳೂ ಆದರು.

೧೧೬-೧೧೭. ಅಮೃತರೂಪವಾದ ದೇವೀಕ್ಷೀರವನ್ನು ಪಾನಮಾಡಿದ್ದರಿಂದ ಅವರು ಅತಿಬಲಿಷ್ಠರಾದರು. ಅನಂತರ ದೇವಿಯು ಅವರನ್ನು ಕುರಿತು ಎಲೈ ವತ್ಸರೇ, ನೀವು ದೇವದೇವನಾದ ಶಂಕರನ ಗಣಗಳಿಗೆ ನಾಯಕರಾಗಿ ನಂದಿಯಂತೆ ದ್ವಾರಪಾಲರಾಗಿದ್ದು, ನಿತ್ಯವೂ ಆ ದೇವನ ಸನ್ನಿಧಿಯಲ್ಲಿರುವವರಾಗಿರಿ ಎಂದು ಹೇಳಿದಳು.

೧೧೯. ಔರ್ವಮುನಿಯು ಹೇಳಿದನು:—ಹೀಗೆ ಜಗನ್ಮಾತೆಯಾದ ಮಹಾಮಾಯೆಯು ಶಂಕರನ ಇಷ್ಟದಂತೆ ವೇತಾಲಭೈರವರಿಗೆ ವರವನ್ನು ಕೊಟ್ಟು, ಒಕ್ಕ ಯೋಗಿನೀದೇವತೆಗಳೊಂದಿಗೆ ಅಲ್ಲಿಯೇ ಅಂತರ್ಧಾನಳಾದಳು.

೧೨೦. ದೇವಿಯು ಅಂತರ್ಧಾನವನ್ನು ಹೊಂದಲು, ವರಪ್ರಾಪ್ತಿಯಿಂದ ವೇತಾಲಭೈರವರು ತುಂಬಾ ಸಂತೋಷಗೊಂಡು, ತಾವು ಧನ್ಯರಾದೆವೆಂದು ತಿಳಿದರು.

ಅಥಾಗಚ್ಛದ್ದೇವಗಣೈಃ ಸಾರ್ಧಂ ಸಪ್ರಮಥೋ ಹರಃ ।
ಸಭಾಜಯಿತುಮುಥ್ಯರ್ಥಂ ಪುತ್ರೌ ವೇತಾಲಭೈರವೌ ॥ ೧೨೧ ॥

ತಾವಾಸಾದ್ಯ ಮಹಾದೇವಸ್ತದಾ ನೀಲಾಹ್ವಯಂ ಗಿರಿಂ ।
ಸಕಲಂ ದರ್ಶಯಾಮಾಸ ಪೀಠಂ ತು ಸ್ಥಾನಭೇದತಃ ॥ ೧೨೨ ॥

ಕಾಮಾಖ್ಯಾಯಾ ಗುಹಾಂ ತತ್ರ ದರ್ಶಯಿತ್ವಾ ಮನೋಭವಾಂ ।
ತತಃ ಸ್ವೀಯಾಂ ಕಾಮಗುಹಾಂ ಭಾಯಾಭತ್ರಂ ಸ್ವಮಾಲಯಂ ॥ ೧೨೩ ॥

ಸ್ವಕೀಯಂ ಪಂಚಮೂರ್ತೀನಾಂ ಸಂಸ್ಥಾನಂ ಚಾಪ್ಯದರ್ಶಯತ್ ।
ಕಾಮರೂಪಸ್ಯ ಸಕಲಂ ಪೀಠಂ ದೇವಮಯಂ ತಥಾ ॥ ೧೨೪ ॥

ಪ್ರತ್ಯೇಕಂ ದರ್ಶಯಾಮಾಸ ಕ್ರಮತಸ್ತ್ರಿಪುರಾಂತಕಃ ।
ಪ್ರಥಮಂ ಕರತೋಯಾಖ್ಯಾಂ ಸತ್ಯಗಂಗಾಂ ಸದಾಶಿವಾಂ ॥ ೧೨೫ ॥

೧೨೧-೧೨೪. ಅನಂತರ ಶಂಕರನು ತನ್ನ ಪುತ್ರರಾದ ವೇತಾಲಭೈರವನನ್ನು ಅಭಿನಂದಿಸಲು ಪ್ರಥಮಗಣಗಳೊಡನೆ ಆ ವೇತಾಲಭೈರವರ ಬಳಿಗೆ ಬಂದು, ತನ್ನ ಮತ್ತು ದೇವಿಯ ವಾಸಸ್ಥಾನವಾದ ನೀಲಶೈಲವನ್ನೂ, ಸ್ಥಾನಭೇದವಿಂದ ಇರುವ ದೇವೀಪೀಠಗಳನ್ನೂ, ಅಲ್ಲಿರುವ ಕಾಮಾಖ್ಯಾದೇವಿಯ ಮನೋಭವಗುಹೆಯನ್ನೂ, ನೆರಳಿನಿಂದ ಆಹ್ಲಾದಕರವಾಗಿರುವ ತನ್ನ ದೇವಾಲಯವನ್ನೂ, ತನ್ನ ಐದು ಮೂರ್ತಿಗಳ ಬೇರೆಬೇರೆ ಸ್ಥಾನಗಳನ್ನೂ, ಕಾಮರೂಪದೇಶದ ದೇವಮಯವಾದ ಪೀಠವನ್ನೂ ಸಹ ಸಂಪೂರ್ಣವಾಗಿ ತೋರಿಸಿದನು.

೧೨೫. ಆ ಕಾಮರೂಪಪೀಠದಲ್ಲಿರುವ ವಿಶೇಷಗಳೆಲ್ಲವನ್ನೂ ಅವರಿಗೆ ಒಂದೊಂದಾಗಿ ತೋರಿಸಿದನು. ಅಲ್ಲಿ ಗಂಗೆಯ ನಿಜರೂಪವೆನಿಸಿದ ಕರತೋಯಾ ನದಿಯು ಹರಿಯುತ್ತಿರುವುದು. ಅದರ ನಿರ್ಮಲೋದಕವು ಸದಾ ಮಂಗಳಕರವಾಗಿಯೂ, ಪವಿತ್ರವಾಗಿಯೂ ಇರುವುದು. ದಕ್ಷಿಣ ಸಮುದ್ರವನ್ನು ಸೇರಲು ಪ್ರವಹಿಸುತ್ತಿರುವ ಆ ನದಿಯನ್ನು ಶಂಕರನು ಅವರಿಗೆ ಮೊದಲು ತೋರಿಸಿದನು.

ಪುಣ್ಯತೋಯಮಯೀಂ ಶುದ್ಧಾಂ ದಕ್ಷಿಣಾಬ್ಧೇಃ ಕಗಾಮಿನೀಂ ।
ತತಸ್ತು ಕಾಮರೂಪಸ್ಯ ವಾಯವ್ಯಾಂ ತ್ರಿಪುರಾಂತಕಃ ॥ ೧೨೬ ॥

ಆತ್ಮನೋ ಲಿಂಗಮತುಲಂ ಜಲ್ಪೀಶಾಖ್ಯಂ ವ್ಯದರ್ಶಯತ್ ।
ಯತ್ರ ನಂದೀ ಸಮಾರಾಧ್ಯ ಮಹಾದೇವಂ ಜಗತ್ಪತಿಂ ॥ ೧೨೭ ॥

ಅಭಿನ್ನೇನ ಶರೀರೇಣ ಗಾಣಾಪತ್ಯಮವಾಪ್ತವಾ ।
ನಂದಿಕುಂಡಂ ಮಹಾಕುಂಡಂ ಯತ್ರ ನಂದೀ ಪುರಾಕರೋತ್ ॥ ೧೨೮ ॥

ಅಭಿಷೇಕಂ ಲಬ್ಧವರಂ ಪೀತಂ ತೋಯಮನುತ್ತಮಂ ।
ತತ್ರ ಸ್ನಾತ್ವಾ ಚ ಪೀತ್ವಾ ಚ ಕೃತಕೃತ್ಯೋ ನರೋತ್ತಮಃ ॥ ೧೨೯ ॥

ಹರಸ್ಯ ಸದನಂ ಯಾತಿ ನಂದಿನೋಽಪಿ ಮಹಾಪ್ರಿಯಃ ।
ತಸ್ಯಾಽಸನ್ನೇ ಮಹಾದೇವೀಂ ನಾತಿದೂರೇ ವ್ಯವಸ್ಥಿತಾಂ ॥ ೧೩೦ ॥

ಸಿದ್ಧೇಶ್ವರಾಂ ಯೋನಿರೂಪಾಂ ಮಹಾಮಾಯಾಂ ಜಗನ್ಮಯಾಂ ।
ತ್ರ್ಯಂಬಕೋ ದರ್ಶಯಾಮಾಸ ಭೈರವಾಯ ಮಹಾತ್ಮನೇ ॥ ೧೩೧ ॥

೧೨೬-೧೨೭. ಬಳಿಕ ಕಾಮರೂಪಪೀಠದ ವಾಯವ್ಯದಿಕ್ಕಿನಲ್ಲಿರುವ ಜಲ್ಪೀಶ ವೆಂಬ ತನ್ನ ಮಹಾಲಿಂಗವನ್ನು ತೋರಿಸಿದನು. ಹಿಂದೆ ಆ ಲಿಂಗದಲ್ಲಿಯೇ ಜಗದೊಡೆಯನಾದ ಮಹಾದೇವನನ್ನು ಆರಾಧಿಸಿ, ನಂದಿಕೇಶ್ವರನು ಅದೇ ಶರೀರದಿಂದಲೇ ಪ್ರಮಥಗಣಗಳ ಆಧಿಪತ್ಯವನ್ನು ಪಡೆದನು.

೧೨೮-೧೨೯. ಅದರ ಸಮೀಪದಲ್ಲಿಯೇ ನಂದಿಯು ಸ್ನಾನಪಾನಗಳಿಗಾಗಿ ನಂದಿಕುಂಡವೆಂಬ ಉತ್ತಮವಾದ ಸರೋವರ ಒಂದನ್ನು ನಿರ್ಮಿಸಿರುವನು. ಆ ಕುಂಡದಲ್ಲಿ ನರನು ಸ್ನಾನವನ್ನಾಗಲೀ, ಪಾನವನ್ನಾಗಲೀ ಮಾಡಿದರೆ, ಅವನು ಕೃತಾರ್ಥನಾಗಿ ಜನ್ಮಾಂತರವಲ್ಲಿ ಶಂಕರನ ಸ್ಥಾನವಾದ ಕೈಲಾಸವನ್ನು ಪಡೆಯುವನು.

೧೩೦-೧೩೧. ಆ ಕುಂಡದ ಸಮೀಪದಲ್ಲಿಯೇ ನೆಲೆಸಿರುವ ಯೋನಿರೂಪಳೂ, ಜಗದ್ರೂಪಳೂ, ಮಹಾಮಾಯೆಯೂ ಆದ ಸಿದ್ಧೇಶ್ವರಾ ಎಂಬ ಹೆಸರಿನಿಂದ ಪ್ರಸಿದ್ಧಳಾದ ಮಹಾದೇವಿಯನ್ನು ಶಂಕರನು ಮಹಾತ್ಮನಾದ ಭೈರವನಿಗೆ ತೋರಿಸಿದನು.

ಯತ್ರ ನಂದೀ ಮಹಾಮಾಯಾಮಾಜ್ಞಯಾ ಶಶಿಧಾರಿಣಃ ।
ಸ್ತುತಿಭಿರ್ನುತಿಭಿಃ ಪೂಜ್ಯಗಾಣಾಪತ್ಯಮವಾಪ್ನುಯಾತ್ ॥ ೧೩೨ ॥

ಸುವರ್ಣಮಾನಸಸ್ತತ್ರ ನದಮುಖ್ಯೋ ಮುನೋಹರಃ ।
ನಂದಿನೋಽನುಗ್ರಹಾಯಾಶು ಮಾನಸಾಖ್ಯಂ ಸರಸ್ತು ತತ್ ॥ ೧೩೩ ॥

ಆಗತಂ ಚಾಜ್ಞಯಾ ಶಂಭೋಃ ಪೂರ್ವಮೇವ ತಪಸ್ಯತಃ ।
ಜಟೋದ್ಭವಾ ತತ್ರ ನದೀ ಹಿಮವತ್ಪ್ರಭವಾ ಶುಭಾ ॥ ೧೩೪ ॥

ಯಸ್ಯಾಂ ಸ್ನಾತ್ವಾ ನರಃ ಪುಣ್ಯಮಾಪ್ನೋತಿ ಜಾಹ್ನವೀಸಮಂ ।
ಗೌರೀವಿವಾಹಸಮಯೇ ಸರ್ವೈರ್ಮಾತೃಗಣೈಃ ಕೃತಃ ॥ ೧೩೫ ॥

ಜಲಾಭಿಷೇಕೋ ಭರ್ಗಸ್ಯ ಜಟಾಜೂಟೇಷು ಯಃ ಪುರಾ ।
ತೈಸ್ತೋಯೈರಭವದ್ಯಸ್ಮಾಜ್ಜಟೋದಾಖ್ಯಾ ನದೀ ತತಃ ॥ ೧೩೬ ॥

---

೧೩೨. ಹಿಂದೆ ಆ ಸ್ಥಾನವಲ್ಲಿಯೇ ನಂದಿಯು ಶಂಕರನ ಆಜ್ಞೆಯಂತೆ ಮಹಾ ಮಾಯೆಯನ್ನು ಸ್ತೋತ್ರ ನಮಸ್ಕಾರಗಳಿಂದ ಪೂಜಿಸಿ, ಪ್ರಮಥಗಣಗಳ ನಾಯಕತ್ವ ವನ್ನು ಪಡೆದನು.

೧೩೩ ಅಲ್ಲಿ ಸುವರ್ಣಮಾನಸವೆಂಬ ಮನೋಹರವಾದ ಉತ್ತಮನದಿ ಇರು ವುದು. ತಪಸ್ಸನ್ನಾಚರಿಸುತ್ತಿದ್ದ ನಂದಿಯ ಮೇಲಿನ ಅನುಗ್ರಹಕ್ಕಾಗಿ ಶಂಕರನ ಆಜ್ಞೆ ಯಿಂದ ಸಾಕ್ಷಾನ್ಮಾನಸಸರೋವರವೇ ಅಲ್ಲಿಗೆ ಬಂದು ಆ ನದಿಯರೂಪದಿಂದ ಅಲ್ಲಿ ಹರಿಯುತ್ತಿರುವುದು.

೧೩೪-೧೩೬. ಮತ್ತು ಅಲ್ಲಿ ಹಿಮವತ್ಪರ್ವತದಿಂದ ಹುಟ್ಟಿದ "ಜಟೋದ್ಭವಾ" ಎಂಬ ಶುಭವಾದ ನದಿಯು ಇರುವುದು. ಅಲ್ಲಿ ಸ್ನಾನಮಾಡಿದರೆ ನರನು ಗಂಗೆಯಲ್ಲಿ ಸ್ನಾನಮಾಡಿದ ಪುಣ್ಯವನ್ನು ಪಡೆಯುವನು ಗೌರೀಶಂಕರರವಿವಾಹಕಾಲದಲ್ಲಿ ಬ್ರಾಹ್ಮೀಯೇ ಮೊದಲಾದ ಮಾತೃದೇವತೆಯರು ಆ ದಂಪತಿಗಳ ಶಿರಸ್ಸುಗಳಲ್ಲಿ ಆಶೀರ್ವಾದಪುರಸ್ಸರವಾಗಿ ಅಭಿಷೇಕಜಲವನ್ನೆರಚಿದರು. ಶಂಕರನ ಜಟೆಯಲ್ಲಿ ಬಿದ್ದ ಜಲಗಳಿಂದ ಈ ನದಿಯು ಜನಿಸಿತು. ಆದಕಾರಣ ಇದಕ್ಕೆ ಜಟೋದಾ ಅಥವಾ ಜಟೋದ್ಭವಾ ಎಂದು ಹೆಸರು. ಚೈತ್ರಶುಕ್ಲ ಅಷ್ಟಮಿಯಲ್ಲಿ ಆ ಜಟೋದ್ಭವಾನದಿ

ಚೈತ್ರೇ ಮಾಸಿ ಸಿತಾಷ್ಟಮ್ಯಾಂ ಸ್ನಾತ್ವಾ ಯಸ್ಯಾಂ ನರೋತ್ತಮಃ ।
ಪೂರ್ಣಾಯುರ್ವೈ ನರಶ್ರೇಷ್ಠ ಶಿವಸ್ಯ ಸದನಂ ಪ್ರತಿ ॥ ೧೩೭ ॥

ದ್ವಾಪಾರಸ್ಯ ತು ಯಾ ಗಂಗಾ ತ್ರಿಸ್ರೋತಾಖ್ಯಾ ಸರಿದ್ವರಾ ।
ಹಿಮವತ್ಪ್ರಭವಾ ಶುದ್ಧಚಂದ್ರಬಿಂಬಾದ್ವಿನಿರ್ಗತಾ ॥ ೧೩೮ ॥

ಯಸ್ಯಾಂ ಸ್ನಾತ್ವಾ ಮಹಾಮಾಘ್ಯಾಂ ಮಾತೃಯೋನೌ ನ ಜಾಯತೇ ।
ಚಂದ್ರಸೂರ್ಯಗ್ರಹೇ ಸ್ನಾತ್ವಾ ಕೈವಲ್ಯಂ ಪ್ರಾಪ್ನುಯಾನ್ನರಃ ॥ ೧೩೯ ॥

ಸಿತಪ್ರಭಾ ನಾಮ ನದೀ ಮಹಾದೇವಾವತಾರಿತಾ ।
ಹಿಮವತ್ಪ್ರಭವಾ ಸಾಪಿ ಸಿತಾ ದಕ್ಷಸಮುದ್ರಗಾ ॥ ೧೪೦ ॥

ತಸ್ಯಾಂ ದಶಹರಾಯಾಂ ತು ದಶಮ್ಯಾಂ ಶುಕ್ಲಪಕ್ಷಕೇ ।
ಸ್ನಾತ್ವಾ ವಿಷ್ಣುಗೃಹೆ ಯಾತಿ ನರೋ ವೈ ಮುಕ್ತಪಾತಕಃ ॥ ೧೪೧ ॥

ಯಲ್ಲಿ ಸ್ನಾನಮಾಡಿದ ಮನುಷ್ಯನು ಈ ಲೋಕದಲ್ಲಿ ಪೂರ್ಣಾಯುಸ್ಸ್ಸಂಪನ್ನನಾಗಿ, ಮೃತನಾದನಂತರ ಶಿವಲೋಕವನ್ನು ಪಡೆಯುವನು.

೧೩೭-೧೩೯. ಮೊದಲು ಶುದ್ಧಚಂದ್ರಮಂಡಲದಿಂದ ಹೊರಹೊರಟು ಹಿಮವತ್ಪರ್ವತದಲ್ಲಿ ಸೇರಿ ಹರಿಯುತ್ತಿರುವ ಶ್ರೇಷ್ಠನದಿಯಾದ ತ್ರಿಸ್ರೋತಾ ಎಂಬ ದ್ವಾಪಾರ ಗಂಗೆಯೂ ಆ ಪೀಠದಲ್ಲಿರುವುದು. ಆ ನದಿಯಲ್ಲಿ ಮಾಘಮಾಸದಲ್ಲಿ ಸ್ನಾನಮಾಡಿದವನು ತಿರುಗಿ ಮಾತೃಯೋನಿಯಲ್ಲಿ ಜನಿಸುವುದಿಲ್ಲ. ಎಂದರೆ ಅವನಿಗೆ ಪುನರ್ಜನ್ಮವಿಲ್ಲ. ಚಂದ್ರಸೂರ್ಯರ ಗ್ರಹಣಕಾಲದಲ್ಲಿ ಸ್ನಾನಮಾಡಿದ ನರನು ಮುಕ್ತಿಯನ್ನು ಪಡೆಯುವನು.

೧೪೦-೧೪೧. ಅಲ್ಲಿ ಸಿತಪ್ರಭಾ ಎಂಬ ಮತ್ತೊಂದು ನದಿ ಇರುವುದು. ಅದನ್ನು ಶಂಕರನು ಹಿಮಾಲಯದಿಂದ ಹರಿಸಿ ನಿರ್ಮಿಸಿರುವನು. ಅದು ಶುಭ್ರವಾಗಿದ್ದು ದಕ್ಷಿಣ ಸಮುದ್ರವನ್ನು ಸೇರುವುದು. ಪಾಪನಾಶಕರವಾದ ಆ ನದಿಯಲ್ಲಿ ಶುಕ್ಲಪಕ್ಷದ ದಶಮಿಯಲ್ಲಿ ಸ್ನಾನಮಾಡಿದ ನರನು, ಪಾಪರಹಿತನಾಗಿ ವಿಷ್ಣುಲೋಕವನ್ನು ಪಡೆಯುವನು.

ನವತೋಯಾ ನಾಮ ನದೀ ತತಃ ಪೂರ್ವಸ್ಥಿತಾ ಪರಾ ।
ನವಂ ನವಂ ನವಂ ನಿತ್ಯಂ ಕುರ್ವಂತೀ ಸಾ ಪುನಾತಿ ಹಿ ॥ ೧೪೨ ॥

ನವತೋಯಾ ತತಃ ಪ್ರೋಕ್ತಾ ಹಿಮವತ್ಪ್ರಭವೈವ ಸಾ ।
ತಸ್ಯಾಂ ಸ್ನಾತ್ವಾ ಮಹಾಮಾಘ್ಯಾಂ ನರೋ ಗಚ್ಛತಿ ದೇವತಾಂ ॥ ೧೪೩ ॥

ಸಂಪೂರ್ಣಂ ಮಾಘಮಾಸಂ ತು ಸ್ನಾತ್ವಾ ವಿಷ್ಣುಗೃಹಂ ವ್ರಜೇತ್ ।
ತಾಸಾಂ ನದೀನಾಂ ತು ಪತಿರಗದೋ ನಾಮ ವೈ ನದಃ ॥ ೧೪೪ ॥

ಪೀಠಪೂರ್ವೇ ಸ್ಥಿತಃ ಪುಣ್ಯೋ ಬ್ರಹ್ಮಪಾದಸಮುದ್ಭವಃ ।
ಹಿಮವತ್ಪ್ರಭವಃ ಸೋಽಪಿ ದೇವಗಂಧರ್ವಸೇವಿತಃ ॥ ೧೪೫ ॥

ತತ್ರ ಸ್ನಾತ್ವಾ ಚ ಪೀತ್ವಾ ಚ ನರೋ ಬ್ರಹ್ಮಗೃಹಂ ವ್ರಜೇತ್ ।
ಕಾರ್ತಿಕಂ ಸಕಲಂ ಮಾಸಂ ಯೋಽಗದಾಖ್ಯೇ ಮಹಾನದೇ ॥ ೧೪೬ ॥

ಸ್ನಾನಂ ಕರೋತಿ ಮನುಜಸ್ತಸ್ಯ ಪುಣ್ಯಫಲಂ ಶೃಣು ।
ಇಹಲೋಕೇ ತ್ವರೋಗಃ ಸ ಪ್ರಾಪ್ಯ ಚೈವೋತ್ತಮಂ ಸುಖಂ ॥ ೧೪೭ ॥

೧೪೨-೧೪೩. ಆ ನದಿಗೆ ಪೂರ್ವದಲ್ಲಿ ನವತೋಯಾ ಎಂಬ ನದಿಯು ಇರುವುದು. ಆ ನದಿಯು ನಿತ್ಯವೂ ಹೊಸಹೊಸದಾಗಿ ಜಲವನ್ನುದ್ಗಮಿಸಿ ಜನಗಳನ್ನು ಪಾವನಮಾಡುವುದರಿಂದ ಆ ನದಿಗೆ ನವತೋಯಾ ಎಂಬ ಹೆಸರು ಬಂದಿರುವುದು. ಅದೂ ಹಿಮಾಲಯದಲ್ಲಿಯೇ ಜನಿಸುವುದು. ಆ ನದಿಯಲ್ಲಿ ಮಾಘಮಾಸದಲ್ಲಿ ಸ್ನಾನ ಮಾಡಿದವನು ದೇವತ್ವವನ್ನು ಪಡೆಯುವನು. ಮಾಘಮಾಸವೆಲ್ಲಾ ಪೂರ್ಣವಾಗಿ ಸ್ನಾನಮಾಡಿದವನು ವಿಷ್ಣುಲೋಕವನ್ನು ಪಡೆಯುವನು.

೧೪೪-೧೪೬. ಈ ಎಲ್ಲಾ ನದಿಗಳಿಗೆ ಪತಿಯಾದ ಅಗದವೆಂಬ ನದವು ಕಾಮರೂಪಪೀಠದ ಪೂರ್ವದಲ್ಲಿ ಹರಿಯುತ್ತಿರುವುದು. ಪವಿತ್ರವಾದ ಆ ನದಿಯು ಬ್ರಹ್ಮನ ಪಾದದಿಂದ ಜನಿಸಿ ಹಿಮವತ್ಪರ್ವತದಲ್ಲಿ ಹರಿಯುತ್ತಿರುವುದು. ದೇವತೆಗಳು ಮತ್ತು ಗಂಧರ್ವರು ಇದನ್ನು ಸರ್ವದಾ ಸೇವಿಸುತ್ತಿರುವರು. ಆ ನದಿಯಲ್ಲಿ ಸ್ನಾನಪಾನಗಳನ್ನು ಮಾಡಿದವನು ಬ್ರಹ್ಮಲೋಕವನ್ನು ಪಡೆಯುವನು. ಕಾರ್ತಿಕಮಾಸವೆಲ್ಲ ಪೂರ್ತಿಯಾಗಿ ಯಾವನು ಅಗದಮಹಾನದಿಯಲ್ಲಿ ಸ್ನಾನಮಾಡುವನೋ ಅವನ ಪುಣ್ಯ ಫಲವನ್ನು ಹೇಳುವೆನು, ಕೇಳು. ಈ ಲೋಕದಲ್ಲಿ ನೀರೋಗಿಯಾಗಿದ್ದು ಸುಖವನ್ನ

ಶೇಷೇ ಬ್ರಹ್ಮಗೃಹಂ ಪ್ರಾಪ್ಯ ತತೋ ಮೋಕ್ಷಮವಾಪ್ನುಯಾತ್ ।
ನಂದಿಕುಂಡೇ ನರಃ ಸ್ನಾತ್ವಾ ನಕ್ತಂ ಕುರ್ಯಾತ್ತದಾ ನಿಶಿ ॥ ೧೪೮ ॥

ತತಃ ಪರಸ್ಮಿನ್ದಿವಸೇ ಗಚ್ಛೇಜ್ಜಲ್ಪೀಶಮಂದಿರಂ ।
ತತ್ರ ಸ್ನಾತ್ವಾ ಮಹಾನದ್ಯಾಂ ಜಲ್ಪೀಶಂ ಪ್ರತಿಪೂಜ್ಯ ಚ ॥ ೧೪೯ ॥

ತಸ್ಯಾಂ ನಿಶಿ ಹವಿಷ್ಯಾಶೀ ಸಂಯತಸ್ತಾಂ ನಿಶಾಂ ನಯೇತ್ ।
ತತೋಽನು ದಿವಸೇ ಪ್ರಾಪ್ತೇ ಗಚ್ಛೇತ್ಸಿದ್ಧೇಶ್ವರೀಂ ಶಿವಾಂ ॥ ೧೫೦ ॥

ತಾಂ ಪೂಜಯೇತ್ತಥಾಷ್ಟಮ್ಯಾಮುಪವಾಸಂ ತಥಾ ಚರೇತ್ ।
ಚತುರ್ಭುಜಾ ತು ಸಾ ದೇವೀ ಪೀನೋನ್ನತಪಯೋಧರಾ ॥ ೧೫೧ ॥

ಸಿಂದೂರಪುಂಜಸಂಕಾಶಾ ಧತ್ತೇ ಕರ್ತ್ರೀಂ ಚ ಖರ್ಪರಂ ।
ದಕ್ಷಿಣೇ ವಾಮಬಾಹುಭ್ಯಾಮಭೀತಿವರದಾಯಿನೀ ॥ ೧೫೨ ॥

ಜಟಾಮಂಡಿತಶೀರ್ಷಾ ಚ ರಕ್ತಪದ್ಮೋಪರಿ ಸ್ಥಿತಾ ।
ಪಂಚಾಕ್ಷರಜಪಾಂತಾದಿರ್ಮಂತ್ರೋಽಸ್ಯಾಃ ಪರಿಕೀರ್ತಿತಃ ॥ ೧೫೩ ॥

ನುಭವಿಸಿ, ಪರವಲ್ಲಿ ಬ್ರಹ್ಮಲೋಕವನ್ನು ಪಡೆದು, ಮುಂದೆ ಮೋಕ್ಷವನ್ನು ಪಡೆಯುವನು.

೧೪೮-೧೫೦. ನಂದಿಕುಂಡವಲ್ಲಿ ಅರ್ಧರಾತ್ರಿಯಲ್ಲಿ ಸ್ನಾನಮಾಡಿ ಮರುದಿವಸ ಜಲ್ಪೀಶನ ದೇವಾಲಯಕ್ಕೆ ಹೋಗಬೇಕು. ಅಲ್ಲಿರುವ ಮಹಾನದಿಯಲ್ಲಿ ಸ್ನಾನಮಾಡಿ ಜಲ್ಪೀಶನನ್ನು ಪೂಜಿಸಿ ಆ ರಾತ್ರಿಯಲ್ಲಿ ಕೇವಲ ಹವಿಸ್ಸನ್ನು ಮಾತ್ರ ಸೇವಿಸಿ, ಜಿತೇಂದ್ರಿಯನಾಗಿ ಆ ರಾತ್ರಿಯನ್ನು ಕಳೆದು, ಪ್ರಾತಃಕಾಲದಲ್ಲಿ ಮಂಗಳರೂಪಿಣಿಯಾದ ಸಿದ್ಧೇಶ್ವರಿಯ ದೇವಾಲಯಕ್ಕೆ ಹೋಗಿ ಆದಿವಸದಲ್ಲಾಗಲಿ, ಅಷ್ಟಮಿಯಲ್ಲಾಗಲಿ ಆ ದೇವಿಯನ್ನು ಪೂಜಿಸಬೇಕು. ಆದಿವಸವೆಲ್ಲಾ ಉಪವಾಸವಿರಬೇಕು

೧೫೧-೧೫೫. ಆ ದೇವಿಗೆ ನಾಲ್ಕು ಭುಜಗಳಿರುವುವು. ದುಂಡಾಗಿ ಉಬ್ಬಿರುವ ಸ್ತನಗಳಿರುವುವು. ಸಿಂಧೂರದಂತೆ ಕೆಂಪಾದ ಶರೀರಕಾಂತಿಯಿಂದ ಬೆಳಗುತ್ತಿರುವಳು. ಕತ್ತಿ, ಖರ್ಪರ, ಅಭಯ, ವರದ ಇವುಗಳನ್ನು ತನ್ನ ಹಸ್ತಗಳಲ್ಲಿ ಧರಿಸಿರುವಳು. ಶಿರಸಿನಲ್ಲಿ ಜಟೆಗಳನ್ನು ಧರಿಸಿ, ರಕ್ತಕಮಲದಲ್ಲಿ ಕುಳಿತಿರುವಳು. ಪಂಚಾಕ್ಷರೀಮಂತ್ರವೇ

ಕಾಮಾಖ್ಯಾತಂತ್ರಮೇವಾಸ್ಯಾಃ ಪೂಜನೇ ತಂತ್ರಮೀರಿತಂ ।
ಏವಂ ಕೃತ್ವಾ ನರೋ ಧೀರಃ ಪುನರ್ಯೋನೌ ನ ಜಾಯತೇ ॥ ೧೫೪ ॥

ಜಾಮದಗ್ನ್ಯಭಯಾದ್ಭೀತಾಃ ಕ್ಷತ್ರಿಯಾಃ ಪೂರ್ವಮೇವ ಯೇ ।
ಮ್ಲೇಚ್ಛಚ್ಛದ್ಮಾನ್ಯುಪಾದಾಯ ಜಲ್ಪೀಶಂ ಶರಣಂ ಗತಾಃ ॥ ೧೫೫ ॥

ತೇ ಮ್ಲೇಚ್ಛವಾಚಃ ಸತತಮಾರ್ಯವಾಚಶ್ಚ ಸರ್ವದಾ ।
ಜಲ್ಪೀಶಂ ಸೇವಮಾನಾಸ್ತೇ ಸೋಪಾಯಂತಿ ಚ ತಂ ಹರಂ ॥ ೧೫೬ ॥

ತ ಏವತು ಗಣಾಸ್ತಸ್ಯ ಮಹಾರಾಜ ಮನೋಹರಾಃ ।
ತೋಷಯಿತ್ವಾ ತಥಾ ಸರ್ವಾ ಜಲ್ಪೀಶಂ ಪೂಜಯೇನ್ನರಃ ॥ ೧೫೭ ॥

ವರದಾಭಯಹಸ್ತೋಽಯಂ ದ್ವಿಭುಜಃ ಕುಂದಸನ್ನಿಭಃ ।
ತತ್ಪುರುಷಸ್ಯ ತು ಮಂತ್ರೇಣ ಪೂಜಯೇದ್ದೇವಮುತ್ತಮಂ ॥ ೧೫೮ ॥

ಈ ಸಿದ್ಧೇಶ್ವರೀದೇವಿಯ ಜಪಮಂತ್ರವು. ಕಾಮಾಖ್ಯಾತಂತ್ರವೇ ಈ ದೇವಿಯ ಪೂಜಾತಂತ್ರವು. ಆ ಕ್ರಮದಿಂದಲೇ ಪೂಜಿಸಬೇಕು. ಹೀಗೆ ಈ ದೇವಿಯನ್ನು ಪೂಜಿಸಿದ ನರಶ್ರೇಷ್ಠನಿಗೆ ಪುನರ್ಜನ್ಮವೆಂಬುದೇ ಇಲ್ಲ.

೧೫೫-೧೫೭. ಹಿಂದೆ ಪರಶುರಾಮನ ಭಯದಿಂದ ಕೆಲವರು ಕ್ಷತ್ರಿಯರು ಮ್ಲೇಂಚ್ಛರ ವೇಷವನ್ನು ಧರಿಸಿ, ಇಲ್ಲರುವ ಜಲ್ಪೀಶನನ್ನು ಮರೆಹೊಕ್ಕರು. ಅವರು ಮ್ಲೇಂಚ್ಛವಾಕ್ಕಿನಿಂದಲೂ, ಆರ್ಯವಾಕ್ಕಿನಿಂದಲೂ ಜಲ್ಪೀಶನನ್ನು ಸೇವಿಸುತ್ತಾ ಶಂಕರ ರೂಪಿಯಾದ ಅವನನ್ನು ಸದಾ ರಕ್ಷಿಸುತ್ತಲಿರುವರು. ಆ ಮ್ಲೇಂಚ್ಛರೇ ಜಲ್ಪೀಶನ ಮನೋಹರವಾದ ಗಣಗಳು. ಎಲೈ ಮಹಾರಾಜನೇ, ಆ ಗಣಗಳನ್ನೆಲ್ಲಾ ಸಂತೋಷಗೊಳಿಸಿ ಜಲ್ಪೀಶನನ್ನು ಪೂಜಿಸಬೇಕು.

೧೫೮. ಆ ಜಲ್ಪೀಶದೇವನು ಎರಡು ಭುಜಗಳುಳ್ಳವನು, ವರದ ಮತ್ತು ಅಭಯಮುದ್ರೆಗಳನ್ನು ಧರಿಸಿರುವನು. ಕುಂದಪುಷ್ಪದಂತೆ ಶುಭ್ರವಾದ ಶರೀರ ಕಾಂತಿಯಿಂದ ಪ್ರಕಾಶಿಸುತ್ತಿರುವನು. ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ। ತನ್ನೋರುದ್ರಃ ಪ್ರಚೋದಯಾತ್ ॥ ಎಂಬ ತತ್ಪುರುಷ ಮಂತ್ರವಿಂದ ಈ ದೇವನನ್ನು ಪೂಜಿಸಬೇಕು.

ಏವಂ ಪುಣ್ಯಕರಃ ಪೀಠೋ ಜಲ್ಪೀಶಸ್ಯ ಮಹಾತ್ಮನಃ ।
ಏವಂ ಜ್ಞಾತ್ವಾ ನರೋ ಯಾತಿ ಶಂಕರಸ್ಯ ಪುರಂ ಪ್ರತಿ ॥ ೧೫೯ ॥

॥ ಇತಿಶ್ರೀಕಾಲಿಕಾಪುರಾಣೇ ಅಶೀತಿತಮೋಧ್ಯಾಯಃ ॥

---

೧೫೯. ಮಹಾತ್ಮನಾದ ಜಲ್ಪೀಶನ ಪೀಠವು ತುಂಬ ಪುಣ್ಯಪ್ರದವಾದುದು. ಈರೀತಿಯಾಗಿ ನಾನು ಹೇಳಿದ ವಿವರಣೆಗಳನ್ನು ತಿಳಿದ ಮನುಜನು ಶಂಕರನ ಲೋಕಕ್ಕೆ ತೆರಳುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಏಕಾತ್ರಿಂಶತಿತಮೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ಏತಚ್ಛ್ರುತ್ವಾ ತು ಸಂವಾದಮುತ್ತಮಂ ಶಂಕರಸ್ಯ ಚ ।
ಭೈರವಸ್ಯ ತು ವೇತಾಲಸಹಿತಸ್ಯ ಮಹಾತ್ಮನಃ ॥ ೧ ॥
ಭೂಯಶ್ಚ ಸಗರೋ ರಾಜಾ ಮುನಿಮೌರ್ವಂ ಮಹಾಮತಿಂ ।
ಪಪ್ರಚ್ಛ ಮೋದಸಂಹೃಷ್ಟಃ ಸೂನೃತಂ ಚೇದಮುತ್ತಮಂ ॥ ೨ ॥

॥ ಸಗರ ಉವಾಚ ॥

ವಿಚಿತ್ರಮಿದಮಾಖ್ಯಾತಂ ಭಗವಾ ಮುನಿಸತ್ತಮ ।
ಕಾಮರೂಪಸ್ಯ ಪೀಠಸ್ಯ ಸಂಸ್ಥಾನಂ ನಿರ್ಣಯಂ ತಥಾ ॥ ೩ ॥
ಭೂಯಶ್ಚ ಶ್ರೋತುಮಿಚ್ಛಾಮಿ ವಿಸ್ತರೇಣ ಮಹಾಮತೇ ।
ವಾಯವ್ಯಸ್ಯಾಥ ಮಧ್ಯಸ್ಯ ಪೂರ್ವಭಾಗಸ್ಯ ನಿರ್ಣಯಂ ॥ ೪ ॥
ಯಥಾ ಯಸ್ಮಿನ್ನಿಷ್ಠಿಕೋಽಸ್ತಿ ಮಹಾದೇವೋಽಂಬಿಕಾ ತಥಾ ।
ತತ್ಸರ್ವಂ ಮುನಿಶಾರ್ದೂಲ ಕಥಯ ಶ್ರೋತುಮುತ್ಸಹೇ ॥ ೫ ॥

॥ ಎಂಭತ್ತೊಂದನೆಯ ಅಧ್ಯಾಯವು ॥

೧-೨. ಮಾರ್ಕಂಡೇಯ ಮುನಿಯುಹೇಳಿದನು:— ಮಹಾತ್ಮರಾದ ಶಂಕರ ಮತ್ತು ವೇತಾಲ ಭೈರವರ ಈ ಉತ್ತಮವಾದ ಸಂವಾದವನ್ನು ಕೇಳಿ ಸಗರರಾಜನು ಸಂತೋಷಗೊಂಡು, ಮಹಾಬುದ್ಧಿಶಾಲಿಯಾದ ಔರ್ವಮುನಿಯನ್ನು ತಿರುಗಿ ಪ್ರಶ್ನೆ ಮಾಡಿದನು.

೩-೫. ಸಗರರಾಜನು ಹೇಳಿದನು:— ಪೂಜ್ಯನಾದ ಓ ಮುನಿಶ್ರೇಷ್ಠನೇ, ನೀನು ಹೇಳಿದ ಈ ಕಾಮರೂಪಪೀಠದ ಸಂಸ್ಥಾನ, ನಿರ್ಣಯ ಇವುಗಳ ವಿವರಣೆಯು ತುಂಬಾ ಆಶ್ಚರ್ಯವಾಗಿರುವುದು. ಆ ಪೀಠದ ವಾಯವ್ಯಭಾಗ, ಮಧ್ಯಭಾಗ,

॥ ಔರ್ವ ಉವಾಚ ॥

ಉಕ್ತೋ ವಾಯವ್ಯಭಾಗಸ್ಯ ನಿರ್ಣಯೋ ನೃಪಸತ್ತಮ ।
ನೈಋರ್ತ್ಯೋತ್ತರಮಧ್ಯಾದ್ರೇಃ ಶೃಣ್ವಿದಾನೀಂ ವಿನಿರ್ಣಯಂ ॥ ೬ ॥

ಬಹುಶೋಕಾ ನಾಮ ನದೀ ಕರತೋಯಾಪ್ರದಕ್ಷಿಣೇ ।
ಉತ್ತರಶ್ರಾವಣೀ ಚಾಸ್ತೇ ತತ್ಪೂರ್ವಂ ಕಾಮರೂಪಕಂ ॥ ೭ ॥

ಸುರಸೋ ನಾಮ ಜೀಮೂತಃ ಕಾಮರೂಪಂ ತತಃ ಸ್ಥಿತಃ ।
ನಿಸೃತಾ ಬಹುಶೋಕೇತಿ ನದೀ ತಸ್ಮಾದ್ವೃಷಪ್ರದಾ ॥ ೮ ॥

ಆಸನ್ನೇ ಸುರಸಾಖ್ಯಸ್ಯ ಶಿವಲಿಂಗೋ ಮಹಾವೃಷಃ ।
ಮಾಹೇಶ್ವರೀ ತತ್ರ ದೇವೀ ಯೋನಿಮಂಡಲರೂಪಿಣೀ ॥ ೯ ॥

ಪೂರ್ವಭಾಗ ಇವುಗಳ ನಿರ್ಣಯವನ್ನು ವಿಸ್ತಾರವಾಗಿ ಕೇಳಲಿಚ್ಛಿಸುವೆನು. ಆ ಭಾಗಗಳಲ್ಲಿ ಮಹಾದೇವ ಮತ್ತು ಅಂಬಿಕೆಯರು ಎಲ್ಲೆಲ್ಲಿ ಪ್ರತಿಷ್ಠಿತರಾಗಿರುವರು? ಇದೆಲ್ಲವನ್ನೂ ನಾನುಕೇಳಬೇಕೆಂಬ ಅಪೇಕ್ಷೆ ಇರುವುದರಿಂದ ದಯವಿಟ್ಟು ವಿಸ್ತಾರವಾಗಿ ಹೇಳು

೬. ಔರ್ವಮುನಿಯು ಹೇಳಿದನು:—ಎಲೈ ನೃಪೋತ್ತಮನೇ, ವಾಯವ್ಯ ಭಾಗದ ನಿರ್ಣಯವನ್ನು ಹಿಂದೆಯೇ ಹೇಳಿರುವೆನು. ಈಗ ನೈಋತ್ಯ, ಉತ್ತರ ಮತ್ತು ಮಧ್ಯಭಾಗಗಳ ನಿರ್ಣಯವನ್ನು ಹೇಳುವೆನು, ಕೇಳು.

೭. ಬಹುಶೋಕಾ ಎಂಬುದೊಂದು ನದಿಯೂ, ಉತ್ತರ ಶ್ರಾವಣೀ ಎಂಬ ನದಿಯೂ ಕರತೋಯಾನದಿಯ ದಕ್ಷಿಣದಲ್ಲಿರುವವು. ಅದಕ್ಕೆ ಪೂರ್ವದಲ್ಲಿ ಕಾಮರೂಪ ಪೀಠವಿರುವುದು.

೮. ಸುರಸವೆಂಬ ಪರ್ವತವು ಕಾಮರೂಪದೇಶದ ಕೊನೆಯಲ್ಲಿರುವುದು. ಅದರಿಂದ ಬಹುಶೋಕಾ ಎಂಬ ಧರ್ಮಪ್ರದವಾದ ನದಿಯು ಹೊರಟು ಪರಿಯುಕ್ತಿರುವುದು.

೯. ಸುರಸಪರ್ವತದ ಸಮೀಪದಲ್ಲಿ ಮಹಾವೃಷವೆಂಬ ಶಿವಲಿಂಗವಿರುವುದು, ಅಲ್ಲಿ ಮಾಹೇಶ್ವರೀದೇವಿಯು ಯೋನಿಮಂಡಲದ ರೂಪದಿಂದಿರುವಳು.

ಸ್ನಾತ್ವಾ ತು ಬಹುರೋಕಾಯಾಮಾರುಹ್ಯ ಸುರಸಾಚಲಂ ।
ಮಹಾವೃಷಂ ಪೂಜಯಿತ್ವಾ ಮಹಾದೇವೀಂ ಮಹೇಶ್ವರೀಂ ॥ ೧೦ ॥

ಧೂತಪಾಪೋಽಜಿತದ್ವಂದ್ವಃ ಪುನರ್ಯೋನೌ ನ ಜಾಯತೇ ।
ಚತುರ್ಭುಜೋ ವೃಷಾರೂಢೋ ವರಧಾಭಯಶೂಲಧೃಕ್ ॥ ೧೧ ॥

ಶುದ್ಧಸ್ಫಟಿಕಸಂಕಾಶೋ ಜಟಾವಾನ್ ಸ ಮಹಾವೃಷಃ ।
ಅಘೋರಸ್ಯ ತು ಮಂತ್ರೇಣ ಪೂಜಾಸ್ಯ ಪರಿಕೀರ್ತಿತಾ ॥ ೧೨ ॥

ಕಾಮೇಶ್ವರ್ಯಾಃ ಸ್ವರೂಪಂ ತು ಮಾಹೇಶ್ವರ್ಯಾಃ ಪ್ರಕೀರ್ತಿತಂ ।
ಪೂಜಾಪಿ ಯದ್ವದೇವಾಸ್ಯಾಸ್ತದ್ವತ್ಫಲಪ್ರದಾಯಿಕಾ ॥ ೧೩ ॥

ತತ್ರ ವಸಿಷ್ಠಕುಂಡಂ ತು ವಸಿಷ್ಠಮುನಿಸೇವಿತಂ ।
ಯತ್ರ ಸ್ಥಿತೋ ವಸಿಷ್ಠಸ್ತು ನರಕೇಣ ನಿವಾರಿತಃ ॥ ೧೪ ॥

---

೧೦. ಬಹುರೋಕಾನದಿಯಲ್ಲಿ ಸ್ನಾನಮಾಡಿ ಸುರಸಾದ್ರಿಯನ್ನೇರಿ, ಅಲ್ಲಿರುವ ಮಹಾವೃಷದೇವನನ್ನೂ, ಮಹಾದೇವಿಯಾದ ಮಹೇಶ್ವರಿಯನ್ನೂ ಪೂಜಿಸಿದವನು ಪಾಪರಹಿತನಾಗಿ ಶೀತೋಷ್ಣ, ಸುಖದುಃಖ ಮೊದಲಾದ ದ್ವಂದ್ವಗಳನ್ನು ಜಯಿಸಿ ಮುಕ್ತಿಯನ್ನು ಪಡೆಯುವನು.

೧೧-೧೨. ಆ ಮಹಾವೃಷದೇವನು ಶುದ್ಧವಾದ ಸ್ಫಟಿಕದಂತೆ ಸ್ವಚ್ಛವಾದ ಶರೀರಕಾಂತಿಯಿಂದಲೂ, ಶಿರಸ್ಸಿನಲ್ಲಿ ಒಪ್ಪುವ ಜಟೆಗಳಿಂದಲೂ ಶೋಭಿಸುತ್ತಾ ವೃಷಭಾರೂಢನಾಗಿರುವನು. ಅವನಿಗೆ ನಾಲ್ಕು ಭುಜಗಳಿರುವುವು. ಅವುಗಳಲ್ಲಿ ವರದ, ಅಭಯ, ಶೂಲ, ಇವುಗಳನ್ನು ಧರಿಸಿ ಪ್ರಕಾಶಿಸುತ್ತಿರುವನು. ಈರೀತಿ ಇರುವ ಮಹಾ ವೃಷದೇವನನ್ನು ಅಘೋರೇಭ್ಯೋ ಎಂಬ ವೇದಮಂತ್ರದಿಂದ ಪೂಜಿಸಬೇಕು.

೧೩. ಕಾಮೇಶ್ವರಿಯ ಸ್ವರೂಪವೇ ಮಹೇಶ್ವರಿಯ ಸ್ವರೂಪವು. ಪೂಜೆಯನ್ನೂ ಕಾಮೇಶ್ವರಿಯ ಪೂಜೆಯಂತೆ ಮಾಡತಕ್ಕದ್ದು. ಕಾಮೇಶ್ವರೀದೇವಿಯಂತೆಯೇ ಈ ಮಾಹೇಶ್ವರಿಯೂ ಫಲವನ್ನು ನೀಡುವಳು.

೧೪-೧೫. ಅಲ್ಲಿ ವಸಿಷ್ಠಮುನಿಯಿಂದ ಸೇವಿಸಲ್ಪಡುವ ವಸಿಷ್ಠಕುಂಡವೆಂಬ ಒಂದು ಕೊಳವಿರುವುದು. ಹಿಂದೆ, ಇಂದ್ರನೇ ಮೊದಲಾದ ದೇವತೆಗಳಿಂದ

ಅಪ್ರಾಪ್ಯ ಗಂತುಂ ಜೀಮೂತಂ ನೀಲಾಖ್ಯಂ ವಾಸವಸ್ತುತಂ ।
ಸ್ವಸ್ನಾನಾರ್ಥಂ ಕೃತಂ ತತ್ರ ಕುಂಡಂ ದೇವಗಣಾರ್ಚಿತಂ ॥ ೧೫ ॥

ತತ್ರ ಸ್ನಾತ್ವಾ ನರೋ ಯಾತಿ ನಾಕಪೃಷ್ಠಂ ಯಥೇಚ್ಛಯಾ ।
ಸುರಸಸ್ಯ ಚ ಪೂರ್ವಸ್ಯಾಂ ಕೃತ್ತಿವಾಸಾಹ್ವಯೋ ಗಿರಿಃ ॥ ೧೬ ॥

ಕೃತ್ತಿವಾಸಾಃ ಸ್ವಯಂ ತತ್ರ ಸತ್ಯಾ ಸಹಾವಸತ್ಪುರಾ ।
ಚಂದ್ರಿಕಾಖ್ಯಾ ನದೀ ಯತ್ರ ತಸ್ಯಾಂ ಸ್ನಾತ್ವಾ ದಿವಂ ವ್ರಜೇತ್ ॥ ೧೭ ॥

ಚಂದ್ರಿಕಾಯಾಂ ನರಃ ಸ್ನಾತ್ವಾ ಸಂಪೂಜ್ಯ ಕೃತ್ತಿವಾಸಸಂ ।
ಭಾದ್ರಶುಕ್ಲಚತುರ್ಥ್ಯಾಂ ತು ನಿಷ್ಕಲಂಕೋ ಭವೇನ್ನರಃ ॥ ೧೮ ॥

ಪೂರ್ಣಭಾದ್ರಪದಂ ಮಾಸಂ ಚಂದ್ರಿಕಾಯಾಂ ನರೋತ್ತಮಃ ।
ಸ್ನಾತ್ವಾ ಗಚ್ಛತಿ ಭೂತೇಶಂ ದೃಷ್ಟ್ವೈವ ಕೃತ್ತಿವಾಸಸಂ ॥ ೧೯ ॥

ಸ್ತುತಿಸಲ್ಪಡುವ ನೀಲಾಚಲಪರ್ವತಕ್ಕೆ ಹೋಗಬೇಕೆಂದು ಹೊರಟ ವಸಿಷ್ಠಮುನಿಯನ್ನು, ನರಕಾಸುರನು ಅಲ್ಲಿಗೆ ಹೋಗದಂತೆ ತಡೆಯಲು, ಆಗ ವಸಿಷ್ಠನು ತನ್ನ ಸ್ನಾನಾದ್ಯನುಷ್ಠಾನಗಳಿಗಾಗಿ ಈ ಕುಂಡವನ್ನು ನಿರ್ಮಿಸಿದನು. ದೇವತೆಗಳೂ ಸಹ ಈ ಕುಂಡವನ್ನು ಭಕ್ತಿಯಿಂದ ಪೂಜಿಸುವರು. ಇಂತಹ ಮಹಿಮೆಯುಳ್ಳ ಕುಂಡದಲ್ಲಿ ಸ್ನಾನಮಾಡಿದ ಮನುಜನು ಸ್ವರ್ಗಲೋಕಕ್ಕೆ ತೆರಳುವನು.

೧೬. ಸುರಸಾಚಲದ ಪೂರ್ವದಲ್ಲಿ ಕೃತ್ತಿವಾಸವೆಂಬ ಪರ್ವತವಿರುವುದು, ಅಲ್ಲಿ ಹಿಂದೆ ಶಂಕರನು ಕೃತ್ತಿವಾಸಃ ಎಂಬ ಹೆಸರಿನಿಂದ ಸಾಕ್ಷಾತ್ತಾಗಿ ಸತೀದೇವಿಯೊಡನೆ ವಾಸಿಸುತ್ತಲಿದ್ದನು.

೧೭-೧೯. ಆ ಪರ್ವತದಲ್ಲಿ ಚಂದ್ರಿಕಾ ಎಂಬ ನದಿ ಇರುವುದು. ಆ ನದಿಯಲ್ಲಿ ಸ್ನಾನಮಾಡಿದ ನರನು ಸ್ವರ್ಗವನ್ನು ಪಡೆಯುವನು. ಚಂದ್ರಿಕಾನದಿಯಲ್ಲಿ ಸ್ನಾನಮಾಡಿ ಭಾದ್ರಪದಶುಕ್ಲ ಚತುರ್ಥಿಯಲ್ಲಿ ಶಂಕರನನ್ನು ಪೂಜಿಸಿದ ಮನುಜನು ಪಾಪರಹಿತನಾಗುವನು. ಭಾದ್ರಪದಮಾಸವೆಲ್ಲ ಪೂರ್ತಿಯಾಗಿ ಆ ನದಿಯಲ್ಲಿ ಸ್ನಾನಮಾಡಿ ಕೃತ್ತಿವಾಸದೇವನನ್ನು ದರ್ಶನಮಾಡುವ ಪುರುಷಶ್ರೇಷ್ಠನು ಶಂಕರನ ಸ್ಥಾನವನ್ನೇ ಪಡೆಯುವನು ಈ ಚಂದ್ರಿಕಾನದಿಯು ಯಾವಾಗಲೂ ಉತ್ತರಾಭಿಮುಖವಾಗಿಯೇ ಹರಿಯುತ್ತಿರುವುದು.

ಉತ್ತರಸ್ರಾವಿಣೀಂ ನಿತ್ಯಂ ಚಂದ್ರಿಕಾಖ್ಯಾ ಸರಿದ್ವರಾ।
ನಾತಿದೂರೇ ಚಂದ್ರಿಕಾಯಾಃ ಪೂರ್ವಸ್ಯಾಂ ದಿಶಿ ಫೇನಿಲಾ ॥ ೨೦ ॥

ಸಂಜ್ಞಯಾ ಸಾ ಸರಿಚ್ಛ್ರೇಷ್ಠಾ ಶತಾನನ್ದಾವತಾರಿತಾ।
ಬ್ರಹ್ಮಣೋ ದುಹಿತಾ ಸಾ ತು ಗಂಗಾಪರ್ವತಸಮ್ಭವಾ ॥ ೨೧ ॥

ಫೇನಿಲಾಯಾಂ ನರಃ ಸ್ನಾತ್ವಾ ಬ್ರಹ್ಮೋತ್ಥಾನಾದಿನೇ ಪುನಃ।
ಫಾಲ್ಗುನೇ ಮಾಸಿ ನರಕಂ ಜಿತ್ವಾ ಸ್ವರ್ಗಮಾವಾಪ್ನುಯಾತ್ ॥ ೨೨ ॥

ತತಸ್ಸಿತಾಹ್ವಯಾ ಪೂರ್ವಂ ಸರಿದುತ್ತರಗಾಮಿನೀ।
ತಸ್ಯಾಂ ಸ್ನಾತ್ವಾ ಮಹಾಚೈತ್ರ್ಯಾಂ ಗಂಗಾಸ್ನಾನಫಲಂ ಲಭೇತ್ ॥ ೨೩ ॥

ತತಃ ಪೂರ್ವಂ ಸುಮದನಾ ಯೋಜನದ್ವಿತಯಾಂತರೇ।
ನದೀ ಜನಕರಾಜೇನ ಸಮಾರಾಧ್ಯ ವೃಷಧ್ವಜಂ ॥ ೨೪ ॥

೨೦-೨೨. ಈ ನದಿಗೆ ಸ್ವಲ್ಪದೂರದಲ್ಲಿ ಫೇನಿಲಾ ಎಂಬ ಇನ್ನೊಂದು ನದಿಯು ಹರಿಯುತ್ತಿರುವುದು. ಹಿಂದೆ ಶತಾನಂದನೆಂಬ ಮುನಿಯು ಆ ನದಿಯನ್ನು ಹಿಮವತ್ಪರ್ವತದಿಂದ ಹೊರಟು ಪ್ರವಹಿಸುವಂತೆ ಮಾಡಿರುವನು. ಈ ನದಿಯು ಬ್ರಹ್ಮಪುತ್ರಿ ಎಂದು ಪ್ರಸಿದ್ಧಿಯು. ಫಾಲ್ಗುಣಮಾಸದಲ್ಲಿ ಬ್ರಹ್ಮೋತ್ಥಾನವೆಂಬ ಪುಣ್ಯಕಾಲದಲ್ಲಿ ಈ ನದಿಯಲ್ಲಿ ಸ್ನಾನಮಾಡಿದವನು ನರಕವನ್ನು ಜಯಿಸಿ ಸ್ವರ್ಗವನ್ನು ಪಡೆಯುವನು.

೨೩. ಅಲ್ಲಿಂದ ಪೂರ್ವಕ್ಕೆ ಉತ್ತರಮುಖವಾಗಿ ಹರಿಯುತ್ತಿರುವ ಸಿತಾ ಎಂಬ ನದಿಯಿರುವುದು. ಆ ಸಿತಾನದಿಯಲ್ಲಿ ಚೈತ್ರಶುಕ್ಲ ಪೂರ್ಣಿಮೆಯಲ್ಲಿ ಸ್ನಾನ ಮಾಡಿದವ ಗಂಗಾಸ್ನಾನಮಾಡಿದ ಫಲವು ಲಭಿಸುವುದು.

೨೪. ಅಲ್ಲಿಂದ ಪೂರ್ವಕ್ಕೆ ಎರಡು ಯೋಜನಗಳ ದೂರದಲ್ಲಿ ಸುಮದನಾ ಎಂಬ ಮತ್ತೊಂದು ನದಿಯು ಇರುವುದು. ಹಿಂದೆ ಜನಕರಾಜನು ಭೈರವನೆಂಬುವನ ಹಿತಕ್ಕಾಗಿ, ಶಂಕರನನ್ನು ಆರಾಧಿಸಿ ಸುತೀಕ್ಷ್ಣಪರ್ವತದಿಂದ ಆ ನದಿಯು ಪ್ರವಹಿಸುವಂತೆ ಮಾಡಿರುವನು.

ಹಿತಾಯ ಭೈರವಾಖ್ಯಸ್ಯ ಸುತೀಕ್ಷ್ಣಾದವತಾರಿತಾ ।
ಸುತೀಕ್ಷ್ಣಂ ಗಿರಿಮಾರುಹ್ಯ ಸ್ನಾತ್ವಾ ಸುಮದನಾಜಲೇ ॥ ೨೫ ॥

ಮಾಘಶುಕ್ಲಚತುರ್ಥ್ಯಾಂ ತು ಪೂಜಯಿತ್ವಾ ಮಹೇಶ್ವರಂ ।
ಸಂಪ್ರಾಪ್ಯ ಸಕಲಾನ್ಕಾಮಾಞ್ಛಿವಲೋಕಾಯ ಗಚ್ಛತಿ ॥ ೨೬ ॥

ಏತಾ ನದ್ಯಃ ಕಾಮರೂಪ್ಯೈರ್ನೈರ್ಋತ್ಯಾಮುತ್ತರಸ್ರವಾಃ ।
ಪೀಠಸ್ಯ ಪೂರ್ವತಸ್ತತ್ರ ತ್ರಿಪುರಾ ಯತ್ರ ಪೂಜ್ಯತೇ ॥ ೨೭ ॥

ಏವಂ ತೇ ಕಥಿತಂ ರಾಜನ್ಮಹಾಪುಣ್ಯದಮುತ್ತಮಂ ।
ಕಾಮರೂಪಸ್ಯ ನೈರ್ಋತ್ಯಾಂ ಯತ್ರ ಶಂಭುಃ ಸದಾಂಬಿಕಾ ॥ ೨೮ ॥

ಪುರೈವ ಚ ಮಹಾರಾಜ ಯಾ ನದ್ಯೋ ದಕ್ಷಿಣಸ್ರವಾಃ ।
ಹಿಮವತ್ಪ್ರಭವಾ ಯಾತಾಃ ಕ್ರಮಶಃ ಶೃಣು ಭೂಪತೇ ॥ ೨೯ ॥

೨೫-೨೬. ಸುತೀಕ್ಷ್ಣಪರ್ವತಕ್ಕೆ ಹೋಗಿ, ಅಲ್ಲಿರುವ ಸುಮದನಾನದಿಯ ಜಲದಲ್ಲಿ ಸ್ನಾನಮಾಡಿ, ಮಾಘಶುದ್ಧಚತುರ್ಥಿಯಲ್ಲಿ ಮಹೇಶ್ವರನನ್ನು ಪೂಜಿಸಿದವನು ಇಹದಲ್ಲಿ ಸಕಲಇಷ್ಟಾರ್ಥಗಳನ್ನು ಪಡೆದು ಪರವಲ್ಲಿ ಶಿವಲೋಕಕ್ಕೆ ಹೋಗುವನು.

೨೭. ಈ ಎಲ್ಲಾನದಿಗಳು ಕಾಮರೂಪದೇಶದ ನೈಋತ್ಯದಿಕ್ಕಿನಲ್ಲಿದ್ದು, ಕಾಮರೂಪಪೀಠದಿಂದ ಪೂರ್ವಭಾಗದಲ್ಲಿ ಉತ್ತರಮುಖವಾಗಿ ಹರಿಯುತ್ತಿರುವವು. ಅಲ್ಲಿಯೇ ತ್ರಿಪುರಾದೇವಿಯು ನೆಲಸಿರುವಳು.

೨೮. ಎಲೈ ಸಗರರಾಜನೇ:— ಹೀಗೆ ಶಂಕರನೂ, ಅಂಬಿಕೆಯೂ ಸದಾ ನೆಲಸಿರುವರು. ಕಾಮರೂಪದ ನೈರುತ್ಯದಿಕ್ಕಿನ ಮಹಾಪುಣ್ಯಪ್ರದವಾದ ಪೀಠದ ಏಪರವನ್ನು ನಿನಗೆ ಹೇಳಿರುವೆನು.

೨೯. ಇನ್ನು ಹಿಮವತ್ಪರ್ವತದಿಂದ ಹುಟ್ಟಿ ದಕ್ಷಿಣಮುಖವಾಗಿ ಹರಿಯುತ್ತಿರುವ ಯಾವ ನದಿಗಳಿರುವುವೋ ಅವುಗಳನ್ನು ಕ್ರಮವಾಗಿ ಹೇಳುವೆನು. ಕೇಳು.

ಅಗದಸ್ಯ ನದಸ್ಯೋರ್ಧ್ವಂ ಭದ್ರಾಖ್ಯಾ ತು ಮಹಾನದೀ।
ಭಾದ್ರೇ ಕೃಷ್ಣಚತುರ್ದಶ್ಯಾಂ ಯಸ್ಯಾಂ ಸ್ನಾತ್ವಾ ದಿವಂ ವ್ರಜೇತ್ ॥ ೩೦ ॥

ತತಃ ಪೂರ್ವಂ ಸುಭದ್ರಾಖ್ಯಾ ನದೀ ಪುಣ್ಯತಮಾ ಸದಾ।
ವೈಶಾಖಸ್ಯ ತೃತೀಯಾಯಾಂ ಯಸ್ಯಾಂ ಸ್ನಾತ್ವಾ ದಿವಂ ವ್ರಜೇತ್ ॥ ೩೧ ॥

ತತಸ್ತು ಮಾನಸಾ ನಾಮ ನದೀ ಪುಣ್ಯತಮಾ ಮತಾ।
ಸರಸೋ ಮಾನಸಾಖ್ಯಾತ್ತು ತೃಣಬಿಂದ್ವತಾರಿತಾ ॥ ೩೨ ॥

ವೈಶಾಖಂ ಸಕಲಂ ಮಾಸಂ ತಸ್ಯಾಂ ಸ್ನಾತ್ವಾ ನರೋತ್ತಮಃ।
ವಿಷ್ಣುಲೋಕಮವಾಪ್ಯೈವ ತತೋ ಮೋಕ್ಷಮವಾಪ್ನುಯಾತ್ ॥ ೩೩ ॥

ಹಿಮವನ್ನಿಕಟೇ ಶೈಲೋ ವಿಭ್ರಾಟಾ ಸ ಮಹಾದ್ಯುತಿಃ।
ಯಸ್ಮಿನ್ ವಸತಿ ಭೂತೇಶಃ ಸದಾ ಭೈರವರೂಪಧೃಕ್ ॥ ೩೪ ॥

---

೩೦. ಅಗದವೆಂಬ ನದಿ ಇರುವ ಪ್ರದೇಶಕ್ಕಿಂದಲೂ ಮೇಲುಭಾಗದಲ್ಲಿ ಭದ್ರಾ ಎಂಬ ಮಹಾನದಿಯು ಇರುವುದು. ಆ ನದಿಯಲ್ಲಿ ಭಾದ್ರಪದಶುಕ್ಲ ಚತುರ್ದಶಿಯಲ್ಲಿ ಸ್ನಾನಮಾಡಿದವನು, ಸ್ವರ್ಗವನ್ನು ಪಡೆಯುವನು.

೩೧. ಅಲ್ಲಿಂದ ಪೂರ್ವದಿಕ್ಕಿನಲ್ಲಿ ಸುಭದ್ರಾ ಎಂಬ ಪುಣ್ಯತಮವಾದ ನದಿಯಿರುವುದು. ವೈಶಾಖಮಾಸಶುದ್ಧತದಿಗೆಯಲ್ಲಿ ಆ ನದಿಯಲ್ಲಿ ಸ್ನಾನಮಾಡಿದ ಮನುಷ್ಯನು ಸ್ವರ್ಗಕ್ಕೆ ಹೋಗುವನು.

೩೨. ಅಲ್ಲಿಂದ ಮುಂದೆ ಮಾನಸಾ ಎಂಬ ಪುಣ್ಯತಮವಾದ ನದಿ ಇರುವುದು. ತೃಣಬಿಂದು ಎಂಬ ಮಹರ್ಷಿಯು ಆ ನದಿಯನ್ನು ಮಾನಸಸರೋವರದಿಂದ ಹರಿಯಿಸಿರುವನು.

೩೩. ವೈಶಾಖಮಾಸವೆಲ್ಲಾ ಪೂರ್ತಿಯಾಗಿ ಆ ಮಾನಸಾನದಿಯಲ್ಲಿ ಸ್ನಾನ ಮಾಡಿದ ನರೋತ್ತಮನು ವಿಷ್ಣುಲೋಕವನ್ನು ಪಡೆದು, ಮುಂದೆ ಮುಕ್ತಿಯನ್ನೂ ಪಡೆವನು.

೩೪. ಹಿಮಾಲಯದ ಸಮೀಪದಲ್ಲಿ ಮಹಾಪ್ರಕಾಶಮಾನವಾದ ವಿಭ್ರಾಟ ಎಂಬ ಬೆಟ್ಟವಿರುವುದು. ಅಲ್ಲಿ ಶಂಕರನು ಭೈರವರೂಪದಿಂದ ಸದಾ ನೆಲಸಿರುವನು.

ತಸ್ಮಾತ್ತು ಭೈರವೀ ನಾಮ ನದೀ ಪುಣ್ಯೋದಕಾ ಶುಭಾ ।
ಪ್ರಾಜ್ಞಾನಸಾದ್ಯಾ ಸ್ರವತಿ ಗಂಗೇವ ಫಲದಾಯಿನೀ ॥ ೩೫ ॥

ಯಸ್ಯಾಂ ವಸಂತಸಮಯೇ ಸ್ನಾತ್ವಾ ಗಚ್ಛತಿ ವೈ ದಿವಂ ।
ಯಸ್ಯಾಂ ಸಂಪೂಜ್ಯ ಕಾಮಾಖ್ಯಾಮಿಷ್ಟಜ್ಞಾನಮವಾಪ್ನುಯಾತ್ ॥ ೩೬ ॥

ಸಂಪೂಜ್ಯಾಥ ಮಹಾಮಾಯಾಂ ದ್ವಿಗುಣಂ ಸ್ಯಾಪ್ನುಯಾತ್ಫಲಂ ।
ಊರ್ಧ್ವಂ ತತೋ ದೇವಗಂಗಾ ವರ್ಣಾಸಾಖ್ಯಾ ಸರಿದ್ವರಾ ॥ ೩೭ ॥

ಹಿಮವತ್ಪ್ರಭವಾ ನಿತ್ಯಂ ಫಲದಾ ಮಾನಸೋಪಮಾ ।
ಸುಭದ್ರಾದ್ಯಾಸ್ತು ಯಾಃ ಪ್ರೋಕ್ತಾ ವರ್ಣಾಸಾಂತಾಃ ಸರಿದ್ವರಾಃ ॥ ೩೮ ॥

ಹಿಮವತ್ಪ್ರಭವಾಸ್ತಾಸ್ತು ಸರ್ವಾ ಏವೋತ್ತರಪ್ಲವಾಃ ।
ಪೂರ್ವೇ ತು ಮದನಾಯಾಸ್ತು ಬ್ರಹ್ಮಕ್ಷೇತ್ರಸ್ಯ ಪಶ್ಚಿಮೇ ॥ ೩೯ ॥

ರವಿಕ್ಷೇತ್ರಂ ಯತ್ರ ದೇವ ಆದಿತ್ಯಃ ಸತತಂ ಸ್ಥಿತಃ ।
ಭೈರವಸ್ಯ ಹಿತಾರ್ಥಾಯ ಯತ್ರ ಸರ್ವೇಶ್ವರಾಃ ಸ್ಥಿತಾಃ ॥ ೪೦ ॥

೩೫-೩೭. ಆ ಬೆಟ್ಟದಿಂದ ಭೈರವೀ ಎಂಬ ಪುಣ್ಯಜಲವುಳ್ಳ ನದಿಯು ಹರಿಯುತ್ತಲಿರುವುದು. ಆ ನದಿಯು ಮಾನಸಸರೋವರದಿಂದ ಜನಿಸಿ ಗಂಗೆಯಂತೆ ಫಲವನ್ನು ಕೊಡುವುದು. ಆ ಭೈರವೀ ನದಿಯಲ್ಲಿ ವಸಂತಕಾಲದಲ್ಲಿ ಸ್ನಾನಮಾಡಿದವನು ಸ್ವರ್ಗವನ್ನು ಪಡೆಯುವನು. ಆ ನದಿಯಲ್ಲಿ ಕಾಮಾಖ್ಯಾದೇವಿಯನ್ನು ಪೂಜಿಸಿದರೆ ಇಷ್ಟವಾದ ಜ್ಞಾನವು ಲಭಿಸುವುದು. ಅಲ್ಲಿ ಮಹಾಮಾಯೆಯನ್ನು ಪೂಜಿಸಿದರೆ ಎರಡರಷ್ಟು ಫಲವನ್ನು ಪಡೆಯುವನು.

೩೮-೩೯. ಭೈರವೀ ನದಿಗಿಂತಲೂ ಮೇಲೆ ದೇವಗಂಗಾಸಮಾನವಾದ ವರ್ಣಾಸಾ ಎಂಬ ನದಿಯು ಇರುವುದು. ಆ ನದಿಯೂ ಹಿಮಾಲಯದಿಂದ ಹೊರಟಿರುವುದು. ಮಾನಸಸರೋವರದಂತೆ ಅತಿಪವಿತ್ರವಾದುದು. ಸುಭದ್ರಾನದಿ ಮೊದಲುಗೊಂಡು ವರ್ಣಾಸಾನದಿಯವರೆಗೂ ಹೇಳಿರುವ ನದಿಗಳೆಲ್ಲವೂ ಹಿಮಾಲಯದಿಂದಲೇ ಹುಟ್ಟಿರುವವು. ಎಲ್ಲವೂ ಉತ್ತರಮುಖವಾಗಿಯೇ ಹರಿಯುವುವು.

೪೦. ಮದನಾನದಿಗೆ ಪೂರ್ವದಲ್ಲಿಯೂ, ಬ್ರಹ್ಮಕ್ಷೇತ್ರಕ್ಕೆ ಪಶ್ಚಿಮದಲ್ಲಿಯೂ, ರವಿಕ್ಷೇತ್ರವೆಂಬ ಒಂದುಕ್ಷೇತ್ರವಿರುವುದು. ಅಲ್ಲಿ ಆದಿತ್ಯದೇವನು ಸದಾ ನೆಲಸಿರುವನು.

ಕಾಮರೂಪೇ ಮಹಾಪೀಠೇ ಬ್ರಹ್ಮೇಂದ್ರವರುಣಾದಯಃ ।
ತಥಾ ನತ್ವಾಭ್ವಯೇ ಶೈಲೇ ಶ್ರೀಸೂರ್ಯೋಽಪಿ ವ್ಯವಸ್ಥಿತಃ ॥ ೪೧ ॥

ತ್ರಿಸ್ರೋತಾ ನಾಮ ಯಸ್ಯಾಸ್ತಿ ನದೀ ಪೂರ್ವದಿಶಿ ಸ್ಥಿತಾ ।
ಕಾಪೋತಕರಣಂ ಪಶ್ಚಾದಸ್ಯ ಕುಂಡದ್ವಯಂ ಸ್ಥಿತಂ ॥ ೪೨ ॥

ಕಾಪೋತಕುಂಡೇ ವಿಧಿವತ್ಸ್ನಾತ್ವಾ ಕಾರಣಕುಂಡಕೇ ।
ನತ್ವಾಚಲಂ ಸಮಾರುಹ್ಯ ಸಂಪೂಜ್ಯ ಚ ದಿವಾಕರಂ ॥ ೪೩ ॥

ಸಕೃದೇವ ನರೋ ಯಾತಿ ಭಾಸ್ಕರಸ್ಯ ಗೃಹಂ ಪ್ರತಿ ।
ಸೂರ್ಯರಶ್ಮಿಸಮುದ್ಭೂತಂ ಕಾಪೋತಕರಣಾಮೃತಂ ॥ ೪೪ ॥

ಪುಣ್ಯತೋಯಸಮಾಖ್ಯಾತಂ ಪಾಪಂ ಕಾಪೋತ ಮೇ ಹರ ।
ಇತ್ಯನೇನ ತು ಮಂತ್ರೇಣ ಸ್ನಾತ್ವಾ ಕಾಪೋತಕೇ ವರೆ ॥ ೪೫ ॥

---

೪೧. ಕಾಮರೂಪಪೀಠದಲ್ಲಿ ಭೈರವನ ಹಿತಕ್ಕಾಗಿ ಬ್ರಹ್ಮ, ಇಂದ್ರ, ವರುಣ, ಮೊದಲಾದ ಎಲ್ಲಾ ದೇವತೆಗಳೂ ಇರುವರು.

೪೨-೪೩. ಮತ್ತೂ ನತ್ವವೆಂಬ ಹೆಸರಿನ ಬೆಟ್ಟದಲ್ಲಿ ಸೂರ್ಯನು ನೆಲಸಿರುವನು. ಅಲ್ಲಿಂದ ಪೂರ್ವಕ್ಕೆ ತ್ರಿಸ್ರೋತಾ ಎಂಬ ನದಿಯು ಇರುವುದು. ಆ ನದಿಗಿಂತಲೂ ಮುಂದೆ ಕಾಪೋತಕರಣಗಳೆಂಬ ಎರಡು ಕುಂಡಗಳಿರುವುವು. ಕಾಪೋತ ಮತ್ತು ಕರಣಕುಂಡಗಳಲ್ಲಿ ಸ್ನಾನಮಾಡಿ ನತ್ವಾದ್ರಿಗೆ ತೆರಳಿ, ಅಲ್ಲಿರುವ ಸೂರ್ಯನನ್ನು ಪೂಜಿಸಿದ ನರನು ಸೂರ್ಯಲೋಕಕ್ಕೆ ಹೋಗುವನು.

೪೪-೪೫. ಕಾಪೋತ ಮತ್ತು ಕರಣಕುಂಡಗಳು ಸೂರ್ಯನ ಕಿರಣಗಳಿಂದ ಜನಿಸಿದುವು. ಅವುಗಳ ಜಲವು ಪುಣ್ಯವಾದುದು. ಎಲೈ ಕಾಪೋತಕುಂಡವೇ ನನ್ನ ಪಾಪವನ್ನು ಪರಿಹಾರಮಾಡು. ಎಂಬ ಮಂತ್ರದಿಂದ ಕಾಪೋತಕುಂಡದಲ್ಲಿ ಸ್ನಾನಮಾಡಿ, ಬಳಿಕ ಕರಣಕುಂಡದ ಜಲವನ್ನು ಸ್ಪರ್ಶಿಸಿ ಮುಂದೆ ನತ್ವಶೈಲದಲ್ಲಿ ಸೂರ್ಯನನ್ನು ಅರ್ಚಿಸಬೇಕು.

ಕರಣಂ ಸಮುಪಸ್ಪೃಶ್ಯ ನತ್ವಶೈಲೇ ರವಿಂ ಯಜೇತ್ ।
ತ್ರಿವಿಧಂ ಬ್ರಹ್ಮಬೀಜಂ ತು ಸಹಸ್ರಪದಮುಂತತಃ ॥ ೪೬ ॥

ರಶ್ಮಯೇಽ ಪಿ ಚತುರ್ಥ್ಯಂ ತು ದೇವೀ ಜಾಯಾ ತು ಚೇಷ್ಟತಃ ।
ಅಂಗಬೀಜಮಿದಂ ಪ್ರೋಕ್ತಮಾದಿತ್ಯಸ್ಯಾತಿಕಾಮದಂ ॥ ೪೭ ॥

ಪದ್ಮಾಸನಃ ಪದ್ಮಕರಃ ಪದ್ಮಗರ್ಭಸಮದ್ಯುತಿಃ।
ಸಪ್ತಾಶ್ವಃ ಸಪ್ತರಜ್ಜುಶ್ಚ ದ್ವಿಭುಜೋ ಭಾಸ್ಕರಃ ಸದಾ ॥ ೪೮ ॥

ವರ್ತುಲಂ ಮಂಡಲಂ ಚಾಸ್ಯ ಅಷ್ಟಪತ್ರಸಮನ್ವಿತಂ ।
ಅಂಗುಷ್ಠಾಗ್ರಾಂಗುಲೀನಾಂ ಚ ಹೃದಾದೀನಾಂ ತಥಾ ಚ ಷಟ್ ॥ ೪೯ ॥

ಅಂಗಮಂತ್ರೇಣ ಸಹಿತ ಉಪಾಂತೇ ವಹ್ನಿನಾ ಯುತಃ ।
ಸರ್ವನ್ಯಾಸೇ ಸಮುದ್ದಿಷ್ಟೋ ಮಂತ್ರಃ ಸರ್ವಫಲಪ್ರದಃ ॥ ೫೦ ॥

೪೬-೪೭. ಬ್ರಹ್ಮಬೀಜಾಕ್ಷರಗಳಲ್ಲಿ ಬೇರೆ ಬೇರೆ ಮೂರು ಬೀಜಾಕ್ಷರಗಳನ್ನೂ ಕಡೆಯಲ್ಲಿ ಸಹಸ್ರವೆಂಬ ಪದವನ್ನೂ, ಚತುರ್ಥೀವಿಭಕ್ತಿಯಾದ ರಶ್ಮಯೇ ಎಂಬ ಪದವನ್ನೂ, ಸೇರಿಸಿದರೆ ಭಾಸ್ಕರನ ಅಂಗಮಂತ್ರವಾಗುವುದು. ಇದು ಸಕಲ ಇಷ್ಟಾರ್ಥಗಳನ್ನೂ ಕೊಡುವುದು.

೪೮. ಭಾಸ್ಕರನು ಪದ್ಮದಲ್ಲಿ ಕುಳಿತಿರುವನು. ಕೈಯಲ್ಲಿ ಪದ್ಮವನ್ನು ಹಿಡಿದಿರುವನು. ಪದ್ಮದಂತೆ ರಕ್ತವಾದ ಕಾಂತಿಯುಳ್ಳವನು. ಇವನ ರಥಕ್ಕೆ ಏಳು ಕುದುರೆಗಳಿರುವವು. ಅವುಗಳ ಹಗ್ಗವನ್ನು ಕೈಯಲ್ಲಿ ಹಿಡಿದಿರುವನು. ಎರಡು ಭುಜಗಳುಳ್ಳವನು. ಈ ರೀತಿ ಭಾಸ್ಕರನನ್ನು ಧ್ಯಾನಮಾಡಬೇಕು.

೪೯-೫೦. ಸೂರ್ಯನ ಮಂಡಲವು ದುಂಡಾಗಿರುವುದು. ಅದಕ್ಕೆ ಎಂಟು ದಳಗಳಿರುವುವು. ಅಂಗಮಂತ್ರದ ಉಪಾಂತಕ್ಕೆ ಅಗ್ನಿಬೀಜ (ರ) ವನ್ನು ಸೇರಿಸಿ ಎಂದರೆ ಹಕಾರರಕಾರಗಳನ್ನು ಸೇರಿಸಿ, ಅದಕ್ಕೆ ದೀರ್ಘಸ್ವರ ಮತ್ತು ಬಿಂದುಗಳನ್ನು ಸೇರಿಸಬೇಕು. ಈರೀತಿ ಆಗುವ ಹ್ರಾಂ ಹ್ರೀಂ ಮೊದಲಾದ ಆರು ಮಂತ್ರಗಳಿಂದ ಅಂಗುಷ್ಠಾದಿ ಆರುನ್ಯಾಸಗಳನ್ನೂ ಹೃದಯಾದಿ ಆರುನ್ಯಾಸಗಳನ್ನೂ, ಮಾಡಬೇಕು. ಭಾಸ್ಕರಪೂಜೆಯಲ್ಲಿ ಯಾವಾಗಲೂ, ಈ ನ್ಯಾಸಕ್ರಮವನ್ನೇ ಅನುಸರಿಸಬೇಕು. ಇದು ಸಮಸ್ತಫಲವನ್ನೂ ಕೊಡುವುದು.

ಹೃಚ್ಛಿರಸ್ತು ಶಿಖಾವರ್ಮನೇತ್ರಾಸ್ಯೋದರಪೃಷ್ಠತಃ ।
ಬಾಹ್ವೋಃ ಪಾಣ್ಯೋರ್ಜಂಘಯೋಶ್ಚ ಪಾದಯೋಶ್ಚಾಪಿ ವಿನ್ಯಸೇತ್ ॥

ಜಘನೇ ಚ ಸಮುಸ್ತಾನಿ ಕ್ರಮಾನ್ಮಂತ್ರಾಕ್ಷರಾಣಿ ಚ ।
ಕ್ರಮಾಚ್ಚೋತ್ತರತಃ ಪ್ರೋಕ್ತಃ ಪೂಜನೇ ಪರಿಕೀರ್ತಿತಃ ॥ ೫೨ ॥

ವಿಸರ್ಜನಂ ತಥೈಶಾನ್ಯಾಂ ವಿದ್ಯಾದ್ಯಾ ದಲಶಕ್ತಯಃ ।
ನಿರ್ಮಾಲ್ಯಧೃಕ್ತತ್ವಚಂಡೋ ಮಾಠರಾದ್ಯಾಸ್ತು ಪಾರ್ಶ್ವಯೋಃ ॥ ೫೩ ॥

ಬೀಜಮುತ್ತರತಂತ್ರೋಽಸ್ಯ ಪೂರ್ವತಃ ಪ್ರತಿಪಾದಿತಂ ।
ಅನೇನ ವಿಧಿನಾ ತತ್ತ್ವೇ ಪೂಜಯಿತ್ವಾ ನರೋತ್ತಮಃ ॥ ೫೪ ॥

ಸ ಕಾಮಾನಖಿಲಾ ಪ್ರಾಪ್ಯ ಇಹಲೋಕೇ ತ್ವರುಕ್ತನುಃ ।
ಸುಖೀ ಶೇಷೇ ತಥಾ ಗಚ್ಛೇದ್ಭಾಸ್ಕರಸ್ಯಾಲಯಂ ಪ್ರತಿ ॥ ೫೫ ॥

೫೧-೫೨. ಆ ಮಂತ್ರಾಕ್ಷರಗಳಿಂದ ಹೃದಯ, ಶಿರಸ್ಸು, ಶಿಖೆ, ಕವಚ, ನೇತ್ರ, ಮುಖ, ಉದರ, ಪೃಷ್ಠ, ಬಾಹುಗಳು, ಅಂಗೈಗಳು, ಮೊಳಕಾಲು, ಪಾದ, ಜಘನ ಇವುಗಳ ನ್ಯಾಸವನ್ನೂ ಮಾಡಬೇಕು. ಈ ನ್ಯಾಸಕ್ರಮವನ್ನೂ, ಪೂಜೆಯ ಕ್ರಮವನ್ನೂ ಉತ್ತರತಂತ್ರದಲ್ಲಿ ಹೇಳಿರುವುದು. ಅದರಂತೆ ಮಾಡಬೇಕು.

೫೩. ಈಶಾನ್ಯದಲ್ಲಿ ವಿಸರ್ಜನೆಯನ್ನು ಮಾಡಬೇಕು. ಎಂಟು ದಲಗಳಲ್ಲಿ ವಿದ್ಯೆ ಮೊದಲಾದ ಎಂಟು ಶಕ್ತಿಗಳನ್ನೂ ಪೂಜಿಸಬೇಕು. ತತ್ವಚಂಡನೆಂಬುವನು ಭಾಸ್ಕರನ ನಿರ್ಮಾಲ್ಯವನ್ನು ಧರಿಸುವವನು. ಮಾಠರನೇ ಮೊದಲಾದವರನ್ನು ಭಾಸ್ಕರನ ಎಡಬಲಗಳಲ್ಲಿ ಪೂಜಿಸಬೇಕು.

೫೪-೫೫. ಭಾಸ್ಕರನ ಬೀಜಮಂತ್ರವನ್ನು ಹಿಂದೆ ಉತ್ತರತಂತ್ರದಲ್ಲಿ ಹೇಳಿರುವುದು, ಈ ವಿಧಿಯಿಂದ ತತ್ವಶೈಲದಲ್ಲಿ ಭಾಸ್ಕರನನ್ನರ್ಚಿಸಿದ ನರೋತ್ತಮನು ಇಹಲೋಕದಲ್ಲಿ ಆರೋಗ್ಯಶಾಲಿಯಾಗಿದ್ದು, ಸಕಲ ಇಷ್ಟಾರ್ಥಗಳನ್ನು ಪಡೆದು, ಸುಖವಾಗಿದ್ದು ಜನ್ಮಾಂತರದಲ್ಲಿ ಸೂರ್ಯಲೋಕಕ್ಕೆ ತೆರಳುವನು.

ನಾತಿದೂರೇ ಭಾಸ್ಕರಸ್ಯ ದಕ್ಷಿಣಸ್ಯಾಂ ಶುಭಾಹ್ವಯಃ ।
ತಸ್ಯೋರ್ಧ್ವಸಾನೌ ವಸತಿ ಲಿಂಗಂ ಶಾಂಕರಮುತ್ತಮಂ ॥ ೫೬ ॥

ಪರಿವಾರ್ಯ ಸದಾ ಯಾಂತಿ ಮಹಾಕಾಯಾಸ್ತು ವಾನರಾಃ ।
ಪರಿವಾರ್ಯಾವತಿಷ್ಠಂತೇ ಸೇವಮಾನಾಶ್ಚ ಶಂಕರಂ ॥ ೫೭ ॥

ತ್ರಿಸ್ರೋತಾಯಾಂ ನರಃ ಸ್ನಾತ್ವಾ ಯಃ ಪಶ್ಯೇತ್ತು ಶುಭಾಚಲೇ ।
ಮಹಾತ್ಮಾನಂ ಮಹಾದೇವಂ ಕಾಮಮಿಷ್ಟಂ ಲಭೇನ್ನರಃ ॥ ೫೮ ॥

ತತಃ ಪೂರ್ವಂ ಸುರನದೀ ನಾಮ್ನಾ ಕುಸುಮಮಾಲಿನೀ ।
ಕ್ಷೀರೋದಾಖ್ಯಾ ಪರಾ ತಸ್ಮಾತ್ತಸ್ಯೈ ಗತೇ ದಕ್ಷಿಣಸ್ರವೇ ॥ ೫೯ ॥

ಏತೇ ಅಪಿ ಮಹಾರಾಜ ಪುಣ್ಯತೋಯೇಽಮೃತಸ್ರವೇ ।
ತಯೋಃ ಸ್ನಾತ್ವಾ ನರೋ ಯಾತಿ ಶಂಕರಸ್ಯಾಲಯಂ ಪ್ರತಿ ॥ ೬೦ ॥

೫೬-೫೮. ಭಾಸ್ಕರನಿಗೆ ಸ್ವಲ್ಪದೂರದಲ್ಲಿಯೇ ದಕ್ಷಿಣದಲ್ಲಿ ಶುಭವೆಂಬ ಪರ್ವತವಿರುವುದು. ಆ ಬೆಟ್ಟದ ಮೇಲುಶಿಖರದ ತಪ್ಪಲಿನಲ್ಲಿ ಶ್ರೇಷ್ಠವಾದ ಈಶ್ವರ ಲಿಂಗವೊಂದು ಇರುವುದು. ಅಲ್ಲಿ ದೊಡ್ಡಶರೀರವುಳ್ಳ ಕಪಿಗಳು ಗುಂಪುಗುಂಪಾಗಿ ಹೋಗಿ ಶಂಕರನನ್ನು ಸೇವಿಸುತ್ತಾ ಆ ಲಿಂಗವನ್ನು ಸುತ್ತುವರಿದು ಕುಳಿತುಕೊಳ್ಳುವುವು. ತ್ರಿಸ್ರೋತಾನದಿಯಲ್ಲಿ ಸ್ನಾನಮಾಡಿ ಶುಭಾಚಲದಲ್ಲಿರುವ ಮಹಾತ್ಮನಾದ ಮಹಾದೇವನ ದರ್ಶನವನ್ನು ಮಾಡಿದವನು, ಬೇಕಾದ ಇಷ್ಟಾರ್ಥಗಳನ್ನು ಪಡೆವನು.

೫೯. ಅಲ್ಲಿಂದ ಪೂರ್ವಕ್ಕೆ ಕುಸುಮಶಾಲಿನೀ, ಕ್ಷೀರೋದಾ ಎಂಬ ಎರಡು ದೇವನದಿಗಳಿರುವುವು. ಅವುಗಳೆರಡೂ ದಕ್ಷಿಣಾಭಿಮುಖವಾಗಿ ಹರಿಯುತ್ತಿರುವುವು.

೬೦. ಎಲೈ ಮಹಾರಾಜ, ಈ ನದಿಗಳ ನೀರು ಪವಿತ್ರವಾದುದು. ಅಮೃತದಂತಹ ಜಲವನ್ನು ಹರಿಸುವುವು. ಅವುಗಳಲ್ಲಿ ಸ್ನಾನಮಾಡಿದವನು ಶಂಕರನ ಲೋಕಕ್ಕೆ ತೆರಳುವನು.

ತತೋಽಪಿ ಪೂರ್ವತೋ ದೇವೀ ಲೀಲಾಖ್ಯಾ ಚಾಪರಾ ನದೀ ।
ಯಸ್ಯಾಂ ಸ್ನಾತ್ವಾ ಮಹಾನದ್ಯಾಂ ಶಿವಲೋಕಾಯ ಗಚ್ಛತಿ ॥ ೬೧ ॥

ತತಃ ಪೂರ್ವಂ ಶಿವಾ ಚಂಡೀ ಚಂಡಿಕಾಖ್ಯಾ ಮಹಾನದೀ ।
ನಿರ್ಯಾತಿ ಧವಲಾಖ್ಯಾತ್ತು ಪರ್ವತಾತ್ಸುಮಸೋಽಪರಾತ್ ॥ ೬೨ ॥

ಶಿವಲಿಂಗದ್ವಯಂ ತತ್ರ ನಾತಿದೂರೇ ವ್ಯವಸ್ಥಿತಂ ।
ಗೋಲೋಕಂ ಚಾಥ ಶೃಂಗಂ ಚ ಕ್ರೋಶಮಾತ್ರಾಂತರೇ ಸ್ಥಿತಂ ॥ ೬೩ ॥

ಚಂಡಿಕಾಯಾಂ ನರಃ ಸ್ನಾತ್ವಾ ಆರುಹ್ಯ ಧವಲೇಶ್ವರಂ ।
ದಕ್ಷಿಣಂ ಸಾಗರಂ ವೀಕ್ಷ್ಯ ಸ್ಪೃಷ್ಟ್ವಾ ಗೋಲಕಸಂಜ್ಞಕಂ ॥ ೬೪ ॥

ತತೋಽವತೀರ್ಯ ಚ ಪುನಃ ಶೃಂಗಿಣಂ ಭೂಮಿಪೀಠಕಂ ।
ಶಿವಪೂಜಾವಿಧಾನೇನ ಪೂಜಯಿತ್ವಾ ಮಹೇಶ್ವರಂ ॥ ೬೫ ॥

ಅಶ್ವಮೇಧಸ್ಯ ಯಜ್ಞಸ್ಯ ಫಲಂ ಸಂಪ್ರಾಪ್ಯ ಮಾನವಃ ।
ಸರ್ವಾನ್ ಕಾಮಾನವಾಪ್ಯೇಹ ದೇಹಾಂತೇ ಶಿವತಾಂ ವ್ರಜೇತ್ ॥ ೬೬ ॥

೬೧, ಅಲ್ಲಿಂದ ಪೂರ್ವಕ್ಕೆ ಲೀಲಾ ಎಂಬ ದೇವನದಿಯು ಇರುವುದು. ಆ ನದಿಯಲ್ಲಿ ಸ್ನಾನಮಾಡಿದವನು ಶಿವಲೋಕಕ್ಕೆಹೋಗುವನು.

೬೨. ಆಲ್ಲಿಂದಲೂ ಪೂರ್ವದಲ್ಲಿ ಮಂಗಳಕರಳಾದ ಚಂಡಿಕಾದೇವಿಯು ಇರುವಳು. ಮತ್ತು ಧವಲವೆಂಬ ಪರ್ವತೋತ್ತಮನಿಂದ ಹುಟ್ಟಿದ ಚಂಡಿಕಾ ಎಂಬ ನದಿಯೂ ಆಲ್ಲಿಯೇ ಹರಿಯುತ್ತಲಿರುವುದು.

೬೩-೬೬. ಅಲ್ಲಿಂದ ಮುಂದೆ ಸ್ವಲ್ಪದೂರಕ್ಕೆ ಹರಿದಾರಿದೂರದಲ್ಲಿ ಗೋಲೋಕೇಶ್ವರ, ಶೃಂಗೇಶ್ವರ ಎಂಬ ಎರಡು ಶಿವಲಿಂಗಗಳು ಇರುವುವು. ಚಂಡಿಕಾ ನದಿಯಲ್ಲಿ ಸ್ನಾನಮಾಡಿ, ಧವಲಾದ್ರಿಯನ್ನೇರಿ, ಅಲ್ಲಿ ಕಾಣುವ ದಕ್ಷಿಣಸಾಗರವನ್ನು ನೋಡಿ, ಗೋಲುಕೇಶ್ವರನನ್ನು ಸ್ಪರ್ಶನ ನಮಸ್ಕಾರಗಳಿಂದ ಪೂಜಿಸಿ, ಅಲ್ಲಿಂದ ಕೆಳಗಿಳಿದು ಭೂಮಿಯಲ್ಲಿರುವ ಶೃಂಗೇಶ್ವರ ಪೀಠಕ್ಕೆಬಂದು, ಅಲ್ಲಿ ಮಹೇಶ್ವರನನ್ನು ಶಿವ ಪೂಜಾಕ್ರಮದಂತೆ ಪೂಜಿಸಿದ ಮಾನವನು, ಅಶ್ವಮೇಧಯಾಗದ ಫಲವನ್ನು ಪಡೆಯುವನಲ್ಲದೆ ಇಹಲೋಕದಲ್ಲಿ ಸಕಲ ಇಷ್ಟಾರ್ಥಗಳನ್ನೂ ಪಡೆದು ದೇಹಾವಸಾನವಾದಮೇಲೆ ಶಿವಸಾಯುಜ್ಯವನ್ನು ಹೊಂದುವನು.

ಏತಾ ಯಾಃ ಕಥಿತಾ ನದ್ಯಃ ಸರ್ವಾ ವೈ ದಕ್ಷಿಣಸ್ರವಾಃ ।
ತಸ್ಮಾದೀಶಾನಕಾಷ್ಠಾಯಾಂ ಪರ್ವತೋ ಗಂಧಮಾದನಃ ॥ ೬೭ ॥

ಯತ್ರ ಶೃಂಗಾಹ್ವಯಂ ಲಿಂಗಂ ಶಿವಸ್ಯಾಸ್ತೇ ಮಹತ್ತರಂ ।
ಸ ಏವ ಪರ್ವತಶ್ರೇಷ್ಠಃ ಸ್ಯಾತ್ಪ್ರಃ ಕ್ಷೇತ್ರಸ್ಯ ಪಶ್ಚಿಮೇ ॥ ೬೮ ॥

ಧೃತ್ವಾ ಬ್ರಹ್ಮಶಿಲಾಂ ದೇವೀಂ ಸಾ ಚಿತ್ರಂ ಪ್ರತಿಗಾಮಿನೀ ।
ಗಂಧಮಾದನಕಸ್ಯಾಂತೇ ಭೃಂಗೇಶಸ್ಯ ಪದದ್ವಯಂ ॥ ೬೯ ॥

ಸ್ರವದ್ಗಂಗಾಜಲಂ ಚಾಸ್ತೇ ಕುಂಡಂ ತತ್ರಾಂತರಾಲಕಂ ।
ಅಂತರಾಲಕಕುಂಡೇ ತು ಸ್ನಾತ್ವಾ ಪೀತ್ವಾ ಚ ತಜ್ಜಲಂ ॥ ೭೦ ॥

ಭೃಂಗೇಶಸ್ಯ ತತೋ ದೃಷ್ಟ್ವಾ ಶಿಲಾಸಂಸ್ಥಂ ಪದದ್ವಯಂ ।
ಪೂಜಯಿತ್ವಾ ಮಹಾಭೃಂಗಂ ಗಾಣಾಪತ್ಯಮವಾಪ್ನುಯಾತ್ ॥ ೭೧ ॥

೬೭-೬೮. ಈಗ ಹೇಳಿದ ಈ ನದಿಗಳೆಲ್ಲವೂ ದಕ್ಷಿಣಮುಖವಾಗಿ ಹರಿಯುವವು ಅಲ್ಲಿಂದ ಈಶಾನ್ಯದಿಕ್ಕಿನಲ್ಲಿ ಗಂಧಮಾದನಪರ್ವತವಿರುವುದು. ಆ ಪರ್ವತದಲ್ಲಿ ಶಂಕರನ ಭೃಂಗೇಶ್ವರ ವೆಂಬ ಮಹಾಲಿಂಗವಿರುವುದು. ಆದುದರಿಂದ ಆ ಬೆಟ್ಟವು ತುಂಬಾ ಶ್ರೇಷ್ಠವಾದ್ದು.

೬೯. ಆ ಕ್ಷೇತ್ರದ ಪಶ್ಚಿಮದಲ್ಲಿ ಗಂಧಮಾದನಪರ್ವತದ ಕೊನೆಯಲ್ಲಿ ದೇವೀ ಸ್ವರೂಪವಾದ ಬ್ರಹ್ಮಶಕ್ತಿಶಿಲೆ ಇರುವುದು. ಆ ಶಿಲೆಯಲ್ಲಿ ಭೃಂಗೇಶ್ವರನ ಹೆಜ್ಜೆಗಳೆರಡು (ರುದ್ರಪಾದಗಳು) ಮೂಡಿರುವವು.

೭೦-೭೧. ಮತ್ತು ಅಲ್ಲಿ ಗಂಗಾಜಲವನ್ನು ಪ್ರಸವಿಸುತ್ತಲಿರುವ ಅಂತರಾಳ ಕುಂಡ ವೆಂಬ ಒಂದು ತೀರ್ಥಕುಂಡವಿರುವುದು. ಆ ಅಂತರಾಲಕುಂಡದಲ್ಲಿ ಸ್ನಾನ ಮಾಡಿ ಅದರ ಪುಣ್ಯಜಲವನ್ನು ಪಾನಮಾಡಿ, ಬಳಿಕ ಬ್ರಹ್ಮಶಿಲೆಯಲ್ಲಿರುವ ಭೃಂಗೇಶ್ವರ ಪಾದಗಳ ದರ್ಶನವನ್ನು ಮಾಡಿ ಮಹಾಭೃಂಗೇಶ್ವರನನ್ನು ಪೂಜಿಸಿದವನು, ಶಿವಗಣಗಳ ನಾಯಕನಾಗುವನು.

ಶಂಭುಪಾದಸಮುದ್ಭೂತಮಂತರಾಲದೃಶಾಕರಂ ।
ವೃಷಧ್ವಜಪದಾನಾಂ ತ್ವಂ ಸಂಯೋಜಯ ಮಹಾವೃಷ ॥ ೭೨ ॥

ಇತ್ಯನೇನ ತು ಮಂತ್ರೇಣ ಸ್ನಾನಂ ಕೃತ್ವಾಂತರಾಜಲೇ ।
ಭೃಂಗದೇವಂ ತತಃ ಪಶ್ಯೇತ್ಕುಬ್ಜಪೀಠಾಂತವಾಸಿನಂ ॥ ೭೩ ॥

ಮಣಿಕೂಟಸ್ಯಾಥಗಿರೇರ್ಗಂಧಮಾದನಕಸ್ಯ ಚ ।
ಮಧ್ಯೇ ಸ್ರವತಿ ಲೌಹಿತ್ಯೋ ಬ್ರಹ್ಮಣಾಗ್ನಿಸಮುತ್ಥಿತಃ ॥ ೭೪ ॥

ವರ್ಣಾಶಾಯಾ ದಕ್ಷಿಣೇನ ಲೌಹಿತ್ಯೋ ನಾಮ ಸಾಗರಃ ।
ಮಣಿಕೂಟಃ ಸ್ಥಿತಃ ಪೂರ್ವೇ ಹಯಗ್ರೀವೋ ಹರಿರ್ಯತಃ ॥ ೭೫ ॥

ಸ ಹಯಗ್ರೀವರೂಪೇಣ ವಿಷ್ಣುರ್ಹತ್ವಾ ಜ್ವರಾಸುರಂ ।
ನಿಹತ್ಯ ಸ ಹಯಗ್ರೀವಃ ಕ್ರೀಡಾಯೈ ಯತ್ರ ಸ ಸ್ಥಿತಃ ॥ ೭೬ ॥

೭೨-೭೩. "ಶಂಕರನ ಪಾದಕಮಲದಿಂದ ಜನಿಸಿದುದೂ, ಜ್ಞಾನದೃಷ್ಟಿಯನ್ನುಂಟುಮಾಡುವುದೂ, ಧರ್ಮಮೂರ್ತಿಯೂ ಆದ ಎಲೈ ಕುಂಡಶ್ರೇಷ್ಠವೇ, ನೀನು ಶಂಕರನ ಅಡಿದಾವರೆಗಳಲ್ಲಿ ನನ್ನನ್ನು ಸೇರಿಸುವವನಾಗು!" ಎಂಬ ಮಂತ್ರದಿಂದ ಅಂತರಾಲಕುಂಡದ ಜಲದಲ್ಲಿ ಸ್ನಾನಮಾಡಿ, ಬಳಿಕ ಕುಬ್ಜಪೀಠದಲ್ಲಿ ನೆಲಸಿರುವ ಮಹಾ ಭೃಂಗೇಶ್ವರನ ದರ್ಶನವನ್ನು ಮಾಡಬೇಕು.

೭೪. ಮಣಿಕೂಟಗಿರಿ, ಗಂಧಮಾದನಗಿರಿ ಇವುಗಳ ಮಧ್ಯದಲ್ಲಿ ಬ್ರಹ್ಮನು ಅಗ್ನಿಯಿಂದ ಹೊರಡಿಸಿದ ಲೌಹಿತ್ಯವೆಂಬ ನದವು ಹರಿಯುತ್ತಲಿರುವುದು.

೭೫. ವರ್ಣಾನದಿಯಿಂದ ದಕ್ಷಿಣಕ್ಕೆ ಲೌಹಿತ್ಯವೆಂಬ ಸಮುದ್ರವಿರುವುದು. ಅಲ್ಲಿಂದ ಪೂರ್ವಕ್ಕೆ ಮಣಿಕೂಟವೆಂಬ ಪರ್ವತವಿರುವುದು. ಆ ಪರ್ವತದಲ್ಲಿ ಹಯಗ್ರೀವಾವತಾರಿಯಾದ ವಿಷ್ಣುವು ನೆಲಸಿರುವನು.

೭೬. ಆ ವಿಷ್ಣುವು ಹಯಗ್ರೀವರೂಪದಿಂದ ಜ್ವರಾಸುರನನ್ನು ಸಂಹರಿಸಿ ಆ ಬಳಿಕ ಈ ಮಣಿಕೂಟಪರ್ವತದಲ್ಲಿ ಹಯಗ್ರೀವರೂಪದಿಂದ ವಿಹರಿಸುತ್ತಲಿರುವನು.

ಹತ್ವಾ ಜ್ವರಂ ತಥಾ ವಿಷ್ಣುಸ್ತತ್ರ ವಾಸಮಥಾಕರೋತ್ ।
ನರದೇವಾಸುರಾದೀನಾಂ ಯಥಾ ಭವತಿ ವೈ ಹಿತಂ ॥ ೭೭ ॥

ಜ್ವರೇಣಾಪೀಡತತನುರ್ಜ್ವರಂ ಹತ್ವಾ ಮಹಾಸುರಂ ।
ಸರ್ವಲೋಕಹಿತಾರ್ಥಾಯ ಸೋಽಗದಸ್ಥಾನಮಾಹರತ್ ॥ ೭೮ ॥

ಅಗದಸ್ಥಾನಸಂಭೂತಂ ಸಂಜಾತಂ ಚ ಮಹಾಸುರಂ ।
ತಸ್ಯ ಸ್ವಯಂ ಹಯಗ್ರೀವೋ ನಾಮ ಚಕ್ರೇಽಪುನರ್ಭವಂ ॥ ೭೯ ॥

ನ ಪುನರ್ಜಾಯತೇ ಯಸ್ಮಾತ್ತತ್ರ ಸ್ನಾತ್ವಾ ನರೋತ್ತಮಃ ।
ಅಪುನರ್ಭವಸಂಜ್ಞಂ ತತ್ಸರಸ್ತು ಪರಿಕೀರ್ತಿತಂ ॥ ೮೦ ॥

ಮಣಿಕೂಟಾಚಲೇ ವಿಷ್ಣುರ್ಹಯಗ್ರೀವಸ್ವರೂಪಧೃಕ್ ।
ಶತವ್ಯಾಮಪ್ರಮಾಣೇನ ವಿಸ್ತರೇಣೈವ ಶೋಭಿತಂ ॥ ೮೧ ॥

ತಸ್ಮಾತ್ಪೂರ್ವೇ ಭದ್ರಕಾಮಃ ಪರ್ವತಸ್ತು ತ್ರಿಕೋಣಕಃ ।
ಯತ್ರ ಕಾಲಹಯೋ ನಾಮ ಶಿವಲಿಂಗೋ ವ್ಯವಸ್ಥಿತಃ ॥ ೮೨ ॥

೭೭-೮೦. ಮನುಷ್ಯರು, ದೇವತೆಗಳು, ಅಸುರರು ಇವರುಗಳ ಹಿತಕ್ಕಾಗಿ ಆ ಜ್ವರಾಸುರನನ್ನು ಸಂಹರಿಸಿ ವಿಷ್ಣುವು ಆಮೇಲೆ ಎಲ್ಲರನ್ನೂ ಅನುಗ್ರಹಿಸುತ್ತಾ ಈ ಪರ್ವತದಲ್ಲಿಯೇ ವಾಸವಾಗಿರುವನು. ದೇವಹಿಂಸಕನಾದ ಈ ಜ್ವರನೆಂಬ ಮಹಾಸುರನನ್ನು ಸಂಹರಿಸಿ ಸಕಲಜನಗಳ ಹಿತಕ್ಕಾಗಿ ಅಗದವೆಂಬ ಸರಸ್ಸನ್ನು ನಿರ್ಮಿಸಿದನು. ಈ ಮಹಾಸುರನನ್ನು ಸಂಹರಿಸಿ ರೋಗನಿವಾರಣೆಗಾಗಿ ಸ್ನಾನವನ್ನು ಮಾಡಲು ಈ ಸರಸ್ಸನ್ನು ನಿರ್ಮಿಸಿದುದರಿಂದ ಇದಕ್ಕೆ ಅಗದ ಎಂದರೆ ರೋಗವಿಲ್ಲದ್ದು ಎಂದು ಪೆಸರಾಯಿತು.ಹಯಗ್ರೀವಸ್ವರೂಪಿಯಾದ ವಿಷ್ಣುವು ಆ ಸರಸ್ಸಿಗೆ "ಅಪುನರ್ಭವ" ವೆಂಬ ಹೆಸರನ್ನಿಟ್ಟನು. ಆ ಸರಸ್ಸಿನಲ್ಲಿ ಸ್ನಾನಮಾಡಿದ ನರೋತ್ತಮನು ಪುನಃ ಜನ್ಮವನ್ನು ಪಡೆಯುವುದಿಲ್ಲವಾದಕಾರಣ ಆ ಸರಸ್ಸಿಗೆ ಅಪುನರ್ಭವವೆಂಬ ಹೆಸರನ್ನು ವಿಷ್ಣುವು ಇಟ್ಟನು.

೮೧. ಮಣಿಕೂಟಪರ್ವತದಲ್ಲಿ ವಿಷ್ಣುವು ನೂರು ಮಾರು ವಿಸ್ತಾರವಾಗಿರುವಂತಹ ಹಯಗ್ರೀವರೂಪವನ್ನು ಧರಿಸಿ ಶೋಭಿಸುತ್ತಲಿರುವನು.

೮೨. ಅಲ್ಲಿಂದ ಪೂರ್ವದಲ್ಲಿ ಭದ್ರಕಾಮವೆಂಬ ತ್ರಿಕೋಣಾಕಾರವಾಗಿರುವ ಪರ್ವತವಿರುವುದು. ಅಲ್ಲಿ ಕಾಲಹಯವೆಂಬ ಶಿವಲಿಂಗವಿರುವುದು.

ತಸ್ಯಾಸನ್ನೇ ದಕ್ಷಿಣಸ್ಯಾಮಪುನರ್ಭವಕುಂಡಕಂ ।
ಅಪುನರ್ಭೂಸರಸ್ತೀರೇ ಪರ್ವತೇ ಭದ್ರಕಾಮಜೇ ॥ ೮೩ ॥

ಹರವೀಥೀತಿ ವಿಖ್ಯಾತಾ ಶಿಲಾ ಬ್ರಹ್ಮಸ್ವರೂಪಿಣೀ ।
ತತ್ರ ಯೋಗೀ ಮಹಾದೇವೋ ಯೋಗಜ್ಞೋ ಧ್ಯಾನತತ್ಪರಃ ॥ ೮೪ ॥

ಯಂ ದೃಷ್ಟ್ವಾ ಯೋಗವಾನ್ಮರ್ತ್ಯೋ ಮೃತೋ ಮೋಕ್ಷಮವಾಪ್ನುಯಾತ್
ತಸ್ಯಾಮೇವ ಶಿಲಾಯಾಂ ತು ಗೋಕರ್ಣೋ ನಾಮ ಶಂಕರಃ ॥ ೮೫ ॥

ಗೋಕರ್ಣೋ ನಿಹತೋ ಯೇನ ಅಂಧಕಸ್ಯ ಸಖಾ ಪುರಾ ।
ಗೋಕರ್ಣಸ್ಯ ತಥೈಶಾನ್ಯಾಂ ಕೇದಾರಃ ಶಂಭುರಂತತಃ ॥ ೮೬ ॥

ತತೋಽಂಧಕಸಮಃ ಪ್ರೋಕ್ತಃ ಕಮುಲಾಕರಭೋಗಧೃಕ್ ।
ಯತ್ರಾಸ್ತಿ ಶಂಭುಃ ಕೇದಾರಃ ಸ ಗಿರಿರ್ಮದನಾಹ್ವಯಃ ॥ ೮೭ ॥

---

೮೩. ಆ ಭದ್ರಕಾಮಪರ್ವತದಲ್ಲಿಯೇ ಕಾಲಹಯಲಿಂಗಕ್ಕೆ ಸಮೀಪದಲ್ಲಿ ದಕ್ಷಿಣಕ್ಕೆ ಅಪುನರ್ಭವ ಕುಂಡವಿರುವುದು. ಅಪುನರ್ಭವಸರೋವರದ ದಡದಲ್ಲಿಯೇ ಆ ಕುಂಡವು ಇರುವುದು.

೮೪. ಅಲ್ಲದೆ ಆ ಪರ್ವತದಲ್ಲಿ ಹರವೀಥೀ ಎಂಬ ಬ್ರಹ್ಮಶಕ್ತಿಶಿಲೆಯು ಇರುವುದು. ಅಲ್ಲಿ ಯೋಗಜ್ಞನೂ ಯೋಗಿಯೂ ಆದ ಮಹಾದೇವನು ಧ್ಯಾನ ಮಗ್ನನಾಗಿ ಕುಳಿತಿರುವನು.

೮೫. ಆ ಮಹಾದೇವನನ್ನು ಯೋಗಿಯಾದವನು ದರ್ಶನಮಾಡಿದರೆ ಮುಕ್ತಿಯನ್ನು ಪಡೆವನು. ಅದೇ ಹರವೀಥಿಶಿಲೆಯಲ್ಲಿ ಗೋಕರ್ಣನೆಂಬ ಹೆಸರಿನಿಂದ ಶಂಕರನು ನೆಲಸಿರುವನು.

೮೬. ಅಂಧಕಾಸುರನ ಮಿತ್ರನಾದ ಗೋಕರ್ಣಾಸುರನನ್ನು ಶಂಕರನು ಸಂಹರಿಸಿದ್ದರಿಂದ ಅಲ್ಲಿ ನೆಲಸಿರುವ ಶಂಕರನಿಗೆ ಗೋಕರ್ಣೇಶ್ವರನೆಂಬ ಹೆಸರು ಬಂದಿತು. ಗೋಕರ್ಣನ ಈಶಾನ್ಯದಲ್ಲಿ ಕೇದಾರೇಶ್ವರನು ಇರುವನು.

೮೭. ಅಂಧಕಾಸುರನಂತೆ ಬಲಿಷ್ಠನಾದ ಮತ್ತೋರ್ವ ದೈತ್ಯನನ್ನು ಸಂಹರಿಸಿ ಕೇದಾರೇಶ್ವರನು ಅಲ್ಲಿಯೇ ನೆಲಸಿರುವನು. ಅವನು ನೆಲಸಿರುವ ಪರ್ವತಕ್ಕೆ ಮದನಾಚಲವೆಂದು ಹೆಸರು. ಆ ಮದನಗಿರಿಯಲ್ಲಿಯೇ ಪ್ರಪಂಚಪ್ರಳಯವನ್ನು ಮಾಡುವವನೂ ಮಹಾತ್ಮನೂ ಆದ ಕಮಲೇಶ್ವರನು ನೆಲಸಿರುವನು.

ತತ್ರೈವ ಕಮಲಃ ಪ್ರೋಕ್ತಃ ಸ ಮಹಾತ್ಮಾ ಲಯಪ್ರದಃ।
ಸ್ನಾತ್ವಾಽಪುನರ್ಭವಜಲೇ ದೃಷ್ಟ್ವಾ ಗೋಕರ್ಣಯೋಗಿನೌ ॥ ೮೮ ॥

ಕೇದಾರಕಮಲೌ ದೃಷ್ಟ್ವಾ ಮುಕ್ತಿರ್ಮಾಧವದರ್ಶನೇ।
ದೃಷ್ಟ್ವಾ ತು ಮಾಧವಂ ದೇವಂ ತತಃ ಕಾಮಂ ವಿಲೋಕಯೇತ್ ॥ ೮೯ ॥

ಕಾಮಂ ವಿಲೋಕ್ಯ ತತ್ರಸ್ಥೋ ನಿರೀಕ್ಷೇದಪುನರ್ಭವಂ।
ಏವಂ ಕೃತ್ವಾ ಪೀಠಯಾತ್ರಾಮನೇನ ಕ್ರಮಯೋಗತಃ ॥ ೯೦ ॥

ಸಪ್ತ ಪೂರ್ವಾನ್ ಸಪ್ತಪರಾನಾತ್ಮಾನಂ ದಶ ಪಂಚ ಚ।
ಪಿತೄನುದ್ಧೃತ್ಯ ತ್ರಿದಿವಂ ನಯೇತ್ಸ ಪುರುಷೋತ್ತಮಃ ॥ ೯೧ ॥

ವಿಷ್ಣುಸ್ಥಾನಸಮುದ್ಭೂತಾಪುನರ್ಭವ ಹರೀಶ್ವರ।
ಪಾಪಂ ಹರ ಸ್ವರ್ಗಹೇತೋ ಜಿತಸಂಗ ಮಹೋದಧೇ ॥ ೯೨ ॥

---

೮೮. ಅಪುನರ್ಭವಸರಸ್ಸಿನ ಜಲದಲ್ಲಿಸ್ನಾನಮಾಡಿ ಗೋಕರ್ಣೇಶ್ವರ ಮತ್ತು ಯೋಗೀಶ್ವರರನ್ನೂ, ಕೇದಾರೇಶ್ವರಕಮಲೇಶ್ವರರನ್ನೂ ದರ್ಶನಮಾಡಿ ಮುಂಪೆ ಮಾಧವನ ದರ್ಶನವನ್ನು ಮಾಡಿದವನಿಗೆ ಮುಕ್ತಿಯು ಲಭಿಸುವುದು.

೮೯. ಮಾಧವದೇವನನ್ನು ನೋಡಿ ಬಳಿಕ ಕಾಮೇಶ್ವರನನ್ನು ದರ್ಶನಮಾಡ ಬೇಕು. ಅಲ್ಲಿಯೇ ಇದ್ದು ಬಳಿಕ ಅಪುನರ್ಭವಕುಂಡದ ದರ್ಶನಮಾಡಬೇಕು.

೯೦-೯೧. ಈ ಕ್ರಮದಿಂದ ಪೀಠಯಾತ್ರೆಯನ್ನು ಯಾವನು ಮಾಡುವನೋ ಆ ಪುರುಷಶ್ರೇಷ್ಠನು ತನ್ನ ವಂಶದಲ್ಲಿ ಹಿಂದಿನ ಏಳುಮಂದಿ ಪಿತೃಗಳನ್ನೂ, ಮುಂದಿನ ಏಳುಜನಗಳನ್ನೂ ಒಟ್ಟು ಹದಿನಾಲ್ಕುಜನ ಪಿತೃಗಳನ್ನೂ ಉದ್ಧರಿಸಿ, ಅವರೊಡನೆ ತಾನೂ ಸ್ವರ್ಗವನ್ನೈದುವನು.

೯೨. ಎಲೈ ಅಪುನರ್ಭವಕುಂಡವೇ, ನೀನು ವಿಷ್ಣುವಿನ ಸ್ಥಾನದಲ್ಲಿ ಜನಿಸಿರುವೆ. ಸಂಗದೋಷವಿಲ್ಲದವನು, ಸಮುದ್ರದಂತೆ ಗಂಭೀರವಾದವನು, ಸ್ವರ್ಗಪ್ರಾಪ್ತಿಗೆ ಕಾರಣನು, ಇಂತಹ ನೀನು ನನ್ನ ಪಾಪವನ್ನು ಪರಿಹರಿಸು ಎಂಬ ಈ ಮಂತ್ರದಿಂದ ಆ ಅಪುನರ್ಭವಕುಂಡದಲ್ಲಿ ಸ್ನಾನಮಾಡಬೇಕು.

ಅನೇನೈವ ತು ಮಂತ್ರೇಣ ಸ್ನಾಯಾದ್ವೀರೋಽಪುನರ್ಭವೇ ।
ಹಯಗ್ರೀವಸ್ಯ ತಂತ್ರಂ ತು ಪುರೈವ ಪ್ರತಿಪಾದಿತಂ ॥ ೯೩ ॥

ರೂಪಂ ಶೃಣು ಮಹಾರಾಜ ಚಿಂತಯೇತ್ತಸ್ಯ ಯಾದೃಶಂ ।
ಕರ್ಪೂರಕುಂದಧವಲಃ ಸಿತಪದ್ಮೋಪರಿ ಸ್ಥಿತಃ ॥ ೯೪ ॥

ಚತುರ್ಭುಜಃ ಕುಂಡಲಾದಿನಾನಾಲಂಕಾರಭೂಷಿತಃ ।
ವರಾಭಯಯುಹಸ್ತಸ್ತು ವಾಮಹಸ್ತದ್ವಯೇನ ತು ॥ ೯೫ ॥

ಪುಸ್ತಕಂ ಸಿತಪದ್ಮಂ ಚ ಧತ್ತೇ ಹಸ್ತದ್ವಯೇಪರೇ ।
ಶ್ರೀವತ್ಸಕೌಸ್ತುಭೋರಸ್ಕಃ ಕ್ವಚಿಚ್ಚ ಗರುಡಾಸನಃ ॥ ೯೬ ॥

ಸರ್ವ ಉತ್ತರತಂತ್ರೋಕ್ತಃ ಕ್ರಮೋ ಗ್ರಾಹ್ಯಃ ಪ್ರಪೂಜನೇ ।
ವಿಷ್ವಕ್ಸೇನೋ ಹಯಾರೇಸ್ತು ನಿರ್ಮಾಲ್ಯಧೃಗ್ವಿಸರ್ಜನೇ ॥ ೯೭ ॥

೯೩-೯೭. ಹಯಗ್ರೀವನನ್ನು ಪೂಜಿಸುವ ತಂತ್ರಕ್ರಮವು ಹಿಂದೆಯೇ ಪ್ರತಿಪಾದಿತವಾಗಿದೆ. ಎಲೈ ಮಹಾರಾಜ! ಆ ಹಯಗ್ರೀವ ದೇವನನ್ನು ಧ್ಯಾನಮಾಡಲು ಯೋಗ್ಯವಾದ ರೂಪವನ್ನು ಕೇಳು, ಆ ದೇವನು ಕರ್ಪೂರ ಮತ್ತು ಕುಂದಪುಷ್ಪದಂತೆ ಶುಭ್ರವಾದ ಶರೀರಕಾಂತಿಯಿಂದ ಬೆಳಗುತ್ತಿರುವನು. ಬಿಳಿಯ ಕಮಲದಲ್ಲಿ ಕುಳಿತಿರುವನು. ನಾಲ್ಕು ಭುಜಗಳಿಂದಲೂ, ಕುಂಡಲವೇ ಮುಂತಾದ ಅನೇಕ ಆಲಂಕಾರಗಳಿಂದಲೂ ಶೋಭಿಸುತ್ತಿರುವನು. ಎಡಗೈಗಳಿರಡರಲ್ಲಿ ವರದ ಮತ್ತು ಅಭಯ ಮುದ್ರೆಯನ್ನೂ, ಬಲಗೈಗಳಲ್ಲಿ ಪುಸ್ತಕ ಮತ್ತು ಬಿಳಿಯ ಕಮಲಗಳನ್ನೂ ಧರಿಸಿರುವನು. ಎದೆಯಲ್ಲಿ ಶ್ರೀವತ್ಸವೆಂಬ ಚಿನ್ಹೆಯನ್ನೂ, ಕೌಸ್ತುಭ ಮಣಿಯನ್ನೂ ಧರಿಸಿರುವನು. ಈರೀತಿ ಧ್ಯಾನಮಾಡಬೇಕು. ಕೆಲವೆಡೆ ಗರುಡನಮೇಲೆ ಕುಳಿತಿರುವಂತೆಯೂ ಧ್ಯಾನ ಮಾಡಬೇಕು. ಉತ್ತರ ತಂತ್ರದಲ್ಲಿ ಹೇಳಿದ ಎಲ್ಲಾ ಕ್ರಮಗಳನ್ನೂ ಹಯಗ್ರೀವ ಪೂಜೆಯಲ್ಲಿ ಅನುಸರಿಸಬೇಕು. ಪೂಜಾನಂತರ ವಿಸರ್ಜನೆ ಮಾಡುವಾಗ ವಿಷ್ವಕ್ಸೇನ ಎಂಬುವವನು ಹಯಗ್ರೀವನ ನಿರ್ಮಾಲ್ಯವನ್ನು ಧರಿಸುವವನು. ಈ ಹಯಗ್ರೀವ ದೇವನು ಶಿಲಾರೂಪದಿಂದ ಸದಾ ಅಲ್ಲಿ ನೆಲಸಿರುವನು.

ಶಿಲಾರೂಪಪ್ರತಿಚ್ಛನ್ನಃ ಸದಾಸ್ತೇ ಗರುಡಧ್ವಜಃ ।
ಕ್ರೀಡಮಾನೋಽಥ ಗಂಧರ್ವೈಃ ಸ್ಥಿತೋ ಲೋಕಹಿತಾಯ ಚ ॥ ೯೮ ॥

ಹಯಗ್ರೀವಸ್ಯ ಮಂತ್ರಸ್ಯ ಸಿದ್ಧಿರ್ಲಕ್ಷದ್ವಯೇನ ತು ।
ಯಾವಕೈಃ ಪಾಯಸೈರಾಜ್ಯೈಹೋರ್ಮಂ ಕುರ್ಯಾತ್ ಪುರಶ್ಚರೇತ್ ॥ ೯೯ ॥

ಏಕೇನೈವ ತು ರಾಜೇಂದ್ರ ಪುರಶ್ಚರಣಕರ್ಮಣಾ ।
ಇಷ್ಟಸಿದ್ಧಿಮವಾಪ್ನೋತಿ ವಿಷ್ಣುಲೋಕಮವಾಪ್ನುಯಾತ್ ॥ ೧೦೦ ॥

ಮಂತ್ರೈಸ್ತು ಪಂಚವಕ್ತ್ರಾಣಾಂ ಪಂಚಮೂರ್ತೀಃ ಸದಾರ್ಚಯೇತ್ ।
ಪೂರ್ವೇ ತತ್ಪುರುಷಾದೀನಾಂ ಕಾಮಾದೀ ಪೂಜಕೋ ದ್ವಿಜಃ ॥ ೧೦೧ ॥

ಕಾಮಸ್ತತ್ಪುರುಷೋ ಜ್ಞೇಯೋ ಯೋಗೀಶಾನಃ ಪ್ರಕೀರ್ತಿತಃ ।
ಅಘೋರೋ ಹ್ಯಥ ಗೋಕರ್ಣಃ ಕೇದಾರೋ ವಾಮದೇವಕಃ ॥ ೧೦೨ ॥

ಸದ್ಯೋಜಾತಸ್ತು ಕಮಲೋ ಮಂತ್ರೈಸ್ತೈಸ್ತು ಪ್ರಪೂಜಯೇತ್ ।
ಪರ್ವತಶ್ಚೈವ ಕೇದಾರಃ ಶಿವಗಂಗಾ ತು ಕಾಲಿಕಾ ॥ ೧೦೩ ॥

೯೮-೧೦೦. ಗಂಧರ್ವರೊಂದಿಗೆ ವಿಹರಿಸುತ್ತಾ ಆ ದೇವನು ಲೋಕಹಿತಕ್ಕಾಗಿ ಅಲ್ಲಿಯೇ ನೆಲಸಿರುವನು. ಹಯಗ್ರೀವ ಮಂತ್ರವನ್ನು ಲಕ್ಷಬಾರಿ ಜಪಿಸಿದರೆ ಸಿದ್ಧಿಯಾಗುವುದು. ಈ ದೇವನ ಪುರಶ್ಚರಣೆಯಲ್ಲಿ, ಹೋಮಮಾಡುವಾಗ ಅಕ್ಕಿಯಿಂದ ಮಾಡಿದ ಪಾಯಿಸದಿಂದಲೂ, ತುಪ್ಪದಿಂದಲೂ ಹೋಮವನ್ನು ಮಾಡಬೇಕು. ಎಲೈ ರಾಜೇಂದ್ರ! ಒಂದುಬಾರಿ ಪುರಶ್ಚರಣೆಯಿಂದಲೇ ಇಹದಲ್ಲಿ ಇಷ್ಟಾರ್ಥಸಿದ್ಧಿಯನ್ನು ಪಡೆದು, ಪರವಲ್ಲಿ ವಿಷ್ಣುಲೋಕವನ್ನು ಪಡೆಯುವನು.

೧೦೧. ಶಂಕರನ ತತ್ಪುರುಷವೇ ಮೊದಲಾದ ಐದು ಪಂಚಮೂರ್ತಿಗಳನ್ನು ಅವರವರ ಮಂತ್ರಗಳಿಂದಲೇ ಅರ್ಚಿಸಬೇಕು. ಆ ಪಂಚಮೂರ್ತಿಗಳ ಪೂರ್ವಭಾಗದಲ್ಲಿ ಕಾಮನೇ ಮೊದಲಾದವರನ್ನು ಕ್ರಮವಾಗಿ ಪೂಜಿಸಬೇಕು.

೧೦೨-೧೦೩. ಕಾಮ, ತತ್ಪುರುಷ, ಯೋಗೀಶ್ವರ, ಈಶಾನ, ಗೋಕರ್ಣ ಅಘೋರ, ಕೇದಾರ, ವಾಮದೇವ, ಕಮಲೇಶ್ವರ, ಸದ್ಯೋಜಾತ, ಈ ದೇವತೆಗಳನ್ನು ಇದೇ ಸ್ಥಾನಕ್ರಮದಿಂದಲೇ ಆಯಾಯ ಮಂತ್ರಗಳಿಂದ ಪೂಜಿಸಬೇಕು. ಹಾಗೆಯೇ

ಹಯಗ್ರೀವಸ್ಯ ಪೂರ್ವಸ್ಯಾಂ ಕೇದಾರಸ್ಯ ತು ಪಶ್ಚಿಮೇ ।
ಛಾಯಾಭೋಗಾಭ್ಯಯಂ ಸ್ಥಾನಂ ಪುರೀಭೋಗವತೀ ತಥಾ ॥ ೧೦೪ ॥

ಯೋ ಗಚ್ಛೇನ್ಮಣಿಕೂಟಾಖ್ಯಾಂ ಕೌತುಕಾಚ್ಚಾಪುನರ್ಭವಂ ।
ಸ ಸರ್ವತೀರ್ಥಯಾತ್ರಾಣಾಂ ಫಲಮಾಪ್ನೋತಿ ಮಾನವಃ ॥ ೧೦೫ ॥

ಜ್ಯೇಷ್ಠೇ ಮಾಸಿ ಸಿತೇ ಪಕ್ಷೇ ಪಂಚದಶ್ಯಷ್ಟಮಿಷು ಚ ।
ಸ್ನಾತ್ವಾಪುನರ್ಭವಜಲೇ ಯಃ ಪಶ್ಯೇದ್ವಿಧಿವದ್ಧರಿಂ ॥ ೧೦೬ ॥

ಸ ಸರ್ವಂ ಕುಲಮುದ್ಧೃತ್ಯ ವಿಷ್ಣುಸಾಯುಜ್ಯಮಾಪ್ನುಯಾತ್ ।
ಜ್ಯೇಷ್ಠಂ ತು ಸಕಲಂ ಮಾಸಂ ನಿತ್ಯಂ ಪಶ್ಯೇತ್ತು ಯೋ ಹರಿಂ ॥ ೧೦೭ ॥

ಕೇದಾರವೆಂಬ ಪರ್ವತ, ಶಿವಲಿಂಗಾ ಕಾಲಿಕಾ ಎಂಬ ನಿನಿಗಳು ಇವುಗಳನ್ನೂ ಪೂಜಿಸಬೇಕು.

೧೦೪. ಹಯಗ್ರೀವದೇವನ ಪೂರ್ವದಲ್ಲಿ, ಕೇದಾರೇಶ್ವರನಿಗೆ ಪಶ್ಚಿಮಕ್ಕೆ ಛಾಯಾಭೋಗವೆಂಬ ಸ್ಥಾನವೂ, ಭೋಗವತೀ ಎಂಬ ಪುರಿಯೂ ಇರುವುದು.

೧೦೫. ಯಾವ ಮಾನವನು ಮಣಿಕೂಟಶೈಲ ಮತ್ತು ಅಪುನರ್ಭವಕುಂಡ ಇವುಗಳ ಯಾತ್ರೆಯನ್ನು ಮಾಡುವನೋ ಅವನು ಸಕಲತೀರ್ಥಯಾತ್ರೆಗಳ ಫಲವನ್ನೂ ಪಡೆಯುವನು.

೧೦೬. ಜ್ಯೇಷ್ಠಶುಕ್ಲ ಪೂರ್ಣಿಮೆ, ಅಷ್ಟಮಿಗಳಲ್ಲಿ ಅಪುನರ್ಭವಕುಂಡದಲ್ಲಿ ಸ್ನಾನಮಾಡಿ ವಿಧಿವತ್ತಾಗಿ ಹಯಗ್ರೀವನನ್ನು ದರ್ಶನಮಾಡುವ ಮಾನವನು ತನ್ನ ಕುಲವನ್ನು ಸಂಪೂರ್ಣವಾಗಿ ಉದ್ಧರಿಸುವನಲ್ಲದೆ ಪರದಲ್ಲಿ ವಿಷ್ಣುಸಾಯುಜ್ಯವನ್ನು ಪಡೆಯುವನು.

೧೦೭. ಜ್ಯೇಷ್ಠಮಾಸವೆಲ್ಲ ಪೂರ್ಣವಾಗಿ ನಿತ್ಯವೂ ಹರಿಯ ದರ್ಶನವನ್ನು ಕ್ರಮದಂತೆ ಯಾವನು ಮಾಡುವನೋ ಅವನು ತನ್ನ ವಂಶದ ಸಮಸ್ತ ಪಿತೃಗಳೊಡನೆ ವಿಷ್ಣುಸಾಯುಜ್ಯವನ್ನು ಪಡೆಯುವನು.

ಹರೌ ವಿಲೀನತಾಂ ಯಾತಿ ಸ ಸರ್ವೈಃ ಸಹಿತಃ ಕುಲೈಃ ।
ಏತತ್ತೇ ಕಥಿತಂ ಪುಣ್ಯಂ ಮಣಿಕೂಟಾಹ್ವಯಂ ಪರಂ ॥ ೧೦೮ ॥

ವಾರಾಣಸೀತೋ ಹ್ಯಧಿಕಂ ಸಿದ್ಧವಿದ್ಯಾಧರಾರ್ಚಿತಂ ।
ಯಃ ಪಠೇಚ್ಛೃಣುಯಾದ್ವಿಪ್ರೋ ಮಣಿಕೂಟಸ್ಯ ನಿರ್ಣಯಂ ॥ ೧೦೯ ॥

ಸ ಸರ್ವವೇದಸ್ಯ ಫಲಂ ಪ್ರಾಪ್ನೋತ್ಯೇವ ನ ಸಂಶಯಃ ।

॥ ಇತಿಶ್ರೀಕಾಲಿಕಾಪುರಾಣೇ ಏಕಾಶೀತಿತಮೋಧ್ಯಾಯಃ ॥

೧೦೮-೧೦೯. ಎಲೈ! ರಾಜನೇ,ಸಿದ್ಧರು, ವಿದ್ಯಾಧರರು ಮುಂತಾದವರು ಗಳಿಂದ ಅರ್ಚಿಸಲ್ಪಡುತ್ತಲಿರುವ ಈ ಮಣಿಕೂಟಾಚಲವೆಂಬ ಪುಣ್ಯಕ್ಷೇತ್ರವನ್ನು ನಿನಗೆ ಹೇಳಿದುದಾಯಿತು. ಇದು ವಾರಾಣಸಿಗಿಂತಲೂ ಶ್ರೇಷ್ಠವಾದ ಕ್ಷೇತ್ರವು. ಮಣಿ ಕೂಟಾ ಚಲದ ಈ ಮಹಾತ್ಮ್ಯವನ್ನು ಯಾವನು ಪಠಿಸುವನೋ ಮತ್ತು ಶ್ರವಣ ಮಾಡುವನೋ ಅವನು ಸಕಲ ವೇದಗಳ ಫಲವನ್ನೂ ಪಡೆಯುವನು. ಇದರಲಿ ಸಂಶಯವಿಲ್ಲ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತೊಂದನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ದ್ವ್ಯಶೀತಿತಮೋಽಧ್ಯಾಯಃ ॥

॥ ಔರ್ವ ಉವಾಚ ॥

ತತಃ ಪೂರ್ವಂ ಮಹಾರಾಜ ದರ್ಪಣೋ ನಾಮ ಪರ್ವತಃ ।
ಕುಬೇರೋ ಯತ್ರ ವಸತಿ ಧನಪಾಲೈಃ ಸಮಂ ಸದಾ ॥ ೧ ॥

ಯಸ್ಮಿನ್ನಾಸ್ತೇ ಮಧ್ಯಭಾಗೇ ರೋಹಿತೋ ರೋಹಿತಾಕೃತಿಃ ।
ಯಸ್ಮಿನ್ ಲೋಹಾದಿಕಂ ಸ್ಪೃಷ್ಟಂ ಸ್ವರ್ಣತಾಂ ಯಾತಿ ತತ್ಕ್ಷಣಾತ್ ॥ ೨ ॥

ಯತ್ರಾತಿದೂರೆ ಸ್ರವತಿ ದರ್ಪಣೋ ನಾಮ ವೈ ನದಃ ।
ಹಿಮಾದ್ರಿಪ್ರಭವೋ ನಿತ್ಯಂ ಲೌಹಿತ್ಯಸದೃಶಃ ಫಲೈಃ ॥ ೩ ॥

ಎಂಭತ್ತೆರಡನೆಯ ಅಧ್ಯಾಯ.

೧. ಔರ್ವಮುನಿಯು ಹೇಳಿದನು:—ಎಲೈ ಮಹಾರಾಜ! ಆ ಮಣಿಕೂಟಾಚಲದಿಂದ ಪೂರ್ವಕ್ಕೆ ದರ್ಪಣವೆಂಬ ಪರ್ವತವಿರುವುದು. ಅಲ್ಲಿ ಕುಬೇರನು ಧನರಕ್ಷಕರಾದ ಯಕ್ಷರೊಡನೆ ವಾಸವಾಗಿರುವನು.

೨. ಆ ಪರ್ವತದ ಮಧ್ಯಭಾಗದಲ್ಲಿ ಮೀನಿನ ಆಕಾರವಾಗಿರುವ ಇಂದ್ರಧನುಸ್ಸು ಇರುವುದು. ಅದಕ್ಕೆ ಕಬ್ಬಿಣವೇ ಮೊದಲಾದ ಲೋಹಗಳು ತಾಗಿದರೆ ಆಕೂಡಲೇ ಸುವರ್ಣವಾಗುವುವು.

೩. ಮತ್ತೂ ಆ ಬೆಟ್ಟಕ್ಕೆ ಸ್ವಲ್ಪದೂರದಲ್ಲಿ ಹಿಮಾಲಯದಿಂದ ಜನಿಸಿದುದೂ, ಲೋಹಿತ್ಯನದಿಗೆ ಸಮಾನವಾದುದೂ ಆದ ದರ್ಪಣವೆಂಬ ನದಿಯು ಹರಿಯುತ್ತಲಿರುವುದು.

ಸಮುತ್ಪನ್ನಂ ಹಿ ಲೌಹಿತ್ಯಂ ಸರ್ವದೇವಗಣೈರ್ಹರಿಃ ।
ಸರ್ವತೀರ್ಥೋದಕೈಃ ಸಮ್ಯಕ್ಸ್ನಾಪಯಾಮಾಸ ತಂ ಸುತಂ ॥ ೪ ॥

ತಸ್ಯ ಸ್ನಾನಸಮುದ್ಭೂತಃ ಪಾಪದರ್ಪಸ್ಯ ಪಾಟನಃ ।
ತೇನಾಯಂ ದರ್ಪಣೋ ನಾಮ ಪುರಾ ದೇವಗಣೈಃ ಕೃತಃ ॥ ೫ ॥

ತಸ್ಮಿನ್ ಸ್ನಾತ್ವಾ ನದವರೇ ಯೋಽರ್ಚಯೇದ್ದರ್ಪಣಾಚಲೇ ।
ಕುಬೇರಂ ಪ್ರತಿಪತ್ತಿಥ್ಯಾಂ ಕಾರ್ತಿಕೇ ಶುಕ್ಲಪಕ್ಷಕೇ ॥ ೬ ॥

ಸ ಯಾತಿ ಬ್ರಹ್ಮಸದನಮಿಹ ಭೂತಿಶತೈರ್ಯುತಃ ।
ದರ್ಪಣಾದ್ದಿಶಿ ಪೂರ್ವಸ್ಯಾಮಗ್ನಿಮಾಲಾಹ್ವಯೋ ಗಿರಿಃ ॥ ೭ ॥

ಸರ್ಪಾಕಾರಃ ಸಪ್ತಶತವ್ಯಾಮುದೀಚ್ಯೂರ್ಧ್ವವಿಸ್ತೃತಃ ।
ತತ್ರ ತಿಷ್ಠತಿ ವೈ ವಹ್ನಿರೂರ್ಧ್ವಭಾಗೇಽಗ್ನಿಮಂಡಲೇ ॥ ೮ ॥

---

೪. ಹರಿಯು, ತನ್ನ ಪುತ್ರನಾದ ಲೌಹಿತ್ಯನು ಜನಿಸಿದ ಕೂಡಲೇ, ಸಕಲ ತೀರ್ಥಗಳ ಉದಕಗಳಿಂದ ಅವನಿಗೆ ದೇವತೆಗಳೊಡಗೂಡಿ ಸ್ನಾನಮಾಡಿಸಿದನು.

೫. ಆ ಲೌಹಿತ್ಯನ ಸ್ನಾನೋದಕದಿಂದ ದರ್ಪಣ ನದಿಯು ಜನಿಸಿತು. ಅದು ಪಾಪದ ದರ್ಪವನ್ನು ನಾಶಮಾಡುವುದರಿಂದ ಅದನ್ನು ದೇವತೆಗಳು ದರ್ಪಣನದ ಎಂದು ಕರೆದರು.

೬. ಕಾರ್ತಿಕಶುಕ್ಲಪ್ರತಿಪತ್ತಿನಲ್ಲಿ ಆ ದರ್ಪಣನದಿಯಲ್ಲಿ ಸ್ನಾನಮಾಡಿ ದರ್ಪಣಾಚಲದಲ್ಲಿರುವ ಕುಬೇರನನ್ನು ಯಾವನು ಅರ್ಚಿಸುವನೋ, ಅವನು ಇಹದಲ್ಲಿ ಮಹ ದ್ಭೈಶ್ವರ್ಯಯುಕ್ತನಾಗಿ ಮೃತನಾದಮೇಲೆ ಬ್ರಹ್ಮಲೋಕಕ್ಕೆ ಹೋಗುವನು.

೭. ದರ್ಪಣಾಚಲದಿಂದ ಪೂರ್ವದಿಕ್ಕಿನಲ್ಲಿ ಅಗ್ನಿಮಾಲವೆಂಬ ಪರ್ವತವಿರುವುದು. ಅದು ಸರ್ಪದ ಆಕಾರವಾಗಿದ್ದು ಏಳನೂರು ಮಾರು ಉದ್ದವಾಗಿಯೂ, ಅಷ್ಟೇ ಅಗಲವಾಗಿಯೂ, ಎತ್ತರವಾಗಿಯೂ ಇರುವುದು.

೮. ಆ ಬೆಟ್ಟದ ಮೇಲುಭಾಗದಲ್ಲಿ ಅಗ್ನಿಮಂಡಲವೆಂಬ ಕುಂಡವಿರುವುದು. ಆ ಕುಂಡವು ಸುಂದರವಾದ ಶಿಲೆಗಳ ಸೋಪಾನದಿಂದ ನಿರ್ಮಿತವಾಗಿ ಚಂದ್ರನಂತೆ ಕೆಂಪಾದ ಕಾಂತಿಯಿಂದ ಬೆಳಗುತ್ತಿರುವುದು ಅಲ್ಲಿ ಅಗ್ನಿಯು ಯಾವಾಗಲೂ ನೆಲಸಿರುವನು.

ಸಿಂದೂರಪುಂಜಸಂಕಾಶೇ ಚಾರುದಾರುಶಿಲಾತಲೇ ।
ತಸ್ಮಿನ್ನಿರಿಂಧನೋ ವಹ್ನಿರ್ನಿತ್ಯಮದ್ಯಾಪಿ ಕಾಶತೇ ॥ ೯ ॥

ಭೈರವಸ್ಯ ಹಿತಾರ್ಥಾಯ ಕಾಮಾಖ್ಯಾಪರಿಸೇವನೇ ।
ಪೂರ್ವಮೇವ ಸ್ಥಿತಸ್ತತ್ರ ಸಾಕ್ಷಾದ್ವಹ್ನಿರ್ಗಣೈಃ ಸಹ ॥ ೧೦ ॥

ಲೌಹಿತ್ಯಪಾಥಸಿ ಸ್ನಾತ್ವಾ ತ್ವಗ್ನಿಮಾಲಾಪ್ವಯಂ ಗಿರಿಂ ।
ಆರುಹ್ಯ ವಹ್ನಿಂ ಸಂಪೂಜ್ಯ ಮೋದತೇ ವಿಷ್ಣುಮಂದಿರೇ ॥ ೧೧ ॥

ಪುರಸ್ತಾದಗ್ನಿಮಾಲಸ್ಯ ಕುಂಡಕಂ ವಾರುಣಾಪ್ವಯಂ ।
ತಸ್ಯ ತೀರೇ ಗಿರಿಶ್ರೇಷ್ಠೋ ನಾಮ್ನಾ ಕಂಸಕರಃ ಸ್ಮೃತಃ ॥ ೧೨ ॥

ವರುಣಸ್ತತ್ರ ವಸತಿ ನಿತ್ಯಮೇವ ಜಲಾಧಿಪಃ ।
ತಸ್ಮಿಕ್ ಕಂಸಕರೇ ಸಮ್ಯಕ್ಪೂಜಯಿತ್ವಾ ಪ್ರಚೇತಸಂ ॥ ೧೩ ॥

ಸ್ನಾತ್ವಾ ಚ ವಾರುಣೇ ಕುಂಡೇ ವಾರುಣಂ ಲೋಕಮಾಪ್ನುಯಾತ್ ।
ಆದ್ಯಂ ವ್ಯಂಜನಮೇವಾತ್ರ ಪಂಚಮುಸ್ವರಸಂಯುತಂ ॥ ೧೪ ॥

೯-೧೦. ಆ ಕುಂಡದಲ್ಲಿ ಅಗ್ನಿಯು ಕಾಮಾಖ್ಯಾದೇವಿಯ ಸೇವೆಯಕಾಲದಲ್ಲಿ ಭೈರವನ ಅನುಕೂಲಕ್ಕಾಗಿ ಇಂದಿಗೂ ಸೌದೆಯೇ ಇಲ್ಲದೆ ಜ್ವಲಿಸುತ್ತಿರುವನು, ಮತ್ತು ತನ್ನ ಪರಿವಾರದೊಂದಿಗೆ ಸಾಕ್ಷಾತ್ತಾಗಿ ನೆಲಸಿರುವನು.

೧೧. ಲೌಹಿತ್ಯನದಜಲದಲ್ಲಿ ಸ್ನಾನಮಾಡಿ, ಅಗ್ನಿಮಾಲಾಚಲಕ್ಕೆ ಹೋಗಿ ಅಲ್ಲಿ ಅಗ್ನಿಯನ್ನು ಪೂಜಿಸಿದ ಮಾನವನು ಜನ್ಮಾಂತರದಲ್ಲಿ ವಿಷ್ಣುವಿನ ಗೃಹದಲ್ಲಿ ವಿಹರಿಸುವನು.

೧೨-೧೩. ಅಲ್ಲಿಂದ ಮುಂದೆ ವಾರುಣವೆಂಬ ಕುಂಡವಿರುವುದು. ಅದರ ತೀರದಲ್ಲಿ ಕಂಸಕರವೆಂಬ ಪರ್ವತೋತ್ತಮವಿರುವುದು. ಆ ಪರ್ವತದಲ್ಲಿ ಜಲದೇವತೆಯಾದ ವರುಣನು ಸದಾ ನೆಲಸಿರುವನು. ಆ ವಾರುಣಕುಂಡದಲ್ಲಿ ಸ್ನಾನಮಾಡಿ ಕಂಸಕರಪರ್ವತದಲ್ಲಿರುವ ವರುಣನನ್ನು ಅರ್ಚಿಸಿದ ಮಾನವನು ವರುಣಲೋಕವನ್ನು ಪಡೆಯುವನು.

೧೪. ಮೊದಲನೆಯ ವ್ಯಂಜನವಾದ ಕಕಾರ, ಐದನೇ ಸ್ವರವಾದ ಉಕಾರ, ಇವುಗಳಿಗೆ ಬಿಂದುವನ್ನು ಸೇರಿಸಿದರೆ ಕುಂ ಎಂದು ಕುಬೇರದೇವನ ಬೀಜಮಂತ್ರವಾಗುವುದು.

ಶಂಭುಚೂಡಾಶಿಖಾಯುಕ್ತಂ ಕೌಬೇರಂ ಬೀಜಮುಚ್ಯತೇ ।
ಸಪ್ತಮೋ ಯಃ ಪಕಾರಸ್ಯ ಬಿಂದುಚಂದ್ರಾರ್ಧಸಂಯುತಃ ॥ ೧೫ ॥

ವಹ್ನಿಬೀಜಮಿತಿ ಖ್ಯಾತಂ ತೇನ ವಹ್ನಿಂ ಪ್ರಪೂಜಯೇತ್ ।
ಮಕಾರಪಂಚಮಃ ಸೋಮಬಿಂದುನಾ ವಾರುಣಃ ಸ್ಮೃತಃ ॥ ೧೬ ॥

ಏಭಿರ್ಮಂತ್ರೈರಿಮಾ ದೇವಾನ್ನಿತ್ಯಮೇವ ಪ್ರಪೂಜಯೇತ್ ।
ವಾಯುಕೂಟೋ ನಾಮ ಗಿರಿಃ ಪೂರ್ವಸ್ಯಾಂ ವರುಣಾಚಲಾತ್ ॥ ೧೭ ॥

ದ್ವಿಖಂಡೋ ವಾಯುಬಿಜೇನ ಮಂಡಲೇನ ಸಮನ್ವಿತಃ ।
ವಾಯುಲೋಕಸ್ಥಿತಶ್ಚಂದ್ರೋ ಯಸ್ಮಾನ್ನಿಸ್ಸೃತ್ಯ ಮಾರುತಃ ॥ ೧೮ ॥

ಊರ್ಧ್ವಾಧೋ ಭಾಗಮಾಸಾದ್ಯ ನಿತ್ಯಂ ವಹತಿ ಭೂಪತೇ ।
ತತ್ರ ಸ್ಥಾಯುಂ ಸಮಭ್ಯರ್ಚ್ಯ ವಾಯುಲೋಕಮವಾಪ್ನುಯಾತ್ ॥ ೧೯ ॥

---

೧೫. ಪಕಾರದಿಂದ ಏಳನೆಯ ಅಕ್ಷರವಾದ ರಕಾರಕ್ಕೆ ಬಿಂದುವನ್ನು ಸೇರಿಸಿದರೆ ರಂ ಎಂದು ವಹ್ನಿಬೀಜವಾಗುವುದು. ಈ ಬೀಜಮಂತ್ರದಿಂದ ಅಗ್ನಿಯನ್ನು ಪೂಜಿಸಬೇಕು.

೧೬. ಮಕಾರದಿಂದ ಐದನೆಯ ಅಕ್ಷರವಾದ ವಕಾರಕ್ಕೆ ಬಿಂದುವನ್ನು ಸೇರಿಸಿದರೆ ವಂ ಎಂದು ವಾರುಣಬೀಜವಾಗುವುದು. ಈ ಎಲ್ಲಾ ಬೀಜಾಕ್ಷರಮಂತ್ರಗಳಿಂದ ಆಯಾಯ ದೇವತೆಗಳನ್ನು ಪೂಜಿಸಬೇಕು.

೧೭-೧೯. ವರುಣಾಚಲದಿಂದ ಪೂರ್ವಕ್ಕೆ ವಾಯುಕೂಟವೆಂಬ ಗಿರಿಯು ಇರುವುದು. ಅದು ಎರಡುಖಂಡವುಳ್ಳದುದಾಗಿ ವಾಯುಬೀಜವುಳ್ಳ ಮಂಡಲದಿಂದ ಕೂಡಿರುವುದು. ಆ ವಾಯುಮಂಡಲದಲ್ಲಿ ಚಂದ್ರನಿರುವನು. ಎಲೈ ರಾಜನೇ! ಆ ಮಂಡಲದಿಂದ ಹೊರಟ ವಾಯುವು ಮೇಲೂ ಕೆಳಗೂ ನಿತ್ಯವೂ ಬೀಸುತ್ತಿರುವುದು. ಆ ವಾಯುಕೂಟದಲ್ಲಿರುವ ಮಂಡಲದಲ್ಲಿ ವಾಯುವನ್ನು ಅರ್ಚಿಸಿದವನು ವಾಯುಲೋಕವನ್ನು ಪಡೆಯುವನು.

ಪೂರ್ವಂ ವಾಯುಗಿರೇಃ ಶೈಲಚಂದ್ರಕೂಟ ಇತಿ ಸ್ಮೃತಃ ।
ತ್ರಿಕೋಣಶ್ಚಂದ್ರಸಂಕಾಶಸ್ತದೂರ್ಧ್ವೇ ಚಂದ್ರಮಂಡಲಂ ॥ ೨೦ ॥

ದ್ವಿತೀಯವರ್ಗಸ್ಯಾದ್ಯಂ ತು ಬಿಂದುನಾ ಸಮಲಂಕೃತಂ ।
ಚಂದ್ರಬೀಜಮಿತಿ ಪ್ರೋಕ್ತಂ ತೇನ ಚಂದ್ರಂ ಪ್ರಪೂಜಯೇತ್ ॥ ೨೧ ॥

ಅದ್ಯಾಪಿ ಪ್ರತಿದರ್ಶೇ ತು ಪರ್ವತಂ ತಂ ನಿಶಾಪತಿಃ ।
ಪ್ರದಕ್ಷಿಣೀಕರೋತ್ಯೇವ ದಶಭಿಶ್ಚಾಪಿ ಖೇಚರೈಃ ॥ ೨೨ ॥

ತಸ್ಯೈವ ಪೂರ್ವಭಾಗೇ ತು ಸೋಮಕುಂಡಾಹ್ವಯಂ ಸರಃ ।
ತತ್ರ ಸ್ನಾತ್ವಾ ಚ ಪೀತ್ವಾ ಚ ನರಃ ಕೈವಲ್ಯಮಶ್ನುತೇ ॥ ೨೩ ॥

ಸ್ವರ್ಗಾದವತರಚ್ಚಂದ್ರಃ ಕಾಮಾಖ್ಯಾಸೇವನೇ ಯದಾ ।
ತದಾ ತದ್ರಶ್ಮಿಸಂಘಾತಾನ್ನಿಃಸೃತಾ ತೋಯರಾಶಯಃ ॥ ೨೪ ॥

---

೨೦. ವಾಯುಕೂಟದಿಂದ ಪೂರ್ವಕ್ಕೆ ಚಂದ್ರಕೂಟಾಚಲವು ಇರುವುದು. ಅದು ತ್ರಿಕೋಣಾಕಾರವಾಗಿದ್ದು ಚಂದ್ರನಂತೆ ಪ್ರಕಾಶಿಸುತ್ತಲಿರುವುದು. ಅದರ ಮೇಲ್ಭಾಗದಲ್ಲಿ ಚಂದ್ರಮಂಡಲವಿರುವುದು.

೨೧. ಎರಡನೆಯ ವರ್ಗದ ಮೊದಲನೆಯ ಅಕ್ಷರವಾದ ಚಕಾರವು ಸೊನ್ನೆಯಿಂದ ಸೇರಿದುದೇ ಆದರೆ ಚಂ ಎಂದು ಚಂದ್ರಬೀಜಮಂತ್ರವಾಗುವುದು. ಅದರಿಂದ ಚಂದ್ರನನ್ನು ಪೂಜಿಸಬೇಕು.

೨೨. ಈಗಲೂ ಚಂದ್ರನು ಪ್ರತಿ ಪೂರ್ಣಿಮೆಯೆಲ್ಲಿಯೂ ಆ ಚಂದ್ರಕೂಟ ಗಿರಿಯನ್ನು ಹತ್ತು ಗ್ರಹಗಳೊಡನೆ ಪ್ರದಕ್ಷಿಣೆ ಮಾಡುವನು.

೨೩. ಆ ಚಂದ್ರಕೂಟಗಿರಿಯಿಂದ ಪೂರ್ವಭಾಗದಲ್ಲಿ ಸೋಮಕುಂಡವೆಂಬ ಸರಸ್ಸು ಇರುವುದು. ಅಲ್ಲಿ ಸ್ನಾನಪಾನಗಳನ್ನು ಮಾಡಿದವನು ಮುಕ್ತಿಯನ್ನು ಪಡೆಯುವನು.

೨೪-೨೫. ಹಿಂದೆ ಕಾಮಾಖ್ಯಾದೇವಿಯನ್ನು ಸೇವಿಸಲು ಚಂದ್ರನು ಸ್ವರ್ಗದಿಂದ ಅವತರಿಸಿದಾಗ ಅವನ ಕಿರಣಗಳಿಂದ ಜಲಪ್ರವಾಹವು ಹೊರಟಿತು. ಆ ಜಲ

ತೈಸ್ತೋಯೈರ್ವಾಸವಃ ಕುಂಡಮಕರೋದಿಂದ್ರಚಂದ್ರಯೋಃ ।
ಮಧ್ಯೇ ಪುಣ್ಯತಮೇ ಸ್ಥಾನೇ ಸ್ವಯಂ ಬ್ರಹ್ಮಶಿಲೋಪರಿ ॥ ೨೫ ॥

ಚಂದ್ರರಶ್ಮಿಸಮುದ್ಭೂತ ಚಂದ್ರಕುಂಡ ಮಹೋದಧೌ ।
ಯಂ ಯಂ ಭಾವಂ ಸಮಾಸಾದ್ಯ ತಂ ಚಂದ್ರ ಕುಲುಷಂ ಹರ ॥ ೨೬ ॥

ಸುಧಾಸ್ರವಣಮಾಹ್ಲಾದ ತ್ವಂ ಚಂದ್ರ ಕುಲುಷಂ ಹರ ।
ಇತ್ಯನೇನ ತು ಮಂತ್ರೇಣ ಯಃ ಸ್ನಾತ್ವಾ ಚಂದ್ರಪಾಥಸಿ ।
ಚಂದ್ರಕೂಟಂ ಸಮಾರುಹ್ಯ ಪೂಜಯೇದ್ಯಸ್ತು ತಂ ನರಃ ॥ ೨೭ ॥

ಅವಿಚ್ಛಿನ್ನಾ ಸಂತತಿಸ್ತು ಸುಕಾಂತಾ ತಸ್ಯ ಜಾಯತೇ ।
ಪರತ್ರ ಚಂದ್ರಭವನಂ ಭಿತ್ವಾ ಯಾತಿ ಪರಂ ಪದಂ ॥ ೨೮ ॥

ತೀರೇ ತು ಚಂದ್ರಕೂಟಸ್ಯ ನಂದನೋ ನಾಮ ವೈ ಗಿರಿಃ ।
ತಸ್ಮಿನ್ವಸತಿ ಶಕ್ರಸ್ತು ಕಾಮಾಖ್ಯಾಸೇವನೇ ರತಃ ॥ ೨೯ ॥

ಗಿಂದ ಇಂದ್ರನು ತನ್ನ ಮತ್ತು ಚಂದ್ರನ ಮಧ್ಯದಲ್ಲಿರುವ ಪುಣ್ಯಸ್ಥಾನವಾದ ಬ್ರಹ್ಮ ಶಿಲೆಯಲ್ಲಿ ಈ ಕುಂಡವನ್ನು ನಿರ್ಮಿಸಿದನು.

೨೬-೨೮. "ಚಂದ್ರಕಿರಣಗಳಿಂದ ಜನಿಸಿದ ಎಲೈ ಚಂದ್ರಕುಂಡವೆ, ನನ್ನ ಪಾಪವನ್ನು ಹೋಗಲಾಡಿಸು, ಮತ್ತು ಚಂದ್ರಕುಂಡಾಭಿಮಾನಿದೇವತೆಯಾದ ಎಲೈ ಚಂದ್ರನೆ! ನೀನು ಸಮುದ್ರದಲ್ಲಿ ಯಾವಯಾವ ಭಾವದಿಂದಿರುವೆಯೋ ಈ ಕುಂಡದಲ್ಲಿಯೂ ಆ ಭಾವಗಳಿಂದಿದ್ದು ನಮ್ಮ ಪಾಪವನ್ನು ಹೋಗಲಾಡಿಸು. ಅಮೃತವನ್ನು ಸುರಿಸಿ ಆಹ್ಲಾದವನ್ನುಂಟುಮಾಡು," ಎಂಬ ಈ ಮಂತ್ರದಿಂದ ಚಂದ್ರಕುಂಡದಲ್ಲಿ ಸ್ನಾನಮಾಡಿ ಚಂದ್ರಕೂಟಗಿರಿಯನ್ನೇರಿ ಅಲ್ಲಿ ಚಂದ್ರನನ್ನು ಯಾವನು ಪೂಜಿಸುವನೋ ಅವನ ಸಂತತಿಯು ಅವಿಚ್ಛಿನ್ನವಾಗಿ ನಡೆಯುವುದು, ಮತ್ತು ಅವನು ಪರಲೋಕದಲ್ಲಿ ಚಂದ್ರಮಂಡಲವನ್ನು ಭೇದಿಸಿ ಪರಮಪದವನ್ನು ಪಡೆಯುವನು.

೨೯. ಚಂದ್ರಕೂಟಗಿರಿಯ ಸಮೀಪದಲ್ಲಿ ನಂದನೆಂಬ ಗಿರಿಯು ಇರುವುದು. ಆ ಗಿರಿಯಲ್ಲಿ ಇಂದ್ರನು ಕಾಮಾಖ್ಯಾದೇವಿಯನ್ನು ಸೇವಿಸುತ್ತಲಿರುವನು.

ಪಂಚಭಾವಂ ಸಮಾಸಾದ್ಯ ಸರ್ವದೇವೇಶ್ವರೋ ಹರಿಃ ।
ಸೇವಿತುಂ ತ್ರಿದಶೇಶಾನೀಂ ಸತತಂ ವರ್ತತೇ ನತಃ ॥ ೩೦ ॥

ಚಂದ್ರಕೂಟಸ್ಯ ತು ಗಿರೇರ್ನಂದನಸ್ಯ ತಥಾ ಗಿರೇಃ ।
ಪ್ರತಿದರ್ಶಂ ತಥಾ ಚಂದ್ರಃ ಪ್ರದಕ್ಷಿಣಯತಿ ತ್ರಿಧಾ ॥ ೩೧ ॥

ಚಂದ್ರಕುಂಡಜಲೇ ಸ್ನಾತ್ವಾ ಸಮಾರುಹ್ಯಾಥ ನಂದನಂ ।
ಆರಾಧ್ಯ ಶಕ್ರಂ ಲೋಕೇಶಂ ಮಹಾಫಲಮವಾಪ್ನುಯಾತ್ ॥ ೩೨ ॥

ನಂದನಾತ್ಪೂರ್ವಭಾಗೇ ತು ಭಸ್ಮಕೂಟೋ ಮಹಾಗಿರಿಃ ।
ಯಃ ಸ್ವಯಂ ಭರ್ಗರೂಪಃ ಸ ಸದಾ ಚೇಚ್ಛಾಂತಮುತ್ತಮಂ ॥ ೩೩ ॥

ದಕ್ಷಿಣೇ ಭಸ್ಮಕೂಟಸ್ಯ ದೇವೀ ಪೀಯೂಷಧಾರಿಣೀ ।
ಊರ್ವಶೀ ನಾಮ ವಿಖ್ಯಾತಾ ಶಕ್ರಪೀತಿಕರೀ ಸದಾ ॥ ೩೪ ॥

ದೇವೈರ್ಯತ್ಸ್ಥಾಪಿತಂ ಪೂರ್ವಮಮೃತಂ ಭೋಜನಾಯ ವೈ ।
ಕಾಮಾಖ್ಯಾಯಾಸ್ತದಾದಾಯ ಸ್ವಯಂ ತಿಷ್ಠತಿ ಚೋರ್ವಶೀ ॥ ೩೫ ॥

---

೩೦. ಸಕಲ ದೇವತೆಗಳ ಅಧಿಪತಿಯಾದ ಇಂದ್ರನು ದೇವೇಶ್ವರಿಯಾದ ಕಾಮಾಖ್ಯಾದೇವಿಯನ್ನು ಸೇವಿಸುವುದಕ್ಕಾಗಿ ಪಂಚರೂಪವನ್ನು ಹೊಂದಿ ಅಲ್ಲಿಯೇ ಇರುವನು.

೩೧. ಚಂದ್ರಕೂಟಾಚಲ ಮತ್ತು ನಂದನಾಚಲ ಇವುಗಳನ್ನು ಚಂದ್ರನು ಪ್ರತಿ ಅಮಾವಾಸ್ಯೆಯಲ್ಲಿಯೂ ಮೂರುಬಾರಿ ಪ್ರದಕ್ಷಿಣೆ ಮಾಡುವನು.

೩೨. ಚಂದ್ರಕುಂಡದ ಜಲದಲ್ಲಿ ಸ್ನಾನಮಾಡಿ, ನಂದನಾಚಲವನ್ನೇರಿ, ಅಲ್ಲಿರುವ ಲೋಕನಾಯಕನಾದ ಇಂದ್ರನನ್ನು ಆರಾಧಿಸಿದರೆ ಹೆಚ್ಚಾದ ಫಲವು ಲಭಿಸುವುದು.

೩೩. ನಂದನಾಚಲದಿಂದ ಪೂರ್ವಭಾಗದಲ್ಲಿ ಭಸ್ಮಕೂಟವೆಂಬ ಮಹಾಚಲವು ಇರುವುದು. ಅದು ಸಾಕ್ಷಾತ್ ಶಂಕರನ ಸ್ವರೂಪವು, ಮತ್ತು ತುಂಬಾ ಶಾಂತವಾದ ಸ್ಥಾನವು.

೩೪-೩೫. ಭಸ್ಮಕೂಟಗಿರಿಯ ದಕ್ಷಿಣಭಾಗದಲ್ಲಿ ಇಂದ್ರಪ್ರಿಯಳಾದ ಊರ್ವಶೀ ಎಂಬ ಅಪ್ಸರೆಯು ಕಾಮಾಖ್ಯಾದೇವಿಯ ನಿವೇದನಕ್ಕಾಗಿ ದೇವತೆಗಳು ಹಿಂದೆ ಅಲ್ಲಿ ಸ್ಥಾಪಿಸಿದ ಅಮೃತವನ್ನು ಧರಿಸಿ ನಿಂತಿರುವಳು.

ಶಿಲಾರೂಪೋ ಹರಸ್ತಾಂ ತು ಸಮಾವೃತ್ಯೈವ ತಿಷ್ಠತಿ ।
ಸಾ ಚೈವಾಮೃತರಾಶಿಂ ತು ಕೃತ್ವಾ ಕಿಂಚನ ಕಿಂಚನ ॥ ೩೬ ॥

ಉಪಸ್ಥಾಪಯತೇ ನಿತ್ಯಂ ಕಾಮಾಖ್ಯಾಯೋನಿಮಂಡಲೇ ।
ಸುಧಾಶಿಲಾಂತರಸ್ಥಾ ತು ಊರ್ವಶೀ ಕುಂಡವಾಸಿನೀ ॥ ೩೭ ॥

ಊರ್ವಶೀಭಸ್ಮಕೂಟಸ್ಯ ಮಧ್ಯೇ ಕುಂಡಂ ಸದಾಮೃತಂ ।
ದ್ವಾತ್ರಿಂಶದ್ಧನುರುತ್ಕೀರ್ಣಂ ಪಂಶಾಕದ್ಧನುರಾಯತಂ ॥ ೩೮ ॥

ತತ್ರ ಸ್ನಾತ್ವಾ ಚ ಪೀತ್ವಾ ನರೋ ಮೋಕ್ಷಮವಾಪ್ನುಯಾತ್ ।
ಕಾಮಾಖ್ಯಾಯೋನಿರೈಶಾನೀಂ ದಿಶಂ ಯಾತಿ ಸದೈವ ಹಿ ॥ ೩೯ ॥

ಭಸ್ಮಕೂಟೇ ಪ್ರವಿಶತಿ ಊರ್ವಶೀಮಪಿ ಯೋಗಿನೀ ।
ಆಪ್ಯಾಯಿತಾ ಚಾಮೃತೇನ ನಿತ್ಯಂ ದೇವೀ ಪ್ರಮೊದತೇ ॥ ೪೦ ॥

ಮೋದಯುಕ್ತಾ ಮಹಾದೇವೀ ಕಾಮೇನ ಮೋದತೆ ಸದಾ ।
ಭಸ್ಮಕೂಟಸ್ಯ ಚೈಶಾನ್ಯಾಂ ಮಣಿಕೂಟೋ ಮಹಾಗಿರಿಃ ॥ ೪೧ ॥

೩೬-೩೭. ಅಮೃತಶಿಲೆಯಲ್ಲಿರುವ ಕುಂಡದಲ್ಲಿ ಊರ್ವಶಿಯು ಇರುವಳು. ಶಿಲಾರೂಪವಾಗಿರುವ ಶಂಕರನು ಆ ಊರ್ವಶಿಯನ್ನು ವ್ಯಾಪಿಸಿಕೊಂಡಿರುವನು. ಅವಳು ಅಮೃತರಾಶಿಯನ್ನು ಧರಿಸಿ ನಿತ್ಯವೂ ಯೋನಿಮಂಡಲದಲ್ಲಿ ದೇವಿಗೆ ಅಮೃತವನ್ನು ಸ್ವಲ್ಪಸ್ವಲ್ಪ ನಿವೇದನೆ ಮಾಡುವಳು.

೩೮-೩೯. ಊರ್ವಶೀ ಮತ್ತು ಭಸ್ಮಕೂಟಾಚಲದ ಮಧ್ಯದಲ್ಲಿ ಮೂವತ್ತೆರಡು ಧನಸ್ಸುಗಳ ಪ್ರಮಾಣ ಅಗಲವಾಗಿಯೂ, ಐವತ್ತು ಧನಸ್ಸುಗಳ ಪ್ರಮಾಣ ವಿಸ್ತಾರವಾಗಿಯೂ ಇರುವಂತಹ ಅಮೃತಮಯವಾದ ಕುಂಡವಿರುವುದು. ಆ ಕುಂಡದಲ್ಲಿ ಸ್ನಾನಪಾನಗಳನ್ನು ಮಾಡಿದವನು ಮುಕ್ತಿಯನ್ನು ಪಡೆಯುವನು.

೪೦. ಕಾಮಾಖ್ಯಾದೇವಿಯ ಯೋನಿಶಿಲೆಯು ಸದಾ ಈಶಾನ್ಯದಿಕ್ಕಿಗೆ ವ್ಯಾಪಿಸಿರುವುದು. ಭಸ್ಮಕೂಟದಲ್ಲಿರುವ ಊರ್ವಶಿಯನ್ನೂ ಆ ಶಿಲೆಯು ವ್ಯಾಪಿಸಿರುವುದು.

೪೧. ಊರ್ವಶಿಯು ನಿವೇದಿಸುವ ಅಮೃತದಿಂದ ದೇವಿಯು ತುಂಬಾ ಸಂತೋಷಗೊಳ್ಳುವಳು. ಹೀಗೆ ಸಂತುಷ್ಟಳಾದ ದೇವಿಯು ಭಕ್ತರಿಗೆ ಸದಾ ಇಷ್ಟಾರ್ಥಗಳನ್ನು ಕೊಡುವಳು.

ಮಣಿಕರ್ಣೋ ನಾಮ ಹರಸ್ತತ್ರ ತಿಷ್ಠತಿ ಲಿಂಗಕಂ ।
ಸ ಸದ್ಯೋಜಾತರೂಪಸ್ತು ಮಣಿಕರ್ಣ ಇತೀರಿತಃ ॥ ೪೨ ॥

ಸದ್ಯೋಜಾತಸ್ಯ ಮಂತ್ರೇಣ ಪೂಜಿತವ್ಯಃ ಸದಾಶಿವಃ ।
ಚಂದ್ರತೀರ್ಥಜಲೇ ಸ್ನಾತ್ವಾ ದೃಷ್ಟ್ವಾ ಚಂದ್ರಂ ಸವಾಸವಂ ॥ ೪೩ ॥

ಮಣಿಕರ್ಣೇಶ್ವರಂ ದೃಷ್ಟ್ವಾ ಮುಕ್ತಿರ್ಭವತ್ಯಾಚಲಂ ಗತೇ ।
ಶ್ವೇತಃ ಶ್ವೇತಾಂಬರಧರೋ ದಶಾಶ್ವೋ ಹೇಮಭೂಷಿತಃ ॥ ೪೪ ॥

ಗದಾಪಾಣಿರ್ದ್ವಿಬಾಹುಶ್ಚ ಕರ್ತವ್ಯೋ ವರದಃ ಶಶೀ ।
ಸಹಸ್ರನೇತ್ರೋ ಗೌರಾಂಗೋ ದ್ವಿಭುಜೋ ವಾಮಹಸ್ತಗಂ ॥ ೪೫ ॥

---

೪೨. ಭಸ್ಮಕೂಟಾಚಲದ ಈಶಾನ್ಯದಲ್ಲಿ ಮಣಿಕೂಟವೆಂಬ ಮಹಾಗಿರಿಯಿರುವುದು. ಅಲ್ಲಿ ಮಣಿಕೂಟೇಶ್ವರವೆಂಬ ಶಿವಲಿಂಗವು ಇರುವುದು. ಆ ಮಣಿಕರ್ಣ ಲಿಂಗವು ಸದ್ಯೋಜಾತಸ್ವರೂಪವಾದುದು. ಸದ್ಯೋಜಾತದೇವನ ಮಂತ್ರವಾದ ಸದ್ಯೋಜಾತಂ ಪ್ರಪದ್ಯಾಮಿ ಎಂಬ ಮಂತ್ರದಿಂದಲೇ ಆ ಶಿವಲಿಂಗವನ್ನು ಪೂಜಿಸಬೇಕು.

೪೩. ಚಂದ್ರಕುಂಡದ ಜಲದಲ್ಲಿ ಸ್ನಾನಮಾಡಿ, ಚಂದ್ರ ಮತ್ತು ಇಂದ್ರರನ್ನು ದರ್ಶನಮಾಡಿ, ಬಳಿಕ ಮಣಿಕರ್ಣೇಶ್ವರನನ್ನೂ ದರ್ಶನಮಾಡಿ, ಭಸ್ಮಾಚಲ ಯಾತ್ರೆಯನ್ನು ಮಾಡಿದರೆ ಮುಕ್ತಿಯುಂಟಾಗುವುದು.

೪೪. ಚಂದ್ರನ ಶರೀರವು ಶ್ವೇತವರ್ಣದ್ದಾಗಿರುವುದು. ಆವನು ಧರಿಸುವ ವಸ್ತ್ರವೂ ಬಿಳಿಯದಾಗಿಯೇ ಇರುವುದು. ಸುವರ್ಣಾಭರಣಗಳಿಂದ ಅಲಂಕೃತನಾಗಿ ಹತ್ತು ಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳಿತು, ಕೈಯಲ್ಲಿ ಗದೆಯನ್ನೂ, ಮತ್ತೊಂದು ಕೈಯಲ್ಲಿ ವರದಹಸ್ತವನ್ನು ಧರಿಸಿರುವನು. ಇಂತಹ ಸ್ವರೂಪವುಳ್ಳ ಚಂದ್ರನನ್ನು ಪೂಜಿಸಬೇಕು.

೪೫-೪೬. ಇಂದ್ರನು ಸಾವಿರ ಕಣ್ಣುಗಳುಳ್ಳವನು, ಹಳದಿಯಬಣ್ಣದವನು, ಎರಡು ಬಾಹುಗಳುಳ್ಳವನು, ಎಡಗೈಯಲ್ಲಿ ವಜ್ರಾಯುಧವನ್ನೂ, ಬಲಗೈಯಲ್ಲಿ ಗದೆ,

ವಜ್ರಂ ಗದಾಂಕುಶಂ ಧತ್ತೇ ದಕ್ಷಿಣೇನಾಪಿ ಪಾಣಿನಾ ।
ಐರಾವತಗಜಸ್ಥಸ್ತು ಬಾಣತೂಣೀರಬಂಧನಃ ॥ ೪೬ ॥

ಧನುಶ್ಚ ಕಕ್ಷೇ ಗೃಹ್ಣಾತಿ ಸೇವಮಾನೋ ಮಹೇಶ್ವರೀಂ ।
ವಕಾರಾನಂತರೋ ವರ್ಣಶ್ಚಂದ್ರಬಿಂದುಸಮನ್ವಿತಃ ॥ ೪೭ ॥

ಶಕ್ರಬೀಜಮಿತಿ ಪ್ರೋಕ್ತಂ ಶಕ್ರಂ ತೇನ ಪ್ರಪೂಜಯೇತ್ ।
ನದೀ ಸುಮಂಗಲಾ ನಾಮ ಹಿಮವತ್ಪರ್ವತನಿರ್ಗತಾ ॥ ೪೮ ॥

ಪೂರ್ವಸ್ಯಾಂ ಮಣಿಕೂಟಸ್ಯ ಸದಾ ಸ್ರವತಿ ಶೋಭನಾ ।
ಮಣಿಕೂಟಂ ಸಮಾರುಹ್ಯ ಯಸ್ತಾಂ ಪಶ್ಯತಿ ವೈ ನದೀಂ ॥ ೪೯ ॥

ಸ ಗಂಗಾಸ್ನಾನಜಂ ಪುಣ್ಯಮವಾಪ್ಯ ತ್ರಿದಿವಂ ವ್ರಜೇತ್ ।
ಮಣಿಕೂಟಾಚಲಾತ್ಪೂರ್ವಂ ಮತ್ಸ್ಯಧ್ವಜಕುಲಾಚಲಃ ॥ ೫೦ ॥

ನಿರ್ದಗ್ಧೋ ಯತ್ರ ಮದನೋ ಹರನೇತ್ರಾಗ್ನಿನಾ ಪುನಃ ।
ಶರೀರಂ ಪ್ರಾಪ ತಪಸಾ ಸಮಾರಾಧ್ಯ ವೃಷಧ್ವಜಂ ॥ ೫೧ ॥

ಅಂಕುಶ ಇವುಗಳನ್ನೂ ಧರಿಸಿ, ಐರಾವತವೆಂಬ ಗಜವನ್ನು ಏರಿ ಕುಳಿತು, ಬಾಣಬತ್ತಳಿಕೆಗಳನ್ನೂ, ಧನುಸ್ಸನ್ನೂ ಕಂಕಳಲ್ಲಿ ಧರಿಸಿ ಕಾಮಾಖ್ಯಾದೇವಿಯನ್ನು ಸದಾ ಸೇವಿಸುತ್ತಲಿರುವನು.

೪೭. ವಕಾರದ ಮುಂದಿನ ವರ್ಣವಾದ ಶಕಾರಕ್ಕೆ ಬಿಂದುವನ್ನು ಸೇರಿಸಿದರೆ ಶಂ ಎಂದು ಶಕ್ರಬೀಜವಾಗುವುದು. ಅದರಿಂದ ಶಕ್ರ (ಇಂದ್ರ) ನನ್ನು ಪೂಜಿಸಬೇಕು.

೪೮-೪೯. ಮಂಗಳಕರವಾದ ಸುಮಂಗಳಾ ಎಂಬ ನದಿಯು ಹಿಮಾಲಯದಲ್ಲಿ ಹುಟ್ಟಿ ಮಣಿಕೂಟಾಚಲದ ಪೂರ್ವಭಾಗದಲ್ಲಿ ಹರಿಯುತ್ತಲಿರುವುದು. ಮಣಿಕೂಟಾಚಲವನ್ನು ಏರಿ ಯಾವನು ಆ ಸುಮಂಗಲಾನದಿಯನ್ನು ನೋಡುವನೋ ಅವನು ಗಂಗಾಸ್ನಾನವನ್ನು ಮಾಡಿದ ಪುಣ್ಯವನ್ನು ಪಡೆದು ಪರದಲ್ಲಿ ಸ್ವರ್ಗವನ್ನು ಪಡೆವನು.

೫೦-೫೧. ಮಣಿಕೂಟಗಿರಿಯಿಂದ ಪೂರ್ವಕ್ಕೆ ಮತ್ಸ್ಯಧ್ವಜಗಿರಿಯೆಂಬ ಕುಲಪರ್ವತವಿರುವುದು. ಶಂಕರನ ನೇತ್ರವಹ್ನಿಯಿಂದ ಸುಟ್ಟುಹೋದ ಮನ್ಮಥನು ಆ ಗಿರಿಯಲ್ಲಿ ಶಂಕರನನ್ನು ಆರಾಧಿಸಿ ತಿರುಗಿ ತನ್ನ ಶರೀರವನ್ನು ಪಡೆದನು.

ತತ್ರ ಮತ್ಸ್ಯಸ್ವರೂಪಸ್ತು ಕಾಮುದೇವೇನ ಸಂಸ್ಥಿತಃ ।
ಆಧಿತ್ಯಕಾಯಾಂ ಪೃಥಿವೀಂ ವೀಕ್ಷಮಾಣಃ ಸಮಂತತಃ ॥ ೫೨ ॥

ನದೀ ತು ಶಾಶ್ವತೀ ನಾಮ ತತ್ರಾಸ್ತೇ ದಕ್ಷಿಣಸ್ರವಾ ।
ಸರಃ ಕಾಮಸರೋ ನಾಮ ತತ್ರ ಶೈಲೇ ವ್ಯವಸ್ಥಿತಂ ॥ ೫೩ ॥

ಶಾಶ್ವತ್ಯಾಂ ವಿಧಿವತ್ಸ್ನಾತ್ವಾ ಪೀತ್ವಾ ಕಾಮಸರೋಽಂಭಸಿ ।
ವಿಮುಕ್ತಪಾಪಃ ಶುದ್ಧಾತ್ಮಾ ಶಿವಲೋಕೇ ಮಹೀಯತೇ ॥ ೫೪ ॥

ಗಂಧಮಾದನಪೂರ್ವಸ್ಯಾಂ ಸುಕಾಂತೋ ನಾಮ ಪರ್ವತಃ ।
ತತ್ಪಾರ್ಶ್ವೇ ವಾಸವಂ ಕುಂಡಂ ವಾಸವಾಮೃತಭೋಜನಂ ॥ ೫೫ ॥

ಯತ್ರ ಸ್ಥಿತ್ವಾ ದಕ್ಷಿಣಸ್ಯಾಂ ಪುರಾ ಶಕ್ರಃ ಶಚೀಪತಿಃ ।
ಅಮೃತಂ ಶ್ರಾಂತದೇಹಸ್ತು ಕಾಮರೂಪಾಂತರೇ ಪಪೌ ॥ ೫೬ ॥

---

೫೨. ಮತ್ತು ಅಲ್ಲಿ ಮತ್ಸ್ಯಸ್ವರೂಪವು ಮನ್ಮಥನೊಡನೆ ಸೇರಿ ಮೇಲುಭಾಗದ ತಪ್ಪಲಲ್ಲಿ ಎಲ್ಲೆಡೆಯನ್ನೂ ನೋಡುತ್ತಾ ಇರುವುದು.

೫೩. ಆ ಮತ್ಸ್ಯಧ್ವಜಗಿರಿಯಲ್ಲಿ ಶಾಶ್ವತೀ ಎಂಬ ನದಿಯು ದಕ್ಷಿಣಮುಖವಾಗಿ ಹರಿಯುತ್ತಲಿರುವುದು. ಕಾಮಸರಸ್ಸೆಂಬ ಸರೋವರವಿರುವುದು.

೫೪. ಶಾಶ್ವತೀನದಿಯಲ್ಲಿ ಸ್ನಾನಮಾಡಿ ಕಾಮಸರಸ್ಸಿನ ಜಲವನ್ನು ಪಾನ ಮಾಡಿದ ಮನುಜನು, ಪಾಪವಿಮೋಚನದಿಂದ ಶುದ್ಧನಾಗಿ ಶಿವಲೋಕವನ್ನು ಹೊಂದಿ ಅಲ್ಲಿ ಸರ್ವೋತ್ಕೃಷ್ಟದಿಂದ ಇರುವನು.

೫೫-೫೬. ಗಂಧಮಾದನಪರ್ವತದಿಂದ ಪೂರ್ವಕ್ಕೆ ಸುಕಾಂತವೆಂಬ ಪರ್ವತವಿರುವುದು. ಅದರ ತಪ್ಪಲಲ್ಲಿ ವಾಸವವೆಂಬ ಕುಂಡವಿರುವುದು. ಅಲ್ಲಿ ಇಂದ್ರನು ಅಮೃತವನ್ನು ಸೇವಿಸುವನು. ಹಿಂದೆ ಒಮ್ಮೆ ಆ ಪರ್ವತದ ದಕ್ಷಿಣದಲ್ಲಿ ವಿಹರಿಸುತ್ತಿರುವಾಗ ಶಚೀಪತಿಯಾದ ಇಂದ್ರನು ಬಳಲಿದವನಾಗಿ ಕಾಮರೂಪದೇಶದ ಮಧ್ಯದಲ್ಲಿರುವ ಆ ಕುಂಡದ ಅಮೃತವನ್ನು ಪಾನಮಾಡಿದನು. ಆದುದರಿಂದ ಆ ಕುಂಡಕ್ಕೆ ವಾಸವಾಮೃತ ಕುಂಡವೆಂದು ಹೆಸರು ಪ್ರಸಿದ್ಧವಾಯಿತು.

ಸ್ನಾತ್ವಾ ತು ವಾಸವೇ ಕುಂಡೇ ಸಮಾರುಹ್ಯ ಸುಕಾಂತಕಂ ।
ವಾಸವಸ್ಯ ಪ್ರಿಯೋ ಭೂತ್ವಾ ಶಕ್ರಲೋಕಮವಾಪ್ನುಯಾತ್ ॥ ೫೭ ॥

ಪೂರ್ವಸ್ಯಾಂ ತು ಸುಕಾಂತಸ್ಯ ರಕ್ಷಃಕೂಟಾಭ್ವಯೋ ಗಿರಿಃ ।
ಯತ್ರಾಸ್ತೇ ಸತತಂ ದೇವೋ ನೈಋತೀ ರಾಕ್ಷಸೇಶ್ವರಃ ॥ ೫೮ ॥

ಖಡ್ಗಹಸ್ತೋ ಮಹಾಕಾಯೋ ವಾಮೇ ಚರ್ಮಧರಸ್ತಥಾ ।
ಜಟಾಜೂಟಸಮಾಯುಕ್ತಃ ಪ್ರಾಂಶುಃ ಕೃಷ್ಣಾಚಲೋಪಮಃ ॥ ೫೯ ॥

ದ್ವಿಭುಜಃ ಕೃಷ್ಣವಾಸಾಸ್ತು ಗರ್ದಭೋಪರಿ ಸಂಸ್ಥಿತಃ ।
ಪ್ರಾಂತೋಪಾಂತೌ ಬಿಂದುಚಂದ್ರಸಹಿತಾವಾದಿರೇವ ಚ ॥ ೬೦ ॥

ನೈರ್ಋತ್ಯಂ ಕಥಿತಂ ಬೀಜಂ ತೇನ ತಂ ಪರಿಪೂಜಯೇತ್ ।
ರಕ್ಷಃಕೂಟಂ ಸಮಾರುಹ್ಯ ನಿರ್ಋತಿಂ ರಾಕ್ಷಸೇಶ್ವರಂ ॥ ೬೧ ॥

---

೫೭. ವಾಸವಕುಂಡದಲ್ಲಿ ಸ್ನಾನಮಾಡಿ ಸುಕಾಂತವೆಂಬ ಗಿರಿಯ ಯಾತ್ರೆಯನ್ನು ಮಾಡಿದ ನರನು ಇಂದ್ರನಿಗೆ ಪ್ರಿಯನಾಗಿ ಅವನ ಅನುಗ್ರಹದಿಂದ ಇಂದ್ರಲೋಕವನ್ನು ಪಡೆಯುವನು.

೫೮. ಸುಕಾಂತಗಿರಿಯ ಪೂರ್ವದಲ್ಲಿ ರಕ್ಷಃಕೂಟವೆಂಬ ಗಿರಿ ಇರುವುದು. ಅಲ್ಲಿ ರಾಕ್ಷಸರಿಗೊಡೆಯನಾದ ನಿರ್ಋತಿದೇವನು ಸದಾ ವಾಸವಾಗಿರುವನು.

೫೯. ಆ ನಿರ್ಋತಿದೇವನ ಶರೀರವು ದೊಡ್ಡದಾಗಿರುವುದು. ಅವನು ಬಲಗೈಯಲ್ಲಿ ಖಡ್ಗವನ್ನೂ, ಎಡಗೈಯಲ್ಲಿ ಚರ್ಮದ ಗುರಾಣಿಯನ್ನೂ ಹಿಡಿದು ಕತ್ತೆಯ ಮೇಲೆ ಕುಳಿತಿರುವನು. ಅವನಿಗೆ ಎರಡು ಬಾಹುಗಳೂ, ಶಿರಸ್ಸಿನಲ್ಲಿ ಜಟೆಯೂ ಇರುವುದು. ಕರಿಯ ವಸ್ತ್ರವನ್ನು ಧರಿಸಿ ತುಂಬ ಎತ್ತರವಾಗಿರುವುದರಿಂದ ಕಪ್ಪಗಿರುವ ಬೆಟ್ಟದಂತೆ ಕಾಣುತ್ತಿರುವನು.

೬೦. ಕೊನೆಯ ವರ್ಣವೂ, ಅದರ ಹಿಂದಿನ ವರ್ಣವೂ, ಮೊದಲನೆಯ ಅಕ್ಷರವಾದ ಅಕಾರವೂ ಸೇರಿ, ಇವುಗಳಿಗೆ ಬಿಂದುವನ್ನು ಸೇರಿಸಿದರೆ ನಿರ್ಋತಿಬೀಜ ಮಂತ್ರವಾಗುವುದು. ಈ ಮಂತ್ರದಿಂದ ಆ ದೇವನನ್ನು ಪೂಜಿಸಬೇಕು.

೬೧-೬೩. ರಕ್ಷಃಕೂಟಾಚಲವನ್ನೇರಿ ಅಲ್ಲಿರುವ ರಾಕ್ಷಸೇಶ್ವರನಾದ ನಿರ್ಋತಿಯನ್ನೂ, ರಾಕ್ಷಸೇಶ್ವರಿಯಾದ ಚಂಡಿಕೆಯನ್ನೂ ಯಾವನು ವಿಧಿವತ್ತಾಗಿ ಪೂಜಿಸು

ಯಃ ಪೂಜಯೇದ್ವಿಧಾನೇನ ಚಂಡಿಕಾಂ ರಾಕ್ಷಸೇಶ್ವರೀಂ ।
ನ ತಸ್ಯ ರಾಕ್ಷಸೇಭ್ಯೋಽಸ್ತಿ ಭಯಂ ಚೈವ ಕದಾಚನಾ ॥ ೬೨ ॥

ರಾಕ್ಷಸಾಶ್ಚ ಪಿಶಾಚಾಶ್ಚ ವೇತಾಲಗಣನಾಯಕಾಃ ।
ತಂ ದೃಷ್ಟ್ವಾ ಪುರುಷಂ ರಾಜ್ಞ ಸರ್ವದೈವ ಪ್ರಬಿಭ್ಯತಿ ॥ ೬೩ ॥

ರಕ್ಷಃಕೂಟಾತ್ಪೂರ್ವದಿಶಿ ಭೈರವೋ ನಾಮ ಮಾಧವಃ ।
ಪಾಂಡುನಾಥ ಇತಿ ಖ್ಯಾತೋ ಗ್ರಾವರೂಪೇಣ ಸಂಸ್ಥಿತಃ ॥ ೬೪ ॥

ತಂ ಪಾಂಡುನಾಥಂ ಸತತಮಷ್ಟಾಕ್ಷರಭವೋತ್ತರಂ ।
ತೇನೈವ ಪೂಜಯೇದ್ದೇವಂ ಪಾಂಡುನಾಥಾಹ್ವಯಂ ಹರಿಂ ॥ ೬೫ ॥

ವರ್ಣೇನ ರಕ್ತಗೌರಾಂಗಂ ಗದಾಪದ್ಮಧರಂ ಕರೇ ।
ದಕ್ಷಿಣೇ ಚಕ್ರಶಕ್ತೀ ಚ ಬಾಹುಭ್ಯಾಮಪಿ ಬಿಭ್ರತಂ ॥ ೬೬ ॥

ಚತುರ್ಭುಜಂ ರಕ್ತಪದ್ಮಸಂಸ್ಥಿತಂ ಮುಕುಟೋಜ್ಜ್ವಲಂ ।
ಕುಂಡಲೇ ಬಿಭ್ರತಂ ಶುದ್ಧೇ ಶ್ರೀವತ್ಸೋರಸ್ಕಮುತ್ತಮಂ ॥ ೬೭ ॥

ವನೋ ಅವನಿಗೆ ರಾಕ್ಷಸರ ಭಯವು ಸ್ವಲ್ಪವೂ ಉಂಟಾಗಲಾರದು. ಎಲೈ ರಾಜನೇ ಹೀಗೆ ಪೂಜಿಸಿದ ಆ ನರೋತ್ತಮನನ್ನು ನೋಡಿದೊಡನೆಯೇ ರಾಕ್ಷಸರೂ, ಪಿಶಾಚಿಗಳೂ, ವೇತಾಲಗಳೂ, ಗಣನಾಯಕಗ್ರಹಗಳೂ ಸಹ ಹೆದರುವುವು.

೬೪. ರಕ್ಷಃಕೂಟಾಚಲದ ಪೂರ್ವಭಾಗದಲ್ಲಿ ಭೈರವನೆಂಬ ನಾಧವನು ಪಾಂಡುನಾಥನೆಂಬ ಹೆಸರಿನಿಂದ ಪ್ರಖ್ಯಾತನಾಗಿ ಶಿಲಾರೂಪದಿಂದ ನೆಲಸಿರುವನು.

೬೫. ಆ ಪಾಂಡುನಾಥನ ಮಂತ್ರವು ಎಂಟು ಅಕ್ಷರಗಳುಳ್ಳದ್ದು, ಆ ಮಂತ್ರದಿಂದಲೇ ವಿಷ್ಣುರೂಪಿಯಾದ ಆ ಪಾಂಡುನಾಥದೇವನನ್ನು ಅರ್ಚಿಸಬೇಕು.

೬೬-೬೭. ಆ ಪಾಂಡುನಾಥನು ಕೆಂಪುಮಿಶ್ರವಾದ ಹಳದೀಬಣ್ಣದ ಶರೀರ ಕಾಂತಿಯಿಂದ ಬೆಳಗುವನು, ಅವನಿದೆ ನಾಲ್ಕು ಬಾಹುಗಳಿರುವವು, ಬಲಗೈಗಳಲ್ಲಿ ಗದಾಪದ್ಮಗಳನ್ನೂ, ಎಡಗೈಗಳಲ್ಲಿ ಚಕ್ರಶಕ್ತಿಗಳನ್ನೂ ಧರಿಸಿ ರಕ್ತಕಮಲದಲ್ಲಿ ಕುಳಿತಿ

ನಮೋ ನಾರಾಯಣಾಯೇತಿ ಮೂಲಬೀಜೇನ ವಾ ಹರೇಃ ।
ಏವಂ ಸಂಪೂಜಯೇದ್ಭೂಪ ಚತುರ್ವರ್ಗಸ್ಯ ಸಿದ್ಧಯೇ ॥ ೬೮ ॥

ಪಾಂಡುನಾಥಸ್ಯೋತ್ತರಸ್ಯಾಂ ಬ್ರಹ್ಮಕೂಟಾಹ್ವಯಂ ಸರಃ ।
ಬ್ರಹ್ಮಣಾ ನಿರ್ಮಿತಂ ಪೂರ್ವಂ ಸ್ನಾನಾರ್ಥಂ ಸ್ವರ್ಗವಾಸಿಗಾಂ ॥ ೬೯ ॥

ಆಯಾಮೇನ ಶತವ್ಯಾಮಂ ವಿಸ್ತೀರ್ಣತ್ವೇ ತದರ್ಧಕಂ ।
ಸರ್ವಪಾಪಹರಂ ಪುಣ್ಯಂ ದೇವಲೋಕಾತ್ಸಮಾಗತಂ ॥ ೭೦ ॥

ಕಮಂಡಲುಸಮುದ್ಭೂತ ಬ್ರಹ್ಮಕುಂಡಾಮೃತಸ್ರವ ।
ಹರ ಮೇ ಸರ್ವಪಾಪಾನಿ ಪುಣ್ಯಂ ಸ್ವರ್ಗಂ ಚ ಸಾಧಯ ॥ ೭೧ ॥

ಇತ್ಯನೇನ ತು ಮಂತ್ರೇಣ ಸ್ನಾತ್ವಾ ತಸ್ಮಿನ್ ಸರೋಜಲೇ ।
ಪಾಂಡುನಾಥಂ ಚ ಸಂಪೂಜ್ಯ ವಿಷ್ಣುಸಾಯುಜ್ಯಮಾಪ್ನುಯಾತ್ ॥ ೭೨ ॥

ರುವನು, ಶಿರಸ್ಸಿನಲ್ಲಿ ಸುಂದರವಾದ ಕಿರೀಟ, ಕಿವಿಗಳಲ್ಲಿ ಥಳಥಳಿಸುತ್ತಿರುವ ಕುಂಡಲಗಳು, ಎದೆಯಲ್ಲಿ ಪ್ರಕಾಶಿಸುವ ಶ್ರೀವತ್ಸ ಇವುಗಳಿಂದ ಆ ಪುರುಷೋತ್ತಮನು ಪ್ರಕಾಶಿಸುತ್ತಿರುವನು.

೬೮. "ಓಂ ನಮೋ ನಾರಾಯಣಾಯ" ಎಂಬ ನಾರಾಯಣನ ಮಂತ್ರದಿಂದಲಾಗಲೀ ಮೂಲಮಂತ್ರದಿಂದಲಾಗಲೀ ಪಾಂಡುನಾಥನನ್ನು ಧರ್ಮಾರ್ಥಕಾಮಮೋಕ್ಷಗಳ ಸಿದ್ಧಿಗಾಗಿ ಅರ್ಚಿಸಬೇಕು.

೬೯. ಪಾಂಡುನಾಥನಿಗೆ ಉತ್ತರದಿಕ್ಕಿನಲ್ಲಿ ಬ್ರಹ್ಮಕೂಟವೆಂಬ ಸರಸ್ಸು ಇರುವುದು. ಅದನ್ನು ದೇವತೆಗಳ ಸ್ನಾನಕ್ಕಾಗಿ ಬ್ರಹ್ಮನು ಹಿಂದೆ ನಿರ್ಮಿಸಿರುವನು.

೭೦. ಆ ಸರಸ್ಸು ನೂರುಮಾರು ಉದ್ದವಾಗಿಯೂ, ಐವತ್ತುಮಾರು ವಿಸ್ತಾರವಾಗಿಯೂ ಇರುವುದು, ಮತ್ತು ಸಕಲ ಪಾಪವನ್ನೂ ಪರಿಹಾರಮಾಡಿಸುವಂತಹದು, ಪವಿತ್ರವಾದುದು, ದೇವಲೋಕದಿಂದ ಬಂದಿರುವಂತಹದು.

೭೧-೭೨. ಬ್ರಹ್ಮನ ಕಮಂಡಲುವಿನಿಂದ ಜನಿಸಿದುದೂ, ಅಮೃತವನ್ನು ಸುರಿಸುವುದೂ ಆದ ಎಲೈ ಬ್ರಹ್ಮಕುಂಡವೇ ನನ್ನ ಸಕಲ ಪಾಪಗಳನ್ನೂ ಪರಿಹಾರಮಾಡಿಸು, ಪುಣ್ಯವನ್ನೂ, ಸ್ವರ್ಗವನ್ನೂ ನನಗೆ ಸಾಧಿಸಿಕೊಡು, ಎಂಬ ಈ ಮಂತ್ರದಿಂದ ಆ ಬ್ರಹ್ಮ

ಬ್ರಹ್ಮಕುಂಡಜಲೇ ಸ್ನಾತ್ವಾ ಪೂಜಯಿತ್ವಾ ಉಮಾಪತಿಂ ।
ವಾಯುಕೂಟಂ ಸಮಾರುಹ್ಯ ಮುಕ್ತಿಮೇವಾಪ್ನುಯಾನ್ನರಃ ॥ ೭೩ ॥

ಪಾಂಡುನಾಥಾತ್ಪೂರ್ವದಿಶಿ ಗಿರಿಶ್ಚಿತ್ರಹರೋ ಹರಿಃ ।
ಸತತಂ ಯತ್ರ ರಮತೇ ವಿಷ್ಣುರ್ವಾರಾಹರೂಪಧೃಕ್ ॥ ೭೪ ॥

ತತಸ್ತು ನೀಲಕೂಟಾಖ್ಯಂ ಕಾಮಾಖ್ಯಾನಿಲಯಂ ಪರಂ ।
ತತ್ಪೂರ್ವಭಾಗೇ ವಸತಿ ಬ್ರಹ್ಮಾ ಬ್ರಹ್ಮಗಿರಿಃ ಪುನಃ ॥ ೭೫ ॥

ಬ್ರಹ್ಮಶೈಲಸ್ಯ ಪೂರ್ವಸ್ಯಾಂ ಭೂಮಿಪೀಠೇ ವ್ಯವಸ್ಥಿತಂ ।
ಚಾರುನಿಮ್ನಶುಭಾವರ್ತಂ ಕಾಮಾಖ್ಯಾನಾಭಿಮಂಡಲಂ ॥ ೭೬ ॥

ತತ್ರೋಗ್ರತಾರಾರೂಪೇಣ ರಮತೇ ಪರಮೇಶ್ವರೀ ।
ತತ್ರ ತೇನೈವ ರೂಪೇಣ ಪೂಜಿತವ್ಯಾ ಶುಭಾತ್ಮಿಕಾ ॥ ೭೭ ॥

ಕುಂಡ ಸರಸ್ಸಿನಲ್ಲಿ ಸ್ನಾನಮಾಡಿ, ಬಳಿಕ ಪಾಂಡುನಾಥನನ್ನು ಪೂಜಿಸಿದವನು ವಿಷ್ಣು ಸಾಯುಜ್ಯವನ್ನು ಪಡೆಯುವನು.

೭೩. ಬ್ರಹ್ಮಕುಂಡಜಲದಲ್ಲಿ ಸ್ನಾನಮಾಡಿ ವಾಯುಕೂಟಕ್ಕೆ ಹೋಗಿ, ಉಮಾ ಪತಿಯಾದ ಶಂಕರನನ್ನು ಪೂಜಿಸಿದ ನರನು ಮುಕ್ತಿಯನ್ನು ಪಡೆಯುವನು.

೭೪. ಪಾಂಡುನಾಥನಿಂದ ಪೂರ್ವದಲ್ಲಿ ಚಿತ್ರಹರವೆಂಬ ಗಿರಿಯು ಇರುವುದು. ಅಲ್ಲಿ ವಿಷ್ಣುವು ವರಾಹರೂಪದಿಂದ ಸದಾ ವಿಹರಿಸುತ್ತಲಿರುವನು.

೭೫. ಅಲ್ಲಿಂದ ಮುಂದೆ ಕಾಮಾಖ್ಯಾದೇವಿಯ ಶ್ರೇಷ್ಠವಾದ ಸ್ಥಾನವಾದ ನೀಲಕೂಟಾಚಲವು ಇರುವುದು. ಅದರ ಪೂರ್ವಭಾಗದಲ್ಲಿ ಬ್ರಹ್ಮರೂಪಿಯಾದ ಬ್ರಹ್ಮಕೂಟಗಿರಿಯು ಇರುವುದು.

೭೬. ಬ್ರಹ್ಮಶೈಲದ ಪೂರ್ವಕ್ಕೆ ಭೂಮಿಯಲ್ಲಿ ಕಾಮಾಖ್ಯಾದೇವಿಯ ಸುಂದರವೂ, ಗಂಭೀರವೂ, ಸುಂದರವಾದ ಸುಳಿಯುಳ್ಳದುದೂ ಆದಂತಹ ನಾಭಿಮಂಡಲವು ಇರುವುದು.

೭೭. ಅಲ್ಲಿ ಪರಮೇಶ್ವರಿಯಾದ ದೇವಿಯು ಉಗ್ರತಾರಾರೂಪದಿಂದ ವಿಹರಿಸುತ್ತಲಿರುವಳು. ಆದೇ ರೂಪದಿಂದಲೇ ಮಂಗಳರೂಪಳಾದ ದೇವಿಯನ್ನು ಪೂಜಿಸಬೇಕು.

ತಸ್ಯಾಸ್ತು ಬೀಜಂ ಪೂರ್ವಸ್ಮಿನ್ನುತ್ತರೇ ಪ್ರತಿಪಾದಿತಂ ।
ರೂಪಂ ಶೃಣು ನರಶ್ರೇಷ್ಠ ಯೇನ ಧ್ಯೇಯಾ ಸದಾಶಿವಾ ॥ ೭೮ ॥

ಕೃಷ್ಣಾ ಲಂಬೋದರೀ ದೀರ್ಘಾ ವಿರಲಾ ರಕ್ತದಂತಿಕಾ ।
ಚತುರ್ಭುಜಾ ಕೃಶಾಂಗೀ ತು ದಕ್ಷಿಣೇ ಕರ್ತ್ರಿಖರ್ಪರೌ ॥ ೭೯ ॥

ಖಡ್ಗಂ ಚೇಂದೀವರಂ ವಾಮೇ ಶೀರ್ಷೇ ಚೈಕಾ ಜಟಾ ಪುನಃ ।
ವಾಮಪಾದಂ ಶವಸ್ಯೋರ್ವೋರ್ನಿಧಾಯಾಂಘ್ರಿಂ ತು ದಕ್ಷಿಣಂ ॥ ೮೦ ॥

ಶವಸ್ಯ ಹೃದಯೇ ನ್ಯಸ್ಯ ಸಾಟ್ಟಹಾಸಂ ಪ್ರಕುರ್ವತೀ ।
ನಾಗಹಾರಶಿರೋಮಾಲಾಭೂಷಿತಾ ಕಾಮುದಾ ಪರಾ ॥ ೮೧ ॥

ತ್ರಿಕೋಣಂ ಮಂಡಲಂ ಚಾಸ್ಯಾ ಹುಂಕಾರಂ ಮಧ್ಯಬೀಜಕಂ ।
ದ್ವಾರೇಶಾನಾಂ ಯೋಗಿನೀನಾಂ ನಾಮಾನ್ಯಸ್ಯಾಂ ತು ತಂತ್ರಕೆ ॥ ೮೨ ॥

---

೭೮. ಆ ಉಗ್ರತಾರಾದೇವಿಯ ಬೀಜಮಂತ್ರವನ್ನು ಹಿಂದೆ ಉತ್ತರತಂತ್ರದಲ್ಲಿಯೇ ಹೇಳಿರುವುದು. ಎಲೈ ನರೋತ್ತಮನೆ ಮಂಗಳರೂಪೆಯಾದ ಆ ದೇವಿಯನ್ನು ಧ್ಯಾನಿಸುವಂತಹ ರೂಪವನ್ನು ಕೇಳು.

೭೯-೮೧. ಆ ದೇವಿಯ ಶರೀರವು ಬಹು ಎತ್ತರವಾಗಿ ನೀಲವರ್ಣದ್ದಾಗಿರುವುದು. ಉದರವು ಬಹು ದೊಡ್ಡದಾಗಿರುವುದು. ಹಲ್ಲುಗಳು ದೂರದೂರವಾಗಿಯೂ, ಕೆಂಪಾಗಿಯೂ ಇರುವವು. ತೆಳ್ಳನೆಯ ಶರೀರ, ನಾಲ್ಕುಬಾಹುಗಳು ಇವುಗಳಿಂದ ಒಪ್ಪುತ್ತಿರುವಳು. ಬಲಗೈಗಳಲ್ಲಿ ಕತ್ತಿ, ಖರ್ಪರ ಇವುಗಳನ್ನೂ, ಎಡಗೈಗಳಲ್ಲಿ ಖಡ್ಗ ಕಮಲಗಳನ್ನೂ, ಶಿರಸ್ಸಿನಲ್ಲಿ ಜಟೆಯನ್ನೂ ಧರಿಸಿರುವಳು. ಎದೆಯಲ್ಲಿ ನಾಗಹಾರವೆಂಬ ಮಾಲೆಯು ಬೆಳಗುತ್ತಿರುವುದು. ತನ್ನ ಎಡಗಾಲನ್ನು ಶವದ ತೊಡೆಯಲ್ಲಿಯೂ, ಬಲಗಾಲನ್ನು ಶವದ ಹೃದಯದಲ್ಲಿಯೂ ಇಟ್ಟುಕೊಂಡು ಅಟ್ಟಹಾಸವನ್ನು ಮಾಡುತ್ತಿರುವಳು. ಈ ದೇವಿಯನ್ನು ಈ ರೀತಿ ಧ್ಯಾನಮಾಡಬೇಕು. ಭಕ್ತರಿಗೆ ಸಕಲ ಇಷ್ಟಾರ್ಥವನ್ನು ಕೊಡುವಳು. ಈ ದೇವಿಯ ಮಂಡಲವು ತ್ರಿಕೋಣಾಕಾರವಾಗಿರುವುದು. ಹುಂ ಎಂಬುದು ಆ ದೇವಿಯ ಮಧ್ಯಬೀಜಾಕ್ಷರವು.

೮೨. ಎಲೈ ನರೋತ್ತಮ! ಈ ತಂತ್ರದಲ್ಲಿಯೂ ವಾಮಾಚಾರವಿಧಿಯಲ್ಲಿಯೂ ಹೇಳಿರುವ ದ್ವಾರಪಾಲಕರನ್ನೂ ಯೋಗಿನಿಯರನ್ನೂ ಪೂಜಿಸಬೇಕು.

ಜ್ಞೇಯಾನಿ ನರಶಾರ್ದೂಲ ಯತ್ಪ್ರೋಕ್ತಂ ವಾಮ್ಯಗೋಚರೇ ।
ಊರ್ವಶ್ಯಾಂ ವಿಧಿವತ್ಸ್ನಾತ್ವಾ ಸ್ಪೃಷ್ಟ್ವಾ ಪಾಂಡುಶಿಲಾಂ ತಥಾ ॥ ೮೩ ॥

ನೀಲಕೂಟಂ ಸಮಾರುಹ್ಯ ಪುನರ್ಯೋನೌ ನ ಜಾಯತೇ ।
ಪುರಂದರಪುರಾಯಾತೇ ವಾರಾಣಸ್ಯಾಃ ಕಲಾಧಿಕೇ ॥ ೮೪ ॥

ಸುಧಾಸಂಕೀರ್ಣತೋಯೌಘೈಃ ಪಾಪಂ ಹರ ಮಮೋರ್ವಶಿ ।
ಅಮೃತಸ್ರಾವಣೇ ದೇವೀ ಸುಧೌಘಪರಿಪೂರಣೇ ॥ ೮೫ ॥

ಅಮೃತೇನಾಮೃತಂ ಮೇದ್ಯ ದೇಹಿ ದೇವಿ ಮಮೋರ್ವಶಿ ।
ಪುರಂದರಪ್ರಿಯೇ ದೇವಿ ವಾರಾಣಸ್ಯಾಃ ಸದಾಂಬಿಕೆ ॥ ೮೬ ॥

ಲೋಹಿತ್ಯಪ್ರದಸಂಕೀರ್ಣೇ ಪಾಪಂ ಹರ ಮಮೋರ್ವಶಿ ।
ಇತ್ಯೇಭಿಃ ಸ್ತುತಿಭಿರ್ಮಂತ್ರೈಃ ಸ್ನಾತ್ವಾ ಪುಣ್ಯೋರ್ವಶೀಜಲೇ ॥ ೮೭ ॥

---

೮೩. ಊರ್ವಶೀಕುಂಡದಲ್ಲಿ ವಿಧಿವತ್ತಾಗಿ ಸ್ನಾನಮಾಡಿ, ಬಳಿಕ ಪಾಂಡು ನಾಥಶಿಲೆಯನ್ನು ಸ್ಪರ್ಶಿಸಿ, ಮುಂದೆ ನೀಲಕೂಟಾಚಲವನ್ನೇರುವ ಮನುಜನು ತಿರುಗಿ ಜನ್ಮವನ್ನು ಪಡೆಯುವುದಿಲ್ಲ ಎಂದರೆ ಮುಕ್ತನಾಗುವನು.

೮೪-೮೭. "ಸ್ವರ್ಗದಿಂದ ಬಂದವಳೂ, ವಾರಾಣಸಿಗಿಂತಲೂ ಪವಿತ್ರಳಾದವಳೂ ಆದ ಓ ಊರ್ವಶಿಕುಂಡವೇ, ಸುಧಾಮಯವಾದ ನಿನ್ನ ಜಲಗಳಿಂದ ನನ್ನ ಪಾಪವನ್ನು ಹೋಗಲಾಡಿಸು, ಅಮೃತವನ್ನು ಸುರಿಸುವವಳೂ, ಅಮೃತರಾಶಿಯನ್ನು ತುಂಬುವವಳೂ ಆದ ಓ ಊರ್ವಶಿದೇವಿಯೇ, ನಿನ್ನಲ್ಲಿರುವ ಅಮೃತದಿಂದ ನನಗೆ ಅಮರತ್ವವನ್ನು ದಯಪಾಲಿಸು. ಇಂದ್ರನಿಗೆ ಪ್ರಿಯೆಳೂ, ವಾರಾಣಸಿಯ ಮಾತೃಸ್ವರೂಪಳೂ, ಲೌಹಿತ್ಯ ಸರಸ್ಸಿನಲ್ಲಿ ನೆಲಸಿರುವವಳೂ ಆದ ಓ ಊರ್ವಶಿ, ನನ್ನ ಪಾಪವನ್ನು ಸಂಪೂರ್ಣವಾಗಿ ಹೋಗಲಾಡಿಸು" ಎಂಬ ಈ ಸ್ತೋತ್ರಮಂತ್ರಗಳಿಂದ ಪವಿತ್ರವಾದ ಊರ್ವಶೀಕುಂಡದ ಜಲವಲ್ಲಿ ಸ್ನಾನಮಾಡಿದವನು ಸಕಲ ಪಾಪರಹಿತನಾಗಿ ಪರದಲ್ಲಿ ವಿಷ್ಣುಲೋಕವನ್ನು ಪಡೆಯುವನು.

ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ವಿಚೇಷ್ಟತೇ।
ಊರ್ವಶೀ ದ್ವಿಭುಜಾ ಪ್ರೋಕ್ತಾ ಸ್ವರ್ಣಕಂಕಣಧಾರಿಣೀ ॥ ೮೮ ॥

ಸೌವರ್ಣಪಾತ್ರಮುದ್ಯತಸ್ರಾವಣಾಯ ಬಿಭರ್ತಿ ಚ ।
ಶುಕ್ಲವಸ್ತ್ರಾ ಗೌರವರ್ಣಾ ಪೀನೋನ್ನತಪಯೋಧರಾ ॥ ೮೯ ॥

ಸರ್ವಾಂಗಸುಂದರೀ ಶುದ್ಧಾ ಸರ್ವಾಭರಣಭೂಷಿತಾ ।
ಏತನ್ನಾಮಾದ್ಯಕ್ಷರಂ ತು ಮುಂತ್ರಮುಸ್ಯಾಃ ಪ್ರಕೀರ್ತಿತಂ ॥ ೯೦ ॥

ಉಮಾತಂತ್ರೇ ತು ಗದಿತಂ ಮುಂತ್ರಮುಸ್ಯಾಃ ಪ್ರಕೀರ್ತಿತಂ ।
ಗಣೇಶಃ ಪೂರ್ವದ್ವಾರಸ್ಥಃ ಕಾಮಾಖ್ಯಾಪರ್ವತಸ್ಯ ತು ॥ ೯೧ ॥

ತತ್ರೈವ ಚಾಗ್ನಿವೇತಾಲಃ ಸ್ಥಿತೋ ದ್ವಾರಿ ಮನೋಹರಃ ।
ತಯೋ ರೂಪಂ ಚ ಮುಂತ್ರಂ ಚ ಯಥೋಕ್ತಂ ಶಂಭುನಾ ಪುರಾ ॥ ೯೨ ॥

೮೮-೮೯. ಊರ್ವಶಿಗೆ ಎರಡು ಬಾಹುಗಳಿರುವವು, ಚಿನ್ನದ ಬಳೆಗಳನ್ನು ಧರಿಸಿರುವಳು. ಚಿನ್ನದ ಪಾತ್ರೆಯನ್ನು ಹಿಡಿದು ಅದರಿಂದ ಅಮೃತವನ್ನು ಸುರಿಸುತ್ತಿರುವಳು, ಅವಳ ಶರೀರಕಾಂತಿಯು ಗೌರವವರ್ಣವಾಗಿರುವುದು. ದುಂಡಾಗಿಯೂ, ಮುಂದಕ್ಕೆ ಉಬ್ಬಿಕೊಂಡೂ ಇರುವ ಸ್ತನಗಳಿಂದ ಕೂಡಿ ಸರ್ವಾಂಗಸುಂದರಿಯಾಗಿರುವಳು. ಬಿಳಿಯ ವಸ್ತ್ರವನ್ನುಟ್ಟು ಸಕಲಾಭರಣಗಳನ್ನು ಧರಿಸಿ ಬೆಳಗುತ್ತಿರುವಳು.

೯೦. ಊರ್ವಶಿ ಹೆಸರಿನ ಮೊದಲನೆಯ ಅಕ್ಷರವಾದ ಊಕಾರಕ್ಕೆ ಬಿಂದುವನ್ನು ಸೇರಿಸಿದರೆ ಊಂ ಎಂದು ಊರ್ವಶಿಯ ಬೀಜಮಂತ್ರವಾಗುವುದು. ಉಮಾತಂತ್ರದಲ್ಲಿಯೂ ಇವಳ ಮಂತ್ರವನ್ನು ಹೇಳಿದೆ.

೯೧. ಕಾಮಾಖ್ಯಾ ಪರ್ವತದ ಪೂರ್ವದ್ವಾರದಲ್ಲಿ ಗಣೇಶನು ಇರುವನು. ಅಲ್ಲಿಯೇ ಮನೋಹರವಾದ ಅಗ್ನಿವೇತಾಲನಿರುವನು.

೯೨. ಆ ಗಣೇಶವೇತಾಲರ ರೂಪ ಮತ್ತು ಮಂತ್ರಗಳನ್ನು ಹಿಂದೆ ಶಂಕರನು ಹೇಗೆ ಹೇಳಿರುವನೋ ಅದರಂತೆಯೇ ನಿನಗೆ ನಾನು ಹೇಳುವೆನು.

ತದಹಂ ಪ್ರತಿವಕ್ಷ್ಯಾಮಿ ಮಹಾರಾಜ ಶೃಣುಷ್ವ ಮೇ ।
ಓಂ ನಮ ಉಲ್ಕಾಮುಖಾಯೇತಿ ಮೂಲಬೀಜಾದಿಸಂಗತಂ ॥ ೯೩ ॥

ಮಂತ್ರಂ ಸಿದ್ಧಗಣೇಶಸ್ಯ ದ್ವಾರಸ್ಥಸ್ಯ ಪ್ರಕೀರ್ತಿತಂ ।
ರೂಪಂ ತಸ್ಯ ಪ್ರವಕ್ಷ್ಯಾಮಿ ಗಜವಕ್ತ್ರಂ ತ್ರಿಲೋಚನಂ ॥ ೯೪ ॥

ಲಂಬೋದರಂ ಚತುರ್ಬಾಹುಂ ವ್ಯಾಲಯಜ್ಞೋಪವೀತಿನಂ ।
ಶೂರ್ಪಕರ್ಣಂ ಬೃಹದ್ದಂಡಮೇಕದಂತಂ ಪೃಥೂದರಂ ॥ ೯೫ ॥

ದಕ್ಷಿಣೇ ತು ಕರೇ ದಂಡಮುತ್ಪಲಂ ತು ತಥಾಪರೇ ।
ಲಡ್ಡುಕಂ ಪರಶುಂ ಚೈವ ವಾಮತಃ ಪರಿಕೀರ್ತಿತಂ ॥ ೯೬ ॥

ಬೃಹತ್ಕಾಕ್ಷಿಪ್ತಗಗನಂ ಪೀನಸ್ಕಂಧಾಂಘ್ರಿಪಾಣಿನಂ ।
ಯುಕ್ತಂ ಬುದ್ಧಿಕುಬುದ್ಧಿಭ್ಯಾಮಧಸ್ತಾನ್ಮೂಷಕಾನ್ವಿತಂ ॥ ೯೭ ॥

ತಂತ್ರಸ್ತು ಯಾದೃಶಃ ಪ್ರೋಕ್ತಃ ಪಂಚವಕ್ತ್ರಸ್ಯ ಪೂಜನೇ ।
ಸ ಏವ ತಂತ್ರೋ ಗ್ರಹ್ಯಸ್ತು ತಾದೃಗ್ವಿಧಿನಿಷೇಧನಂ ॥ ೯೮ ॥

---

೯೩. ಓಂ ನಮಃ ಉಲ್ಕಾಮುಖಾಯ ಎಂಬ ಮೂಲ ಮತ್ತು ಬೀಜಮಂತ್ರಗಳಿಂದ ಸೇರಿರುವ ಮಂತ್ರವು ದ್ವಾರಪಾಲಕನಾದ ಸಿದ್ಧಗಣೇಶನ ಮಂತ್ರವು.

೯೪-೯೭. ಅವನರೂಪವು ಹೀಗಿರುವುದು:—ಆನೆಯಮುಖದಂತೆ ಮುಖವಿರುವುದು. ದೊಡ್ಡದಾದ ಹೊಟ್ಟೆ, ನಾಲ್ಕು ಭುಜಗಳು, ಮೂರು ಕಣ್ಣುಗಳು, ಮರದಂತಿರುವ ಅಗಲವಾದ ಕಿವಿಗಳು, ದೊಡ್ಡ ಕಪೋಲಗಳು, ಒಂದು ಕೊಂಬು, ಆಳವಾದ ನಾಭಿಪ್ರದೇಶ, ಪುಷ್ಟವಾದ ಭುಜ, ಶಿರಸ್ಸು, ಇವುಗಳಿಂದ ಒಪ್ಪುತ್ತಿರುವನು. ಸರ್ಪವನ್ನೇ ಯಜ್ಞೋಪವೀತವನ್ನಾಗಿ ಹಾಕಿಕೊಂಡಿರುವನು. ಬಲಗೈಗಳಲ್ಲಿ ದಂಡ, ಮತ್ತು ಕನ್ನೈದಿಲೆಗಳನ್ನೂ, ಎಡಗೈಗಳಲ್ಲಿ ಲಾಡು ಮತ್ತು ಕೊಡಲಿಗಳನ್ನೂ ಧರಿಸಿರುವನು. ಬುದ್ಧಿ ಮತ್ತು ಕುಬುದ್ಧಿಗಳೊಡನಿರುವನು, ಅವನ ಕೆಳಭಾಗದಲ್ಲಿ ಅವನ ವಾಹನವಾದ ಇಲಿಯು ಇರುವುದು.

೯೮. ವಿನಾಯಕನ ಪೂಜೆಯಲ್ಲಿ ಯಾವ ತಂತ್ರವನ್ನು ಹೇಳಿರುವುದೋ ಅದೇ ತಂತ್ರಕ್ರಮವನ್ನು ಇಲ್ಲಿ ಅನುಸರಿಸಬೇಕು. ಅದರ ವಿಧಿನಿಷೇಧಗಳೇ ಇಲ್ಲಿಯೂ ಅನ್ವಯಿಸುವವು.

ದ್ವಿಭುಜಃ ಪೀನವದನೋ ರಕ್ತನೇತ್ರೋ ಭಯಂಕರಃ ।
ಕ್ಷುರಿಕಾಂ ದಕ್ಷಿಣೇ ಪಾಣೌ ವಾಮೇ ರುಧಿರಪಾತ್ರಕಂ ॥ ೯೯ ॥

ದಂಷ್ಟ್ರಾಕರಾಲವದನಃ ಕೃಶೋ ಧಮನಿಸಂತತಃ ।
ಜಟಾಂ ದೀರ್ಘಾಂ ಮೂರ್ಧ್ನಿ ಬಿಭ್ರದ್ಘೋರ ಏವ ಯುತ ಸ್ತಥಾ ॥ ೧೦೦ ॥

ಪಚತುರ್ಥೋಽಗ್ನಿ ಬೀಜೇನ ಷಷ್ಠಸ್ವರವಿಭೂಷಿತಃ ।
ಅಗ್ನಿವೇತಾಲಬೀಜೋಽಯಂ ಸರ್ವತ್ರ ಭಯನಾಶಕಃ ॥ ೧೦೧ ॥

ಪೂಜಯೇದಗ್ನಿವೇತಾಲಂ ಸರ್ವತ್ರ ಭಯಕಾರಣಂ ।
ಯಃ ಪೂಜಯೇತ್ತಸ್ಯ ಪುನರ್ಭೂತಾದಿಭ್ಯೋ ಭಯಂ ನ ಹಿ ॥ ೧೦೨ ॥

ಅಷ್ಟಾನಾಮಥ ಮಂತ್ರಾಣಾಂ ಯೋಗಿನೀನಾಂ ಕ್ರಮಾನ್ನೃಪ ।
ಶೈಲಪುತ್ರೀಪ್ರಮುಖ್ಯಾನಾಂ ಮಂತ್ರಾಣ್ಯಷ್ಟಾಕ್ಷರಾಣಿ ತು ॥ ೧೦೩ ॥

೯೯-೧೦೦. ಅಗ್ನಿವೇತಾಲನಿಗೆ ಎರಡು ಕೈಗಳೂ, ದೊಡ್ಡದಾದ ಮುಖವೂ ಇರುವುದು. ಕೆಂಪಾದ ಕಣ್ಣುಗಳಿಂದಲೂ, ಕೋರೆದಾಡೆಯಿಂದಲೂ ಭಯಂಕರನಾಗಿ ಕಾಣುತ್ತಿರುವನು. ಬಲಗೈಯಲ್ಲಿ ಖಡ್ಗವನ್ನೂ, ಎಡಗೈಯಲ್ಲಿ ರಕ್ತತುಂಬಿದ ಪಾತ್ರೆಯನ್ನೂ ಧರಿಸಿರುವನು. ಕೃಶವಾದ ಶರೀರ, ದೇಹದಲ್ಲಿ ಎದ್ದು ಕಾಣುತ್ತಿರುವ ನರಗಳು, ಶಿರಸ್ಸಲ್ಲಿ ಉದ್ದವಾದ ಜಟೆ, ಇವುಗಳು ಇವನ ಘೋರರೂಪವನ್ನು ಮತ್ತಷ್ಟು ಹೆಚ್ಚಿಸುತ್ತಲಿರುವುವು.

೧೦೧. ಪಕಾರದಿಂದ ನಾಲ್ಕನೆಯ ವರ್ಣವಾದ ಭಕಾರವು ಅಗ್ನಿಬೀಜವಾದ ರಕಾರದಿಂದಲೂ, ಆರನೆಯ ಸ್ವರವಾದ ಊಕಾರದಿಂದಲೂ ಕೂಡಿದರೆ ಭ್ರೂಂ ಎಂದು ಅಗ್ನಿವೇತಾಲಬೀಜಮಂತ್ರವಾಗುವುದು. ಈ ಮಂತ್ರವು ಎಲ್ಲೆಡೆಯಲ್ಲಿಯೂ ಭಯವನ್ನು ಹೋಗಲಾಡಿಸುವುದು.

೧೦೨. ಈ ಮೇಲಿನ ಬೀಜಮಂತ್ರದಿಂದ ಭಯಂಕರನಾದ ಅಗ್ನಿವೇತಾಲನನ್ನು ಯಾವನು ಪೂಜಿಸುವನೋ ಅವನಿಗೆ ಯಾವಾಗಲೂ ಭೂತಾದಿಗಳಿಂದ ಭೀತಿಯು ಆಗಲಾರದು.

೧೦೩-೧೦೪. ಎಲೈ ರಾಜನೆ! ಶೈಲಪುತ್ರಿಯೇ ಮೊದಲಾದ ಎಂಟುಜನ ಯೋಗಿನಿಯರ ಅಷ್ಟಾಕ್ಷರೀಮಂತ್ರಗಳೆಂಟನ್ನು ಹಿಂದೆ ವೈಷ್ಣವೀತಂತ್ರದಲ್ಲಿ ಕ್ರಮವಾಗಿ

ವೈಷ್ಣವೀತಂತ್ರಸಂಸ್ಥಾನಿ ಪೂರ್ವಪ್ರೋಕ್ತಾನಿ ತಾನಿ ತು ।
ಶೈಲಪುತ್ರ್ಯಾಸ್ತಥಾ ಚಾಂಗಮುಂತ್ರಂ ಪ್ರಾಕ್ಪ್ರತಿಪಾದಿತಂ ॥ ೧೦೪ ॥

ರೂಪಂ ತು ನರಶಾರ್ದೂಲ ಯೋಗಿನೀನಾಂ ವಿಶೇಷತಃ ।
ಪ್ರತ್ಯೇಕ್ಷರೇಣ ಬೀಜೇನ ದುರ್ಗಾತಂತ್ರೇಣ ವಾ ತ್ವಿಮಾಃ ॥ ೧೦೫ ॥

ನೇತ್ರಬೀಜೇನೈವ ಪೂಜ್ಯಾ ಯೋಗಿನ್ಯೋ ನೃಪಸತ್ತಮ ।
ಕಾತ್ಯಾಯನೀಂ ಪಾದದುರ್ಗಾಂ ದುರ್ಗಾತಂತ್ರೇಣ ಪೂಜಯೇತ್ ॥

ತದೇವ ಪೂಜನಂ ರೂಪಂ ತತ್ಪೂರ್ವಂ ಪ್ರತಿಪಾದಿತಂ ।
ಕಾಲರಾತ್ರ್ಯಾಸ್ತು ಮಂತ್ರೇಣ ಕಾಲರಾತ್ರೀಂ ಪ್ರಪೂಜಯೇತ್ ॥ ೧೦೭ ॥

ಕಾಲರಾತ್ರ್ಯಾ ರೂಪಮಂತ್ರೌ ಪೂರ್ವೈವ ಪ್ರತಿಪಾದಿತೌ ।
ಮಹಾಮಾಯಾತಂತ್ರಮಂತ್ರೈಃ ಪೂಜಯೇದ್ಭುವನೇಶ್ವರೀಂ ॥ ೧೦೮ ॥

ಹೇಳಿರುವುದು, ಮತ್ತು ಶೈಲಪುತ್ರಿಯ ಅಂಗಮಂತ್ರವನ್ನೂ, ಯೋಗಿನಿಯರ ರೂಪಗಳನ್ನೂ ಸಹ ವಿಶೇಷಕ್ರಮದಿಂದ ಹಿಂದೆಯೇ ಹೇಳಿರುವುದು.

೧೦೫. ಎಲೈ ರಾಜೇಂದ್ರನೇ! ಈ ಯೋಗಿನಿಯರನ್ನು ಪ್ರತ್ಯೇಕವಾಗಿ ಅವರವರ ಬೀಜಮಂತ್ರದಿಂದಲಾಗಲೀ, ದುರ್ಗಾತಂತ್ರದಿಂದಲಾಗಲೀ, ನೇತ್ರಬೀಜದಿಂದಲಾಗಲೀ ಪೂಜಿಸಬೇಕು.

೧೦೬. ಕಾತ್ಯಾಯಿನಿಯನ್ನೂ, ಪಾದದುರ್ಗಾದೇವಿಯನ್ನೂ ದುರ್ಗಾತಂತ್ರದಿಂದ ಪೂಜಿಸಬೇಕು.

೧೦೭. ಕಾಲರಾತ್ರಿಯಮಂತ್ರದಿಂದ ಕಾಲರಾತ್ರಿದೇವಿಯನ್ನು ಪೂಜಿಸಬೇಕು. ಕಾಲರಾತ್ರಿಯ ಸ್ವರೂಪ ಮತ್ತು ಮಂತ್ರಗಳನ್ನು ಹಿಂದೆ ಹೇಳಿರುವುದು.

೧೦೮. ಮಹಾಮಾಯಾಕಲ್ಪದಲ್ಲಿ ಹೇಳಿರುವ ತಂತ್ರಮಂತ್ರಗಳಿಂದ ಭುವನೇಶ್ವರಿಯನ್ನು ಪೂಜಿಸಬೇಕು. ಈ ಯೋಗಿನಿಯರೆಲ್ಲರೂ ಕಾಮಾಖ್ಯಾದೇವಿಯಂತೆ ಸಕಲ ಫಲಗಳನ್ನೂ ಕೊಡುವರು.

ಏತಾಃ ಸರ್ವಾಸ್ತು ಯೋಗಿನ್ಯಃ ಕಾಮಾಖ್ಯಾವತ್ಫಲಪ್ರದಾಃ ।
ವಿಶೇಷೋ ಯತ್ರ ನೈವೋಕ್ತೋ ರೂಪೇ ತಂತ್ರೇ ಚ ಪೂಜನೇ ॥ ೧೦೯ ॥

ದುರ್ಗಾತಂತ್ರೇಣ ಮಂತ್ರೇಣ ತತ್ರ ಪೂಜಾಂ ಸಮಾಚರೇತ್ ।
ಪ್ರತ್ಯೇಕಂ ಯೋಗಿನೀರ್ಯಸ್ತು ಪೂಜಯೇನ್ನರಸತ್ತಮಃ ॥ ೧೧೦ ॥

ಸ ಸರ್ವಯಜ್ಞಸ್ಯ ಫಲಂ ಪ್ರಾಪ್ನೋತಿ ನರಸತ್ತಮ ।
ನೀಲಶೈಲಸ್ಯ ಪೂರ್ವಸ್ಮಿನ್ ಸ್ವರೂಪಂ ಪ್ರತಿಪಾದಿತಂ ॥ ೧೧೧ ॥

ನಾಭಿಮಂಡಲಪೂರ್ವಸ್ಯ ಭಸ್ಮಕೂಟಸ್ಯ ದಕ್ಷಿಣೇ ।
ಪೂರ್ವಸ್ಯಾಂ ಕರ್ಪಟೋ ನಾಮ ಪರ್ವತೋ ಯಮರೂಪಧೃಕ್ ॥ ೧೧೨ ॥

ತತ್ರ ಯಾಮ್ಯಶಿಲಾ ಕೃಷ್ಣಾ ಕೃಷ್ಣಾಂಜನಸಮಪ್ರಭಾ ।
ಅಧಿತ್ಯಕಾಯಾಂ ರಾಜೇಂದ್ರ ವ್ಯಾಮಪಂಚಸುವಿಸ್ತೃತಾ ॥ ೧೧೩ ॥

ಪೂಜಯೇತ್ತತ್ರ ಶಮನಂ ಪಾಣೌ ದಂಡಂ ಸದೈವ ಯಃ ।
ಧತ್ತೇ ತು ಪಾಣಿನಾ ನಿತ್ಯಂ ಪ್ರಾಣಿದಂಡಸ್ಯ ಸಾಧನಂ ॥ ೧೧೪ ॥

---

೧೦೯. ರೂಪದಲ್ಲಿಯಾಗಲೀ, ತಂತ್ರ ಮತ್ತು ಪೂಜೆಗಳಲ್ಲಾಗಲೀ, ಎಲ್ಲಿ ವಿಶೇಷಕ್ರಮವನ್ನು ಹೇಳಿರುವುದಿಲ್ಲವೋ ಅವನ್ನು ದುರ್ಗಾತಂತ್ರಮಂತ್ರದಲ್ಲಿ ಹೇಳಿರುವುದನ್ನು ಅನುಸರಿಸಿ ಆಚರಿಸಬೇಕು.

೧೧೦-೧೧೧. ಎಲೈ ಪುರುಷಶ್ರೇಷ್ಠನೇ ಈ ಯೋಗಿನಿಯರನ್ನು ಪ್ರತ್ಯೇಕವಾಗಿ ಪೂಜಿಸುವ ನರೋತ್ತಮನು ಸಕಲ ಯಜ್ಞಗಳ ಫಲವನ್ನು ಪಡೆವನು. ನೀಲಶೈಲದ ಸ್ವರೂಪವನ್ನು ಹಿಂದೆ ನಿರೂಪಿಸಿರುವೆವು.

೧೧೨-೧೧೩. ದೇವಿಯ ನಾಭಿಮಂಡಲಕ್ಕೆ ಪೂರ್ವದಲ್ಲಿಯೂ ಭಸ್ಮಕೂಟಾಚಲಕ್ಕೆ ದಕ್ಷಿಣದಲ್ಲಿಯೂ ಯಮಸ್ವರೂಪಿಯಾದ ಕರ್ಪಟವೆಂಬ ಪರ್ವತವಿರುವುದು. ಆ ಪರ್ವತದ ಮೇಲುತಪ್ಪಲಲ್ಲಿ ಯಮಶಿಲೆಯೊಂದು ಇರುವುದು. ಅದು ಕಾಡಿಗೆಯಂತೆ ಅತಿ ಕಪ್ಪಾಗಿರುವುದು. ಮತ್ತು ಐದುಮಾರು ವಿಸ್ತಾರವಾಗಿರುವುದು.

೧೧೪-೧೧೬. ಆ ಶಿಲೆಯಲ್ಲಿ ಯಮನನ್ನು ಪೂಜಿಸಬೇಕು. ಅವನು ಪ್ರಾಣಿಗಳನ್ನು ಶಿಕ್ಷಿಸುವಂತಹ ದಂಡವೊಂದನ್ನು ಕೈಯಲ್ಲಿ ಸದಾ ಧರಿಸಿರುವನು. ಅವನ

ಕೃಷ್ಣವರ್ಣಂ ತು ದ್ವಿಭುಜಂ ಕಿರೀಟಮುಕುಟೋಜ್ಜ್ವಲಂ ।
ದಧತಂ ಚಾಸಿಪತ್ರೇಂ ಚ ವಾಮಪಾಣೌ ಸದೈವ ಹಿ ॥ ೧೦೫ ॥

ಕೃಷ್ಣವಸ್ತ್ರಂ ಸ್ಥೂಲಪದ್ಮಂ ಬಹಿರ್ನಿಃಸೃತದಂತಕಂ ।
ಭಯಾಭಯಪ್ರದಂ ನಿತ್ಯಂ ನೃಣಾಂ ಮಹಿಷವಾಹನಂ ॥ ೧೦೬ ॥

ಪೂಜಯೇತ್ಪರಯಾ ಭಕ್ತ್ಯಾ ಯಾಮ್ಯಬೀಜೇನ ಸಾಧಕಃ ।
ಉಪಾಂತವರ್ಗಸ್ಯಾದಿಯೋರ್ ವರ್ಣೋರ್ ಬಿಂದ್ವಿದುಸಂಯುತಃ ॥ ೧೦೭ ॥

ಯಮಬೀಜಮಿತಿ ಖ್ಯಾತಂ ಯಮಸ್ಯ ಪ್ರೀತಿದಾಯಕಂ ।
ಅನೇನೈವ ತು ಮಂತ್ರೇಣ ಶಮನಂ ಪೂಜಯೇತ್ತು ಯಃ ॥ ೧೦೮ ॥

ಕರ್ಪಟಾಖ್ಯೇಽಚಲವರೇ ನಾಪಮೃತ್ಯುಮವಾಪ್ನುಯಾತ್ ।
ಪೂರ್ವಸ್ಯಾಂ ಕರ್ಪಟಾಖ್ಯಾತ್ತು ಶೈಲಾಚ್ಚೈತ್ರ ಇತಿ ಸ್ಮೃತಃ ॥ ೧೦೯ ॥

ಶರೀರವು ಕಪ್ಪಾಗಿರುವುದು. ಎರಡು ಬಾಹುಗಳಿರುವವು. ತಲೆಯಲ್ಲಿ ಕಿರೀಟವನ್ನು ಧರಿಸಿರುವನು. ಎಡಗೈಯಲ್ಲಿ ಖಡ್ಗವನ್ನು ಯಾವಾಗಲೂ ಧರಿಸಿರುವನು. ಬಲಗೈಯಲ್ಲಿ ದೊಡ್ಡ ಕಮಲವನ್ನು ಹಿಡಿದಿರುವನು. ಕಪ್ಪುಬಟ್ಟೆಯನ್ನುಟ್ಟು ಮುಂದಕ್ಕೆ ಚಾಚಿಕೊಂಡಿರುವ ಕೋರೆಹಲ್ಲುಗಳಿಂದ ಭಯಂಕರವಾಗಿ ಕಾಣುತ್ತಾ ಕೋಣದ ಮೇಲೆ ಕುಳಿತಿರುವನು.

೧೦೭. ಇಂತಹ ಯಮನನ್ನು ಭಕ್ತಿಯುಕ್ತನಾಗಿ ಯಮಬೀಜಮಂತ್ರದಿಂದ ಪೂಜಿಸಬೇಕು. ಕೊನೆಯವರ್ಗದ ಹಿಂದಿನವರ್ಗವಾದ ಯವರ್ಗದ ಮೊದಲನೆಯ ವರ್ಣವಾದ ಯಕಾರಕ್ಕೆ ಅನುಸ್ವಾರವನ್ನು ಸೇರಿಸಿದರೆ ಯಂ ಎಂದು ಯಮಬೀಜವಾಗುವುದು. ಈ ಬೀಜಮಂತ್ರವು ಯಮನಿಗೆ ತುಂಬಾ ಪ್ರಿಯವಾದುದು.

೧೦೮. ಈ ಮೇಲಿನ ಬೀಜಮಂತ್ರದಿಂದ ಕರ್ಪಟಾಚಲದಲ್ಲಿರುವ ಯಮನನ್ನು ಯಾವನು ಪೂಜಿಸುವನೋ ಅವನಿಗೆ ಅಪಮೃತ್ಯು ಭಯವಿಲ್ಲ.

೧೦೯-೧೧೧. ಕರ್ಪಟಾಚಲದಿಂದ ಪೂರ್ವಕ್ಕೆ ಚಿತ್ರವೆಂಬ ಬೆಟ್ಟವಿರುವುದು. ಅದರ ಪೂರ್ವದಿಕ್ಕಿನ ಕೊನೆಯಲ್ಲಿ ಎಂದರೆ ಆಗ್ನೇಯದಿಕ್ಕಿನಲ್ಲಿ ಬ್ರಹ್ಮಶಿಲಾಪೀಠವು

ಯಃ ಪೂರ್ವಭಾಗಪ್ರಾಂತೇಽಭೂದ್ದಿಶ್ಯಾಗ್ನೇಯ್ಯಾಮವಸ್ಥಿತಃ ।
ಪೀಠಸ್ತು ಬ್ರಹ್ಮಗ್ರಾವಸ್ತು ಸ ಪ್ರಾಕ್ಪರ್ವತ ಉಚ್ಯತೇ ॥ ೧೨೦ ॥

ತಸ್ಮಿನ್ ವಸತಿ ಸತತಂ ಗ್ರಹಾ ನವ ಯಥೇಚ್ಛಯಾ ।
ತತ್ರ ತಾನ್ ಪೂಜಯೇದ್ಯಸ್ತು ಸ ನಾಪ್ನೋತ್ಯಾಪದಂ ಕ್ವಚಿತ್ ॥ ೧೨೧ ॥

ರೂಪಂ ಮಂತ್ರಂ ಚ ಸೂರ್ಯಸ್ಯ ಚಂದ್ರಸ್ಯ ಪ್ರತಿಪಾದಿತಂ ।
ಸಪ್ತಾನಾಮಿತರೇಷಾಂ ತು ಮಂತ್ರ ರೂಪಂ ಶ್ರಣುಷ್ವ ಮೇ ॥ ೧೨೨ ॥

ರಕ್ತಾಂಬರಧರಃ ಶೂಲೀ ಶಕ್ತಿಮಾಂಶ್ಚ ಗದಾಧರಃ ।
ಚತುರ್ಭುಜೋ ಮೇಷರಥೋ ವರದೋ ಮಂಗಳೋ ಮತಃ ॥ ೧೨೩ ॥

ಪೀತಾಂಬರಧರಃ ಶೂಲೀ ಪೀತಮಾಲ್ಯಾನುಲೇಪನಃ ।
ಖಡ್ಗ ಚರ್ಮಗದಾಪಾಣಿಃ ಸಿಂಹಸ್ಥೋ ವರದೋ ಬುಧಃ ॥ ೧೨೪ ॥

ಸ್ವರ್ಣಗೌರಃ ಪೀತವಾಸಾಃ ಸ್ವರ್ಣಪರ್ಯಂಕಸಂಸ್ಥಿತಃ ।
ಮಾಲಾಂ ಕಮಂಡಲುಂ ದಂಡಂ ವಾಮೇನ ವರದಾಯಕಂ ॥ ೧೨೫ ॥

ಇರುವುದು. ಅಲ್ಲಿ ನವಗ್ರಹದೇವತೆಗಳು ಯಾವಾಗಲೂ ವಾಸಿಸುತ್ತಿರುವರು. ಅಲ್ಲಿ ಅವರನ್ನು ಪೂಜಿಸಿದವನಿಗೆ ಯಾವ ವಿಧವಾದ ಆಪತ್ತೂ ಸಂಭವಿಸುವುದಿಲ್ಲ.

೧೨೨. ಸೂರ್ಯಚಂದ್ರರೂಪ ಮತ್ತು ಮಂತ್ರಗಳನ್ನು ಹಿಂದೆ ಹೇಳಿರುತ್ತವೆ. ಮಿಕ್ಕ ಏಳು ಗ್ರಹಗಳ ರೂಪ ಮತ್ತು ಮಂತ್ರಗಳನ್ನು ಹೇಳುವೆನು, ಕೇಳು.

೧೨೩. ಮಂಗಲನು ಕೆಂಪುಬಟ್ಟೆಯನ್ನು ಧರಿಸಿರುವನು. ಶೂಲ, ಶಕ್ತಿ, ಗದೆಗಳನ್ನು ಹಿಡಿದಿರುವನು. ನಾಲ್ಕು ಬಾಹುಗಳುಳ್ಳವನು. ಟಗರನ್ನೇರಿರುವನು. ಇಂತಹ ಮಂಗಲನು ವರದಾಯಕನು.

೧೨೪. ಬುಧನು ಹಳದಿಯ ಬಟ್ಟೆಯನ್ನು ಧರಿಸಿರುವನು. ಹಳದಿಯ ಹೂವಿನ ಮಾಲೆ ಗಂಧಗಳನ್ನು ಸೇವಿಸುವನು. ಖಡ್ಗ, ಗುರಾಣಿ, ಗದೆಗಳನ್ನು ಧರಿಸಿ ಸಿಂಹವನ್ನೇರಿ ಕುಳಿತಿರುವನು. ಇಂತಹ ಬುಧನು ವರದಾಯಕನು.

೧೨೫-೧೨೬. ಬೃಹಸ್ಪತಿಯು ಚಿನ್ನದಬಣ್ಣದವನು. ಹಳದಿಯ ಬಟ್ಟೆಯ

ಚತುರ್ಭುಜಂ ಚ ಸರ್ವಜ್ಞಂ ಚಿಂತಯೇದ್ದೇವತೀರ್ಥಕಂ ।
ಸರ್ವದೇವಗಣೈರ್ನಿತ್ಯಂ ತಪ್ಯಮಾನಂ ಮುನೋಽಹರಂ ॥ ೧೨೬ ॥

ಶುಕ್ಲವಸ್ತ್ರಂ ಶುಕ್ಲವರ್ಣಂ ಶಂಖನಾಗೋಪರಿಸ್ಥಿತಂ ।
ಚತುರ್ಭುಜಂ ಪಾಶಮಾಲಾಂ ಪುಸ್ತಕಂ ಚ ವರಾಭಯೇ ॥ ೧೨೭ ॥

ಕ್ರಾಮಾದ್ದಕ್ಷಿಣವಾಮೇಷು ಧಕ್ತ್ತೇ ದೈತ್ಯಗುರುಃ ಸದಾ ।
ಇಂದ್ರನೀಲನಿಭಃ ಶೂಲೀ ವರದೋ ಗೃಧ್ರವಾಹನಃ ॥ ೧೨೮ ॥

ಪಾಶಬಾಣಾಸನಧರೋ ಧ್ಯಾತವ್ಯೋಽರ್ಕಸುತಃ ಸದಾ ।
ಕಾಮದೇವಸ್ಯ ಬೀಜಂ ತು ಮಂತ್ರಂ ಭೌಮಸ್ಯ ಕೀರ್ತಿತಂ ॥ ೧೨೯ ॥

ದುರ್ಗಾಯಾ ನೇತ್ರಬೀಜಸ್ಯ ಯತ್ತು ಪುಢ್ಯಾಕ್ಷರಂ ಶುಭಂ ।
ತನ್ಮಂತ್ರಂ ಶಶಿಪುತ್ರಸ್ಯ ಸರ್ವಕಾಮಫಲಪ್ರದಂ ॥ ೧೩೦ ॥

ನ್ನುಟ್ಟು, ಚಿನ್ನದ ಪೀಠದಲ್ಲಿ ಕುಳಿತಿರುವನು. ಬಲಗೈಗಳಲ್ಲಿ ಜಪಮಾಲೆ, ಕಮಂಡಲು ಗಳನ್ನು ಹಿಡಿದಿರುವನು. ಎಡಗೈಗಳಲ್ಲಿ ದಂಡ ಮತ್ತು ವರದಮುದ್ರೆಗಳನ್ನು ಧರಿಸಿರುವನು. ಮತ್ತು ಅವನಿಗೆ ನಾಲ್ಕು ಭುಜಗಳಿರುವುವು. ದೇವಗುರುವಾದ ಅವನು ದೇವತೆಗಳಿಂದ ಸದಾ ಅರ್ಚಿಸಲ್ಪಡುವನು. ಇಂತಹ ದೇವಾಚಾರ್ಯನನ್ನು ಧ್ಯಾನಿಸ ಬೇಕು.

೧೨೭. ದೈತ್ಯಗುರುವಾದ ಶುಕ್ರಾಚಾರ್ಯನು ಬಿಳಿಯಬಟ್ಟೆಯನ್ನು ಧರಿಸಿ, ಬಿಳಿಯ ಆನೆಯನ್ನೇರಿ ಕುಳಿತಿರುವನು. ನಾಲ್ಕು ಬಾಹುಗಳಿರುವವು. ಬಲಗೈಯಲ್ಲಿ ಜಪಮಾಲೆ, ಮತ್ತು ಪುಸ್ತಕಗಳನ್ನೂ, ಎಡಗೈಗಳಲ್ಲಿ ವರದಮುದ್ರೆ, ಅಭಯಮುದ್ರೆ ಗಳನ್ನೂ ಧರಿಸಿರುವನು.

೧೨೮. ಶನೈಶ್ಚರನು ಇಂದ್ರನೀಲಮಣಿಯಂತೆ ಕಪ್ಪಗಿರುವನು. ಶೂಲವನ್ನು ಧರಿಸಿ, ಹದ್ದಿನಮೇಲೆ ಕುಳಿತಿರುವನು. ಪಾಶ, ಬಾಣ, ಧನಸ್ಸು ಇವುಗಳನ್ನು ಧರಿಸಿ ರುವನು. ಈ ರೀತಿಯಾಗಿ ಶನೈಶ್ಚರನನ್ನು ಧ್ಯಾನಿಸಬೇಕು.

೧೨೯-೧೩೦. ಇನ್ನು ಈ ದೇವತೆಗಳ ಬೀಜಮಂತ್ರಗಳನ್ನು ಹೇಳುವೆನು, ಕೇಳು:—ಕಾಮದೇವನ ಬೀಜಮಂತ್ರವೇ ಮಂಗಲನ ಬೀಜಮಂತ್ರವು. ಆ ಮಂತ್ರ

ನಕಾರಪಂಚಮೋ ದ್ವಿಸ್ತು ಚತುಃಷಟ್‌ಸ್ವರಸಂಯುತಂ ।
ಗಣೇಶಬೀಜಾಂತಮಿದಂ ಗುರೋರ್ಮಂತ್ರಂ ಪ್ರಕೀರ್ತಿತಂ ॥ ೧೩೧ ॥

ಬಿಂದ್ವಿಂದುಸಂಯುತಂ ಚಾಪಿ ಪೂರ್ವವರ್ಣದ್ವಯಂ ಪುನಃ ।
ಸಪ್ತಮುಸ್ವರಸಂಯುಕ್ತೋ ಮುಕಾರಸ್ತ್ವಾದಿರಂತರಂ ॥ ೧೩೨ ॥

ಸ್ಯಾಂತವರ್ಗಾದ್ಯಕ್ಷರಂ ತು ಬಿಂದ್ವಿದುಭ್ಯಾಂ ಸಮನ್ವಿತಂ ।
ಭವೇಚ್ಛುಕ್ರಸ್ಯ ಬೀಜಂ ತು ಸರ್ವಕಾಮುಸಮೃದ್ಧಿತಂ ॥ ೧೩೩ ॥

ಸ್ಯಾಂತವರ್ಗಾದ್ಯಕ್ಷರಂ ತು ಚಂದ್ರಬಿಂದುಸಮನ್ವಿತಂ ।
ಆದ್ಯಮುಂತ್ರಸ್ವರೋಽಸೇತಂ ತದೇವೇತ್ಯಾದಿಸಂಯುತಂ ॥ ೧೩೪ ॥

ಶನೈಶ್ಚರಸ್ಯ ಮುಂತ್ರೋಽಯಂ ಸರ್ವದೋಷವಿನಾಶನಃ ।
ಬಿಂದುಚಂದ್ರಸಮಾಯುಕ್ತಂ ನಾಮಾದ್ಯಕ್ಷರಮೇವ ವಾ ॥ ೧೩೫ ॥

ದಿಂದ ಮಂಗಲನನ್ನು ಪೂಜಿಸಬೇಕು. ದುರ್ಗಾದೇವಿಯ ನೇತ್ರಬೀಜಮಂತ್ರದ ಮಧ್ಯಾಕ್ಷರವು ಬುಧನ ಬೀಜಮಂತ್ರವು. ಇದು ಸಕಲ ಇಷ್ಟಾರ್ಥಗಳನ್ನೂ ಕೊಡುವುದು.

೧೩೧. ನಕಾರದಿಂದ ಮುಂದಿನ ಐದನೆಯವರ್ಣ ಎರಡುಸಾರಿಯೂ, ಆರನೇ ಸ್ವರವಾದ ಊಕಾರವೂ, ಕಡೆಯಲ್ಲಿ ಗಣೇಶಬೀಜವಾದ ಗಕಾರವೂ ಇವುಗಳೆಲ್ಲವೂ ಬಿಂದುಗಳಿಂದ ಸೇರಿದರೆ ಗುರುವನ್ನು ಪೂಜಿಸುವ ಬೀಜಮಂತ್ರವಾಗುವುದು.

೧೩೨-೧೩೩. ಮಕಾರದ ಹಿಂದಿನ ಅಕ್ಷರವಾದ ಭಕಾರಕ್ಕೆ ಏಳನೆಯ ಸ್ವರವಾದ ಋಕಾರವನ್ನೂ ಮತ್ತು ಕಡೆಯವರ್ಗದ ಮೊದಲಕ್ಷರವಾದ ಶಕಾರಕ್ಕೆ ಅನುಸ್ವಾರ ಗಳನ್ನು ಸೇರಿಸಿದರೆ ಶುಕ್ರನನ್ನು ಪೂಜಿಸುವ ಬೀಜಮಂತ್ರವಾಗುವುದು. ಇದು ಸಮಸ್ತ ಇಷ್ಟಾರ್ಥವನ್ನೂ ಕೊಡ.ವುದು.

೧೩೪. ಕಡೆಯ ವರ್ಗದ ಆದ್ಯಕ್ಷರವಾದ ಶಕಾರಕ್ಕೆ ಮೊದಲನೆ ಸ್ವರವಾದ ಆಕಾರವನ್ನೂ, ಬಿಂದುವನ್ನೂ ಸೇರಿಸಿದರೆ ಶಂ ಎಂದು ಶನೈಶ್ಚರನನ್ನು ಪೂಜಿಸುವ ಬೀಜಮಂತ್ರವಾಗುವುದು. ಇದು ಸಮಸ್ತ ದೋಷವನ್ನೂ ನಾಶಮಾಡುವುದು.

೧೩೫. ಈ ಎಲ್ಲಾ ಗ್ರಹಗಳ ಹೆಸರಿನ ಮೊದಲನೆಯ ಅಕ್ಷರವು ಅರ್ಧಚಂದ್ರ ಸೊನ್ನೆಗಳಿಂದ ಕೂಡಿದರೆ ಆಯಾಯ ಗ್ರಹಗಳ ಅಂಗಮಂತ್ರವಾಗುವುದು.

ತೇಷಾಂ ಸರ್ವಗ್ರಹಾಣಾಂ ವೈ ಮಂತ್ರಮಂಗಂ ಪ್ರಕೀರ್ತಿತಂ ।
ಶಾಂತಿಕೇ ಪೌಷ್ಟಿಕೇ ಕೃತ್ಯೇ ಏಭಿರ್ಮಂತ್ರೈರ್ಗ್ರಹಾನಿಮಾನ್ ॥ ೧೩೬ ॥

ಪೂಜಯೇತ್ಸರ್ವದಾ ಧೀರೋ ಭೂತಿಕಾಮೋ ಮಹಾಮತಿಃ ।
ವರದಾಭಯಹಸ್ತಶ್ಚ ಖಡ್ಗಚರ್ಮಧರಸ್ತಥಾ ॥ ೧೩೭ ॥

ಸಿಂಹಾಸನಗತಃ ಕೃಷ್ಣೋ ರಾಹುಧೀರ್ಘರಃ ಪ್ರಚಕ್ಷ್ಯತೇ ।
ಧೂಮ್ರವರ್ಣೋರ್ ವಿಶಾಲಾಕ್ಷಃ ಪುಚ್ಛರೂಪೀ ಚತುರ್ಭುಜಃ ॥ ೧೩೮ ॥

ಖಡ್ಗಚರ್ಮಗದಾಬಾಣಪಾಣಿಃ ಕೇತುಃ ಶರಾಸನಃ ।
ಉಪಾಂತಾದಿಬ್ರ್ವಾದಶೇನ ಸ್ವರೇಣ ಸಹಿತಃ ಪುನಃ ॥ ೧೩೯ ॥

ಉಪಾಂತಃ ಪಂಚಮೇನೇಂದುಬಿಂದುಭ್ಯಾಂ ಸಹಿತಾವ್ಭೌ ।
ಮಂತ್ರೋಯಮನುಲೋಮೇನ ರಾಹೋಃ ಕೇತೋರ್ವಿಲೋಮತಃ ॥

---

೧೩೬. ಶಾಂತಿಕರ್ಮ ಮತ್ತು ಪುಷ್ಟಿಕರ್ಮಗಳಲ್ಲಿ ಈ ಮಂತ್ರಗಳಿಂದ ಈ ಎಲ್ಲ ಗ್ರಹಗಳನ್ನೂ ಐಶ್ವರ್ಯವನ್ನಪೇಕ್ಷಿಸುವ ನರನು ಪೂಜಿಸಬೇಕು.

೧೩೭. ರಾಹುವು ತನ್ನ ಕೈಗಳಲ್ಲಿ ವರದಮುದ್ರೆ, ಅಭಯಮುದ್ರೆಗಳನ್ನೂ, ಕತ್ತಿಗುರಾಣಿಗಳನ್ನೂ ಹಿಡಿದಿರುವನು. ಸಿಂಹಾಸನದಲ್ಲಿ ಕುಳಿತಿರುವನು. ನೀಲವರ್ಣದವನು. ತುಂಬಾ ಪರಾಕ್ರಮಿಯು.

೧೩೮. ಕೇತುವು ಧೂಮ್ರವರ್ಣದವನು. ಇವನಿಗೆ ವಿಸ್ತಾರವಾದ ಕಣ್ಣುಗಳೂ ಬಾಲವೂ, ನಾಲ್ಕು ಬಾಹುಗಳೂ ಇರುವುವು. ಕತ್ತಿ, ಗುರಾಣಿ, ಗದೆ, ಬಾಣ ಇವುಗಳನ್ನು ಧರಿಸಿರುವನು. ಧನುರಾಸನದಲ್ಲಿ ಕುಳಿತಿರುವನು.

೧೩೯-೧೪೦. ಕಡೆಯ ಹಿಂದಿನ ವರ್ಗದ ಮೊದಲನೆ ಅಕ್ಷರಕ್ಕೆ ಹನ್ನೆರಡನೇ ಸ್ವರವನ್ನೂ, ಕಡೆಯ ಹಿಂದಿನ ವರ್ಣಕ್ಕೆ ಐದನೆಯ ಸ್ವರವನ್ನೂ ಸೇರಿಸಿ, ಬಳಿಕ ಬಿಂದುಗಳನ್ನು ಸೇರಿಸಿದರೆ ಈ ಎರಡಕ್ಷರಗಳೂ ರಾಹುವನ್ನು ಪೂಜಿಸುವ ಬೀಜಾಕ್ಷರವಾಗುವುವು. ಈ ಎರಡಕ್ಷರಗಳನ್ನೇ ವಿಲೋಮಕ್ರಮದಿಂದ ಎಂದರೆ ಎರಡನೆಯ ಅಕ್ಷರವನ್ನು ಮೊದಲಕ್ಷರವನ್ನಾಗಿಯೂ, ಮೊದಲಕ್ಷರವನ್ನು ಎರಡನೆಯ ಅಕ್ಷರವನ್ನಾಗಿಯೂ ಉಚ್ಚರಿಸಿದರೆ ಕೇತುವನ್ನು ಪೂಜಿಸುವ ಬೀಜಾಕ್ಷರವಾಗುವುದು. ಅಥವಾ ರಾಹು ಕೇತುಗಳ ಹೆಸರಿನ ಮೊದಲಕ್ಷರಗಳಿಗೆ ಬಿಂದುವನ್ನು ಸೇರಿಸಿದರೆ ಅವರನ್ನು ಪೂಜಿಸುವ ಬೀಜಾಕ್ಷರಗಳಾಗುವುವು.

ಆದ್ಯಕ್ಷರಂ ಪೂರ್ವವದ್ವಾ ಮಂತ್ರಮುಕ್ತ್ವಾಥೈತಯೋಃ ।
ಏವಂ ಚಿತ್ರೇ ಶೈಲವರೇ ಪೂಜಯಿತ್ವಾ ನವಗ್ರಹಾ ॥ ೧೪೧ ॥

ಅಭೀಷ್ಟಾನಲಭತೇ ಕಾಮಾನ್ನರಃ ಶಾಂತಿಂ ತಥೋತ್ತಮಾಂ ।
ಚಿತ್ರಕೂಟಾತ್ತು ಪೂರ್ವಸ್ಯಾಂ ಕಜ್ಜಲಾಚಲ ಉತ್ತಮಃ ॥ ೧೪೨ ॥

ಸರ್ವವಿದ್ಯಾಧರಾದ್ಯಾಸ್ತು ಸಂತ್ಯಸ್ಮಿನ್ ದೇವಯೋನಯಃ ।
ತಂ ಪರ್ವತಂ ಸಮಾರುಹ್ಯ ಪ್ರಣಮ್ಯ ಸಕಲಾನ್ ಸುರಾನ್ ॥ ೧೪೩ ॥

ಸ್ವರ್ಗಂ ಯಾಂತಿ ನರಶ್ರೇಷ್ಠ ಇಹ ಚಾಪ್ಯತುಲಾಂ ಶ್ರಿಯಂ ।
ಕಜ್ಜಲಾಚಲಶೈಲಾತ್ತು ಪೂರ್ವಸ್ಮಿನ್ ಶುಭಪರ್ವತಃ ॥ ೧೪೪ ॥

ಶಚ್ಯಾ ಸಾರ್ಧಂ ಪುರಾ ರೇಮೇ ಯತ್ರ ಶಕ್ರಃ ಸುರೇಶ್ವರಃ ।
ತತ್ಪೂರ್ವಸ್ಯಾಂ ಮಹಾದೇವೀ ನದೀ ಕಪಿಲಗಂಗಿಕಾ ॥ ೧೪೫ ॥

ತಸ್ಯಾಂ ಸ್ನಾತ್ವಾ ನರೋ ಗಂಗಾಸ್ನಾನಜಂ ಫಲಮಾಪ್ನುಯಾತ್ ।
ಕಾಮಾಖ್ಯಾನಿಲಯಾತ್ಪೂರ್ವಂ ದಕ್ಷಿಣಸ್ಯಾಂ ತಥಾ ದಿಶಿ ॥ ೧೪೬ ॥

---

೧೪೧. ಹೀಗೆ ಚಿತ್ರಕೂಟಶೈಲದಲ್ಲಿ ನವಗ್ರಹಗಳನ್ನು ವಿಧಿವತ್ತಾಗಿ ಪೂಜಿಸಿದ ನರನು ಸಕಲ ಇಷ್ಟಾರ್ಥಗಳನ್ನೂ, ಉತ್ತಮವಾದ ಶಾಂತಿಯನ್ನೂ ಪಡೆಯುವನು.

೧೪೨-೧೪೩. ಚಿತ್ರಕೂಟಶೈಲದಿಂದ ಪೂರ್ವಕ್ಕೆ ಕಜ್ಜಲಾಚಲವೆಂಬ ಪರ್ವತ ಶ್ರೇಷ್ಠವಿರುವುದು. ಅಲ್ಲಿ ವಿದ್ಯಾಧರರೇ ಮೊದಲಾದ ಸಕಲ ದೇವಕುಲಗಳಿರುವುವು. ಎಲೈ ನರಶ್ರೇಷ್ಠನೇ! ಆ ಶೈಲಕ್ಕೆ ಹೋಗಿ ಅಲ್ಲಿರುವ ಸಕಲದೇವತೆಗಳನ್ನು ನಮಸ್ಕರಿಸಿದವರು ಇಹದಲ್ಲಿ ಸಕಲೈಶ್ವರ್ಯಗಳನ್ನು ಪಡೆದು, ಪರದಲ್ಲಿ ಸ್ವರ್ಗವನ್ನು ಪಡೆವರು.

೧೪೪-೧೪೫. ಕಜ್ಜಲಶೈಲದಿಂದ ಪೂರ್ವಕ್ಕೆ ಶುಭಪರ್ವತವಿರುವುದು. ಅಲ್ಲಿ ಹಿಂದೆ ದೇವೇಂದ್ರನಾದ ಇಂದ್ರನು ಶಚೀದೇವಿಯೊಡನೆ ವಿಹರಿಸುತ್ತಲಿದ್ದನು. ಆ ಶೈಲದ ಪೂರ್ವಭಾಗದಲ್ಲಿ ದೇವೀಸ್ವರೂಪವಾದ ಕಪಿಲಗಂಗಾ ಎಂಬ ನದಿಯು ಇರುವುದು. ಅವರಲ್ಲಿ ಸ್ನಾನಮಾಡಿದವರಿಗೆ ಗಂಗಾಸ್ನಾನಮಾಡಿದ ಫಲವು ಬರುವುದು.

೧೪೬-೧೪೯. ಕಾಮಾಖ್ಯಾದೇವಿಯ ದೇವಾಲಯದಿಂದ ಪೂರ್ವಕ್ಕೆ ದಕ್ಷಿಣ ದಿಕ್ಕಿನಲ್ಲಿ ಬ್ರಹ್ಮಬಿಲವೆಂಬ ದೊಡ್ಡ ಗುಹೆಯೊಂದಿರುವುದು. ಎಲೈ ರಾಜೇಂದ್ರ! ಆ

ವಿದ್ಯತೇ ಮಹದಾವರ್ತಂ ಭುವಿ ಬ್ರಹ್ಮಬಿಲಂ ಮಹತ್ ।
ಪಂಚವಿಶಂತಿಮಾನೇನ ಯೋಜನಾನಾಂ ನರೇಶ್ವರ ॥ ೧೪೭ ॥

ತಸ್ಮಾದಾಯಾತಿ ಸುನದೀ ಸಿತಾಂಭೋಪಮತೋಯಭಾಕ್ ।
ಕೋ ಬ್ರಹ್ಮಾ ಕೀರ್ತಿತೋ ದೇವೈರ್ಯಸ್ಮಾತ್ತಸ್ಯ ಪಿಲಾತ್ಸೃತಾ ॥ ೧೪೮ ॥

ಗಂಗೇವ ಫಲದಾ ಯಸ್ಮಾತ್ಯಸ್ಮಾತ್ತಪಿಲಗಂಗಿಕಾ ।
ಸ್ನಾತ್ವಾ ಕಪಿಲಗಂಗಾಯಾಂ ಸರ್ವಮನ್ವಂತರೇಷು ಚ ॥ ೧೪೯ ॥

ನರಃ ಸ್ವರ್ಗಮವಾಪ್ಯಾದೌ ಬ್ರಹ್ಮಲೋಕಂ ತತೋ ವ್ರಜೇತ್ ।
ಅತೀತ್ಯ ತಾಂ ನದೀಂ ಪೂರ್ವಭಾಗೇ ದಮನಿಕಾಭ್ವಯಾ ॥ ೧೫೦ ॥

ನದೀ ಮಹಾಕೃಷ್ಣತೋಯಾ ಪಾಪಸ್ಯ ದಮನೀ ತಥಾ ।
ತತೋ ವೃದ್ಧಾಭ್ವಯಾ ಚಾಭೂದಪರಾ ಸರಿದುತ್ತಮಾ ॥ ೧೫೧ ॥

ಗುಹೆಯು ಇಪ್ಪತ್ತೈದು ಯೋಜನ ವಿಸ್ತಾರವಿರುವುದು. ಬ್ರಹ್ಮನನ್ನು ಕ ಬಂಎ ಪದ ದಿಂದ ದೇವತೆಗಳು ಕರೆದಿರುವರು. ಆ ಬ್ರಹ್ಮನ ಬಿಲ ಅಥವ ಗುಹೆಯಿಂದ ಹೊರಟಿರು ವುದರಿಂದ ಆ ನದಿಯು ಕಪಿಲಾ ಎಂದಾಯಿತು. ಗಂಗೆಯಂತೆ ಫಲನ್ನು ಕೊಡುವುದ ರಿಂದ ಕಪಿಲಗಂಗೆಯೆಂಬ ಹೆಸರನ್ನು ಪಡೆಯಿತು. ಕಪಿಲಗಂಗೆಯಲ್ಲಿ ಸ್ನಾನಮಾಡಿದ ನರನು ಮೊದಲು ಸ್ವರ್ಗದಲ್ಲಿ ಅನೇಕ ಮನ್ವಂತರಕಾಲ ವಾಸವಾಗಿದ್ದು, ಆಮೇಲೆ ಬ್ರಹ್ಮಲೋಕವನ್ನು ಪಡೆವನು.

೧೫೦. ಆ ನದಿಯನ್ನು ದಾಟಿ ಮುಂದೆ ಹೋದರೆ, ಪೂರ್ವದಿಕ್ಕಿನಲ್ಲಿ ದಮನಿಕಾ ಎಂಬ ನದಿಯು ಇರುವುದು. ಅದರ ಜಲವು ನೀಲವಾಗಿರುವುದು. ಸಕಲ ಪಾಪಗಳನ್ನೂ ನಾಶಮಾಡುವುದು.

೧೫೧. ಆ ದಮನಿಕಾನದಿಯಿಂದ ಪೂರ್ವಭಾಗದಲ್ಲಿ ಗಂಗೆಯಂತೆ ಫಲವನ್ನು ಕೊಡುವ ವೃದ್ಧಾ ಎಂಬ ಉತ್ತಮ ನದಿ ಇರುವುದು.

ತಸ್ಯಾ ನದ್ಯಾಃ ಪೂರ್ವಭಾಗೇ ಗಂಗಾವತ್ಫಲದಾಯಿನೀ ।
ಮಾಘಂ ತು ಸಕಲಂ ಮಾಸಂ ಸ್ನಾತ್ವಾ ಮುಕ್ತಿಮವಾಪ್ನುಯಾತ್ ॥ ೧೫೨ ॥

ತಥಾ ದಮನಿಕಾಯಾಂ ಚ ಪರಂ ನಿರ್ವಾಣಮಾಪ್ನುಯಾತ್ ।
ತತಃ ಪೂರ್ವೇ ಪರಾ ದೇವೀ ನಾಮ್ನಾ ಸಾ ಸರಿದುತ್ತಮಾ ॥ ೧೫೩ ॥

ಮಹತೀ ದಿವ್ಯಯಮುನಾ ಯಮುನಾವತ್ಫಲಪ್ರದಾ ।
ದಕ್ಷಿಣಾದ್ರಿಸಮುದ್ಭೂತಾ ದಕ್ಷಿಣೋದಧಿಗಾಮಿನೀ ॥ ೧೫೪ ॥

ತಸ್ಯಾಂ ತು ಕಾರ್ತಿಕಂ ಮಾಸಂ ಸ್ನಾತ್ವಾ ಮುಕ್ತಿಮವಾಪ್ನುಯಾತ್ ।
ಇಹೈವ ಚೋತ್ತಮಾನ್ ಭೋಗಾನ್ ಭಾಗಧೇಯಾನ್ ಪ್ರತಿಷ್ಠಿತಾನ್ ॥ ೧೫೫ ॥

ತನ್ಮಧ್ಯೇ ಭೈರವೋ ದೇವೋ ಭರ್ಗಸಂಭೋಗಸಂಭವಃ ।
ದುರ್ಜಯಾಖ್ಯೇ ವರಗಿರಾವಸ್ತ್ಯಪತ್ಯಕಭೂಮಿಗಃ ॥ ೧೫೬ ॥

ಯೋಽಸೌ ಶರಭರೂಪಸ್ಯ ಮಧ್ಯಖಂಡೋಽತಿಭೈರವಃ ।
ಸ ಏವ ಭೈರವಾಖ್ಯೋಽಯಂ ಪಂಚವಕ್ತ್ರಸ್ಯ ಮುಂತ್ರಕೈಃ ॥ ೧೫೭ ॥

---

೧೫೨. ಆ ವೈದ್ಯಾನದಿಯಲ್ಲಿಯೂ, ದಮನಿಕಾನದಿಯಲ್ಲಿಯೂ ಮಾಘಮಾಸ ಪೂರ್ತಿಯಾಗಿ ಪ್ರತಿನಿತ್ಯವೂ ಸ್ನಾನಮಾಡಿದವನು ಶ್ರೇಷ್ಠವಾದ ಮುಕ್ತಿಯನ್ನು ಪಡೆಯುವನು.

೧೫೩. ಅಲ್ಲಿಂದ ಪೂರ್ವಕ್ಕೆ ದಿವ್ಯಯಮುನಾ ಎಂಬ ಶ್ರೇಷ್ಠನದಿಯು ಪರಿಯುತ್ತಲಿರುವುದು. ಅದು ಯಮುನೆಯಂತೆ ಫಲವನ್ನು ಕೊಡುವುದು.

೧೫೪-೧೫೫. ಆ ನದಿಯು ದಕ್ಷಿಣ ಪರ್ವತದಿಂದ ಹುಟ್ಟಿರುವುದು. ದಕ್ಷಿಣ ಸಮುದ್ರವನ್ನು ಸೇರುವುದು. ಆ ನದಿಯಲ್ಲಿ ಕಾರ್ತಿಕಮಾಸ ಪೂರ್ತಿಯಾಗಿ ಸ್ನಾನ ಮಾಡಿದವನು ಇಹಲೋಕದಲ್ಲಿ ಉತ್ತಮವಾದ ಭೋಗಗಳನ್ನೂ, ಐಶ್ವರ್ಯ ಮತ್ತು ಪ್ರತಿಷ್ಠೆಗಳನ್ನೂ ಪಡೆದು ಬಳಿಕ ಮುಕ್ತಿಯನ್ನು ಪಡೆಯುವನು.

೧೫೬-೧೫೭. ಆ ನದಿಗಳ ಮಧ್ಯದಲ್ಲಿರುವ ದುರ್ಜಯವೆಂಬ ಗಿರಿಯಲ್ಲಿ ಶಂಕರನ ಶರೀರದಿಂದ ಜನಿಸಿದ ಭೈರವದೇವನು ಕೆಳತಪ್ಪಲಲ್ಲಿ ನೆಲಸಿರುವನು. ಶರಭ ರೂಪಿಯಾದ ಶಂಕರನ ಅತಿ ಭಯಂಕರವಾದ ಶರೀರದ ಮಧ್ಯಭಾಗವೇ ಈ ಭೈರವ

ಸಂಪೂಜ್ಯ ತತ್ರ ಮತಿಮಾ್ ಸ ಯಾತಿ ಶಿವಲೋಕತಾಂ ।
ಕಾಮೇಶ್ವರಸ್ಯ ಯಾ ಪೂಜಾ ಕಥಿತಾ ನೀಲನಿರ್ಣಯೇ ॥ ೧೫೮ ॥

ಸಂಪೂಜ್ಯಶಾ್ಚಲಶ್ರೇಷ್ಠೇ ದುರ್ಜಯೇ ಚಾಚಲೋತ್ತಮೇ ।
ತತ್ರ ಭೈರವಗಂಗಾಸ್ತಿ ಸರೋ ವೈ ಭೈರವಾಹ್ವಯಂ ॥ ೧೫೯ ॥

ತಯೋಃ ಸ್ನಾತ್ವಾ ನರೋ ಯಾತಿ ಶಿವಲೋಕಂ ಸನಾತನಂ ।
ದುರ್ಜಯಾಖ್ಯಸ್ಯ ಪೂರ್ವಸ್ಯಾಂ ಪುರಂ ನಾಮ ವರಾಸನಂ ॥ ೧೬೦ ॥

ತದ್ದಕ್ಷಿಣೇ ಮಹಾಶೈಲಃ ಕ್ಷೋಭಕೋ ನಾಮ ನಾಮತಃ ।
ತಸ್ಮಿ್ ಗಿರೌ ಶಿಲಾಪೃಷ್ಠೇ ರಕ್ತದೇವೀ ವ್ಯವಸ್ಥಿತಾ ॥ ೧೬೧ ॥

ಪಂಚಪುಷ್ಕರಿಣೀ ನಾಮ್ನಾ ಪಂಚಯೋನಿಸ್ವರೂಪಿಣೀ ।
ಏಕತ್ರ ಪಂಚಭಿರ್ದುರ್ಗಾ ಯೋನಿಭಿಃ ಪಂಚವಕ್ತ್ರಕಂ ॥ ೧೬೨ ॥

ರೂಪವನ್ನು ಹೊಂದಿರುವುದು. ಈ ವಿಷಯವು ಹಿಂದೆಯೇ ಹೇಳಿರುವುದು. ಈ ಭೈರವನನ್ನು ಶಂಕರನ ಐದು ಮುಖಗಳ ಮಂತ್ರಗಳಿಂದ ಪ್ರತ್ಯೇಕವಾಗಿ ಯಾವನು ಪೂಜಿಸುವನೋ ಅವನು ಶಿವಲೋಕವನ್ನು ಪಡೆಯುವನು.

೧೫೮. ನೀಲಕೂಟನಿರ್ಣಯದಲ್ಲಿ ಕಾಮೇಶ್ವರನಿಗೆ ಯಾವ ಪೂಜಾಕ್ರಮವನ್ನು ಹೇಳಿರುವುದೋ ಅದೇ ಕ್ರಮದಿಂದ ಈ ದುರ್ಜಯಾಚಲದಲ್ಲಿ ಭೈರವೇಶ್ವರನನ್ನು ಅರ್ಚಿಸಬೇಕು.

೧೫೯. ಅಲ್ಲದೆ ಆ ಶೈಲದಲ್ಲಿ ಭೈರವಗಂಗಾ ಎಂಬ ನದಿಯೂ, ಭೈರವವೆಂಬ ಸರಸ್ಸೂ ಇರುವುವು. ಈ ನದಿ ಸರಸ್ಸುಗಳಲ್ಲಿ ಸ್ನಾನಮಾಡಿದ ನರನು ನಿತ್ಯವಾದ ಶಿವಲೋಕವನ್ನು ಪಡೆಯುವನು.

೧೬೦-೧೬೨. ದುರ್ಜಯಾಚಲದ ಪೂರ್ವದಲ್ಲಿ ವರಾಸನವೆಂಬ ಪುರವಿರುವುದು. ಅದರ ದಕ್ಷಿಣದಲ್ಲಿ ಕ್ಷೋಭಕವೆಂಬ ಮಹಾಪರ್ವತವಿರುವುದು. ಆ ಗಿರಿಯ ಶಿಲಾಭಾಗದಲ್ಲಿ ಶಂಕರಾನುರಕ್ತಳಾದ ದೇವಿಯು ಐದು ಯೋನಿಗಳ ರೂಪವನ್ನು ಧರಿಸಿ, ಪಂಚಪುಷ್ಕರಿಣೀ ಎಂಬ ಹೆಸರಿನಿಂದ ನೆಲಸಿರುವಳು.

ಸ್ಥಿತಾ ರಮಯಿತುಂ ತತ್ರ ನಿತ್ಯಮೇವ ಹಿಮಾದ್ರಿಜಾ ।
ತಚ್ಛೈಲಪೂರ್ವಭಾಗೇ ತು ಕಾಂತಾ ನಾಮ ಮಹಾನದೀ ॥ ೧೬೩ ॥

ದಕ್ಷಿಣಂ ಸಾಗರಂ ಯಾತಿ ಪ್ರಥಮಂ ಚೋತ್ತರಸ್ರವಾ ।
ದಿವ್ಯಂ ಕುಂಡಂ ಮಹಾಕುಂಡಂ ತಚ್ಛೈಲೋಪತ್ಯಕಕ್ಷಿತೌ ॥ ೧೬೪ ॥

ಸಂಸ್ಥಿತಂ ತತ್ರ ಸ್ನಾತ್ವಾ ತು ತಾಂ ದೇವೀಂ ಪರಿಪೂಜಯೇತ್ ।
ದಿವ್ಯಕುಂಡೇ ನರಃ ಸ್ನಾತ್ವಾ ಪಂಚಪುಷ್ಕರಿಣೀಂ ಶಿವಾಂ ॥ ೧೬೫ ॥

ಯಃ ಪೂಜಯೇನ್ಮಹಾಭಾಗಃ ಸ ಯೋನೌ ನ ಹಿ ಜಾಯತೇ ।
ಪಂಚಯೋನ್ಯಃ ಪುಷ್ಕರಿಣೀಃ ಪಂಚೈವ ಪರಿಸಂಸ್ಥಿತಾಃ ॥ ೧೬೬ ॥

ಯತಸ್ತತಃ ಪಂಚರೂಪಾ ಪಂಚಪುಷ್ಕರಿಣೀ ಮತಾ ।
ಯಥಾವಚ್ಛೈಲಪುಷ್ಪಾಣಿ ತಥೈತಾಃ ಪಂಚಯೋನಯಃ ॥ ೧೬೭ ॥

ಪಂಚಪುಷ್ಕರಿಣೀದೇವ್ಯಃ ಪ್ರಚಂಡಾಃ ಸರ್ವಕಾಮದಾಃ ।
ತ್ರಿಪುರಾಯಾಸ್ತು ತಂತ್ರೇಣ ತಾಃ ಪೂಜ್ಯಾಃ ಸಾಧಕೋತ್ತಮೈಃ ॥ ೧೬೮ ॥

---

೧೬೩. ಒಂದೇಸ್ಥಳದಲ್ಲಿ ಐದು ಯೋನಿಗಳಿಂದ ಪಂಚವಕ್ತ್ರನಾವ ಶಂಕರನನ್ನು ರಮಿಸಲು ದೇವಿಯು ಐದು ಯೋನಿಗಳ ರೂಪವನ್ನು ಧರಿಸಿರುವಳು.

೧೬೪. ಆ ಗಿರಿಯ ಕೆಳತಪ್ಪಲಲ್ಲಿ ದಿವ್ಯಕುಂಡವೆಂಬ ಮಹಾಕುಂಡವಿರುವುದು. ಆ ಕುಂಡದಲ್ಲಿ ಸ್ನಾನಮಾಡಿ ಆ ಪುಷ್ಕರಿಣೀದೇವಿಯನ್ನು ಪೂಜಿಸಬೇಕು.

೧೬೫. ದಿವ್ಯಕುಂಡದಲ್ಲಿ ಸ್ನಾನಮಾಡಿ ಪಂಚಪುಷ್ಕರಿಣೀದೇವಿಯನ್ನು ಅರ್ಚಿಸಿದ ಭಾಗ್ಯಶಾಲಿಯು ತಿರುಗಿ ಜನ್ಮವನ್ನು ಪಡೆಯುವುದಿಲ್ಲ, ಮುಕ್ತಿಯನ್ನೇ ಹೊಂದುವನು.

೧೬೬-೧೬೮. ಐದು ಯೋನಿಗಳ ರೂಪವಾದ ಐದು ಪುಷ್ಕರಿಣೀದೇವತೆಯರು ಇರುವರು. ಆದಕಾರಣ ಐದುರೂಪವುಳ್ಳ ಆ ದೇವಿಗೆ ಪಂಚಪುಷ್ಕರಿಣೀ ಎಂಬ ಹೆಸರಾಯಿತು. ವಿಧಿವತ್ತಾಗಿ ಫಲಪುಷ್ಪಗಳನ್ನು ಅರ್ಪಿಸಿ ಅರ್ಚಿಸಿದರೆ ಆ ಪಂಚಯೋನಿರೂಪರಾದ ಪಂಚಪುಷ್ಕರಿಣೀದೇವತೆಯರು ಸಕಲ ಇಷ್ಟಾರ್ಥಗಳನ್ನೂ ಕೊಡುವರು. ತ್ರಿಪುರಾತಂತ್ರದಿಂದಲಾಗಲೀ, ಕಾಮೇಶ್ವರೀ ತಂತ್ರಮಂತ್ರಗಳಿಂದಾಗಲೀ ಈ ಪುಷ್ಕರಿಣಿಯರನ್ನು ಪೂಜಿಸಬೇಕು.

ಕಾಮೇಶ್ವರೀತಂತ್ರಮಂತ್ರೈರಥವಾ ಪೂಜಯೇಚ್ಛಿವಾಂ ।
ಬಾಲಾಯಾಸ್ತ್ರಿಪುರಾಯಾಸ್ತು ಮಂತ್ರಮಸ್ಯಾಃ ಪ್ರಕೀರ್ತಿತಂ ॥ ೧೬೯ ॥

ಕಾಮೇಶ್ವರ್ಯಾಸ್ತು ವಾ ಮಂತ್ರಂ ಪೂಜನೇಽಸ್ಯಾಃ ಪ್ರಕೀರ್ತಿತಂ ।
ಉಗ್ರಚಂಡಾ ಪ್ರಚಂಡಾ ಚ ಚಂಡೋಗ್ರಾ ಚಂಡನಾಯಿಕಾ ॥ ೧೭೦ ॥

ಚಂಡಾ ಚೇತಿ ಚ ಯೋಗಿನ್ಯಃ ಪಂಚಾಸ್ಯಾಃ ಪರಿಕೀರ್ತಿತಾಃ ।
ಶಿವಲಿಂಗಂ ಚ ತತ್ರಾಸ್ತಿ ಶಿಲಾಯಾಂ ಹೇರುಕಾಭ್ವಯಂ ॥ ೧೭೧ ॥

ದೇವೀದಕ್ಷಿಣಪೂರ್ವಸ್ಯಾಂ ನಾಯುಕಂ ತಂ ತು ಪೂಜಯೇತ್ ।
ಭೈರವಸ್ಯ ತು ಮಂತ್ರೇಣ ಪೂಜಯಿತ್ವಾ ದಿವಂ ವ್ರಜೇತ್ ॥ ೧೭೨ ॥

ನಿರ್ಮಾಲ್ಯಧಾರಿಣೀ ದೇವೀ ಚಂಡಗೌರೀತಿ ಕೀರ್ತಿತಾ ।
ಏತಸ್ಯಾಂ ನರಶಾರ್ದೂಲ ಪುರಾ ಭಗ್ನೇಣ ಭಾಷಿತಾ ॥ ೧೭೩ ॥

ಕಾಂತಾಯಾಃ ಸಲೀಲೇ ಸ್ನಾತ್ವಾ ವಸಂತೇ ಮಾನವೋತ್ತಮಃ ।
ರೂಪವಾ ಗುಣವಾ ಭೂತ್ವಾ ಶಿವಲೋಕಾಯ ಗಚ್ಛತಿ ॥ ೧೭೪ ॥

---

೧೬೯. ಬಾಲಾದೇವಿ ಅಥವಾ ತ್ರಿಪುರಾದೇವಿ ಅಥವಾ ಕಾಮೇಶ್ವರಿ ಇವರುಗಳ ಮಂತ್ರದಿಂದ ಈ ದೇವಿಯನ್ನು ಪೂಜಿಸಬೇಕು.

೧೭೦. ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ ಈ ಐದು ಜನಗಳು ಈ ದೇವಿಯ ಯೋಗಿನೀದೇವತೆಗಳು.

೧೭೧.೧೭೨. ಮತ್ತು ಆ ಗಿರಿಯ ಶಿಲೆಯೊಂದರಲ್ಲಿ ಹೇರುಕೇಶ್ವರ ಎಂಬ ಶಿವಲಿಂಗವೊಂದಿರುವುದು. ದೇವಿಯಿಂದ ಆಗ್ನೇಯದಿಕ್ಕಿನಲ್ಲಿರುವ ಆ ಲಿಂಗವನ್ನು ಪೂಜಿಸಬೇಕು. ಪೂಜಿಸುವಾಗ ಭೈರವನ ಬೀಜಮಂತ್ರದಿಂದ ಆ ಹೇರುಕೇಶ್ವರನನ್ನು ಪೂಜಿಸಬೇಕು. ಹಾಗೆ ಪೂಜಿಸಿದರೆ ಸ್ವರ್ಗವು ಪ್ರಾಪ್ತಿಯಾಗುವುದು.

೧೭೩. ಚಂಡಗೌರೀ ಎಂಬ ದೇವಿಯು ಈ ಪುಷ್ಕರಿಣೀದೇವಿಯ ನಿರ್ಮಾಲ್ಯವನ್ನು ಧರಿಸುವವಳು. ಇವಳು ಶಂಕರನ ಅನುಮತಿಯಂತೆ ಇಲ್ಲಿ ನೆಲಸಿ ನಿರ್ಮಾಲ್ಯವನ್ನು ಧರಿಸುತ್ತಿರುವಳು.

೧೭೪. ಕಾಂತಾನಯ ಜಲದಲ್ಲಿ ವಸಂತಕಾಲದಲ್ಲಿ ಸ್ನಾನಮಾಡಿದ ನರ

ಕ್ಷೋಭಕಾಖ್ಯಾನ್ಮಹಾಶೈಲಾದೈಶಾನ್ಯಾಂ ಪರ್ವತೋತ್ತಮಃ ।
ತುಂಗಸಂಧ್ಯಾಚಲೋ ನಾಮ ವಸಿಷ್ಠೋ ಯತ್ರ ಶಪ್ತವಾನ್ ॥ ೧೭೫ ॥

ನಿಮಿನಾಮ್ನಸ್ತು ರಾಜರ್ಷೇಃ ಶಾಪಾದ್ಬ್ರಹ್ಮಸುತಃ ಪುರಾ ।
ವಸಿಷ್ಠೋ ಹ್ಯಶರೀರೋಽಭೂತ್ತಚ್ಛಾಪಾತ್ತು ನಿಮಿಸ್ತಥಾ ॥ ೧೭೬ ॥

ತತೋ ಬ್ರಹ್ಮೋಪದೇಶೇನ ನಿರ್ಜನೇ ಕಾಮರೂಪಕೇ ।
ಸಂಧ್ಯಾಚಲೇ ತಪಸ್ತೇಪೇ ತಸ್ಯ ವಿಷ್ಣುರಭೂತ್ತದಾ ॥ ೧೭೭ ॥

ಪ್ರತ್ಯಕ್ಷಸ್ತಸ್ಯ ದೇವಸ್ಯ ವರದಾನಾನ್ಮಹಾಮುನಿಃ ।
ಅಮೃತಾನ್ಯವತಾರ್ಯಾಶು ಕುಂಡಂ ಕೃತ್ವಾ ಗಿರೇಸ್ತಟೇ ॥ ೧೭೮ ॥

ತತ್ರ ಸ್ನಾತ್ವಾ ಚ ಪೀತ್ವಾ ಚ ಶರೀರಂ ಪ್ರಾಪ ಪೂರಿತಂ ।
ತಸ್ಮಾದಮೃತಕುಂಡಾಶ್ಚ ಸಂಧ್ಯಾ ನಾಮ ನದೀ ವರಾ ॥ ೧೭೯ ॥

ಶ್ರೀಷ್ಣನು ಇಹದಲ್ಲಿ ರೂಪವಂತನೂ, ಗುಣಶಾಲಿಯೂ ಆಗಿದ್ದು ಪರದಲ್ಲಿ ಶಿವಲೋಕವನ್ನು ಪಡೆಯುವನು.

೧೭೫-೧೭೮. ಕ್ಷೋಭಗಿರಿಯಿಂದ ಈಶಾನ್ಯದಲ್ಲಿ ಎತ್ತರವಾದ ಸಂಧ್ಯಾಚಲವೆಂಬ ಪರ್ವತವಿರುವುದು. ಈ ಪರ್ವತದಲ್ಲಿಯೇ ಹಿಂದೆ ವಸಿಷ್ಠಮುನಿಗೆ ಶಾಪವು ಬಂದಿದ್ದಿತು. ಎಂದರೆ, ಇಲ್ಲಿ ನಿಮಿ ಎಂಬ ರಾಜಋಷಿಯ ಶಾಪದಿಂದ ಬ್ರಹ್ಮಪುತ್ರನಾದ ವಸಿಷ್ಠನು ಶರೀರವಿಲ್ಲದವನಾದನು. ಅದರಂತೆ ನಿಮಿರಾಜನೂ ವಸಿಷ್ಠಮುನಿಯ ಶಾಪದಿಂದ ಶರೀರವಿಲ್ಲದವನಾದನು. ಆ ಬಳಿಕ ಬ್ರಹ್ಮನ ಉಪದೇಶದಂತೆ ವಸಿಷ್ಠಮುನಿಯು ನಿರ್ಜನವಾದ ಕಾಮರೂಪದೇಶದಲ್ಲಿರುವ ಸಂಧ್ಯಾಚಲದಲ್ಲಿ ವಿಷ್ಣುವನ್ನು ಕುರಿತು ತಪಸ್ಸನ್ನು ಮಾಡಿದನು. ಆಗ ವಿಷ್ಣುವು ಅವನಿಗೆ ಪ್ರತ್ಯಕ್ಷನಾದನು. ಹೀಗೆ ಪ್ರತ್ಯಕ್ಷನಾದ ವಿಷ್ಣುವಿನಿಂದ ವರವನ್ನು ಪಡೆದು ಆ ವಸಿಷ್ಠಮುನಿಯು ಸ್ವರ್ಗದಿಂದ ಅಮೃತವು ಆ ಬೆಟ್ಟದ ತಪ್ಪಲಿಗೆ ಹರಿದುಬರುವಂತೆ ಮಾಡಿ ಆ ಅಮೃತದಿಂದ ಒಂದು ಕುಂಡವನ್ನು ನಿರ್ಮಿಸಿದನು. ಆ ಕುಂಡದಲ್ಲಿ ಸ್ನಾನಪಾನಗಳನ್ನು ಮಾಡಿ ಪುನಃ ತನ್ನ ಶರೀರವನ್ನು ಪಡೆದನು.

೧೭೯. ಹೀಗೆ ವಸಿಷ್ಠನಿರ್ಮಿತವಾದ ಅಮೃತಕುಂಡದಿಂದ ಸಂಧ್ಯೆ ಎಂಬ ನದಿಯು ಹೊರಟಿರುವುದು. ಆ ನದಿಯಲ್ಲಿ ಸ್ನಾನಮಾಡಿದವನು ಒಳ್ಳೆಯ ಆರೋಗ್ಯಶಾಲಿಯೂ, ದೀರ್ಘಾಯುವೂ ಆಗುವುದು.

ನಿಃಸೃತಾ ತತ್ರ ಚಾಪ್ಲುತ್ಯ ಚಿರಾಯುರಗಡೋ ಭವೇತ್ ।
ತಸ್ಮಾತ್ಪೂರ್ವಂ ತು ಲಲಿತಾ ಲಲಿತಾಖ್ಯಾ ಸರಿದ್ವರಾ ॥ ೧೪೦ ॥

ಸಾಗರಾದ್ದಕ್ಷಿಣಾತ್ಪೂರ್ವಂ ಮಹಾದೇವಾವತಾತಾ ।
ವೈಶಾಖಶುಕ್ಲಪಕ್ಷಸ್ಯ ತೃತೀಯಾಂ ನರಸ್ತು ಯಃ ॥ ೧೪೧ ॥

ಕುರ್ಯಾದ್ವೈ ಲಲಿತಾಸ್ನಾನಂ ಸ ಶಂಭುಸದನಂ ವ್ರಜೇತ್ ।
ಲಲಿತಾಯಾಃ ಪೂರ್ವತೀರೇ ಭಗವಾನ್ನಾಮ ಪರ್ವತಃ ॥ ೧೪೨ ॥

ಸ್ವಯಂ ವಿಷ್ಣುರ್ಲಿಂಗರೂಪೀ ತತ್ರಾಸ್ತೇ ಭಗವಾ ಹರಿಃ ।
ಲಲಿತಾಯಾಂ ನರಃ ಸ್ನಾತ್ವಾ ದ್ವಾದಶ್ಯಾಂ ಶುಕ್ಲಪಕ್ಷಕೇ ॥ ೧೪೩ ॥

ಭಗವಂತಂ ಸಮಾರುಹ್ಯ ಯೋ ಯಜೇತ್ಪರಮೇಶ್ವರಂ ।
ಸ ಯಾತಿ ವಿಷ್ಣುಸದನಂ ಶರೀರೇಣ ವಿರಾಜತಾ ॥ ೧೪೪ ॥

ಏತಾಃ ಪೂರ್ವೋದಿತಾ ನದ್ಯಃ ಸರ್ವಾಶ್ಚೈವೋತ್ತರಸ್ರವಾಃ ।
ಕ್ರಮಾತ್ತು ದಕ್ಷಿಣಂ ಯಾಂತಿ ಸಾಗರಂ ಜಾನ್ಹವೀಸಮಾಃ ॥ ೧೪೫ ॥

೧೪೦-೧೪೧. ಅಲ್ಲಿಂದ ಪೂರ್ವಕ್ಕೆ ಸುಂದರವಾದ ಲಲಿತಾ ಎಂಬ ನದಿಯು ಇರುವುದು. ಅದನ್ನು ದಕ್ಷಿಣ ಸಮುದ್ರದಿಂದ ಶಂಕರನು ಹರಿಯಿಸಿರುವನು. ವೈಶಾಖ ಮಾಸದ ಶುಕ್ಲತದಿಗೆಯಲ್ಲಿ ಲಲಿತಾನದಿಯಲ್ಲಿ ಸ್ನಾನಮಾಡಿದ ನರನು ಶಂಕರನ ಲೋಕವನ್ನು ಪಡೆಯುವನು.

೧೪೨. ಲಲಿತಾನದಿಯ ಪೂರ್ವದಡದಲ್ಲಿ ಭಗವಾ ಎಂಬ ಪರ್ವತವಿರವುದು. ಆ ಪರ್ವತದಲ್ಲಿ ಭಗವಂತನೂ, ಪಾಪನಾಶಕನೂ ಆದ ವಿಷ್ಣುವು ಲಿಂಗರೂಪದಿಂದ ಇರುವನು.

೧೪೩-೧೪೪. ಶುಕ್ಲಪಕ್ಷದ ದ್ವಾದಶಿಯಲ್ಲಿ ಲಲಿತಾನದಿಯಲ್ಲಿ ಸ್ನಾನಮಾಡಿ ಭಗವಂತಪರ್ವತಕ್ಕೆ ಹೋಗಿ, ಅಲ್ಲಿರುವ ಪರಮೇಶ್ವರನಾದ ವಿಷ್ಣುವನ್ನು ವಿಧಿವತ್ತಾಗಿ ಯಾವನು ಅರ್ಚಿಸುವನೋ ಅವನು ಸಶರೀರವಾಗಿ ವಿಷ್ಣುಲೋಕಕ್ಕೆ ಹೋಗುವನು.

೧೪೫. ಹಿಂದೆ ಹೇಳಿದ ನದಿಗಳೆಲ್ಲವೂ ಉತ್ತರಮುಖವಾಗಿಯೇ ಹರಿಯಾವುವು. ಮತ್ತು ಗಂಗೆಯಂತೆ ಪವಿತ್ರವಾಗಿರುವ ಈ ನದಿಗಳು ಕೊನೆಗೆ ದಕ್ಷಿಣ ಸಮುದ್ರವನ್ನು ಸೇರುವುವು.

ಕಾಮಾಖ್ಯಾಂ ಪ್ರಥಮಂ ದೃಷ್ಟ್ವಾ ಸ್ನಾತ್ವಾ ಚೈವೋರ್ವಶೀಜಲೇ ।
ಯ ಏತಾಸು ಚರೇತ್ಸ್ನಾನಂ ಸ ತು ಮುಕ್ತಿಮವಾಪ್ನುಯಾತ್ ॥ ೧೪೬ ॥

॥ ಇತಿ ಶ್ರೀಕಾಲಿಕಾಪುರಾಣೇ ದ್ವ್ಯಶೀತಿತಮೋಽಧ್ಯಾಯಃ ॥

---

೧೪೬. ಮೊದಲು ಊರ್ವಶೀಕುಂಡದಲ್ಲಿ ಸ್ನಾನಮಾಡಿ ಕಾಮಾಖ್ಯಾದೇವಿಯ ದರ್ಶನವನ್ನು ತೆಗೆದುಕೊಂಡು ಬಳಿಕ ಈ ಎಲ್ಲಾ ನದಿಗಳಲ್ಲೂ ಸ್ನಾನವನ್ನು ಮಾಡ ಬೇಕು. ಹಾಗೆ ಮಾಡಿದವನು ಮುಕ್ತಿಯನ್ನು ಪಡೆಯುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತೆರಡನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ತ್ರ್ಯಶೀತಿತಮೋऽಧ್ಯಾಯಃ ॥

॥ ಔರ್ವ ಉವಾಚ ॥

ಶಾಶ್ವತೀ ಕಥಿತಾ ಯಾ ತು ಮತ್ಸ್ಯಧ್ವಜಸಮಾಶ್ರಿತಾ ।
ತಸ್ಯಾಃ ಪೂರ್ವೇ ಸಮಾಖ್ಯಾತಾ ನದೀ ದೀಪವತೀ ಮತಾ ॥ ೧ ॥

ಏಷಾ ಚ ಹಿಮವಜ್ಜಾತಾ ಛಿಂದಂತೀ ದೀಪವತ್ತಮಃ ।
ತೇನ ದೇವಮನುಷ್ಯೇಷು ನದೀ ದೀಪವತೀ ಸ್ಮೃತಾ ॥ ೨ ॥

ದೀಪವತ್ಯಾಃ ಪೂರ್ವತಸ್ತು ಶೃಂಗಾಟೋ ನಾಮ ಪರ್ವತಃ ।
ತತ್ರ ದೇವಸ್ಯ ಭರ್ಗಸ್ಯ ಲಿಂಗಮೇಕಂ ಪ್ರತಿಷ್ಠಿತಂ ॥ ೩ ॥

ಎಂಭತ್ತಮೂರನೆಯ ಅಧ್ಯಾಯವು

೧-೨. ಔರ್ವಮುನಿಯು ಹೇಳಿದನು:—ಎಲೈ ರಾಜೇಂದ್ರ! ಮತ್ಸ್ಯಧ್ವಜಾಚಲದಲ್ಲಿ ಶಾಶ್ವತೀನದಿಯು ಇರುವುದೆಂದು ಹೇಳಿರುವೆನು. ಆ ನದಿಗೆ ಪೂರ್ವದಲ್ಲಿ ದೀಪವತಿಯೆಂಬ ಪ್ರಸಿದ್ಧವಾದ ಮತ್ತೊಂದು ನದಿಯು ಇರುವುದು. ಈ ನದಿಯು ಹಿಮಾಲಯದಿಂದ ಜನಿಸಿರುವುದು. ದೀಪವು ಕತ್ತಲೆಯನ್ನು ಹೋಗಲಾಡಿಸುವಂತೆ ಈ ನದಿಯು ಜನಗಳ ತಮಸ್ಸನ್ನು ಎಂದರೆ ಅಜ್ಞಾನವನ್ನು ಹೋಗಲಾಡಿಸುವುದರಿಂದ ಈ ನದಿಗೆ ದೇವಮನುಷ್ಯರಲ್ಲಿ ದೀಪವತಿಯೆಂದು ಹೆಸರಾಯಿತು.

೩. ದೀಪವತೀನದಿಯ ಪೂರ್ವದಲ್ಲಿ ಶೃಂಗಾಟವೆಂಬ ಪರ್ವತವು ಇರುವುದು. ಅಲ್ಲಿ ಈಶ್ವರನ ಲಿಂಗವೊಂದು ಪ್ರತಿಷ್ಠಿತವಾಗಿರುವುದು.

ಸರಿತ್ತು ಸಿದ್ಧಾ ತ್ರಿಃಸೋತಾ ದಕ್ಷಿಣೋದಧಿಗಾಮಿನೀ ।
ಶೃಂಗಾಟಕಸ್ಯ ಸತತಂ ಸ್ರವಂತೀ ಸಾ ತು ಪಾದತಃ ॥ ೪ ॥

ದಕ್ಷಿಣಂ ಸಾಗರಂ ಯಾತಿ ಭರ್ಗಸ್ಯ ಪ್ರಿಯಕಾರಿಣೀ ।
ಸಲೀಲೇ ಯೋ ನರಃ ಸ್ನಾತ್ವಾ ತ್ರಿಃಸೋತಾಯಾ ನರೋತ್ತಮಃ ॥ ೫ ॥

ಶೃಂಗಾಟಕಂ ಸಮಾರುಹ್ಯ ಪೂಜಯೇಲ್ಲಿಂಗಶಂಕರಂ ।
ಸ ದೀಪ್ತಕಾಯಃ ಶುದ್ಧಾತ್ಮಾ ಪ್ರಾಪ್ಯಕಾಮಾನಿಹಾತುಲಾನ್ ॥ ೬ ॥

ಅಂತೇ ಭರ್ಗಗೃಹಂ ಯಾತಿ ತತೋ ಮೋಕ್ಷಮವಾಪ್ನುಯಾತ್ ।
ಹರಸ್ತು ದ್ವಿಭುಜಸ್ತಸ್ಮಿನ್ ಸದಾ ವೃಷಭವಾಹನಃ ॥ ೭ ॥

ಉಮಯಾ ಸಮತೇ ಸಾರ್ಧಂ ವಾಮದೇವಸ್ಯ ಮಂತ್ರಕೈಃ ।
ತಂತ್ರೈಶ್ಚ ಪೂಜಯೇದ್ದೇವಮುಮಾಮಂತ್ರೇಣ ಚಂಡಿಕಾಂ ॥ ೮ ॥

---

೪. ದಕ್ಷಿಣಸಮುದ್ರವನ್ನು ಸೇರುವ ತ್ರಿಃಸೋತಾ ಎಂಬ ನದಿಯು ಮೇಲೆ ಹೇಳಿದ ಶೃಂಗಾಟಕಾಚಲದ ತಪ್ಪಲಲ್ಲಿ ಹರಿಯುತ್ತಲಿರುವುದು. ಶಂಕರನಿಗೆ ಆ ನದಿಯು ತುಂಬಾ ಪ್ರಿಯವಾದುದು.

೫-೬. ತ್ರಿಃಸೋತಾನದಿಯಲ್ಲಿ ಸ್ನಾನಮಾಡಿ ಶೃಂಗಾಟಕಾಚಲಕ್ಕೆ ಹೋಗಿ ಅಲ್ಲಿರುವ ಶಂಕರಲಿಂಗವನ್ನು ಪೂಜಿಸುವ ನರೋತ್ತಮನು, ಇಹವಲ್ಲಿ ತೇಜಸ್ವಿಯಾಗಿ ನಿರ್ಮಲನೂ ಆಗಿದ್ದು ಬೇಕಾದ ಇಷ್ಟಾರ್ಥಗಳನ್ನು ಪಡೆಯುವನು. ಮರಣಾನಂತರದಲ್ಲಿ ಶಿವಲೋಕಕ್ಕೆ ಹೋಗಿ ಮುಂದೆ ಅಲ್ಲಿ ಮುಕ್ತಿಯನ್ನು ಪಡೆಯುವನು.

೭-೮. ಆ ಬೆಟ್ಟದಲ್ಲಿ ಶಂಕರನು ಎರಡು ಬಾಹುಗಳುಳ್ಳವನಾಗಿ ನಂದಿಯನ್ನೇರಿ ಸದಾ ಪಾರ್ವತಿಯೊಡನೆ ವಿಹರಿಸುವನು. ವಾಮದೇವನ ಮಂತ್ರ ಮತ್ತು ತಂತ್ರಗಳಿಂದ ಅವನನ್ನು ಪೂಜಿಸಬೇಕು. ಉಮಾಮಂತ್ರದಿಂದ ಚಂಡಿಕೆಯನ್ನು ಪೂಜಿಸಬೇಕು.

ತತ್ಪೂರ್ವತೋ ನಿಮ್ನಗಾ ತು ನಾಮ್ನಾ ತು ವೃದ್ಧದೇವಿಕಾ ।
ತಸ್ಯಾಂ ಸ್ನಾತ್ವಾ ಫಲಂ ಮರ್ತ್ಯೋ ದೇವಿಕಾಸ್ನಾನಜಂ ಲಭೇತ್ ॥ ೯ ॥

ತತೋ ಭಟ್ಟಾರಿಕಾ ನಾಮ ಹಿಮಶೈಲಸಮುದ್ಭವಾ ।
ಮಹಾನದೀ ದೇವಗಣೈರ್ಯಾ ಸದೋಪಾಸ್ಯತೇ ಸುಖಂ ॥ ೧೦ ॥

ತಸ್ಯಾಂ ಯಃ ಕುರುತೇ ಸ್ನಾನಂ ಯುಗಾದಿಷು ಚತುಷ್ವಪಿ ।
ಸ ಯಾತಿ ಪರಮಂ ಸ್ಥಾನಂ ತದ್ವಿಷ್ಣೋ ಪರಮಂ ಪದಂ ॥ ೧೧ ॥

ಅಸ್ತಿ ನಾಟಕಶೈಲೇ ತು ಸರೋ ಮಾನಸಸನ್ನಿಭಂ ।
ಯತ್ರ ಸಾರ್ಧಂ ಶೈಲಪುತ್ರ್ಯಾ ಜಲಕ್ರೀಡಾಂ ಸದಾ ಹರಃ ॥ ೧೨ ॥

ಕುರುತೇ ನರಶಾರ್ದೂಲ ಸ್ವರ್ಣಪಂಕಜಶೋಭಿತೇ ।
ತಸ್ಯ ಪಶ್ಚಾನ್ಮಧ್ಯಪೂರ್ವಭಾಗೇಭ್ಯಸ್ತು ಸರಿತ್ತ್ರಯಂ ॥ ೧೩ ॥

---

೯. ಅಲ್ಲಿಂದ ಮುಂದೆ ಪೂರ್ವಕ್ಕೆ ವೃದ್ಧದೇವಿಕಾ ಎಂಬ ನದಿಯು ಕೆಳ ತಪ್ಪಲಲ್ಲಿ ಹರಿಯುತ್ತಲಿರುವುದು. ಆ ನದಿಯಲ್ಲಿ ಸ್ನಾನಮಾಡಿದ ಮನುಷ್ಯನು ದೇವಿಗೆ ಸ್ನಾನಮಾಡಿಸಿದ ಫಲವನ್ನು ಪಡೆಯುವನು.

೧೦. ಅಲ್ಲಿಂದ ಮುಂದೆ ಭಟ್ಟಾರಿಕಾ ಎಂಬ ಹಿಮಾಲಯದಲ್ಲಿ ಜನಿಸಿದ ಮಹಾನದಿಯು ಹರಿಯುತ್ತಿರುವುದು. ಅದನ್ನು ಸಕಲ ದೇವತೆಗಳೂ ಸೇವಿಸುವರು.

೧೧. ಆ ನದಿಯಲ್ಲಿ ಯಾವನು ಸ್ನಾನಮಾಡುವನೋ ಅವನು ಶ್ರೇಷ್ಠಸ್ಥಾನ ವಾದ ವಿಷ್ಣುಲೋಕವನ್ನು ಪಡೆಯುವನು. ನಾಲ್ಕು ಯುಗಗಳಲ್ಲಿಯೂ ಇದೇರೀತಿ ಯಾಗಿ ಆ ಫಲವು ಲಭಿಸುವುದು.

೧೨. ನಾಟಕಾಚಲದಲ್ಲಿ ಮಾನಸಸರೋವರದಂತಿರುವ ಸರೋವರವೊಂದಿರು ವುದು. ಆ ಸರೋವರವು ಸ್ವರ್ಣಕಮಲಗಳಿಂದ ಶೋಭಿಸುತ್ತಿರುವುದು. ಇಂತಹ ಸರೋವರದಲ್ಲಿ ಶಂಕರನು ಗಿರಿಜೆಯೊಡನೆ ಸದಾ ಜಲಕ್ರೀಡೆಯನ್ನು ಮಾಡುವನು.

೧೩-೧೬. ಆ ಸರೋವರದ ಹಿಂಭಾಗ, ಮಧ್ಯಭಾಗ, ಪೂರ್ವಭಾಗ ಇವುಗ ಳಿಂದ ಮೂರುನದಿಗಳು ಹೊರಟು, ದಕ್ಷಿಣಸಮುದ್ರಕ್ಕೆ ಹೋಗುವುವು. ಆ ಸರೋ ವರದ ಹಿಂಭಾಗದಿಂದ ಹೊರಟು ಹರಿಯುತ್ತಿರುವ ನದಿಗೆ ದಿಕ್ಕರಿಕಾ ಎಂದು ಹೆಸರು.

ಅವತೀರ್ಣಂ ಪ್ರಯಾತ್ಯೇವ ದಕ್ಷಿಣಂ ಸಾಗರಂ ಪ್ರತಿ ।
ತಸ್ಯ ಪಶ್ಚಿಮಭಾಗೇ ತು ನದೀ ದಿಕ್ಕರಿಕಾಹ್ವಯಾ ॥ ೧೪ ॥

ದಿಗ್ಗಜಕ್ಷತಸಂಜಾತಾ ತೇನ ದಿಕ್ಕರಿಕಾಹ್ವಯಾ ।
ಮಧ್ಯಭಾಗಾತ್ಸೃತಾ ಯಾ ತು ಶಂಕರೇಣಾವತಾರಿತಾ ॥ ೧೫ ॥

ವೃದ್ಧಗಂಗಾಹ್ವಯಾ ಸಾ ತು ಗಂಗೇವ ಫಲದಾಯಿನೀ ।
ಯಾ ನಿಃಸೃತಾ ಪೂರ್ವಭಾಗಾತ್ತಸ್ಮಾದ್ಗಿರಿವರಾನ್ನದೀ ॥ ೧೬ ॥

ಸುವರ್ಣಸ್ರಾವಿಣೀಖ್ಯಾತಾ ಸಾ ಗಂಗಾಸದೃಶೀ ಫಲೇ ।
ಕುರ್ವಂತ್ಯಾಃ ಸರಸಿ ಸ್ನಾನಂ ಪಾರ್ವತ್ಯಾಶ್ಚ ಶರೀರತಃ ॥ ೧೭ ॥

ನಿಃಸೃತಾಃ ಸ್ವರ್ಣಕಾಣಿಕಾಸ್ತಾ ವಹಂತಿ ಜಲೈರಿಮಾಃ ।
ಕ್ರೀಡಾರ್ಥಂ ಶಂಭುನಾ ಗಾತ್ರೇ ಕಣಿಕಾಭಿಃ ಸಮಾಚಿತಾಃ ॥ ೧೮ ॥

ಸ್ವಸ್ಥಾನಾತ್ತತ್ರ ಸಂಲಗ್ನಾಸ್ತತಶ್ಚಂದನಬಿಂದವಃ ।
ತಾ ಉಮಾಯಾಃ ಶರೀರಾತ್ತು ಸಂಸ್ರವಂತಿ ಜಲೈಃ ಸಹ ॥ ೧೯ ॥

ದಿಗ್ಗಜಗಳ ವ್ರಣರಕ್ತದಿಂದ ಈ ನದಿಯು ಜನಿಸಿದುದರಿಂದ ಇದಕ್ಕೆ ಈ ಹೆಸರು ಬಂದಿತು. ಆ ಸರಸ್ಸಿನ ಮಧ್ಯಭಾಗದಿಂದ ಹೊರಟ ನದಿಯ ಹೆಸರು ವೃದ್ಧಗಂಗಾ ಎಂದು. ಅದನ್ನು ಶಂಕರನೇ ಹರಿಯಿಸಿರುವನು. ಗಂಗೆಯಂತೆ ಅದು ಫಲವನ್ನು ಕೊಡುವುದು. ಆ ಸರಸ್ಸಿನ ಪೂರ್ವಭಾಗದಿಂದ ಜನಿಸಿದ ನದಿಯು ಸುವರ್ಣ ಸ್ರಾವಣೀ ಎಂದು ಪ್ರಸಿದ್ಧವಾಗಿರುವುದು. ಅದೂ ಗಂಗೆಯಂತೆಯೇ ಫಲವನ್ನು ಕೊಡುವುದು.

೧೭-೧೯. ಆ ಸರಸ್ಸಿನಲ್ಲೊಂದುದಿನ ಪಾರ್ವತಿಯು ಸ್ನಾನಮಾಡುತ್ತಿರಲು ಅವಳ ಶರೀರದಿಂದ ಚಿನ್ನದ ಕಣಿಕೆ (ಚೂರು) ಗಳು ಹೊರಟವು. ಅವುಗಳು ಈ ಸ್ವರ್ಣಸ್ರಾವಿಣೀ ನದಿಯ ಜಲದೊಡನೆ ಸೇರಿ ಹರಿಯುತ್ತಲಿರುವುವು. ಶಂಕರನು ವಿಹಾರಕ್ಕಾಗಿ ಪಾರ್ವತಿಯ ಶರೀರದಲ್ಲಿ ಸುವರ್ಣಚೂರ್ಣಮಿಶ್ರಿತವಾದ ಚಂದನ (ಗಂಧ) ವನ್ನು ಲೇಪಿಸಿದ್ದನು. ಸ್ನಾನಕಾಲದಲ್ಲಿ ಆ ಕಣಿಕೆಗಳು ತಮ್ಮ ಸ್ಥಾನವನ್ನು ಬಿಟ್ಟು ಆ ನದಿಯ ಜಲದೊಡನೆ ಸೇರಿದವು. ಹೀಗೆ ಪಾರ್ವತಿಯ ಶರೀರದಿಂದ ಬಿದ್ದ

ತತಃ ಸ್ವರ್ಣವಹಾ ನಾಮ ಸ್ವರ್ಣಶ್ರೀಃ ಸರ್ವತೋಽಧಿಕಾ ।
ವಿತಾಸು ಚೈತ್ರಮಾಸಂ ತು ಸ್ನಾತ್ವಾ ಮರ್ತ್ಯೋ ನರರ್ಷಭಃ ॥ ೨೦ ॥

ಕೃಷ್ಣಪಕ್ಷೇ ಚತುರ್ದಶ್ಯಾಂ ತ್ರಿಕಾಲಂ ಯತ್ರ ಮಾನವಃ ।
ಚಿರಂ ಶಿವಗೃಹೇ ಸ್ಥಿತ್ವಾ ಶೇಷೇ ಬ್ರಹ್ಮಸದಂ ವ್ರಜೇತ್ ॥ ೨೧ ॥

ಭೂಮಾವವಗತಃ ಪಶ್ಚಾತ್ಸಾರ್ವಭೌಮೋ ನೃಪೋ ಭವೇತ್ ।
ವೃದ್ಧಗಂಗಾಜಲಸ್ಯಾಂತಸ್ತೀರೇ ಬ್ರಹ್ಮಸುತಸ್ಯ ವೈ ॥ ೨೨ ॥

ವಿಶ್ವನಾಥಾಹ್ವಯೋ ದೇವಃ ಶಿವಲಿಂಗಸಮನ್ವಿತಃ ।
ವಿಶ್ವದೇವೀ ಮಹಾದೇವೀ ಯೋನಿಮಂಡಲರೂಪಿಣೀ ॥ ೨೩ ॥

ಹಯಗ್ರೀವೇಣ ಯುಯುಧೇ ತತ್ರ ದೇವೋ ಜಗತ್ಪತಿಃ ।
ಹಯಗ್ರೀವಂ ಯತ್ರ ಹತ್ವಾ ಮಣಿಕೂಟಂ ಪುರಾ ಗತಂ ॥ ೨೪ ॥

ತತ್ರ ಯಃ ಪೂಜಯೇದ್ದುರ್ಗಾಂ ಶಾರದಾತಂತ್ರಮಂತ್ರಕೈಃ ।
ಹಯಗ್ರೀವಸ್ಯ ಮಂತ್ರೇಣ ತಂತ್ರೇಣ ಗರುಡಧ್ವಜಂ ॥ ೨೫ ॥

ಸುವರ್ಣಕಣಿಕೆಗಳನ್ನು ವಹಿಸಿ ಆ ನದಿಯು ಹರಿಯುವುದರಿಂದ ಆ ನದಿಗೆ ಸ್ವರ್ಣವಹಾ ಎಂದೂ, ಸ್ವರ್ಣಸ್ರಾವಣೀ ಎಂದೂ ಹೆಸರಾಯಿತು. ಚಿನ್ನದಂತೆ ಕಾಂತಿಯುಳ್ಳ ಆ ನದಿಯು ಆ ಮೂರು ನದಿಗಳಲ್ಲಿ ಅತ್ಯುತ್ತಮವಾದುದು.

೨೦-೨೧. ಈ ಮೂರು ನದಿಗಳಲ್ಲಿ ಚೈತ್ರಕೃಷ್ಣಚತುರ್ದಶಿಯ ದಿವಸ ಮೂರುಕಾಲಗಳಲ್ಲೂ ಯಾವನು ಸ್ನಾನಮಾಡುವನೋ ಅವನು ಬಹಳಕಾಲ ಶಿವಲೋಕದಲ್ಲಿದ್ದು ಕೊನೆಗೆ ಬ್ರಹ್ಮಲೋಕಕ್ಕೆ ಹೋಗುವನು. ಅಲ್ಲಿ ಅನೇಕ ಭೋಗಗಳನ್ನನುಭವಿಸಿ, ಆಮೇಲೆ ಭೂಮಿಯಲ್ಲಿ ಜನ್ಮಿಸಿ ಚಕ್ರವರ್ತಿಯಾಗುವನು.

೨೨-೨೩. ಬ್ರಹ್ಮಪುತ್ರವಾದ ಲೌಹಿತ್ಯನದ ತೀರದಲ್ಲಿರುವ ವೃದ್ಧಗಂಗಾನದಿಯ ಜಲದ ಮಧ್ಯದಲ್ಲಿ ಶಂಕರನು ವಿಶ್ವನಾಥನೆಂಬ ಹೆಸರಿನಿಂದ ಲಿಂಗರೂಪದಿಂದಿರುವನು. ಮತ್ತು ಸಕಲದೇವತಾರೂಪಳಾದ ಮಹಾದೇವಿಯು ಯೋನಿಮಂಡಲರೂಪದಿಂದ ಅಲ್ಲಿಯೇ ಇರುವಳು.

೨೪-೨೫. ಪೂರ್ವದಲ್ಲಿ ಜಗದ್ಗೊಡೆಯನಾದ ವಿಷ್ಣುವು ಹಯಗ್ರೀವಾಸುರನೆಂಬ ದೈತ್ಯನೊಡನೆ ಈ ಬೆಟ್ಟದಲ್ಲಿ ಯುದ್ಧವನ್ನು ಮಾಡಿ, ಅವನನ್ನು ಸಂಹರಿಸಿ ಮಣಿಕೂ

ಕಾಮೇಶ್ವರಸ್ಯ ಮಂತ್ರೇಣ ತಂತ್ರೇಣಾಪಿ ಚ ಶಂಕರಂ ।
ಯೋಜಯೇತ್ಪರಯಾ ಭಕ್ತ್ಯಾ ದ್ವಾದಶ್ಯಾಂ ಸಮುಪೋಷಿತಃ ॥ ೨೬ ॥

ಅಷ್ಟಮ್ಯಾಂ ಚ ಚತುರ್ದಶ್ಯಾಂ ತಸ್ಯ ಪುಣ್ಯಫಲಂ ಶೃಣು ।
ಕಲ್ಪಕೋಟಿತ್ರಯಂ ಸ್ಥಿತ್ವಾ ಶಿವಗೇಹೇ ಗೃಹೇ ಪರೇಃ ॥ ೨೭ ॥

ತಾವಂತಂ ಸಂಸ್ಥಿತಃ ಕಾಲಂ ತಾವಂತಂ ಚ ಶಿವಾಗೃಹೇ ।
ಶೇಷೇ ಭುವಂ ಸಮಾಸಾದ್ಯ ವೇದವಿದ್ಬ್ರಾಹ್ಮಣೋ ಭವೇತ್ ॥ ೨೮ ॥

ನದ್ಯಃ ಸ್ವರ್ಣಶ್ರಿಯಃ ಪೂರ್ವಂ ನದೀ ಕಾಮಾಹ್ವಯಾ ಶುಭಾ ।
ಕಾಮಾಯಾಃ ಪೂರ್ವಭಾಗೇ ತು ನದೀ ಶೋಭಾಸನಾಹ್ವಯಾ ॥ ೨೯ ॥

ಶೋಭಾಸನಾಯಾಃ ಪೂರ್ವಸ್ಯಾಂ ನದೀ ನಾಮ್ನಾ ವೃಷೋದಕಾ ।
ತತಃ ಪೂರ್ವಂ ಕಾಮರೂಪಂ ಪೀಠಂ ತೇ ಜಗತಾಂ ಪ್ರಸೂ ॥ ೩೦ ॥

ಟಕ್ಕೆ ಬಂದನು. ಇಂತಹ ಸ್ಥಾನದಲ್ಲಿರುವ ಆ ದುರ್ಗೆಯನ್ನು ಶಾರದಾಮಂತ್ರತಂತ್ರಗಳಿಂದಲೂ, ವಿಷ್ಣುವನ್ನು ಹಯಗ್ರೀವಮಂತ್ರದಿಂದಲೂ, ಪೂಜಿಸಬೇಕು.

೨೬-೨೮. ದ್ವಾದಶಿಯದಿನ ಉಪವಾಸವಿದ್ದು, ಕಾಮೇಶ್ವರತಂತ್ರಮಂತ್ರಗಳಿಂದ ವಿಶೇಷಭಕ್ತಿಪೂರ್ವಕವಾಗಿ ಶಂಕರನನ್ನು ಆರಾಧಿಸಬೇಕು. ಮತ್ತು ಅಷ್ಟಮಿ ನವಮಿಗಳಲ್ಲಿಯೂ ಆ ರೀತಿ ಪೂಜಿಸಬೇಕು. ಮೇಲೆ ಹೇಳಿದ ವಿಧಿಯಂತೆ ಪೂಜಿಸಿದವನಿಗೆ ಲಭಿಸುವ ಫಲವನ್ನು ಹೇಳುವೆನು. ಕೇಳು. ಅವನು ಮೂರುಕೋಟಿ ಕಲ್ಪಗಳವರೆಗೆ ಶಂಕರನ ಲೋಕದಲ್ಲಿ ಇರುವನು. ಮತ್ತು ಅಷ್ಟೈಕಾಲ ವಿಷ್ಣುಲೋಕದಲ್ಲಿಯೂ ದೇವಿಯಲೋಕದಲ್ಲಿಯೂ ಸುಖವಿಂವಿದ್ದು ಕೊನೆಗೆ ಭೂಮಿಯಲ್ಲಿ ವೇದ ಶಾಸ್ತ್ರಪಾರಂಗತನಾದ ಬ್ರಾಹ್ಮಣನಾಗಿ ಜನಿಸುವನು.

೨೯-೩೦. ಸ್ವರ್ಣಶ್ರೀನದಿಯಿಂದ ಪೂರ್ವಕ್ಕೆ ಕಾಮಾ ಎಂಬನದಿಯು ಇರುವುದು. ಆ ಕಾಮಾನದಿಯ ಪೂರ್ವಭಾಗದಲ್ಲಿ ಶೋಭಾಸನ ಎಂಬ ಇನ್ನೊಂದು ನದಿಯೂ ಇರುವುದು. ಶೋಭಾಸನಾನದಿಯ ಪೂರ್ವದಲ್ಲಿ ವೃಷೋದಕಾ ಎಂಬ ನದಿಯು ಇರುವುದು. ಅಲ್ಲಿಂದ ಪೂರ್ವಕ್ಕೆ ಜಗನ್ಮಾತೆಯಾದ ದೇವಿಯ ಕಾಮರೂಪ ಪೀಠವು ಇರುವುದು. ಆ ಪೀಠದಲ್ಲಿ ಜಗನ್ಮೋಹಿನಿಯೂ ಆದಿಮಾಯಾರೂಪಿಣಿಯೂ ಆದ ದಿಕ್ಕರವಾಸಿನೀದೇವಿಯು ನೆಲಸಿರುವಳು.

ಜಗನ್ಮಯಿಾ ಮಹಾಮಾಯಾ ದೇವೀ ದಿಕ್ಕರವಾಸಿನೀ ।
ಏತಾ ಯಾಃ ಕಥಿತಾ ನದ್ಯಃ ಸಕಲಾ ದಕ್ಷಿಣಸ್ರವಾಃ ॥ ೩೧ ॥

ತಾಸು ಸ್ನಾತ್ವಾ ಚ ಪೀತ್ವಾ ಚ ಸ್ವರ್ಗಲೋಕಮವಾಪ್ನುಯಾತ್ ।
ಪ್ರಾಂತೇ ದಿಕ್ಕರವಾಸಿನ್ಯಾಃ ಸದಾ ವಹತಿ ಸ್ವರ್ಣದೀ ॥ ೩೨ ॥

ಸಿತಗಂಗಾಹ್ವಯಾ ಲೋಕೇ ಸಾಕ್ಷಾದ್ಗಂಗಾಫಲಪ್ರದಾ ।
ಸಾ ಭೂಮಿಪೀಠಸಂಸ್ಥಾ ಚ ದೇವೀ ದಿಕ್ಕರವಾಸಿನೀ ॥ ೩೩ ॥

ಅಂತರ್ಜಲೇ ಪ್ಲಾವಯಾಂತಿ ಯಾತೀ ಪ್ರತ್ಯಕ್ಷತಾಂ ಸುರೈಃ ।
ಸಿತಗಂಗಾಜಲೇ ಸ್ನಾತ್ವಾ ದೃಷ್ಟ್ವಾ ಶಂಭುಂ ಹರಿಂ ವಿಧಿಂ ॥ ೩೪ ॥

ಇಷ್ಟ್ವಾ ಲಲಿತಕಾಂತಾಖ್ಯಂ ಪುನರ್ಯೋನೌ ನ ಜಾಯತೇ ।
ಲಿಂಗಸ್ವರೂಪೀ ಭಗವಾ೯ ಶಂಭುಸ್ತತ್ರ ಸ್ವಯಂ ಸ್ಥಿತಃ ॥ ೩೫ ॥

---

೩೧. ಈಗ ಹೇಳಿದ ನದಿಗಳೆಲ್ಲವೂ ದಕ್ಷಿಣಮುಖವಾಗಿ ಹರಿಯುವುವು. ಈ ನದಿಗಳಲ್ಲಿ ಸ್ನಾನಪಾನಗಳನ್ನು ಮಾಡಿದವನು ಸ್ವರ್ಗವನ್ನು ಪಡೆಯುವನು.

೩೨. ದಿಕ್ಕರವಾಸಿನೀದೇವಿಯ ಸಮೀಪದಲ್ಲಿಯೇ ಸಿತಗಂಗಾ ಎಂಬ ಸ್ವರ್ಗಲೋಕದಿಂದ ಬಂದ ನದಿಯು ಹರಿಯುತ್ತಲಿರುವುದು. ಅದೂ ಗಂಗಾನದಿಯಂತೆ ಫಲವನ್ನು ಕೊಡುವುದು.

೩೩. ಭೂಮಿಪೀಠದಲ್ಲಿರುವ ಆ ದಿಕ್ಕರವಾಸಿನೀದೇವಿಯು ಸಿತಗಂಗಾನದಿಯ ಜಲದ ಮಧ್ಯದಲ್ಲಿ ನೆಲಸಿ ದೇವತೆಗಳೊಡನೆ ಪ್ರತ್ಯಕ್ಷಳಾಗಿ ತೋರುವಳು.

೩೪. ಸಿತಗಂಗಾನದಿಯ ಜಲದಲ್ಲಿ ಸ್ನಾನಮಾಡಿ ಅಲ್ಲಿರುವ ಶಂಕರ, ವಿಷ್ಣು, ಬ್ರಹ್ಮ ಇವರನ್ನು ದರ್ಶನಮಾಡಿ ಲಲಿತಕಾಂತೇಶ್ವರನನ್ನು ಪೂಜಿಸಿದವನು, ತಿರುಗಿ ಜನ್ಮವನ್ನು ಪಡೆಯುವುದಿಲ್ಲ. ಮುಕ್ತಿಯನ್ನೇ ಪಡೆಯುವನು.

೩೫. ಅಲ್ಲಿ ಭಗವಂತನಾದ ಶಂಕರನು ಲಿಂಗರೂಪದಿಂದಿರುವನು. ವಿಷ್ಣುವು ಶಿಲೆಯ (ವಿಗ್ರಹ) ರೂಪದಿಂದಿರುವನು. ಬ್ರಹ್ಮನೂ ಲಿಂಗರೂಪದಿಂದಿರುವನು.

ವಿಷ್ಣುಃ ಶಿಲಾಸ್ವರೂಪೇಣ ಬ್ರಹ್ಮಾ ಲಿಂಗಸ್ವರೂಪಧೃಕ್ ।
ಪೀಠೇ ದಿಕ್ಕರವಾಸಿನ್ಯಾ ದ್ವಿರೂಪಾ ರಮತೇ ಶಿವಾ ॥ ೩೬ ॥

ತೀಕ್ಷ್ಣಕಾಂತಾಹ್ವಯಾ ತ್ವೇಕಾ ಯೋಗ್ರತಾರಾ ಪ್ರಕೀರ್ತಿತಾ ।
ಪರಾ ಲಲಿತಕಾಂತಾಖ್ಯಾ ಯಾ ಶ್ರೀಮಂಗಲಚಂಡಿಕಾ ॥ ೩೭ ॥

ತಸ್ಯಾಸ್ತು ಸತತಂ ರೂಪಂ ತೀಕ್ಷ್ಣಕಾಂತಾಹ್ವಯಂ ನೃಪ ।
ಕೃಷ್ಣಾ ಲಂಬೋದರೀ ಯಾ ತು ಸಾ ಸ್ಯಾದೇಕಜಟಾ ಶಿವಾ ॥ ೩೮ ॥

ತೇನ ರೂಪೇಣ ತಾಂ ದೇವೀಂ ಸತತಂ ಪರಿಪೂಜಯೇತ್ ।
ಅಂಗಮಂತ್ರಂ ಚ ರೂಪಂ ಚ ತಸ್ಯಾಃ ಪ್ರಾಕ್ಪ್ರತಿಪಾದಿತಂ ॥ ೩೯ ॥

ತ್ರಿಕೋಣಂ ಮಂಡಲಂ ಚಾಸ್ಯಾಃ ಕರ್ತವ್ಯಂ ಮಂತ್ರಪೂರ್ವಕಂ ।
ಆದೌ ರೇಖೇ ತತಃ ಪಶ್ಚಾತ್ಸುರೇಖೇತಿ ಪದಂ ತತಃ ॥ ೪೦ ॥

೩೬-೩೭. ದಿಕ್ಕರವಾಸಿನೀ ಪೀಠದಲ್ಲಿ ದೇವಿಯು ಎರಡು ರೂಪದಿಂದ ವಿಹರಿಸುವಳು. ತೀಕ್ಷ್ಣಕಾಂತಾ ಎಂಬುವವಳು ಮೊದಲನೆಯವಳು. ಇವಳಿಗೆ ಉಗ್ರತಾರಾ ಎಂದೂ ಹೆಸರು. ಲಲಿತಕಾಂತಾ ಎಂಬುವವಳು ದೇವಿಯ ಎರಡನೆಯ ರೂಪವು ಈ ದೇವಿಗೆ ಮಂಗಲಚಂಡಿಕಾ ಎಂಬ ಹೆಸರೂ ಇರುವುದು. ಆದರೆ ಎಲೈ ರಾಜನೇ, ದೇವಿಯು ಅಲ್ಲಿ ತೀಕ್ಷ್ಣಕಾಂತಾರೂಪದಿಂದಲೇ ಸದಾ ಇರುವಳು.

೩೮. ಆ ತೀಕ್ಷ್ಣಕಾಂತಾದೇವಿಯು ನೀಲವರ್ಣದವಳು. ದೊಡ್ಡ ಹೊಟ್ಟೆಯವಳು. ಶಿರಸ್ಸಿನಲ್ಲಿ ಒಂದೇ ಜಟೆಯನ್ನು ಧರಿಸಿರುವಳು. ಈ ರೂಪದಿಂದಲೇ ಆ ದೇವಿಯನ್ನು ಪೂಜಿಸಬೇಕು.

೩೯-೪೧. ಆ ದೇವಿಯ ಅಂಗಮಂತ್ರ ಮತ್ತು ರೂಪಗಳನ್ನು ಹಿಂದೆಯೇ ಹೇಳಿರುತ್ತೆ. ತ್ರಿಕೋಣಾಕಾರವಾದ ಮಂಡಲವನ್ನು ಮಂತ್ರಪೂರ್ವಕವಾಗಿ ರಚಿಸಿ, ಆ ಮಂಡಲದಲ್ಲಿ ಮೊದಲು ರೇಖೆ ಎಂಬ ಪದವನ್ನೂ, ಬಳಿಕ ಸುರೇಖೆ ಎಂಬ ಪದವನ್ನೂ ಮುಂದೆ ತಿಷ್ಠಂತು ಎಂಬ ಪದವನ್ನೂ ಬರೆಯಬೇಕು. ಒಟ್ಟು ಹೇರೇಖೇ ಹೇಸು

ತಥಾ ಪದಂ ಚಾಧಿಗಮ್ಯ ತಿಷ್ಠಂತ್ವಿತಿ ಪದಂ ತತಃ ।
ಮಂಡಲಸ್ಯಾಸ್ಯ ಮಂತ್ರೋ೭ಯಂ ತೀಕ್ಷ್ಣಾಖ್ಯಾಃ ಪರಿಕೀರ್ತಿತಃ ॥ ೪೧ ॥

ನರತ್ರಿಪುರದೇವಾದೀಯಮವೇತಾಲದುರ್ಧರಾಃ ।
ಗಣಗ್ರಾಮೇ೭ತ್ಯಂತಕಾಂತಾ ದ್ವಾರಪಾಲಾಃ ಪ್ರಕೀರ್ತಿತಾಃ ॥ ೪೨ ॥

ಏತಾಸ್ತು ಪೂಜಯೇತ್ಸಮ್ಯಙ್ಮಂಡಲಸ್ಯಾಷ್ಟದಿಕ್ಷು ವೈ ।
ಆದೌ ಸಂಬೋಧನಂ ಕೃತ್ವಾ ವಜ್ರಪುಷ್ಪಂ ತತಃ ಪರಂ ॥ ೪೩ ॥

ವಹ್ನಿಜಾಯಾಸ್ತತಃ ಪಶ್ಚಾನ್ಮಂತ್ರಮೇಷಾಂ ಪ್ರಕೀರ್ತಿತಂ ।
ಪಾತ್ರೋಪಕರಣಾದೀನಾಂ ಸ್ಥಾನಸ್ಯಾನ್ಯಸ್ಯ ಸರ್ವತಃ ॥ ೪೪ ॥

ಸರ್ವಮುತ್ತರತಂತ್ರೋಕ್ತಂ ಗುಹ್ಯಂ ರೂಪದ್ವಯೇ೭ಪಿ ಚ ।
ಚಾಮುಂಡಾ ಚ ಕರಾಲಾ ಚ ಸುಭಗಾ ಭೀಷಣಾ ಭಗಾ ॥ ೪೫ ॥

ರೇಖೆ ತಿಷ್ಠಂತು ಎಂದು ಮಂತ್ರವಾಗುವುದು. ಇದು ತೀಕ್ಷ್ಣಕಾಂತಾದೇವಿಯ ತ್ರಿಕೋಣಮಂಡಲದ ಮಂತ್ರವು. ಇದನ್ನು ಉಚ್ಚರಿಸಿ ಮಂಡಲವನ್ನು ಬರೆಯಬೇಕು.

೪೨. ನರರು, ತ್ರಿಪುರರು, ದೇವತೆಗಳು, ಯಮ, ವೇತಾಲ ದುರ್ಧರ ಇವರು ದೇವಿಯ ಪ್ರೀತಿಪಾತ್ರರಾದ ದ್ವಾರಪಾಲಕರು.

೪೩. ಈ ದ್ವಾರಪಾಲಕರನ್ನು ಮಂಡಲದ ಎಂಟುದಿಕ್ಕುಗಳಲ್ಲಿ ಚೆನ್ನಾಗಿ ಅರ್ಚಿಸಬೇಕು. ಮೊದಲು ಸಂಬೋಧನದಿಂದ ಆಹ್ವಾನವನ್ನು ಮಾಡಿ, ಬಳಿಕ ವಜ್ರ ಪುಷ್ಪ ಎಂಬ ಮಂತ್ರದಿಂದ ವಹ್ನಿಜಾಯಾದೇವಿಯನ್ನರ್ಚಿಸಬೇಕು. ಇದು ಈ ದೇವತೆಗಳನ್ನು ಪೂಜಿಸುವ ಮಂತ್ರವು.

೪೪. ಪಾತ್ರ, ಉಪಕರಣ, ಪೂಜಾಸಾಮಗ್ರಿ, ಇವುಗಳ ಪ್ರತಿಪತ್ತಿಕರ್ಮ, ಮೇಲಿನ ದ್ವಾರಪಾಲದೇವತೆಗಳ ಮಂತ್ರಗಳು, ದೇವಿಯ ರೂಪಗಳೆರಡರ ರಹಸ ಇವೆಲ್ಲವನ್ನೂ ಉತ್ತರತಂತ್ರದಲ್ಲಿ ಹೇಳಿರುತ್ತೆ.

೪೫. ಚಾಮುಂಡಾ, ಕರಾಲಾ, ಸುಭಗಾ, ಭೀಷಣಾ, ಭಗಾದೇವಿ, ವಿಕಟಾ ಈ ಆರು ದೇವತೆಯರು ಈ ದೇವಿಯ ಯೋಗಿನಿಯರು.

ವಿಕಟೇತಿ ಚ ಯೋಗಿನ್ಯಃ ಪ್ರೋಕ್ತಾ ಯಸ್ಯಾಸ್ತವೈವ ಷಟ್ ।
ಹೇ ಭಗವತ್ಯೇಕಜಟೇ ವಿದ್ಮಹೇ ಪದಮಂತತಃ ॥ ೪೬ ॥

ವಿಕಟದಂಷ್ಟ್ರೇ ಧೀಮಹಿ ತನ್ನಸ್ತಾರೇ ಪ್ರಚೋದಯಾತ್ ।
ಏಷಾ ತು ತೀಕ್ಷ್ಣಗಾಯತ್ರೀ ಪೀಠದೇವ್ಯಾಃ ಪ್ರಕೀರ್ತಿತಾ ॥ ೪೭ ॥

ನಿರ್ಮಾಲ್ಯಧಾರಿಣೀ ಚಾಸ್ಯಾ ದೇವೀ ವಿಕಟಚಂಡಿಕಾ ।
ಮಾಲಾ ತು ಮೃಣ್ಮಯೀ ಪ್ರೋಕ್ತಾ ರುದ್ರಾಕ್ಷಸಂಭವಾಪಿ ವಾ ॥ ೪೮ ॥

ವಿಶೇಷ ಏಷ ದೇವ್ಯಾಸ್ತು ಪೂಜನೇ ಪರಿಕೀರ್ತಿತಂ ।
ಉಪಚಾರಾದಿಕಂ ಕೃತ್ಯಂ ಬಲಿದಾನಂ ಜಪಾದಿಕಂ ॥ ೪೯ ॥

ಸರ್ವಂ ತು ಪೂರ್ವವದ್ಗ್ರಾಹ್ಯಂ ಕಾಮಾಖ್ಯಾಪೂಜನೇ ಯಥಾ ।
ಪಾನೇಷು ಮದಿರಾ ಶಸ್ತಾ ನರೋ ಬಲಿಷು ಪಾರ್ಥಿವ ॥ ೫೦ ॥

೪೬-೪೭. ಹೇ ಭಗವತ್ಯೇಕಜಟೇ ವಿದ್ಮಹೇ ಎಂದು ಹೇಳಿ ಬಳಿಕ ವಿಕಟ ದಂಷ್ಟ್ರೇ ಧೀಮಹಿ ಎಂದೂ ತನ್ನಸ್ತಾರೇ ಪ್ರಚೋದಯಾತ್ ಎಂಬ ಪದಗಳನ್ನು ಒಟ್ಟು ಸೇರಿಸಿ ಉಚ್ಚರಿಸಬೇಕು. ಎಂದರೆ ಮಂತ್ರವು ಈರೀತಿಯಾಗುವುದು— ಹೇ ಭಗ ವತ್ಯೇಕಜಟೇ ವಿದ್ಮಹೇ ವಿಕಟದಂಷ್ಟ್ರೇ ಧೀಮಹಿ । ತನ್ನಸ್ತಾರೇ ಪ್ರಚೋದಯಾತ್ ॥ ಇದು ಪೀಠದೇವಿಯ ತೀಕ್ಷ್ಣಕಾಂತಾದೇವಿಯ ಗಾಯತ್ರೀಮಂತ್ರವು. ಈ ಮಂತ್ರ ದಿಂದ ಈ ದೇವಿಯನ್ನು ಪೂಜಿಸಬೇಕು. ವಿಕಟಚಂಡಿಕಾ ಎಂಬ ದೇವಿಯು ಈ ದೇವಿಯ ನಿರ್ಮಾಲ್ಯವನ್ನು ಧರಿಸುವವಳು.

೪೮-೪೯. ಮಣ್ಣಿನಿಂದ ನಿರ್ಮಿಸಿದ ಮಾಲೆಯನ್ನಾಗಲೀ, ರುದ್ರಾಕ್ಷೀಮಾಲೆ ಯನ್ನಾಗಲೀ ದೇವಿಗೆ ಅರ್ಪಿಸಬೇಕು. ಇದೆಲ್ಲವೂ ಆ ದೇವಿಯ ಪೂಜೆಯಲ್ಲಿ ವಿಶೇಷ ವಾಗಿ ಮಾಡಬೇಕಾದ ಭಾಗಗಳು. ಮಿಕ್ಕ ಹದಿನಾರು ಉಪಚಾರಗಳು, ಬಲಿದಾನ, ಜಪ, ಮೊದಲಾದುವುಗಳು, ಇವೆಲ್ಲವನ್ನೂ ಕಾಮಾಖ್ಯಾದೇವಿಯ ಪೂಜೆಯಲ್ಲಿ ಮಾಡುವಂತೆ ಆಚರಿಸಬೇಕು.

೫೦-೫೧. ಪಾನಗಳಲ್ಲಿ ಮದಿರಾ ಎಂಬ ಮದ್ಯವಿಶೇಷವೂ, ಬಲಿಗಳಲ್ಲಿ ನರ

ಮೋದಕೋ ನಾರಿಕೇಲಂ ಚ ಮಾಂಸವ್ಯಂಜನಮೈಕ್ಷವಂ ।
ನೈವೇದ್ಯೇಷು ಪ್ರಿಯಕರಾಸ್ತೀಕ್ಷ್ಣಾಯಾಃ ಪರಿಕೀರ್ತಿತಾಃ ॥ ೫೧ ॥

ಯೈಷಾ ಲಲಿತಕಾಂತಖ್ಯಾ ದೇವೀ ಮಂಗಲಚಂಡಿಕಾ ।
ವರಧಾಭಯಹಸ್ತಾ ಸಾ ದ್ವಿಭುಜಾ ಗೌರದೇಹಿಕಾ ॥ ೫೨ ॥

ರಕ್ತಪದ್ಮಾಸನಸ್ಥಾ ಚ ಮುಕುಟೋಜ್ವಜ್ವಲಮಂಡಿತಾ ।
ರಕ್ತಕೌಶೇಯವಸನಾ ಸ್ಮಿತವಕ್ತ್ರಾ ಶುಭಾನನಾ ॥ ೫೩ ॥

ನವಯೌವನಸಂಪನ್ನಾ ಚಾರ್ವಂಗೀ ಲಲಿತಪ್ರಭಾ ।
ಉಮಾಯಾ ಭಾಷಿತಂ ಮಂತ್ರಂ ಯತ್ಪೂರ್ವಂ ತ್ವೇಕಮಕ್ಷರಂ ॥ ೫೪ ॥

ಮಂತ್ರಮಸ್ಯಾಸ್ತು ತಜ್ಜ್ಞೇಯಂ ತೇನ ದೇವೀಂ ಪ್ರಪೂಜಯೇತ್ ।
ನಾರಾಯಣ್ಯೈ ವಿದ್ಮಹೇ ತ್ವಾಂ ಚಂಡಿಕಾಯೈ ತು ಧೀಮಹೀ ॥ ೫೫ ॥

ತನ್ನೋ ಲಲಿತಕಾಂತೇತಿ ತತಃ ಪಶ್ಚಾತ್ಪ್ರಚೋದಯಾತ್ ।
ಏಷಾ ಲಲಿತಗಾಯತ್ರೀ ದೇವ್ಯಾ ಇಷ್ಟೈ ಪ್ರಕೀರ್ತಿತಾ ॥ ೫೬ ॥

ಬಲಿಯೂ ಶ್ರೇಷ್ಠವಾದವುಗಳು. ಮೋದಕ, ತೆಂಗಿನಕಾಯಿ, ಮಾಂಸದಿಂದ ಮಾಡಿದ ಭಕ್ಷ್ಯ, ಕಬ್ಬಿನಹಾಲು ಇವುಗಳು ತೀಕ್ಷ್ಣಕಾಂತಾದೇವಿಗೆ ಪ್ರಿಯವಾದ ನೈವೇದ್ಯಗಳು.

೫೨-೫೩. ಲಲಿತಕಾಂತಾದೇವಿಯ ಧ್ಯಾನಕ್ರಮವು ಹೀಗಿರುವುದು—ಈ ದೇವಿಯ ಶರೀರವು ಗೌರವರ್ಣವಾಗಿರುವುದು. ಎರಡು ಕೈಗಳಿರುವುವು. ಅವುಗಳಲ್ಲಿ ವರದ ಅಭಯ ಮುದ್ರೆಗಳನ್ನು ಧರಿಸಿರುವಳು. ನವಯೌವನದಿಂದ ಶರೀರವು ಬಹು ಸುಂದರವಾಗಿ ರಾಜಿಸುತ್ತಿರುವುದು. ಕೆಂಪು ರೇಷ್ಮೇವಸ್ತ್ರವನ್ನುಟ್ಟು, ಶಿರಸ್ಸಿನಲ್ಲಿ ಪ್ರಕಾಶಮಾನವಾದ ರತ್ನಕಿರೀಟವನ್ನು ಧರಿಸಿ, ಮನೋಹರವಾದ ಮಂದಹಾಸವನ್ನು ಸೂಸುತ್ತಾ ರಕ್ತಕಮಲದಲ್ಲಿ ಕುಳಿತಿರುವಳು. ಈರೀತಿ ಆ ದೇವಿಯನ್ನು ಧ್ಯಾನ ಮಾಡಬೇಕು.

೫೪-೫೬. ಹಿಂದೆ ಹೇಳಿದ ಉಮಾದೇವಿಯ ಒಂದಕ್ಷರವುಳ್ಳ ಮಂತ್ರವೇ ಈ ಲಲಿತಕಾಂತಾದೇವಿಯ ಪೂಜಾಮಂತ್ರವು. ಅದರಿಂದ ಈ ದೇವಿಯನ್ನು ಪೂಜಿಸ ಬೇಕು. ನಾರಾಯಣ್ಯೈ ವಿದ್ಮಹೇ, ಚಂಡಿಕಾಯೈ ತು ಧೀಮಹಿ । ತನ್ನೋ ಲಲಿತ

ಲೋಹಿತಾಂಗಸ್ಯ ದಿವಸಃ ಪ್ರಿಯೋऽಸ್ಯಾಃ ಪರಿಕೀರ್ತಿತಃ ।
ಕಾಲೋ ವಸಂತಕಾಲಶ್ಚ ಸ್ವರಶ್ಚಾಪಿ ತು ಪಂಚಮಃ ॥ ೫೭ ॥

ಅಷ್ಟಮ್ಯಾಂ ಚ ನವಮ್ಯಾಂ ಚ ಪೂಜಾ ಕಾರ್ಯಾ ವಿಭೂತಯೇ ।
ನಿರ್ಮಾಲ್ಯಧಾರಿಣೀ ಚಾಸ್ಯಾ ದೇವ್ಯೀ ಲಲಿತಚಂಡಿಕಾ ॥ ೫೮ ॥

ದೂರ್ವಾಂಕುರೈಃ ಸಮಾಯುಕ್ತಮಕ್ಷತಂ ಪ್ರೀತಿದಂ ಪರಂ ।
ಅಯಮಸ್ಯಾ ವಿಶೇಷಸ್ತು ಪೂಜನೇ ಪರಿಕೀರ್ತಿತಃ ॥ ೫೯ ॥

ವೈಷ್ಣವೀತಂತ್ರಮಂತ್ರಸ್ಯ ತಂತ್ರಂ ಗ್ರಾಹ್ಯಂ ತು ಪೂಜನೇ ।
ಉಪಚಾರೋ ಬಲಿಶ್ಚಾಸ್ಯಾ ವಿಹಿತೋ ಯಃ ಕ್ರಮಃ ಪುರಾ ॥ ೬೦ ॥

ಮಹಾಮಾಯಾಮಹಾದೇವ್ಯಾಸ್ತದ್ಗ್ರಾಹ್ಯಂ ಪರಿಪೂಜನೇ ।
ಸ್ವಗಾತ್ರರುಧಿರಂ ದದ್ಯಾದಾತ್ಮನಶ್ಚ ಹಿತಾಯ ವೈ ॥ ೬೧ ॥

ಕಾಂತಾ ಪ್ರಚೋದಯಾತ್॥ ಇದು ಲಲಿತಾಕಾಂತಾ ಗಾಯಿತ್ರಿಯು. ಇದರಿಂದ ಲಲಿತ ಕಾಂತಾದೇವಿಯನ್ನು ಪೂಜಿಸಬೇಕು. ಮಂಗಲವಾರವು ಈ ದೇವಿಗೆ ಪ್ರಿಯವಾದುದು. ಆ ವಾರದಲ್ಲಿಯೇ ದೇವಿಯನ್ನು ಪೂಜಿಸಬೇಕು.

೫೭. ವಸಂತಕಾಲವು ದೇವಿಯ ಪೂಜೆಗೆ ಶ್ರೇಷ್ಠವಾದುದು. ಐದನೆಯ ಸ್ವರವು ಉತ್ತಮವಾದುದು. ಪಂಚಮಸ್ವರದಿಂದ ದೇವಿಯನ್ನು ಸ್ತುತಿಸಬೇಕು ಎಂದು ಅಭಿಪ್ರಾಯವು. ಅಷ್ಟಮೀ ಮತ್ತು ನವಮಿಗಳಲ್ಲಿ ಈ ದೇವಿಯನ್ನು ಪೂಜಿಸಿದರೆ ಐಶ್ವರ್ಯವು ಲಭಿಸುವುದು.

೫೮. ಲಲಿತಚಂಡಿಕಾ ಎಂಬ ದೇವಿಯು ಲಲಿತಕಾಂತಾ ದೇವಿಯ ನಿರ್ಮಾಲ್ಯವನ್ನು ಧರಿಸುವವಳು. ದೂರ್ವಾಚಿಗುರಿನಿಂಜೊಡಗೂಡಿದ ಅಕ್ಷತೆಯು (ದೂರ್ವಾಕ್ಷತೆ) ಈ ದೇವಿಗೆ ತುಂಬಾ ಪ್ರಿಯವಾದುದು.

೫೯. ಇದು ಲಲಿತಕಾಂತಾದೇವಿಯ ಪೂಜೆಯಲ್ಲಿನ ವಿಶೇಷವು. ನಿಕ್ಕುದನ್ನು ವೈಷ್ಣವೀತಂತ್ರದಲ್ಲಿ ಹೇಳಿರುವಂತೆ ಗ್ರಹಿಸಿ ಪೂಜಿಸಬೇಕು.

೬೦-೬೧. ಈ ದೇವಿಗೆ ಹದಿನಾರು ಉಪಚಾರಗಳ ಪೂಜೆ ಮತ್ತು ಬಲಿಗಳನ್ನು ಮಹಾಮಾಯಾದೇವಿಗೆ ಹೇಳಿದ ಕ್ರಮದಂತೆ ಮಾಡಬೇಕು. ತನ್ನ ಶರೀರದ ರಕ್ತ

ಪಟೇಷು ಪ್ರತಿಮಾಯಾಂ ವಾ ಘಟೇ ಮಂಗಲಚಂಡಿಕಾಂ ।
ಯಃ ಪೂಜಯೇದ್ಭಾಮದಿನೇ ಶುಭೈರ್ದೂರ್ವಾಂಕುರೈಃ ಶಿವಾಂ ॥ ೬೨ ॥

ಸತತಂ ಸಾಧಕಃ ಸೋಽಪಿ ಕಾಮಮಿಷ್ಟಮವಾಪ್ನುಯಾತ್ ।
ಏವಂ ದಿಕ್ಕರವಾಸಿನ್ಯಾಃ ಕಥಿತಃ ಪೂಜನಕ್ರಮಃ ॥ ೬೩ ॥

ಯಚ್ಛ್ರುತ್ವಾ ನಾಶುಭಂ ಕಿಂಚಿದಾಪ್ನೋತಿ ಶ್ರವಣೇ ರತಃ ।
ದಿಕ್ಕರಸ್ತ್ವರುಣಃ ಪ್ರೋಕ್ತಸ್ತಥಾ ಶಂಭುಶ್ಚ ದಿಕ್ಕರಃ ॥ ೬೪ ॥

ತಸ್ಮಿನ್ನಧ್ಯುಷಿತಾ ದೇವೀ ತೇನ ದಿಕ್ಕರವಾಸಿನೀ ।
ಜಗತ್ತ್ರಯೇಽಪಿ ಯಸ್ಯಾಸ್ತು ಸದೃಶೀ ಕಾಪಿ ಸುಂದರೀ ॥ ೬೫ ॥

ವನ್ನು ಸಾಧಕನು ದೇವಿಗೆ ಅರ್ಪಿಸಬೇಕು. ಹಾಗೆ ಮಾಡಿದರೆ ತನಗೆ ತುಂಬಾ ಕ್ಷೇಮವಾಗುವುದು-

೬೨. ಬಟ್ಟೆಯ ಚಿತ್ರದಲ್ಲಿಯಾಗಲೀ, ವಿಗ್ರಹದಲ್ಲಿಯಾಗಲೀ, ಕಲಶದಲ್ಲಿಯಾಗಲೀ ಮಂಗಳರೂಪಿಣಿಯಾದ ಮಂಗಲಚಂಡಿಕಾದೇವಿಯನ್ನು ಆವಾಹನೆ ಮಾಡಿ, ಯಾವನು ಮಂಗಲವಾರದಲ್ಲಿ ದೂರ್ವಾಕ್ಷತೆಗಳಿಂದ ಅರ್ಚಿಸುವನೋ ಆ ಸಾಧಕನು ಸದಾ ಸಕಲ ಇಷ್ಟಾರ್ಥಗಳನ್ನೂ ಪಡೆಯುವನು.

೬೩. ಈರೀತಿಯಾಗಿ ದಿಕ್ಕರವಾಸಿನೀದೇವಿಯ ಪೂಜಾಕ್ರಮವನ್ನು ಹೇಳಿದು ದಾಯಿತು. ಇದನ್ನು ಯಾವನು ಕೇಳುವನೋ ಅವನಿಗೆ ಅಮಂಗಳವೆಂಬುದು ಯಾವಾಗಲೂ ಉಂಟಾಗುವುದಿಲ್ಲ.

೬೪-೬೫. ದಿಕ್ಕರನೆಂದರೆ ಅರುಣನಿಗೂ ಶಂಕರನಿಗೂ ಹೆಸರು. ಅವರಲ್ಲಿ ಈ ದೇವಿಯು ನೆಲಸಿರುವುದರಿಂದ ದಿಕ್ಕರವಾಸಿನೀ ಎಂದು ಅವಳಿಗೆ ಹೆಸರಾಯಿತು. ಮೂರು ಜಗತ್ತುಗಳಲ್ಲಿಯೂ ಈ ದೇವಿಗೆ ಸದೃಶಳಾದ ಸುಂದರಿಯೂ, ಮನೋಹರಳೂ ಇಲ್ಲದುದರಿಂದ ಲಲಿತಕಾಂತಾ ಎಂದು ಈ ದೇವಿಗೆ ಇನ್ನೊಂದು ಹೆಸರಾಯಿತು.

ನಾನ್ಯಾಸ್ತಿ ಲಲಿತಾ ತೇನ ದೇವೀ ಲಲಿತಕಾಂತಿಕಾ ।
ಶಂಕರಸ್ಯ ಪುರಾ ಪ್ರೋಕ್ತೋ ಗ್ರಾಹ್ಯೋ ವೈ ಪೂಜನಕ್ರಮಃ ॥ ೬೬ ॥

ಶೃಣು ರಾಜನ್ನವಹಿತೋ ಬ್ರಹ್ಮಣಃ ಪೂಜನಕ್ರಮಂ ।
ಬ್ರಹ್ಮಬೀಜಂ ಪುರಾ ಪ್ರೋಕ್ತಂ ತನ್ಮಂತ್ರಂ ಸರ್ವತಶ್ಚರೇತ್ ॥ ೬೭ ॥

ತೇನೈವ ತಂ ತು ಸಂಪೂಜ್ಯ ಪರಂ ನಿವಾರ್ಣಮಾವಾಪ್ನುಯಾತ್ ।
ಏತಸ್ಯ ಚಾಂಗಮಂತ್ರಂ ತು ಯಥಾ ಭರ್ಗೇಣ ಭಾಷಿತಂ ॥ ೬೮ ॥

ವೇತಾಲಭೈರವಾಭ್ಯಾಂ ತು ರೂಪಂ ಚ ಶೃಣು ಭೂಮಿಪ ।
ಯತೃತೀಯಶ್ಚ ವಹ್ನಿಶ್ಚ ಶೇಷಸ್ವರಸಮನ್ವಿತಃ ॥ ೬೯ ॥

ಚಂದ್ರಬಿಂದುಸಮಾಯುಕ್ತೋ ಬ್ರಹ್ಮಮಂತ್ರಂ ತ್ರಕೀರ್ತಿತಂ ।
ಅನೇನೈವ ತು ಮಂತ್ರೇಣ ಬ್ರಹ್ಮಾಣಂ ಯಃ ಪ್ರಪೂಜಯೇತ್ ॥ ೭೦ ॥

---

೬೬. ಶಂಕರನ ಪೂಜಾಕ್ರಮವನ್ನು ಹಿಂದೆ ಹೇಳಿರುವುದು. ಅದರಂತೆ ಇಲ್ಲಿ ಪೂಜಿಸಬೇಕು. ಎಲೈ ರಾಜನೇ! ಈಗ ಬ್ರಹ್ಮದೇವನ ಪೂಜಾಕ್ರಮವನ್ನು ಹೇಳುವೆನು, ಸಾವಧಾನವಾಗಿ ಕೇಳು.

೬೭. ಬ್ರಹ್ಮಬೀಜಮಂತ್ರವನ್ನು ಹಿಂದೆಯೇ ಹೇಳಿರುವುದು. ಆ ಮಂತ್ರದಿಂದಲೇ ಬ್ರಹ್ಮನನ್ನು ಪೂಜಿಸಿದರೆ ಮುಕ್ತಿಯು ಲಭಿಸುವುದು.

೬೮. ಬ್ರಹ್ಮದೇವನ ಅಂಗಮಂತ್ರವನ್ನೂ, ರೂಪವನ್ನೂ, ವೇತಾಲಭೈರವರಿಗೆ ಹಿಂದೆ ಶಂಕರನು ಹೇಳಿರುವನು. ಎಲೈ ರಾಜನೇ! ಅದನ್ನೇ ಹೇಳುವೆನು, ಕೇಳು.

೬೯-೭೦. ಯಕಾರದಿಂದ ಮೂರನೆಯದಾದ ಲಕಾರವೂ, ಅಗ್ನಿಬೀಜವಾದ ರಕಾರವೂ ಸಹ ಕೊನೆಯ ಔ ಸ್ವರದಿಂದಲೂ, ಬಿಂದುವಿನಿಂದಲೂ ಸೇರಿದರೆ ಲ್ರ್ಯೌಂ ಎಂದು ಬ್ರಹ್ಮದೇವನ ಅಂಗಮಂತ್ರವಾಗುವುದು. ಈ ಮಂತ್ರದಿಂದ ಬ್ರಹ್ಮದೇವನನ್ನು ಪೂಜಿಸುವ ನರನು ಇಹದಲ್ಲಿ ಬೇಕಾದ ಇಷ್ಟವನ್ನು ಪಡೆದು, ಪರದಲ್ಲಿ ಬ್ರಹ್ಮಲೋಕವನ್ನು ಪಡೆದು ಅಲ್ಲಿ ಸಂತೋಷದಿಂದ ವಿಹರಿಸುವನು.

ಸ ಕಾಮಮಿಷ್ಟಂ ಸಂಪ್ರಾಪ್ಯ ಬ್ರಹ್ಮಲೋಕೇಷು ಮೋದತೆ ।
ಬಹ್ಮಾ ಕಮಂಡಲುಧರಶ್ಚತುರ್ವಕ್ತ್ರಶ್ಚತುರ್ಭುಜಃ ॥ ೭೦ ॥

ಕದಾಚಿದ್ರಕ್ತಕಮಲೇ ಹಂಸಾರೂಢಃ ಕದಾಚನ ।
ವರ್ಣೇನ ರಕ್ತಗೌರಾಂಗಃ ಪ್ರಾಂಶುಸ್ತುಂಗಾಂಗ ಉನ್ನತಃ ॥ ೭೨ ॥

ಕಮಂಡಲುಂ ವಾಮಕರೇ ಸ್ರುಚಂ ಹಸ್ತೇ ಚ ದಕ್ಷಿಣೇ ।
ದಕ್ಷಿಣಾಧಸ್ತಥಾ ಮಾಲಾಂ ವಾಮಾಧಶ್ಚ ತಥಾ ಸ್ರುವಂ ॥ ೭೩ ॥

ಆಜ್ಯಸ್ಥಾಲೀ ವಾಮಪಾರ್ಶ್ವೇ ದೇವಾಃ ಸರ್ವೇಽಗ್ರತಃ ಸ್ಥಿತಾಃ ।
ಸಾವಿತ್ರೀ ವಾಮಪಾರ್ಶ್ವಸ್ಥಾ ದಕ್ಷಿಣಸ್ಥಾ ಸರಸ್ವತೀ ॥ ೭೪ ॥

ಸರ್ವೇ ಚ ಋಷಯೋ ಹ್ಯಗ್ರೇ ಕುರ್ಯಾದೇವಂ ವಿಚಿಂತನಂ ।
ಚತುಷ್ಕೋಣಂ ಚತುರ್ದ್ವಾರಮಷ್ಟಪತ್ರಸಮನ್ವಿತಂ ॥ ೭೫ ॥

೭೧-೭೪. ಬ್ರಹ್ಮದೇವನಿಗೆ ನಾಲ್ಕು ಮುಖಗಳೂ, ನಾಲ್ಕು ಬಾಹುಗಳೂ, ಇರುವುವು. ಒಮ್ಮೆ ರಕ್ತಕಮಲದಲ್ಲಿಯೂ, ಒಮ್ಮೆ ಹಂಸಪಕ್ಷಿಯಮೇಲೂ ಕುಳಿತು ಕೊಳ್ಳುವನು. ಈ ದೇವನಿಗೆ ಗೌರವರ್ಣವಾದ ಶರೀರವೂ, ಎತ್ತರವೂ, ಪುಷ್ಟವೂ ಆದ ಆಕೃತಿಯೂ ಇರುವುವು. ಮೇಲುಗೈಗಳಲ್ಲಿ ಕಮಂಡಲುವನ್ನೂ, ಸ್ರುಕ್ಕನ್ನೂ, ಕೆಳಗೈಗಳಲ್ಲಿ ಜಪಮಾಲೆ ಮತ್ತು ಸ್ರುವವನ್ನೂ ಹಿಡಿದಿರುವನು. ಎಡಪಾರ್ಶ್ವದಲ್ಲಿ ತುಪ್ಪದಪಾತ್ರೆ ಇರುವುದು. ಅಗ್ರಭಾಗದಲ್ಲಿ ಸಮಸ್ತ ದೇವತೆಗಳೂ ನಿಂತಿರುವರು. ಸಾವಿತ್ರೀದೇವಿಯು ಈ ದೇವನ ಎಡಭಾಗದಲ್ಲಿಯೂ, ಸರಸ್ವತಿಯು ಬಲಭಾಗದ ಲ್ಲಿಯೂ ಕುಳಿತಿರುವರು. ಋಷಿಗಳೆಲ್ಲರೂ ಮುಂದುಗಡೆ ಇರುವರು. ಈರೀತಿ ಬ್ರಹ್ಮದೇವನನ್ನು ಧ್ಯಾನಮಾಡಬೇಕು.

೭೫. ಬ್ರಹ್ಮದೇವನನ್ನು ಪೂಜಿಸುವ ಮಂಡಲವು ಈರೀತಿ ಇರುವುದು— ನಾಲ್ಕು ಮೂಲೆಗಳುಳ್ಳ ಒಂದು ಮಂಡಲವನ್ನು ಬರೆಯಬೇಕು. ಅದರ ನಾಲ್ಕು ಪಾರ್ಶ್ವಗಳಲ್ಲಿಯೂ ನಾಲ್ಕು ದ್ವಾರಗಳಿರಬೇಕು. ಸುತ್ತಲೂ ಎಂಟು ದಳಗಳಿರಬೇಕು. ನಾಲ್ಕು ಮೂಲೆಗಳಲ್ಲಿ ಜಪಮಾಲೆ, ಕಮಂಡಲು, ಸ್ರುಕ್, ಸ್ರುವ ಇವುಗಳನ್ನು ಬರೆಯ ಬೇಕು. ಈರೀತಿ ಇರುವ ಮಂಡಲದಲ್ಲಿ ಬ್ರಹ್ಮದೇವನನ್ನು ಆವಾಹನೆಮಾಡಿ ಪೂಜಿಸಬೇಕು.

ಚತುಷ್ಕೋಣೇಷ್ವಂಕಿತಂತ ತು ಸ್ರಕ್ಕಮಂಡಲುಸ್ರಕ್ಸ್ರುವೈಃ ।
ಸಮ್ಮಾರ್ಜನಾದಿಕಂ ಸರ್ವಂ ಯಾಶ್ಚಾನ್ಯಾಃ ಪ್ರತಿಪತ್ತಯಃ ॥ ೭೬ ॥

ದೃಷ್ಟ್ವಾಶ್ಚೋತ್ತರತಂತ್ರೋಕ್ತಾ ಯೋಗಪೀಠೇಽಂಗಿಕಾದಿಕಾಃ ।
ಆಧಾರಶಕ್ತಿಪ್ರಮುಖಾಂಸ್ತಥಾ ಸರ್ವಾಂಸ್ತು ಪೂಜಯೇತ್ ॥ ೭೭ ॥

ಅಷ್ಟಪತ್ರೇಷು ಪದ್ಮಸ್ಯ ದಿಕ್ಪಾಲಾಂಶ್ಚ ಪ್ರಪೂಜಯೇತ್ ।
ಪದ್ಮಾಸನಾಯ ವಿದ್ಮಹೇ ಹಂಸಾರೂಢಾಯ ಧೀಮಹಿ ॥ ೭೮ ॥

ತನ್ನೋ ಬ್ರಹ್ಮನ್ನಿತಿ ಪದಂ ತತಃ ಪಶ್ಚಾತ್ಪ್ರಚೋದಯಾತ್ ।
ಏಷಾ ತು ಬ್ರಹ್ಮಗಾಯತ್ರೀ ಪೂಜಯೇದನಯಾ ವಿಧಿಂ ॥ ೭೯ ॥

ನಿರ್ಮಾಲ್ಯಧಾರೀ ಚೈತಸ್ಯ ಸನತ್ಕುಮಾರ ಉಚ್ಯತೇ ।
ಉಪಚಾರಾಃ ಪೂರ್ವವತ್ತು ನೇತ್ರಾಂಜನವಿವರ್ಜಿತಾಃ ॥ ೮೦ ॥

ರಕ್ತಕೌಶೇಯವಸ್ತ್ರಂ ತು ಬ್ರಹ್ಮಪ್ರೀತಿಕರಂ ಪರಂ ।
ಅನ್ನಂ ಸಪಾಯಸಂ ಸರ್ಪಿಸ್ತಿಲಯುಕ್ತಂ ಚ ಭೋಜನಂ ॥ ೮೧ ॥

೭೬-೭೭. ಸಮ್ಮಾರ್ಜನೆಯೇ ಮೊದಲಾದುವನ್ನೂ, ಮಿಕ್ಕ ಅನುಷ್ಠಾನ ಕರ್ಮಗಳನ್ನೂ ಸಹ ಉತ್ತರತಂತ್ರದಲ್ಲಿ ಹೇಳಿದಂತೆ ಮಾಡಬೇಕು. ಆಧಾರಶಕ್ತ್ಯೇ ಮೊದಲಾದ ಎಲ್ಲಾ ಪೀಠದೇವತೆಗಳನ್ನೂ ಪೂಜಿಸಬೇಕು. ಪದ್ಮಾಕಾರವಾದ ಮಂಡಲದ ಎಂಟು ದಳಗಳಲ್ಲಿ ಎಂಟು ದಿಕ್ಪಾಲಕರನ್ನು ಪೂಜಿಸಬೇಕು.

೭೮-೭೯. ಪದ್ಮಾಸನಾಯ ವಿದ್ಮಹೇ ಹಂಸಾರೂಢಾಯ ಧೀಮಹಿ । ತನ್ನೋ ಬ್ರಹ್ಮ ಪ್ರಚೋದಯಾತ್ ॥ ಈ ಮಂತ್ರವು ಬ್ರಹ್ಮದೇವನ ಗಾಯತ್ರಿಯು. ಈ ಮಂತ್ರದಿಂದ ಬ್ರಹ್ಮನನ್ನು ಅರ್ಚಿಸಬೇಕು. ಸನತ್ಕುಮಾರನು ಬ್ರಹ್ಮದೇವನ ನಿರ್ಮಾಲ್ಯವನ್ನು ಧರಿಸುವವನು.

೮೦. ನೇತ್ರಾಂಜನವನ್ನು ಬಿಟ್ಟು ಮಿಕ್ಕ ಉಪಚಾರಗಳನ್ನೆಲ್ಲಾ ಹಿಂದಿನಂತೆಯೇ ಆಚರಿಸಬೇಕು. ರೇಷ್ಮೆಯ ಕೆಂಪುವಸ್ತ್ರವು ಬ್ರಹ್ಮನಿಗೆ ತುಂಬಾ ಪ್ರಿಯವಾದುದು.

೮೧. ಅನ್ನ, ಪಾಯಸ, ತುಪ್ಪ, ತಿಲಾನ್ನ ಇವುಗಳು ಬ್ರಹ್ಮದೇವನಿಗೆ ಪ್ರಿಯವಾದ ನೈವೇದ್ಯಗಳು. ಬೆಳಪುಕೆಂಪುಮಿಶ್ರವಾದ ಚಂದನವೂ ಬ್ರಹ್ಮನಿಗೆ ಇಷ್ಟವಾದುದು.

ಪಿತರಕ್ತಸಮಾಯುಕ್ತಂ ಚಂಡನಂ ಪರಿಕೀರ್ತಿತಂ ।
ಪಾರ್ಶ್ವಯೋಃ ಶಂಕರಂ ವಿಷ್ಣುಂ ಪೂಜನೇ ಪೂಜಯೇನ್ನರಃ ॥ ೮೨ ॥

ಸ್ರುವಾದೀ೯ ಕರಸಂಸ್ಥಾಂಸ್ತು ಮುಂಡಲೇ ಪರಿಪೂಜಯೇತ್ ।
ಸರಸ್ವತೀಂ ಚ ಸಾವಿತ್ರೀಂ ಹಂಸಂ ಪದ್ಮಂ ತಥೈವ ಚ ॥ ೮೩ ॥

ಅಯಂ ವಿಶೇಷಃ ಕಥಿತಃ ಪ್ರಣಾಮಶ್ಚಾಸ್ಯ ದಂಡವತ್ ।
ಪದ್ಮಬೀಜಭವಾ ಮಾಲಾ ಜಪಕರ್ಮಣಿ ಕೀರ್ತಿತಾ ॥ ೮೪ ॥

ಪೂರ್ಣಾದರ್ಶೌ ತಿಥಿ ಗ್ರಾಹ್ಯೌ ಪೂಜಾಕರ್ಮಣಿ ಸರ್ವದಾ ।
ಕ್ಷೀರೇಣಾರ್ಘ್ಯಂ ಪ್ರದದ್ಯಾತ್ತು ಸರ್ವದಾ ಬ್ರಹ್ಮಣೇ ನೃಪ ॥ ೮೫ ॥

ಅಯಂ ತೇ ಕಥಿತೋ ಭೂಪ ಯಥಾ ಭರ್ಗೇಣ ಭಾಷಿತಃ ।
ದರ್ಶಯತಾ ಸ್ವಪುತ್ರಾಭ್ಯಾಂ ಕಾಮರೂಪಾಹ್ವಯಂ ಶುಭಂ ॥ ೮೬ ॥

ಯತ್ರ ತತ್ರ ವಿಧಿಂ ಚೈವ ಸಾಧಕಃ ಪರಿಪೂಜಯೇತ್ ।
ಪೀಠೇ ಸಮ್ಯಕ್ಪೂಜಯಿತ್ವಾ ಪರಂ ನಿರ್ವಾಣಮಾಪ್ನುಯಾತ್ ॥ ೮೭ ॥

೮೨-೮೩. ಬಲಭಾಗ ಮತ್ತು ಎಡಭಾಗಗಳಲ್ಲಿ ಕ್ರಮವಾಗಿ ವಿಷ್ಣುಶಂಕರರನ್ನು ಪೂಜಿಸಬೇಕು. ಕೈಯೆಲ್ಲಿರುವ ಸ್ರುವ ಮೊದಲಾದುವುಗಳನ್ನು ಮಂಡಲದಲ್ಲಿ ಪೂಜಿಸಬೇಕು. ಸರಸ್ವತೀ, ಸಾವಿತ್ರೀ, ಹಂಸ, ಪದ್ಮ ಇವುಗಳನ್ನೂ ಪೂಜಿಸಬೇಕು. ಇದು ಬ್ರಹ್ಮದೇವನ ಪೂಜೆಯಲ್ಲಿನ ವಿಶೇಷವು. ದಂಡದಂತೆ ಸಾಷ್ಟಾಂಗನಮಸ್ಕಾರವನ್ನು ಬ್ರಹ್ಮದೇವನಿಗೆ ಮಾಡಬೇಕು.

೮೪-೮೫. ಪದ್ಮದ ಬೀಜದಿಂದ ಮಾಡಿದ ಜಪಮಾಲೆಯಿಂದ ಬ್ರಹ್ಮದೇವನ ಮಂತ್ರಜಪವನ್ನು ಮಾಡಬೇಕು. ಹುಣ್ಣಿಮೆ, ಅಮಾವಾಸ್ಯೆ ಈ ತಿಥಿಗಳು ಬ್ರಹ್ಮದೇವನ ಪೂಜೆಗೆ ಉತ್ತಮವಾದವುಗಳು. ಎಲೈ ರಾಜನೇ! ಬ್ರಹ್ಮನಿಗೆ ಪಾಲಿನಿಂದಲೇ ಸದಾ ಅರ್ಘ್ಯವನ್ನು ಕೊಡಬೇಕು.

೮೬-೮೭. ಎಲೈ ರಾಜನೇ! ಶಂಕರನು ತನ್ನ ಪುತ್ರರಾದ ವೇತಾಲಭೈರವರಿಗೆ ಕಾಮರೂಪಪೀಠವನ್ನು ತೋರಿಸಿದಾಗ ಏನೇನನ್ನು ಹೇಳಿರುವನೋ ಅದನ್ನೆಲ್ಲಾ ನಿನಗೆ ನಾನು ಹೇಳಿರುವೆನು. ಬ್ರಹ್ಮನನ್ನು ಪೂಜಿಸಬೇಕಾದ ಸಂದರ್ಭಗಳಲ್ಲೆಲ್ಲಾ

ಕಥಿತಾ ಬ್ರಹ್ಮಣಃ ಪೂಜಾ ಪೂಜನಂ ಶೃಣು ವೈಷ್ಣವಂ ।
ಬೀಜಂ ತು ವಾಸುದೇವಸ್ಯ ಪುರೈವ ಪ್ರತಿಪಾದಿತಂ ॥ ೮೮ ॥

ತದಂಗಮುಂತ್ರಂ ರಾಜೇಂದ್ರ ದ್ವಾದಶಾಕ್ಷರಮುಚ್ಯತೇ ।
ಓಂ ನಮೋಭಗವತೇ ಪೂರ್ವಂ ವಾಸುದೇವಾಯ ವೈ ಪರಂ ! ॥ ೮೯ ॥

ಅಂಗಮುಂತ್ರಮಿದಂ ಚೈವ ವಾಸುದೇವಸ್ಯ ಕೀರ್ತಿತಂ ।
ಅಸ್ಯ ಪ್ರತ್ಯಂಗರೂಪಂ ತು ದಧಿವಾಮನಸಂಜ್ಞಕಂ ॥ ೯೦ ॥

ತಸ್ಯ ಮುಂತ್ರಂ ನರಶ್ರೇಷ್ಠ ಶಂಭುನಾ ಭಾಷಿತಂ ಶೃಣು ।
ಓಂ ನಮೋ ವಿಷ್ಣವೇ ಪೂರ್ವಂ ಪದಂ ತಸ್ಯ ಪ್ರಕೀರ್ತಿತಂ ॥ ೯೧ ॥

ಪದಂ ಚ ಸುರಪತಯೇ ಚತುರ್ಥ್ಯಂತಂ ಮಹಾಬಲಂ ।
ಸ್ವಾಹಾಂತಂ ಹೃದಯಾಸನ್ನಂ ಪ್ರತ್ಯಂಗಂ ವೈಷ್ಣವಂ ಮತಂ ॥ ೯೨ ॥

ಮುಂತ್ರತ್ರಯಂ ತು ಯೋ ವೇದ ಬೀಜಂ ಪ್ರತ್ಯಂಗಸಂಜ್ಞಕಂ ।
ಸ ಪುಮಾ೯ ದೇವಕಾಯಸ್ತು ನ ಸ ಭೂಯೋಽಭಿಜಾಯತೇ ॥ ೯೩ ॥

ಸಾಧಕನು ಇದೇ ಕ್ರಮದಿಂದಲೇ ಪೂಜಿಸಬೇಕು. ಹೀಗೆ ಪೀಠದಲ್ಲಿ ಬ್ರಹ್ಮನನ್ನು ಪೂಜಿಸಿದ ನರನು ಶ್ರೇಷ್ಠವಾದ ಮುಕ್ತಿಸುಖವನ್ನು ಪಡೆಯುವನು.

೮೮. ಬ್ರಹ್ಮದೇವನ ಪೂಜಾಕ್ರಮವನ್ನು ಹೇಳಿದುದಾಯಿತು. ಈಗ ವಿಷ್ಣುವಿನ ಪೂಜಾಕ್ರಮವನ್ನು ಹೇಳುವೆನು, ಕೇಳು. ವಿಷ್ಣುವಿನ ಬೀಜಮಂತ್ರವನ್ನು ಹಿಂದೆಯೇ ಹೇಳಿರುತ್ತೆ.

೮೯-೯೨. ಎಲೈ ರಾಜೇಂದ್ರನೇ ವಿಷ್ಣುವಿನ ಅಂಗಮಂತ್ರವು ಹನ್ನೆರಡು ಅಕ್ಷರಗಳುಳ್ಳದ್ದು. "ಓಂ ನಮೋ ಭಗವತೇ ವಾಸುದೇವಾಯ" ಎಂಬುದೇ ವಾಸುದೇವನ ಅಂಗಮಂತ್ರವು. ವಿಷ್ಣುವಿನ ಪ್ರತ್ಯಂಗಮಂತ್ರಕ್ಕೆ ದಧಿವಾಮನವೆಂದು ಹೆಸರು. ಎಲೈ ರಾಜನೇ! ಶಂಕರನು ವೇತಾಲಭೈರವರಿಗೆ ಹೇಳಿದ ಆ ಮಂತ್ರವನ್ನೇ ಹೇಳುವೆನು, ಕೇಳು. "ಓಂ ನಮೋ ವಿಷ್ಣವೇ ಸುರಪತಯೇ ಸ್ವಾಹಾ" ಎಂಬುದೇ ಪ್ರತ್ಯಂಗ ಮಂತ್ರವು. ಎದೆಯಲ್ಲಿ ಹಸ್ತವನ್ನಿಟ್ಟುಕೊಂಡು ಈ ಮಂತ್ರವನ್ನು ಉಚ್ಚರಿಸಬೇಕು.

೯೩. ವಿಷ್ಣುವಿನ ಬೀಜಮಂತ್ರ, ಅಂಗಮಂತ್ರ, ಪ್ರತ್ಯಂಗಮಂತ್ರ ಈ ಮೂರು

ಸರ್ವ ಉತ್ತರತಂತ್ರೋಕ್ತಃ ಕ್ರಮೋ ಗ್ರಾಹ್ಯಸ್ತು ಪೂಜನೇ ।
ತ್ರಿಷು ಮಂತ್ರೇಷು ಚ ಸದಾ ವಿಶೇಷಂ ಶೃಣು ಭೂಪತೇ ॥ ೯೪ ॥

ರೂಪಂ ತು ಬೀಜಮಂತ್ರಸ್ಯ ಪ್ರಥಮಂ ಶೃಣು ಭೂಪತೇ ।
ಪೂರ್ಣಚಂದ್ರೋಪಮಃ ಶುಕ್ಲಃ ಪಕ್ಷಿರಾಜೋಪರಿಸ್ಥಿತಃ ॥ ೯೫ ॥

ಚತುರ್ಭುಜಃ ಪೀತವಸ್ತ್ರೈಸ್ತ್ರಿಭಿಃ ಸಂವೀತದೇಹಭೃತ್ ।
ದಕ್ಷಿಣೋರ್ಧ್ವೇ ಗದಾಂ ಧತ್ತೇ ತದಧೋ ವಿಕಚಾಂಬುಜಂ ॥ ೯೬ ॥

ವಾಮೋರ್ಧ್ವೇ ಚಕ್ರಮುತ್ಯುಗ್ರಂ ಧತ್ತೇಽಧಃ ಶಂಖಮೇವ ಚ ।
ಶ್ರೀವತ್ಸವಕ್ಷಾಃ ಸತತಂ ಕೌಸ್ತುಭಂ ಹೃದಿ ಭಾಂಶುಮತ್ ॥ ೯೭ ॥

ಧತ್ತೇ ಕಕ್ಷೇ ಹ್ಯಧೋ ವಾಮೇ ತೂಣೀರಂ ಬಾಣಪೂರಿತಂ ।
ದಕ್ಷಿಣೇ ಕೋಷಗಂ ಖಡ್ಗಂ ನಂದಕಂ ಸಶರಾಸನಂ ॥ ೯೮ ॥

ಮಂತ್ರಗಳನ್ನು ಬಲ್ಲ ನರನು, ದೇವಭಾವವನ್ನು ಹೊಂದುವನಲ್ಲದೆ ತಿರುಗಿ ಜನ್ಮವನ್ನು ಪಡೆಯುವುದಿಲ್ಲ. ಮುಕ್ತಿಯನ್ನೈದುವನು.

೯೪. ಉತ್ತರತಂತ್ರದಲ್ಲಿ ಹೇಳಿರುವ ಪೂಜಾಕ್ರಮವನ್ನೆಲ್ಲಾ ಈ ವಿಷ್ಣು ಪೂಜೆಯಲ್ಲಿಯೂ ಆಚರಿಸಬೇಕು. ಮೇಲೆಹೇಳಿದ ಮೂರು ಮಂತ್ರಗಳಲ್ಲಿರುವ ವಿಶೇಷವನ್ನು ಹೇಳುವೆನು, ಎಲೈ ರಾಜನೇ! ಕೇಳು.

೯೫-೧೦೦. ಪ್ರಥಮ ಬೀಜಮಂತ್ರದ ರೀತಿಯಿಂದ ವಿಷ್ಣುವನ್ನು ಧ್ಯಾನ ಮಾಡುವ ಕ್ರಮವು ಹೀಗಿರುವುದು:—ಈ ದೇವನು ಪೂರ್ಣಚಂದ್ರನಂತೆ ಶುಭ್ರವಾದ ಶರೀರಕಾಂತಿಯಿಂದ ಬೆಳಗುತ್ತಾ ಪಕ್ಷಿರಾಜನಾದ ಗರುಡನ ಮೇಲೆ ಕುಳಿತಿರುವನು. ಹಳದಿಯ ಬಣ್ಣದ ಮೂರು ಪೀತಾಂಬರವನ್ನು ಧರಿಸಿರುವನು. ಈ ದೇವನಿಗೆ ನಾಲ್ಕು ಭುಜಗಳಿರುವವು. ಬಲಗಡೆಯ ಮೇಲುಗೈಯಲ್ಲಿ ಗದೆಯನ್ನೂ ಕೆಳಗೈಯಲ್ಲಿ ಅರಳಿದ ಕಮಲವನ್ನೂ, ಎಡಗಡೆಯ ಮೇಲುಕೈಯಲ್ಲಿ ಅತ್ಯುಗ್ರವಾದ ಚಕ್ರಾಯುಧವನ್ನೂ, ಕೆಳಗೈಯಲ್ಲಿ ಶಂಖವನ್ನೂ, ಧರಿಸಿರುವನು. ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯು ಬೆಳಗುತ್ತಿರುವುದು. ಮತ್ತು ಹೃದಯದಲ್ಲಿ ಕೌಸ್ತುಭ ಮಣಿಯನ್ನು ಧರಿಸಿರುವನು. ಎಡಕಂಕುಳಲ್ಲಿ ಬಾಣದಿಂದ ತುಂಬಿದ ಬತ್ತಳಿಕೆಯನ್ನೂ, ಎಡಕಂಕುಳಲ್ಲಿ ಒರೆಯಲ್ಲಿರುವ ಖಡ್ಗ, ನಂದಕವೆಂಬ ಧನುಸ್ಸು ಇವುಗ

ಶೀರ್ಷೇ ಕಿರೀಟಂ ಸುದ್ಯೋತಂ ಕರ್ಣಯೋಃ ಕುಂಡಲದ್ವಯಂ ।
ಆಜಾನುಲಂಬಿನೀಂ ಚಿತ್ರಾಂ ವನಮಾಲಾಂ ಗಲೇ ಸ್ಥಿತಾಂ ॥ ೯೯ ॥

ದಧಾನಂ ದಕ್ಷಿಣೇ ದೇವೀಂ ಶ್ರೀಯಂ ಪಾರ್ಶ್ವೇ ತು ಬಿಭ್ರತಂ ।
ಸರಸ್ವತೀಂ ವಾಮಪಾರ್ಶ್ವೇ ಚಿಂತಯೇದ್ವರದಂ ಪರಿಂ ॥ ೧೦೦ ॥

ಬೀಜಮಂತ್ರಸ್ಯ ರೂಪಂ ಚ ಕಥಿತಂ ತವ ಪಾರ್ಥಿವ ।
ದ್ವಾದಶಾಕ್ಷರಮಂತ್ರಸ್ಯ ರೂಪಮೇತಚ್ಛೃಣುಷ್ವ ಮೇ ॥ ೧೦೧ ॥

ನೀಲೋತ್ಪಲದಲಶ್ಯಾಮಂ ತಥೈವ ಚ ಚತುರ್ಭುಜಂ ।
ದಕ್ಷಿಣೋರ್ಧ್ವಸ್ಥಿತಂ ಪದ್ಮಂ ಗದಾಂ ಚಾಪಿ ಪ್ರಯೋಜಯೇತ್ ॥ ೧೦೨
ವಾಮೇऽಧಶ್ಚಕ್ರಮತುಲಮೂರ್ಧ್ವೇ ಶಂಖಂ ಚ ಬಿಭ್ರತಂ ।
ಚಿಂತಯೇದ್ವರದಂ ದೇವಂ ಸರ್ವಮನ್ಯತ್ತು ಪೂರ್ವವತ್ ॥ ೧೦೩ ॥

ಅಷ್ಟಾದಶಾಕ್ಷರಸ್ಯಾಸ್ಯ ಪ್ರತ್ಯಂಗಸ್ಯ ಚ ಚಿಂತನಂ ।
ಶೃಣು ರಾಜನ್ನವಹಿತೋ ದಾರಿದ್ರ್ಯಭಯನಾಶನಂ ॥ ೧೦೪ ॥

ಳನ್ನೂ, ಧರಿಸಿರುವನು. ಶಿರಸ್ಸಿನಲ್ಲಿ ಜಾಜ್ವಲ್ಯಮಾನವಾದ ರತ್ನ ಕಿರೀಟವನ್ನೂ ಕರ್ಣಗಳಲ್ಲಿ ಥಳಥಳನೆ ಹೊಳೆಯುತ್ತಿರುವ ಕುಂಡಲಗಳನ್ನೂ, ಧರಿಸಿ ಮನೋಹರ ವಾಗಿ ಪ್ರಕಾಶಿಸುತ್ತಿರುವನು. ಜಾನುವಿನವರೆಗೂ ನೀಳವಾಗಿ ವಿಚಿತ್ರವಾಗಿರುವ ವನಮಾಲೆಯನ್ನು ಕಂಠದಲ್ಲಿ ಧರಿಸಿ ಬೆಳಗುತ್ತಿರುವನು. ಈ ವಿಷ್ಣುವಿನ ಎಡಭಾಗದಲ್ಲಿ ಲಕ್ಷ್ಮಿಯೂ, ಬಲಭಾಗದಲ್ಲಿ ಸರಸ್ವತಿಯೂ, ಇರುವರು. ಈ ರೀತಿ ಇರುವ ವರದಾ ಯಕನಾದ ವಿಷ್ಣುವನ್ನು ಧ್ಯಾನಮಾಡಬೇಕು.

೧೦೧-೧೦೩. ಬೀಜಮಂತ್ರದಿಂದ ಧ್ಯಾನಿಸುವ ಕ್ರಮವನ್ನು ಹೇಳಿದ್ದಾಯಿತು. ಇನ್ನು ಹನ್ನೆರಡು ಅಕ್ಷರಗಳುಳ್ಳ ಅಂಗಮಂತ್ರದ ರೂಪನನ್ನು ಹೇಳುವೆನು, ಕೇಳು. ಈ ದೇವನಿಗೆ ಕನ್ನೈದಿಲೆಯಂತೆ ನೀಲವಾದ ಶರೀರವೂ, ನಾಲ್ಕು ಬಾಹುಗಳೂ ಇರುವವು. ಬಲಗಡೆಯ ಮೇಲುಗೈಯಲ್ಲಿ ಕಮಲವನ್ನೂ, ಕೆಳಗೈಯಲ್ಲಿ ಗದೆಯನ್ನೂ ಎಡಗಡೆಯ ಕೆಳಗೈನಲ್ಲಿ ಸುದರ್ಶನ ಚಕ್ರವನ್ನೂ, ಮೇಲುಗೈನಲ್ಲಿ ಶಂಖವನ್ನೂ ಧರಿಸಿರುವನು. ಮಿಕ್ಕ ವಿವರಣೆಯು ಹಿಂದಿನಂತೆಯೇ ಇರುವುದು. ವರದಾಯ ಕನಾದ (ವಿಷ್ಣು) ದೇವನನ್ನು ಹೀಗೆ ಚಿಂತಿಸಬೇಕು.

೧೦೪. ಇನ್ನು ಹದಿನೆಂಟು ಅಕ್ಷರಗಳುಳ್ಳ ಪ್ರತ್ಯಂಗಮಂತ್ರದಿಂದ ಧ್ಯಾನಿಸ

ಪೂರ್ಣೇಂದುಸದೃಶಂ ಕಾಂತ್ಯಾ ಶುಕ್ಲವರ್ಣಂ ವಿಚಿಂತಯೇತ್ ।
ಕರೇ ವಿಚಿಂತಯೇದ್ವಾಮೇ ಪೀಯೂಷಾಪೂರಿತಂ ಘಟಂ ॥ ೧೦೫ ॥

ದಧ್ಯನ್ನಖಂಡಸಂಯುಕ್ತಂ ದಕ್ಷಿಣೇ ಸ್ವರ್ಣಭಾಜನಂ ।
ಪದ್ಮಾಸನಗತಂ ದೇವಂ ಚಂದ್ರಮಂಡಲಮಧ್ಯಗಂ ॥ ೧೦೬ ॥

ಶುಕ್ಲವಸ್ತ್ರಧರಂ ದೇವಂ ಪ್ರಮಾಣಾದ್ವಾಮನಂ ತಥಾ ।
ಈಷದ್ಧಾಸಸಮಾಯುಕ್ತಂ ತ್ರಿಲೋಕೇಶಂ ತ್ರಿವಿಕ್ರಮಂ ॥ ೧೦೭ ॥

ಚಿಂತಯೇದ್ವರದಂ ದೇವಂ ಸರ್ವಕಾಮಫಲಪ್ರದಂ ।
ದಹನಪ್ಲವನಾದೌ ಚ ಪೂರ್ವತಂತ್ರೋದಿತಾ ಯಥಾ ॥ ೧೦೮ ॥

ತಥಾ ಮಂತ್ರಾಃ ಪರಿಗ್ರಾಹ್ಯಾಸ್ತಥಾ ಚೋತ್ತರತಂತ್ರಗಾಃ ।
ಮಂಡಲಸ್ಯ ಕ್ರಮಂ ತಸ್ಯ ಶೃಣು ಭರ್ಗೇಣ ಭಾಷಿತಂ ॥ ೧೦೯ ॥

ಬೇಕಾದ ವಿಷ್ಣುವಿನ ರೂಪವನ್ನು ಹೇಳುವೆನು. ಸಮಾಧಾನದಿಂದ ಕೇಳು. ಅದನ್ನು ಕೇಳುವುದರಿಂದ ದಾರಿದ್ರ್ಯಭಯಗಳು ನಾಶವಾಗುವುವು.

೧೦೫-೧೦೭. ಈ ದೇವನು ಪೂರ್ಣಚಂದ್ರನಂತೆ ಮನೋಹರವಾಗಿಯೂ ಶುಭ್ರವಾಗಿಯೂ ಇರುವ ಶರೀರಕಾಂತಿಯಿಂದ ಬೆಳಗುತ್ತ, ಎಡಗೈಯಲ್ಲಿ ಅಮೃತ ಪೂರ್ಣವಾದ ಕಲಶವನ್ನೂ, ಬಲಗೈಯಲ್ಲಿ ಮೊಸರನ್ನವನ್ನು ತುಂಬಿದ ಚಿನ್ನದ ಪಾತ್ರೆಯನ್ನೂ ಹಿಡಿದಿರುವನು. ಮತ್ತು ಬಿಳಿಯ ವಸ್ತ್ರವನ್ನುಟ್ಟು ಚಂದ್ರಮಂಡಲದ ಮಧ್ಯದಲ್ಲಿ ಪದ್ಮಾಸನದಲ್ಲಿ ಮಂದಹಾಸವನ್ನು ಬೀರುತ್ತ ಕುಳಿತಿರುವನು. ಆಕಾರದಲ್ಲಿ ಬಹಳ ಕುಳ್ಳಾಗಿರುವನು. ಮೂರು ಲೋಕಗಳಿಗೆ ಒಡೆಯನೂ, ವರದಾಯಕನೂ ಆದ ತ್ರಿವಿಕ್ರಮಾವತಾರಿಯಾದ ವಿಷ್ಣುವಿನ ರೂಪವನ್ನು ಹೀಗೆ ಧ್ಯಾನಿಸಬೇಕು ಈ ದೇವನು ಸಕಲ ಇಷ್ಟಾರ್ಥಗಳನ್ನೂ ಕೊಡುವನು.

೧೦೮. ದಹನ ಪ್ಲವನ ಮೊದಲಾದುವುಗಳಲ್ಲಿ ಪೂರ್ವತಂತ್ರದಲ್ಲಿ ಹೇಳಿದಂತೆಯೂ ಉತ್ತರತಂತ್ರದಲ್ಲಿ ಹೇಳಿದಂತೆಯೂ ಆಯಾಯ ಮಂತ್ರಗಳನ್ನು ಉಪಯೋಗಿಸಬೇಕು.

೧೦೯-೧೧೨. ಈ ದೇವನ ಮಂಡಲಕ್ರಮವನ್ನು ಶಂಕರನು ಯಾವರೀತಿ ಹೇಳಿರುವನೋ, ಅದನ್ನೇ ಹೇಳುವೆನು, ಕೇಳು. ನಿತ್ಯಪೂಜೆಗಳಲ್ಲಿ ರಂಗವಲ್ಲಿ

ರೇಖಯಾ ನಿತ್ಯಪೂಜಾಸು ರಜೋಭಿಃ ಪಂಚಭಿಸ್ತಥಾ ।
ನೈಮಿತ್ತಿಕೇ ಯಥಾ ಕಾರ್ಯಂ ಭೇದಾಭೇದೇನ ಸಾಂಪ್ರತಂ ॥ ೧೧೦ ॥

ಹಸ್ತಮಾತ್ರಂ ಚತುರ್ದ್ವಾರಂ ವರ್ತುಲಾಂಬುಜಸನ್ನಿಭಂ ।
ಚತುಷ್ಕೋಣೇ ಚತುರ್ಭಿಸ್ತು ಶಂಖೈರ್ಯುಕ್ತಂ ಮನೋಹರಂ ॥ ೧೧೧ ॥

ಬದ್ಧದ್ವಾರಂ ದಿಕ್ಪತೀನಾಮಾಯುಧೈಃ ಕರಣೈಸ್ತಥಾ ।
ಅಷ್ಟಾಸು ದಿಕ್ಷು ನಿಹಿತಂ ಸಬಹಿರ್ವೇಷ್ಟಪದ್ಮಕಂ ॥ ೧೧೨ ॥

ಏವಂ ಯಥಾ ರಜೋಭಿಸ್ತು ಕಾರ್ಯಂ ತಚ್ಛೃಣು ಪಾರ್ಥಿವ ।
ಸಿತೈಃ ಪೀತೈಸ್ತಥಾ ರಕ್ತೈಃ ಶ್ಯಾಮೈಶ್ಚ ಪರಿತೈಃ ಕ್ರಮಾತ್ ॥ ೧೧೩ ॥

ರಜೋಭಿರ್ಮಂಡಲಂ ಕುರ್ಯಾದನ್ಯಥಾ ನ ಸಮಾಚರೇತ್ ।
ಚತುರ್ಹಸ್ತಂ ತ್ರಿಹಸ್ತಂ ಚ ದ್ವಿಹಸ್ತಂ ಹಸ್ತಮಾತ್ರಕಂ ॥ ೧೧೪ ॥

ಗಳಿಂದ ಐದು ರೇಖೆಗಳನ್ನು ಬರೆಮ ಮಂಡಲವನ್ನು ರಚಿಸಬೇಕು. ನೈಮಿತ್ತಿಕ ಪೂಜೆಗಳಲ್ಲಿ ಇದರಂತೆಯೂ ಇವಕ್ಕೆ ವ್ಯತ್ಯಾಸವಾಗಿಯೂ, ರಚಿಸಬಹುದು. ಆ ಮಂಡಲಕ್ಕೆ ಒಂದು ಹಸ್ತ ಪ್ರಮಾಣವುಳ್ಳ ನಾಲ್ಕು ದ್ವಾರಗಳು ಇರಬೇಕು. ಕಮಲ ದಂತೆ ದುಂಡಾಗಿರಬೇಕು. ನಾಲ್ಕು ಮೂಲೆಗಳಲ್ಲಿಯೂ ಮನೋಹರವಾದ ಶಂಖ ಗಳನ್ನು ಬರೆದು ಅಲಂಕರಿಸಬೇಕು. ಆ ಮಂಡಲದ ಎಂಟು ದಿಕ್ಕುಗಳಲ್ಲಿಯೂ, ದಿಕ್ಪಾಲಕರ ಆಯುಧ ಮತ್ತು ಪರಿಕರಣಗಳನ್ನು ಬರೆಯಬೇಕು. ಮಂಡಲದ ಮಧ್ಯ ದಲ್ಲಿ ಪದ್ಮವನ್ನು ಬರೆದು ಅದರ ಹೊರಗೆ (ಸುತ್ತಲೂ) ವೇಷ್ಟನೆಯನ್ನು ಮಾಡ ಬೇಕು. ಇದು ನೈಮಿತ್ತಿಕ ಮಂಡಲಕ್ರಮವಾಯಿತು. ಇನ್ನು ನಿತ್ಯಪೂಜೆಯಲ್ಲಿ ಮಾಡಬೇಕಾದ ರಂಗವಲ್ಲಿಯೇ ಮೊದಲಾದವುಡಿಗಳಿಂದ ಮಾಡತಕ್ಕ ಮಂಡಲವನ್ನು ಹೇಳುವೆನು, ಕೇಳು.

೧೧೩. ಬಿಳಿಯಪುಡಿ (ರಂಗವಲ್ಲಿ) ಹಳದೀಪುಡಿ (ಅರಶಿನ) ಕೆಂಪುಪುಡಿ (ಕುಂಕುಮ) ಕಪ್ಪುಪುಡಿ, ಹಸರುಪುಡಿ ಇವುಗಳಿಂದ ಕ್ರಮವಾಗಿ ರಚಿಸಬೇಕು. ಈ ಕ್ರಮವನ್ನು ಮೀರಿ ರಚಿಸಬಾರದು.

೧೧೪. ನಾಲ್ಕು ಹಸ್ತಪ್ರಮಾಣವುಳ್ಳದ್ದಾಗಲೀ ಮೂರು ಹಸ್ತ ಪ್ರಮಾಣ ವುಳ್ಳದ್ದಾಗಲೀ ಎರಡು ಹಸ್ತ ಪ್ರಮಾಣವುಳ್ಳದ್ದಾಗಲೀ ಅಥವಾ ಒಂದು ಹಸ್ತಪ್ರಮಾ ಣವುಳ್ಳದ್ದಾಗಲೀ, ಇರುವ ಮಂಡಲವನ್ನು ಸರ್ವತ್ರ ರಚಿಸಬೇಕು. ವಿಧಿವತ್ತಾಗಿ ಇವಕ್ಕಿಂತಲೂ ದೊಡ್ಡದಾಗಿಯೂ ರಚಿಸಬಹುದು.

ಸರ್ವತ್ರ ಮಂಡಲಂ ಕುರ್ಯಾದ್ಯಥೋಕ್ತಂ ವಾಧಿಕಂ ಪುನಃ ।
ರಾಜಸೂಯಾಶ್ವಮೇಧಾದೌ ಚತುರ್ಹಸ್ತಾಧಿಕಂ ಮತಂ ॥ ೧೧೫ ॥

ಕಲ್ಪಾನತಿಕ್ರಮಾದ್ಯತ್ರ ಯಥೋಕ್ತಂ ಯತ್ರ ಯತ್ರ ಚ ।
ದಿಕ್ಪಾಲಾಯುಧಪದ್ಮಾನಾಂ ಪೂರ್ವವಲ್ಲಿಖನಕ್ರಮಃ ॥ ೧೧೬ ॥

ಸಿತೈ ರಜೋಭಿಃ ಕರ್ತವ್ಯಂ ಮಧ್ಯೇ ಪದ್ಮಂ ಸುವರ್ತುಲಂ ।
ಕರ್ಣಿಕಾ ಪೀತವರ್ಣಾಸ್ಯ ಕೇಸರಾಗ್ರಂ ತಥಾರುಣಂ ॥ ೧೧೭ ॥

ರಕ್ತೈಃ ಪೀತೈಃ ಪೂರಯೇತ್ತು ಬಹಿಃ ಪದ್ಮಸ್ಯ ಸರ್ವತಃ ।
ವಜ್ರಂ ಶಕ್ತಿಂ ಲೋಹದಂಡಮಸಿಂ ಪಾಶಾಂಕುಶಂ ಗದಾಂ ॥ ೧೧೮ ॥

ಶೂಲಮಷ್ಟದಿಗೀಶಾನಾಮಾಯುಧಾನಿ ಕ್ರಮಾತ್ಪುನಃ ।
ಶಂಭುಗೌರೀ ತಥಾ ಬ್ರಹ್ಮಾ ರಾಮಃ ಕೃಷ್ಣಸ್ತಥೈವ ಚ ॥ ೧೧೯ ॥

---

೧೧೫. ರಾಜಸೂಯ, ಅಶ್ವಮೇಧ ಮುಂತಾದುವುಗಳಲ್ಲಿ ನಾಲ್ಕು ಹಸ್ತ ಕ್ಕಿಂತಲೂ ಹೆಚ್ಚಾದಪ್ರಮಾಣವುಳ್ಳ ಮಂಡಲವನ್ನು ರಚಿಸಬೇಕು. ಎಲೈ ರಾಜನೇ! ಕಲ್ಪವಿಧಿಯನ್ನು ಮೀರದೆ ಎಲ್ಲೆಲ್ಲಿ ಹೇಗೆ ಹೇಳಿರುವುದೋ ಅದರಂತೆ ಆಚರಿಸಬೇಕು.

೧೧೬. ದಿಕ್ಪಾಲರ ಆಯುಧ ಮತ್ತು ಪದ್ಮಗಳನ್ನು ಹಿಂದಿನಂತೆಯೇ ಬರೆಯ ಬೇಕು. ಬಿಳಿಯ ಪುಡಿ (ರಂಗವಲ್ಲಿ) ಯಿಂದ ಮಂಡಲದ ಮಧ್ಯದಲ್ಲಿ ದುಂಡನೆಯ ಪದ್ಮವನ್ನು ರಚಿಸಬೇಕು.

೧೧೭. ಆ ಪದ್ಮದ ಕರ್ಣಿಕೆಯನ್ನು ಹಳದಿಯಪುಡಿಯಿಂದ ರಚಿಸಬೇಕು. ಕೇಸರದ ಅಗ್ರಭಾಗವನ್ನು ಕೆಂಪುಪುಡಿಯಿಂದ ರಚಿಸಬೇಕು. ಕೆಂಪು ಮತ್ತು ಹಳದಿ ಪುಡಿಗಳಿಂದ ಪದ್ಮದ ಹೊರಭಾಗವನ್ನೆಲ್ಲಾ ತುಂಬಬೇಕು.

೧೧೮. ವಜ್ರಾಯುಧ, ಶಕ್ತ್ಯಾಯುಧ, ಲೋಹದಂಡ, ಕತ್ತಿ, ಪಾಶ, ಅಂಕುಶ, ಗಧೆ, ಶೂಲ, ಈ ಎಂಟು ಆಯುಧಗಳೂ, ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನರೆಂಬ ಅಷ್ಟದಿಕ್ಪಾಲಕರ ಆಯುಧಗಳು.

೧೧೯. ಶಂಕರ, ಗೌರೀದೇವಿ, ಬ್ರಹ್ಮದೇವ, ರಾಮ, ಕೃಷ್ಣ, ಈ ಐದು ದೇವತೆಗಳನ್ನು ಆ ಮಂಡಲದಲ್ಲಿ ಪೂಜಿಸಬೇಕು.

ಏತಾಸ್ತು ಸತತಂ ಪೂಜ್ಯಾಃ ಸಂಸ್ಥಿತಾಃ ಪಂಚದೇವತಾಃ ।
ನ ಕದಾಚಿದಧಃ ಕುರ್ಯಾಚ್ಛಂಭುಗೌರ್ಯೋರ್ವಿಯೋಜನಂ ॥ ೧೨೦ ॥

ವಿಯೋಗೇ ತು ಕೃತಾ ಪೂಜಾ ನಿಷ್ಫಲಾ ತಸ್ಯ ಜಾಯತೇ ।
ವಿಚ್ಛಿನ್ನಂ ಮೂರ್ಧ್ನಿ ಭೂತಂ ತು ಪೂಜಿತಂ ಶಕ್ತ ಮೇವ ವಾ ॥ ೧೨೧ ॥

ನ್ಯಾಸೇ ತು ಮಂಡಲಸ್ಯಾಸ್ಯ ರಜೋದೋಷಂ ವಿವರ್ಜಯೇತ್ ।
ಸರ್ವತ್ರ ಮಂಡಲಂ ಕಾರ್ಯಂ ವಾಸುದೇವಸ್ಯ ಪೂಜನೇ ॥ ೧೨೨ ॥

ಏವಮೇವ ನೃಪಶ್ರೇಷ್ಠ ನಿಷ್ಫಲಂ ಚ್ಯಾನ್ಯಥೇತರತ್ ।
ಬಲಭದ್ರಶ್ಚ ಕಾಮಶ್ಚ ಹ್ಯನಿರುದ್ಧಶ್ಚ ತದ್ಭವಃ ॥ ೧೨೩ ॥

ನಾರಾಯಣಸ್ತಥಾ ಬ್ರಹ್ಮಾ ವಿಷ್ಣುಃ ಷಷ್ಠಃ ಪ್ರಕೀರ್ತಿತಃ ।
ನರಸಿಂಹೋ ವರಾಹಶ್ಚ ಯೋಗಿನೋಽಷ್ಟೌ ಪ್ರಕೀರ್ತಿತಾಃ ॥ ೧೨೪ ॥

೧೨೦-೧೨೧. ಶಂಭುಗೌರಿಯರನ್ನು ಯಾವಾಗಲೂ ಬೇರೆ ಬೇರೆಯಾಗಿಯೂ ಕೊನೆಯಲ್ಲಿಯೂ ಪೂಜಿಸಬಾರದು. ಹಾಗೆ ಮಾಡಿದರೆ, ಮಾಡಿದ ಪೂಜೆಯು ನಿಷ್ಫಲವಾಗುವುದು. ಮತ್ತು ಪೂಜೆಯು ವಿಚ್ಛಿನ್ನವಾಗುವುದು. ಎಷ್ಟುಪೂಜಿಸಿದರೂ ವಿಘ್ನನಿವಾರಣೆಯಾಗುವುದಿಲ್ಲ. ಆದುದರಿಂದ ಶಂಕರಗೌರಿಯರನ್ನು ಒಟ್ಟಿಗೆ ಪೂಜಿಸ ಬೇಕು. ಪುಡಿಗಳಿಂದ ಒರಬಹುದಾದ ಮಂಡಲದೋಷವನ್ನು ಹೋಗಲಾಡಿಸಿ ಶುದ್ಧಮಾಡಬೇಕು.

೧೨೨. ಎಲೈ ರಾಜನೆ! ವಿಷ್ಣು ಪೂಜೆಯಲ್ಲೆಲ್ಲಾ ಹೀಗೆಯೇ ಮಂಡಲವನ್ನು ರಚಿಸಬೇಕು. ಇದಕ್ಕೆ ವಿರುದ್ಧನಾಗಿ ವರ್ತಿಸಿದರೆ ಮಾಡಿದ ಪೂಜೆಯು ನಿಷ್ಫಲ ವಾಗುವುದು.

೧೨೩-೧೨೪. ಬಲಭದ್ರ, ಕಾಮ,(ಪ್ರದ್ಯುಮ್ನ)ಅವನ ಪುತ್ರನಾದ ಅನಿರುದ್ಧ, ನಾರಾಯಣ, ಬ್ರಹ್ಮ, ವಿಷ್ಣು, ನರಸಿಂಹ, ವರಾಹ ಈ ಎಂಟುಜನಗಳು ವಿಷ್ಣುವಿನ ಯೋಗಿದೇವತೆಗಳು, (ಅಂಗದೇವತೆಗಳು)

ಪೂರ್ವಾದ್ಯಷ್ಟದಲೇಷ್ವೇತಾ ರೂಪತೋ ಮಂತ್ರತಃ ಪೃಥಕ್ ।
ಪೂಜಯೇತ್ಕರ್ಣಿಕಾಮಧ್ಯೇ ವಾಸುದೇವಂ ತು ನಾಯಕಂ ॥ ೧೨೫ ॥

ವಿಮಲಾ ನಾಯಿಕಾ ತಸ್ಯ ವಾಸುದೇವಸ್ಯ ಕೀರ್ತಿತಾ ।
ಬಲಭದ್ರಮುಖಾನಾಂ ತು ಯೋಗಿನೀಃ ಶೃಣು ಪಾರ್ಥಿವ ॥ ೧೨೬ ॥

ಆದೌ ಉತ್ಕರ್ಷಿಣೀ ಜ್ಞೇಯಾ ಜ್ಞಾನಾ ಪಶ್ಚಾತ್ಕ್ರಿಯಾ ಪರಾ ।
ಯೋಗಾ ಪ್ರಜ್ಞಾ ತಥೈಶಾನೀ ಅನುಗ್ರಾಹೀ ತಥಾಷ್ಟಮೀ ॥ ೧೨೭ ॥

ಸರ್ವಾಶ್ಚತುರ್ಭುಜಾಃ ಪ್ರೋಕ್ತಾಃ ಶಂಖಚಕ್ರಗದಾಧರಾಃ ।
ಯೋಗಿನ್ಯೋ ಬಲಭದ್ರಂ ತು ಕಾಮುಂ ವಿಧಿಮೃತೇ ತಥಾ ॥ ೧೨೮ ॥

ವಿಧಿರೂಪಂ ತು ಪೂರ್ವೋಕ್ತಂ ಹಲಂ ತು ಮುಸಲಂ ಬಲಃ ।
ಶಂಖಂ ಚಕ್ರಂ ಚ ಧತ್ತೇ ಯೋ ಗದಾಂ ಪಾರ್ಶ್ವಸ್ಥಿತಾಂ ಸದಾ ॥ ೧೨೯ ॥

---

೧೨೫. ಪೂರ್ವವೇ ಮೊದಲಾಗಿ ಮಂಡಲದ ಎಂಟು ದಳಗಳಲ್ಲಿ ಈ ಎಂಟು ಯೋಗಿಗಳನ್ನು ಬೇರೆಬೇರೆಯಾಗಿ ಅವರವರ ರೂಪದಿಂದಲೂ, ಮಂತ್ರದಿಂದಲೂ ಅರ್ಚಿಸಬೇಕು. ಮಂಡಲನಾಯಕನಾದ ವಾಸುದೇವನನ್ನು ಕರ್ಣಿಕೆಯ ಮಧ್ಯದಲ್ಲಿ ಪೂಜಿಸಬೇಕು.

೧೨೬. ವಾಸುದೇವನ ನಾಯಿಕೆಯು ವಿಮಲಾದೇವಿ ಎಂಬುವವಳು. ಬಲಭದ್ರ ಮುಂತಾದವರ ಯೋಗಿನೀದೇವತೆಯರನ್ನು ಹೇಳುವೆನು, ಕೇಳು.

೧೨೭. ಉತ್ಕರ್ಷಿಣೀ ಎಂಬುವವಳು ಮೊದಲನೆಯವಳು. ಜ್ಞೇಯಾ, ಜ್ಞಾನಾ, ಕ್ರಿಯಾ, ಯೋಗಾ, ಪ್ರಜ್ಞಾ, ಈಶಾನೀ, ಅನುಗ್ರಾಹೀ, ಎಂದು ಎಂಟುಜನ ಯೋಗಿನಿಯರು.

೧೨೮. ಈ ಯೋಗಿನಿಯರೆಲ್ಲಾ ನಾಲ್ಕು ಭುಜಗಳುಳ್ಳವರು. ಶಂಖ, ಚಕ್ರ, ಗದೆಗಳನ್ನು ಧರಿಸಿರುವರು. ಬ್ರಹ್ಮನರೂಪವನ್ನು ಹಿಂದೆಯೇ ಹೇಳಿರುವೆನು. ಆದುದರಿಂದ ಅವನನ್ನು ಬಿಟ್ಟು ಮಿಕ್ಕ ಬಲಭದ್ರ, ಕಾಮು, ಮೊದಲಾದವರ ರೂಪವನ್ನು ಹೇಳುವೆನು.

೧೨೯. ಬಲಭದ್ರನು ಹಲ, (ನೇಗಿಲು) ಮುಸಲ,(ಒನಕೆ) ಗಳನ್ನೂ, ಶಂಖ, ಚಕ್ರಗಳನ್ನೂ ಧರಿಸಿರುವನು. ಗದೆಯನ್ನು ಯಾವಾಗಲೂ ಹತ್ತಿರದಲ್ಲಿಯೇ ಇಟ್ಟುಕೊಂಡಿರುವನು.

ಕಾಮಸ್ತು ಪುಷ್ಪಕೋದಂಡಂ ಧತ್ತೇ ವಾಮೇನ ಪಾಣಿನಾ ।
ಗದಾಂ ಚಕ್ರಂ ಚ ಪುಷ್ಪಂ ಚ ಧತ್ತೇಽನ್ಯೈಃ ಪಾಣಿಭಿಃ ಪುನಃ ॥ ೧೩೦ ॥

ಪಾರ್ಶ್ವೇ ಪದ್ಮಂ ತಥಾ ಧತ್ತೇ ಸರ್ವಮನ್ಯತ್ತು ಪೂರ್ವವತ್ ।
ಶಂಖಂ ಚಕ್ರೋ ವರಾಹಸ್ಯ ದಕ್ಷಿಣೇ ಪರಿಕೀರ್ತಿತೌ ॥ ೧೩೮ ॥

ನೃಸಿಂಹಸ್ಯ ಪುನಶ್ಚಕ್ರಶಂಖೌ ದಕ್ಷಿಣವಾಮಯೋಃ ।
ಶಂಖಂ ಪದ್ಮಂ ತಥಾ ವಿಷ್ಣೋಃ ಪಾಣ್ಯೋರ್ದಕ್ಷಿಣಯೋಃ ಸ್ಥಿತಂ ॥ ೧೩೨ ॥

ಶಂಖೋ ಗದಾ ವಾಮತಶ್ಚ ನಾರಾಯಣಕರಸ್ಥಿತೌ ।
ದಕ್ಷಿಣಾಧೋ ಗದಾಂ ಧತ್ತೇ ಹ್ಯನಿರುದ್ಧೋ ನರೋತ್ತಮಃ ॥ ೧೩೩ ॥

ಸಿತರಕ್ತಸ್ತಥಾ ಪೀತೋ ಭಿನ್ನಾಂಜನನಿಭಸ್ತಥಾ ।
ನೀಲೋತ್ಪಲದಲಶ್ಯಾಮಃ ತಥಾ ರಕ್ತಘನಪ್ರಭಃ ॥ ೧೩೪ ॥

ಭ್ರಮರಶ್ಯಾಮಲಃ ಪಿಂಗಃ ಸ್ವರ್ಣಗೌರಃ ಕ್ರಮಾದಿಮೇ ।
ವರ್ಣತೋ ಯೋಗಿನಃ ಪ್ರೋಕ್ತಾ ವಾಸುದೇವಸ್ಯ ಪಾರ್ಥಿವ ॥ ೧೩೫ ॥

---

೧೩೦. ಮನ್ಮಥನು ಪುಷ್ಪಧನುಸ್ಸನ್ನು ಎಡಗೈಯಲ್ಲಿ ಹಿಡಿದು ಮಿಕ್ಕಕೈಗಳಿಂದ ಗದೆ, ಚಕ್ರ, ಪುಷ್ಪಬಾಣ ಇವುಗಳನ್ನು ಧರಿಸಿರುವನು. ಒಂದುಭಾಗದಲ್ಲಿ ಕಮಲವನ್ನು ಇರಿಸಿಕೊಂಡಿರುವನು. ಮಿಕ್ಕೆದ್ದೆಲ್ಲವೂ ಹಿಂದಿನಂತೆಯೇ.

೧೩೮. ವರಾಹಮೂರ್ತಿಯು ಬಲಗೈಗಳಲ್ಲಿ ಶಂಖಚಕ್ರಗಳನ್ನು ಧರಿಸಿರುವನು. ನೃಸಿಂಹನ ಎಡಬಲಗೈಗಳಲ್ಲಿ ಕ್ರಮವಾಗಿ ಶಂಖ ಮತ್ತು ಚಕ್ರಗಳು ಇರುವುವು.

೧೩೨-೧೩೩. ಶಂಖ ಮತ್ತು ಪದ್ಮಗಳನ್ನು ವಿಷ್ಣುವು ಬಲಗೈಗಳಲ್ಲಿ ಧರಿಸಿರುವನು. ಶಂಖ ಮತ್ತು ಗದೆಗಳು ನಾರಾಯಣನ ಎಡಗೈಗಳಲ್ಲಿರುವುವು. ಬಲಗಡೆಯ ಕೆಳಗೈನಲ್ಲಿ ಗದೆಯನ್ನು ನರೋತ್ತಮನಾದ ಅನಿರುದ್ಧನು ಧರಿಸಿರುವನು.

೧೩೪-೧೩೫. ಎಲೈ ರಾಜನೇ! ವಾಸುದೇವನ ಈ ಯೋಗಿದೇವತೆಗಳು ಕ್ರಮವಾಗಿ ಶ್ವೇತರಕ್ತ ಮಿಸ್ರಿತವಾದ (ಗುಲಾಬಿ) ಬಣ್ಣ, ಹಳದಿ, ಕಾಡಿಗೆ ಖಂಡದಂತೆ ಕಪ್ಪು, ಕನ್ನೈದಿಲೆಯಂತೆ ನೀಲ, ತುಂಬುಕೆಂಪು, ದುಂಬಿಯಂತೆ ಶ್ಯಾಮಲಕಪ್ಪು,

ಯಾದೃಗ್ವರ್ಣಂ ಚ ಧ್ಯಾನಂ ಚ ಯಸ್ಯ ಯಸ್ಯ ಚ ಯೋಗಿನಃ ।
ತಾದೃಶೀ ರ್ಯೋಗಿನೀಸ್ತಸ್ಯ ಚಿಂತಯೇತ್ತತ್ಸಮೀಪಗಾಃ ॥ ೧೩೬ ॥

ಆಧಾರಶಕ್ತಿಪ್ರಮುಖಾಃ ಸರ್ವಾ ಆಸನದೇವತಾಃ ।
ಗ್ರಹಾಶ್ಚ ಸರ್ವೇ ದಿಕ್ಪಾಲಾ ಧ್ಯಾನತೋ ಮಂತ್ರತಸ್ತಥಾ ॥ ೧೩೭ ॥

ಪೂಜನೀಯಾ ಯಥೋದ್ದೇಶಂ ಮಂಡಲಸ್ಯ ಕ್ರಮಾನ್ನೃಪ ।
ದೇವಸ್ಯ ಚಿಂತನಂ ಯದ್ಯಚ್ಛರೀರೇ ಕಮಲಾದಿಕಂ ॥ ೧೩೮ ॥

ಧೃತಾಸ್ತ್ರಂ ವಜ್ರಶಕ್ತ್ಯಾದಿಗರುಡಾದೀಂಶ್ಚ ಪೂಜಯೇತ್ ।
ವರ್ಣಮಾಲಾಂ ಶಂಭುಮುತಾಮಾಸಾದ್ಯ ಕ್ರಮಯೋಗತಃ ॥ ೧೩೯ ॥

ಪಿಂಗಲ, ಮತ್ತು ಚಿನ್ನದಂತೆ ಹಳದಿ ಈ ವಿಧವಾದ ಶರೀರಕಾಂತಿಗಳಿಂದ ಶೋಭಿಸುತ್ತಿರುವರು.

೧೩೬. ಯಾವ ಯಾವ ಯೋಗಿದೇವತೆಗಳಿಗೆ ಎಂತೆಂತಹ ರೂಪ ಮತ್ತು ಧ್ಯಾನಗಳನ್ನು ಹೇಳಿರುವುದೋ ಅದರಂತೆಯೇ ಆ ಯೋಗಿಗಳ ಸಮೀಪದಲ್ಲಿ ಅವರವರ ಯೋಗಿನೀದೇವತೆಗಳನ್ನು ಚಿಂತಿಸಬೇಕು.

೧೩೭. ಆಧಾರಶಕ್ತಿಯೇ ಮೊದಲಾದ ಪೀಠದೇವತೆಗಳನ್ನೂ, ಗ್ರಹಗಳು ಮತ್ತು ದಿಕ್ಪಾಲಕರನ್ನೂ ಸಹ ಮಂಡಲದ ಕ್ರಮದಂತೆ ನಿಯಮಿಸಿದ ಆಯಾಯ ಸ್ಥಾನಗಳಲ್ಲಿ ಅವರವರ ಧ್ಯಾನ ಮತ್ತು ಮಂತ್ರಗಳಿಂದ ಪೂಜಿಸಬೇಕು.

೧೩೮. ಕಮಲ, ವಜ್ರಾಯುಧ, ಶಕ್ತ್ಯಾಯುಧ ಮೊದಲಾದ ಆಯುಧಗಳನ್ನು ವಿಷ್ಣುವು ಯಾವಯಾವ ರೂಪ (ಶರೀರ) ದಲ್ಲಿ ಹೇಗೆ ಹೇಗೆ ಧರಿಸಿ ಪ್ರಕಾಶಿಸುವನೋ ಹಾಗೆ ಹಾಗೆಯೇ ಧ್ಯಾನಿಸಿ ಪೂಜಾದಿಗಳನ್ನು ಮಾಡಬೇಕು. ಅವನ ವಾಹನವಾದ ಗರುಡನೇ ಮೊದಲಾದ ಪರಿವಾರದೇವತೆಗಳನ್ನೂ ಅದರಂತೆಯೇ ಪೂಜಿಸಬೇಕು.

೧೩೯. ಶಂಕರನು ಉಪದೇಶಿಸಿರುವಂತೆ ಅಕಾರಾದಿವರ್ಣಮಾಲೆಯಲ್ಲಿ ಕ್ರಮವಾಗಿ ಒಂದನೆಯದು, ಎರಡನೆಯದು ಮೊದಲಾದ ಅಕ್ಷರಗಳು ಕ್ರಮವಾಗಿ ಗಣೆ ಮೊದಲಾದವುಗಳ ಬೀಜಮಂತ್ರಗಳು.

ಆದ್ಯದ್ವಿತೀಯಕ್ರಮತೋ ಗದಾದೀನಾಂ ತು ಮಂತ್ರಕಂ ।
ಪಂಚರಾತ್ರೋದಿತೇ ಭಾಗೇ ನಾರದೇನ ಯಥೋದಿತಾಃ ॥ ೧೪೦ ॥

ಮಂತ್ರಾಶ್ಚಕ್ರಗದಾದೀನಾಂ ಗ್ರಾಹ್ಯಾಃ ಸರ್ವತ್ರ ಪೂಜನೇ ।
ಗರುತ್ಮಾನ್ ಸೂರ್ಯಸಂಕಾಶೋ ಗದಾ ಕೃಷ್ಣಾಯಸೀ ಪುನಃ ॥ ೧೪೧ ॥

ಸರಸ್ವತೀ ಶುಕ್ಲವರ್ಣಾ ಲಕ್ಷ್ಮೀರ್ಹೇಮಪ್ರಭಾ ಸದಾ ।
ಮಧ್ಯಾಹ್ನಸೂರ್ಯಪ್ರತಿಮಂ ಚಕ್ರಂ ತು ಪರಿಕೀರ್ತಿತಂ ॥ ೧೪೨ ॥

ಸಂಪೂರ್ಣಚಂದ್ರಪ್ರಭವಳಃ ಶಂಖಸ್ತು ಪರಿಕೀರ್ತಿತಃ ।
ಕೌಸ್ತುಭೋ ಹ್ಯರುಣಃ ಪ್ರೋಕ್ತಃ ಶ್ರೀವತ್ಸೋ ಹ್ಯರುಣದ್ಯುತಿಃ ॥ ೧೪೩ ॥

ಆರಕ್ತಃ ಕೌಸ್ತುಭೋ ಜ್ಞೇಯೋ ಮಾಲಾ ಚಿತ್ರಾ ಪ್ರಕೀರ್ತಿತಾ ।
ವಿದ್ಯುತ್ಪ್ರಭಾಃ ಸರ್ವಬಾಣಾಃ ಶಕ್ರಚಾಪಪ್ರಭಂ ಧನುಃ ॥ ೧೪೪ ॥

---

೧೪೦. ಪಾಂಚರಾತ್ರಾಗಮದಲ್ಲಿ ನಾರದಮುನಿಯು ಹೇಳಿರುವ ಕ್ರಮದಂತೆ ಗದೆ ಮೊದಲಾದವುಗಳ ಮಂತ್ರಗಳನ್ನು ವಿಷ್ಣುವಿನ ಪೂಜೆಯಲ್ಲಿ ಯಾವಾಗಲೂ ಉಪಯೋಗಿಸಬೇಕು.

೧೪೧. ಗರುಡನು ಸೂರ್ಯನಂತೆ ತೇಜಸ್ವಿಯಾಗಿರುವನು. ಉಕ್ಕಿನ ಗದೆಯನ್ನು ಕೈಯಲ್ಲಿ ಹಿಡಿದಿರುವನು. ಸರಸ್ವತಿಯು ಬಿಳಿಯಬಣ್ಣದವಳು. ಲಕ್ಷ್ಮಿಯು ಚಿನ್ನದಂತೆ ಹಳದಿ ಕಾಂತಿಯುಳ್ಳವಳು.

೧೪೨-೧೪೫. ಚಕ್ರವು ಮಧ್ಯಾನ್ಹದ ಸೂರ್ಯನಂತೆ ತುಂಬಾ ತೇಜಸ್ವಿಯಾಗಿರುವುದು. ಶಂಖವು ಪೂರ್ಣಚಂದ್ರನಂತೆ ಬೆಳ್ಳಗಿರುವುದು. ಕೌಸ್ತುಭಮಣಿ ಮತ್ತು ಶ್ರೀವತ್ಸಚಿನ್ಹೆ ಇವುಗಳು ಅರುಣ (ಕೆಂಪು) ವರ್ಣವಾಗಿರುವುದು. ಅದರಲ್ಲಿಯೂ ಕೌಸ್ತುಭವು ನಸುಗೆಂಪಾಗಿರುವುದು. ವನಮಾಲೆಯು ವಿಚಿತ್ರವಾಗಿರುವುದು.(ನಾನಾವರ್ಣವಾಗಿರುವುದು) ಬಾಣಗಳೆಲ್ಲವೂ ಮಿಂಚಿನಕಾಂತಿಯುಳ್ಳವುಗಳು. ಧನುಸ್ಸು ಇಂದ್ರನ ಬಿಲ್ಲಿನಂತೆ ಇರುವುದು. ಆ ವಾಸುದೇವನ ವಸ್ತ್ರವು ಚಿನ್ನದ ಝರಿಯಿಂದ ಪ್ರಕಾಶವಾಗಿರುವುದು. ಕಿವಿಯಲ್ಲಿರುವ ಕುಂಡಲಗಳೆರಡು ಬಾಲಸೂರ್ಯನಂತೆ

ಸ್ವರ್ಣಚೂರ್ಣಪ್ರಕಾಶಂ ತು ವಸ್ತ್ರಮುಸ್ಯ ಪ್ರಕೀರ್ತಿತಂ ।
ಬಾಲಸೂರ್ಯಪ್ರತೀಕಾಶೇ ಕುಂಡಲೇ ದ್ವೇ ಶ್ರವೋಗತೇ ॥ ೧೪೫ ॥

ಸೂರ್ಯಸ್ಯ ಸದೃಶಂ ಶೀರ್ಷೇ ಕೀರೀಟಂ ಪರಿಕೀರ್ತಿತಂ ।
ಶೃಣು ನ್ಯಾಸಂ ತತೋ ಭೂಪ ಯೈರ್ನ್ಯಾಸೈರ್ವಿಷ್ಣುರೂಪಧೃಕ್ ॥ ೧೪೬ ॥

ಸಾಧಕೋ ಹಿ ಭವೇನ್ನಿತ್ಯಂ ಸ್ವರ್ಗಮೋಕ್ಷಪ್ರದಾಯಕಂ ।
ನ್ಯಾಸಂ ತು ಪ್ರಥಮಂ ಕುರ್ಯಾನ್ಮಂತ್ರವಿದ್ದ್ವಾದಶಾಕ್ಷರೈಃ ॥ ೧೪೭ ॥

ವಾಸುದೇವೇನ ಬೀಜೇನ ಬೀಜಂ ಚೈವಾಥ ಯೋಗಿನಾಂ ।
ತತೋ ನ್ಯಸೇನ್ಮಹಾಮಂತ್ರೇ ತತಶ್ಚಾಷ್ಟಾದಶಾಕ್ಷರೈಃ ॥ ೧೪೮ ॥

ತತಸ್ತು ಹೃದಯಾದೀನಾಂ ಷಡ್ಭಿರ್ಮಂತ್ರೈರ್ದ್ವಿಧಾ ಪುನಃ ।
ಏವಂ ಚತುರ್ಭಿರ್ನ್ಯಾಸೈಸ್ತು ಪೂಜಾಮೇಕಾಂ ಸಮಾಚರೇತ್ ॥ ೧೪೯ ॥

ಝಗಿರ್ಝಗಿಸುತ್ತಿರುವುವು. ಶಿರಸ್ಸಿನಲ್ಲಿರುವ ಕಿರೀಟವು ಮಧ್ಯಾನ್ಹದ ಸೂರ್ಯನಂತೆ ಅತ್ಯುಜ್ವಲವಾಗಿರುವುದು.

೧೪೬. ಎಲೈ ರಾಜನೇ! ಇನ್ನು ವಿಷ್ಣುವಿನ ನ್ಯಾಸವನ್ನು ಹೇಳುವೆನು ಕೇಳು. ಈ ನ್ಯಾಸವು ಸ್ವರ್ಗಮೋಕ್ಷಗಳನ್ನು ಕೊಡುವುದು. ಅಲ್ಲದೆ, ಆ ನ್ಯಾಸಗಳನ್ನು ಅನುಷ್ಠಾನಮಾಡುವ ಸಾಧಕನು ವಿಷ್ಣುರೂಪವನ್ನೇ ಹೊಂದುವನು. ಅಂದರೆ ಸಾರೂಪ್ಯವೆಂಬ ಮುಕ್ತಿಯನ್ನು ಪಡೆವನು.

೧೪೭. ಮೊದಲು ಹನ್ನೆರಡು ಅಕ್ಷರಗಳುಳ್ಳ ವಾಸುದೇವನ ಬೀಜಮಂತ್ರಗಳಿಂದ ಅಂಗುಷ್ಠವೇ ಮೊದಲಾದ ನ್ಯಾಸವನ್ನು ಮಾಡಬೇಕು. ಬಳಿಕ ಯೋಗಿದೇವತೆಗಳ ಬೀಜಮಂತ್ರಗಳಿಂದ ನ್ಯಾಸವನ್ನು ಮಾಡಬೇಕು.

೧೪೮. ಆಮೇಲೆ ಹದಿನೆಂಟು ಅಕ್ಷರಗಳುಳ್ಳ ಮಹಾಮಂತ್ರದಿಂದ ನ್ಯಾಸವನ್ನು ಮಾಡಬೇಕು. ಅನಂತರ ಹೃದಯವೇ ಮೊದಲಾದವುಗಳ ಆರು ಮಂತ್ರಗಳಿಂದ ಎರಡುಬಾರಿ ಹೃದಯಾದಿ ಅಂಗನ್ಯಾಸಗಳನ್ನು ಮಾಡಬೇಕು-

೧೪೯. ಹೀಗೆ ನಾಲ್ಕು ನ್ಯಾಸಗಳನ್ನು ಪ್ರತಿಯೊಂದು ಪೂಜೆಯಲ್ಲಿಯೂ ಮಾಡಬೇಕು. ಪ್ರಾರಂಭದಲ್ಲಿ ಮೊದಲನೆಯ ಬೀಜಾಕ್ಷರದಿಂದ ಬಲಗೈಯಿನ ಅಂಗುಷ್ಠದಲ್ಲಿ ನ್ಯಾಸವನ್ನು ಮಾಡಬೇಕು.

ಪ್ರಥಮಂ ದಕ್ಷಿಣಾಂಗುಷ್ಠೇ ನ್ಯಸೇದಾದ್ಯಾಕ್ಷರಂ ಬುಧಃ ।
ದ್ವಾದಶಾಕ್ಷರಮಂತ್ರಸ್ಯ ಶೇಷಬೀಜಾನಿ ತು ಕ್ರಮಾತ್ ॥ ೧೫೦ ॥

ತರ್ಜನ್ಯಾದೌ ದಕ್ಷಿಣಸ್ಯ ವಾಮಾಂಗುಷ್ಠಾಂತಮೇವ ಚ ।
ಶೇಷಾಕ್ಷರದ್ವಯಂ ಪಶ್ಚಾನ್ನ್ಯಸೇತ್ಪಾಣಿತಲದ್ವಯೇ ॥ ೧೫೧ ॥

ಹೃದಿ ಶೀರ್ಷೇ ಶಿಲಾಯಾಂ ಚ ವರ್ಮ ತಾದೃಕ್ಪಿಚಂಡಯೋಃ ।
ಪೃಷ್ಠೇ ತು ಭುಜಯೋಃ ಪಾಣ್ಯೋರ್ಜಂಘುಯೋಃ ಪಾದಯೋಃ ಕ್ರಮಾತ್

ದ್ವಾದಶಾಕ್ಷರಮಂತ್ರಸ್ಯ ಬೀಜಾನಿ ಚ ತತೋ ನ್ಯಸೇತ್ ।
ಅಂಗುಷ್ಠಯೋಸ್ತು ಪ್ರಥಮಂ ವಾಸುದೇವಸ್ಯ ತತ್ತ್ವಕಂ ॥ ೧೫೩ ॥

ತರ್ಜನ್ಯಾದೌ ಯೋಗಿನೀನಾಂ ಬೀಜಾನ್ಯಷ್ಟೌ ದ್ವಯೋರ್ನ್ಯಸೇತ್ ।
ಶಿರೋದೃಗಾಸ್ಯಕಂಠೋಷ್ಠನಾಭಿಗುಹ್ಯೇಷು ಜಾನುಸೋಃ ॥ ೧೫೪ ॥

---

೧೫೦. ದ್ವಾದಶಾಕ್ಷರೀಮಂತ್ರದ ಮಿಕ್ಕಬೀಜಾಕ್ಷರಗಳಿಂದ ಬಲಗೈಯಿನತರ್ಜನೀ ಮೊದಲುಗೊಂಡು ಎಡಗೈಯಿನ ಅಂಗುಷ್ಠದವರೆಗೂ ನ್ಯಾಸವನ್ನು ಮಾಡಬೇಕು.

೧೫೧. ಮತ್ತು ಮಿಕ್ಕ ಬೀಜಾಕ್ಷರಗಳೆರಡರಿಂದ ಅಂಗೈಗಳೆರಡರ ನ್ಯಾಸವನ್ನು ಮಾಡಬೇಕು. ಮತ್ತು ಅದೇ ಬಿಜಾಕ್ಷರಗಳಿಂದ ಹೃದಯ, ಶಿರಸ್ಸು, ಶಿಖೆ, (ಜುಟ್ಟು) ಹೊಟ್ಟೆ ಇವುಗಳಲ್ಲಿ ನ್ಯಾಸವನ್ನು ಮಾಡಬೇಕು.

೧೫೨. ಬೆನ್ನು, ಭುಜಗಳು, ಕೈಗಳು, ಜಂಘೆ, (ತೊಡೆ) ಗಳು, ಕಾಲುಗಳು ಇವುಗಳ ನ್ಯಾಸವನ್ನು ಅದೇ ಬೀಜಾಕ್ಷರ ಮಂತ್ರಗಳಿಂದ ಮಾಡಬೇಕು. ಬಳಿಕ ದ್ವಾವಶಾಕ್ಷರ ಮಂತ್ರದ ಬೀಜಾಕ್ಷರಗಳಿಂದ ನ್ಯಾಸಗಳನ್ನು ಮಾಡಬೇಕು.

೧೫೩. ವಾಸುದೇವ ತತ್ವವನ್ನು ಅಂಗುಷ್ಠಗಳೆರಡರಲ್ಲಿ ವಿನ್ಯಾಸಮಾಡಬೇಕು. ಬಳಿಕ ಯೋಗಿನಿಯರ ಎಂಟು ಬೀಜಾಕ್ಷರಗಳಿಂದ ಎರಡು ಕೈಗಳು ತರ್ಜನೀ ಮೊದಲಾದ ಬೆರಳುಗಳಲ್ಲಿ ನ್ಯಾಸಗಳನ್ನು ಮಾಡಬೇಕು.

೧೫೪. ಶಿರಸ್ಸು, ಕಣ್ಣುಗಳು, ಮುಖ, ಕತ್ತು, ತುಟಿ, ಹೊಕ್ಕಳು, ರಹಸ್ಯ ಸ್ಥಾನ, ಮೊಣಕಾಲುಗಳು, ಕಾಲುಗಳು ಇವುಗಳಲ್ಲಿ ವಾಸುದೇವನ ಯೋಗಿದೇವತೆಯರ ಬೀಜಾಕ್ಷರಗಳಿಂದ ವಿನ್ಯಾಸಮಾಡಬೇಕು.

ಪಾದಯೋರ್ವಾಸುದೇವಸ್ಯ ಯೋಗಿಬೀಜಾನಿ ವಿನ್ಯಸೇತ್ ।
ಮುಂತ್ರಾಣಿ ಹೃದಯಾದೀನಾಂ ಯಾನ್ಯುಕ್ತಾನಿ ಪುರಾ ನೃಪ ॥ ೧೫೫ ॥

ತಾನಿ ನ್ಯಸ್ಯಾಂಗುಷ್ಠಮೂಲೇ ಅಂಗುಲೀ ಚ ದ್ವಯೇ ದ್ವಯೇ ।
ವಾಮದಕ್ಷಿಣಪಾರ್ಶ್ವೇಷು ಶೇಷಂ ತು ತಲಯೋರ್ನ್ಯಸೇತ್ ॥ ೧೫೬ ॥

ಹೃದಯಾದ್ಯಸ್ತ್ರಪರ್ಯಂತಂ ಪುನಸ್ತಾನಿ ಕ್ರಮಾನ್ನ್ಯಸೇತ್ ।
ಅಷ್ಟಾದಶಾಕ್ಷರಸ್ಯಾದಿನವವರ್ಣಾನ್ನ್ಯಸೇದ್ಬುಧಃ ॥ ೧೫೭ ॥

ಶಿರೋನೇತ್ರಾದಿಪೂರ್ವೋಕ್ತೇ ನವಬೀಜಸ್ಯ ಗೋಚರೇ ।
ಶೇಷಾ ವರ್ಣಾಸ್ತಸಂಕೀರ್ಣಪಾರ್ಶ್ವಬಸ್ತೀಷು ಶೇಫಸಿ ॥ ೧೫೮ ॥

ಕಟ್ಯೋರೂರ್ವೋರ್ಜಂಘಯೋಶ್ಚ ನ್ಯಸೇತ್ಪಾದಾಂಗುಲೀಷು ಚ ।
ಯಸ್ಯ ಮುಂತ್ರಸ್ಯ ಯಾ ಪೂಜಾ ತಂತ್ರೇಷ್ವಸ್ತು ಯತ್ರ ಚೋದಿತಾ ॥ ೧೫೯ ॥

೧೫೫-೧೫೬. ಎಲೈ ರಾಜನೇ! ಹಿಂದೆ ಹೇಳಿರುವ ಹೃದಯಾದಿಮಂತ್ರಗಳಿಂದ ಅಂಗುಷ್ಠಮೂಲ, ಎಡಬಲಗಳ ಬೆರಳುಗಳೆರಡೆರಡು, ಮತ್ತು ಅಂಗೈಗಳೆರಡು ಇವುಗಳಲ್ಲಿ ನ್ಯಾಸವನ್ನು ಮಾಡಬೇಕು. ಎಂದರೆ ಅಂಗುಷ್ಠಾಭ್ಯಾಂ ನಮಃ ಎಂದು ಪ್ರಾರಂಭಿಸಿ ಕರತಲಕರಪೃಷ್ಠಾಭ್ಯಾಂ ನಮಃ ಎಂದು ಕೊನೆಯವರೆಗೂ ಕರನ್ಯಾಸವನ್ನು ಮಾಡಬೇಕು.

೧೫೭. ತಿರುಗಿ ಅದೇ ಮಂತ್ರಗಳಿಂದ ಹೃದಯವೇ ಮೊದಲುಗೊಂಡು ಅಸ್ತ್ರಾಯಫಟ್ ಎನ್ನುವವರೆಗೂ ನ್ಯಾಸಗಳನ್ನು ಮಾಡಬೇಕು. ಮತ್ತು ಅಷ್ಟಾದಶಾಕ್ಷರೀ ಮಂತ್ರದ ಮೊದಲನೆಯ ವರ್ಣ ಮೊದಲುಗೊಂಡು ಒಂಭತ್ತು ಅಕ್ಷರಗಳಿಂದ ಹಿಂದೆಹೇಳಿದ ಶಿರಸ್ಸು ಮತ್ತು ಕಣ್ಣು ಮುಂತಾದವುಗಳ ಅಂಗನ್ಯಾಸವನ್ನು ಮಾಡಬೇಕು.

೧೫೮. ಅಷ್ಟಾದಶಾಕ್ಷರಿಯಲ್ಲಿನ ಮಿಕ್ಕ ಒಂಭತ್ತು ಬೀಜಾಕ್ಷರಗಳಿಂದ ಶರೀರವ ಎರಡು ಪಕ್ಕಗಳು, ಕಿಬ್ಬುಹೊಟ್ಟೆ, ಜನನೇಂದ್ರಿಯ, ಸೊಂಟ, ತೊಡೆ, ಮೊಣಕಾಲು, ಕಾಲು, ಬೆರಳುಗಳು ಇವುಗಳಲ್ಲಿ ನ್ಯಾಸವನ್ನು ಮಾಡಬೇಕು.

೧೫೯. ಆಯಾಯ ತಂತ್ರಗಳಲ್ಲಿ ಯಾವ ಯಾವ ಮಂತ್ರಗಳಿಂದ ಎಲ್ಲಿ ಯಾವ ಪೂಜೆಯನ್ನು ಹೇಳಿರುವುದೋ ಆ ಸ್ಥಾನಗಳಲ್ಲಿ ಸಾಧಕನು ಆಯಾಯ ಮಂತ್ರಗಳ ನ್ಯಾಸವನ್ನು ಮಾಡಬೇಕು.

ತಸ್ಯ ತಂತ್ರಸ್ಯ ತತ್ತ್ವೇವ ನ್ಯಾಸಂ ಮುಂತ್ರೀ ಸಮಾಚರೇತ್ ।
ಅಥ ಚೈಕತ್ರ ಸರ್ವೇಷಾಂ ನ್ಯಾಸಂ ಕುರ್ಯಾದ್ವಿಚಕ್ಷಣಃ ॥ ೧೬೦ ॥

ಚತುರ್ವಿಧೈಃ ಕೃತೈರ್ನ್ಯಾಸೈಃ ಪೂತಾತ್ಮಾ ಧೂತಕಲ್ಮಷಃ ।
ಸಾಕ್ಷಾದ್ವಿಷ್ಣುರ್ಭವೇನ್ಮಂತ್ರೀ ಸಮ್ಯಕ್ಪೂಜಾಫಲಂ ಲಭೇತ್ ॥ ೧೬೧ ॥

ವಿನಾಪಿ ಪೂಜನಂ ಯಸ್ತು ನ್ಯಾಸಂ ಕುರ್ಯಾಚ್ಚತುರ್ವಿಧಂ ।
ಸ ಧೀರೋ ವಿಷ್ಣುಸಾಯುಜ್ಯಮಾಪ್ನೋತಿ ಪರಮಂ ಪದಂ ॥ ೧೬೨ ॥

ಯೋಗಪೀಠಂ ತತೋ ಧ್ಯಾತ್ವಾ ಗರುಡಂ ಶಂಖಚಕ್ರಕೌ ।
ಗದಾಂ ಲಕ್ಷ್ಮೀಂ ಚಕ್ರಪದ್ಮೇ ಕ್ರಮಾದೇತ್ತೇಷು ವಿನ್ಯಸೇತ್ ॥ ೧೬೩ ॥

ಪೂರ್ವದಕ್ಷಿಣಕೌಬೇರಪಶ್ಚಾತ್ಕೋಣೇಷು ವೈ ಕ್ರಮಾತ್ ।
ದಕ್ಷಿಣೇ ಚೋತ್ತರೇ ವಾಪಿ ವಿನ್ಯಸೇನ್ಮಂತ್ರವಿದ್ಬುಧಃ ॥ ೧೬೪ ॥

೧೬೦-೧೬೧. ಅಥವಾ ಒಂದೇಪ್ರಧಾನವಾದ ಸ್ಥಾನದಲ್ಲಿ ಎಲ್ಲಾ ನ್ಯಾಸಗಳನ್ನೂ ಮಾಡಬಹುದು. ಹೀಗೆ ನಾಲ್ಕುವಿಧವಾದ ನ್ಯಾಸಗಳನ್ನು ಮಾಡಿದವನು ಪಾಪರಹಿತನೂ, ಪವಿತ್ರನೂ ಆಗಿ ಸಾಕ್ಷಾದ್ವಿಷ್ಣುವೇ ಆಗುವನು. ಪೂಜೆಗೆ ಸರಿಯಾದ ಫಲವನ್ನು ಪಡೆಯುವನು.

೧೬೨. ಪೂಜೆಯನ್ನು ಮಾಡದೆ ನಾಲ್ಕುವಿಧವಾದ ನ್ಯಾಸಗಳನ್ನು ಮಾತ್ರ ಮಾಡಿದರೂ ಸಹ, ಅಂತಹ ಉಪಾಸಕನು ಶ್ರೇಷ್ಠಸ್ಥಾನವಾದ ವಿಷ್ಣುಲೋಕವನ್ನು ಪಡೆಯುವನು.

೧೬೩. ಬಳಿಕ ಯೋಗಪೀಠವನ್ನು ಧ್ಯಾನಮಾಡಿ ಗರುಡ, ಶಂಖ, ಚಕ್ರಗಳು, ಗದೆ, ಲಕ್ಷ್ಮೀ, ಚಕ್ರಮತ್ತು ಪದ್ಮಗಳು ಇವುಗಳಲ್ಲಿ ಕ್ರಮವಾಗಿ ವಿನ್ಯಾಸಮಾಡಬೇಕು.

೧೬೪. ಆಮೇಲೆ ಪೂರ್ವ, ದಕ್ಷಿಣ, ಉತ್ತರ, ಆಗ್ನೇಯ, ನೈರುತ್ಯ, ವಾಯವ್ಯ, ದಕ್ಷಿಣ, ಉತ್ತರ, ಈ ದಿಕ್ಕುಗಳಲ್ಲಿಯೂ, ಕ್ರಮವಾಗಿ ಮಂತ್ರವಿನ್ಯಾಸವನ್ನು ಮಾಡಬೇಕು.

ವನಮಾಲಾಂ ಪದ್ಮಮಧ್ಯೇ ಶ್ರೀವತ್ಸಂ ಕೌಸ್ತುಭಂ ಮಣಿಂ ।
ವಿನ್ಯಸ್ಯ ದಕ್ಷಿಣೇ ತಸ್ಯ ನ್ಯಸೇಚ್ಛಾರ್ಙ್ಗಂ ಶರಾಸನಂ ॥ ೧೬೫ ॥

ತೂಣೀರಯುಗಲಂ ವಾಮೇ ಖಡ್ಗಂ ದಕ್ಷಿಣತೋ ನ್ಯಸೇತ್ ।
ವಾಮೇ ಚರ್ಮ ನಿಧಾಯಾಶು ತತ್ರ ಕುರ್ಯಾತ್ಸರಸ್ವತೀಂ ॥ ೧೬೬ ॥

ಪೂಜಯಿತ್ವಾ ಚ ಸರ್ವಾಣಿ ತತೋ ಮುದ್ರಾಂ ಪ್ರದರ್ಶಯೇತ್ ।
ಮುದ್ರಾಃ ಪುರಾದ್ಯಾ ಯಾಃ ಪ್ರೋಕ್ತಾ ವಿಷ್ಣೋರ್ಯೋಗಿನಾಂ ॥

ಗ್ರಹಾಣಾಂ ದಿಕ್ಪತೀನಾಂ ಚ ಮುದ್ರಾಸ್ತಾ ದರ್ಶಯೇತ್ಪೃಥಕ್ ।
ಶೇಷಮುಂತ್ರಾಃ ಪುರಾ ಪ್ರೋಕ್ತಾ ಆಚ್ಛಿದ್ರಸ್ಯಾವಧಾರಣೇ ॥ ೧೬೮ ॥

ತನ್ಮಂತ್ರಾನ್ ಸಂಪಠಿತ್ವೈವ ಸೂರ್ಯಾಯಾರ್ಘ್ಯಂ ನಿವೇದಯೇತ್ ॥

೧೬೫-೧೬೬. ಪದ್ಮಮಧ್ಯದಲ್ಲಿ ವನಮಾಲೆ, ಶ್ರೀವತ್ಸ, ಕೌಸ್ತುಭಮಣಿ, ಇವುಗಳ ವಿನ್ಯಾಸವನ್ನೂ ಆ ಪದ್ಮದ ಬಲಗಡೆಯಲ್ಲಿ ಶಾರ್ಙ್ಗಧನುಸ್ಸಿನ ನ್ಯಾಸವನ್ನೂ ಎಡಗಡೆಯಲ್ಲಿ ಬತ್ತಳಿಕೆಗಳನ್ನೂ ದಕ್ಷಿಣದಲ್ಲಿ ಖಡ್ಗವನ್ನೂ ವಿನ್ಯಾಸಮಾಡಬೇಕು. ಮತ್ತೂ ಎಡಭಾಗದಲ್ಲಿ ಗುರಾಣಿಯನ್ನೂ, ಅಲ್ಲಿಯೇ ಸರಸ್ವತೀದೇವಿಯನ್ನೂ ನ್ಯಾಸ ಮಾಡಬೇಕು.

೧೬೭. ಎಲ್ಲಾದೇವತೆಗಳನ್ನೂ ಪೂಜಿಸಿ, ಬಳಿಕ ಮುದ್ರೆಯನ್ನು ಪ್ರದರ್ಶಿಸ ಬೇಕು. ವಿಷ್ಣು ಮತ್ತು ಯೋಗಿದೇವತೆಗಳಿಗೆ ಯಾವಾವ ಮುದ್ರೆ ಮತ್ತು ಸಂಪುಟ ಗಳನ್ನು ಹೇಳಿರುವುದೋ ಅವುಗಳನ್ನೂ, ನವಗ್ರಹಗಳು ದಿಕ್ಪಾಲಕರು ಇವರುಗಳ ಮುದ್ರೆಗಳನ್ನೂ ಬೇರೆ ಬೇರೆಯಾಗಿ ಪ್ರದರ್ಶಿಸಬೇಕು.

೧೬೮. ಉಳಿದ ಸ್ಥಾನಗಳಲ್ಲಿ ಸಂಪೂರ್ಣವಾಗಿ ಪೂಜಿಸಬೇಕಾದ ಮಿಕ್ಕಮಂತ್ರ ಗಳನ್ನು ಹಿಂದೆಯೇ ಹೇಳಿರುತ್ತೆ ಆ ಮಂತ್ರಗಳನ್ನು ಪಠಿಸಿ, ಕರ್ಮವು ತೊಂದರೆ ಇಲ್ಲದೆ ಸಾಂಗವಾಗಿ ನೆರವೇರಲು ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು. ಅರ್ಘ್ಯ ಪ್ರದಾನದ ಮಂತ್ರವನ್ನು ಹಿಂದೆಯೇ ಹೇಳಿರುತ್ತೆ. ಅದರಿಂದಲೇ ಅರ್ಘ್ಯವನ್ನು ಕೊಡಬೇಕು.

ನಿರ್ಮಾಲ್ಯಧಾರೀ ವಿಷ್ಣೋಸ್ತು ವಿಷ್ವಕ್ಸೇನಶ್ಚತುರ್ಭುಜಃ ॥ ೧೬೯ ॥

ಶಂಖಚಕ್ರಗದಾಪಾಣಿರ್ದೀರ್ಘಶ್ಮಶ್ರುರ್ಜಟಾಧರಃ ।
ಯತೃತೀಯಃ ಸ್ವರಾಂತೇನ ಸಂಯುಕ್ತೋ ಬಿಂದುನೇಂದುನಾ ॥ ೧೭೦ ॥

ಕೀರ್ತಿತಸ್ತಸ್ಯ ಮಂತ್ರೋऽಯಂ ತೇನ ತಂ ಪರಿಪೂಜಯೇತ್ ।
ವಿಸರ್ಜನಂ ತಥಾ ವಿಷ್ಣೋರೈಶಾನ್ಯಾಂ ಪರಿಕೀರ್ತಿತಂ ॥ ೧೭೧ ॥

ಅನ್ಯೇಷಾಂ ಮನಸಾ ಕುರ್ಯಾದ್ಬಲಾದೀನಾಂ ವಿಸರ್ಜನಂ ।
ಏವಂ ಯಃ ಕುರುತೇ ಪೂಜಾಂ ವಿಷ್ಣೋಃ ಶಂಭೋರ್ವಿಧೇಃ ಕ್ವಚಿತ್ ॥

ಪೀಠೇ ದಿಕ್ಕರವಾಸಿನ್ಯಾಃ ಸ ಯಾತಿ ಪರಮಂ ಪದಂ ।
ಯತ್ರ ಯತ್ರ ಭವೇದ್ವಿಷ್ಣೋಃ ಪೂಜನಂ ನೃಪಸತ್ತಮ ॥ ೧೭೩ ॥

---

೧೬೯. ವಿಷ್ಣುವಿನ ನಿರ್ಮಾಲ್ಯವನ್ನು ಧರಿಸುವನು, ವಿಷ್ವಕ್ಸೇನನು. ಅವನು ನಾಲ್ಕು ಬಾಹುಗಳುಳ್ಳವನು. ಶಂಖ, ಚಕ್ರ, ಗದೆಗಳನ್ನು ಕೈಗಳಲ್ಲಿ ಧರಿಸಿರುವನು. ಉದ್ದವಾದ ಗಡ್ಡವನ್ನೂ ಜಟೆಯನ್ನೂ ಧರಿಸಿರುವನು. ಇವನಿಗೆ ಕೆಂಪುಮಿಶ್ರವಾದ ಪಿಂಗಳ ಬಣ್ಣದ ಶರೀರವಿರುವುದು. ಬಿಳೀಕಮಲದಲ್ಲಿ ಕುಳಿತಿರುವನು.

೧೭೦. ಯಕಾರದಿಂದ ಮೂರನೆಯ ವರ್ಣವಾದ ವಕಾರಕ್ಕೆ ಸ್ವರಾಕ್ಷರವನ್ನು ಬಿಂದುವನ್ನೂ ಸೇರಿಸಿದರೆ ವಿಷ್ವಕ್ಸೇನನ ಬೀಜಮಂತ್ರವಾಗುವುದು. ಆ ಮಂತ್ರದಿಂದ ಅವನನ್ನು ಪೂಜಿಸಬೇಕು.

೧೭೧. ಈಶಾನ್ಯದಿಕ್ಕಿನಲ್ಲಿ ವಿಷ್ಣುವಿನ ವಿಸರ್ಜನೆಯನ್ನು ಮಾಡಬೇಕು. ಬಲಭದ್ರನೇ ಮೊದಲಾದವರ ವಿಸರ್ಜನೆಯನ್ನು ಮನಸ್ಸಿನಿಂದಲೇ ಮಾಡಬೇಕು.

೧೭೨. ಈರೀತಿಯಾಗಿ ವಿಷ್ಣು, ಶಂಕರ, ಮತ್ತು ಬ್ರಹ್ಮದೇವ ಇವರ ಪೂಜೆಯನ್ನು ದಿಕ್ಕರವಾಸಿನೀದೇವಿಯ ಪೀಠದಲ್ಲಿ ಯಾವನು ಮಾಡುವನೋ ಅವನು ಮುಕ್ತಿಯನ್ನು ಪಡೆಯುವನು.

೧೭೩-೧೭೫. ಎಲೈ ರಾಜೇಂದ್ರ! ವಿಷ್ಣುವನ್ನು ಎಲ್ಲೆಲ್ಲಿ ಪೂಜಿಸಬೇಕಾದರೂ ಅಲ್ಲೆಲ್ಲಾ ಈ ತಂತ್ರದಂತೆಯೇ ವಿಷ್ಣುಭಕ್ತರು ಪೂಜಿಸಬೇಕು. ಮತ್ತೂ ಅಲ್ಲೆಲ್ಲಾ

ತತ್ರ ತತ್ರೈವ ತಂತ್ರೋಕ್ತಂ ಗ್ರಾಹ್ಯೋ ವೈ ವೈಷ್ಣವೈರ್ಬುಧೈಃ ।
ಸಂಕ್ಷೇಪೇಣೈವ ತತ್ರೈವ ಪೂಜಯೇದ್ಪಧಿವಾಮನಂ ॥ ೭೪ ॥

ಹೃದಯಾದ್ಯಂಗಪೂಜಾ ತು ನ ಕರ್ತವ್ಯಾಸ್ಯ ಪೂಜನೇ ।
ಸಂಕ್ಷೇಪೈರ್ವಿಸ್ತರೈರ್ವಾಪಿ ವಾಸುದೇವಂ ಪ್ರಪೂಜಯೇತ್ ॥ ೭೫ ॥

ರಕ್ತಂ ಕೌಶೇಯವಸ್ತ್ರಂ ಚ ಪೀತಂ ಶುಕ್ಲಂ ತಥೈವ ಚ ।
ಪ್ರೀತಿದಂ ವಾಸುದೇವಸ್ಯ ವಸ್ತ್ರಮೇತತ್ಪ್ರಕೀರ್ತಿತಂ ॥ ೧೭೬ ॥

ಘೃತಪ್ರದೀಪೋ ದೀಪೇಷು ಗಂಧೇಷು ಮಲಯೋದ್ಭವಃ ।
ಪಾನಾರ್ಘ್ಯಭೋಜ್ಯಪಾತ್ರೇಷು ತಾಮ್ರಂ ಪ್ರೀತಿಕರಂ ಮತಂ ॥ ೧೭೭ ॥

ಕಿರೀಟಂ ಕುಂಡಲಂ ಹಾರೋ ಭೂಷಣಂ ವಿಷ್ಣುತುಷ್ಟಿದಂ ।
ಶಂಖಃ ಸ್ನಾನೀಯಪಾತ್ರೇಷು ಧೂಪೇಷ್ವಗರುರೇವ ಚ ॥ ೧೭೮ ॥

ಪ್ರೀತಿದೋ ವಾಸುದೇವಸ್ಯ ಸತತಂ ಪರಿಕೀರ್ತಿತಃ ।
ಕದಂಬಂ ಕುಬ್ಜಕಂ ಜಾತೀ ಮಲ್ಲಿಕಾ ಮಾಲತೀ ತಥಾ ॥ ೧೭೯ ॥

ಪಧಿವಾಮನದೇವನನ್ನು ಸಂಕ್ಷೇಪದಿಂದಲೇ ಅರ್ಚಿಸಬೇಕು. ಈ ಪಧಿವಾಮನ ಪೂಜೆಯಲ್ಲಿ ಹೃದಯವೇ ಮೊದಲಾದ ಅಂಗಗಳ ಪೂಜೆಯನ್ನು ಮಾಡಕೂಡದು. ಸಂಕ್ಷೇಪ ಎಂದಲಾಗಲೀ ವಿಸ್ತಾರವಾಗಿಯಾಗಲೀ ವಾಸುದೇವನನ್ನು ಪೂಜಿಸಬಹುದು.

೧೭೬. ಕೆಂಪುರೇಷ್ಮೆವಸ್ತ್ರ, ಹಳದಿ, ಬಿಳಿಯದು ಈ ವಸ್ತ್ರಗಳು ವಾಸುದೇವನಿಗೆ ಪ್ರಿಯವಾದವುಗಳು.

೧೭೭. ದೀಪಗಳಲ್ಲಿ ತುಪ್ಪದದೀಪವೂ, ಗಂಧಗಳಲ್ಲಿ ಮಲಯಪರ್ವತದ ಗಂಧವೂ, ಪಾನ, ಅರ್ಘ್ಯ, ಭೋಜನ ಇವಕ್ಕೆ ಉಪಯೋಗಿಸುವ ಪಾತ್ರೆಗಳಲ್ಲಿ ತಾಮ್ರದ ಪಾತ್ರೆಯೂ ವಾಸುದೇವನಿಗೆ ಪ್ರಿಯವಾದವು.

೧೭೮. ಆಲಂಕಾರಗಳಲ್ಲಿ ಕಿರೀಟ, ಕುಂಡಲ, ಹಾರ ಇವುಗಳೂ, ಸ್ನಾನಪಾತ್ರೆಗಳಲ್ಲಿ ಶಂಖವೂ, ಧೂಪಗಳಲ್ಲಿ ಅಗರುಧೂಪವೂ, ವಾಸುದೇವನಿಗೆ ಪ್ರಿಯವಾದುವು.

೧೭೯. ಕದಂಬ (ತಾಳೆ) ಪುಷ್ಪ, ಕುಬ್ಜಕಪುಷ್ಪ, ಜಾಜೀ, ಮಲ್ಲಿಗೆ, ಮಾಲತೀ ಪುಷ್ಪ, ಕಮಲಪುಷ್ಪಗಳು ವಿಷ್ಣುವಿಗೆ ಪ್ರಿಯವಾದುವು.

ಪಂಕಜಂ ಚೇತಿ ಪುಷ್ಪಾಣಿ ತದ್ವಿಷ್ಣೋಃ ಪ್ರೀತಿದಾನ್ಯುತ ।
ನಿರ್ಜಲಂ ಸ್ಥಂಡಿಲಂ ಸ್ಥಾನಂ ತೋಯಂ ತೀರ್ಥಮಥಾಪಿ ವಾ ॥ ೧೮೦ ॥

ತದ್ವಿಷ್ಣೋರಿತಿ ಮಂತ್ರಸ್ತು ಸ್ತುತಿಃ ಪುರುಷಸೂಕ್ತಕಂ ।
ಪುತ್ರಂಜೀವೋದ್ಭವಾ ಮೂಲಾ ಪ್ರಶಸ್ತಾ ವಿಷ್ಣುಪೂಜನೇ ॥ ೧೮೧ ॥

ತಿಥಿಶ್ಚ ದ್ವಾದಶೀ ಪ್ರೋಕ್ತಾ ವಸಂತಃ ಕಾಲ ಉತ್ತಮಃ ।
ಶಾಲ್ಯೋದನಂ ಹವಿಷ್ಯಾನ್ನಂ ಯಾವಕಂ ಪಾಯಸಂ ಘೃತಂ ॥ ೧೮೨ ॥

ಕೃಸರಾನ್ನಂ ತಥಾನ್ನೇಷು ಪಾನೇಷು ಕ್ಷೀರಮುಚ್ಯತೇ ।
ದಲೇಷು ತುಲಸೀಪತ್ರಂ ಬಿಲ್ವಮಾಮಲಮೇವ ಚ ॥ ೧೮೩ ॥

ಹರೇಃ ಪ್ರೀತಿಕರಾಣಿ ಸ್ಯುರೇತಾನಿ ನೃಪಸತ್ತಮ ।
ಸರ್ವಾಣಿ ಪರಕೀಯಾನಿ ಯಾನಿ ತಾನಿ ವಿವರ್ಜಯೇತ್ ॥ ೧೮೪ ॥

---

೧೮೦. ಜಲವಿಲ್ಲದ ಸ್ಥಾನವು ವಿಷ್ಣುವಿನ ಪೂಜಾಸ್ಥಂಡಿಲಕ್ಕೆ ಯೋಗ್ಯವಾದುದು. ಅಥವಾ ನದೀಪ್ರದೇಶ, ತೀರ್ಥಪ್ರದೇಶ ಇವುಗಳೂ ಯೋಗ್ಯವಾದವುಗಳು. ತದ್ವಿಷ್ಣೋಃ ಪರಂ ಪದಂ ಎಂಬ ಮಂತ್ರದಿಂದಲೂ, ಪುರುಷಸೂಕ್ತದಿಂದಲೂ ವಾಸುದೇವನನ್ನು ಸ್ತುತಿಸಬೇಕು.

೧೮೧. ಪುತ್ರಜೀವಮಣಿಯಿಂದ ಮಾಡಿದ ಮೂಲೆಯೂ, ತುಲಸೀಪತ್ರದಿಂದ ಮಾಡಿದ ವನಮಾಲೆಯೂ, ವಿಷ್ಣುಪೂಜೆಯಲ್ಲಿ ಪ್ರಶಸ್ತವಾದವು. ದ್ವಾದಶೀತಿಥಿಯೂ ವಸಂತಕಾಲವೂ ಪೂಜೆಗೆ ಉತ್ತಮವಾದ ಕಾಲಗಳು.

೧೮೨. ಶಾಲ್ಯನ್ನ, ಅಕ್ಕಿಯಿಂದಮಾಡಿದ ಹವಿಷ್ಯನ್ನ ಪಾಯಸ, ತುಪ್ಪ, ಎಳ್ಳನ್ನ ಇವುಗಳು ವಿಷ್ಣುವಿಗೆ ಪ್ರಿಯವಾದ ನೈವೇದ್ಯಗಳು. ಪಾನಗಳಲ್ಲಿ ಹಾಲು ಉತ್ತಮವಾದದು.

೧೮೩. ಎಲೈ ರಾಜೇಂದ್ರನೇ! ಪತ್ರಗಳಲ್ಲಿ ತುಲಸೀಪತ್ರ, ಬಿಲ್ವಪತ್ರ,ಆಮಲ (ನೆಲ್ಲಿ) ಪತ್ರ ಇವುಗಳು ವಿಷ್ಣುವಿಗೆ ಪ್ರಿಯವಾದವುಗಳು.

೧೮೪-೧೮೫. ಇತರ ದೇವತೆಗಳಿಗೆ ಹೇಳಿರುವಂತಹ ಯಾವ ವಸ್ತುವನ್ನೂ ವಿಷ್ಣುಪೂಜೆಯಲ್ಲಿ ಉಪಯೋಗಿಸಬಾರದು. ಈ ಕ್ರಮದಿಂದ ಯಾವ ನರೋತ್ತಮನು

ಏವಂ ಯಃ ಪೂಜಯೇದ್ವಿಷ್ಣುಂ ಸತತಂ ನರಸತ್ತಮಃ ।
ಕುಲಕೋಟಿಂ ಸಮುದ್ಧೃತ್ಯ ಸ ಸ್ವಯಂ ಸ್ಯಾಜ್ಜನಾರ್ದನಃ ॥ ೧೪೫ ॥

ಇದಂ ತೇ ಕಥಿತಂ ಭೂಪ ವಾಸುದೇವಸ್ಯ ತಂತ್ರಕಂ ।
ಪೀಠಸ್ಯ ಕಾಮರೂಪಸ್ಯ ಸಂಕ್ಷೇಪಾನ್ನಿರ್ಣಯಂ ತಥಾ ॥ ೧೪೬ ॥

ಇತಿ ಸರ್ವಂ ಕಾಮರೂಪಪೀಠಂ ಶಂಭುರದರ್ಶಯತ್ ।
ಪುತ್ರಾಭ್ಯಾಂ ಸ ಪುನಸ್ತಾಭ್ಯಾಂ ಕೈಲಾಸಂ ಪ್ರಯಯೌ ಗಿರಿಂ ॥ ೧೪೭ ॥

ತತ್ರ ಗತ್ವಾ ಯಥಾಯೋಗಂ ನಿಧಾಯ ತನಯೌ ಸ್ವಕೌ ।
ವಿಮುಕ್ತಶಾಪಾಸ್ತೇ ಜಾತಾಃ ಶಂಭುಗಿರಿಸುತಾ ತಥಾ ॥ ೧೪೪ ॥

ವೇತಾಲೋ ಭೈರವಶ್ಚಾಪಿ ನೃಪಸತ್ತಮ ನಿರ್ಜರಾಃ ।
ಇದಂ ಯೋ ಮಹದಾಖ್ಯಾನಂ ಶೃಣೋತ್ಯೇಕಾಗ್ರಮಾನಸಃ ॥ ೧೪೯ ॥

ವಿಷ್ಣುವನ್ನು ಪೂಜಿಸುವನೋ ಅವನು ತನ್ನ ಕುಲದ ಕೋಟಿ ಜನಗಳನ್ನು ಉದ್ಧರಿಸಿ ಮುಂದೆ ವಿಷ್ಣು ಸಾಯುಜ್ಯವನ್ನು ಪಡೆಯುವನು.

೧೪೬. ಎಲೈ ರಾಜೇಂದ್ರನೇ! ಹೀಗೆ ನಿನಗೆ ವಾಸುದೇವನ ಪೂಜಾತಂತ್ರವನ್ನು ಹೇಳಿರುವೆನು. ಸಂಕ್ಷೇಪವಾಗಿ ಕಾಮರೂಪಪೀಠದ ನಿರ್ಣಯವನ್ನೂ, ನಿನಗೆ ಹೇಳಿರುವೆನು.

೧೪೭. ಹೀಗೆ ಶಂಕರನು ತನ್ನ ಪುತ್ರರಾದ ವೇತಾಲಭೈರವರಿಗೆ ಕಾಮರೂಪ ಪೀಠವನ್ನು ಸಂಪೂರ್ಣವಾಗಿ ತೋರಿಸಿ ಬಳಿಕ ಅವರೊಡನೆ ತನ್ನ ಸ್ಥಾನವಾದ ಕೈಲಾಸ ಗಿರಿಗೆ ತೆರಳಿದನು.

೧೪೪. ಆ ಕೈಲಾಸಕ್ಕೆ ಹೋಗಿ ಅಲ್ಲಿ ತನ್ನ ಪುತ್ರರಾದ ವೇತಾಲಭೈರವರನ್ನು ಯೋಗ್ಯಸ್ಥಾನದಲ್ಲಿರಿಸಿದನು. ಆಗ ಶಂಕರಪಾರ್ವತಿಯರು ಶಾಪದಿಂದ ಮುಕ್ತರಾದರು. ವೇತಾಲ ಮತ್ತು ಭೈರವರೂ ಸಹ ಶಾಪಮುಕ್ತರಾಗಿ ದೇವಭಾವವನ್ನು ಹೊಂದಿದರು.

೧೪೯-೧೫೦. ಈ ಮಹೋಪಾಖ್ಯಾನವನ್ನು ಯಾವಪುರುಷನು ಸಾವಧಾನವಾಗಿ ಕೇಳುವನೋ ಅವನಿಗೆ ಶಾಪಭಯವು ಬರಲಾರದು. ರೋಗ, ಮನೋವ್ಯಥೆ,

ಶಾಪಭೀತಿರ್ನ ತಸ್ಯಾಸ್ತಿ ವ್ಯಾಧಯಸ್ತಸ್ಯ ನಾಧಯಃ ।
ಪುತ್ರಪೌತ್ರಧನೈಶ್ವರ್ಯಯುಕ್ತಃ ಸರ್ವತ್ರ ವಲ್ಲಭಃ ॥ ೧೯೦ ॥

ಸರ್ವಕಲ್ಯಾಣಸಂಯುಕ್ತೋ ದೀರ್ಘಕಾಲಂ ಸ ಜೀವತಿ ।
ಕಾಮರೂಪಂ ಮಹಾಪೀಠಂ ಯೋ ಜಾನಾತಿ ನರೋತ್ತಮಃ ॥ ೧೯೧ ॥

ಸ ದಿವ್ಯಜ್ಞಾನಸಂಪನ್ನಃ ಪರಂ ನಿರ್ವಾಣಮವಾಪ್ನುಯಾತ್ ।
ಯಃ ಕಾಮರೂಪೇ ಸಕಲೇ ಪೀಠಯಾತ್ರಾಂ ಸಮಾಚರೇತ್ ॥ ೧೯೨ ॥

ಆಸಾದ್ಯ ಸಕಲಾನ್ ಪೀಠಾನ್ ಪೂಜಯೇತ್ಸರ್ವದೇವತಾಃ ।
ದಶ ಪೂರ್ವಾನ್ ದಶ ಪರಾನಾತ್ಮಾನಂ ಚೈಕವಿಂಶತಿಂ ॥ ೧೯೩ ॥

ದಿವ್ಯಜ್ಞಾನೇ ನಿಧಾಯೈಷು ಸರ್ವಂ ಮುಕ್ತಿಮಿಯಾತ್ಸ ಹ ॥ ೧೯೪ ॥

॥ ಇತಿ ಶ್ರೀಕಾಲಿಕಾಪುರಾಣೇ ತ್ರ್ಯಶೀತಿತಮೋಽಧ್ಯಾಯಃ ॥

ಇವುಗಳೊಂದೂಬರಲಾರದು. ಮಕ್ಕಳು, ಮೊಮ್ಮಕ್ಕಳು, ಧನ, ಐಶ್ವರ್ಯ, ಇವುಗಳಿಂದ ಕೂಡಿದವನಾಗಿ, ಎಲ್ಲರಿಗೂ ಬೇಕಾದವನಾಗಿ ಸಕಲಮಂಗಳಪಾತ್ರನಾಗಿಯೂ ಇದ್ದು, ಬಹಳಕಾಲ ಬದುಕುವನು.

೧೯೧. ಕಾಮರೂಪಮಹಾಪೀಠವನ್ನು ಯಾವ ನರೋತ್ತಮನು ಸಂಪೂರ್ಣವಾಗಿ ತಿಳಿಯುವನೋ, ಅವನು ದಿವ್ಯಜ್ಞಾನವನ್ನು ಪಡೆದು ಮುಕ್ತಿಯನ್ನು ಪಡೆಯುವನು.

೧೯೨-೧೯೪. ಯಾವನು ಕಾಮರೂಪಪೀಠವನ್ನೆಲ್ಲಾ ಸಂಪೂರ್ಣವಾಗಿ ಯಾತ್ರೆ ಮಾಡುವನೋ ಮತ್ತೂ ಮಿಕ್ಕಪೀಠಗಳ ಯಾತ್ರೆಯನ್ನೂ ಮಾಡಿ ಅಲ್ಲಿರುವ ದೇವತೆಗಳನ್ನೆಲ್ಲಾ ಪೂಜಿಸುವನೋ, ಅವನು ತನ್ನ ಕುಲದಲ್ಲಿ ಹತ್ತು ಜನ ಹಿಂದಿನವರು ಹತ್ತು ಜನ ಮುಂದಿನವರು, ತಾನು, ಹೀಗೆ ಇಪ್ಪತ್ತೊಂದು ಜನಗಳಿಗೂ ದಿವ್ಯಜ್ಞಾನ ಬರುವಂತೆ ಮಾಡಿ, ಕೊನೆಗೆ ಅವರೊಡನೆ ತಾನೂ ಮುಕ್ತನಾಗುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತಮೂರನೆಯ
ಅಧ್ಯಾಯವು ಮುಗಿದುದು

॥ ಶ್ರೀ ॥

ಅಥ

॥ಶ್ರೀ ಕಾಲಿಕಾಪುರಾಣೇ ಚತುರಶೀತಿತಮೋऽಧ್ಯಾಯಃ॥

॥ ಔರ್ವ ಉವಾಚ ॥

ಕಾಮರೂಪೇ ಮಹಾಪೀಠೇ ಸ್ನಾತ್ವಾ ಪೀತ್ವಾ ಚ ದೇವತಾಃ ।
ಪೂಜಯಿತ್ವಾ ಚ ಬಹುಲಾ ಲೋಕಾಃ ಸ್ವರ್ಗಂ ಪುರಾ ಯಯುಃ ॥ ೧ ॥

ಕೇಚಿದ್ಭೀಜುಶ್ಚ ನಿರ್ವಾಣಂ ಕೇಚಿದ್ಯಾಂತಿ ಸ್ಮ ಶಂಭುತಾಂ ।
ನ ಯಮಸ್ತಾನ್ನಿವಾರಯಿತುಂ ನೇತುಂ ಚ ನಿಜಮಂದಿರಂ ॥ ೨ ॥

ಕ್ಷಮೋऽಭೂನ್ನರಶಾರ್ದೂಲ ಶಿವಾತ್ಸಂಜಾತಸಾಧ್ವಸಾಃ ।
ಯಮದೂತಂ ತತ್ರ ಯಾಂತಂ ಬಾಧಂತೇ ಶಾಂಕರಾ ಗಣಾಃ ॥ ೩ ॥

ಎಂಭತ್ತನಾಲ್ಕನೆಯ ಅಧ್ಯಾಯವು

೧. ಔರ್ವಮುನಿಯುಹೇಳಿದನು:—ಎಲೈ ರಾಜೇಂದ್ರ, ಕಾಮರೂಪ ಮಹಾ ಪೀಠದಲ್ಲಿರುವ ತೀರ್ಥಗಳಲ್ಲಿ ಸ್ನಾನ ಪಾನಗಳನ್ನು ಮಾಡಿ, ಅಲ್ಲಿರುವ ದೇವತೆಗಳನ್ನು ಪೂಜಿಸಿ, ಅನೇಕ ಜನಗಳು ಸ್ವರ್ಗವನ್ನು ಪಡೆದಿರುವರು.

೨. ಕೆಲವರು ಮುಕ್ತಿಯನ್ನು ಪಡೆದರು. ಕೆಲವರು ಶಂಕರನರೂಪವನ್ನು ಹೊಂದಿದರು. ಆ ಭಕ್ತರನ್ನು ತಡೆದು, ತನ್ನ ಲೋಕವಾದ ಯಮಲೋಕಕ್ಕೆ ಕರೆದು ಕೊಂಡು ಹೋಗಲು, ಶಂಕರನ ಭಯದಿಂದ ಯಮನೂ ಅಸಮರ್ಥನಾದನು.

೩. ಆ ಪೀಠಸ್ಥಳಕ್ಕೆ ಯಮದೂತರು ಬಂದರೆ, ಶಂಕರನ ಪ್ರಥಮಗಣಗಳು ಅವರನ್ನು ಬಾಧಿಸುವುದರಿಂದ ಯಮನು ಆಜ್ಞೆಮಾಡಿದರೂ ಯಮದೂತರು ಆಸ್ಥಾನಕ್ಕೆ ಹೋಗುವುದೇ ಇಲ್ಲ.

ನ ತದ್ಭಿಯಾ ತತ್ರ ಯಾಂತಿ ಯಮದೂತಾಃ ಪ್ರಚೋದಿತಾಃ ।
ತಥಾ ದೃಷ್ಟ್ವಾಥ ಶಮನಃ ಸ್ವಕ್ರಿಯಾಪರಿವರ್ಜಿತಃ ॥ ೪ ॥

ವಿಧಾತಾರಂ ಸಮಾಸಾದ್ಯ ವಚನಂ ಚೇದಮಬ್ರವೀತ್ ।
ವಿಧಾತಃ ಕಾಮರೂಪೇಸ್ಮಿ ನ್ನಾತ್ವಾ ಪೀತ್ವಾ ಚ ಮಾನವಃ ॥ ೫ ॥

ಕಾಮಾಖ್ಯಾಗಣತಾಂ ಯಾತಿ ತಥಾ ಶಂಭುಗಣೇಶತಾಂ ।
ತತ್ರ ಮೇ ನಾಧಿಕಾರೋಸ್ತಿ ನ ತಾ ವಾರಯಿತುಂ ಕ್ಷಮಃ ॥ ೬ ॥

ವಿಧತ್ಸ್ವತ್ರೋಚಿತಾಂ ನೀತಿಂ ಯುಜ್ಯತೇ ಯದಿ ಗೋಚರೇ ।
ತಸ್ಯ ತದ್ವಚನಂ ಶ್ರುತ್ವಾ ಬ್ರಹ್ಮಾ ಲೋಕಪಿತಾಮಹಃ ॥ ೭ ॥

ಜಗಾಮ ವಿಷ್ಣುಭವನಂ ಸಹೈವ ಸಮವರ್ತಿನಾ ।
ತಮಾಸಾದ್ಯ ತಥಾ ಪ್ರಾಹ ವಿಷ್ಣುರ್ವೈ ಯಮಭಾಷಿತಂ ॥ ೮ ॥

೪-೬. ತನ್ನ ಕೆಲಸವೇ ನಡೆಯದಿರುವುದನ್ನು ನೋಡಿ ಯಮನು ಬ್ರಹ್ಮ ದೇವನ ಬಳಿಗೆಬಂದು ಓ ಬ್ರಹ್ಮದೇವನೇ! ಈ ಕಾಮರೂಪೀಠದಲ್ಲಿರುವ ತೀರ್ಥ ನದಿ ಗಳಲ್ಲಿ ಸ್ನಾನಪಾನಗಳನ್ನು ಮಾಡಿ ದೇವತೆಗಳನ್ನು ಪೂಜಿಸಿದ ಮನುಷ್ಯನು ಕಾಮಾ ಖ್ಯಾದೇವಿಯ ಗಣದೇವತೆಯಾಗುವನು. ಮತ್ತು ಶಂಕರನ ಪ್ರಮಥಗಣನಾಯಕ ನಾಗುವನು. ಆ ಪೀಠದಲ್ಲಿ ನನ್ನ ಅಧಿಕಾರವೇ ನಡೆಯುತ್ತಿಲ್ಲ. ಆ ದೇವಿಭಕ್ತ ರನ್ನೂ ಶಂಕರಭಕ್ತರನ್ನೂ ತಡೆಯಲು ನಾನು ಅಸಮರ್ಥನಾಗಿರುವೆನು. ಆದಕಾರಣ ಈ ವಿಷಯದಲ್ಲಿ ಯೋಗ್ಯವಾದ ಒಂದು ಉಪಾಯವನ್ನು ಮಾಡು ಎಂದು ಹೇಳಿದನು.

೭-೯. ಯಮನು ಹೇಳಿದ ಈ ಮಾತುಗಳನ್ನು ಕೇಳಿ ಲೋಕ ಮಹಾಪಿತ ನಾದ ಬ್ರಹ್ಮದೇವನು, ಆ ಯಮನನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು, ವಿಷ್ಣು ಲೋಕಕ್ಕೆ ಹೋಗಿ, ಅಲ್ಲಿ ವಿಷ್ಣುವಿಗೆ ಯಮನು ಹೇಳಿದ ಮಾತೆಲ್ಲವನ್ನೂ ಹೇಳಿದನು. ಜಗತ್ಪತಿಯಾದ ವಿಷ್ಣುವು ಎಲ್ಲವನ್ನೂ ಸಾವಧಾನವಾಗಿ ಕೇಳಿ ಬ್ರಹ್ಮ ಮತ್ತು ಯಮರೊಡನೆ ಶಂಕರನ ಬಳಿಗೆ ಹೋದನು. ಅಲ್ಲಿ ಶಂಕರನು ಇವರನ್ನು

ಯಥಾವತ್ಸರ್ವಲೋಕೇಶಃ ಸ ಚ ತದ್ವಾಕ್ಯಮಬ್ರವೀತ್ ।
ಸಹ ಬ್ರಹ್ಮಯಮಾಭ್ಯಾಂ ತು ವಿಷ್ಣುಃ ಶಂಭುಂ ಯಯೌ ತತಃ ॥ ೯ ॥

ಸತ್ಕೃತಸ್ತೇನ ಪೃಷ್ಟಶ್ಚ ಪ್ರಾಹೇದಂ ಯಮಭಾಷಿತಂ ।

॥ ಶ್ರೀ ॥ ಭಗವಾನುವಾಚ ॥

ಸರ್ವದೇವೈಃ ಸರ್ವತೀರ್ಥೈಃ ಸರ್ವಕ್ಷೇತ್ರೈಸ್ತಥೈವ ಚ ॥ ೧೦ ॥

ಏತದ್ವ್ಯಾಪ್ತಂ ಕಾಮರೂಪಂ ನಾತೋಽನ್ಯದ್ವಿದ್ಯತೇ ಪರಂ ।
ಇದಂ ಪೀಠಂ ಸಮಾಸಾದ್ಯ ದೇವತ್ವಂ ಯಾಂತಿ ಮಾನವಾಃ ॥ ೧೧ ॥

ಅಮೃತತ್ವಂ ಗಣತ್ವಂ ಚ ತತ್ರ ಶಕ್ತೋ ಯಮೋ ನ ಹಿ ।
ತಥಾ ಕುರು ಮಹಾದೇವ ಯಥಾ ಸ್ಯಾಚ್ಚ ಕ್ಷಮೋ ಯಮಃ ॥ ೧೨ ॥

ಸತ್ಕರಿಸಿದ ಮೇಲೆ ತಾವು ಬಂದವಿಚಾರವನ್ನೂ, ಯಮನು ತಮಗೆ ಹೇಳಿದ ಸಂಗತಿಯನ್ನೂ ಯಥಾವತ್ತಾಗಿ ವಿಷ್ಣುವು ಶಂಕರನಿಗೆ ತಿಳಿಸಿದನು.

೧೦. ಭಗವಂತನಾದ ವಿಷ್ಣುವು ಹೇಳಿದನು—ಎಲ್ಲಾ ದೇವತೆಗಳೂ ತೀರ್ಥಗಳೂ, ಕ್ಷೇತ್ರಗಳೂ ಕಾಮರೂಪಪೀಠದಲ್ಲಿಯೇ ಇರುವುವು. ಇದಕ್ಕಿಂತಲೂ ಉತ್ತಮವಾದ ಪೀಠವು ಮತ್ತೊಂದಿಲ್ಲ.

೧೧-೧೨. ಈ ಪೀಠಯಾತ್ರೆಯನ್ನು ಮಾಡಿದ ಮಾನವರು ದೇವತ್ವವನ್ನೂ ಗಣನಾಯತ್ವವನ್ನೂ, ಕಡೆಗೆ ಮುಕ್ತಿಯನ್ನೂ ಪಡೆಯುವರು. ಇಂತಹ ಮಾನವರ ವಿಚಾರದಲ್ಲಿ ಯಮನ ಆಟವೇನೂ ಸಾಗುತ್ತಿಲ್ಲ. ಯಮನ ಅಧಿಕಾರ ನಡೆಯದೇ ಇದ್ದರೆ ಪ್ರಾಣಿಗಳಿಗೆ ಪುಣ್ಯಪಾಪಗಳ ಭೀತಿಯೇ ಇರುವುದಿಲ್ಲ. ಆದುದರಿಂದ ಆ ಕಾಮರೂಪ ಪೀಠದಲ್ಲಿ ಯಮನ ಅಧಿಕಾರವ್ಯಾಪ್ತಿ ಇರುವಂತೆ ಮಾಡು ಎಂದು ಹೇಳಿದನು.

ಯಮೋ ನಿರಸ್ತೋ ಯತ್ರಾಸ್ತಿ ಮರ್ಯಾದಾ ನ ಪ್ರದೃಶ್ಯತೇ ।

॥ ಔರ್ವ ಉವಾಚ ॥

ಏತದ್ವಿಷ್ಣುವಚಃ ಶ್ರುತ್ವಾ ವಿಧಿನಾ ಸಹಿತಸ್ಯ ತು ॥ ೧೩ ॥

ಅಂಗೀಚಕಾರ ಹೃದಯೇ ತದ್ವಚಃ ಸಾಧ್ಯಸಾಧನೇ ।
ವಿಸೃಜ್ಯ ತಾ೯ ಬ್ರಹ್ಮವಿಷ್ಣುಯಮಾ೯ ವೃಷಭವಾಹನಃ ॥ ೧೪ ॥

ಆದಾಯ ಸ್ವಗಣಾ೯ ಸರ್ವಾನ್ಯಾಮರೂಪಾಂತರಂ ಯಯೌ ।
ಉಗ್ರತಾರಾಂ ತತೋ ದೇವೀಂ ಗಣಾಂಶ್ಚ ಪ್ರಾಹ ಶಂಕರಃ ॥ ೧೫ ॥

ಉತ್ಸಾರಯಂತು ಸಕಲಾನಿಮಾ೯ ಲೋಕಾ೯ ಗಣಾ ದ್ರುತಂ ।
ಉಗ್ರತಾರೇ ಮಹಾದೇವಿ ತ್ವಂ ಚಾಪ್ಯುತ್ಸಾರಯ ದ್ರುತಂ ॥ ೧೬ ॥

ತತೋ ಗಣಾಃ ಕಾಮರೂಪಾಃ ದೇವಿ ಚಾಪ್ಯಪರಾಜಿತಾ ।
ಲೋಕಾನುತ್ಸಾರಯಾಮಾಸುಃ ಪೀಠಂ ಕರ್ತುಂ ಹರಸ್ಯ ತಂ ॥ ೧೭ ॥

---

೧೩. ಔರ್ವಮುನಿಯು ಹೇಳಿದನು:— ಬ್ರಹ್ಮನೊಡನೆ ಬಂದಿರುವ ವಿಷ್ಣುವಿನ ಈಮಾತನ್ನು ಕೇಳಿ ಶಂಕರನು ಹಾಗೆಯೇ ಆಗಲಿ ಎಂದು ಅವರಮಾತನ್ನು ಅಂಗೀಕರಿಸಿದನು.

೧೪-೧೭. ಬಳಿಕ ಆ ಶಂಕರನು ವಿಷ್ಣು, ಬ್ರಹ್ಮ, ಮತ್ತು ಯಮ ಇವರನ್ನು ಕಳುಹಿಸಿಕೊಟ್ಟು, ತನ್ನ ಗಣಗಳನ್ನೆಲ್ಲಾ ಕರೆದುಕೊಂಡು ಕಾಮರೂಪ ದೇಶಕ್ಕೆ ಹೋಗಿ, ಅಲ್ಲಿ ಅವರನ್ನು ಕುರಿತು ನೀವೆಲ್ಲರೂ ಇಲ್ಲಿರುವ ಮಾನವರನ್ನೆಲ್ಲಾ ಕೂಡಲೇ ಓಡಿಸಿರಿ ಎಂದು ಆಜ್ಞೆಮಾಡಿದ್ದಲ್ಲದೆ, ಎಲೈ ಉಗ್ರತಾರಾದೇವಿಯೇ! ನೀನೂ ಸಹ ಮಾನವರನ್ನು ಇಲ್ಲಿಂದ ಹೊರಡಿಸು ಎಂದು ಆ ದೇವಿಗೆ ಹೇಳಿದನು. ಬಳಿಕ ಗಣಗಳೂ ಕಾಮರೂಪಾದೇವೀ, ಅಪರಾಜಿತಾದೇವೀ ಇವರೂ ಸಹ ಅಲ್ಲಿ ಶಂಕರನ ಪೀಠವನ್ನು ಸ್ಥಾಪಿಸಲು ಮಾನವರನ್ನೆಲ್ಲಾ ಓಡಿಸಿದರು.

ಉತ್ಸಾರ್ಯಮಾಣೇ ಲೋಕೇ ತು ಚಾತುರ್ವರ್ಣ್ಯೇ ದ್ವಿಜಾತಿಷು ।
ಸಂಧ್ಯಾಚಲಗತೋ ವಿಪ್ರೋ ವಸಿಷ್ಠಃ ಕುಪಿತೋ ಮುನಿಃ ॥ ೧೮ ॥

ಸೋಽಪ್ಯುಗ್ರತಾರಯಾ ದೇವ್ಯಾ ಉತ್ಸಾರಯಿತುಮೀಶಯಾ ।
ಗಣೈಃ ಸಹ ಧೃತಃ ಪ್ರಾಹ ಶಾಪಂ ಕುರ್ವನ್ ಸುದಾರುಣಂ ॥ ೧೯ ॥

ಯಸ್ಮಾದಹಂ ಧೃತೋ ವಾಮೇ ತ್ವಯೋತ್ಸಾರಯಿತುಂ ಮುನಿಃ ।
ತಸ್ಮಾತ್ತ್ವಂ ವಾಮ್ಯಭಾವೇನ ಪೂಜ್ಯಾ ಭವ ಸಮಂತ್ರಿಕಾ ॥ ೨೦ ॥

ಭ್ರಮಂತಿ ಮ್ಲೇಚ್ಛವದ್ಯಸ್ಮಾದ್ಗಣಾನಾಂ ಮಂದಬುದ್ಧಯಃ ।
ಭವಂತು ಮ್ಲೇಚ್ಛಾಸ್ತಸ್ಮಾದ್ವೈ ಭವಂತಃ ಕಾಮರೂಪಕೇ ॥ ೨೧ ॥

ಮಹಾದೇವೋಽಪಿ ಯಸ್ಮಾನ್ಮಾಮುತ್ಸಾರಯಿತುಮುದ್ಯತಃ ।
ತಪೋಧನಂ ಮುನಿಂ ದಾಂತಂ ಮ್ಲೇಚ್ಛವದ್ವೇದಪಾರಗಂ ॥ ೨೨ ॥

---

೧೮. ಕಾಮರೂಪದೇಶದಲ್ಲಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ರಾದಿಯಾದ ಮಾನವರೆಲ್ಲರೂ ಸ್ಥಾನಭ್ರಷ್ಟರಾಗಲು ಸಂಧ್ಯಾಚಲದಲ್ಲಿದ್ದ ವಸಿಷ್ಠಮು ನಿಯು ಇದನ್ನೆಲ್ಲಾ ನೋಡಿದನು. ಇದರಿಂದ ಅವನಿಗೆ ತುಂಬಾ ಕೋಪಬಂದಿತು.

೧೯. ಆ ಮುನಿಯನ್ನೂ ಸಹ ಉಗ್ರತಾರಾದೇವಿಯ ಗಣಗಳು ಹೊರದೂ ಡಲು ಪ್ರಯತ್ನಿಸಲು ವಸಿಷ್ಠನು ಕೋಪಿಷ್ಟನಾಗಿ, ಶಂಕರ ಮತ್ತು ಇವರ ಗಣಗಳಿಗೆಲ್ಲ ಘೋರವಾದ ಶಾಪವನ್ನು ಕೊಟ್ಟನು.

೨೦-೨೨. ಎಲೈ ಉಗ್ರತಾರೆಯೇ, ನೀನು ಮುನಿಯಾದ ನನ್ನನ್ನು ವಾಮ ಹಸ್ತ (ಎಡಗೈ)ದಿಂದ ದೂಡಿ ಅವಮಾನಪಡಿಸಿರುವೆ. ಆದುದರಿಂದ ಇನ್ನು ಮುಂದೆ ಲೋಕದ ಜನರು ವಾಮಾಚಾರವಿಧಿಯಿಂದಲೂ ಅಂತಹ ಮಂತ್ರಗಳಿಂದಲೂ ನಿನ್ನನ್ನು ಪೂಜಿಸುವಂತಾಗಲಿ. ಬುದ್ಧಿಹೀನರಾದ ಈ ನಿನ್ನ ಗಣಗಳೂ ಸಹ ಮನಸ್ವಿಯಾಗಿ ಜನಗಳ ಮೇಲೆ ಅತ್ಯಾಚಾರಗಳನ್ನು ನಡೆಸಿ, ಅವರನ್ನು ಮ್ಲೇಚ್ಛ ರಂತೆ ಹಿಂಸಿಸುತ್ತಿರುವುದರಿಂದ ಅವರು ಈ ಕಾಮರೂಪದೇಶದಲ್ಲಿ ಮ್ಲೇಚ್ಛರಾಗಲಿ, ಮಹಾದೇವನೂ ಸಹ ನನ್ನನ್ನು ಹೊರದೂಡಲು ಪ್ರಯತ್ನಪಟ್ಟಿರುವನು. ನಾನು

ತಸ್ಮಾನ್ಮ್ಲೇಚ್ಛಪ್ರಿಯೋ ಭೂಯಾಚ್ಛಂಕರಶ್ಚಾಸ್ಥಿಭಸ್ಮಧೃಕ್ ।
ಏತತ್ತು ಕಾಮರೂಪಾಖ್ಯಂ ಮ್ಲೇಚ್ಛೈರ್ಗುಪ್ತಂ ಮದತ್ವರಂ ॥ ೨೩ ॥

ಸ್ವಯಂ ವಿಷ್ಣುರ್ನ ಚಾಯಾತಿ ಯಾವತ್ತ್ವಾನಮಿದಂ ಪುನಃ ।
ವಿರಲಾಶ್ಚಾಗಮಾಃ ಸಂತು ಯ ಏತತ್ಪ್ರತಿಪಾದಕಾಃ ॥ ೨೪ ॥

ವಿರಲಂ ಯಸ್ತು ಜಾನಾತಿ ಕಾಮರೂಪಾಗಮಂ ಬುಧಃ ।
ಸ ಏವ ಪ್ರಾಪ್ತೇ ಕಾಲೇಽಪಿ ಸಂಪೂರ್ಣಂ ಫಲಮಾಪ್ನುಯಾತ್ ॥ ೨೫ ॥

ಏವಮುಕ್ತ್ವಾ ವಸಿಷ್ಠಸ್ತು ತತ್ರೈವಾಂತರಧೀಯತ ।
ತೇ ಗಣಾ ಮ್ಲೇಚ್ಛತಾಂ ಯಾತಾಃ ಕಾಮರೂಪೇ ಸುರಾಲಯೇ ॥ ೨೬ ॥

ತಪಸ್ವಿಯೂ, ಜಿತೇಂದ್ರಿಯನೂ, ವೇದಶಾಸ್ತ್ರಪಾರಂಗತನೂ ಆಗಿದ್ದರೂ ಅದನ್ನೊಂದೂ ಲಕ್ಷಿಸದೆ ಆ ಮಹಾದೇವನು ಮ್ಲೇಚ್ಛರು ವರ್ತಿಸುವಂತೆ ನನ್ನನ್ನು ಹಿಂಸಿಸಿ ಓಡಿಸಲು ಪ್ರಯತ್ನಪಟ್ಟಿರುವುದರಿಂದ ಅವನೂ ಸಹ, ಅಸ್ಥಿ, ನರಕಪಾಲ, ಚಿತಿಭಸ್ಮ ಮೊದಲಾದ ಅಸಹ್ಯ ವೇಷಗಳನ್ನು ಧರಿಸಿ, ಮ್ಲೇಚ್ಛರಿಗೆ ಪ್ರಿಯನಾಗಿರಲಿ. ಈ ದೇಶವನ್ನು ಇನ್ನು ಮುಂದೆ ಮ್ಲೇಚ್ಛರೇ ಆಳಲಿ. ವಿಷ್ಣುವು ಈ ದೇಶಕ್ಕೆ ಬರುವವರೆಗೂ ಹೀಗೆಯೇ ಇರಲಿ. ಅನಂತರ ಈ ಶಾಪವಿಮೋಚನೆಯಾಗುವುದು. ಈ ಕಾಮರೂಪಪೀಠದ ಮಹಿಮೆಯನ್ನು ಪ್ರತಿಪಾದಿಸುವ ಆಗಮಾದಿಗ್ರಂಥಗಳು ಜನರಲ್ಲಿ ಪ್ರಚಾರಗೊಳ್ಳದೆ ಕಮ್ಮಿಯಾಗಲಿ, ಈ ಆಗಮವನ್ನು ತಿಳಿದವರು ಸಹ ದುರ್ಲಭವಾಗಲಿ. ಇಂತಹ ಸ್ಥಿತಿಯಲ್ಲಿಯೂ ಈ ಆಗಮವನ್ನು ತಿಳಿದು ಅದರಂತೆ ಆಚರಿಸುವ ಬುದ್ಧಿವಂತನು ಮಾತ್ರ ಸಂಪೂರ್ಣಫಲವನ್ನು ಪೊಂದಲಿ, ಎಂದು ಹೇಳಿ ವಸಿಷ್ಠನು ಅಲ್ಲಿಯೇ ಅಂತರ್ಧಾನವಾದನು.

೨೬. ಮುಂದೆ ಆಗಣಗಳೆಲ್ಲವೂ ದೇವಾವಾಸವಾಗಿದ್ದ ಆ ಕಾಮರೂಪದಲ್ಲಿ ಮ್ಲೇಚ್ಛರಾದರು. ಉಗ್ರತಾರಾದೇವಿಯು ವಾಮಾದೇವಿಯಾದಳು. ಶಂಭುವು ಮ್ಲೇಚ್ಛರಿಗೆ ಪ್ರಿಯನಾದನು.

ವಾಮಾಭೂದುಗ್ರತಾರಾಪಿ ಶಂಭುರ್ಲೋಚ್ಛರತೋಽಭವತ್ ।
ಆಗಮಾ ವಿರಲಾಶ್ಚಾಸ್ಯ ಯೇ ಚ ಮುತ್ಪ್ರತಿಪಾದಕಾಃ ॥ ೨೭ ॥

ವೇದಮಂತ್ರವಿಹೀನಂ ತು ಚತುರ್ವರ್ಣವಿವರ್ಜಿತಂ ।
ಕಾಮರೂಪಂ ಕ್ಷಣಾಜ್ಜ್ಞಾತಂ ಯದ್ಯಮೇನಾನುಸಾರಿತಂ ॥ ೨೮ ॥

ಆಗಚ್ಛೇಽಪಿ ಹರೌ ಮುಕ್ತೇ ಶಾಪಾತ್ಪೀಠೇ ಫಲಪ್ರದೇ ।
ಯಥಾ ನ ಸಮ್ಯಕ್ಸಾಧ್ಯಂತಿ ತತ್ಪೀಠೇ ದೇವಮಾನುಷಾಃ ॥ ೨೯ ॥

ಗುಪ್ತಯೇ ಸರ್ವಕುಂಡಾನಾಂ ಬ್ರಹ್ಮೋಪಾಯಂ ತಥಾಕರೋತ್ ।
ಅಪುನರ್ಭವಕುಂಡಸ್ಯ ಸೋಮಕುಂಡಸ್ಯ ಚೋಭಯೋಃ ॥ ೩೦ ॥

ಬ್ರಹ್ಮೋರ್ವಶೀಕುಂಡಯೋಸ್ತು ನದೀನಾಮಪಿ ಭೂರಿಶಃ ।
ನದೀನಾಂ ಪೂರ್ವಮುಕ್ತಾನಾಮನುಕ್ತಾನಾಂ ಚ ಗುಪ್ತಯೇ ॥ ೩೧ ॥

೨೭-೨೯. ಕಾಮರೂಪಪೀಠವನ್ನು ಪ್ರತಿಪಾದಿಸುವ ಆಗಮಗಳು ಅಲ್ಲಿ ವಿರಲವಾದವು. ಆಗ ಕಾಮರೂಪದೇಶಲ್ಲಿ ವೇದಮಂತ್ರಗಳಾಗಲೀ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ,ಶೂದ್ರ, ರೆಂಬ ನಾಲ್ಕುವರ್ಣದವರಾಗಲಿ, ವರ್ಣಾಶ್ರಮಧರ್ಮವಾಗಲೀ, ಯಾವುದೂ ಇಲ್ಲವಾಯಿತು. ಆಗ ಅಲ್ಲಿ ಯಮನ ಅಧಿಕಾರಕ್ಕೆ ಯಾವ ತಡೆಯೂ ಇಲ್ಲವಾಯಿತು.

೨೯. ಆಗ ಹರಿಯು ಪುಣ್ಯಪ್ರದವಾದ ಆ ಪೀಠಕ್ಕೆ ಹೋಗಿ ಶಾಪವಿಮೋಚನೆಯನ್ನು ಮಾಡದಂತೆಯೂ, ದೇವಮನುಷ್ಯಾದಿಗಳು ಅಲ್ಲಿಗೆ ಹೋಗಿ ನೆಲಸದಂತೆಯೂ ಅಲ್ಲಿರುವ ಅನೇಕ ತೀರ್ಥಕುಂಡಗಳನ್ನು ಗೋಪ್ಯವಾಗಿರಿಸುವುದಕ್ಕಾಗಿ ಬ್ರಹ್ಮನು ಒಂದು ಉಪಾಯವನ್ನು ಮಾಡಿದನು.

೩೦-೩೧. ಅಪುನರ್ಭವ ಕುಂಡ, ಸೋಮಕುಂಡ, ಬ್ರಹ್ಮಕುಂಡ, ಊರ್ವಶೀ ಕುಂಡ, ಮತ್ತು ಹಿಂದೆ ಹೇಳಿದ ಅನೇಕನದಿಗಳು, ಹೇಳದಿರುವ ನದಿಗಳು ಇವುಗಳೆಲ್ಲವನ್ನೂ ಗುಪ್ತವಾಗಿರಿಸುವಂತೆಯೂ, ಅವುಗಳಿಂದ ಪ್ರತ್ಯೇಕವಾದ ಫಲಗಳು ಲಭಿಸದಿರುವಂತೆಯೂ ಬ್ರಹ್ಮನು ಈ ಉಪಾಯವನ್ನು ಮಾಡಿದನು.

ಸರ್ವಸ್ಯೈಕಫಲಜ್ಞಾನೇ ಬ್ರಹ್ಮೋತ್ಪಾಯಂ ತಥಾಕರೋತ್ ।
ಅಮೋಘಾಯಾಂ ಶಾಂತನೋಸ್ತು ಭಾರ್ಯಾಯಾಂ ತನಯಂ ಸ್ವಕಂ ॥

ಜಲರೂಪಂ ಸಮುತ್ಪಾದ್ಯ ಜಾಮದಗ್ನ್ಯೇನ ಧೀಮತಾ ।
ಅವತಾರಯದವ್ಯಗ್ರಂ ಪ್ಲಾವಯನ್ ಕಾಮರೂಪಕಂ ॥ ೩೩ ॥

ಸ ತು ಬ್ರಹ್ಮಸುತೋ ಧೀರಃ ಪ್ಲಾವಯನ್ ಕುಂಡಸಂಚಯಾನ್ ।
ಅಚ್ಛಾದ್ಯ ಸರ್ವತೀರ್ಥಾನಿ ಭುವಿ ಗುಪ್ತಾನಿ ಚಾಕರೋತ್ ॥ ೩೪ ॥

ಲೌಹಿತ್ಯಮಾತ್ರಂ ಯೇ ಕೇಚಿಜ್ಜಾನಂತಿ ತತ್ರ ವೈ ನರಾಃ ।
ತೇ ಲೌಹಿತ್ಯಸ್ನಾನಫಲಂ ಪ್ರಾಪ್ನುವಂತಿ ಸುನಿಶ್ಚಿತಂ ॥ ೩೫ ॥

ನ ಜಾನಂತಿ ಚ ಕುಂಡಾನಿ ನಾಪಿ ತೀರ್ಥಾನಿ ಚಾನ್ಯತಃ ।
ವಸಿಷ್ಠಶಾಪಾದೇತತ್ತು ಪ್ರವೃತ್ತಂ ತೀರ್ಥಗೋಪನಂ ॥ ೩೬ ॥

೩೨-೩೩. ಶಾಂತನು ಮುನಿಯ ಪತ್ನಿಯಾದ ಅಮೋಘಾದೇವಿಯಲ್ಲಿ ಸಮರ್ಥನಾದ ಪರುಶುರಾಮನ ಸಹಾಯದಿಂದ ತನ್ನ ಪುತ್ರನನ್ನು ಲೌಹಿತ್ಯವೆಂಬ ನದಿಯ ರೂಪದಿಂದ ಜನಿಸಿ, ಅದರಜಲದಿಂದ ಆ ಕಾಮರೂಪಪೀಠವನ್ನು ಮುಳುಗಿಸಲು ಆ ದೇಶದ ಮೇಲೆ ಹರಿಯಿಸಿದನು.

೩೪. ಆ ಜಲರೂಪನಾದ ಬ್ರಹ್ಮಪುತ್ರನು ಕಾಮರೂಪದಲ್ಲಿರುವ ಕುಂಡಗಳನ್ನೆಲ್ಲಾ ಮುಳುಗಿಸಿ, ಎಲ್ಲಾ ತೀರ್ಥಗಳನ್ನೂ ತನ್ನ ಪ್ರವಾಹದಿಂದ ಮುಚ್ಚಿ, ಭೂಮಿಯಲ್ಲಿ ರಹಸ್ಯವಾಗಿರುವಂತೆ ಮಾಡಿದನು.

೩೫. ಹೀಗಿರುವ ಆ ಸೀತದಲ್ಲಿ ಬ್ರಹ್ಮಪುತ್ರನಾದ ನದಿಯನ್ನು ಯಾರು ತಿಳಿಯುವರೋ ಅವರು ಆ ಲೌಹಿತ್ಯನದಿಯಲ್ಲಿ ಸ್ನಾನಮಾಡಿದ ಫಲವನ್ನು ಹೊಂದುವರು. ಇದು ನಿಶ್ಚಯವು.

೩೬. ಈ ಕಾರಣದಿಂದ ಅಲ್ಲಿ ಗುಪ್ತವಾಗಿರುವ ಕುಂಡಗಳನ್ನು ಯಾರೂ ತಿಳಿಯಲಾರರು. ಹೀಗೆ ವಸಿಷ್ಠಮುನಿಯ ಶಾಪದಿಂದ ಕಾಮರೂಪದ ತೀರ್ಥಗಳೆಲ್ಲವೂ ಗುಪ್ತವಾಗಿ, ಯಾರಿಗೂ ಕಾಣಿಸದಾದವು.

ಯಃ ಕಶ್ಚಿತ್ತತ್ರ ಜಾನಾತಿ ತೀರ್ಥಾನಾಂ ಚ ವಿಶೇಷತಾಂ ।
ಸಮುವಾಪ್ನೋತಿ ತತ್ಸ್ನಾನಫಲಂ ಸಮ್ಯಙ್ನರೋತ್ತಮ ॥ ೩೭ ॥

ಸರ್ವಾ ನದೀಃ ಸಮಾಪ್ಲಾವ್ಯ ಸರ್ವತೀರ್ಥಾನಿ ಸರ್ವತಃ ।
ಲೌಹಿತ್ಯೋ ಬ್ರಹ್ಮಣಃ ಪುತ್ರೋ ಯಾತಿ ದಕ್ಷಿಣಸಾಗರಂ ॥ ೩೮ ॥

ಏವಂ ತೇ ಕಥಿತಂ ರಾಜನ್ ಕಾಮರೂಪಸ್ಯ ಕೀರ್ತಿತಂ ।
ಯದನ್ಯದ್ಬ್ರೋಚತೇ ತುಭ್ಯಂ ತತ್ಪೃಚ್ಛ ನಿಗದಾಮಿ ತೇ ॥ ೩೯ ॥

॥ ಇತಿ ಶ್ರೀಕಾಲಿಕಾಪುರಾಣೇ ಚತುರಶೀತಿತಮೋಽಧ್ಯಾಯಃ ॥

---

೩೭. ಎಲೈ ನರೋತ್ತಮನೇ! ಆ ಕಾಮರೂಪದಲ್ಲಿ ಎಷ್ಟು ತೀರ್ಥಗಳಿರುವುವು? ಅವು ಯಾವುವು? ಎಂಬುದನ್ನಾದರೂ ಯಾವನು ತಿಳಿಯುವನೋ ಅವನು ಆ ಎಲ್ಲಾ ತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನು ಪಡೆಯುವನು.

೩೮. ಎಲ್ಲಾ ನದಿಗಳನ್ನೂ, ತೀರ್ಥಗಳನ್ನೂ ತನ್ನ ಪ್ರವಾಹದಿಂದ ಮುಚ್ಚಿ ಬ್ರಹ್ಮಸುತನಾದ ಲೌಹಿತ್ಯನದವು ದಕ್ಷಿಣಸಮುದ್ರವನ್ನು ಸೇರುವುದು.

೩೯. ಎಲೈ ರಾಜನೇ! ಹೀಗೆ ನಿನಗೆ ಕಾಮರೂಪದ ಇತಿಹಾಸವನ್ನು ಸಂಪೂರ್ಣವಾಗಿ ಹೇಳಿರುವೆನು, ಇನ್ನೇನನ್ನು ಕೇಳಬೇಕೆಂದಿರುವೆಯೋ ಕೇಳು, ಅದನ್ನು ಹೇಳುವೆನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತನಾಲ್ಕನೆಯ
ಅಧ್ಯಾಯವು ಮುಗಿದುದು

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಪಂಚಾಶೀತಿತಮೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ಔರ್ವಸ್ಯ ವಚನಂ ಶ್ರುತ್ವಾ ಸಗರಸ್ತಂ ಮುನಿಂ ಪುನಃ ।
ಪಪ್ರಚ್ಛೇದಂ ದ್ವಿಜಶ್ರೇಷ್ಠಾಃ ಹರ್ಷಸಂಪ್ಲುತಮಾನಸಃ ॥ ೧ ॥

॥ ಸಗರ ಉವಾಚ ॥

ಅಮೋಘಾಯಾಂ ಕಥಂ ಜಜ್ಞೇ ಲೌಹಿತ್ಯೋ ಬ್ರಹ್ಮಣಃ ಸುತಃ ।
ಕಥಂ ಶಾಂತನುಜಾಯಾಯಾಂ ರತಃ ಸ ಕಮಲಾಸನಃ ॥ ೨ ॥

ಪಾರಸ್ತ್ರೈಣೇಯಪುತ್ರೋ ವಾ ಕಥಂ ಜಜ್ಞೇ ಪಿತಾಮಹಾತ್ ।
ತತ್ಸರ್ವಂ ಶ್ರೋತುಮಿಚ್ಛಾಮಿ ಕಥಯಸ್ವ ದ್ವಿಜೋತ್ತಮ ॥ ೩ ॥

ಎಂಭತ್ತೈದನೆಯ ಅಧ್ಯಾಯವು.

೧. ಮಾರ್ಕಂಡೇಯಮುನಿಯು ಹೇಳಿದನು:—ಎಲೈ ಬ್ರಾಹ್ಮಣೋತ್ತಮರೇ! ಹೀಗೆ ಔರ್ವಮುನಿಯು ಹೇಳಿದ ಮಾತನ್ನು ಕೇಳಿ ಸಗರರಾಜನು ಸಂತೋಷಗೊಂಡು ತಿರುಗಿ ಆ ಮುನಿಯನ್ನು ಕುರಿತು ಪ್ರಶ್ನಿಸಿದನು.

೨. ಸಗರರಾಜನು ಹೇಳಿದನು:— ಓ ಮುನಿಯೇ! ಬ್ರಹ್ಮಪುತ್ರನಾದ ಲೌಹಿತ್ಯನದವು ಅಮೋಘೆಯಲ್ಲಿ ಹೇಗೆ ಜನಿಸಿತು? ಬ್ರಹ್ಮನೂ ಸಹ ಶಾಂತನುಮುನಿಯ ಪತ್ನಿಯಲ್ಲಿ ಹೇಗೆ ಆಸಕ್ತನಾದನು?

೩. ಲೋಕಪಿತಾಮಹನಾದ ಬ್ರಹ್ಮನು ಪರಸ್ತ್ರೀಯಲ್ಲಿ ಪುತ್ರನನ್ನು ಹೇಗೆ ಉತ್ಪಾದನೆ ಮಾಡಿದನು? ಎಲೈ ಬ್ರಾಹ್ಮಣೋತ್ತಮನೇ! ಇದೆಲ್ಲವನ್ನೂ ನಾನು ಕೇಳಲಿಚ್ಛಿಸುವೆನು, ಹೇಳುವವನಾಗು.

॥ ಔರ್ವ ಉವಾಚ ॥

ಶೃಣು ತ್ವಂ ರಾಜಶಾರ್ದೂಲ ಕಥಯಾಮಿ ಮಹತ್ತರಂ ।
ಆಖ್ಯಾನಂ ಬ್ರಹ್ಮಪುತ್ರಸ್ಯ ಲೌಹಿತ್ಯಸ್ಯ ಮಹಾತ್ಮನಃ ॥ ೪ ॥

ಹರಿವರ್ಷೇ ಮಹಾವರ್ಷೇ ಶಾಂತನುರ್ನಾಮ ನಾಮತಃ ।
ಮುನಿರಾಸೀನ್ಮಹಾಭೋಗೋ ಜ್ಞಾನವಾ೯ ಸ ತಪೋರತಃ ॥ ೫ ॥

ತಸ್ಯ ಭಾರ್ಯಾ ಮಹಾಭಾಗಾ ಅಮೋಘಾಖ್ಯಾ ಮಹಾಸತೀ ।
ಹಿರಣ್ಯಗರ್ಭಸ್ಯ ಮುನೇ ತೃಣಬಿಂದ್ವಾಶ್ರಮೋದ್ಭವಾ ॥ ೬ ॥

ತಯಾ ಸಾರ್ಧಂ ಸ ಕೈಲಾಸಂ ಮರ್ಯಾದಾಪರ್ವತೇ ವಸ೯ ।
ಲೋಹಿತಾಖ್ಯಸರಸಸ್ತೀರೇ ವೈ ಗಂಧಮಾದನೇ ॥ ೭ ॥

ಏಕದಾ ಸ ತಪೋನಿಷ್ಠೋ ನಿಜಪುಷ್ಪಾದಿಗೋಚರಂ ।
ಜಗಾಮ ವನಮಧ್ಯಂ ತು ಚಿನ್ವ೯ ಬಹುಫಲಾನಿಚ ॥ ೮ ॥

---

೪. ಔರ್ವಮುನಿ ಇಂತೆಂದನು:—ಎಲೈ ರಾಜೋತ್ತಮನೇ! ಕೇಳು, ಮಹಾತ್ಮನೂ, ಬ್ರಹ್ಮಪುತ್ರನೂ ಆದ ಲೌಹಿತ್ಯನ ಇತಿಹಾಸವನ್ನು ಹೇಳುವೆನು.

೫. ಹಿಂದೆ ಮಹಾ ಪ್ರಸಿದ್ಧವಾದ ಹರಿವರ್ಷವೆಂಬ ಭೂಖಂಡದಲ್ಲಿ ಶಾಂತನು ವೆಂದು ಪ್ರಸಿದ್ಧನಾದ ಓರ್ವ ಮುನಿಯು ಇದ್ದನು. ಅವನು ಮಹಾತ್ಮನೂ, ಜ್ಞಾನ ವಂತನೂ, ತುಂಬಾ ತಪಸ್ವಿಯೂ ಆಗಿದ್ದನು.

೬.ಅವನಿಗೆ ಉತ್ತಮಸ್ತ್ರೀಯೂ, ಪತಿವ್ರತೆಯೂ ಆದ ಅಮೋಘಾದೇವಿ ಎಂಬ ಪತ್ನಿಯಿದ್ದಳು. ಅವಳು ತೃಣಬಿಂದುಮುನಿಯ ಆಶ್ರಮದಲ್ಲಿ ಹಿರಣ್ಯಗರ್ಭಮುನಿ ಯಿಂದ ಜನಿಸಿದವಳು.

೭. ಆ ಅಮೋಘೆಯೊಡನೆ ಶಾಂತನುಮುನಿಯು ಕೈಲಾಸಪರ್ವತದಲ್ಲಿರುವ ಮರ್ಯಾದಾಪರ್ವತ (ಭೂಮಿಗೆ ಗಡಿಯಾದ ಪರ್ವತ) ವಾದ ಗಂಧಮಾದನ ಪರ್ವತ ದಲ್ಲಿ ಲೋಹಿತ್ಯವೆಂಬ ಸರಸ್ಸಿನ ದಡದಲ್ಲಿ ವಾಸಿಸುತ್ತಲಿದ್ದನು.

೮-೯. ಹೀಗಿರಲೊಂದುದಿನ ಆ ಮುನಿಯು ಫಲಪುಷ್ಪಾದಿಗಳನ್ನು ತರಲು

ತಸ್ಮಿನ್ನವಸರೇ ಬ್ರಹ್ಮಾ ಸರ್ವಲೋಕೇಪಿತಾಮಹಃ ।
ತತ್ರಾಜಗಾಮ ಯತ್ರಾಸ್ತಿ ಅಮೋಘಾ ಶಾಂತನೋಃ ಪ್ರಿಯಾ ॥ ೯ ॥

ತಾಂ ದೃಷ್ಟ್ವಾ ದೇವಗರ್ಭಾಭಾಂ ಯುವತೀಮತಿಸುಂದರೀಂ ।
ಮೋಹಿತೋ ಮದನೇನಾಶು ತದಾಭೂದ್ದೂಷಿತೇಂದ್ರಿಯಃ ॥ ೧೦ ॥

ಉದೀರಿತೇಂದ್ರಿಯೋ ಭೂತ್ವಾ ಜಿಘೃಕ್ಷುಸ್ತಾಂ ಮಹಾಸತೀಂ ।
ಅಥಾಧಾವತ್ತತೋ ಬ್ರಹ್ಮಾ ಸಂಮುಖೋ ಮದನಾರ್ದಿತಃ ॥ ೧೧ ॥

ಧಾವಮಾನಂ ವಿಧಾತಾರಂ ದೃಷ್ಟ್ವಾ ಮೋಹಾನ್ಮಹಾಸತೀ ।
ನೈವಂ ನೈವಮಿತಿ ಪ್ರೋಕ್ತ್ವಾ ಪರ್ಣಶಾಲಾಂ ವ್ಯಲೀಯತ ॥ ೧೨ ॥

ಇದಂ ಚೋವಾಚ ಧಾತಾರಮಮೋಘಾ ಕುಪಿತಾ ತದಾ ।
ಪರ್ಣಶಾಲಾಂತರಂ ಗತ್ವಾ ದ್ವಾರಮಾವೃತ್ಯ ತತ್ಕ್ಷಣಾತ್ ॥ ೧೩ ॥

ವನಕ್ಕೆ ಹೋದನು. ಇದೇಸಮಯದಲ್ಲಿ ಸಕಲಲೋಪಿತಾಮಹನಾದ ಬ್ರಹ್ಮನು ಶಾಂತನುಪತ್ನಿಯಾದ ಅಮೋಘಾದೇವಿ ಇರುವಲ್ಲಿಗೆ ಬಂದನು.

೧೦-೧೧. ಅಲ್ಲಿ ಯುವತಿಯೂ, ದೇವಸ್ತ್ರೀಯರಂತೆ ಅತಿ ಸುಂದರಿಯೂ, ಆದ ಆ ಅಮೋಘೆಯನ್ನು ಬ್ರಹ್ಮನು ದೋಡಿ ಮನ್ಮಥಪರವಶನಾಗಿ ಚಿತ್ತವಿಕಾರವನ್ನು ಹೊಂದಿ ಅವಳಲ್ಲಿ ರಮಿಸುವ ಇಚ್ಛೆಯಿಂದ ಪತಿವ್ರತೆಯಾದ ಆ ಅಮೋಘೆಯನ್ನು ಹಿಡಿಯಲೋಸುಗ ಅವಳ ಸಮೀಪಕ್ಕೆ ಓಡಿಬಂದನು.

೧೨-೧೪. ಮೋಹದಿಂದ ತನ್ನಬಳಿಗೆ ಓಡಿಬರುತ್ತಲಿರುವ ಬ್ರಹ್ಮನನ್ನು ನೋಡಿ ಪತಿವ್ರತೆಯಾದ ಅಮೋಘೆಯು ಹಾಗೆ ಮಾಡಬಾರದು, ಅದು ನಿಷಿದ್ಧ ಕಾರ್ಯವು ಎಂದು ಹೇಳುತ್ತಾ ಪರ್ಣಶಾಲೆಯೊಳಕ್ಕೆ ಹೋಗಿ ಬಾಗಿಲನ್ನು ಮುಚ್ಚಿ

ಅಕಾರ್ಯಂ ನ ಮಯಾ ಕಾರ್ಯಂ ಮುನಿಪತ್ನ್ಯಾ ವಿಗರ್ಹಿತಂ ।
ಬಲಾತ್ಪ್ರಮುಥ್ಯ ಚಾಹಂ ಚೇತ್ತ್ವಯಾ ತ್ವಾಂ ಚ ಶಪಾಮ್ಯಹಂ ॥ ೧೪ ॥

ಅಮೋಘಯಾ ಚೈವಮುಕ್ತೇ ವಿಧಾತುಶ್ಚ ತದಾ ನೃಪ ।
ರೇತಶ್ಚಸ್ಕಂದ ತತ್ರೈವ ಆಶ್ರಮೇ ಶಾಂತನೋರ್ಮುನೇಃ ॥ ೧೫ ॥

ಚ್ಯುತೇ ರೇತಸಿ ಧಾತಾಪಿ ಹಂಸಯಾನಂ ಸಮುತ್ಥಿತಃ ।
ಲಜ್ಜಯಾತಿಪರೀತಾತ್ಮಾ ದ್ರುತಂ ವೈ ಸ್ವಾಶ್ರಮಂ ಯಯೌ ॥ ೧೬ ॥

ಗತೇ ವೇಧಸಿ ಶಾಂತನುಶ್ಚ ನಿಜಮಾಶ್ರಮಮಾಗತಃ ।
ಆಗತ್ಯ ದೃಷ್ಟ್ವಾ ಹಂಸಾನಾಂ ಪದಕ್ಷೋಭಂ ತದಾ ಭುವಿ ॥ ೧೭ ॥

ತೇಜಶ್ಚ ಪತಿತಂ ಭೂಮೌ ವಿಧಾತುರ್ಜ್ವಲನೋಪಮಂ ।
ಅಮೋಘಾಂ ಪರಿಪಪ್ರಚ್ಛ ಪರ್ಣಶಾಲಾಂತರಸ್ಥಿತಾಂ ॥ ೧೮ ॥

ಕೊಂಡು, ಬಳಿಕ ಬ್ರಹ್ಮನನ್ನು ಕುರಿತು ನೀನು ಬಲಾತ್ಕರಿಸಿದರೆ ನಿನಗೆ ಶಾಪವನ್ನು ಕೊಡುವೆನು ಎಂದು ಕೋಪದಿಂದ ನುಡಿದಳು.

೧೫-೧೬. ಎಲೈ ರಾಜನೇ! ಹೀಗೆ ಅಮೋಘಾದೇವಿಯು ಹೇಳುತ್ತಿರುವಾಗಲೇ ಆ ಶಾಂತನುಮುನಿಯ ಆಶ್ರಮದಲ್ಲಿಯೇ ಬ್ರಹ್ಮನ ರೇತಸ್ಸು ಸ್ಖಲನವಾಯಿತು. ರೇತಸ್ಸು ಸ್ರವಿಸಿದ ಬಳಿಕ ಬ್ರಹ್ಮನು ತಾನು ಮಾಡಿದ ಕಾರ್ಯಕ್ಕಾಗಿ ತುಂಬಾ ಲಜ್ಜಿಗೊಂಡು, ಹಂಸವನ್ನೇರಿ ಕೂಡಲೇ ತನ್ನ ಆಶ್ರಮಕ್ಕೆ ಹೊರಟು ಹೋದನು.

೧೭-೧೮. ಬ್ರಹ್ಮನು ತೆರಳಿದಮೇಲೆ, ಇತ್ತ ಕಾಡಿಗೆ ಹೋಗಿದ್ದ ಶಾಂತನು ಮುನಿಯು ತನ್ನ ಆಶ್ರಮಕ್ಕೆ ಬಂದು ಭೂಮಿಯಲ್ಲಿ ಮೂಡಿರುವ ಹಂಸಗಳ ಹೆಜ್ಜೆಯ ಗುರುತನ್ನೂ, ಮತ್ತು ಭೂಮಿಯಲ್ಲಿ ಬಿದ್ದಿನುವ ಅಗ್ನಿಯಂತೆ ತೇಜಸ್ವಿಯಾದ ಬ್ರಹ್ಮದೇವನ ವೀರ್ಯವನ್ನೂ ನೋಡಿ, ಪರ್ಣಶಾಲೆಯ ಒಳಗೆ ಇದ್ದ ಅಮೋಘಾದೇವಿಯನ್ನು ಕರೆದು, ಎಲೌ ಸಾಧ್ವಿ, ಈ ಆಶ್ರಮದಲ್ಲಿ ಕಾಣುತ್ತಿರುವುದೇನು? ಇಲ್ಲಿ ಹಂಸ

ಪಕ್ಷಿಣಾಂ ಚ ಪದಕ್ಷೋಭಂ ತೇಜಶ್ಚೇದಂ ಚ ಕೀದೃಶಂ ।
ಕಿಮೇತದತ್ರ ಸುಭಗೇ ಪ್ರವೃತ್ತಂ ದೃಶ್ಯತೇ ತು ಯತ್ ॥ ೧೯ ॥

ಸಾ ತಸ್ಯ ವಚನಂ ಶ್ರುತ್ವಾ ಶಾಂತನುಂ ಮುನಿಸತ್ತಮಂ ।
ಅಮುಷ್ಯಿತೈವ ನ್ಯಗದದಾಕುಲಾ ವಿಕಾಲಾನನಾ ॥ ೨೦ ॥

ಹಂಸಯುಕ್ತಸ್ಯಂದನೇನ ಕೋಽಪ್ಯಾಗತ್ಯ ಚತುರ್ಮುಖಃ ।
ಕಮಂಡಲುಕರೋಽತಿವ ರತಿಂ ಮಾಂ ಸಮಯಾಚತ ॥ ೨೧ ॥

ತತೋ ಮಯಾ ತರ್ಜಿತಃ ಸ ಉಟಜಾಂತರಲೀನಯಾ ।
ಪ್ರಚ್ಯಾವ್ಯ ತೇಜಃ ಸಂಯಾಕ್ಷೋ ಮಮು ಶಾಪಭಯಾರ್ದಿತಃ ॥ ೨೨ ॥

ಕುರು ತತ್ರ ಪ್ರತೀಕಾರಂ ಯದಿ ಶಕ್ನೋಷಿ ಶಾಂತನೋ ।
ನ ಹೀಮಾಂ ಧರ್ಷಣಾಂ ಸೋಢುಂ ಕಶ್ಚಿಚ್ಛಕ್ನೋತಿ ಜೀವಭೃತ್ ॥ ೨೩ ॥

ಗಳ ಹೆಜ್ಜೆಗುರುತೂ, ಈ ರೇತಸ್ಸೂ ಕಾಣುತ್ತಿರುವುದು, ಇವರ ವಿಚಾರವೇನು? ಎಂದು ಕೇಳಿದನು.

೨೦-೨೩. ತನ್ನ ಪತಿಯಾದ ಶಾಂತನುಮುನಿಯ ಮಾತನ್ನು ಕೇಳಿ ಆ ಅಮೋಘೆಯ ಮುಖವು ವಿವರ್ಣವಾಯಿತು. ದುಃಖದಿಂದಲೂ, ಕೋಪದಿಂದಲೂ ಪರಿತಪಿಸುತ್ತಾ ಪತಿಯನ್ನು ಕುರಿತು--ಹಂಸಗಳನ್ನು ಕಟ್ಟಿರುವ ರಥದಲ್ಲಿ ಕುಳಿತು ದುರಾತ್ಮನೊಬ್ಬನು ಇಲ್ಲಿಗೆ ಬಂದಿದ್ದನು. ಅವನಿಗೆ ನಾಲ್ಕು ಮುಖಗಳಿದ್ದವು. ಕೈಯಲ್ಲಿ ಕಮಂಡಲುವನ್ನು ಹಿಡಿದಿದ್ದನು ಇಂತಹ ದುರಾಚಾರಿಯು ನನ್ನಬಳಿಗೆ ಬಂದು ರತಿಕ್ರೀಡೆಗಾಗಿ ನನ್ನನ್ನು ಬಲಾತ್ಕರಿಸಿದನು. ನಾನು ಹೆದರಿ ಪರ್ಣಶಾಲೆಯನ್ನು ಸೇರಿ ಕೊಂಡು, ಶಾಪವನ್ನು ಕೊಡುವೆನೆಂದು ಹೆದರಿಸಲು ಅವನು ಈ ವೀರ್ಯವನ್ನು ಇಲ್ಲಿ ಸ್ರವಿಸಿ, ನನ್ನ ಶಾಪಭಯವಿಂದ ಹಾಗೆಯೇ ಹೊರಟುಹೋದನು. ಓ ಶಾಂತನು ಮುನಿಯೇ! ಈ ವಿಷಯದಲ್ಲಿ ನಿನಗೆ ಶಕ್ತಿಯಿದ್ದರೆ ತಕ್ಕ ಪ್ರತೀಕಾರವನ್ನು ಕೂಡಲೇ ಮಾಡು, ಪ್ರಾಣಮಾತ್ರದಿಂದಿರುವ ಯಾವ ಪುರುಷನೂ ಇಂತಹ ಅವಮಾನವನ್ನು ಸಹಿಸಲಾರನು ಎಂದು ದುಃಖದಿಂದ ಹೇಳಿದಳು.

ಸ ತಸ್ಯಾ ವಚನಂ ಶ್ರುತ್ವಾ ಸ್ವಯಂ ಬ್ರಹ್ಮಾ ಸಮಾಗತಃ ।
ಇತಿ ನಿಶ್ಚಿತ್ಯ ಮನಸಾ ತದಾ ಧ್ಯಾನಪರೋಽಭವತ್ ॥ ೨೪ ॥

ದಿವ್ಯಜ್ಞಾನೇನ ಸ ಜ್ಞಾತ್ವಾ ದೇವಕಾರ್ಯಮುಪಸ್ಥಿತಂ ।
ತೀರ್ಥಾವತರಣಂ ಚಾಪಿ ಹಿತಾಯ ಜಗತಾಂ ಮುನಿಃ ॥ ೨೫ ॥

ಜ್ಞಾತ್ವೋದರ್ಕಂ ಚಿಂತಯಿತ್ವಾ ಸ್ವಭಾರ್ಯಾಮಿದಮಬ್ರವೀತ್ ।
ಇದಂ ತೇಜೋ ಬ್ರಹ್ಮಣಸ್ತ್ವಂ ಪಿಬಾನೋಘೇ ಮುಮಾಜ್ಞಯಾ ॥ ೨೬ ॥

ಹಿತಾಯ ಸರ್ವಜಗತಾಂ ದೇವಕಾರ್ಯಾರ್ಥಸಿದ್ಧಯೇ ।
ಭವತ್ಯಾ ನಿಕಟಂ ಬ್ರಹ್ಮಾ ಸ್ವಯಮೇವ ಸಮಾಗತಃ ॥ ೨೭ ॥

ತ್ವಾಮಪ್ರಾಪ್ಯ ಮಹತ್ಕೃತ್ಯಮಾವಯೋಃ ಸ ಸಮುಪ್ಯಚ ।
ಗತೋ ನಿಜಾಸ್ಪದಂ ತತ್ತ್ವಂ ಕರ್ತುಮರ್ಹಸಿ ತದ್ವಚಃ ॥ ೨೮ ॥

---

೨೪. ಈರೀತಿಯಾಗಿ ಅಮೋಘೆಯು ಹೇಳಿದ ಮಾತನ್ನು ಕೇಳಿ ಶಾಂತನು ಮುನಿಯು ಬ್ರಹ್ಮನೇ ಸಾಕ್ಷಾತ್ತಾಗಿ ತನ್ನ ಆಶ್ರಮಕ್ಕೆ ಬಂದಿದ್ದನೆಂದು ನಿಶ್ಚಯಿಸಿ ಅದರ ನಿಜಾಂಶವನ್ನು ತಿಳಿಯಲು ಧ್ಯಾನಮಗ್ನನಾದನು.

೨೫-೨೮. ಆ ಶಾಂತನುಮುನಿಯು ದಿವ್ಯದೃಷ್ಟಿಯಿಂದ ಆಗ ಪ್ರಾಪ್ತವಾಗಿರುವ ದೇವಕಾರ್ಯವನ್ನೂ, ಜಗತ್ತಿನ ಹಿತಕ್ಕಾಗಿ ಲೌಹಿತ್ಯ ತೀರ್ಥವನ್ನು ಭೂಮಿಯಲ್ಲಿ ಪರಿಯಿಸಬೇಕಾಗಿರುವುದನ್ನೂ, ಮತ್ತು ಮುಂದಿನ ಮಿಕ್ಕ ಸಮಾಚಾರಗಳನ್ನೂ ತಿಳಿದು ತನ್ನ ಪತ್ನಿಯನ್ನು ಕುರಿತು ಎಲೌ ಅಮೋಘೆಯೇ! ಇದು ಬ್ರಹ್ಮದೇವನ ವೀರ್ಯವು, ಇದನ್ನು ನನ್ನಪ್ಪಣೆಯಂತೆ ನೀನು ಪಾನಮಾಡು, ಹಾಗೆ ಮಾಡಿದರೆ ಜಗತ್ತಿಗೆ ಕ್ಷೇಮವೂ, ದೇವತೆಗಳ ಕಾರ್ಯಸಿದ್ಧಿಯೂ ಆಗುವುದು. ಎಲೌ ಸಾಧ್ವಿ, ನಿನ್ನಬಳಿಗೆ ಕ್ರೀಡೆಗಾಗಿ ಬ್ರಹ್ಮನು ತಾನಾಗಿಯೇ ಬಂದಿದ್ದನು. ಆಗ ಅವನು ನಿನ್ನನ್ನು ಪಡೆಯದೆ, ನಮ್ಮಿರ್ವರಿಗೆ ದೊಡ್ಡದೊಂದು ಕಾರ್ಯವನ್ನು ವಹಿಸಿ, ತನ್ನ ಸ್ಥಾನಕ್ಕೆ ಹೊರಟುಹೋಗಿರುವನು. ಆದುದರಿಂದ ನಾನು ಹೇಳಿದಂತೆ ಆಸಚರಿ ಎಂದನು.

ತಚ್ಛ್ರುತ್ವಾ ಶಾಂತನೋರ್ವಾಕ್ಯಮಮೋಘಾತೀವ ಲಜ್ಜಿತಾ ।
ಸಾಂತ್ವಯಂತೀವ ತಂ ಪ್ರಾಹ ಪತಿಂ ನತ್ವಾ ಮಹಾಸತೀ ॥ ೨೯ ॥

ನಾನ್ಯಸ್ಯ ತೇಜೋ ಧಾಸ್ಯಾಮಿ ನ ಚ ತೇ ವಿಮನಸ್ಕತಾ ।
ಅವಶ್ಯಂ ಯದಿ ಕರ್ತವ್ಯಂ ಪೀತ್ವಾ ತ್ವಂ ಮಯಿ ಚೋತ್ಸೃಜ ॥ ೩೦ ॥

ತತಸ್ತಸ್ಯಾ ವಚಃ ಶ್ರುತ್ವಾ ಯುಕ್ತಂ ತಥ್ಯಂ ಚ ಶಾಂತನುಃ ।
ಸ್ವಯಂ ಪೀತ್ವಾ ತು ತತ್ತೇಜಃ ಸ್ವಭಾರ್ಯಾಯಾಂ ನ್ಯಷೇಚಯತ್ ॥ ೩೧ ॥

ಸಂಕ್ರಾಮಿತೈಃ ಶಾಂತನುನಾ ತೇಜೋಭಿರ್ಬ್ರಹ್ಮಣಃ ಸತೀ ।
ಗರ್ಭಂ ದಧಾವಮೋಘಾಖ್ಯಾ ಹಿತಾಯ ಜಗತಾಂ ತತಃ ॥ ೩೨ ॥

ತಸ್ಯಾಃ ಕಾಲೇ ತು ಸಂಪ್ರಾಪ್ತೇ ನಾಸಾತೋ ಜಲಸಂಚಯಃ ।
ತನ್ಮಧ್ಯೇ ತನಯಶ್ಚಾಪಿ ನೀಲವಾಸಾಃ ಕೀರೀಟಧೃಕ್ ॥ ೩೩ ॥

೨೯-೩೦. ಶಾಂತನುವಿನ ಮಾತನ್ನು ಕೇಳಿ, ಮಹಾಸತಿಯಾದ ಅಮೋಘಾ ದೇವಿಯು ತುಂಬಾ ಲಜ್ಜೆಗೊಂಡು, ತನ್ನ ಪತಿಯನ್ನು ನಮಸ್ಕರಿಸಿ ಸೌಮ್ಯವಾದ ಮಾತಿನಿಂದ—ಓ ಮುನಿವರ್ಯನೇ! ಇನ್ನೊಬ್ಬರ ವೀರ್ಯವನ್ನು ನಾನು ಧರಿಸಲಾರೆನು, ನನ್ನ ಮಾತನ್ನು ಅನ್ಯಥಾ ಭಾವಿಸಲಾಗದು. ಅವಶ್ಯವಾಗಿ ಈ ಕಾರ್ಯವನ್ನು ಮಾಡಲೇಬೇಕಿದ್ದರೆ ನೀನೇ ಈ ರೇತಸ್ಸನ್ನು ಪಾನಮಾಡಿ ಬಳಿಕ ಅದನ್ನು ನನ್ನಲ್ಲಿ ವಿಸರ್ಜಿಸು ಎಂದು ನುಡಿದಳು.

೩೧. ಬಳಿಕ ಆ ಶಾಂತನುಮುನಿಯು ತನ್ನ ಪತ್ನಿಯು ಹೇಳಿದಮಾತು ಯುಕ್ತವೂ, ಸತ್ಯವೂ ಎಂದು ತಿಳಿದು ತಾನೇ ಆ ಬ್ರಹ್ಮವೀರ್ಯವನ್ನು ಪಾನಮಾಡಿ, ತನ್ನ ಪತ್ನಿಯಲ್ಲಿ ವಿಸರ್ಜಿಸಿದನು.

೩೨. ಹೀಗೆ ಶಾಂತನುಮುನಿಯು ತನ್ನ ಪತ್ನಿಯಾದ ಅಮೋಘೆಯಲ್ಲಿ ಬ್ರಹ್ಮನ ವೀರ್ಯವನ್ನು ನಿಷೇಕಿಸಲು ಅವಳು ಜಗತ್ತಿನ ಒಳಿತಕ್ಕಾಗಿ ಗರ್ಭವನ್ನು ಧರಿಸಿದಳು.

೩೩-೩೪. ಪ್ರಸವಕಾಲವು ಬರಲು ಆ ಅಮೋಘೆಯ ಮೂಗಿನಿಂದ ಜಲಧಾರೆಯು ಹೊರಟಿತು. ಆ ಜಲದ ಮಧ್ಯದಲ್ಲಿ ಶಿಶುವೊಂದಿದ್ದಿತು. ಆ ಶಿಶುವು ನೀಲವಾದವಸ್ತ್ರವನ್ನುಟ್ಟು ತಲೆಯಲ್ಲಿ ಕಿರೀಟವನ್ನು ಧರಿಸಿದ್ದಿತು. ಕಂಠದಲ್ಲಿ ರತ್ನ ಹಾರವಿದ್ದಿತು. ರಕ್ತಮಿಶ್ರವಾದಗೌರವರ್ಣದ ಶರೀರವೂ ನಾಲ್ಕು ಭುಜಗಳೂ,

ರತ್ನಮೂಲಾಸಮಾಯುಕ್ತೋ ರಕ್ತಗೌರಶ್ಚ ಬ್ರಹ್ಮವತ್ ।
ಚತುರ್ಭುಜಃ ಪದ್ಮವಿದ್ಯಾಧ್ವಜಶಕ್ತಿಧರಸ್ತಥಾ ॥ ೩೪ ॥

ಶಿಶುಮಾರಶಿರಸ್ಥಶ್ಚ ತುಲ್ಯಕಾಯೋ ಜಲೋತ್ಕರೈಃ ।
ತಜ್ಜಾತಂ ಚ ತಥಾಭೂತಂ ಶಾಂತನುರ್ಲೋಕಶಾಂತನುಃ ॥ ೩೫ ॥

ಚತುರ್ಣಾಂ ಪರ್ವತಾನಾಂ ಚ ಮಧ್ಯದೇಶೇ ನ್ಯವೀವಿಶತ್ ।
ಕೈಲಾಸಶ್ಚೋತ್ತರೇ ಪಾರ್ಶ್ವೇ ದಕ್ಷಿಣೇ ಗಂದಮಾಧನಃ ॥ ೩೬ ॥

ಜಾರುಧಿಃ ಪಶ್ಚಿಮೇ ಶೈಲಃ ಪೂರ್ವೇ ಚ ಶಂಬಕಾಹ್ವಯಃ ।
ತೇಷಾಂ ಮಧ್ಯೇ ಸ್ವಯಂ ಕುಂಡಂ ಪರ್ವತಾನಾಂ ವಿಧೇಃ ಸುತಃ ॥ ೩೭ ॥

ಕೃತ್ವಾತಿವವೃಧೇ ನಿತ್ಯಂ ಶರದೀವ ನಿಶಾಕರಃ ।
ತಂ ತೋಯಮಧ್ಯಗಂ ಪುತ್ರಮಾಸಾದ್ಯ ದ್ರುಹಿಣಃ ಸುತಂ ॥ ೩೮ ॥

ಇದ್ದವು. ಆ ಭುಜಗಳಲ್ಲಿ ಕಮಲ, ಧ್ವಜ, ಶಕ್ತಿ ಇವುಗಳನ್ನು ಧರಿಸಿ ಕೆಂಪುಮೀನಿನ ಮೇಲಿಕುಳಿತು, ಜಲರಾಶಿಯಂತೆ ಕಂಗೊಳಿಸುವ ಶರೀರಕಾಂತಿಯಿಂದ ಕೂಡಿ ಒಪ್ಪುತ್ತಿದ್ದಿತು.

೩೫. ಈ ರೀತಿ ಜಲರೂಪವಾಗಿ ಜನಿಸಿರುವ ಆ ಶಿಶುವನ್ನು ಲೋಕಕಲ್ಯಾಣಕ್ಕಾಗಿ ಶಾಂತನುಮುನಿಯು ನಾಲ್ಕು ಪರ್ವತಗಳ ಮಧ್ಯಪ್ರದೇಶದಲ್ಲಿ ಇಟ್ಟನು.

೩೬. ಕೈಲಾಸಪರ್ವತವು ಆ ಸ್ಥಳಕ್ಕೆ ಉತ್ತರದಿಕ್ಕಿನಲ್ಲಿರುವುದು. ದಕ್ಷಿಣದಲ್ಲಿ ಗಂದಮಾಧನ ಪರ್ವತವಿರುವುದು. ಪಶ್ಚಿಮದಲ್ಲಿ ಜಾರುಧಿಯೆಂಬ ಬೆಟ್ಟವೂ ಪೂರ್ವದಲ್ಲಿ ಶಂಕರವೆಂಬ ಬೆಟ್ಟವೂ ಇರುವುವು.

೩೭. ಈ ನಾಲ್ಕು ಬೆಟ್ಟಗಳ ಮಧ್ಯಪ್ರದೇಶದಲ್ಲಿ ಬ್ರಹ್ಮಪುತ್ರನಾದ ಕುಮಾರನು ತಾನೇ ಕುಂಡವೊಂದನ್ನು ನಿರ್ಮಿಸಿಕೊಂಡು ಶರತ್ಕಾಲದ ಶುಕ್ಲಪಕ್ಷದ ಚಂದ್ರನಂತೆ ದಿನದಿನವೂ ಬೆಳೆಯತೊಡಗಿದನು.

೩೮. ಜಲದ ಮಧ್ಯದಲ್ಲಿ ಬೆಳೆಯುತ್ತಿರುವ ಆ ತನ್ನ ಪುತ್ರನನ್ನು ಬ್ರಹ್ಮನು ಸ್ವೀಕರಿಸಿ, ಅವನಿಗೆ ದೇಹಶುದ್ಧಿಗಾಗಿ ಎಲ್ಲಾ ಸಂಸ್ಕಾರಗಳನ್ನೂ ಕ್ರಮವಾಗಿ ಮಾಡಿದನು.

ಕ್ರಮತಸ್ತಸ್ಯ ಸಂಸ್ಕಾರಾನಕರೋದ್ದೇಹಶುದ್ಧಯೇ ।
ಅಥ ಕಾಲೇ ಬಹುತಿಥೇ ವ್ಯತೀತೇ ಬ್ರಹ್ಮಣಃ ಸುತಃ ॥ ೫೯ ॥

ತೋಯರಾಶಿಸ್ವರೂಪೇಣ ವವೃಧೇ ಪಂಚಯೋಜನಾನ್ ।
ತಸ್ಮಿನ್ ದೇವಾಃ ಪಪುಃ ಸಸ್ನುರ್ದ್ವಿತೀಯ ಇವ ಸಾಗರೇ ॥ ೬೦ ॥

ಸಿತಾಮುಲಜಲೇ ಹೃದ್ಯೇ ದಿವ್ಯೈಶ್ಚಾಪ್ಸರಸಾಂ ಗಣೈಃ ।
ತಸ್ಮಿನ್ನವಸರೇ ರಾಮೋ ಜಾಮದಗ್ನ್ಯಃ ಪ್ರತಾಪವಾನ್ ॥ ೬೧ ॥

ಚಕ್ರೇ ಮಾತೃವಧಂ ಘೋರಮಯುಕ್ತಂ ಪಿತುರಾಜ್ಞಯಾ ।
ತಸ್ಯ ಪಾಪಸ್ಯ ಮೋಕ್ಷಾಯ ಸ್ವಪಿತುಶ್ಚೋದೇಶತಃ ॥ ೬೨ ॥

ಸ ಜಗಾಮ ಮಹಾಕುಂಡಂ ಬ್ರಹ್ಮಾಖ್ಯಂ ಸ್ನಾತುಮಿಚ್ಛಯಾ ।
ತತ್ರ ಸ್ನಾತ್ವಾ ಚ ಪೀತ್ವಾ ಚ ಮಾತೃಹತ್ಯಾಮಪಾನಯತ್ ॥ ೬೩ ॥

---

೫೯. ಆಮೇಲೆ ಬಹುಕಾಲ ಕಳೆಯಲು, ಆ ಬ್ರಹ್ಮಪುತ್ರನು ಜಲರಾಶೀ ರೂಪದಿಂದ ಐದು ಯೋಜನದಷ್ಟು ವಿಸ್ತಾರವಾಗಿ ಬೆಳೆದನು.

೬೦. ಆ ಜಲರಾಶಿಯಾದರೋ ಎರಡನೆಯ ಸಮುದ್ರದಂತೆ ಅಗಾಧವಾಗಿದ್ದಿತು. ಅದರ ಜಲವು ಸ್ವಚ್ಛವಾಗಿಯೂ, ಮನೋಹರವಾಗಿಯೂ ಇದ್ದಿತು. ಇಂತಹ ದಿವ್ಯ ಜಲದಲ್ಲಿ ದೇವತೆಗಳು ಅಪ್ಸರಸ್ತ್ರೀಯರೊಡನೆ ಬಂದು ಸ್ನಾನ ಪಾನಾದಿಗಳನ್ನು ಮಾಡುತ್ತಿದ್ದರು.

೬೧. ಇದೇಸಮಯದಲ್ಲಿ ಜಮದಗ್ನಿಪುತ್ರನೂ, ಮಹಾ ಪರಾಕ್ರಮಶಾಲಿಯೂ ಆದ ಪರಶುರಾಮನು ತನ್ನ ತಂದೆಯ ಆಜ್ಞೆಯಂತೆ ಘೋರವೂ, ಅಯೋಗ್ಯವೂ ಆದ ತನ್ನ ತಾಯಿಯ ವಧವನ್ನು ಮಾಡಿದನು.

೬೨-೬೩. ತಾಯಿಯನ್ನು ಕೊಂದ ಪಾಪವನ್ನು ಪೋಗಲಾಡಿಸಿಕೊಳ್ಳಲು ತನ್ನ ತಂದೆಯ ಉಪದೇಶದಂತೆ ಆ ಬ್ರಹ್ಮಕುಂಡಕ್ಕೆ ಬಂದು, ಅಲ್ಲಿ ಸ್ನಾನಪಾನಗಳನ್ನು ಮಾಡಿ ತಾಯಿಯನ್ನು ಕೊಂದ ಪಾಪವನ್ನು ಪರಿಹರಿಸಿಕೊಂಡನು. ಮತ್ತು ತನ್ನ ಕೊಡಲಿಯಿಂದ ಒಂದು ಕಾಲುವೆಯನ್ನು ಮಾಡಿ ಆ ಕುಂಡದ ಜಲವನ್ನು ಭೂಮಿಯಲ್ಲಿ ಪರಿಯಿಸಿದನು.

ವೀಥೀಂ ಪರಶುನಾ ಕೃತ್ವಾ ತಂ ಮಹ್ಯಾಮವತಾರಯತ್ ।
॥ ಸಗರ ಉವಾಚ ॥
ಜಮದಗ್ನೇಃ ಸುತೋ ರಾಮಃ ಕಿಮರ್ಥಂ ನಿಜಮಾತರಂ ॥ ೪೪ ॥

ಜಘಾನ ತಸ್ಯ ಮಾತಾ ಚ ಕಿನ್ನಾಮ್ನೀ ಕಸ್ಯ ಚಾತ್ಮಜಾ ।
ಮುನೇಃ ಪುತ್ರೋ ಕಥಂ ಜಾತಃ ತಥಾ ಕ್ರೂರೋ ಮಹಾಬಲಃ ॥ ೪೫ ॥

ಯೋ ಯುದ್ಧಕುಶಲೋ ವೀರೋ ರಾಜನ್ಯಾ ಸಮುಪೋತಯತ್ ।
ತದಹಂ ಶ್ರೋತುಮಿಚ್ಛಾಮಿ ತತ್ತ್ವತೋ ಮುನಿಸತ್ತಮ ॥ ೪೬ ॥

ಕಥಯಸ್ವ ಮಹಾಭಾಗ ಯದಿ ಗುಹ್ಯಂ ತಥಾಪಿ ಮೇ ।
॥ ಔರ್ವ ಉವಾಚ ॥
ಶೃಣು ರಾಜನ್ನವಹಿತೋ ಜಮದಗ್ನೇಃ ಸುತಸ್ಯ ವೈ ॥ ೪೭ ॥

ಚರಿತಂ ಸ ಯಥಾ ಜಘ್ನೇ ಪ್ರಸೂಂ ಕ್ರೂರತರಶ್ಚ ಸಃ ।
ಬ್ರಹ್ಮಪುತ್ರೋ ಭೃಗುರ್ನಾಮ ಋಚೀಕಸ್ತತ್ಸುತೋಽಭವತ್ ॥ ೪೮ ॥

೪೪-೪೬. ಸಗರರಾಜನು ಕೇಳಿದನು:—ಓ ಮುನಿಯೇ! ಜಮದಗ್ನಿಪುತ್ರನಾದ ಪರಶುರಾಮನು ತನ್ನ ತಾಯಿಯನ್ನು ಏಕೆ ಕೊಂದನು? ಅವನ ತಾಯಿಯು ಹೆಸರೇನು? ಅವಳು ಯಾರ ಮಗಳು? ಆ ಪರಶುರಾಮನು ಯುದ್ಧಕುಶಲನೂ, ಮಹಾಪರಾಕ್ರಮಿಯೂ ಆಗಿದ್ದು ಕ್ಷತ್ರಿಯರನ್ನೆಲ್ಲಾ ನಾಶಗೊಳಿಸಿರುವನೆಂದು ಕೇಳಿರುವೆವು. ಇಂತಹ ಮುನಿಪುತ್ರನು ತನ್ನ ತಾಯಿಯನ್ನು ಕೊಲ್ಲುವಷ್ಟು ಕ್ರೂರನಾದಬಗೆಯೆಂತು? ಎಲೈ ಮುನಿಶ್ರೇಷ್ಠನೇ! ಆ ಇತಿಹಾಸವನ್ನು ಸಂಪೂರ್ಣವಾಗಿ ನಾನು ಕೇಳಬಯಸುವೆನು. ಅತಿ ರಹಸ್ಯವಾದುದಾದರೂ ಈ ವೃತ್ತಾಂತವನ್ನು ನನಗೆ ಹೇಳುವವನಾಗು.

೪೭. ಔರ್ವಮುನಿಯು ಹೇಳಿದನು:—ಎಲೈ ರಾಜನೇ! ಸಾವಧಾನವಾಗಿ ಕೇಳು. ಜಮದಗ್ನಿಪುತ್ರನಾದ ಪರಶುರಾಮನು ತಾಯಿಯನ್ನು ಹೇಗೆ ಕೊಂದನೆಂಬುದನ್ನೂ, ಮತ್ತು ಅವನು ಅತಿ ಕ್ರೂರನಾದುದೇಕೆಂಬುದನ್ನೂ ಹೇಳುವೆನು.

೪೮. ಭೃಗುವೆಂಬ ಬ್ರಹ್ಮಮಾನಸಪುತ್ರನಿಗೆ ಋಚೀಕನೆಂಬ ಪುತ್ರನಿದ್ದನು. ಆ ಮುನಿಯು ಮದುವೆಯನ್ನು ಮಾಡಿಕೊಳ್ಳಬೇಕೆಂದು ಕನ್ಯಾನ್ವೇಷಣಕ್ಕಾಗಿ ಭೂಮಿಯಲ್ಲಿ ಸಂಚರಿಸುತ್ತಾ ಕನ್ಯಾಕುಬ್ಜದೇಶಕ್ಕೆ ಹೋದನು.

ಸ ಭಾರ್ಯಾರ್ಥೀ ಚರನ್ ಭೂಮೌ ಕಾನ್ಯಕುಬ್ಜಂ ಗತಃ ಪುರಾ ।
ದದರ್ಶ ಚಾರಣ್ಯಗತಂ ಜಹ್ನೋರ್ವಂಶಸಮುದ್ಭವಂ ॥ ೪೯ ॥

ಕುಶಿಕಸ್ಯ ಸುತಂ ಗಾಧಿಂ ತಪಸ್ಸ್ಥಂ ನೃಪಸತ್ತಮ ।
ಅರಣ್ಯಸ್ಥಸ್ಯ ತಸ್ಯಾಥ ಪುತ್ರಕಾಮಸ್ಯ ಭೂಭೃತಃ ॥ ೫೦ ॥

ಸಭಾರ್ಯಸ್ಯ ಸುತಾ ಜಜ್ಞೇ ದೇವಕನ್ಯಾಸಮಾ ಗುಣೈಃ ।
ಋಚೀಕೋ ಭೃಗುಪುತ್ರಸ್ತಾಂ ಭಾರ್ಯಾರ್ಥಂ ಸಮಯಾಚತ ॥ ೫೧ ॥

ಗಾಧಿಂ ನೃಪತಿಶಾರ್ದೂಲಂ ಸ ಚೋವಾಚ ನೃಪೋ ಮುನಿಂ ।
ದಾತುಂ ಯೋಗ್ಯಾ ಸುತಾ ಮೇಽದ್ಯ ತ್ವದ್ವಿಧಾಯ ಮಹಾಮುನೇ ॥ ೫೨ ॥

ಕಂ ತ್ವೇಕಃ ಕುಲಧರ್ಮೋ ಮೇ ವಿದ್ಯತೇ ಶುಲ್ಕಸಂಗ್ರಹೇ ।
ಏಕತ್ರ ಕೃಷ್ಣವರ್ಣಾನಾಮಶ್ವಾನಾಂ ಚಾಂದ್ರವರ್ಚಸಾಂ ॥ ೫೩ ॥

೪೯-೫೦. ಆ ದೇಶದ ಅರಣ್ಯಪ್ರದೇಶದಲ್ಲಿ ಸಂಚರಿಸುತ್ತಿರುವಾಗ ಜನ್ಹುವೆಂಬ ಮುನಿಯ ವಂಶದಲ್ಲಿ ಹುಟ್ಟಿದವನೂ, ಕುಶಿಕನೆಂಬ ರಾಜನಮಗನೂ ಆದ ಗಾಧಿಯೆಂಬ ರಾಜನನ್ನು ನೋಡಿದನು. ಆ ಗಾಧಿರಾಜನು ತನಗೆ ಪುತ್ರರಾಗಬೇಕೆಂಬ ಬಯಕೆಯಿಂದ ಅರಣ್ಯದಲ್ಲಿ ತಪಸ್ಸನ್ನಾಚರಿಸುತ್ತಾ ಪತ್ನಿಯೊಡನಿದ್ದನು. ಆಗ ಅವನಿಗೆ ದೇವಕನ್ಯೆಯರಂತೆ ರೂಪವತಿಯೂ, ಗುಣವತಿಯೂ ಆದ ಪುತ್ರಿಯೋರ್ವಳು ಜನಿಸಿದಳು.

೫೧-೫೩. ಭೃಗುಪುತ್ರನಾದ ಋಚೀಕಮುನಿಯು ಆ ಗಾಧಿರಾಜನ ಪುತ್ರಿಯನ್ನು ತನಗೆ ವಿವಾಹಮಾಡಿಕೊಡೆಂದು ರಾಜನನ್ನು ಯಾಚಿಸಿದನು. ಆಗ ಆ ರಾಜನು ಮುನಿಯನ್ನು ಕುರಿತು ಓ ಮಹಾಮುನಿಯೇ! ನನ್ನ ಪುತ್ರಿಯು ನಿನ್ನಂತವನಿಗೆ ಕೊಡಲು ಯೋಗ್ಯಳಾಗಿರುವಳು, ಆದರೆ ಪುತ್ರಿಯನ್ನು ಕೊಟ್ಟು ಪ್ರತಿಯಾಗಿ ಸ್ತ್ರೀಶುಲ್ಕವನ್ನು(ವಧೂ ದಕ್ಷಿಣೆಯನ್ನು) ತೆಗೆದುಕೊಳ್ಳುವ ವಿಷಯದಲ್ಲಿ ನಮ್ಮ ಕುಲಧರ್ಮವೊಂದಿರುವುದು. ಒಂದುಭಾಗ ಕಪ್ಪಾಗಿಯೂ, ಮತ್ತೊಂದುಭಾಗ ಚಂದ್ರನಂತೆ ಬೆಳ್ಳಗೂ ಇರುವ ಒಂದುಸಾವಿರ ಕುದುರೆಗಳನ್ನು ಯಾವನು ತಂದುಕೊಡುವನೋ ಅವನಿಗೆ ನನ್ನ ಪುತ್ರಿಯನ್ನು ಕೊಡುವೆನು ಎಂದು ಹೇಳಿದನು.

ಸಹಸ್ರಮೇಕಂ ಯೋ ದದ್ಯಾತ್ತಸ್ಮೈ ಪುತ್ರೀ ಪ್ರದೀಯತೇ ।
॥ ಋಚೀಕ ಉವಾಚ ॥
ದಾಸ್ಯಾಮ್ಯಶ್ವಸಹಸ್ರಂ ವೈ ತವ ರಾಜಂಸ್ತಥಾವಿಧಂ ॥ ೫೪ ॥

ಕಂಚಿತ್ಕಾಲಂ ಪ್ರತೀಕ್ಷಸ್ವ ಯಾವತ್ತದಪಮಾನಯೇ ।
ಏವಮಸ್ತ್ವಿತಿ ತಂ ಗಾಧಿರುವಾಚ ಭೃಗುಸೂನವೇ ॥ ೫೫ ॥

ಗಂಗಾತೀರಂ ಕಾನ್ಯಕುಬ್ಜಂ ಸೋಗಚ್ಛದ್ಧ್ಯಯಸಾಧನೇ ।
ತತ್ರಾರಾಧ್ಯ ಭೃಗೋಃ ಪುತ್ರೋ ವರುಣಂ ಯಾದಸಾಂ ಪತಿಂ ॥ ೫೬ ॥

ತೇನ ದತ್ತಂ ತದಾ ಲೇಭೇ ಸಹಸ್ರಂ ವಾಜಿನಾಂ ಮುನಿಃ ।
ತೇನ ಯತ್ರ ತದಾ ಲಬ್ಧ್ವಾ ಅಶ್ವಾನ್ನೃಪತಿಸತ್ತಮ ॥ ೫೭ ॥

ಅಶ್ವತೀರ್ಥಮಿತಿ ಖ್ಯಾತಂ ಮಹಾಫಲಕರಂ ಪರಂ ।
ಗಂಗಾಜಲಾದುತ್ಥಿತಂ ತು ದತ್ತಂ ಸಮ್ಯಕ್ಪ್ರಚೇತಸಾ ॥೫೮ ॥

೫೪-೫೬. ಋಚೀಕಮುನಿಯು ಇಂತೆಂದನು:—ಎಲೈ ರಾಜನೇ! ನೀನು ಹೇಳಿದಂತೆ ಸಾವಿರ ಕುದುರೆಗಳನ್ನು ತಂದುಕೊಡುವೆನು. ನಾನು ಅವುಗಳನ್ನು ತರುವವರೆಗೆ ಸ್ವಲ್ಪಕಾಲವನ್ನು ಪ್ರತೀಕ್ಷಿಸು ಎಂದು ಹೇಳಲು, ಹಾಗೆಯೇ ಆಗಲಿ ಎಂದು ಗಾಧಿರಾಜನು ಋಚೀಕನಿಗೆ ಹೇಳಿದನು. ಆ ಮುನಿಯೂ ಸಹ ಕುದುರೆಗಳನ್ನು ಸಂಪಾದಿಸಲು ಕಾನ್ಯಕುಬ್ಜದಲ್ಲಿ ಗಂಗಾನದಿಯದಡಕ್ಕೆ ಹೋಗಿ ಅಲ್ಲಿ ಜಲಪತಿಯಾದ ವರುಣನನ್ನು ಅರ್ಚಿಸಿ ಅವನಿಂದ ಹಿಂದೆ ಹೇಳಿದಂತಹ ಒಂದುಸಾವಿರ ಕುದುರೆಗಳನ್ನು ಪಡೆದನು.

೫೭. ಎಲೈ ರಾಜೇಂದ್ರನೇ! ಆ ಮುನಿಯು ವರುಣನಿಂದ ಕುದುರೆಗಳನ್ನು ಪಡೆದ ಸ್ಥಾನಕ್ಕೆ ಅಶ್ವತೀರ್ಥವೆಂದು ಹೆಸರು. ಆ ತೀರ್ಥವು ಮಹಾ ಫಲವನ್ನು ಕೊಡುವುದು.

೫೮. ವರುಣನು ಕೊಟ್ಟ ಆ ಕುದುರೆಗಳು ಗಂಗಾಜಲದಿಂದ ಉದ್ಭವಿಸಿ ಹೊರಟುಬಂದವು. ಅವುಗಳನ್ನು ತೆಗೆದುಕೊಂಡು ಋಚೀಕಮುನಿಯು ಗಾಧಿರಾಜನ ಬಳಿಗೆ ಬಂದನು.

ಆದಾಯಾಶ್ವಸಹಸ್ರಂ ತು ಮುನಿರ್ಗಾಧಿಮುಖಾಭ್ಯಯಾತ್ ।
ತಾನಶ್ವಾ ಗಾಧಿರಾದಾಯ ಪುತ್ರೀಂ ಸತ್ಯವತೀಂ ಸುತಾಂ ॥ ೫೯ ॥

ಋಚೀಕಾಯ ದದೌ ಲಕ್ಷ್ಮ್ಯೀಂ ಕೇಶವಾಯೇವ ಸಾಗರಃ ।
ಋಚೀಕೋ ಗಾಧಿತನಯಾಂ ಲಬ್ಧ್ವಾ ಭಾರ್ಯಾಮನಿಂದಿತಾಂ ॥ ೬೦ ॥

ಮುದಿತಃ ಸ ತಯಾ ರೇಮೇ ಯಥಾಕಾಮಂ ಸ್ವಮಾಶ್ರಮೇ ॥
ಕೃತದಾರಂ ಸುತಂ ಶ್ರುತ್ವಾ ದ್ರಷ್ಟುಂ ಪುತ್ರಂ ಸ್ನುಷಾಂ ಭೃಗುಃ ॥ ೬೧ ॥

ಅಥಾಜಗಾಮ ಮತಿಮಾನ್ಸ್ನುಷಾಂ ದೃಷ್ಟ್ವಾ ನನಂದ ಚ ।
ದಂಪತೀ ತಂ ಸಮಾಸೀನಂ ಭೃಗುಂ ದೇವಗಣಾರ್ಚಿತಂ ॥ ೬೨ ॥

ಪೂಜಯಿತ್ವಾ ಯಥಾನ್ಯಾಯಂ ತಸ್ಥತುಸ್ತೌ ಕೃತಾಂಜಲೀ ।
ತತೋ ಭೃಗುಃ ಸ್ನುಷಾಂ ಸ್ವೀಯಾಂ ಸುಪ್ರೀತ ಇದಮಬ್ರವೀತ್ ॥ ೬೩ ॥

---

೫೯. ಆ ಕುದುರೆಗಳನ್ನು ತೆಗೆದುಕೊಂಡು, ಲಕ್ಷ್ಮಿಯನ್ನು ವಿಷ್ಣುವಿಗೆ ಸಮುದ್ರನು ಕೊಟ್ಟಂತೆ, ಗಾಧಿರಾಜನು ತನ್ನ ಪುತ್ರಿಯಾದ ಸತ್ಯವತಿಯನ್ನು ಋಚೀಕ ಮುನಿಗೆ ಕೊಟ್ಟನು.

೬೦. ಋಚೀಕಮುನಿಯು ಗುಣವತಿಯಾದ ಗಾಧಿಪುತ್ರಿಯನ್ನು ಪತ್ನಿಯಾಗಿ ಪಡೆದು ಸಂತೋಷದಿಂದ ತನ್ನ ಆಶ್ರಮಕ್ಕೆ ಹೋಗಿ ಅಲ್ಲಿ ಅವಳೊಡನೆ ಯಥೇಚ್ಛವಾಗಿ ಕ್ರೀಡಿಸುತ್ತಿದ್ದನು.

೬೧. ತನ್ನ ಪುತ್ರನಾದ ಋಚೀಕನು ಮದುವೆ ಮಾಡಿಕೊಂಡದ್ದನ್ನು ಕೇಳಿ, ಜ್ಞಾನಿಯಾದ ಭೃಗುಮುನಿಯು ಮಗನನ್ನೂ, ಸೊಸೆಯನ್ನೂ ನೋಡಲು ಋಚೀಕನ ಆಶ್ರಮಕ್ಕೆ ಬಂದು ಸೊಸೆಯನ್ನು ನೋಡಿ ಆನಂದಪಟ್ಟನು.

೬೨. ಆ ದಂಪತಿಗಳು ದೇವಪೂಜಿತನಾದ ಭೃಗುಮಹರ್ಷಿಯನ್ನು ಯೋಗ್ಯವಾದ ಆಸನದಲ್ಲಿ ಕುಳ್ಳರಿಸಿ ಸತ್ಕರಿಸಿದರು. ಬಳಿಕ ಅಂಜಲಿಬದ್ಧರಾಗಿ ಆ ಮುನಿಯ ಎದುರಿಗೆ ನಿಂತಿದ್ದರು.

೬೩-೬೪. ಬಳಿಕ ಭೃಗುಮುನಿಯು ತನ್ನ ಸೊಸೆಯನ್ನು ನೋಡಿ ಸಂತೋಷಗೊಂಡು, ಎಲೌ ಉತ್ತಮಸ್ತ್ರೀಯೇ! ನಿನಗೆ ಬೇಕಾದ ವರವನ್ನು ಕೇಳು, ಕೊಡು

ವರಂ ವೃಣೀಷ್ವ ದಾಸ್ಯಾಮಿ ವಾಂಛಿತಂ ವರವರ್ಣಿನಿ ।
ಅದೇಯಂ ದುಷ್ಕರಂ ವಾಪಿ ಯತ್ರ ತೇ ವಿದ್ಯತೇ ಸ್ಪೃಹಾ ॥ ೬೪ ॥

ತತಃ ಸತ್ಯವತೀ ಪುತ್ರಂ ತಪಸಾವ್ನಾಯಪಾರಗಂ ।
ಮಾತುಶ್ಚ ವೀರಮತುಲಂ ಪುತ್ರಂ ವರಮಯಾಚತ ॥ ೬೫ ॥

ಸ ಚೈವಮಸ್ತ್ವಿತ್ಯುಕ್ತ್ವೈವ ಭೂತ್ವಾ ಧ್ಯಾನಪರಸ್ತದಾ ।
ವಿಶ್ವಮಾವೃತ್ಯ ಮನಸಾ ಯತ್ನಾಚ್ಛ್ವಾಸಂ ಸಸರ್ಜ ಸಃ ॥ ೬೬ ॥

ತಸ್ಯಃ ನಿಶ್ವಾಸವಾತಾತ್ತು ನಿಃಸೃತಂ ವೈ ಚರುದ್ವಯಂ ।
ತಸ್ಯೈ ತದ್ದ್ವಿತಯಂ ದತ್ವಾ ಭೃಗುಸ್ತಾಮಿದಮಬ್ರವೀತ್ ॥ ೬೭ ॥

ಚರುದ್ವಯಂ ಗೃಹಾಣೇದಂ ಸ್ನುಷೇ ಸತ್ಯವತಿ ಸ್ವಯಂ ।
ಸ್ನಾತ್ವಾ ಋತೌ ಋತೌ ಮಾತಾ ಸ್ನುಷೇ ತ್ವಂ ಚ ಕರಿಷ್ಯಥಃ ॥ ೬೮ ॥

ವೆನು. ಅದು ಅಸಾಧ್ಯವಾದುದಾದರೂ ಚಿಂತೆಯಿಲ್ಲ. ನಿನ್ನ ಅಪೇಕ್ಷೆ ಏನಿರುವುದೋ ಹೇಳು, ಅದನ್ನು ನೆರವೇರಿಸಿ ಕೊಡುವೆನು ಎಂದು ಹೇಳಿದನು.

೬೫. ಇದನ್ನು ಕೇಳಿ ಸತ್ಯವತಿಯು, ತನಗೆ ತಪೋನಿರತನೂ ವೇದನಿಷ್ಣಾತನೂ ಆದ ಪುತ್ರನಾಗಬೇಕೆಂದೂ, ತನ್ನ ತಾಯಿಗೆ ತುಂಬ ವೀರನಾದ ಪುತ್ರನು ಜನಿಸಬೇಕೆಂದೂ ವರವನ್ನು ಕೇಳಿಕೊಂಡಳು.

೬೬. ಆಗ ಆ ಭೃಗುಮುನಿಯು ಹಾಗೆಯೇ ಆಗಲಿ, ಎಂದುಹೇಳಿ ಆಕೂಡಲೇ ಧ್ಯಾನಮಗ್ನನಾಗಿ ಮನಸ್ಸಿನಿಂದ ಸಕಲವನ್ನೂ ಆಕ್ರಮಿಸಿ, ಪ್ರಯತ್ನದಿಂದ ದೀರ್ಘವಾದ ಶ್ವಾಸವನ್ನು ಬಿಟ್ಟನು.

೬೭. ಆ ಭೃಗುಮುನಿಯು ಉಸಿರುಗಳಿಂದ ಎರಡು ಚರುಗಳು ಜನಿಸಿದವು. ಆ ಚರುಭಾಗಗಳನ್ನು ಭೃಗುಮುನಿಯು ಸತ್ಯವತಿಗೆ ಕೊಟ್ಟು ಹೀಗೆ ಹೇಳಿದನು.

೬೮. ಸೊಸೆಯಾದ ಎಲೌ ಸತ್ಯವತೀ! ಈ ಚರುಭಾಗಗಳೆರಡನ್ನು ತೆಗೆದುಕೋ. ನೀನೂ ನಿನ್ನ ತಾಯಿಯೂ ಸಹ ಋತುಸ್ನಾನವಾದಮೇಲೆ ಈ ಚರುಗಳನ್ನು ಕ್ರಮವಾಗಿ ಸೇವಿಸಿ.

ಆಲಿಂಗ್ಯಾಶ್ವತ್ಥವೃಕ್ಷಂ ತೇ ಮಾತಾ ಪುಂಸವನಾಯ ವೈ ।
ಚರು ಮಾರಕ್ತಕಂ ತೇಮಂ ಸಾ ಭೋಕ್ಷ್ಯತಿ ಸುತಸ್ತತಃ ॥ ೬೯ ॥

ತ್ವಂ ಚೋದುಂಬರವೃಕ್ಷಂ ತು ಸಮಾಲಿಂಗ್ಯ ಸಿತಂ ಚರುಂ ।
ಭೋಕ್ಷ್ಯಸೇ ತವ ಪುತ್ರಸ್ತು ಭವಿಷ್ಯತಿ ಸನಾತನಃ ॥ ೭೦ ॥

ಏವಮುಕ್ತ್ವಾ ಭೃಗುರ್ಯಾತೋ ಯಥೇಚ್ಛಂ ಸಾಪಿ ಸಂಮುದಂ ।
ಅವಾಪ ಮಾತ್ರಾ ಸಹಿತಾ ಭರ್ತ್ರಾ ಪಿತ್ರಾ ಚ ಭಾಮಿನೀ ॥ ೭೧ ॥

ಅಥ ಸ್ನಾನದಿನೇಽಶ್ವತ್ಥಮಾಲಿಂಗ್ಯಾರಕ್ತಕಂ ಚರುಂ ।
ಆದಾತ್ಸತ್ಯವತೀ ತಸ್ಯಾ ಮಾತಾ ಘಾಲ್ಗಂ ಸಿತಂ ಚರುಂ ॥ ೭೨ ॥

ಪರಿವೃತ್ತಂ ತು ತಜ್ಜ್ಞಾತ್ವಾ ದಿವ್ಯಜ್ಞಾನೋ ಭೃಗುರ್ಮುನಿಃ ।
ಅಥಾಗತ್ಯ ಸ್ನುಷಾಂ ತಾಂ ತು ವಚನಂ ಚೇದಮಬ್ರವೀತ್ ॥ ೭೩ ॥

೬೯-೭೧. ನಿನ್ನ ತಾಯಿಯು ಪುತ್ರಾಪೇಕ್ಷೆಯಿಂದ ಮೊದಲು ಅಶ್ವತ್ಥವೃಕ್ಷವನ್ನು ಆಲಿಂಗಿಸಿ ಬಳಿಕ ಇದರಲ್ಲಿನ ಕೆಂಪುವರ್ಣದ ಚರುವನ್ನು ಸೇವಿಸಿದರೆ ವೀರನಾದ ಪುತ್ರನು ಜನಿಸುವನು. ನೀನೂ ಸಹ ಉದುಂಬರ (ಅತ್ತಿ) ವೃಕ್ಷವನ್ನು ಆಲಂಗಿಸಿ ಇದರಲ್ಲಿಯ ಬಿಳಿಯ ಚರುವನ್ನು ಸೇವಿಸಿದರೆ ನಿನಗೆ ತಪಸ್ವಿಯಾದ ಪುತ್ರನು ಜನಿಸುವನು ಎಂದು ಹೇಳಿ, ಭೃಗುಮುನಿಯು ತನ್ನ ಸ್ಥಾನಕ್ಕೆ ಹೊರಟುಹೋದನು. ಆ ಸತ್ಯವತಿಯೂ ಸಹ ತನ್ನ ತಾಯಿ, ಪತಿ, ತಂದೆ ಇವರೊಡನೆ ತುಂಬಾ ಸಂತೋಷಗೊಂಡಳು.

೭೨. ಅಮೇಲೆ ಋತುಸ್ನಾನಾನಂತರ ಸತ್ಯವತಿಯು ಅಶ್ವತ್ಥವೃಕ್ಷವನ್ನಾಲಂಗಿಸಿ ಕೆಂಪುಚರುವನ್ನು ತಾನೇ ಸೇವಿಸಿದಳು. ಅವಳ ತಾಯಿಯು ಬಿಳಿಯ ಚರುವನ್ನು ಸೇವಿಸಿದಳು. ಭೃಗುಮುನಿಯು ಹೇಳಿದರೀತಿಗೆ ಇದು ವ್ಯತ್ಯಾಸವಾಯಿತು.

೭೩-೭೬. ಹೀಗೆ ವ್ಯತ್ಯಾಸವಾದುದನ್ನು ದಿವ್ಯದೃಷ್ಟಿಯಿಂದ ತಿಳಿದ ಭೃಗುಮುನಿಯು, ಆ ಕೂಡಲೇ ತನ್ನ ಸೊಸೆಯ ಬಳಿಗೆ ಬಂದು, ಎಲೌ-ಕಲ್ಯಾಣಿ ! ನೀನು ವೃಕ್ಷವನ್ನಾಲಿಂಗಿಸುವುದರಲ್ಲಿಯೂ ಚರುವನ್ನು ಸೇವಿಸುವುದರಲ್ಲಿಯೂ ನನ್ನ ಮಾತನ್ನು ಗಮನಿಸಿಸದೇ ಮಾಡಿರುವೆ. ವ್ಯತ್ಯಾಸವನ್ನು ಆದಕಾರಣ ನಿನಗೆ ಕ್ಷತ್ರಿಯರಂತೆ

ವಿಪರ್ಯಯಸ್ತ್ವಯಾ ಭದ್ರೇ ವೃಕ್ಷಾಲಿಂಗನಕರ್ಮಣಿ ।
ತಥಾ ಚರುಸ್ಯಾಶನೇ ತು ತತ್ರೇದಂ ತೇ ಭವಿಷ್ಯತಿ ॥ ೭೪ ॥

ಬ್ರಾಹ್ಮಣಃ ಕ್ಷತ್ರಿಯಾಚಾರಸ್ತವ ಪುತ್ರೋ ಭವಿಷ್ಯತಿ ।
ಕ್ಷತ್ರಿಯೋ ಬ್ರಾಹ್ಮಣಾಚಾರೋ ಮಾತುಸ್ತೇ ಭವಿತಾ ಸುತಃ ॥ ೭೫ ॥

ಇತ್ಯುಕ್ತಾ ಭೃಗುಣಾ ಸಾಧ್ವೀ ತದಾ ಸತ್ಯವತೀ ಭೃಶಂ ।
ಪುನಃ ಪ್ರಸಾದಯಾಮಾಸ ಪೌತ್ರೋ ಮೇಽಸ್ತ್ವಿತಿ ತಾದೃಶಂ ॥ ೭೬ ॥

ಏವಮಸ್ತ್ವಿತಿ ಸ ಪ್ರೋಚ್ಯ ತತ್ರೈವಾಂತರ್ದಧೇ ಭೃಗುಃ ।
ಅಥ ಕಾಲೇ ಸುತಂ ದೀಪ್ತಂ ಜಮದಗ್ನಿಂ ಚ ಗಾಧಿಜಾ ॥ ೭೭ ॥

ಸುಷುವೆ ಜನನೀ ತಸ್ಯಾ ವಿಶ್ವಾಮಿತ್ರಂ ತಪೋನಿಧಿಂ ।
ಜಮದಗ್ನಿಸ್ತತೋ ವೇದಾಂಶ್ಚತುರಃ ಪ್ರಾಪ ಮಾಚಿರಂ ॥ ೭೮ ॥

ಆಚರಿಸುವಂತಹ ಬ್ರಾಹ್ಮಣಪುತ್ರನು ಜನಿಸುವನು. ನಿನ್ನ ತಾಯಿಗೆ ಬ್ರಾಹ್ಮಣನಂತೆ ಆಚರಿಸುವ ಕ್ಷತ್ರಿಯನು ಜನಿಸುವನು. ಎಂದರೆ ನಿನಗೆ ಜನಿಸುವ ಪುತ್ರನು ಬ್ರಾಹ್ಮಣನಾದರೂ ಕ್ಷತ್ರಿಯ ಧರ್ಮವನ್ನನುಸರಿಸುವನು. ಅದರಂತೆ ನಿನ್ನ ತಾಯಿಗೆ ಜನಿಸುವ ಪುತ್ರನು ಬಾಹ್ಮಣಧರ್ಮನಿರತನಾಗುವನು. ಎಂದು ಭೃಗುಮುನಿಯು ಹೇಳಲು, ಸಾಧ್ವಿಯಾದ ಸತ್ಯವತಿಯು ತಿರುಗಿ ಭೃಗುಮುನಿಯನ್ನು ಪ್ರಸನ್ನಗೊಳಿಸಿ, ನನ್ನ ಪುತ್ರನು ಬ್ರಾಹ್ಮಣನಾಗಲಿ, ಮೊಮ್ಮಗನು ಕ್ಷತ್ರಿಯ ಧರ್ಮವುಳ್ಳವನಾಗಲಿ, ಈರೀತಿ ಅನುಗ್ರಹಿಸಬೇಕೆಂದು ಕೇಳಿಕೊಳ್ಳಲು, ಹಾಗೆಯೇ ಆಗಲೆಂದು ಹೇಳಿ ಭೃಗುಮುನಿಯು ಅಲ್ಲಿಯೇ ಅಂತರ್ಧಾನನಾದನು.

೭೭. ಅನಂತರ ಗಾಧಿಪುತ್ರಿಯಾದ ಸತ್ಯವತಿಯು ಗರ್ಭವನ್ನು ಧರಿಸಿ ಯೋಗ್ಯಕಾಲದಲ್ಲಿ ತೇಜಸ್ವಿಯಾದ ಜಮದಗ್ನಿಮುನಿಯನ್ನು ಹಡೆದಳು. ಅವಳ ತಾಯಿಯು ತಪಸ್ವಿಯಾದ ವಿಶ್ವಾಮಿತ್ರನನ್ನು ಹಡೆದಳು.

೭೮. ಮುಂದೆ ಜಮದಗ್ನಿಮುನಿಯು ಸ್ವಲ್ಪಕಾಲದಲ್ಲಿಯೇ ನಾಲ್ಕು ವೇದಗಳನ್ನೂ ಅಧ್ಯಯನಮಾಡಿದನು. ಆ ಮಹಾತ್ಮನಿಗೆ ಧನುರ್ವೇದವು ಯಾರ ಉಪದೇಶವೂ ಇಲ್ಲದೆ ತಾನಾಗಿಯೇ ಬಂದಿತು.

ಪ್ರಾದುರಾಸೀದ್ಧನುರ್ವೇದಃ ಸ್ವಯಂ ತಸ್ಮಿನ್ಮಹಾತ್ಮನಿ ।
ವಿಶ್ವಾಮಿತ್ರೋಽಪಿ ಸಕಲಾನ್ವೇದಾನಾಪ ತಥಾಚಿರಾತ್ ॥ ೭೯ ॥

ಧನುರ್ವೇದಂ ತಥಾ ಕೃತ್ಸ್ನಂ ವಿಪ್ರಶ್ಚಾಭೂತ್ತಪೋಬಲಾತ್ ।
ಜಾಜ್ವಲ್ಯಮಾನಸ್ತೇಜಸ್ವೀ ಜಮದಗ್ನಿರ್ಮಹಾತಪಾಃ ॥ ೮೦ ॥

ವೇದೈಸ್ತಪೋಭಿಃ ಸ ಮುನೀನತ್ಯಕ್ರಾಮಚ್ಚ ಸೂರ್ಯವತ್ ।

॥ ಇತಿ ಶ್ರೀಕಾಲಿಕಾಪುರಾಣೇ ಪಂಚಾಶೀತಿತಮೋಽಧ್ಯಾಃ ॥

---

೭೯. ವಿಶ್ವಾಮಿತ್ರನೂ ಸಹ ಸಕಲ ವೇದಗಳನ್ನೂ ಸ್ವಲ್ಪಕಾಲದಲ್ಲಿಯೇ ಅಭ್ಯಾಸಮಾಡಿದನು. ಸಂಪೂರ್ಣವಾಗಿ ಧನುರ್ವೇದವನ್ನೂ ಅಭ್ಯಾಸಮಾಡಿ, ಕೊನೆಗೆ ಅವನು ತಪೋಬಲದಿಂದ ಬ್ರಾಹ್ಮಣನಾದನು.

೮೦. ಆ ಜಮದಗ್ನಿಮುನಿಯು ಸೂರ್ಯನಂತೆ ತೇಜಸ್ವಿಯಾಗಿ ಬ್ರಹ್ಮವರ್ಚಸ್ಸಿನಿಂದ ಪ್ರಕಾಶಿಸುತ್ತಿದ್ದನು. ವೇದಾಧ್ಯಯನದಲ್ಲಿಯೂ, ತಪಶ್ಚರ್ಯದಲ್ಲಿಯೂ ಮಿಕ್ಕ ಎಲ್ಲಾ ಮುನಿಗಳನ್ನೂ ಮೀರಿಸಿದನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತೈದನೆಯ
ಅಧ್ಯಾಯವು ಮುಗಿದುದು

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಷಡಶೀತಿತಮೋಽಧ್ಯಾಯಃ ॥

॥ ಔರ್ವ ಉವಾಚ ॥

ಅಥ ಕಾಲೇ ವ್ಯತೀತೇ ತು ಜಮದಗ್ನಿರ್ಮಹಾತಪಾಃ ।
ವಿದರ್ಭರಾಜಸ್ಯ ಸುತಾಂ ಪ್ರಯತ್ನೇನ ಜಿತಾಂ ಸ್ವಯಂ ॥ ೧ ॥

ಭಾರ್ಯಾರ್ಥಂ ಪ್ರತಿಜಗ್ರಾಹ ರೇಣುಕಾಂ ಲಕ್ಷಣಾನ್ವಿತಾಂ ।
ಸಾ ತಸ್ಮಾತ್ಸುಷವೇ ಪುತ್ರಾಂಶ್ಚತುರೋ ವೇದಸಮ್ಮಿತಾನ್ ॥ ೨ ॥

ಮರುತ್ವಂತಂ ಸುಷೇಣಂ ಚ ವಸುಂ ವಿಶ್ವಾವಸುಂ ತಥಾ ।
ಪಶ್ಚಾತ್ತಸ್ಯಾಂ ಸ್ವಯಂ ಜಜ್ಞೇ ಭಗವಾನ್ ಮಧುಸೂದನಃ ॥ ೩ ॥

ಕಾರ್ತವೀರ್ಯವಧಾಯಾಶು ಶಕ್ರಾದ್ಯೈಃ ಸಕಲೈಃ ಸುರೈಃ ।
ಯಾಚಿತಃ ಪಂಚಮಃ ಸೋಽಭೂತ್ತೇಷಾಂ ರಾಮಾಹ್ವಯಃ ಸುತಃ ॥ ೪ ॥

ಎಂಭತ್ತಾರನೆಯ ಅಧ್ಯಾಯವು.

೧. ಔರ್ವಮುನಿಯು ಹೇಳಿದನು:—ಆಮೇಲೆ ಕೆಲವು ಕಾಲಾನಂತರ ಮಹಾ ತಪಸ್ವಿಯಾದ ಜಮದಗ್ನಿಯು ವಿದರ್ಭರಾಜನ ಪುತ್ರಿಯೂ, ಲಕ್ಷಣವತಿಯೂ ಆದ ರೇಣುಕಾದೇವಿಯನ್ನು ವಿವಾಹ ಮಾಡಿಕೊಂಡನು.

೨. ಆ ರೇಣುಕೆಯು ಜಮದಗ್ನಿಮುನಿಯಿಂದ ಚತುರ್ವೇದಗಳಂತೆ ಬೆಳಗುತ್ತಿರುವ ಮರುತ್ವಾನ್, ಸುಷೇಣ, ವಸು, ವಿಶ್ವಾವಸು, ಎಂಬ ನಾಲ್ಕು ಮಕ್ಕಳನ್ನು ಪಡೆದಳು.

೩-೪. ಬಳಿಕ ಆ ರೇಣುಕೆಯಲ್ಲಿ ಭಗವಂತನಾದ ವಿಷ್ಣುವು ತಾನೇ ಅವತರಿಸಿದನು. ಕಾರ್ತವೀರ್ಯನ ವಧಕ್ಕಾಗಿ ಇಂದ್ರನೇ ಮೊದಲಾದ ದೇವತೆಗಳ ಪ್ರಾರ್ಥನೆ

ಭಾರಾವತರಣಾರ್ಥಾಯ ಜಾತಃ ಪರಶುನಾ ಸಹ ।
ಸಹಜಂ ಪರಶುಂ ತಸ್ಯ ನ ಜಹಾತಿ ಕದಾಚನ ॥ ೫ ॥

ಅಯಂ ನಿಜಪಿತಾಮಹ್ಯಾಶ್ಚರುಭುಕ್ತ್ಯಪಿಪರ್ಯಯಾತ್ ।
ಬ್ರಾಹ್ಮಣಃ ಕ್ಷತ್ರಿಯಾಚಾರೋ ರಾಮೋಽಭೂತ್ಕ್ರೂರಕರ್ಮಕೃತ್ ॥ ೬ ॥

ಸ ವೇದಾನಖಿಲಾ ಜ್ಞಾತ್ವಾ ಧನುರ್ವೇದಂ ಚ ಸರ್ವಶಃ ।
ಸ ತತಃ ಕೃತಕೃತ್ಯೋಽಭೂದ್ವೇದವಿದ್ಯಾವಿಶಾರದಃ ॥ ೭ ॥

ಏಕದಾ ತಸ್ಯ ಜನನೀ ಸ್ನಾನಾರ್ಥಂ ರೇಣುಕಾ ಗತಾ ।
ಗಂಗಾತೋಯೇ ಹ್ಯಥಾಪಶ್ಯನ್ನಾಮ್ನಾ ಚಿತ್ರರಥಂ ನೃಪಂ ॥ ೮

ಭಾರ್ಯಾಭಿಃ ಸದೃಶೀಭಿಶ್ಚ ಜಲಕ್ರೀಡಾರತಂ ಶುಭಂ ।
ಸುಮಾಲಿನಂ ಸುವಸ್ತ್ರಂ ತಂ ತರುಣಂ ಚಂದ್ರಮಾಲಿನಂ ॥ ೯ ॥

ಯಂತೆ ರೇಣುಕೆಯ ಗರ್ಭದಿಂದ ಐದನೆಯ ಪುತ್ರನಾಗಿ ಜನಿಸಿದನು. ಆ ಪುತ್ರನೇ ಪ್ರಸಿದ್ಧನಾದ ಪರಶುರಾಮನು.

೫. ಭೂಭಾರವನ್ನು ಇಳಿಸಲು ಭಗವಂತನು ರಾಮನೆಂದು ಅವತರಿಸಿದನು. ಅವನು ಜನಿಸುವಾಗಲೇ ಅದನೊಡನೆ ಕೊಡಲಿಯೂ ಇದ್ದಿತು. ಆ ಕೊಡಲಿಯನ್ನು ಅವನು ಯಾವಾಗಲೂ ಬಿಟ್ಟಿರುತ್ತಿರಲಿಲ್ಲ.

೬-೭. ಹಿಂದೆ ತನ್ನ ಪಿತಾಮಹಿಯಾದ ಸತ್ಯವತಿಯು, ಭೃಗುಮುನಿದತ್ತವಾದ ಚರುವನ್ನು ವ್ಯತ್ಯಾಸಮಾಡಿ ಸೇವಿಸಿದ ಕಾರಣದಿಂದ, ಈ ರಾಮನು ಬ್ರಾಹ್ಮಣನಾಗಿ ಜನಿಸಿದರೂ ಕ್ಷತ್ರಿಯಧರ್ಮವನ್ನು ಕೈಗೊಂಡು ಕ್ರೂರಕರ್ಮವಾದ ಯುದ್ಧಾದಿಗಳಲ್ಲಿ ಆಸಕ್ತನಾದನು. ವೇದಗಳನ್ನೂ, ಧನುರ್ವೇದವನ್ನೂ ಅಭ್ಯಾಸಮಾಡಿ ಸಮಸ್ತ ಶಾಸ್ತ್ರಗಳಲ್ಲಿಯೂ ಪಾರಂಗತನೂ, ವೇದವಿದ್ಯಾವಿಶಾರದನೂ ಆದನು.

೮-೯. ಹೀಗಿರಲೊಂದುದಿನ ಅವನ ತಾಯಿಯಾದ ರೇಣುಕೆಯು ಸ್ನಾನಕ್ಕಾಗಿ ಗಂಗಾನದಿಗೆ ಹೋಗಿದ್ದಳು. ಅಲ್ಲಿ ಚಿತ್ರರಥನೆಂಬ ರಾಜನನ್ನು ನೋಡಿದಳು. ಅವನು ಸುಂದರನೂ, ತರುಣನೂ ಆಗಿದ್ದನು. ಸುಂದರವಾದ ಚಂದ್ರಹಾರವನ್ನು ಧರಿಸಿದ್ದನು. ಒಳ್ಳೆಯ ಬಟ್ಟೆಗಳನ್ನು ಧರಿಸಿದ್ದನು. ಆ ಗಂಗೆಯಲ್ಲಿ ಅವನು ಸುಂದರಿಯರಾದ ಸ್ತ್ರೀಯರೊಡನೆ ಜಲಕ್ರೀಡೆಯನ್ನಾಡುತ್ತಿದ್ದನು.

ತಥಾವಿಧಂ ನೃಪಂ ದೃಷ್ಟ್ವಾ ಸಂಜಾತಮದನಾ ಭೃಶಂ ।
ರೇಣುಕಾ ಸ್ಪೃಹಯಾಮಾಸ ತಸ್ಮೈ ರಾಜ್ಞೇ ಸುವರ್ಚಸೇ ॥ ೧೦ ॥

ಸ್ಪೃಹಾಯುತಾಯಾಸ್ತಸ್ಯಾಸ್ತು ಸಂಕ್ಲೇದಃ ಸಮಜಾಯತ ।
ವಿಚೇತನಾಂಭಸಾ ಕ್ಲಿನ್ನಾ ತ್ರಸ್ತಾ ಸಾ ಸ್ವಾಶ್ರಮಂ ಯಯೌ ॥ ೧೧ ॥

ಅಬೋಧಿ ಜಮದಗ್ನಿಸ್ತಾಂ ವಿಕೃತಾಂ ರೇಣುಕಾಂ ತಥಾ ।
ಧಿಗ್ಧಿಕ್ಕಾರರತೇತ್ಯೇವಂ ನಿನಿಂದ ಚ ಸಮಂತತಃ ॥ ೧೨ ॥

ತತಃ ಸ ತನಯಾರ್ ಪ್ರಾಹ ಚತುರಃ ಪ್ರಥಮಂ ಮುನಿಃ ।
ಮರುತ್ವತ್ಪ್ರಮುಖಾ ಸರ್ವಾನೇಕೈಕಂ ಕ್ರಮತೋ ದ್ರುತಂ ॥ ೧೩ ॥

ಛಿಂಧೀಮಾಂ ಪಾಪನಿರತಾಂ ರೇಣುಕಾಂ ವ್ಯಭಿಚಾರಿಣೀಂ ।
ತೇ ತದ್ವಚೋ ನೈವ ಚಕ್ರುರ್ಮೂರ್ಖಕಾಶ್ಚಾಸನ್ ಜಡಾ ಇವ ॥ ೧೪ ॥

೧೦-೧೧. ಆರೀತಿ ಸುಂದರನಾಗಿರುವ ಚಿತ್ರರಥನನ್ನು ನೋಡಿ ರೇಣುಕಾ ದೇವಿಗೆ ಚಿತ್ತಚಾಂಚಲ್ಯವುಂಟಾಯಿತು. ಸುಂದರನಾದ ಆ ರಾಜನಲ್ಲಿ ಅಭಿಲಾಷೆಯುಳ್ಳವಳಾದಳು. ಅದರಿಂದ ಅವಳ ಶರೀರದಲ್ಲಿ ಬೆವರು ಹನಿಗಳು ಮೂಡಿದವು. ಉದ್ವಿಗ್ನಮನಸ್ಸಿನಿಂದ ಏನುಮಾಡಲೂ ತೋರದೆ ಮೂಢಳಾಗಿ ಭಯಗೊಂಡು, ತನ್ನ ಆಶ್ರಮಕ್ಕೆ ತೆರಳಿದಳು.

೧೨. ರೇಣುಕೆಯು ಹೀಗೆ ಮನ್ಮಥವಿಕಾರ ಹೊಂದಿದುದನ್ನು ಜಮದಗ್ನಿಯು ದಿವ್ಯದೃಷ್ಟಿಯಿಂದ ತಿಳಿದನು. ಎಲೌ ಮೂರ್ಖಳೇ ! ಈ ಹೇಯಕಾರ್ಯವನ್ನು ಮಾಡಬಹುದೇ ಎಂದು ಅವಳನ್ನು ಚೆನ್ನಾಗಿ ನಿಂದಿಸಿದನು.

೧೩-೧೫. ಬಳಿಕ ಆ ಮುನಿಯು ಮೊದಲು ಮರುತ್ವಂತನೇ ಮೊದಲಾದ ತನ್ನ ನಾಲ್ವರು ಮಕ್ಕಳನ್ನೂ ಒಬ್ಬೊಬ್ಬರನ್ನಾಗಿ ಕರೆದು ಎಲೈ ಪುತ್ರನೇ, ಪರಪುರುಷನಲ್ಲಾಸಕ್ತಳಾದ ಈ ಪಾಪಿ ರೇಣುಕೆಯನ್ನು ಛೇದಿಸು, (ಕತ್ತರಿಸು)ಎಂದು ಹೇಳಿದನು. ಆ ಪುತ್ರರು ಒಬ್ಬರೂ ಸಹ ಅವನ ಮಾತನ್ನು ನಡೆಯಿಸಲೇ ಇಲ್ಲ. ಎಲ್ಲರೂ ದಿಗ್ಭ್ರಮೆಗೊಂಡು ತಾಯಿಯನ್ನು ಕೊಲ್ಲುವಂತಹ ನೀಚಕಾರ್ಯವನ್ನು ಮಾಡುವುದುಂಟೇ ಎಂದು ಹೇಳಿಕೊಂಡು, ಏನೂ ತೋರದೆ ಮೂಕರಂತೆ ಸುಮ್ಮನಿದ್ದರು.

ಕುಪಿತೋ ಜಮದಗ್ನಿಸ್ತಾ ಶಶಾಪೇತಿ ವಿಚೇತಸಃ ।
ಭವಧ್ವಂ ಯೂಯಮಚಿರಾಜ್ಜಡಾ ಗೋಬುದ್ಧಿವರ್ದ್ಧಿತಾಃ ॥ ೧೫ ॥

ತದಾ ಜಗಾಮ ಚರಮೋ ಜಾಮದಗ್ನ್ಯೋಽತಿವೀರ್ಯವಾನ್ ।
ತಂ ಚ ರಾಮಂ ಪಿತಾ ಪ್ರಾಹ ಪಾಪಿಷ್ಠಾಂ ಛಿಂಧಿ ಮಾತರಂ ॥ ೧೬ ॥

ಸ ಭ್ರಾತೄಂಶ್ಚ ತಥಾಭೂತಾನ್ ದೃಷ್ಟ್ವಾ ಜ್ಞಾನವಿವರ್ಜಿತಾನ್ ।
ಪಿತ್ರಾ ಶಪ್ತಾನ್ ಮಹಾತೇಜಾಃ ಪ್ರಸೂಂ ಪರುಶುನಾಽಚ್ಛಿನತ್ ॥ ೧೭ ॥

ರಾಮೇಣ ರೇಣುಕಾಂ ಛಿನ್ನಾಂ ದೃಷ್ಟ್ವಾ ವಿಕ್ರೋಧನೋಽಭವತ್ ।
ಜಮದಗ್ನಿಃ ಪ್ರಸನ್ನಃ ಸನ್ನಿತಿ ವಾಚಮುವಾಚ ಹ ॥ ೧೮ ॥

ಪ್ರೀತೋಽಸ್ಮಿ ಪುತ್ರ ಭದ್ರಂ ತೇ ಯತ್ತ್ವಯಾ ಮದ್ವಚಃ ಕೃತಂ ।
ತಸ್ಮಾದ್ವಿಷ್ವಾನ್ ವರಾನ್ ಕಾಮಾನ್ ತ್ವಂ ವೈ ವರಯ ಸಾಂಪ್ರತಂ ॥ ೧೯ ॥

ಆಗ ಜಮದಗ್ನಿಯು ಕೋಪಗೊಂಡು, ಎಲೈ ಮೂರ್ಖರೇ, ನೀವು ಈಕೂಡಲೇ ಜಡರೂ, ಪಶುಗಳಂತೆ ಬುದ್ಧಿಯಿಲ್ಲವವರೂ ಆಗಿರಿ ಎಂದು ತನ್ನ ಪುತ್ರರಿಗೆ ಶಾಪವನ್ನು ಕೊಟ್ಟನು.

೧೬-೧೭. ಇಷ್ಟುಹೊತ್ತಿಗೆ ಬಹು ಪರಾಕ್ರಮಶಾಲಿಯೂ, ತನ್ನ ಕಿರಿಯ ಮಗನೂ ಆದ ಪರಶುರಾಮನು ಅಲ್ಲಿಗೆ ಬಂದನು. ಅವನಿಗೂ ಸಹ ಹಿಂದೆ ಹೇಳಿದಂತೆ ಪಾಪಿಷ್ಠಳಾದ ಈ ನಿನ್ನ ತಾಯಿಯನ್ನು ಕಡಿದುಹಾಕು ಎಂದು ಹೇಳಿದನು. ಬಳಿಕ ಅಲ್ಲಿಯೇ ನಿಂತಿದ್ದ ತನ್ನ ಸಹೋದರರನ್ನೂ ನೋಡಿ ತಂದೆಯ ಶಾಪದಿಂದ ಅವರು ಮೂಢರಾಗಿರುವುದನ್ನು ತಿಳಿದನು. ತಂದೆಯ ಆಜ್ಞೆಯನ್ನು ಪಾಲಿಸಲು ಹಿಂದು ಮುಂದೆ ನೋಡದೆ, ತನ್ನ ಕೈಯಲ್ಲಿದ್ದ ಕೊಡಲಿಯಿಂದ ತನ್ನ ತಾಯಿಯನ್ನು ಕಡಿದು ಹಾಕಿದನು.

೧೮-೧೯. ಪರಶುರಾಮನು ರೇಣುಕೆಯನ್ನು ಕಡಿದುಬ್ಬನ್ನು ನೋಡಿ ಜಮದಗ್ನಿಮುನಿಗೆ ಉಂಟಾದ ಕೋಪವಿಳಿಯಿತು. ಪ್ರಸನ್ನನಾಗಿ ತನ್ನ ಆಜ್ಞೆಯನ್ನು ನೆರವೇರಿಸಿದ ಪುತ್ರನನ್ನು ಕುರಿತು ಎಲೈ ಪುತ್ರನೇ ! ನನ್ನ ಮಾತನ್ನು ನಡೆಸಿದ ನಿನ್ನಲ್ಲಿ ನಾನು ಸಂತುಷ್ಟನಾಗಿರುವೆನು, ನಿನಗೆ ಮಂಗಳವಾಗಲಿ. ನಿನಗೆ ಬೇಕಾದ ವರಗಳನ್ನು ಕೇಳಿಕೋ, ಕೊಡುವೆನು ಎಂದು ಹೇಳಿದನು.

ಸ ತು ರಾಮೋ ವರಾಂ ವವ್ರೇ ಮಾತುರುತ್ಥಾನಮಾದಿತಃ ।
ವಧಸ್ಯಾಸ್ಮರಣಂ ತಸ್ಯಾಭ್ರಾತೃಣಾಂ ಶಾಪಮೋಚನಂ ॥ ೨೦ ॥

ಮಾತೃಹತ್ಯಾವ್ಯಪನಯಂ ಯುದ್ಧೇ ಸರ್ವತ್ರ ವೈ ಜಯಂ ।
ಆಯುಃ ಕಲ್ಪಾಂತಪರ್ಯಂತಂ ಕ್ರಮಾದ್ವೈ ನೃಪಸತ್ತಮ ॥ ೨೧ ॥

ಸರ್ವಾಂ ವರಾಂ ಸ ಪ್ರದದೌ ಜಮದಗ್ನಿರ್ಮಹಾತಪಾಃ ।
ಸುಪ್ತೋತ್ಥಿತೇವ ಜನನೀ ರೇಣುಕಾ ಚ ತದಾಭವತ್ ॥ ೨೨ ॥

ವಧಂ ನ ಚಾಪಿ ಸಸ್ಮಾರ ಸಹಜಾ ಪ್ರಕೃತಿಸ್ಥಿತಾ ।
ಯುದ್ಧೇ ಜಯಂ ಚಿರಾಯುಷ್ಯಂ ಲೇಭೇ ರಾಮಸ್ತಥೈವ ಹಿ ॥ ೨೩ ॥

ಮಾತೃಹತ್ಯಾವ್ಯಪೋಹಾಯ ಪಿತಾ ತಂ ವಾಕ್ಯಮಬ್ರವೀತ್ ।
ನ ಪುತ್ರ ವರದಾನೇನ ಮಾತೃಹತ್ಯಾಽಪಗಚ್ಛತಿ ॥ ೨೪ ॥

---

೨೦. ಆಗ ಪರಶುರಾಮನು ತನ್ನ ತಾಯಿಯು ಬದುಕುವಂತೆಯೂ, ತಾನು ಸಂಹರಿಸಿದುದನ್ನು ಅವಳು ಸ್ಮರಿಸದಂತೆಯೂ ತನ್ನ ಸೋದರರಿಗೆ ಪಿತೃಶಾಪದಿಂದ ಬಿಡುಗಡೆಯಾಗುವಂತೆಯೂ ವರಗಳನ್ನು ಕೇಳಿಕೊಂಡನು.

೨೧. ಎಲೈ ರಾಜೋತ್ತಮನೇ, ಇದಲ್ಲದೆ ತಾಯಿಯನ್ನು ಕೊಂದ ಪಾಪವು ಹೋಗುವಂತೆಯೂ, ಯುದ್ಧದಲ್ಲೆಲ್ಲಾ ತನಗೆ ಜಯವಾಗುವಂತೆಯೂ ಒಂದು ಕಲ್ಪದ ಪರ್ಯಂತ ಆಯುಸ್ಸನ್ನೂ ಆ ರಾಮನು ಕೇಳಕೊಂಡನು.

೨೨-೨೩. ಮಹಾ ತಪಸ್ವಿಯಾದ ಜಮದಗ್ನಿಯು ಪರಶುರಾಮನಿಗೆ ಆ ಎಲ್ಲಾ ವರಗಳನ್ನೂ ಕೊಟ್ಟನು. ಆಗ ರೇಣುಕಾದೇವಿಯು ನಿದ್ದೆಯಿಂದೆಚ್ಚತ್ತವಳಂತೆ ಎಚ್ಚರಗೊಂಡಳು. ರಾಮನು ತನ್ನನ್ನು ಕೊಂದ ಸ್ಮರಣೆಯೇ ಅವಳಿಗೆ ಉಂಟಾಗಲಿಲ್ಲ. ನಿಜವಾದ ತನ್ನ ಸ್ವಭಾವವನ್ನು ಪಡೆದಳು. ರಾಮನಿಗೆ ಆಗಲೇ ಯುದ್ಧದಲ್ಲಿ ಜಯವೂ, ದೀರ್ಘಾಯಸ್ಸೂ ಲಭಿಸಿದವು.

೨೪-೨೫. ಆಗ ಜಮದಗ್ನಿಯು ಮಾತೃಹತ್ಯೆಯ ನಿವಾರಣೆಗಾಗಿ ಪರಶು ರಾಮನನ್ನು ಕುರಿತು ಎಲೈ ಪುತ್ರನೇ! ಬರೀ ವರದಾನದಿಂದ ಮಾತೃಹತ್ಯಾಪಾಪವು ಹೋಗಲಾರದು. ಆದಕಾರಣ ನೀನು ಬ್ರಹ್ಮಕುಂಡದಲ್ಲಿ ಸ್ನಾನಮಾಡುವುದಕ್ಕಾಗಿ

ತಸ್ಮಾತ್ತ್ವಂ ಬ್ರಹ್ಮಕುಂಡಾಯ ಗಚ್ಛ ಸ್ನಾತುಂ ಚ ತಜ್ಜಲೇ ।
ತತ್ರ ಸ್ನಾತ್ವಾ ಮುಕ್ತಪಾಪೋ ನ ಚಿರಾತ್ಪುನರೇಷ್ಯಸಿ ॥ ೨೫ ॥

ಜಗದ್ಧಿತಾಯ ಪುತ್ರ ತ್ವಂ ಬ್ರಹ್ಮಕುಂಡಂ ವ್ರಜ ದ್ರುತಂ ।
ಸ ತಸ್ಯ ವಚನಂ ಶ್ರುತ್ವಾ ರಾಮಃ ಪರಶುಧೃಕ್ತದಾ ॥ ೨೬ ॥

ಉಪದೇಶಾತ್ಪಿತುರ್ಯಾತೋ ಬ್ರಹ್ಮಕುಂಡಂ ವೃಷೋದಕಂ ।
ತತ್ರ ಸ್ನಾನಂ ಚ ವಿಧಿವತ್ಕೃತ್ವಾ ಧೌತಪರಶ್ವಧಃ ॥ ೨೭ ॥

ಶರೀರಾನ್ನಿಃಸೃತಾಂ ಮಾತೃಹತ್ಯಾಂ ಸಮ್ಯಗ್ವ್ಯಲೋಕಯತ್ ।
ಜಾತಸಂಪ್ರತ್ಯಯಃ ಸೋಽಥ ತೀರ್ಥಮಾಸಾದ್ಯ ತದ್ವರಂ ॥ ೨೮ ॥

ವೀಥೀಂ ಪರಶುನಾ ಕೃತ್ವಾ ಬ್ರಹ್ಮಪುತ್ರಮುವಾಹಯತ್ ।
ಬ್ರಹ್ಮಕುಂಡಾತ್ಸೃತಃ ಸೋಽಥ ಕಾಸಾರೇ ಲೋಹಿತಾಹ್ವಯೇ ॥ ೨೯ ॥

ಆ ಕುಂಡಕ್ಕೆ ತೆರಳು, ಅಲ್ಲಿ ಸ್ನಾನಮಾಡಿದರೆ ಆ ಕೂಡಲೇ ನಿನ್ನ ಮಾತೃಹತ್ಯಾಪಾಪವು ಹೋಗುವುದು, ಆದುದರಿಂದ ಎಲೈ ಪುತ್ರನೇ, ಜಗತ್ತಿನ ಹಿತಕ್ಕಾಗಿಯೂ ಸಹ ನೀನು ಬ್ರಹ್ಮಕುಂಡಕ್ಕೆ ಕೂಡಲೇ ಹೊರಡು ಎಂದು ಹೇಳಿದನು.

೨೬. ಆಗ ಪರಶುರಾಮನು ತನ್ನ ಕೊಡಲಿಯನ್ನು ಹೆಗಲಮೇಲೆ ಧರಿಸಿ, ತಂದೆಯ ಉಪದೇಶದಂತೆ ಪವಿತ್ರವಾದ ಜಲವುಳ್ಳ ಬ್ರಹ್ಮಕುಂಡಕ್ಕೆ ತೆರಳಿದನು.

೨೭: ಆ ಕುಂಡದಲ್ಲಿ ವಿಧಿವತ್ತಾಗಿ ಸ್ನಾನಮಾಡಿ ತನ್ನ ಕೊಡಲಿಯನ್ನು ತೊಳೆದನು. ಆಗ ತನ್ನ ಶರೀರದಿಂದ ಮಾತೃಹತ್ಯಾಪಾಪವು ಇಳಿದುಹೋಗುತ್ತಿರುವುದನ್ನು ಕಣ್ಣಾರೆ ನೋಡಿದನು.

೨೮. ಆಗ ತನ್ನ ಪಾಪವು ಹೋಗಿರುವುದೆಂಬ ನಂಬಿಕೆಯುಳ್ಳವನಾದನು. ಬಳಿಕ ರಾಮನು ಶ್ರೇಷ್ಠವಾದ ಲೌಹಿತ್ಯತೀರ್ಥಕ್ಕೆ ಬಂದು, ಅಲ್ಲಿ ಕೊಡಲಿಯಿಂದ ಕಾಲುವೆಯನ್ನು ಮಾಡಿ, ಬ್ರಹ್ಮಪುತ್ರನಾದ ಲೌಹಿತ್ಯನದವನ್ನು ಅಲ್ಲಿಂದ ಮುಂದಕ್ಕೆ ಪರಿಯಿಸಿದನು.

೨೯-೩೧. ಆ ಬ್ರಹ್ಮಪುತ್ರನದವು ಬ್ರಹ್ಮಕುಂಡದಿಂದ ಹೊರಟು ಕೈಲಾಸ ಪರ್ವತದ ಕೆಳತಪ್ಪಲಲ್ಲಿರುವ ಲೋಹಿತವೆಂಬ ಸರಸ್ಸಿನಲ್ಲಿ ಬಂದು ಬಿದ್ದಿತು. ಆ ಸರಸ್ಸಿನ

ಕೈಲಾಸೋಪತ್ಯಕಾಯಾಂ ತು ನ್ಯಪತದ್ಬ್ರಹ್ಮಣಃ ಸುತಃ ।
ತಸ್ಯಾಪಿ ಸರಸಸ್ತೀರೇ ಸಮುತ್ಥಾಯ ಮಹಾಬಲಃ ॥ ೩೦ ॥

ಕುಠಾರೇಣ ದಿಶಂ ಪೂರ್ವಮನಯದ್ಬ್ರಹ್ಮಣಃ ಸುತಂ ।
ತತೋ ಪರತ್ರಾಪಿ ಗಿರಿಂ ಹೇಮಶೃಂಗಂ ವಿಭಿದ್ಯ ಚ ॥ ೩೧ ॥

ಕಾಮರೂಪಾಂತರಂ ಪೀಠಮನಾಹಯದಮುಂ ಹರಿಃ ।
ತಸ್ಯ ನಾಮ ಸ್ವಯಂ ಚಕ್ರೇ ವಿಧಿರ್ಲೋಹಿತಗಂಗಕಂ ॥ ೩೨ ॥

ಲೋಹಿತಾತ್ಸರಸೋ ಯಸ್ಮಾಲ್ಲೋಹಿತಾಖ್ಯಸ್ತತೋಽಭವತ್ ।
ಸ ಕಾಮರೂಪಮಖಿಲಂ ಪೀಠಮಾಪ್ಲಾವ್ಯ ವಾರಿಣಾ ॥ ೩೩ ॥

ಗೋಪಾಯ್ಯ ಸರ್ವತೀರ್ಥಾನಿ ದಕ್ಷಿಣಂ ಯಾತಿ ಸಾಗರಂ ।
ಪ್ರಾಗೇವ ದಿವ್ಯಯಮುನಾಂ ಸ ತ್ಯಕ್ತ್ವಾ ಬ್ರಹ್ಮಣಃ ಸುತಃ ॥ ೩೪ ॥

ಪುನಃ ಪತತಿ ಲೌಹಿತ್ಯೇ ಗತ್ವಾ ದ್ವಾದಶಯೋಜನಂ ।
ಚೈತ್ರೇ ಮಾಸಿ ಸಿತಾಷ್ಟಮ್ಯಾಂ ಯೋ ನರೋ ನಿಯತೇಂದ್ರಿಯಃ ॥ ೩೫ ॥

ತೀರದಲ್ಲಿಯೂ ಸಹ ಬಲಿಷ್ಠನಾದ ಪರಶುರಾಮನು ಕೊಡಲಿಯಿಂದ ಕಾಲುವೆಯನ್ನು ಮಾಡಿ ಅಲ್ಲಿಂದ ಆ ನದವನ್ನು ಪೂರ್ವದಿಕ್ಕಿಗೆ ಹರಿಯಿಸಿದನು. ಆಮೇಲೆ ಇನ್ನೊಂದೆಡೆಯಲ್ಲಿ ಹೇಮಶೃಂಗವೆಂಬ ಗಿರಿಯನ್ನು ಭೇದಿಸಿ, ವಿಷ್ಣುರೂಪಿಯಾದ ಆ ಪರಶುರಾಮನು ಕಾಮರೂಪಪೀಠದಲ್ಲಿಯೂ ಹರಿಯಿಸಿದನು.

೩೨-೩೩. ಆ ನದಕ್ಕೆ ಸ್ವಯಂ ಬ್ರಹ್ಮನು ಲೋಹಿತಗಂಗ ಎಂಬ ಹೆಸರನ್ನಿಟ್ಟನು. ಲೋಹಿತ ಸರಸ್ಸಿನಿಂದ ಅದು ಬಂದುದರಿಂದ ಅದಕ್ಕೆ ಲೋಹಿತನದವೆಂದು ಹೆಸರಾಯಿತು. ಆ ಲೋಹಿತನದವು ಕಾಮರೂಪಪೀಠವನ್ನೆಲ್ಲಾ ಮುಳುಗಿಸಿ, ಅಲ್ಲಿರುವ ತೀರ್ಥಗಳನ್ನೆಲ್ಲಾ ಮುಚ್ಚಿ ರಕ್ಷಿಸುತ್ತಾ ದಕ್ಷಿಣಸಮುದ್ರವನ್ನು ಸೇರುವುದು.

೩೪. ಹಿಂದೆಯೇ ದಿವ್ಯ ಯಮುನಾನದಿಯನ್ನು ಬಿಟ್ಟು ಆ ಬ್ರಹ್ಮಪುತ್ರನಾದ ಲೋಹಿತ್ಯನದವು ಹನ್ನೆರಡುಯೋಜನ ದೂರ ಹರಿದು, ತಿರುಗಿ ಲೌಹಿತ್ಯಸರಸ್ಸನ್ನು ಸೇರುವುದು.

೩೫-೩೬. ಚೈತ್ರಮಾಸದ ಶುಕ್ಲಾಷ್ಟಮಿಯಲ್ಲಿ ಯಾವ ಮಾನವನು ಜಿತೇಂದ್ರಿಯನಾಗಿ ಲೌಹಿತ್ಯನದಜಲದಲ್ಲಿ ಸ್ನಾನಮಾಡುವನೋ ಅವನು ಬ್ರಹ್ಮಲೋಕವನ್ನು

ಚೈತ್ರಂ ತು ಸಕಲಂ ಮಾಸಂ ಶುಚಿಃ ಪ್ರಯತಮಾನಸಃ ।
ಸ್ನಾತಿ ಲೋಹಿತ್ಯತೋಯೇಷು ಸ ಯಾತಿ ಬ್ರಹ್ಮಣಃ ಪದಂ ॥ ೩೬ ॥

ಲೋಹಿತ್ಯತೋಯೇ ಯಃ ಸ್ನಾತಿ ಸ ಕೈವಲ್ಯಮವಾಪ್ನುಯಾತ್ ।
ಇತಿ ತೇ ಕಥಿತಂ ರಾಜ್ಞ ಯದರ್ಥಂ ಮಾತರಂ ಪುರಾ ॥ ೩೭ ॥

ಅಹ್ನ ವೀರೋ ಜಾಮದಗ್ನ್ಯೋ ಯಸ್ಮಾದ್ವಾ ಕ್ರೂರಕರ್ಮಕೃತ್ ।
ಇದಂ ತು ಮಹದಾಖ್ಯಾನಂ ಯಃ ಶೃಣೋತಿ ದಿನೇ ದಿನೇ ॥ ೩೮ ॥

ಸ ದೀರ್ಘಾಯುಃ ಪ್ರಮುದಿತೋ ಬಲವಾನಭಿಜಾಯತೇ ।
ಇತೀ ತೇ ಕಥಿತಂ ರಾಜ್ಞ ಶರೀರಾರ್ಧಂ ಯಥಾದ್ರಿಜಾ ॥ ೩೯ ॥

ಶಂಭೋರ್ಜಹಾರ ವೇತಾಲಭೈರವೌ ಚ ಯಥಾಹ್ವಯೌ ।
ಯಸ್ಯ ವಾ ತನಯೌ ಜಾತೌ ಯಥಾ ಯಾತೌ ಗಣೇಶತಾಂ ॥ ೪೦ ॥

ಪಡೆಯುವನು. ಚೈತ್ರಮಾಸ ಪೂರ್ತಿಯಾಗಿ ಯಾವನು ಆ ನದದ ಜಲವಲ್ಲಿ ಸ್ನಾನ ಮಾಡುವನೋ ಅವನು ಮುಕ್ತಿಯನ್ನೇ ಪಡೆಯುವನು.

೩೭. ಎಲೈ ರಾಜನೇ, ಈರೀತಿಯಾಗಿ ಜಮದಗ್ನಿಪುತ್ರನಾದ ರಾಮನು ಏನು ಕಾರಣ ತನ್ನ ತಾಯಿಯನ್ನು ಕೊಂದನು ?ಮತ್ತು ವೀರನಾದ ಅವನು ಇಂತಹ ಕ್ರೂರ ಕರ್ಮವನ್ನೇಕೆ ಆಚರಿಸಿದನು ಎಂಬುದನ್ನೂ ನಿನಗೆ ಹೇಳಿರುವೆನು.

೩೮. ಈ ಮಹೋಪಾಖ್ಯಾನವನ್ನು ಯಾವನು ನಿತ್ಯವೂ ಕೇಳುವನೋ ಅವನು ಸದಾ ಸುಖಿಯೂ, ಬಹಳಕಾಲ ಬದುಕುವವನೂ, ಬಲಶಾಲಿಯೂ ಆಗುವನು.

೩೯-೪೦. ಮತ್ತು ಎಲೈ ರಾಜನೇ ! ಗಿರಿಜೆಯು ಶಂಕರನ ಅರ್ಧ ಶರೀರವನ್ನು ಹೇಗೆ ಸ್ವೀಕರಿಸಿದಳು? ವೇತಾಲಭೈರವರೆಂಬುವವರು ಯಾರು? ಯಾರ ಪುತ್ರರು? ಹೇಗೆ ಜನಿಸಿದರು? ಮತ್ತು ಶಂಕರನ ಪ್ರಮಥಗಣಗಳ ನಾಯಕತ್ವವನ್ನು ಹೇಗೆ ಪಡೆದರು? ಎಂಬುದೆಲ್ಲವನ್ನೂ ಈಗ ನಿನಗೆ ಹೇಳಿರುವೆನು. ಮತ್ತೇನನ್ನು ಕೇಳಬೇಕೆಂದಿರುವೆಯೋ ಕೇಳು, ಅವನ್ನು ಹೇಳುವೆನು.

ಕಮನ್ಯತ್ಕಥಯೇ ತುಭ್ಯಂ ತದ್ವದಸ್ವ ನೃಪೋತ್ತಮ ।

॥ ಮಾರ್ಕಂಡೇಯ ಉವಾಚ ॥

ಇತ್ಯೌರ್ವಸ್ಯ ಚ ಸಂವಾದಃ ಸಗರೇಣ ಮಹಾತ್ಮನಾ । ॥ ೪೧ ॥

ಯೋಽಸೌ ಕಾಯಾರ್ಧಹರಣಃ ಶಂಭೋರ್ಗಿರಿಜಯಾ ಕೃತಃ ।
ಸರ್ವೋಽದ್ಯ ಕಥಿತೋ ವಿಪ್ರಾಃ ಪೃಷ್ಟಂ ಯಚ್ಚಾನ್ಯದುತ್ತಮಂ ॥ ೪೨ ॥

ಸಿದ್ಧಸ್ಯ ಭೈರವಾಖ್ಯಸ್ಯ ಪೀಠಾನಾಂ ಚ ವಿನಿರ್ಣಯಂ ।
ಭೃಂಗಿಣಶ್ಚ ಯಥೋತ್ಪತ್ತಿರ್ಮಹಾಕಾಲಸ್ಯ ಚೈವ ಹಿ ॥ ೪೩ ॥

ಉಕ್ತಂ ಹಿ ವಃ ಕಮನ್ಯತ್ತು ಪೃಚ್ಛಂತು ದ್ವಿಜಸತ್ತಮಾಃ ।

ಇತಿ ಸಕಲಸುತಂತ್ರಂ ತಂತ್ರಮಂತ್ರಾವದಾತಂ
ಬಹುತರಫಲಕಾರಿ ಪ್ರಾಜ್ಞವಿಶ್ರಾಮಕಲ್ಪಂ ।

೪೧-೪೨. ಮಾರ್ಕಂಡೇಯಮುನಿ ಇಂತೆಂದನು:—ಎಲೈ ಬ್ರಾಹ್ಮಣೋತ್ತಮರೇ! ಈರೀತಿಯಾಗಿ ಔರ್ವಮುನಿ ಮತ್ತು ಮಹಾತ್ಮನಾವ ಸಗರರಾಜ ಇವರುಗಳ ಸಂವಾದರೂಪವಾಗಿ, ಗಿರಿಜೆಯು ಶಂಕರನ ಅರ್ಧಶರೀರವನ್ನು ಸ್ವೀಕರಿಸಿದುದನ್ನು ಹೇಳಿರುವೆನು. ಮತ್ತು ನೀವು ಇನ್ನೇನನ್ನು ಕೇಳುವಿರೋ ಅದೆಲ್ಲವನ್ನೂ ಹೇಳಿರುವೆನು.

೪೩. ಸಿದ್ಧಭೈರವನ ಸ್ವರೂಪವನ್ನೂ ಕಾಮರೂಪಪೀಠಗಳ ನಿರ್ಣಯವನ್ನೂ ಭೃಂಗಿ, ಮಹಾಕಾಲರು ವೇತಾಲಭೈರವರೂಪದಿಂದ ಜನಿಸಿದುದನ್ನೂ, ನೀವು ಮಧ್ಯೆ ಮಧ್ಯೆ ಕೇಳಿದ ಮಿಕ್ಕ ಎಲ್ಲ ವಿಷಯಗಳನ್ನೂ ಹೇಳಿರುವೆನು. ಇನ್ನೇನನ್ನು ಹೇಳ ಬೇಕು, ಎಲೈ ಬ್ರಾಹ್ಮಣೋತ್ತಮರೇ ಕೇಳಿರಿ.

ಉಪನಿಷದಮುವೇತ್ಯ ಜ್ಞಾನಮಾರ್ಗೈಕತಾನಂ ।
ಸ್ರವತಿ ಸ ಇಹ ನಿತ್ಯಂ ಯಃ ಪಠೇತ್ತಂತ್ರಮೇತತ್ ॥ ೪೪ ॥

॥ ಇತಿ ಶ್ರೀಕಾಲಿಕಾಪುರಾಣೇ ಷಡಶೀತಿತಮೋಽಧ್ಯಾಯಃ ॥

---

೪೪. ಈರೀತಿಯಾಗಿ ಆ ಕಾಮಾಖ್ಯಾತಂತ್ರವು ಸಕಲ ಮಂತ್ರತಂತ್ರಸ್ವರೂಪವಾಗಿಯೂ, ಅನೇಕ ಫಲಗಳನ್ನೀಯುವುದಾಗಿಯೂ ಇರುವುದಲ್ಲದೆ, ಉಪನಿಷತ್ತುಗಳಂತೆ ಅತಿ ಪವಿತ್ರವಾದುದೂ, ಜ್ಞಾನಪ್ರದವಾದುದೂ ಆಗಿರುವುದು. ಇಂತಹ ಈ ತಂತ್ರವನ್ನು ತಿಳಿದು ಯಾವನು ನಿತ್ಯವೂ ಪಠಿಸುವನೋ ಅವನು ಇಹದಲ್ಲಿ ಜ್ಞಾನವನ್ನು ಪಡೆದು ಮುಕ್ತಿಭಾಗಿಯಾಗುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತಾರನೆಯ
ಅಧ್ಯಾಯವು ಮುಗಿದುದು

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಸಪ್ತಾಶೀತಿತಮೋऽಧ್ಯಾಯಃ ॥

॥ ಋಷಯ ಊಚುಃ ॥

ಕಥಿತೋ ಭವತಾ ಸರ್ಗಃ ಸಂಶಯಾಶ್ಚಾಪಿ ಶಾತಿತಾಃ ।
ತ್ವತ್ಪ್ರಸಾದಾನ್ಮಹಾಭಾಗ ಕೃತಕೃತ್ಯಾ ವಯಂ ಗುರೋ ॥ ೧ ॥

ಭೂಯಶ್ಚ ಶ್ರೋತುಮಿಚ್ಛಾಮೋ ವಯಮೇತದ್ದ್ವಿಜೋತ್ತಮ ।
ಕೋऽನ್ಯೋ ಭೃಂಗೀ ಮಹಾಕಾಲೋ ಜಾತೌ ವೇತಾಲಭೈರವೌ ॥ ೨ ॥

ವೇತಾಲಂ ಚ ಮಹಾಕಾಲಂ ಭೈರವಂ ಭೃಂಗಿಣಂ ತಥಾ ।
ಶೃಣುಮೋ ದ್ವಿಜಶಾರ್ದೂಲ ಕಥಮೇಷಾಂ ಚತುಷ್ಟಯಂ ॥ ೩ ॥

ಎಂಭತ್ತೇಳನೆಯ ಅಧ್ಯಾಯವು.

೧. ಋಷಿಗಳು ಕೇಳಿದರು:—ಓ ಮಾರ್ಕಂಡೇಯಮುನಿಯೇ! ಸೃಷ್ಟಿಕ್ರಮವನ್ನೂ ನೀನು ನಿರೂಪಿಸಿರುವೆ. ಮತ್ತು ನಮ್ಮ ಸಂಶಯಗಳನ್ನೆಲ್ಲಾ ಪೋಗಲಾಡಿಸಿರುವೆ, ಓ ಗುರುವೇ! ನಿನ್ನ ಅನುಗ್ರಹದಿಂದ ನಾವು ಕೃತಾರ್ಥರಾದೆವು.

೨-೩. ಓ ಬ್ರಾಹ್ಮಣೋತ್ತಮನೇ! ತಿರುಗಿ ನಾವು ಇದನ್ನು ಕೇಳಲಿಚ್ಛಿಸುವೆವು. ಭೃಂಗಿ ಮಹಾಕಾಲರು ವೇತಾಲಭೈರವರಾಗಿ ಜನಿಸಿದಮೇಲೂ, ಬೇರೆ ಭೃಂಗಿ, ಮಹಾಕಾಲರು ಇರುವರೆಂದು ಕೇಳಿರುವೆವು, ಅವರು ಯಾರು? ವೇತಾಲ, ಮಹಾಕಾಲ, ಭೈರವ, ಭೃಂಗಿ ಈ ನಾಲ್ಕು ಜನರ ಇತಿಹಾಸವನ್ನು ನಾವು ಸಂಪೂರ್ಣವಾಗಿ ಕೇಳಲಿಚ್ಛಿಸುವೆವು.

॥ ಮಾರ್ಕಂಡೇಯ ಉವಾಚ ॥

ಭುವಂ ಗತೇ ಮಹಾಕಾಲೇ ಮಾನುಷ್ಯಸ್ಥೇ ಚ ಭೃಂಗಿಣೇ ।
ವೇತಾಲಭೈರವಾಖ್ಯೇ ಚ ತಯೋರ್ಭೂತೇ ದ್ವಿಜೋತ್ತಮಾಃ ॥ ೪ ॥

ವರಲಬ್ಧೇ ಚ ವೇತಾಲೇ ಭೈರವೇ ತೇನ ಸಂಗತೇ ।
ಅಂಧಕಂ ತಪಸಾ ಯುಕ್ತಂ ಭೃಂಗಿಣಂ ಚಾಽಕರೋದ್ಧರಃ ॥ ೫ ॥

ಅಂಧಕಸ್ತು ಹರಂ ಪೂರ್ವಂ ವಿರುದ್ಧ್ಯಾಪದಮಾಗತಃ ।
ಪಶ್ಚಾದ್ಧರಂ ಸಮಾರಾಧ್ಯ ಪುತ್ರೋಽಭೂತ್ತಸ್ಯ ಸೋಽಸುರಃ ॥ ೬ ॥

ಭೃಂಗಿಸ್ನೇಹಾದ್ಭೃಂಗಿಣಂ ತಂ ಸಂಜ್ಞಯಾ ಚಾಕರೋದ್ಧರಃ ।
ಸ್ನೇಹೇನ ತು ಮಹಾಕಾಲೇ ಬಾಣಂ ಬಲಿಸುತಂ ಹರಃ ॥ ೭ ॥

ವಿಷ್ಣುನಾ ಛಿನ್ನಬಾಹುಂ ತಂ ಮಹಾಕಾಲಮಥಾಕರೋತ್ ।
ಏವಂ ಮುನಿವರಾಸ್ತೇಷಾಂ ಸಂಯುತಂ ಚ ಚತುಷ್ಟಯಂ ॥ ೮ ॥

---

೪. ಮಾರ್ಕಂಡೇಯನುನಿಯು ಹೇಳಿದನು:—ಎಲೈ ಬ್ರಾಹ್ಮಣಶ್ರೇಷ್ಠರೇ! ಭೂಲೋಕಕ್ಕೆ ಬಂದು ಮನುಷ್ಯರೂಪದಿಂದ ಜನಿಸಲು, ಆ ಭೃಂಗಿಮಹಾಕಾಲರಿಗೆ ವೇತಲಭೈರವನೆಂಬ ಹೆಸರು ಬಂದುದು ಸರಿಯಷ್ಟೆ.

೫-೬. ಆಮೇಲೆ ಆ ವೇತಾಲಭೈರವರು ಮಹಾದೇವನ ವರಪ್ರಸಾದದಿಂದ ಶಿವಗಣಗಳಾದರು. ಬಳಿಕ, ತಪಸ್ಸಿನಿಂದ ತನ್ನನ್ನು ಸಂತೋಷಗೊಳಿಸಿದ ಅಂಧಕಾಸುರನೆಂಬುವನನ್ನು ಭೃಂಗಿಯೆಂದು ಅವನ ಸ್ಥಾನದಲ್ಲಿ ನಿಯಮಿಸಿದನು. ಎಂದಿತೆ ಅವನಿಗೆ ಭೃಂಗಿಯ ಸ್ಥಾನವನ್ನು ಕೊಟ್ಟನು. ಈ ಅಂಧಕಾಸುರನು ಮೊದಲು ಶಂಕರನ ದ್ವೇಷಿಯಾಗಿದ್ದು ತುಂಬಾ ಕಷ್ಟವನ್ನನುಭವಿಸಿದನು, ಆಮೇಲೆ ಅವನು ಹರನನ್ನಾರಾಧಿಸಿ ಶಂಕರಪುತ್ರನಾದ ಭೃಂಗಿಯಾದನು.

೭-೮. ಆ ಅಂಧಕಾಸುರನಿಗೆ ಭೃಂಗಿಯಲ್ಲಿ ತುಂಬ ಸ್ನೇಹವಿತ್ತು. ಅದರಿಂದ ಹರನು ಅವನನ್ನು ಭೃಂಗಿಯನ್ನಾಗಿಯೇ ಮಾಡಿದನು. ಅದರಂತೆ, ಒಲಿಪುತ್ರನಾದ ಬಾಣಾಸುರನಿಗೆ ಮಹಾಕಾಲನಲ್ಲಿ ಅತಿಶಯವಾದ ಸ್ನೇಹವಿತ್ತು. ಆದುದರಿಂದ ಆ ಬಾಣಾಸುರನನ್ನು ಮಹಾಕಾಲನನ್ನಾಗಿ ಮಾಡಿ ಅವನ ಸ್ಥಾನದಲ್ಲಿ ನಿಯಮಿಸಿದನು.

ವೇತಾಲಭೈರವೌ ಭೃಂಗಿಮಹಾಕಾಲೌ ಹ್ಯನುಕ್ರಮಾತ್ ।

॥ ಋಷಯ ಊಚುಃ ॥

ಯತ್ಪೃಷ್ಟಂ ಸಗರೇಣೈವ ಮುನಿಮೌರ್ವಂ ಮಹಾತಪಂ ॥ ೯ ॥

ನೀತ್ಯಾ ಯೋಜ್ಯಾ ಯಯಾ ಭಾರ್ಯಾ ಸುತ ಆತ್ಮಾಥವಾ ಗುರೋ ।
ರಾಜನೀತೌ ಸತಾಂ ನೀತೌ ಸದಾಚಾರೇ ಚ ಯೇ ಸ್ಥಿತಾಃ ॥ ೧೦ ॥

ವಿಶೇಷಾಸ್ತೇನ ಯೇ ಪ್ರೋಕ್ತಾ ಔರ್ವೇಣ ಸುಮಹಾತ್ಮನಾ ।
ವಿಶೇಷೇಣ ದ್ವಿಜಶ್ರೇಷ್ಠ ಶ್ರೋತುಂ ಸಮ್ಯಕ್ತಪೋಧನ ॥ ೧೧ ॥

ಇಚ್ಛಾಮಸ್ತಾನ್ಮಹಾಭಾಗ ಕಥಯಸ್ವ ಜಗದ್ಗುರೋ !

॥ ಮಾರ್ಕಂಡೇಯ ಉವಾಚ ॥

ಯೇ ಯೇ ವಿಶೇಷಾಃ ಕಥಿತಾ ಔರ್ವೇಣ ಸುಮಹಾತ್ಮನಾ ॥ ೧೨ ॥

ಈ ಬಾಣಾಸುರನ ಬಾಹುಗಳನ್ನು ಹಿಂದೆ ವಿಷ್ಣುವು ಕತ್ತರಿಸಿದನೆಂದು ಪೂರ್ವೇತಿಹಾಸವುಂಟು. ಆದುದರಿಂದ ಎಲೈ ಮುನಿಶ್ರೇಷ್ಠರೇ! ಹೀಗೆ ವೇತಾಲ, ಭೈರವ, ಭೃಂಗಿ, ಮಹಾಕಾಲ ಎಂದು ನಾಲ್ಕುಜನಗಳಾದರು.

೯-೧೧. ಋಷಿಗಳು ಕೇಳಿದರು:—ಓ ಮುನಿಶ್ರೇಷ್ಠನೇ! ಸಗರರಾಜನು ಮಹಾ ತಪಸ್ವಿಯಾದ ಔರ್ವಮುನಿಯನ್ನು ಕುರಿತು ಏನೇನನ್ನು ಕೇಳಿರುವನೋ ಅದೆಲ್ಲವನ್ನೂ ಹೇಳು: ಪತ್ನಿ, ಸುತ ಮತ್ತು ತಾನು ಇವರುಗಳು ಅನುಸರಿಸಬೇಕಾದ ನೀತಿಯನ್ನೂ, ಆಚರಿಸಬೇಕಾದ ಸದಾಚಾರಗಳನ್ನೂ, ರಾಜನೀತಿ, ಸತ್ಪುರುಷರ ನೀತಿ, ಸತ್ಪುರುಷರ ಆಚಾರ ಇವುಗಳಲ್ಲಿನ ವಿಶೇಷವನ್ನು ಔರ್ವಮುನಿಯು ಹೇಳಿದಂತೆಯೇ ಹೇಳು. ಜಗದ್ಗುರುವಾದ ಓ ಬ್ರಾಹ್ಮಣೋತ್ತಮನೇ! ಇದೆಲ್ಲವನ್ನೂ ವಿಶೇಷರೀತಿಯಿಂದ ನಾವು ಕೇಳಲಿಚ್ಛಿಸುವೆವು. ವಿಸ್ತಾರವಾಗಿ ಈ ವಿಷಯಗಳೆಲ್ಲವನ್ನೂ ಹೇಳುವವನಾಗು.

೧೨. ಮಾರ್ಕಂಡೇಯ ಉವಾಚ:—ಎಲೈ ಮುನಿಶ್ರೇಷ್ಠರೇ! ಮಹಾತ್ಮನಾದ ಔರ್ವಮುನಿಯು ಯಾವಯಾವ ವಿಶೇಷ ವಿಷಯಗಳನ್ನು ಸಗರರಾಜನಿಗೆ ಹೇಳಿರುವನೋ ಅದೆಲ್ಲವನ್ನೂ ಹೇಳುವೆನು, ಕೇಳಿ.

ತದ್ವಃ ಸರ್ವಂ ಪ್ರವಕ್ಷ್ಯಾಮಿ ಶೃಣ್ವಂತು ಮುನಿಸತ್ತಮಾಃ ।
ಶ್ರುತ್ವೈವಂ ಸಗರೋ ರಾಜಾ ಮಂತ್ರಕಲ್ಪಾದಿಕಂ ಪುನಃ ॥ ೧೩ ॥

ವಿಶೇಷಾರ್ಥ ಪರಿಪಪ್ರಚ್ಛ ನೀತ್ಯಾದೀನಾಂ ಮಹಾಮುನಿಂ ।

॥ ಸಗರ ಉವಾಚ ॥

ಯಯಾ ನಿತ್ಯಾ ಪ್ರಯೋಕ್ತವ್ಯಃ ಸುತ ಆತ್ಮಾ ಪ್ರಿಯಾ ತಥಾ ॥ ೧೪ ॥

ತೇಷಾಂ ವಿಶೇಷೈಃ ಸಹಿತಂ ಸದಾಚಾರಂ ವದಸ್ವ ಮೇ ।

॥ ಔರ್ವ ಉವಾಚ ॥

ಕ್ರಮೇಣ ಶೃಣು ರಾಜೇಂದ್ರ ಯಯಾ ನೀತ್ಯಾ ನಿಯೋಜಿತಾಃ ॥ ೧೫ ॥

ಆತ್ಮಾ ಸುತೋ ವಾ ಭಾರ್ಯಾ ವಾ ತದ್ವಿಶೇಷಂ ಶೃಣುಷ್ವ ಮೇ ।
ಜ್ಞಾನವಿದ್ಯಾತಪೋವೃದ್ಧಾ ವಯೋವೃದ್ಧಾ ಸುದಕ್ಷಿಣಾಃ ॥ ೧೬ ॥

---

೧೩. ಸಗರರಾಜನು ಕಾಮರೂಪಪೀಠಾದಿಗಳ ಮಂತ್ರಕಲ್ಪಗಳನ್ನು ಕೇಳಿ, ಬಳಿಕ ರಾಜನೀತಿ ಮುಂತಾದವುಗಳ ವಿಶೇಷಗಳನ್ನು ಹೇಳಬೇಕೆಂದು ಆ ಮುನಿಯನ್ನು ಪ್ರಾರ್ಥಿಸಿದನು.

೧೪. ಸಗರರಾಜನು ಕೇಳಿದನು:—ಓ ಮುನಿಯೇ! ಪತ್ನಿಪುತ್ರಾದಿಗಳೂ, ತಾನೂ ಎಂತಹ ನೀತಿಯನ್ನೂ, ಸದಾಚಾರವನ್ನೂ, ಅನುಸರಿಸಬೇಕೆಂಬುದನ್ನೂ ಸತ್ಪುರುಷರಾದವರು ಆಚರಿಸಬೇಕಾದ ಸತ್ಕರ್ಮಾಚರಣೆ ಮೊದಲಾದವನ್ನೂ ನನಗೆ ಹೇಳು.

೧೫. ಔರ್ವಮುನಿ ಇಂತೆಂದನು:—ಎಲೈ ರಾಜನೇ! ತಾನು, ತನ್ನಪತ್ನಿ, ಪುತ್ರ ಇವರುಗಳು ಎಂತಹ ನೀತಿಯನ್ನು ಅನುಸರಿಸಬೇಕೆಂಬುದನ್ನೂ, ಅವರ ವಿಶೇಷ ಧರ್ಮಗಳನ್ನೂ ಕ್ರಮವಾಗಿ ಹೇಳುವೆನು, ಕೇಳು.

೧೬. ಮನುಷ್ಯನಿಗೆ ಪ್ರಥಮ ಕರ್ತವ್ಯವೇನೆಂದರೆ—ಬ್ರಾಹ್ಮಣರಲ್ಲಿ ಜ್ಞಾನವೃದ್ಧರೂ, ವಯೋವೃದ್ಧರೂ, ವಿದ್ಯಾವಂತರೂ, ತಪಸ್ವಿಗಳೂ, ಸಮರ್ಥರೂ, ಅಸೂಯಾದಿದೋಷರಹಿತರೂ ಆಗಿರುವವರನ್ನು ಸೇವಿಸಬೇಕು.

ಸೇವೇತ ಪ್ರಥಮಂ ವಿಪ್ರಾನಸೂಯಾಪರಿವರ್ಜಿತಾರ್ ।
ತೇಭ್ಯಶ್ಚ ಶೃಣುಯಾನ್ನಿತ್ಯಂ ವೇದಶಾಸ್ತ್ರವಿನಿಶ್ಚಯಂ ॥ ೧೭ ॥

ಯದೂಚುಸ್ತೇ ಚ ತತ್ಕಾರ್ಯಂ ಪ್ರಾಜ್ಞಶ್ಚೈವ ನೃಪಶ್ಚರೇತ್ ।
ಪಂಚೇಂದ್ರಿಯಾಣಿ ಪಂಚಾಶ್ವಾಃ ಶರೀರಂ ರಥ ಉಚ್ಯತೇ ॥ ೧೮ ॥

ಆತ್ಮಾ ರಥೀ ಕರಾಜ್ಞಾನಂ ಸಾರಥಿರ್ಮನ ಏವ ತು ।
ಅಶ್ವಾನ್ ಸುದಾಂತಾನ್ ಕುರ್ವೀತ ಸಾರಥಿಂ ಚಾತ್ಮನೋ ವಶಂ ॥ ೧೯ ॥

ಕಶಾ ದೃಢಾ ಸದಾ ಕಾರ್ಯಾ ಶರೀರಸ್ಥಿರತಾ ತಥಾ ।
ಅದಾಂತಾಂಸ್ತು ಸಮಾರುಹ್ಯ ಸೈಂಧವಾನ್ ಸ್ಯಂದಿನೀ ಯಥಾ ॥ ೨೦ ॥

ಅಶ್ವಾನಾಮಿಚ್ಛಯಾ ಗಚ್ಛನ್ನುತ್ಪಥಂ ಪ್ರತಿಪದ್ಯತೇ ।
ತತ್ರಾವಶಃ ಸಾರಥಿಸ್ತು ಸ್ವೇಚ್ಛಯಾ ಪ್ರೇರಯೇತ್ ಪಥಾ ॥ ೨೧ ॥

---

೧೭. ಅಂತಹ ಬ್ರಾಹ್ಮಣರಿಂದ ನಿತ್ಯವೂ ವೇದಶಾಸ್ತ್ರಾರ್ಥಗಳನ್ನು ಕೇಳ ಬೇಕು. ಅವರು ಹೇಳುವಂತೆ ನಡೆಯಬೇಕು. ಪ್ರಾಜ್ಞನಾದ ರಾಜನೂ ಸಹ ಅವರ ಉಪದೇಶದಂತೆ ನಡೆಯಬೇಕು.

೧೮. ಚಕ್ಷುರಾದಿ ಐದು ಇಂದ್ರಿಯಗಳೇ ಐದು ಕುದುರೆಗಳು. ಶರೀರವೇ ರಥವು. ಆತ್ಮನು ರಥಿಕನು. ಜ್ಞಾನವೇ ಲಗಾಮು. ಮನವೇ ಸಾರಥಿ.

೧೯. ಕುದುರೆ (ಇಂದ್ರಿಯ) ಗಳನ್ನು ಸಾಧುಗಳನ್ನಾಗಿ ಮಾಡಿಕೊಳ್ಳಬೇಕು. ಸಾರಥಿ (ಮನಸ್ಸು) ಯನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕು. ಲಗಾಮನ್ನು (ಜ್ಞಾನ) ದೃಢವಾಗಿಯೂ, ಶರೀರವೆಂಬ ರಥವನ್ನು ಸ್ಥಿರವಾಗಿಯೂ ಮಾಡಿಕೊಳ್ಳಬೇಕು. ಎಂದರೆ ಮನಸ್ಥೈರ್ಯದಿಂದ ಇಂದ್ರಿಯಗಳನ್ನು ಜಯಿಸಿ ತನ್ನ ವಶವರ್ತಿಯಾಗಿ ಮಾಡಿಕೊಳ್ಳಬೇಕು.

೨೦. ಸಾಧುವಲ್ಲದ ಎಂದರೆ ದುಷ್ಟವಾದ ಕುದುರೆಗಳನ್ನೇರಿ ಆ ಕುದುರೆಗಳ ಇಚ್ಛೆಯಂತೆ ಗಮನಮಾಡುವ ರಥಿಕನು ಹಳ್ಳಕ್ಕೆ ಬೀಳುವನು, ಎಂದರೆ ಕೆಟ್ಟುಹೋಗು ವನು.

೨೧. ಆದರಲ್ಲಿಯೂ ಸಾರಥಿಯು ತನ್ನಧೀನದಲ್ಲಿಲ್ಲದೆ ಸ್ವೇಚ್ಛೆಯಾಗಿದ್ದರೆ ಅವನು ತನ್ನಿಚ್ಛೆಯಂತೆ ಕುದುರೆಗಳನ್ನು ನಡೆಸುತ್ತಾ ರಥಿಕನು ಎಷ್ಟೇ ಬಲಯುಕ್ತನಾದ ವೀರನಾದರೂ ಅವನನ್ನು ಶತ್ರುವಿನ ವಶಕ್ಕೊಪ್ಪಿಸುವನು.

ನಯೇತ್ಪರವಶಂ ಸಮ್ಯ ಗ್ಗ್ರಥಿತಂ ವೀರಮುಪ್ಯತ ।
ತಥೇಂದ್ರಿಯಾಣಿ ನೃಪತಿರ್ವಿಷಯಾಣಾಂ ಪರಿಗ್ರಹೇ ॥ ೨೨ ॥

ಸ್ವವಶ್ಯಾನಿ ಪ್ರಕುರ್ವೀತ ಮನೋ ಜ್ಞಾನಂ ದೃಢಂ ತಥಾ ।
ಜ್ಞಾನೇ ದೃಢೇ ಕಶಾಯಾಂ ಚ ದೃಢಾಯಾಂ ನೃಪಸತ್ತಮ ॥ ೨೩ ॥

ಸಾರಥಿಃ ಸ್ವವಶೋ ದಾಂತಾನೀಶಃ ಪ್ರೇರಯಿತುಂ ಹಯಾನ್ ।
ಅತೋ ನೃಪಃ ಸ್ವೇಂದ್ರಿಯಾಣಿ ವಶೇಕೃತ್ವಾಮನಸ್ತಥಾ ॥ ೨೪ ॥

ಜ್ಞಾನಮಾರ್ಗಮಧಿಷ್ಠಾಯ ಪ್ರಕುರ್ವೀತಾತ್ಮನೋ ಹಿತಂ ।
ಭೋಕ್ತವ್ಯಂ ಸ್ವೇಚ್ಛಯಾ ಭೂಯೋ ನ ಕುರ್ಯಾಲ್ಲೋಭಮಾಸನೇ ॥

ದ್ರಷ್ಟವ್ಯಮಿತಿ ದ್ರಷ್ಟವ್ಯಂ ನ ದ್ರಷ್ಟವ್ಯಂ ಚ ಸ್ವೇಚ್ಛಯಾ ।
ಶ್ರೋತವ್ಯಮಿತಿ ಶ್ರೋತವ್ಯಂ ನಾಧಿಕಂ ಶ್ರವಣೇ ಚರೇತ್ ॥ ೨೬ ॥

---

೨೨. ಆದುದರಿಂದ ರಾಜನು (ಮಾನವನು) ವಿಷಯಗಳನ್ನು ಸೇವಿಸುವ ವಿಷಯದಲ್ಲಿ ಇಂದ್ರಿಯಗಳನ್ನೂ, ಮನಸ್ಸನ್ನೂ ತನ್ನ ಅಧೀನದಲ್ಲಿಟ್ಟುಕೊಳ್ಳಬೇಕು. ಮತ್ತು ದೃಢವಾದ ಜ್ಞಾನವುಳ್ಳವನಾಗಬೇಕು.

೨೩. ಜ್ಞಾನವು ದೃಢವಾಗಲು, ಜ್ಞಾನರೂಪವಾದ ಲಗಾಮೂ ದೃಢವಾಗಿ ಸಾರಥಿಯು ರಥಿಕನ ಅಧೀನನಾಗಿಯೂ, ಸಾಧುವಾಗಿಯೂ ಇದ್ದು ಕುದುರೆಗಳನ್ನು ಕೆಟ್ಟಿದಾರಿಗೆ ಹೋಗಗೊಡಿಸುವುದಿಲ್ಲ.

೨೪. ಆದುದರಿಂದ ರಾಜನು ಇಂದ್ರಿಯಗಳನ್ನು ತನ್ನಧೀನದಲ್ಲಿಟ್ಟುಕೊಂಡು ಜ್ಞಾನವೆಂಬ ಲಗಾಮಿನಮೂಲಕ ತನಗೆ ಹಿತವನ್ನು ಮಾಡಿಕೊಳ್ಳಬೇಕು.

೨೫-೨೬. ತನ್ನಿಚ್ಛೆಯಂತೆ ನಿರ್ದಿಷ್ಟವಾದ ವಿಷಯಗಳನ್ನು ಸೇವಿಸಬಹುದು. ಮುಂದಲ್ಲಿ ಯಾವಾಗಲೂ ಆಸೆಪಟ್ಟು ಕುಡಿಯಬಾರದು. ಯಾವುದನ್ನಾದರೂ ನೋಡಬೇಕೆಂಬ ನಿಯಮದಿಂದ, ಕರ್ತವ್ಯವೆಂದು ಭಾವಿಸಿ ನೋಡಬೇಕೇ ಹೊರತು ಸ್ವೇಚ್ಛಾಪ್ರವೃತ್ತಿಯಿಂದ ನೋಡಬಾರದು. ಅದರಂತೆಯೇ ಕೇಳಬೇಕೆಂಬ ನಿಯಮದಿಂದ ಮಿತವಾಗಿಯೇ ಕೇಳಬೇಕು. ಯಾವುದನ್ನೂ ಹೆಚ್ಚಾಗಿ ಕೇಳಬಾರದು. ಎಂದರೆ ಸಂಗೀತಾದಿ ಶ್ರಾವ್ಯಸುಖಗಳಲ್ಲಿ ಹೆಚ್ಚಾಗಿ ಮನಸ್ಸನ್ನಿಡಬಾರದು. ಶಾಸ್ತ್ರತತ್ವ

ಶಾಸ್ತ್ರತತ್ವವಿತೇ ಧೀರಃ ಶ್ರುತಿವಶ್ಯೋ ಭವೇನ್ನ ಹಿ ।
ಏವಂ ಘ್ರಾಣಂ ತ್ವಚಂ ಚಾಪಿ ವಶೀಕೃತ್ಯೇಚ್ಛಯಾ ನೃಪಃ ॥ ೨೭ ॥

ಸ್ವೇಚ್ಛಯಾ ನೋಪಭುಂಜೀತ ನೋದ್ದಾಮಂ ವಿಷಯಂ ವ್ರಜೇತ್ ।
ಏವಂ ಯದಿ ಭವೇದ್ರಾಜಾ ತದಾ ಸಃ ಸ್ಯಾಜ್ಜಿತೇಂದ್ರಿಯಃ ॥ ೨೮ ॥

ಜಿತೇಂದ್ರಿಯತ್ವೇ ಹೇತುಶ್ಚ ಶಾಸ್ತ್ರವಿದ್ಭೋಪಸೇವನಂ ।
ಅವಿದ್ಧಸೇವ್ಯಶಾಸ್ತ್ರಜ್ಞೋ ನೃಪಃ ಶತ್ರುವಶೋ ಭವೇತ್ ॥ ೨೯ ॥

ತಸ್ಮಾಚ್ಛಾಸ್ತ್ರಮಧಿಷ್ಠಾಯ ಭವೇದ್ರಾಜಾ ಜಿತೇಂದ್ರಿಯಃ ।
ಧೃತಿಃ ಪ್ರಾಗಲ್ಭ್ಯಮುತ್ಸಾಹೋ ವಾಕ್ಪಟುತ್ವಂ ವಿವೇಚನಂ ॥ ೩೦ ॥

ದಕ್ಷತ್ವಂ ಧಾರಯಿಷ್ಣುತ್ವಂ ದಾನಂ ಮೈತ್ರೀ ಕೃತಜ್ಞತಾ ।
ದೃಢಶಾಸನತಾ ಸತ್ಯಂ ಶೌಚಂ ಸುತಿವಿನಿಶ್ಚಯಂ ॥ ೩೧ ॥

ವನ್ನು ಹೊರತು ಇನ್ನಾವ ವಿಷಯದಲ್ಲಿಯೂ ಕವಿಗೆ ಅಧೀನನಾಗಬಾರದು. ಹಾಗೆಯೇ ಘ್ರಾಣೇಂದ್ರಿಯ, ತ್ವಗಿಂದ್ರಿಯ, ಇವುಗಳನ್ನು ತನ್ನಧೀನಪಲ್ಲಿಟ್ಟುಕೊಂಡು ರಾಜನು ವಿಷಯಗಳನ್ನು ಮಿತವಾಗಿ ಸೇವಿಸಬೇಕು. ಸ್ವೇಚ್ಛೆಯಾಗಿ ಮೇರೆಮೀರಿ ನಡೆಯ ಬಾರದು.

೨೮. ರಾಜನಾದವನು ಹೀಗೆ ಆಚರಿಸಿದರೆ ಆಗ ಜಿತೇಂದ್ರಿಯನಾಗುವನು. ಜಿತೇಂದ್ರಿಯನಾಗಬೇಕಾದರೆ ಶಾಸ್ತ್ರಜ್ಞರನ್ನೂ, ಜ್ಞಾನಿಗಳನ್ನೂ ಅವಶ್ಯವಾಗಿ ಸೇವಿಸ ಬೇಕು.

೨೯. ಜ್ಞಾನಿಗಳನ್ನು ಸೇವಿಸದಿಯೂ, ಶಾಸ್ತ್ರವನ್ನು ತಿಳಿಯದಿಯೂ ಇದ್ದರೆ ರಾಜನು ಶತ್ರುಗಳ ಅಧೀನನಾಗುವನು. ಶಾಸ್ತ್ರನಿಯಮದಂತೆ ನಡೆದರೆ ರಾಜನು ಜಿತೇಂದ್ರಿಯನಾಗುವನು.

೩೦-೩೨. ರಾಜನಾದವನು ಮುಖ್ಯವಾಗಿ ಈ ಕೆಳಗಿನ ಗುಣಗಳನ್ನು ಅಭ್ಯಾಸ ಮಾಡಿ ಅವುಗಳನ್ನು ತನ್ನ ಆಚರಣೆಯಲ್ಲಿಟ್ಟುಕೊಳ್ಳಬೇಕು — ಧೈರ್ಯ, ಪ್ರಾಗಲ್ಭ್ಯ, ಉತ್ಸಾಹ, ಸಮಯಾನುಸಾರ ಯುಕ್ತಾಯುಕ್ತ ವಿವೇಚನೆಯಿಂದ ಮಾತನಾಡುವುದು, ಕೆಲಸ ಮಾಡುವುದರಲ್ಲಿ ಸಾಮರ್ಥ್ಯ, ಕೆಲಸವನ್ನು ನಿರ್ವಹಿಸುವ ಶಕ್ತಿ,, ದಾನ, ಸ್ನೇಹ

ಪರಾಭಿಪ್ರಾಯವೇದಿತ್ವಂ ಚಾರಿತ್ರಂ ಧೈರ್ಯಮಾಪದಿ ।
ಕ್ಲೇಶಧಾರಣಶಕ್ತಿಶ್ಚ ಗುರುದೇವದ್ವಿಜಾರ್ಚನಂ ॥ ೩೨ ॥

ಅನಸೂಯಾಹ್ಯಕೋಪಿತ್ವಂ ಗುಣಾನೇತಾನ್ನೃಪೋಽಭ್ಯಸೇತ್ ।
ಕಾರ್ಯಾಕಾರ್ಯವಿಭಾಗಂ ಚ ಧರ್ಮಾರ್ಥೇ ಕಾಮ ಏವ ಚ ॥ ೩೩ ॥

ಸತತಂ ಪ್ರತಿಬುದ್ಧ್ಯೇತ ಕುರ್ಯಾದವಸರೇಽಪಿ ತತ್ ।
ಸಾಮ ದಾನಂ ಚ ಭೇದಶ್ಚ ದಂಡಂ ಚೇತಿ ಚತುಷ್ಟಯಂ ॥ ೩೪ ॥

ಕೃತಜ್ಞತೆ, ದಾಕ್ಷಿಣ್ಯಾದಿಗಳಿಗೆ ಕಟ್ಟುಬೀಳದೆ ನ್ಯಾಯವಾದ ಶಾಸನವನ್ನು ತಾರತಮ್ಯ ವಿಡದೆ ಎಲ್ಲರಲ್ಲಿಯೂ ಒಂದೇಸಮನಾಗಿ ಮಾಡುವುದು, ಸತ್ಯ, ನಿರ್ಮಲತೆ, ವಿವೇಕ ಜ್ಞಾನ, ಇತರರ ಅಭಿಪ್ರಾಯವನ್ನು ಗ್ರಹಿಸುವುದು, ಒಳ್ಳೆಯ ನಡತೆ, ಕಷ್ಟಕಾಲದಲ್ಲಿ ಸತ್ ಧೈರ್ಯಾವಲಂಬನೆ, ಕಷ್ಟವನ್ನು ಸಹಿಸುವ ಶಕ್ತಿ, ಗುರು ದೇವರು ಬ್ರಾಹ್ಮಣರು ಮೊದಲಾದವರನ್ನು ಪೂಜ್ಯಬುದ್ಧಿಯಿಂದ ಅರ್ಚಿಸುವುದು, ಅಸೂಯೆ ಕೋಪ ಇವು ಗಳನ್ನು ಬಿಟ್ಟು ಶಾಂತಚಿತ್ತದಿಂದಿರುವುದು, ಎಂಬ ಈ ಮೊದಲಾದ ಸದ್ಗುಣಗಳನ್ನು ರಾಜನು ಅಭ್ಯಸಿಸಿ, ಅನ್ಯರನ್ನು ತನ್ನ ನಿತ್ಯಕಾರ್ಯಗಳಲ್ಲಿ ಆಚರಿಸಬೇಕು.

೩೩. ಇದು ಮಾಡಬೇಕಾದುದು, ಇದು ಮಾಡಬಾರದು, ಎಂಬ ಯುಕ್ತಾ ಯುಕ್ತ ವಿವೇಚನೆಯನ್ನೂ, ಧರ್ಮ, ಅರ್ಥ, ಕಾಮ, ಇವುಗಳ ಸ್ವರೂಪವನ್ನೂ, ರಾಜನು ತಿಳಿದಿರಬೇಕು. ಸಮಯದಲ್ಲಿ ತಕ್ಕಂತೆ ಆ ಧರ್ಮ ಮೊದಲಾದವುಗಳನ್ನು ಆಚರಿಸಬೇಕು.

೩೪. ಸಾಮ, ದಾನ, ಭೇದ, ದಂಡ, ಎಂಬ ಈ ನಾಲ್ಕು ಉಪಾಯಗಳನ್ನು ಪ್ರಯೋಗಿಸಬೇಕು. ಶತ್ರುನಿಗ್ರಹದಲ್ಲಿಯೂ, ಇತರ ಕೆಲವು ಸಂದರ್ಭಗಳಲ್ಲಿಯೂ ಸಾಮವೇ ಮೊದಲಾದ ಈ ನಾಲ್ಕು ಉಪಾಯಗಳನ್ನು ರಾಜನಾದವನು ಕ್ರಮವರಿತು ಉಪಯೋಗಿಸಬೇಕು. ಸಾಮವೆಂದರೆ ಸೌಮ್ಯವಾದ ಭಾಷೆ ಮೊದಲಾದವುಗಳಿಂದ ತನ್ನ ಕಾರ್ಯಸಿದ್ಧಿಯನ್ನು ಮಾಡಿಕೊಳ್ಳುವುದು. ದಾನವೆಂದರೆ ದ್ರವ್ಯವಿವಸ್ತುಗಳನ್ನು ಕೊಟ್ಟು ತೃಪ್ತಿಪಡಿಸುವುದು. ಭೇದವೆಂದರೆ ಶತ್ರುಗಳಲ್ಲಿಯೇ ಒಬ್ಬರಿಗೊಬ್ಬರಿಗೆ ವೈಮನಸ್ಯವನ್ನು ಕಲ್ಪಿಸಿ ಅಮೂಲಕ ಅವರನ್ನು ದುರ್ಬಲರನ್ನಾಗಿ ಮಾಡಿ ತನ್ನ ಕಾರ್ಯಸಾಧನೆ ಮಾಡಿಕೊಳ್ಳುವುದು. ದಂಡವೆಂದರೆ ಶೌರ್ಯದಿಂದ ಯುದ್ಧಾದಿಗಳನ್ನು ಮಾಡಿ ಶತ್ರುವನ್ನು ಶಿಕ್ಷಿಸಿ ಕಾರ್ಯಸಾಧನೆ ಮಾಡುವುದು. ಈ ನಾಲ್ಕು ವಿಧವಾದ ಉಪಾಯಗಳನ್ನು ರಾಜನಾದವನು ಯುಕ್ತವರಿತು ಉಪಯೋಗಿಸಬೇಕು.

ಜ್ಞಾತ್ವೋಪಾಯಾಂಸ್ತು ತತ್ಕಾಲೇ ತದುಪಾಯಾನ್ ಪ್ರಯೋಜಯೇತ್ ।
ಸಾಮ್ನಸ್ತು ವಿಷಯೇ ಭೇದೋ ಮಧ್ಯಮಃ ಪರಿಕೀರ್ತಿತಃ ॥ ೩೫ ॥

ದಾನಸ್ಯ ವಿಷಯೇ ಸಾಮ ಯೋಗ್ಯಮೇವೋಪಲಕ್ಷ್ಯತೇ ।
ದಾನಸ್ಯ ವಿಷಯೇ ದಂಡೋ ಹ್ಯಧಮಃ ಪರಿಕೀರ್ತಿತಃ ॥ ೩೬ ॥

ದಂಡಸ್ಯ ವಿಷಯೇ ದಾನಂ ತದಪ್ಯಧಮಮುಚ್ಯತೇ ।
ಸಾಮ್ನಸ್ತು ಗೋಚರೇ ದಂಡೋ ಹ್ಯಧವಾದಧಮಃ ಸ್ಮೃತಃ ॥ ೩೭ ॥

ಸೌಜನ್ಯಂ ಸತತಂ ಜ್ಞೇಯಂ ಭೂಭೃತೋ ಭೇದದಂಡಯೋಃ ।
ಸಾಮ್ನೋ ದಾನಸ್ಯ ಚ ತಥಾ ಸೌಜನ್ಯಂ ಯಾತಿ ಗೋಚರೇ ॥ ೩೮ ॥

ಕಾಮಃ ಕ್ರೋಧಶ್ಚ ಲೋಭಶ್ಚ ಹರ್ಷೋ ಮಾನೋ ಮದಸ್ತಥಾ ।
ಏತಾನತಿಶಯಾನ್ರಾಜಾ ಶತ್ರೂನಿವ ವಿವಾಸಯೇತ್ ॥ ೩೯ ॥

---

೩೫. ಸಾಮೋಪಾಯವನ್ನು ಪ್ರಯೋಗಿಸುವಲ್ಲಿ ಭೇದವನ್ನು ಪ್ರಯೋಗಿಸುವುದು ಮಧ್ಯಮವು, ಅಷ್ಟೇನೂ ಉತ್ತಮವಲ್ಲ. ದಾನವನ್ನು ಪ್ರಯೋಗಿಸುವಲ್ಲಿ ಸಾಮವನ್ನು ಪ್ರಯೋಗಿಸಬಹುದು.

೩೬. ದಾನವನ್ನು ಪ್ರಯೋಗಿಸುವಲ್ಲಿ ದಂಡ (ಶಿಕ್ಷೆ) ಯನ್ನು ಪ್ರಯೋಗಿಸುವುದು ಶುದ್ಧ ಅಧರ್ಮವು, ಅಯುಕ್ತವು. ಹಾಗೆಯೇ ದಂಡವನ್ನು ಪ್ರಯೋಗಿಸುವಲ್ಲಿ ದಾನವನ್ನು ಪ್ರಯೋಗಿಸುವುದು ಅಧಮವು.

೩೭-೩೮. ಸಾಮವನ್ನು ಪ್ರಯೋಗಿಸುವಲ್ಲಿ ದಂಡವನ್ನು ಪ್ರಯೋಗಿಸುವುದಂತೂ ಅತಿ ನೀಚವು. ಅಲ್ಲದೆ ರಾಜನು ಭೇದ, ದಂಡ, ಸಾಮ, ದಾನ ಈ ಉಪಾಯಗಳನ್ನು ಪ್ರಯೋಗಿಸುವಾಗ ದಾಕ್ಷಿಣ್ಯಕ್ಕೊಳಗಾಗದೆ ತೆರೆದ ಮನಸ್ಸಿನಿಂದ ಸೌಜನ್ಯವುಳ್ಳವನಾಗಿರಬೇಕು.

೩೯. ಕಾಮ, ಕ್ರೋಪ, ಲೋಭ, ಹರ್ಷ, ಗರ್ವ, ಮದ ಎಂಬ ಈ ದುರ್ಗುಣಗಳನ್ನು ರಾಜನು ಶತ್ರುಗಳಂತೆ ಓಡಿಸಬೇಕು. ಕಾಮಕ್ರೋಧಾದಿಗಳು ಅರಿಷಡ್ವರ್ಗಗಳೆಂದು ಪ್ರಸಿದ್ಧವಾಗಿರುವುವು. ಎಂದರೆ ತನಗೆ ಅವುಗಳಿಗಿಂತಲೂ ಅಧಿಕವಾದ ಶತ್ರುಗಳಿಲ್ಲ. ಅವುಗಳಿಗೆ ಅಧೀನನಾಗಬಾರದು.

ಸೇವ್ಯಾಃ ಕಾಲೇ ಸುಯುಕ್ತಾ ತೇ ಲೋಭಗರ್ವೌ ವಿವರ್ಜಯೇತ್ ।
ತೇಜ ಏವ ನೃಪಾಣಾಂ ತು ತ್ರೀವಂ ಸೂರ್ಯಸ್ಯ ವೈ ಯಥಾ ॥ ೪೦ ॥

ತತ್ರ ಗರ್ವಂ ರೋಗಯುಕ್ತಂ ಕಾಯವಾಂಸ್ತಂ ತು ಸಂತ್ಯಜೇತ್ ।
ಆಖೇಟಕಾಕ್ಷಾ ಸ್ತ್ರೀಸೇವಾ ಪಾನಂ ಚೈವಾರ್ಥದೂಷಣಂ ॥ ೪೧ ॥

ವಾಗ್ದಂಡಯೋಶ್ಚ ಪಾರುಷ್ಯಂ ಸಪ್ತೈತಾನಿ ವಿವರ್ಜಯೇತ್ ।
ಪರಸ್ತ್ರೀಷು ವಿರಕ್ತಾಸು ಸೇವಾಮೇಕಾಂತತಸ್ತ್ಯಜೇತ್ ॥ ೪೨ ॥

ಸತೀಷು ನಿಜನಾರೀಷು ಯುಕ್ತಂ ಕುರ್ಯಾನ್ನಿಷೇವಣಂ ।
ರತಿಪುತ್ರಫಲಾ ದಾರಾಃ ತಾಸ್ತು ನೈಕಾಂತತಸ್ತ್ಯಜೇತ್ ॥ ೪೩ ॥

---

೪೦. ಆದರೆ ಸಕಾಲದಲ್ಲಿ ಆ ದುರ್ಗುಣಗಳನ್ನು ಮಿತವಾಗಿ ಉಪಯೋಗಿಸ ಬೇಕು. ಅದರಲ್ಲಿಯೂ ಲೋಭ ಮತ್ತು ಗರ್ವಗಳನ್ನು ಮಾತ್ರ ಬಿಟ್ಟೇಬಿಡಬೇಕು. ರಾಜನಿಗೆ ಸೂರ್ಯನಂತೆ ತೇಜಸ್ಸೇ (ಪರಾಕ್ರಮವೇ) ಮುಖ್ಯವಾದುದು. ಅದು ಎಲ್ಲ ಗುಣಗಳಿಗಿಂತಲೂ ಹೆಚ್ಚಾಗಿರಬೇಕು.

೪೧. ಅದರಲ್ಲಿಯೂ ಮನುಷ್ಯಮಾತ್ರನಾದವನು ರೋಗವಂತಿರುವ ಗರ್ವ ವನ್ನು ಬಿಡಲೇಬೇಕು. ಮತ್ತು ಬೇಟೆ, ದ್ಯೂತ, (ಜೂಜು) ಸ್ತ್ರೀಯರ ಸೇವೆ, ಮದ್ಯಪಾನ, ದುಂದುಗಾರಿಕೆ, ಮಾತಿನಲ್ಲಿಯೂ ಶಿಕ್ಷಿಸುವುದರಲ್ಲಿಯೂ ಕಠಿಣತನ, ಈ ಎಂಟು ದೋಷಗಳನ್ನು ಬಿಡಬೇಕು.

೪೨. ತನ್ನಲ್ಲಿ ಅನುರಾಗವಿಲ್ಲದ ಪರಸ್ತ್ರೀಯರಲ್ಲಿ ಸೇರಲು ಪ್ರಯತ್ನಿಸಕೂಡದು ಪತಿವ್ರತೆಯರಾದ ತನ್ನ ಸ್ತ್ರೀಯರಲ್ಲಿ ಯೋಗ್ಯಕಾಲಗಳಲ್ಲಿ ಸೇರಬಹುದು.

೪೩. ಸ್ತ್ರೀಯರಲ್ಲಿ ರತಿಕ್ರೀಡೆಯನ್ನೆಸಗುವುದರಿಂದ ಪುತ್ರಫಲಪ್ರಾಪ್ತಿಯಾಗು ವುದು. ಆದುದರಿಂದ ಕಾಮಪೂರ್ಣಕ್ಕಾಗಿಯೂ, ಪುತ್ರಸಂತಾನಕ್ಕಾಗಿಯೂ ತನ್ನ ಸ್ತ್ರೀಯರಲ್ಲಿ ಮಿತವಾಗಿ ಸೇರಬಹುದು. ಅತಿ ಕಾಮಾಸಕ್ತತೆಯು ಯಾವಾಗಲೂ ಕೂಡದು.

ತಯೋಃ ಸಿದ್ಧೈಃ ಸ್ತ್ರೀಯಃ ಸೇವ್ಯಾ ವರ್ಜಯಿತ್ವಾತಿಸಕ್ತತಾಂ ।
ಮೃಗಯಾಂ ತು ಪ್ರಮಾದಾನಾಂ ಸ್ಥಾನಂ ನಿತ್ಯಂ ಪರಿತ್ಯಜೇತ್ ॥ ೪೪ ॥

ಅಕ್ಷಾಂಸ್ತಥಾ ನ ಕುರ್ವೀತ ಸತ್ಕಾರ್ಯಾಸಕ್ತಿನಾಶನಾಃ ।
ಅನ್ಯೈಃ ಕೃತಂ ಕದಾಚಿತ್ತು ಸೇವೇತ ನಾತ್ಮನಾಚರೇತ್ ॥ ೪೫ ॥

ಅಕಾರ್ಯಕರಣೇ ಬೀಜಂ ಕೈತ್ಯಾನಾಂ ಚ ವಿವರ್ಜನೇ ।
ಅಕಾಲಮಂತ್ರಭೇದೇ ಚ ಕಲಹೇ ಸತ್ಕೃತಿಕ್ಷಯೇ ॥ ೪೬ ॥

ವರ್ಜಯೇತ್ಸತತಂ ಪಾನ ಶೌಚಮಾಂಗಲ್ಯನಾಶನಂ ।
ಅರ್ಥಕ್ಷಯಕರಂ ನಿತ್ಯಂ ತ್ಯಜೇಚ್ಚೈವಾತ್ಮದೂಷಣಂ ॥ ೪೭ ॥

ಅಭಿಶಸ್ತೇಷು ಚೋರೇಷು ಘಾತುಕೇಷ್ವಾತತಾಯಿಷು ।
ಸತತಂ ಪೃಥವೀಪಾಲೋ ದಂಡಪಾರುಷ್ಯಮಾಚರೇತ್ ॥ ೪೮ ॥

೪೪-೪೫. ಬೇಟೆಯು ಪ್ರಮಾದಗಳಿಗೆ (ಪ್ರಾಣಾಪಾಯಗಳಿಗೆ) ಸ್ಥಾನವಾದುದು. ಆದಕಾರಣ ಅದನ್ನು ತ್ಯಜಿಸಬೇಕು. ಮತ್ತು ಸತ್ಕಾರ್ಯದಲ್ಲಿ ಆಸಕ್ತಿಯನ್ನು ಕೆಡಿಸುವ ಜೂಜು, ಸಗಡೆ ಮುಂತಾದವುಗಳನ್ನು ಆಡಬಾರದು. ಆದರೆ ಆಡಲೇಬೇಕಾದ ಪ್ರಸಂಗ ಬಂದರೆ ಪರರ ಮೂಲಕ ಆಡಿಸಬೇಕು. ತಾನು ಆಡಲೇ ಕೂಡದು.

೪೬. ಕಾರಣವೇನೆಂದರೆ, ದ್ಯೂತದಿಂದ ಕೆಟ್ಟಕೆಲಸವನ್ನು ಮಾಡಬೇಕೆಂಬ ದುರ್ಬುದ್ಧಿಯು ಹುಟ್ಟುವುದು. ನಿರ್ವಹಿಸಬೇಕಾದ ಕಾರ್ಯದಲ್ಲಿ ಅನಾದರಣೆ ಹುಟ್ಟಿ ರಾಜಕಾರ್ಯಕ್ಕೆ ತೊಂದರೆಯುಂಟಾಗುವುದಲ್ಲದೆ ಅದರಿಂದ ಜಗಳವೂ, ಸತ್ಕಾರ್ಯಗಳ ನಾಶವೂ ಉಂಟಾಗುವುವು.

೪೭. ಮತ್ತು ಮದ್ಯಪಾನವನ್ನು ಬಿಟ್ಟುಬಿಡಬೇಕು. ಅದು ನೈರ್ಮಲ್ಯ, ಮಂಗಳ ಇವುಗಳನ್ನು ನಾಶಮಾಡುವುದು. ನಿತ್ಯವೂ ಹಣವನ್ನು ವ್ಯಯಗೊಳಿಸುವುದು. ಮತ್ತು ಮನುಷ್ಯನನ್ನು ಬಹಳ ಕೀಳುದರ್ಜೆಯನ್ನಾಗಿ ಮಾಡುವುದು.

೪೮-೪೯. ಬ್ರಹ್ಮಹತ್ಯೆ ಮೊದಲಾದ ಪಾಪಗಳನ್ನು ಮಾಡಿದವನು, ಕಳ್ಳ, ಘಾತುಕ, ಆತತಾಯಿ ಎಂದರೆ ಕೊಲ್ಲುವುದಕ್ಕೆ ಪ್ರಯತ್ನಪಡುವವನು ಇವರುಗಳಿಗೆ

ನಾನ್ಯತ್ರ ದಂಡಪಾರುಷ್ಯಂ ಕುರ್ಯಾನ್ನೃಪತಿಸತ್ತಮಃ ।
ವಾಕ್ಪಾರುಷ್ಯಂ ಚ ಸರ್ವತ್ರ ನೈವ ಕುರ್ಯಾತ್ಕದಾಚನ ॥ ೪೯ ॥

ರಕ್ಷಣೀಯಂ ಸದಾ ಸತ್ಯಂ ಸತ್ಯಮೇಕಂ ಪರಾಯಣಂ ।
ಕ್ಷಮಾಂ ತೇಜಸ್ವಿತಾಂ ಚೈವ ಪ್ರಶಸ್ತಾವಾನ್ನೃಪ ಆಚರೇತ್ ॥ ೫೦ ॥

ಯಾನಾಸನಾಶ್ರಯದ್ವೈಧಸಂಧಯೋ ವಿಗ್ರಹಸ್ತಥಾ ।
ಅಭ್ಯಸೇತ್ ಷಡ್ಗುಣಾನೇತಾಂಸ್ತೇಷಾಂ ಸ್ಥಾನಂ ಚ ಶಾಶ್ವತಂ ॥ ೫೧ ॥

ಯಃ ಪ್ರಮಾಣಂ ನ ಜಾನಾತಿ ಸ್ಥಾನೇ ವೃದ್ಧೌ ತಥಾ ಕ್ಷಯೇ ।
ಕೋಶೇ ಜನಪದೇ ದಂಡೇ ನ ಸ ರಾಜ್ಯೇಽವತಿಷ್ಠತೇ ॥ ೫೨ ॥

ರಾಜನು ಕ್ರೂರವಾದ ಶಿಕ್ಷೆಯನ್ನು ವಿಧಿಸಬೇಕು. ಇತರ ಸಂದರ್ಭಗಳಲ್ಲಿ ಕ್ರೂರವಾದ ಶಿಕ್ಷೆಯನ್ನು ವಿಧಿಸಬಾರದು. ಅಲ್ಲದೆ ಯಾವಾಗಲೂ ಕ್ರೂರವಾದ ಮಾತುಗಳನ್ನು ಪ್ರಯೋಗಿಸಕೂಡದು.

೫೦. ಸತ್ಯವನ್ನು ಸದಾ ರಕ್ಷಿಸಬೇಕು. ಸತ್ಯಮಾರ್ಗವು ಮುಖ್ಯವೂ, ಶ್ರೇಷ್ಠವೂ ಆದುದು. ಕ್ಷಮಿಸುವಿಕೆ, ಪರಾಕ್ರಮ (ಬಲ) ಇವುಗಳನ್ನು ರಾಜನು ಸಮಯವರಿತು ಪ್ರದರ್ಶಿಸಬೇಕು.

೫೧. ರಾಜನಾದವನಿಗೆ ಮುಖ್ಯವಾಗಿ ಈ ಆರು ಗುಣಗಳಿರಬೇಕು—ಜೈತ್ರ ಯಾತ್ರೆಗಾಗಿ ದಂಡೆತ್ತಿ ಯುದ್ಧಕ್ಕೆ ಹೋಗುವುದು, ಶತ್ರುವು ಬಲಿಷ್ಠನಾಗಿದ್ದಲ್ಲಿ ಅವನನ್ನು ಜಯಿಸಲು ತನಗೆ ಮಿತ್ರರಾದ ಇತರರಾಜರ ಆಶ್ರಯವನ್ನು ಪಡೆಯುವುದು, ಯುದ್ಧಕಾಲದಲ್ಲಿ ಆಯಕಟ್ಟಾದ ಸ್ಥಳವನ್ನು ಆಕ್ರಮಿಸುವುದು, ಶತ್ರುಗಳಲ್ಲಿ ಭೇದ ಭಾವವನ್ನು ಕಲ್ಪಿಸುವುದು, ಶತ್ರುವನ್ನು ಜಯಿಸುವುದು ಅಸಾಧ್ಯವಾಗಿ ಕಂಡುಬಂದಲ್ಲಿ ಅವನೊಡನೆ ಸಂಧಿಮಾಡಿಕೊಳ್ಳುವುದು, ನಿರ್ಭಯವಾಗಿ ಶೌರ್ಯದಿಂದ ಯುದ್ಧ ಮಾಡುವುದು, ಎಂಬ ಈ ಆರು ಗುಣಗಳನ್ನೂ ಅಭ್ಯಾಸಮಾಡಿ ಅವುಗಳನ್ನು ಸಮ ಯೋಚಿತವಾಗಿ ಉಪಯೋಗಿಸಿಕೊಳ್ಳಬೇಕು.

೫೨. ಪ್ರಜಾಪಾಲನೆ, ವೃದ್ಧಿ, ಕ್ಷಯ, ಬೊಕ್ಕಸ, ದೇಶದ ಸ್ಥಿತಿಗತಿಗಳು, ಅಪರಾಧ ಮಾಡಿದವರನ್ನು ಶಿಕ್ಷಿಸುವ ಕ್ರಮ, ಇವುಗಳನ್ನು ತಿಳಿಯದಿರುವ ರಾಜನು ಬಹುಕಾಲ ರಾಜ್ಯವಾಳುವುದಿಲ್ಲ. ಅವನ ರಾಜ್ಯವು ಇತರರ ಪಾಲಾಗುವುದು.

ಕೋಶೇ ಜನಪದೇ ದಂಡೇ ಚೈಕೈಕತ್ರ ತ್ರಯಂ ತ್ರಯಂ ।
ಪ್ರಸ್ತಾವಾದ್ವಿನಿಯುಂಜೀತ ರಕ್ಷೇನ್ನೈಕಾಂತತಸ್ತ್ವಮಾ ॥ ೫೩ ॥

ಮಿತ್ರೇ ಶತ್ರಾವುದಾಸೀನೇ ಪ್ರಭಾವಂ ತ್ರಿಷ್ವಪೀರಯೇತ್ ।
ಉತ್ಸಾಹೋ ವಿಜಿಗೀಷಾಯಾಂ ಧರ್ಮಕೃತ್ಯೇಷ್ವವರ್ಗಕೇ ॥ ೫೪ ॥

ಶರೀರಯಾತ್ರಾನಿರ್ವಾಹೇ ಕ್ರಿಯೇತ ಸತತಂ ನೃಪೈಃ ।
ಮಂತ್ರನಿಶ್ಚಯಸಂಭೂತಾಂ ಬುದ್ಧಿಂ ಸರ್ವತ್ರ ಯೋಜಯೇತ್ ॥ ೫೫ ॥

ಅಮಾತ್ಯೇ ಶಾತ್ರವೇ ರಾಜ್ಯೇ ಪುತ್ರೇಷ್ವಂತಃಪುರೇಷು ಚ ।
ಕೃಷಿಂ ದುರ್ಗಂ ಚ ವಾಣಿಜ್ಯಂ ಖಡ್ಗಾನಾಂ ಕರಸಾಧನಂ ॥ ೫೬ ॥

ಆದಾನಂ ಸೈನ್ಯಕರಯೋರ್ಬಂಧನಂ ಗಜವಾಜಿನೋಃ ।
ಶೂನ್ಯೇ ಸದ್ಮಮುಖಾನಾಂ ಚ ಯೋಜನಂ ಸತತಂ ಜನೈಃ ॥ ೫೭ ॥

ತ್ರಯಾಣಾಂ ಸಾರಸೇತೂನಾಂ ಬಂಧನಂ ಚೇತಿ ಚಾಷ್ಟಮಂ ।
ಏತದಷ್ಟಸು ವರ್ಗೇಷು ಚಾರ್ಯಾ ಸಮ್ಯಕ್ಪ್ರಯೋಜಯೇತ್ ॥ ೫೮ ॥

---

೫೩. ಕೋಶ, ದೇಶ, ದಂಡ ಇವುಗಳಲ್ಲಿ ಒಂದೊಂದೆಡೆ ಮೂರು ಮೂರನ್ನೂ ಪ್ರಸಂಗಕ್ಕನುಸಾರವಾಗಿ ಪ್ರಯೋಗಿಸಬೇಕು. ಆದರೆ ಸದಾ ಇವುಗಳನ್ನು ರಕ್ಷಿಸ ಬಾರದು.

೫೪. ಮಿತ್ರರು, ಶತ್ರುಗಳು, ಉದಾಸೀನರಾಗಿರುವವರು, ಇವರುಗಳಲ್ಲಿ ತನ್ನ ಪ್ರಭಾವವನ್ನು ಸಮಯೋಚಿತವಾಗಿ ಬೀರಬೇಕು. ಯುದ್ಧಮಾಡಿ ಜಯಿಸುವುದ ರಲ್ಲಿಯೂ ಎಂಟು ವಿಧವಾದ ಧರ್ಮಾಚರಣೆಯೂ ಉತ್ಸಾಹಶಾಲಿಯಾಗಿರಬೇಕು.

೫೫. ರಾಜರು ಶರೀರ ರಕ್ಷಣೆಯಲ್ಲಿ ಜಾಗರೂಕರಾಗಿರಬೇಕು. ಚೆನ್ನಾಗಿ ಆಲೋಚಿಸಿ ನಿಶ್ಚಯಿಸಿದ ಬುದ್ಧಿಯನ್ನು ಎಲ್ಲೆಡೆಯಲ್ಲಿಯೂ ಉಪಯೋಗಿಸಬೇಕು. ಮಂತ್ರಿ, ಜಯಿಸಿದ ಶತ್ರುರಾಜ್ಯ, ಪುತ್ರರು, ಅಂತಃಪುರ ಸ್ತ್ರೀಯರು, ಇವರುಗಳ ವಿಷ ಯದಲ್ಲಿಯೂ ಚೆನ್ನಾಗಿ ಆಲೋಚಿಸಿ ನಿಶ್ಚಯಿಸಿದ ಬುದ್ಧಿಯನ್ನೇ ಉಪಯೋ ಗಿಸಬೇಕು.

೫೬-೫೮. ವ್ಯವಸಾಯ, ರಾಜ್ಯರಕ್ಷಣೆಗೆ ಬೇಕಾದ ದುರ್ಗಾದಿಗಳ ನಿರ್ಮಾಣ, ವ್ಯಾಪಾರ, ಸೈನ್ಯಶೇಖರಣೆ, ಆಯುಧಗಳಶೇಖರಣೆ ಮತ್ತು ಅವುಗಳ ಅಭ್ಯಾಸ, ಆನೆ,

ಕಾರ್ಯಾಕಾರ್ಯವಿಭಾಗಾಯ ಚಾಷ್ಟವರ್ಗಾಧಿಕಾರಿಣಾಂ ।
ಅಷ್ಟೌ ಚಾರಾನ್ನಿಯುಂಜೀತ ಅಷ್ಟವರ್ಗೇಷು ಪಾರ್ಥಿವಃ ॥ ೫೯ ॥

ದಶ ಶೂನ್ಯೇಷು ಯುಂಜೀತ ಕ್ರಮತಃ ಶ್ರುಣು ತಾನಿಮೇ ।
ಸ್ವಾಮ್ಯಮಾತ್ಯವರಾಷ್ಟ್ರಾಣಿ ಮಿತ್ರಂ ಕೋಶೋ ಬಲಂ ತಥಾ ॥ ೬೦ ॥

ದುರ್ಗಂ ತು ಸಪ್ತಮುಂ ಜ್ಞೇಯಂ ರಾಜ್ಯಾಂಗಂ ಗುರುಭಾಷಿತಂ ।
ದುರ್ಗಯುಕ್ತಂ ಚಾಷ್ಟವರ್ಗೇ ಚಾರಾನ್ನಾತ್ಮನಿ ಯೋಜಯೇತ್ ॥ ೬೧ ॥

ತಸ್ಮಾದಿಮಾನಿ ಶೇಷಾಣಿ ಪಂಚಚಾರಪದಾನಿ ಚ ।
ಶುದ್ಧಾಂತೇಷು ಚ ಪುತ್ರೇಷು ಯುಥಾದೌ ಚ ಮಹಾನಸೇ ॥ ೬೨ ॥

ಕುದುರೆ, ಇವುಗಳನ್ನು ಪತೋಟಿಯಲ್ಲಿಟ್ಟುಕೊಂಡು ಆವುಗಳನ್ನು ಸರಿಯಾದ ಕಾರ್ಯಗಳಲ್ಲಿ ಉಪಯೋಗಿಸುವುದು, ಪಾಳುಬಿದ್ದಿರುವ ಮತ್ತು ವಾಸಯೋಗ್ಯವಾದ ಇತರ ಪ್ರದೇಶಗಳನ್ನು ಜೀರ್ಣೋದ್ಧಾರಮಾಡಿ ಅವುಗಳು ಜನರಿಗೆ ವಾಸಯೋಗ್ಯವಾಗುವಂತೆ ಮಾಡಿಸುವುದು, ಜನರಸೌಕರ್ಯಕ್ಕಾಗಿ ನವಗಳಿಗೆ ಸೇತುವೆ, ಕಟ್ಟೆ, ಮೊದಲಾದವನ್ನು ಕಟ್ಟಿಸುವುದು, ಜನೋಪಯೋಗವಾದ ಇತರ ಕೆಲಸಗಳನ್ನು ಮಾಡಿಸುವುದು, ಎಂದು ರಾಜನು ಮಾಡಬೇಕಾದ ಎಂಟು ಕರ್ತವ್ಯಗಳಿರುವವು. ಈ ಕೆಲಸಗಳನ್ನು ಮಾಡುವಾಗ ಚಾರರನ್ನು ನಿಯೋಜಿಸಿ ಅವುಗಳು ಚೆನ್ನಾಗಿ ಆಗುವಂತೆ ಮಾಡಬೇಕು.

೫೯. ಹಿಂದೆ ಹೇಳಿದ ಎಂಟು ವಿಧವಾದ ಕೆಲಸಗಳಿಗೂ ಒಂದೊಂದು ವರ್ಗಕ್ಕೆ ಒಬ್ಬೊಬ್ಬ ಅಧಿಕಾರಿಯನ್ನು ನಿಯಮಿಸಿ, ಆ ಅಧಿಕಾರಿಯು ಸರಿಯಾಗಿ ಕೆಲಸ ಮಾಡುವನೋ ಇಲ್ಲವೋ ಎಂಬ ಬಗ್ಗೆ ಅವರೆಲ್ಲರ ಸಮಾಚಾರವನ್ನೂ ಗೂಢವಾಗಿ ತಿಳಿಯಲು ರಾಜನು ಪ್ರತಿಯೊಬ್ಬರಮೇಲೂ ಗೂಢಚಾರರನ್ನಿಡಬೇಕು.

೬೦-೬೧. ಮಿಕ್ಕಸ್ಥಳಗಳಲ್ಲಿ ಹತ್ತುಜನ ಚಾರರನ್ನು ನಿಯಮಿಸಬೇಕು. ಅವುಗಳನ್ನು ಕ್ರಮವಾಗಿ ಹೇಳುವೆನು. ಕೇಳು, ಮಂತ್ರಿ, ರಾಜ್ಯ, ಮಿತ್ರರು, ಸ್ನೇಹಿತ, ಕೋಶ, ಸೈನ್ಯ, ದುರ್ಗ, ಈ ಏಳೂ ರಾಜ್ಯಾಂಗಗಳೆಂದು ಬೃಹಸ್ಪತಿಯು ಹೇಳಿರುವನು. ಇವುಗಳ ರಹಸ್ಯವನ್ನು ತಿಳಿಯಲು ಗೂಢಚಾರರನ್ನು ನಿಯಮಿಸಿರಬೇಕು. ಆದರೆ ತನ್ನ ರಹಸ್ಯವು ಬಯಲಾಗದಂತೆ ಸರಿಯಾಗಿ ನೋಡಿಕೊಳ್ಳಬೇಕು.

೬೨-೬೩. ಈ ವಿಚಾರಗಳಲ್ಲಲ್ಲದೆ ಮಿಕ್ಕ ಇನ್ನೂ ಐದು ವಿಷಯಗಳಲ್ಲಿ ಅವರಂತೆಯೇ ಗೂಢಚಾರರನ್ನು ನಿಯಮಿಸಬೇಕು. ಅಂತಃಪುರ, ಪುತ್ರರು, ಜನರು

ಶತ್ರೂದಾಸೀನಯೋಶ್ಚಾಪಿ ಬಲಾಬಲವಿನಿಶ್ಚಯೇ ।
ಅಷ್ಟಾದಶಸು ಚೈತೇಷು ಚಾರಾನ್ ರಾಜಾ ಪ್ರಯೋಜಯೇತ್ ॥ ೬೩ ॥

ನ ಯತ್ಪ್ರಕಾಶಂ ಜಾನೀಯಾತ್ತತ್ತಚ್ಚಾರೈರ್ನಿರೂಪಯೇತ್ ।
ನಿರೂಪ್ಯ ತತ್ಪ್ರತೀಕಾರಮವಶ್ಯಂ ಛಿದ್ರತಶ್ಚರೇತ್ ॥ ೬೪ ॥

ಯಥಾ ನಿಯೋಗಮೇತೇಷಾಂ ಯೋ ಯೋ ಯತ್ರಾನ್ಯಥಾಚರೇತ್ ।
ಜ್ಞಾತ್ವಾ ತತ್ರ ನೃಪಶ್ಚಾರೈರ್ದಂಡಯೇದ್ವಾ ವಿಯೋಜಯೇತ್ ॥ ೬೫ ॥

ಚಾರಾಂಸ್ತು ಮಂತ್ರಿಣಾ ಸಾರ್ಧಂ ರಹಸ್ಯೇ ಸಂಸ್ಥಿತೋ ನೃಪಃ ।
ಪ್ರದೋಷಸಮಯೇ ಪೃಚ್ಛೇತ್ತದಾನೀಮೇವ ಸಾಧಯೇತ್ ॥ ೬೬ ॥

ಸ್ವಪುತ್ರೇ ಚಾಥ ಶುದ್ಧಾಂತೇ ಯೇ ತು ಚಾರಾ ಮಹಾನಸೇ ।
ನಿಯುಕ್ತಾಸ್ತಾ ಮಧ್ಯರಾತ್ರೇ ಪೃಚ್ಛೇತ್ಸ್ವೇಪಿ ಚ ಮಂತ್ರಿಣಿ ॥ ೬೭ ॥

ಸೇರುವ ಸ್ಥಳ, ಪಾಕಶಾಲೆ, ಶತ್ರು, ಉದಾಸೀನ ಜನರು, ಇವರುಗಳ ವಿಚಾರದಲ್ಲಿಯೂ, ಯಾವಯಾವ ರಾಜರು ಮತ್ತು ಶತ್ರುಗಳು ಎಷ್ಟು ಬಲವುಳ್ಳವರು. ಯಾರು ಪ್ರಬಲರು, ಯಾರು ದುರ್ಬಲರು ಎಂಬುದನ್ನು ತಿಳಿಯುವುದಕ್ಕಾಗಿಯೂ, ಈ ಹದಿನೆಂಟು ವಿಚಾರ ಗಳಲ್ಲಿ ಗೂಢಚಾರರನ್ನು ನಿಯಮಿಸಬೇಕು.

೬೪. ಪ್ರತ್ಯಕ್ಷವಾಗಿ ಯಾವುದನ್ನು ತಿಳಿಯಲು ಅಸಾಧ್ಯವೋ ಅವನ್ನು ಚಾರರ ಮೂಲಕ ರಾಜನು ತಿಳಿಯಬೇಕು. ಆ ಕೂಡಲೇ ಅದಕ್ಕೆ ತಕ್ಕ ಪ್ರತೀಕಾರಗಳನ್ನು ಆಲೋಚಿಸಿ ಅವನ್ನು ಅವಶ್ಯವಾಗಿ ಮಾಡಬೇಕು.

೬೫. ಮತ್ತೂ ಆ ಗೂಢಚಾರರಮೇಲೂ ಚಾರರನ್ನಿಟ್ಟು, ಅವರು ನಿಯಮಿಸಿದ ಕಾರ್ಯಕ್ಕೆ ವಿರೋಧವಾಗಿ ನಡೆಯುತ್ತಿದ್ದರೆ ಅದನ್ನು ತಿಳಿದು, ಅಂತಹ ಚಾರರನ್ನು ರಕ್ಷಿಸಬೇಕು, ಅಥವಾ ಅವರನ್ನು ಕೆಲಸದಿಂದ ತೆಗೆದುಹಾಕಬೇಕು.

೬೬. ಮಂತ್ರಿಯೊಡನೆ ಏಕಾಂತದಲ್ಲಿದ್ದು ರಾಜನು ಪ್ರದೋಷಕಾಲದಲ್ಲಿ ಚಾರರನ್ನು ಕರೆದು ರಹಸ್ಯ ಸಮಾಚಾರವನ್ನು ಕೇಳಬೇಕು. ಅನಿವಾರ್ಯವಾದ ಕಾರ್ಯ ವಾಗಿದ್ದರೆ ಅದನ್ನು ಆಗಲೇ ಸಾಧಿಸಬೇಕು.

೬೭-೬೮. ತನ್ನ ಪುತ್ರ, ಅಂತಃಪುರ, ಪಾಕಶಾಲೆ, ಮತ್ತು ತನ್ನ ಮಂತ್ರಿ ಇವರಲ್ಲಿ ನಿಯಮಿಸಿರುವ ಚಾರರನ್ನು ಅರ್ಧರಾತ್ರಿಯಲ್ಲಿ ಮಂತ್ರಿಯಿಲ್ಲದೇ ತಾನೇ

ಏತಾಂಶ್ಚಾರಾನ್ಸ್ವಯಂ ಪಶ್ಯೇನ್ನೃಪತಿರ್ಮಂತ್ರಿಣಾ ವಿನಾ ।
ಅನ್ಯಾಂಸ್ತು ಮಂತ್ರಿಣಾ ಸಾರ್ಧಂ ನಿರೂಪ್ಯ ಪ್ರದಿಶೇತ್ಫಲಂ ॥ ೬೮ ॥

ನೈಕವೇಷಧರಶ್ಚಾರೋ ನೈಕೋ ನೋತ್ಸಾಹವರ್ಜಿತಃ ।
ಸಂಸ್ತುತೋ ನ ಹಿ ಸರ್ವತ್ರ ನಾತಿದೀಘೋ೯ ನ ವಾಮನಃ ॥ ೬೯ ॥

ಸತತಂ ನ ದಿವಾ ಚಾರೀ ನ ರೋಗೀ ನಾಪ್ಯಬುದ್ಧಿಮಾನ್ ।
ನ ವಿತ್ತವಿಭವೈರ್ಹೀನೋ ನ ಭಾರ್ಯಾಪುತ್ರವರ್ಜಿತಃ ॥ ೭೦ ॥

ಕಾರ್ಯಶ್ಚಾರೋ ನೃಪತಿನಾ ತತ್ತ್ವಗುಹ್ಯವಿನಿರ್ಣಯೇ ।
ಅನೇಕವೇಷಗ್ರಹಣಕ್ಷಮಂ ಭಾರ್ಯಾಸುತೈರ್ಯುತಂ ॥ ೭೧ ॥

ಬಹುದೇಶವಚೋಭಿಜ್ಞಂ ಪರಾಭಿಪ್ರಾಯವೇದಕಂ ।
ದೃಢಭಕ್ತಂ ಪ್ರಕುರ್ವೀತ ಚಾರಂ ಶಕ್ತಮಸಾಧ್ವಸಂ ॥ ೭೨ ॥

ರ್ವನೇ ಇರುವಾಗ ಕರೆಸಿ ಕೇಳಬೇಕು. ಮಿಕ್ಕ ವಿಚಾರವನ್ನು ಮಂತ್ರಿಯೊಡನೆ ಇದ್ದು ನೋಡಬೇಕು. ಮತ್ತು ಕೆಲಸವನ್ನು ಸಾಧಿಸಿರುವ ಆ ಚಾರರಿಗೆ ಯೋಗ್ಯವಾಗಿ ಬಹುಮಾನವನ್ನು ಕೊಡಬೇಕು.

೬೯. ಚಾರನು ಅನೇಕ ವೇಷಗಳನ್ನು ಧರಿಸಬಲ್ಲವನಾಗಿರಬೇಕು. ಒಳ್ಳೇ ಉತ್ಸಾಹಶಾಲಿಯಾಗಿರಬೇಕು. ಎಲ್ಲರಲ್ಲಿಯೂ ಅವನ ಪರಿಚಯವಿರಬಾರದು. ಹೆಚ್ಚು ಎತ್ತರವಾಗಿಯೂ, ಹೆಚ್ಚು ಕುಳ್ಳನಾಗಿಯೂ ಇರಬಾರದು.

೭೦-೭೨. ಮತ್ತು ಅವನು ಯಾವಾಗಲೂ ಹಗಲುಹೊತ್ತಿನಲ್ಲಿ ಸಂಚರಿಸ ಬಾರದು. ರೋಗವಿಲ್ಲದವನಾಗಿರಬೇಕು. ದಡ್ಡನಾಗಿರಬಾರದು. ಹಣಕಾಸುಗಳ ಅನುಕೂಲವು ಅವನಿಗೆ ಬೆನ್ನಾಗಿರಬೇಕು. ಹೆಂಡತಿ ಮಕ್ಕಳುಳ್ಳವನಾಗಿರಬೇಕು. ಇಂತಹ ಚಾರನನ್ನೇ ರಹಸ್ಯವನ್ನು ತಿಳಿಯಲು ರಾಜನು ನಿಯಮಿಸಬೇಕು. ಆಮೂದ ರಿಂದ ಅನೇಕ ವೇಷಗಳನ್ನು ಧರಿಸಬಲ್ಲವನೂ, ಹೆಂಡತಿ ಮಕ್ಕಳುಳ್ಳವನೂ, ಅನೇಕ ದೇಶಭಾಷೆಗಳನ್ನು ಬಲ್ಲವನೂ, ಇನ್ನೊಬ್ಬರ ಅಭಿಪ್ರಾಯವನ್ನು ತಿಳಿಯಬಲ್ಲವನೂ, ಸ್ವಾಮಿಯಲ್ಲಿ ದೃಢವಾದ ಭಕ್ತಿಯುಳ್ಳವನೂ, ಸಮರ್ಥನೂ, ಆತುರಸ್ವಭಾವವಿಲ್ಲ ದವನೂ ಆದಂತಹವನನ್ನೇ ಚಾರನನ್ನಾಗಿ ರಾಜನು ನಿಯಮಿಸಿಕೊಳ್ಳ ಬೇಕು.

ಅಭಿತಿಷ್ಠೇತ್ಸ್ವಯಂ ರಾಜಾ ಕೃಷಿಮಾತ್ಮಸಮೈಸ್ತಥಾ ।
ವಣಿಕ್ಪಥೇಷು ದುರ್ಗಾದೌ ತೇಷು ಶಕ್ತಾನ್ನಿಯೋಜಯೇತ್ ॥ ೭೩ ॥

ಅಂತಃಪುರೇ ಪಿತುಸ್ತುಲ್ಯಾನ್ವೀರಾನ್ವೃದ್ಧಾನ್ನಿಯೋಜಯೇತ್ ।
ಷಂಡಾ ಪಂಡಾಂಸ್ತಥಾ ವೃದ್ಧಾ ಸ್ತ್ರಿಯೋ ವಾ ಬುದ್ಧಿತತ್ಪರಾಃ ॥ ೭೪ ॥

ಶುದ್ಧಾಂತೇ ದ್ವಾರಿ ಯುಂಜೀತ ಸ್ತ್ರಿಯೋ ವೃದ್ಧಾ ಮನೀಷಿಣೀಃ ।
ನೈಕಃ ಸ್ವಪೇತ್ಕದಾಚಿತ್ತು ನೈಕೋ ಭುಂಜೀತ ಪಾರ್ಥಿವಃ ॥ ೭೫ ॥

ನೈಕಾಕಿನೀಂ ತು ಮಹಿಷೀಂ ವ್ರಜೇನ್ಮೈತ್ರ್ಯಾಯನೈಕಕಃ ।
ಅಮಾತ್ಯಾನುಪಧಾಶುದ್ಧಾ ಭ್ರಾಯೋಽಃ ಪುತ್ರಾಂಸ್ತಥೈವ ಚ ॥ ೭೬ ॥

---

೭೩. ತನಗೆ ಸಮಾನರಾದವರೊಡನೆ ರಾಜನು ವ್ಯವಹಾರವನ್ನು ನಾಡ ಬೇಕು. ವ್ಯಾಪಾರ, ದುರ್ಗ ಮೊದಲಾದುವುಗಳಲ್ಲಿ ಸಮರ್ಥರಾದವರನ್ನು ನಿಯಮಿಸ ಬೇಕು.

೭೪. ಅಂತಃಪುರವಲ್ಲಿ ತಂದೆಗೆ ಸಮಾನರೂ, ಜ್ಞಾನಿಗಳೂ ಆದಂತಹ ವೃದ್ಧ ರನ್ನು ನಿಯಮಿಸಬೇಕು. ಮತ್ತೂ ನಪುಂಸಕರು, ಶಿಖಿಂಡಿಗಳು, ಮುದುಕರು ಇವರನ್ನೇ ಅಲ್ಲಿ ನಿಯಮಿಸಬೇಕು. ಅಥವಾ ಬುದ್ಧಿಶಾಲಿನಿಯರಾದ ಸ್ತ್ರೀಯರನ್ನಾ ದರೂ ನಿಯಮಿಸಬಹುದು.

೭೫. ಅಂತಃಪುರದ ಬಾಗಿಲಿನಲ್ಲಿ ವೃದ್ಧೆಯರೂ, ಬುದ್ಧಿಶಾಲಿನಿಯರೂ ಆದ ಸ್ತ್ರೀಯರನ್ನು ನಿಯಮಿಸಬೇಕು. ರಾಜನಾದವನು ಯಾವಾಗಲೂ ಓರ್ವನೇ ನುಲಗ ಬಾರದು. ಓರ್ವನೇ ಭೋಜನ ಮಾಡಲೂ ಬಾರದು. ಎಲ್ಲರೊಡನೆ ಕಲೆತು ಭೋಜನಮಾಡಬೇಕು.

೭೬. ರಾಣಿಯನ್ನು ಓರ್ವಳನ್ನೇ ಬಿಟ್ಟು ಎಲ್ಲಿಗೂ ಹೋಗಬಾರದು. ಮತ್ತು ಮಿತ್ರರ ಸಂಘಗಳಿಗೂ ಓರ್ವನೇ ಹೋಗಬಾರದು. ತನ್ನ ಮಂತ್ರಿ, ತನ್ನ ಹೆಂಡರು, ಮಕ್ಕಳು ಇವರುಗಳಲ್ಲಿ ಜಿನ್ನಾಗಿ ಪ್ರೀತಿಯನ್ನು ತೋರಿಸುತ್ತಾ, ಅವರನ್ನು ಕಪಟವಿಲ್ಲ ದವರೂ, ಶುದ್ಧರೂ ಆಗಿರುವಂತೆ ಮಾಡಬೇಕು. ರಾಜನು ಯಾವಾಗಲೂ ತನ್ನ ಸಮೀಪದಲ್ಲಿಯೇ ಇರುವ ಮಂತ್ರಿ ಮೊದಲಾದವರನ್ನು ಅನೇಕ ವಿಧವಾದ ಉಪಾಯ ಗಳಿಂದ ಅವರ ರಾಜನಿಷ್ಠೆಯನ್ನು ಪರೀಕ್ಷಿಸಬೇಕು.

ಪ್ರಕುರ್ಯಾತ್ಸತತಂ ಭೂಪಃ ಸಪ್ರಸಾದಂ ಸಮಾಚರೇ ।
ಧರ್ಮಾರ್ಥಕಾಮಮೋಕ್ಷೈಶ್ಚ ಪ್ರತ್ಯೇಕಂ ಪರಿಶೋಧನೈಃ ॥ ೭೭ ॥

ಉಪೇತ್ಯ ಧೀಯತೇ ಯಸ್ಮಾದುಪಧಾ ಸಾ ಪ್ರಕೀರ್ತಿತಾ ॥
ಅರ್ಥಕಾಮೋಪಧಾಭ್ಯಾಂ ತು ಭಾರ್ಯಾಪುತ್ರಾಂಶ್ಚ ಶೋಧಯೇತ್ ॥

ಧರ್ಮೋಪಧಾಭಿರ್ವಿಪ್ರಾಂಸ್ತು ಸರ್ವಾಭಿಃ ಸಚಿವಾನ್ ಪುನಃ ।
ಏಭಿರ್ಯಜ್ಞೈಸ್ತಥಾದಾನೈರಿಹೈವ ನೃಪತಿರ್ಭವೇತ್ ॥ ೭೯ ॥

ತಸ್ಮಾದ್ಭವಾಂಸ್ತು ರಾಜ್ಯಾರ್ಥೀ ಧರ್ಮಮೇವಂ ಸಮಾಚರೇತ್ ।
ಅನೇನೈವಾಭಿಚಾರೇಣ ಯಜ್ಞೈರ್ವಾ ಸಾರ್ಥಿವೋ ಹ್ಯಯಂ ॥ ೮೦ ॥

---

೭೭. ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಲ್ಲಿ ಪ್ರತ್ಯೇಕವಾಗಿ ಮನುಷ್ಯನ ನಡತೆಯನ್ನು ಪರೀಕ್ಷಿಸಿ, ಅವನ ಗುಣವನ್ನು ಚೆನ್ನಾಗಿ ತಿಳಿಯುವುದಕ್ಕೆ ಉಪಧಿ ಎಂದು ಹೆಸರು.

೭೮. ಅರ್ಥ, ಕಾಮಗಳ ವಿಚಾರದಲ್ಲಿ ಹೆಂಡತಿ ಮಕ್ಕಳನ್ನು ಪರೀಕ್ಷಿಸಬೇಕು. ಧರ್ಮ ವಿಚಾರದಲ್ಲಿ ಬ್ರಾಹ್ಮಣರನ್ನು ಪರೀಕ್ಷಿಸಬೇಕು. ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕು ವಿಚಾರಗಳಲ್ಲಿಯೂ ಮಂತ್ರಿಗಳನ್ನು ಪರಿಶೋಧಿಸಬೇಕು.

೭೯. ಈ ರಾಜಧರ್ಮಗಳನ್ನು ತಿಳಿದು, ಯಜ್ಞ, ದಾನ, ಮೊದಲಾದ ಸತ್ಕರ್ಮಾಚರಣೆಯಿಂದ ಈ ಲೋಕದಲ್ಲಿಯೇ ಬಹಳಕಾಲ ರಾಜನಾಗಿರುವನು. ಆದಕಾರಣ ಎಲೈ ರಾಜನೇ! ರಾಜ್ಯವನ್ನು ಅಪೇಕ್ಷಿಸುವ ನೀನೂ ಸಹ ಇಂತಹ (ರಾಜ) ಧರ್ಮವನ್ನು ಹೀಗೆ ಆಚರಿಸಬೇಕು.

೮೦. ಈ ಭೇದೋಪಾಯದಿಂದಲೂ, ಯಜ್ಞ ಮುಂತಾದ ಆಚರಣೆಯಿಂದಲೂ ನಿನ್ನ ಶತ್ರುನಾಜನು ನಾಶವಾಗುವನು ಬಳಿಕ ನೀನೇ ರಾಜನಾಗುವೆ, ಸಂಶಯವಿಲ್ಲ.

ಪ್ರಾಣಾಂಸ್ತ್ಯಜತಿ ರಾಜಾ ತ್ವಂ ಭವಿಷ್ಯಸಿ ನ ಸಂಶಯಃ ।
ಇತಿ ಧರ್ಮೋ ನೃಪಸ್ಯೈವ ಅಶ್ವಮೇಧಾದಿಕಶ್ಚ ಯಃ ॥ ೮೧ ॥

ಸ್ವಯಂ ನ ಕುರುತೇ ಭೂಪಸ್ತಸ್ಮಾತ್ತ್ವಂ ಕುರು ಸತ್ತಮ ।
ಏವಂ ಮಂತ್ರೈರ್ಮಂತ್ರಯಿತ್ವಾ ನೃಪಃ ಕಾರ್ಯಾಂತಿಕಾದ್ದ್ವಿಜಾತ್ ॥ ೮೨ ॥

ತೈರಜ್ಞಾತಾ ಸ್ವಯಂ ಜ್ಞಾತ್ವಾ ಗೃಹ್ಣೀಯಾತ್ತಸ್ಯ ತೈರ್ಮನಃ ।
ಯದಿ ರಾಜ್ಯಾಭಿಲಾಷೇಣ ಸಚಿವೋಽಧರ್ಮಮಾಚರೇತ್ ॥ ೮೩ ॥

ನೃಪತೌ ವಾಧಿಕಂ ಕುರ್ಯಾದ್ಧರ್ಮಂ ತಂ ಹೀನತಾಂ ನಯೇತ್ ।
ಅಭಿಚಾರಿಕಮತ್ಯರ್ಥಂ ಕುರ್ವಾಣಂ ತು ವಿಘಾತಯೇತ್ ॥ ೮೪ ॥

ಪ್ರವಾಸಯೇದ್ಬ್ರಾಹ್ಮಣಂ ತು ಪಾರ್ಥಿವಶ್ಚಾಭಿಚಾರಿಕಂ ।
ಏಷಾ ಧರ್ಮೋಽಪಧಾ ಜ್ಞೇಯಾ ತೈರಮಾತ್ಯೈ ಸ ತ್ವಾಂ ಜಯೇತ್ ॥ ೮೫ ॥

---

೮೧. ಈ ರಾಜಧರ್ಮವು ರಾಜನಿಗೇ ಸಂಬಂಧಪಟ್ಟುದುದು. ಅಶ್ವಮೇಧವೇ ಮೊದಲಾದ ಕರ್ಮವೂ ರಾಜರಿಗೆ ಹೇಳಿರುವುದು. ಪ್ರಕೃತ ರಾಜನಾದವನು ಈ ಧರ್ಮಗಳನ್ನು ಮಾಡುತ್ತಲಿಲ್ಲ. ಆದಕಾರಣ ಎಲೈ ರಾಜನೇ! ನೀನು ಈ ಧರ್ಮಗಳನ್ನು ಆಚರಿಸು.

೮೨. ಈರೀತಿಯಾಗಿ ಚೆನ್ನಾಗಿ ಮಂತ್ರಾಲೋಚನೆಯನ್ನು ಮಾಡಿ ಜ್ಯೋತಿಷ್ಯವನ್ನು ಬಲ್ಲ ಬ್ರಾಹ್ಮಣನಿಂದ ಮಂತ್ರಿ ಮೊದಲಾದವರೂ ಸಹ ತಿಳಿಯದಿರುವುದನ್ನೂ ತಿಳಿಯಬೇಕು. ಮತ್ತು ಅವುಗಳಿಂದ ಆ ಜೋಯಿಸನ ಮನಸ್ಸನ್ನೂ ತಿಳಿಯಬೇಕು.

೮೩-೮೪. ರಾಜ್ಯವನ್ನು ತಾನು ಸಂಪಾದಿಸಬೇಕೆಂಬ ಆಸೆಯಿಂದ ಮಂತ್ರಿಯು ಅಧರ್ಮವನ್ನಾಚರಿಸಿದರೂ, ರಾಜನ ಆಜ್ಞೆಯನ್ನು ಮೀರಿ ನಡೆದರೂ, ರಾಜಧರ್ಮವನ್ನತಿಕ್ರಮಿಸಿದರೂ, ರಾಜನು ನಾಶವಾಗುವ ಕಾರ್ಯವನ್ನೆಸಗಿದರೂ ಅಂತಹ ಮಂತ್ರಿಯನ್ನು ಕೂಡಲೇ ನಾಶಗೊಳಿಸಬೇಕು.

೮೫. ಬ್ರಾಹ್ಮಣನು ರಾಜದ್ರೋಹಕರವಾದ ಕಾರ್ಯವನ್ನೆಸಗಿದರೆ ಅಂತಹವನಿಗೆ ಗಡೀಪಾರು ಶಿಕ್ಷೆಯನ್ನು ಕೊಡಬೇಕು. ಇದೇ ಧರ್ಮೋಪಧಾ ಎಂದರೆ ಮಂತ್ರಿ ಮೊದಲಾದವರನ್ನು ಪರೀಕ್ಷಿಸುವ ವಿಧವು. ಇದರಿಂದ ಮಂತ್ರಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು.

ಏತಾದೃಶೀಂ ತಥೈವಾನ್ಯಾಮುಪಧಾಂ ಧರ್ಮತಶ್ಚರೇತ್ ।
ಕೋಶಾಧ್ಯಕ್ಷಾನ್ ಸಮಾಮಂತ್ರ್ಯ ರಾಜಾಮಾತ್ಯಾನ್ ಪ್ರತಾರಯೇತ್ ॥ ೮೬ ॥

ಪುತ್ರಾನನ್ಯಾನ್ಪ್ರತಿ ತಥಾ ಮಂತ್ರಸಂವರಣಾಕ್ಷಮಾನ್ ।
ಅಯಂ ಹಿ ಪ್ರಚುರಃ ಕೋಶಃ ಮದಾಯತ್ತೋ ನರೋತ್ತಮ ॥ ೮೭ ॥

ಆನಯೇ ತವ ಸಮ್ಮತ್ಯಾ ತದ್ಯದಿ ತ್ವಂ ಪ್ರತೀಚ್ಛಸಿ ।
ತವಾರ್ಥಲಗ್ನಾದಸ್ಮಾಕಂ ಜೀವನಂ ಚ ಭವಿಷ್ಯತಿ ॥ ೮೮ ॥

ತ್ವಂ ಚಾಪಿ ಪ್ರಚುರೈಃ ಕೋಶೈಃ ಕಂ ಕಂ ವಾ ನ ಕರಿಷ್ಯಸಿ ।
ಏವಮನ್ಯೈಃ ಕೋಶಗತೈರುಪಾಯೈರ್ನರ್ಪಸತ್ತಮಃ ॥ ೮೯ ॥

ಪುತ್ರಾಮಾತ್ಯಾದಿಕಾನ್ ಸರ್ವಾನ್ ಸತತಂ ಪರಿಶೋಧಯೇತ್ ।
ಕೋಶದೋಷಕರಾನ್ ಹನ್ಯಾತ್ಕರ್ತುಮಿಚ್ಛಾನ್ನಿವಾಸಯೇತ್ ॥ ೯೦ ॥

---

೮೬. ಇಂತಹ ಉಪಧೆ ಮತ್ತು ಕಾಮೋಪಧೆ ಮುಂತಾದವುಗಳನ್ನು ನ್ಯಾಯವಾದ ರೀತಿಯಲ್ಲಿ ಪ್ರಯೋಗಿಸಿ ಪರೀಕ್ಷಿಸಬೇಕು. ಬೊಕ್ಕಸಾಧಿಕಾರಿಗಳೊಡನೆ ಆಲೋಚಿಸಿ ಅವನೊಡನೆ ಮಾಡುವ ಮಂತ್ರಾಲೋಚನೆಯನ್ನು ಗೋಪ್ಯವಾಗಿಡಲು ರಹಸ್ಯಗೋಪನವಿಚಾರದಲ್ಲಿ ಅಶಕ್ತರಾದ ಮಂತ್ರಿಗಳಿಗೂ, ಮಿಕ್ಕ ತನ್ನ ಪುತ್ರ ಮೊದಲಾದವರಿಗೂ ರಹಸ್ಯ ವಿಚಾರಗಳನ್ನು ತಿಳಿಸದೆ ಅವರನ್ನು ಮೋಸಗೊಳಿಸಬೇಕು.

೮೭. ನನ್ನ ಅಧೀನದಲ್ಲಿರುವ ಕೋಶದಲ್ಲಿ ಹಣವು ಬೇಕಾದಷ್ಟಿರುವುದು, ನೀನು ಇಷ್ಟಪಟ್ಟಲ್ಲಿ ಆ ದ್ರವ್ಯವನ್ನು ನಿನ್ನಲ್ಲಿಗೆ ತಂದು ಒಪ್ಪಿಸುವೆನು ಎಂದು ಮಂತ್ರಿ ಮೊದಲಾದವರ ಎದುರಿನಲ್ಲಿ ಕೋಶಾಧ್ಯಕ್ಷನಿಂದ ಹೇಳಿಸಬೇಕು.

೮೮. ನಿನಗೆ ಬೊಕ್ಕಸವು ಲಭಿಸಿದರೆ ನಮ್ಮ ಜೀವನವೂ ಸುಖವಾಗಿರುವುದು, ನೀನೂ ಸಹ ಅಪರಿಮಿತವಾದ ಈ ದ್ರವ್ಯದಿಂದ ಬೇಕಾದುದನ್ನು ಮಾಡಬಹುದು.

೮೯. ಬೊಕ್ಕಸಕ್ಕೆ ಸಂಬಂಧಿಸಿದಂತೆ ಇನ್ನೂ ಅನೇಕ ಉಪಾಯಗಳಿಂದ ರಾಜನು ತನ್ನ ಪುತ್ರ, ಮಂತ್ರಿ ಮೊದಲಾದವರನ್ನೆಲ್ಲಾ ಪರೀಕ್ಷಿಸುತ್ತಿರಬೇಕು. ಇವಕ್ಕೆ ಅರ್ಥೋಪಧೆ ಎಂದು ಹೆಸರು.

೯೦. ಬೊಕ್ಕಸವನ್ನು ಹಾಳುಮಾಡುವವರಿಗೆ ಎಂದರೆ ಬೊಕ್ಕಸದ ದ್ರವ್ಯವನ್ನು ರಾಜನನುಮತಿಯಿಲ್ಲದೆ ಅಪಹರಿಸುವವರಿಗೆ ಮರಣದಂಡನೆಯನ್ನು ವಿಧಿಸ

ದ್ವೈಧಚಿತ್ತಾ ವಿಮುನ್ಯೇತ ಕುರ್ಯಾದ್ವೈ ಕೋಶರಕ್ಷಣಂ ।
ದಾಸೀಶ್ಚ ಶಿಲ್ಪಿನೀ ವೃದ್ಧಾ ಮೇಧಾಧೃತಿಮತೀಃ ಸ್ತ್ರಿಯಃ ॥ ೯೧ ॥

ಅಂತರ್ಬಹಿಶ್ಚ ಯಾ ಯಾಂತಿ ವಿದಿತಾಃ ಸಚಿವಾದಿಭಿಃ ।
ತಾ ರಾಜಾ ರಹಸಿ ಸ್ಥಿತ್ವಾ ಭಾರ್ಯಾದಿಭಿರಲಕ್ಷಿತಃ ॥ ೯೨ ॥

ಅಭಿಮಂತ್ರ್ಯಾಥ ಸಮ್ಮಂತ್ರ್ಯ ಪ್ರೇಷಯೇತ್ಸಚಿವಾನ್ಪ್ರತಿ ।
ತಾ ಗತ್ವಾ ಹೃದಯಂ ಬುದ್ಧ್ವಾ ಸ್ತ್ರಿಯೋ ವಿಜ್ಞಾನತತ್ಪರಾಃ ॥ ೯೩ ॥

ಮಹಿಷೀ ಪ್ರಮುಖಾ ರಾಜ್ಞಃ ತ್ವಾಂ ವೈ ಕಾಮಯತೇ ಶುಭಾ ।
ತತ್ರಾಹಂ ಯೋಜಯಿಷ್ಯಾಮಿ ಯದಿ ತೇ ವಿದ್ಯತೇ ಸ್ಪೃಹಾ ॥ ೯೪ ॥

ಸಚಿವಸ್ತ್ವಾಂ ಕಾಮಯತೇ ತ್ವದ್ಯೋಗ್ಯೋ ವರವರ್ಣಿನಿ ।
ತಂ ಸಂಗಮಯಿತುಂ ಶಕ್ತಾ ಯದಿ ಶ್ರದ್ಧಾ ತವಾಸ್ತ್ಯಹಂ ॥ ೯೫ ॥

ಬೇಕು. ಅಂತಹವರನ್ನು ದೇಶಬಿಟ್ಟು ಓಡಿಸಬೇಕು. ಭೇದಬುದ್ಧಿಯುಳ್ಳವರನ್ನು ಪತ್ತಿರಕ್ಕೆ ಸೇರಿಸಬಾರದು. ಕೋಶರಕ್ಷಣೆಯನ್ನು ವಿಶೇಷ ಯತ್ನದಿಂದ ಮಾಡಬೇಕು.

೯೧-೯೬. ಮಂತ್ರಿ ಮೊದಲಾದವರ ಪರಿಚಯವುಳ್ಳವರೂ, ಅವರ ಮನೆಯಲ್ಲಿ ಒಳಗೂ ಹೊರಗೂ ಹೋಗಿಬರುವ ಬಳಕೆಯುಳ್ಳವರೂ, ಶಿಲ್ಪಕುಶಲೆಯರೂ, ಚತುರೆಯರೂ, ಬುದ್ಧಿಮತಿಯರೂ, ವೃದ್ಧೆಯರೂ ಆದ ಸ್ತ್ರೀಯರನ್ನು ರಾಜನು ಹೆಂಡರಿಗೆ ತಿಳಿಯದಂತೆ ಏಕಾಂತದಲ್ಲಿ ಅವರೊಡನೆ ಆಲೋಚಿಸಿ, ಮಂತ್ರಿಗಳ ಬಳಿಗೆ ಕಳುಹಿಸಬೇಕು. ಚತುರೆಯರಾದ ಆ ಸ್ತ್ರೀಯರು ಮಂತ್ರಿಗಳ ಬಳಿಗೆ ಹೋಗಿ ಅವರ ಹೃದಯವನ್ನು ತಿಳಿಯಬಹುದು. ಮತ್ತು ರಾಣಿಯರಲ್ಲಿಗೆ ಹೋಗಿ ಏಕಾಂತವಲ್ಲಿ ಓ ರಾಣಿ! ಇಂತಹವನು ನಿನ್ನನ್ನು ಕಾಮಿಸುವನು, ನಿನಗೂ ಅಭಿಲಾಷೆಯಿದ್ದರೆ ಹೇಳು. ಅವನೊಡನೆ ನಿನ್ನನ್ನು ನಾನು ಸೇರಿಸುವೆನು. ಎಲೌ ಉತ್ತಮಸ್ತ್ರೀಯೇ, ಈ ಮಂತ್ರಿಯು ನಿನ್ನನ್ನು ಕಾಮಿಸುತ್ತಲಿರುವನು, ಅವನು ನಿನಗೆ ಯೋಗ್ಯನಾಗಿರುವನು, ನೀನೂ ಅವನನ್ನಪೇಕ್ಷಿಸಿದರೆ, ನಾನು ಅವನೊಡನೆ ನಿನ್ನನ್ನು ಸೇರಿಸುವೆನು. ಇದೇ ಮೊದಲಾದ ಅನೇಕ ಉಪಾಯಗಳಿಂದ ಪತ್ನಿಯರು, ಮಗನ ಪುತ್ರಿಯರು,

ಇತ್ಯನೇನ ಪ್ರಕಾರೇಣ ನಾನೋಪಾಯೈಸ್ತಥೋತ್ತರೈಃ ।
ಭಾರ್ಯಾಃ ಪುತ್ರದುಹಿತ್ರೀಶ್ಚ ಸ್ನುಷಾಶ್ಚ ಪ್ರಸ್ನುಷಾಸ್ತಥಾ ॥ ೯೬ ॥

ಶೋಧಯೇತ್ಸಚಿವಾ ಪುತ್ರಾ ಪೌತ್ರಾದೀ ಸೇವಕಾಂಸ್ತಥಾ ।
ಕಾಮೋಪಧಾವಿಶುದ್ಧಾಂಸ್ತು ಘಾತಯೇದವಿಚಾರಯನ್ ॥ ೯೭ ॥

ಸ್ತ್ರಿಯಸ್ತು ಯೋಜ್ಯಾ ದಂಡೇನ ಬ್ರಾಹ್ಮಣಾಂಸ್ತು ವಿವಾಸಯೇತ್ ।
ಮೋಕ್ಷಮಾರ್ಗಾವಸಕ್ತಂ ತು ಹಿಂಸಾಪೈಶೂನ್ಯವರ್ಜಿತಂ ॥ ೯೮ ॥

ಕ್ಷಮೈಕಸಾರಂ ನೃಪತಿಃ ಸಚಿವಂ ಪರಿವರ್ಜಯೇತ್ ।
ಮೋಕ್ಷಮಾರ್ಗವಿಷಕ್ತಾಂಸ್ತು ದಂಡ್ಯಾನಪಿ ನ ದಂಡಯೇತ್ ॥ ೯೯ ॥

ಸಮಬುದ್ಧಿಸ್ತು ಸರ್ವತ್ರ ತಸ್ಮಾತ್ತಂ ಪರಿವರ್ಜಯೇತ್ ।
ಇತಿ ಸೂತ್ರಂ ಚೌಪಧಾನಾಮುಪಧಾ ಬಹುಧಾ ಪುನಃ ॥ ೧೦೦ ॥

ಸೂಸೆಯರು, ಮಕ್ಕಳ ಸೂಸೆಯರು ಇವರನ್ನೂ ಮಂತ್ರಿ, ಮಕ್ಕಳು, ಮೊಮ್ಮಕ್ಕಳು, ಸೇವಕರು ಇವರನ್ನೂ ಪರೀಕ್ಷಿಸಬೇಕು. ಇದಕ್ಕೆ ಕಾಮೋಪಧೆಯೆಂದು ಹೆಸರು.

೯೭. ಈ ಕಾಮೋಪಧೆಯಿಂದ ಪರೀಕ್ಷಿಸಿ, ತಪ್ಪಿತಸ್ಥರನ್ನು ವಿಚಾರಮಾಡದೆ ಶಿಕ್ಷಿಸಬೇಕು. ಸ್ತ್ರೀಯರಾದರೆ ಚೆನ್ನಾಗಿ ಶಿಕ್ಷಿಸಬೇಕು. ಬ್ರಾಹ್ಮಣರನ್ನು ದೇಶಬಿಟ್ಟು ಓಡಿಸಬೇಕು.

೯೮. ಮುಕ್ತಿಮಾರ್ಗದಲ್ಲಿರುವವನೂ, ಹಿಂಸೆ, ಕಪಟ, ಇವುಗಳಿಲ್ಲದವನೂ, ಶಾಂತನೂ ಆದಂತಹ ಮಂತ್ರಿಯು ಆ ಕಾಮೋಪಧೆಯಲ್ಲಿ ಅಶುದ್ಧನೆಂದು ಸಂಶಯ ಬಂದರೂ ಅವನನ್ನು ಶಿಕ್ಷಿಸಬಾರದು. ಅವನನ್ನು ಬಿಟ್ಟುಬಿಡಬೇಕು.

೯೯. ಮೋಕ್ಷಮಾರ್ಗದಲ್ಲಿದ್ದವರು ಶಿಕ್ಷೆಗೆ ಅರ್ಹರಾಗಿದ್ದರೂ ಅವರನ್ನು ಶಿಕ್ಷಿಸ ಬಾರದು. ಅವರು ಎಲ್ಲಿಡೆಯಲ್ಲಿಯೂ ಸಮಬುದ್ಧಿಯುಳ್ಳವರಾದುದರಿಂದ ಅವರನ್ನು ಬಿಟ್ಟುಬಿಡಜೇಕು. ಇದು ಮೋಕ್ಷೋಪಧೆಯು.

೧೦೦. ಹೀಗೆ ಉಪಧೆಗಳ ವಿಷಯದಲ್ಲಿ ಸೂತ್ರವನ್ನೂ, ಅನೇಕಪ್ರಕಾರವಾಗಿ ಉಪಧೆಗಳ ವಿಚಾರವನ್ನೂ, ಶುಕ್ರಾಚಾರ್ಯನು "ಶುಕ್ರನೀತಿ" ಯಲ್ಲಿ ವಿವೇಚಿಸಿರುವನು. ವಿಶೇಷಸಂಗತಿಗಳನ್ನು ಅಲ್ಲಿ ನೋಡಿ ತಿಳಿದುಕೊಳ್ಳಬಹುದು.

ವಿವೇಚಿತಾ ಚೋಶನಸಾ ತಚ್ಚಾಸ್ತ್ರೇ ತತ್ರ ಬೋಧಯೇತ್ ।
ವಿಗ್ರಹೇ ಸತತಂ ರಾಜಾ ಪರೈರ್ನಸಮ್ಯಗಾಚರೇತ್ ॥ ೧೦೧ ॥

ಭೂವಿತ್ತಮಿತ್ರಲಾಭೇಷು ನಿಶ್ಚಿತೇಷ್ವೇವ ವಿಗ್ರಹಾಃ ॥
ಸಪ್ತಾಂಗೇಷು ಪ್ರಸಾದಶ್ಚ ಸದಾ ಕಾರ್ಯೋ ನೃಪೋತ್ತಮೈಃ ॥ ೧೦೨ ॥

ಕೋಶಸ್ಯ ಸಂಚಯಂ ರಕ್ಷಾಂ ಸತತಂ ಸಮ್ಯಗಾಚರೇತ್ ।
ಮಂತ್ರಿಣಸ್ತು ನೃಪಃ ಕುರ್ಯಾದ್ವಿಪ್ರಾ ವಿದ್ಯಾವಿಶಾರದಾ ॥ ೧೦೩ ॥

ವಿನಯಜ್ಞಾ ಕುಲೀನಾಂಶ್ಚ ಧರ್ಮಾರ್ಥಕುಶಲಾನ್ನೃಜೂ ।
ಮಂತ್ರಯೇತ್ತೈಃ ಸಮಂ ಜ್ಞಾನಂ ನಾತ್ಯರ್ಥಂ ಬಹುಭಿಶ್ಚರೇತ್ ॥ ೧೦೪ ॥

ಏಕೈಕೇನೈವ ಕರ್ತವ್ಯಂ ಮಂತ್ರಸ್ಯ ಚ ವಿನಿಶ್ಚಯಂ ।
ವ್ಯಸ್ತೈಃ ಸಮಸ್ತೈಶ್ಚಾನ್ಯಸ್ಯ ವ್ಯಪದೇಶೈಃ ಸಮಂತತಃ ॥ ೧೦೫ ॥

---

೧೦೧. ಶತ್ರುಗಳೊಡನೆ ಸಣ್ಣ ವಿಚಾರಗಳಿಗಾಗಿ ಯುದ್ಧವನ್ನು ಮಾಡ ಬಾರದು. ತನ್ನದೆಂದು ನಿಶ್ಚಿತವಾಗಿರುವ ಭೂಮಿ, ಧನ, ಮಿತ್ರ, ಲಾಭ ಇವುಗಳಿ ಗಾಗಿ ಮಾತ್ರ ಯುದ್ಧವನ್ನು ಮಾಡಬೇಕು.

೧೦೨. ಹಿಂದೆ ಹೇಳಿದ ಏಳು ರಾಜ್ಯಾಂಗಗಳಲ್ಲಿ ರಾಜನು ಸದಾ ಜಾಗರೂಕ ನಾಗಿರಬೇಕು. ಬೊಕ್ಕಸವನ್ನು ಅಭಿವೃದ್ಧಿಗೊಳಿಸಿ, ಅದನ್ನು ಜೋಪಾನವಾಗಿ ರಕ್ಷಿಸು ತ್ತಿರಬೇಕು.

೧೦೩. ಸರ್ವವಿದ್ಯಾವಿಶಾರದರೂ, ವಿನಯಶಾಲಿಗಳೂ, ಒಳ್ಳೆಯಕುಲದಲ್ಲಿ ಜನಿಸಿದವರೂ, ಧರ್ಮ ಮತ್ತು ಅರ್ಥಗಳಲ್ಲಿ ನಿಪುಣರೂ ಕಪಟಿಗಳಲ್ಲದೆ ಸರಳರೂ ಆಗಿರುವಂತಹ ಬ್ರಾಹ್ಮಣರನ್ನೇ ಮಂತ್ರಿಗಳನ್ನಾಗಿ ನಿಯಮಿಸಿಕೊಳ್ಳಬೇಕು.

೧೦೪. ಅವರೊಡನೆ ಮಂತ್ರಾಲೋಚನೆಯನ್ನು ಮಾಡಬೇಕು. ಅನೇಕ ರೊಡನೆ ಹೆಚ್ಚಾಗಿ ಆಲೋಚಿಸಬಾರದು. ಒಬ್ಬೊಬ್ಬರೊಡನೆಯೇ ಮಂತ್ರಾಲೋಚನೆ ಯನ್ನು ಮಾಡಿ ಅವರವರ ಅಭಿಪ್ರಾಯವನ್ನು ಪ್ರತ್ಯೇಕವಾಗಿ ತಿಳಿದು ಕರ್ತವ್ಯ ಕಾರ್ಯವನ್ನು ನಿಶ್ಚಯಿಸಬೇಕು.

೧೦೫-೧೦೬. ಒಬ್ಬೊಬ್ಬರೊಡನೆಯಾಗಲೀ ಅನೇಕರೊಡನೆಯಾಗಲೀ ಸಂದ ರ್ಭಾನುಸಾರ ಆಲೋಚಿಸಬೇಕು. ಮಂತ್ರಗೃಹವು ಬಲವಾಗಿ ಕಟ್ಟಲ್ಪಟ್ಟಿದ್ದು,

ಸುಸಂವೃತಂ ಮಂತ್ರಗೃಹಂ ಸ್ಥಲಂ ವಾರುಹ್ಯ ಮಂತ್ರಯೇತ್ ।
ಅರಣ್ಯೇ ನಿಃಶಲಾಕೇ ವಾ ನ ಯಾಮಿನ್ಯಾಂ ಕದಾಚನ ॥ ೧೦೬ ॥

ಶಿಶೂಞ್ಚಾಖಾಮೃಗಾನ್ಷಂಡಾಞ್ಚುಕಾನ್ವೈಸಾರಿಕಾಸ್ತಥಾ ।
ವರ್ಜಯೇನ್ಮಂತ್ರಗೇಹೇ ತು ಮನುಷ್ಯಾನ್ವಿಕೃತಾಂಸ್ತಥಾ ॥ ೧೦೭ ॥

ದೂಷಣಂ ಮಂತ್ರಭೇದೇಷು ನೃಪಾಣಾಂ ಯಸ್ತು ಜಾಯತೇ ।
ನ ತಚ್ಛಕ್ಯಂ ಸಮಾಧಾತುಂ ದಕ್ಷೈರ್ನೃಪಶತೈರಪಿ ॥ ೧೦೮ ॥

ದಂಡ್ಯಾಂಸ್ತು ದಂಡಯೇದ್ದಂಡೈರದಂಡ್ಯಾ೯ ದಂಡಯೇನ್ನ ಹಿ ।
ಅದಂಡಯನ್ನೃಪೋ ದಂಡ್ಯಾನ್ನದಂಡ್ಯಾಂಶ್ಚಾಪಿ ದಂಡಯ೯ ॥ ೧೦೯ ॥

ನೃಪತಿರ್ವಾಚ್ಯತಾಂ ಪ್ರಾಪ್ಯ ಚೌರಕಿಲ್ಬಿಷಮಾಪ್ನುಯಾತ್ ।
ದುರ್ಗೇ ತು ಸಮತಾಂ ಕುರ್ಯಾತ್ಪ್ರಾಕಾರಾಟ್ಟಾಲತೋರಣೈಃ ॥ ೧೧೦ ॥

ಮೇಲ್ಭಾಗದಲ್ಲಿರಬೇಕು. ಅಲ್ಲಿ ಇತರರ ಪ್ರವೇಶಕ್ಕೆ ಅವಕಾಶವಿರಬಾರದು. ಅಂತಹ ಮಂತ್ರಾಲೋಚನಾಗೃಹದಲ್ಲಿ ಕುಳಿತು ಆಲೋಚಿಸಬೇಕು. ನಿರ್ಜನವಾದ ಬಯಲಾದ ಕಾಡುಪ್ರದೇಶವಲ್ಲಾದರೂ ಮಂತ್ರಾಲೋಚನೆಯನ್ನು ಮಾಡಬಹುದು. ಆದರೆ ರಾತ್ರಿ ಕಾಲದಲ್ಲಿ ಮಾಡಕೂಡದು.

೧೦೭. ಬಾಲಕರು, ಕಪಿಗಳು, ನಪುಂಸಕರು, ಗಿಣಿಗಳು, ಹೆಣ್ಣುಗಿಣಿ, ಅಂಗ ವಿಕಾರವುಳ್ಳ ಮನುಷ್ಯರು ಇವರುಗಳು ಮಂತ್ರಗೃಹದಲ್ಲಿರಬಾರದು.

೧೦೮. ಮಂತ್ರಾಲೋಚನೆಯು ಬಯಲಾಗಿ ರಹಸ್ಯವು ಹೊರಬಿದ್ದರೆ, ಅದರಿಂದ ಒದಗುವ ಅನಿಷ್ಟವನ್ನು ಸಮರ್ಥರಾದ ನೂರಾರು ರಾಜರು ಸೇರಿದರೂ ನಿವಾರಣೆ ಮಾಡಲಾರರು.

೧೦೯. ಶಿಕ್ಷೆಗೆ ಅರ್ಹರಾದವರನ್ನು ಶಿಕ್ಷಿಸಬೇಕು. ನಿರಪರಾಧಿಗಳನ್ನು ಶಿಕ್ಷಿಸ ಬಾರದು. ಅಪರಾಧಿಗಳನ್ನು ಶಿಕ್ಷಿಸದಿರುವ ಮತ್ತು ನಿರಪರಾಧಿಗಳನ್ನು ಶಿಕ್ಷಿಸುವ ರಾಜನು ಲೋಕದಲ್ಲಿ ನಿಂದೆಗೊಳಗಾಗುವನಲ್ಲದೆ ಕಳ್ಳತನವನ್ನು ಮಾಡಿದ ಪಾಪವನ್ನು ಹೊಂದುವನು.

೧೧೦. ಕೋಟೆ, ಕೊತ್ತಳ, ತೋರಣ, ಗೋಪುರಗಳಿಂದ ಅಲಂಕೃತವಾದ ನಗರಕ್ಕಿಂತಲೂ ದೂರವಲ್ಲಿರುವ ಬಲವಾದ ದುರ್ಗದಲ್ಲಿ ರಾಜನು ವಾಸಮಾಡಬೇಕು.

ಭೂಷಿತಾನ್ನಗರಾದ್ರಾಜಾ ದೂರೇ ದುರ್ಗಾಶ್ರಯಂ ಚರೇತ್ ।
ದುರ್ಗಂ ಬಲಂ ನೃಪಾಣಾಂ ತು ನಿತ್ಯಂ ದುರ್ಗಂ ಪ್ರಶಸ್ಯತೇ ॥ ೧೧೧ ॥

ಶತಮೇಕೋ ಯೋಧಯತಿ ದುರ್ಗಸ್ಥೋ ಯೋ ಧನುರ್ಧರಃ ।
ಶತಂ ದಶಸಹಸ್ರಾಣಿ ತಸ್ಮಾದ್ದುರ್ಗಂ ಪ್ರಶಸ್ಯತೇ ॥ ೧೧೨ ॥

ಜಲದುರ್ಗಂ ಭೂಮಿದುರ್ಗಂ ವೃಕ್ಷದುರ್ಗಂ ತಥೈವ ಚ ।
ಆರಣ್ಯಬಲದುರ್ಗಂ ಚ ಶೈಲಜಂ ಪರಿಖೋದ್ಭವಂ ॥ ೧೧೩ ॥

ದುರ್ಗಂ ಕಾರ್ಯಂ ನೃಪತಿನಾ ಯಥಾ ದುರ್ಗಂ ಸ್ವದೇಶತಃ ।
ದುರ್ಗಂ ಕುರ್ವಂ ಪುರಂ ಕುರ್ಯಾತ್ತ್ರಿಕೋಣಂ ಧನುರಾಕೃತಿ ॥ ೧೧೪ ॥

ವರ್ತುಲಂ ಚ ಚತುಷ್ಕೋಣಂ ನಾನ್ಯಥಾ ನಗರಂ ಚರೇತ್ ।
ಮೃತ್ತಿಕಾಕೃತಿದುರ್ಗಂ ತು ಸತತಂ ಕುಲನಾಶನಂ ॥ ೧೧೫ ॥

---

೧೧೧. ರಾಜರಿಗೆ ದುರ್ಗವೇ ಮುಖ್ಯವಾದ ಬಲವು. ದುರ್ಗವು ಸದಾ ಉತ್ತಮವಾದುದು. ದುರ್ಗದಲ್ಲಿ ಧನುರ್ಧಾರಿಯಾದ ಓರ್ವ ಸೈನಿಕನು ನೂರು ಜನರೊಡನೆ ಯುದ್ಧಮಾಡಬಲ್ಲನು.

೧೧೨-೧೧೩. ದುರ್ಗದಲ್ಲಿ ನೂರುಜನ ಸೈನಿಕರು ಸಾವಿರ ಸೈನಿಕರೊಡನೆ ಯದ್ಧಮಾಡಬಲ್ಲರು. ಆದಕಾರಣ ದುರ್ಗವು ಶ್ರೇಷ್ಠವಾದುದು. ನದೀದುರ್ಗ, ಭೂಮಿದುರ್ಗ, ವೃಕ್ಷದುರ್ಗ, ಅರಣ್ಯದುರ್ಗ, ಸೈನಿಕದುರ್ಗ, ಗಿರಿದುರ್ಗ, ಪರಿಖಾ (ಕಂದುಕ) ದುರ್ಗ, ಈ ಮೊದಲಾದ ದುರ್ಗಗಳನ್ನು ತನ್ನ ದೇಶದ ಅನುಕೂಲತೆಗೆ ಸರಿಯಾಗಿ ಯಥಾಶಕ್ತಿ ರಾಜನು ನಿರ್ಮಿಸಬೇಕು.

೧೧೪: ಹೀಗೆ ದುರ್ಗವನ್ನು ನಿರ್ಮಿಸಿ ಅದರಲ್ಲಿ ಒಂದು ನಗರವನ್ನು ನಿರ್ಮಿಸ ಬೇಕು. ಆ ನಗರವು ಧನುರಾಕಾರವಾಗಿಯಾಗಲೀ, ಚೌಕವಾಗಿ ಅಥವಾ ದುಂಡಾಗಿ ಯಾಗಲೀ ಇರಬಹುದು.

೧೧೫-೧೧೬. ಮಣ್ಣಿನಿಂದ ನಿರ್ಮಿತವಾದ ದುರ್ಗವು ಸದಾ ಕುಲವನ್ನು ನಾಶಮಾಡುವುದು. ರಾವಣನ ರಾಜಧಾನಿಯಾದ ಲಂಕೆಯು ಮೃತ್ತಿಕಾದುರ್ಗವಾಗಿ

ಯಥಾ ರಾಕ್ಷಸರಾಜ್ಯಸ್ಯ ಲಂಕಾ ದುರ್ಗಾನ್ವಿತಾ ಪುರಾ ।
ಬಲೇಃ ಪುರಂ ಶೋಣಿತಾಖ್ಯಂ ತೇಜೋದುರ್ಗೈಃ ಪ್ರತಿಷ್ಠಿತಂ ॥ ೧೧೬ ॥

ತದ್ಯಸ್ಮಾದ್ವ್ಯಜನಾಕಾರಂ ಮನೋಭ್ರಷ್ಟಃ ಶಿವಾವಲಿಃ ।
ಸೌಭಾಗ್ಯಂ ಸಾ ತು ರಾಜ್ಯಸ್ಯ ನಗರಂ ಪಂಚಕೋಣಕಂ ॥ ೧೧೭ ॥

ದಿವಿ ಯದ್ವರ್ತತೇ ರಾಜ್ಯಂ ತಚ್ಛ ಭ್ರಷ್ಟಂ ಭವಿಷ್ಯತಿ ।
ಯಚ್ಚಾಯೋಧ್ಯಾಹ್ವಯಂ ಭೂಪ ಪುರಮಿಕ್ಷ್ವಾಕುಭೂಭೃತಾಂ ॥ ೧೧೮ ॥

ಧನುರಾಕೃತಿ ತಚ್ಚಾಪಿ ತತೋಽಭೂದ್ವಿಜಯಪ್ರದಂ ।
ದುರ್ಗಾದೌ ಪೂಜಯೇದ್ದುರ್ಗಾಂದಿಕ್ಪಾಲಾಂಶ್ಚೈವ ದ್ವಾರತಃ ॥ ೧೧೯ ॥

ಪೂಜಯಿತ್ವಾ ವಿಧಾನೇನ ಜಯಂ ಭೂಪಃ ಸಮಾಪ್ನುಯಾತ್ ।
ಅತೋ ದುರ್ಗಂ ನೃಪಃ ಕುರ್ಯಾತ್ಸತತಂ ಜಯವೃದ್ಧಯೇ ॥ ೧೨೦ ॥

ದ್ದುದರಿಂದ ಅದು ನಾಶವನ್ನೈದಿತು. ತೇಜೋದುರ್ಗವೆಂಬ ಹೆಸರಿನಿಂದ ಕೂಡಿದ ಒಲಿಚಕ್ರವರ್ತಿಯ ರಾಜಧಾನಿಯಾದ ಕೋಣಿತಪುರವು ಹಾಗೆಯೇ ಇದ್ದಿತು.

೧೧೭. ಆದುದರಿಂದ ದುರ್ಗದಲ್ಲಿರುವ ನಗರವು ಬೀಸಣಿಗೆಯ ಆಕಾರದಿಂದಿರಬೇಕು. ಸುತ್ತಲೂ ಕೋಟೆಗಳಿಂದಲೂ, ಪ್ರಾಕಾರಗಳಿಂದಲೂ, ಐದು ಮೂಲೆಗಳಿಂದಲೂ, ಕೂಡಿರಬೇಕು. ಇಂತಹ ನಗರವು ರಾಜ್ಯಕ್ಕೆ ಮಂಗಳವನ್ನುಂಟು ಮಾಡುವುದು.

೧೧೮. ಭೂಮಟ್ಟಕ್ಕೆ ತುಂಬಾ ಎತ್ತರಪ್ರದೇಶದಲ್ಲಿರುವ ರಾಜ್ಯವು ಜಾಗ್ರತೆ ಹಾಳಾಗುವುದು. ಇಕ್ಷ್ವಾಕುವಂಶದ ರಾಜರ ರಾಜಧಾನಿಯಾದ ಅಯೋಧ್ಯೆಯು ಧನುಸ್ಸಿನ ಆಕಾರವಾಗಿತ್ತು ಆದಕಾರಣ ಅದು ಒಳ್ಳೆಯ ವಿಜಯವನ್ನೇ ಪಡೆಯುತ್ತಿತ್ತು.

೧೧೯-೧೨೦. ದುರ್ಗದ ಪ್ರದೇಶದಲ್ಲಿ ದುರ್ಗೆಯನ್ನು ಪ್ರತಿಷ್ಠಿಸಿ ಪೂಜಿಸಬೇಕು. ದುರ್ಗದ ದ್ವಾರವಲ್ಲಿ ದಿಕ್ಪಾಲಕರನ್ನು ಪೂಜಿಸಬೇಕು. ಹಾಗೆ ಮಾಡುತ್ತಲಿದ್ದರೆ ಜಯವು ಸದಾ ಲಭಿಸುವುದು. ಈ ಎಲ್ಲಾ ಕಾರಣಗಳಿಂದ ರಾಜನು ಜಯಾಭಿವೃದ್ಧಿಗಾಗಿ ದುರ್ಗವನ್ನು ಸದಾ ಕಲ್ಪಿಸಿರಬೇಕು.

ನ ಬ್ರಾಹ್ಮಣಾ೯ ಸದಾ ರಾಜಾ ಕೇನಾಪ್ಯವಮನೀಕೃ೯ತಾ೯ ।
ಅವಾಮಾನ್ಯ ನೃಪೋ ವಿಪ್ರಾ೯ ಪ್ರೇತ್ಯೇಹ ದುಃಖಭಾಗ್ಭವೇತ್ ॥ ೧೨೧ ॥

ನ ವಿರೋಧಸ್ತು ತೈಃ ಕಾರ್ಯಃ ಸ್ವಾನಿ ತೇಷಾಂ ನ ಚಾದದೇತ್ ।
ಕೃತ್ಯಕಾಲೇಷು ಸತತಂ ತಾನೇವ ಪರಿಪೂಜಯೇತ್ ॥ ೧೨೨ ॥

ನೈಷಾಂ ನಿಂದಾಂ ಪ್ರಕುರ್ವೀತ ನಾಭ್ಯಸೂಯಾಂ ತಥಾಚರೇತ್ ।
ಏವಂ ನೃಪೋ ಮಹಾಬುದ್ಧಿಸ್ತತ್ತನ್ಮಂಡಲಸಂಯುತಃ ॥ ೧೨೩ ॥

ಅಪ್ರಮಾದೀ ಚಾರಚಕ್ಷುರ್ಗುಣವಾ೯ ಸುಪ್ರೀಯಂವದಃ ।
ಪ್ರೇತ್ಯೇಹ ಮಹತೀಂ ಸಿದ್ಧಿಂ ಪ್ರಾಪ್ನೋತಿ ಸುಖಭೋಗವಾ೯ ॥ ೧೨೪ ॥

ಯೈರ್ಗುಣೈರ್ಯೋಜಿತಶ್ಚಾತ್ಮಾ ತೈಃ ಪುತ್ರಾನಪಿ ಯೋಜಯೇತ್ ।
ನೃಪಸ್ಯ ಚ ಸ್ವತಂತ್ರತ್ವಂ ಸತತಂ ಸ್ವಂ ವಿನಾಶಯೇತ್ ॥ ೧೨೫ ॥

೧೨೧-೧೨೨. ಮತ್ತು ರಾಜನು, ಬ್ರಾಹ್ಮಣರನ್ನು ಯಾವರೀತಿಯಿಂದಲೂ ಅವಮಾನಮಾಡಬಾರದು. ಹಾಗೆ ಅವಮಾನಮಾಡಿದರೆ ಅವನು ಇಹಪರಗಳೆರಡ ರಲ್ಲಿಯೂ ದುಃಖಿಯಾಗುವನು. ಬ್ರಾಹ್ಮಣರೊಡನೆ ವಿರೋಧವನ್ನು ಬೆಳೆಸಬಾರದು. ಅವರ ಧನವನ್ನಪಹರಿಸಬಾರದು ಧರ್ಮಕಾರ್ಯಗಳಲ್ಲಿ ಅವರನ್ನೇ ಪೂಜಿಸಬೇಕು. ಬ್ರಾಹ್ಮಣರನ್ನು ನಿಂದಿಸಬಾರದು. ಅವರಲ್ಲಿ ಅಸೂಯೆಯನ್ನು ಆಚರಿಸಬಾರದು.

೧೨೩-೧೨೪. ಮೇಲೆ ಹೇಳಿದ ರೀತಿಯಿಂದ ಬುದ್ಧಿವಂತನಾವ ರಾಜನು ಮಂತ್ರಿಗಳೊಡನೆ ರಾಜ್ಯಭಾರವನ್ನು ಮಾಡಬೇಕು. ಚಾರರಿಂದ ಸಮಸ್ತವಿಷಯ ಗಳನ್ನು ಆಗಾಗ ತಿಳಿದುಕೊಳ್ಳುತ್ತಾ ಜಾಗರೂಕತೆಯಿಂದಿರಬೇಕು. ಗುಣವಂತನೂ, ಸೌಮ್ಯವಾಗಿ ಮಾತನಾಡುವವನೂ ಆಗಿರಬೇಕು. ಇಂತಹ ರಾಜನು ಈ ಲೋಕದಲ್ಲಿ ಸಮಸ್ತ ಸುಖಭೋಗಗಳನ್ನು ಅನುಭವಿಸಿ, ಅನೇಕ ಸಿದ್ಧಿಗಳನ್ನೂ ಪಡೆದು, ಕಡೆಗೆ ಸ್ವರ್ಗದಲ್ಲಿ ಸುಖದಿಂದಿರುವನು.

೧೨೫. ತಾನು ಯಾವ ಸದ್ಗುಣಗಳುಳ್ಳವನಾಗಿರುವನೋ ಪುತ್ರರನ್ನೂ ಅವೇ ಗುಣಗಳುಳ್ಳವರನ್ನಾಗಿ ಮಾಡಬೇಕು. ರಾಜನು ಧರ್ಮಮಾರ್ಗವನ್ನು ಬಿಟ್ಟು ಸ್ವೇಚ್ಛಾಪ್ರವೃತ್ತನಾದರೆ ತನ್ನನ್ನು ತಾನೇ ನಾಶಮಾಡಿಕೊಂಡಂತಾಗುವುದು.

ಸ್ವತಂತ್ರೋ ಭೂಪತನಯೋ ವಿಕಾರಂ ಯಾತಿ ನಿಶ್ಚಯಂ ।
ನಿರ್ವಿಕಾರಾಯ ಸತತಂ ವೃದ್ಧಾಂಶ್ಚ ಪರಿಯೋಜಯೇತ್ ॥ ೧೨೬ ॥

ಭೋಜನೇ ಶಯನೇ ಯಾನೇ ಪುರುಷಾಣಾಂ ಚ ವೀಕ್ಷಣೇ ।
ನಿಯೋಜಯೇತ್ಸದಾ ದಾರಾ೯ ಭೂಪಃ ಕಾಮವಿಚೇಷ್ಟನೇ ॥ ೧೨೭ ॥

ಅಸ್ವತಂತ್ರಾಃ ಸ್ತ್ರಿಯಃ ಕಾರ್ಯಾಃ ಸತತಂ ಪಾರ್ಥಿವೇನ ತು ।
ತಾಃ ಸ್ವತಂತ್ರಾಃ ಸ್ತ್ರಿಯೋ ನಿತ್ಯಂ ಹಾನಯೇ ಸಂಭವಂತಿ ಹಿ ॥ ೧೨೮ ॥

ತಸ್ಮಾತ್ಕುಮಾರಂ ಮಹಿಷೀಮುಪಧಾಭಿರ್ಮನೋಹರೈಃ ।
ಶೋಧಯಿತ್ವಾ ನಿಯುಂಜೀತ ಯೌವರಾಜ್ಯಾವರೋಧಯೋಃ ॥ ೧೨೯ ॥

ಅಂತಃಪುರಪ್ರವೇಶೇ ತು ಸ್ವತಂತ್ರತ್ವಂ ನಿಷೇಧಯೇತ್ ।
ಭೂಪುತ್ರಸ್ಯ ಚ ಭಾರ್ಯಾಯಾ ಬಹಿಃಸಾರೇ ತಥೈವ ಚ ॥ ೧೩೦ ॥

---

೧೨೬. ರಾಜನು ತನ್ನ ಪುತ್ರನಾದ ರಾಜಕುಮಾರನನ್ನು ಸ್ವೇಚ್ಛೆಯಾಗಿ ನಡೆಯಲು ಅವಕಾಶ ಕೊಡಬಾರದು. ಸ್ವೇಚ್ಛಾಪ್ರವರ್ತಕನಾದರೆ ಕೆಟ್ಟದಾರಿಗೆ ಬಿದ್ದು ಅಯೋಗ್ಯನಾಗುವನು. ಆದುದರಿಂದ ಗುರುಹಿರಿಯರನ್ನು ಅವನ ಮೇಲುವಿಚಾರಣೆಗಾಗಿ ನಿಯೋಜಿಸಬೇಕು.

೧೨೭. ಭೋಜನ, ಶಯನಕಾಲ, ವಾಹನಾದಿಗಳಲ್ಲಿ ಕುಳಿತು ಮಾಡುವ ಸಂಚಾರ, ರಾಜಕಾರ್ಯಕ್ಕಾಗಿ ಪುರುಷರನ್ನು ನೋಡಬೇಕಾದ ಕಾಲ, ಕಾಮಸಂಬಂಧವಾದಕಾರ್ಯ ಇವುಗಳಲ್ಲಿ ತನ್ನ ಸ್ತ್ರೀಯನ್ನು ಯಾವಾಗಲೂ ಜತೆಯಲ್ಲಿ ಇಟ್ಟುಕೊಂಡಿರಬಾರದು. ಯೋಗ್ಯಸಂದರ್ಭಗಳಲ್ಲಿ ಮಾತ್ರ ಸ್ತ್ರೀಯರೊಡನಿರಬಹುದು.

೧೨೮. ರಾಜನು ಸ್ತ್ರೀಯರನ್ನು ಸ್ವತಂತ್ರವಾಗಿಟ್ಟಿರಬಾರದು. ನಿತ್ಯವೂ ಸ್ವತಂತ್ರವಾದ ಸ್ತ್ರೀಯರು ಸದಾ ಹಾನಿಯನ್ನೇ ಉಂಟುಮಾಡುವರು.

೧೨೯. ಆದಕಾರಣ ರಾಜಕುಮಾರ ಮತ್ತು ರಾಣಿಯರನ್ನು ಹಿಂದೆಹೇಳಿದ ಕಾಮೋಪಧೆಗಳಿಂದ ಮತ್ತು ಅರ್ಥೋಪಧೆಗಳಿಂದ ಪರೀಕ್ಷಿಸಿ, ಅವರನ್ನು ಯುವರಾಜಪದವೀ ಮತ್ತು ಅಂತಃಪುರ ಇವುಗಳಿಗೆ ಯೋಗ್ಯರನ್ನಾಗಿ ಮಾಡಿ, ಕ್ರಮವಾಗಿ ಸೇರಿಸಬೇಕು.

೧೩೦. ರಾಜಕುಮಾರನಿಗೆ ಅಂತಃಪುರವನ್ನು ಮನಸ್ಸು ಬಂದಾಗಲೆ ಪ್ರವೇಶಿಸಲು ಅವಕಾಶ ಕೊಡಕೂಡದು. ಹಾಗೆಯೇ ರಾಣಿಗೆ ಅಂತಃಪುರವನ್ನು ಬಿಟ್ಟು ಹೊರಗೆ ಹೋಗಲು ಅವಕಾಶ ಕೊಡಕೂಡದು.

ಅಯಂ ವಿಶೇಷಃ ಸಂಕ್ಷೇಪಾನ್ನೃಪಧರ್ಮೋ ಮಯೋದಿತಃ ।
ಪುತ್ರಾಣಾಂ ಗುಣವಿನ್ಯಾಸೇ ಭಾರ್ಯಾಣಾಮಪಿ ಭೂಪತೇ ॥ ೧೩೧ ॥

ಉಶನಾ ರಾಜನೀತೀನಾಂ ತಂತ್ರಾಣಿ ತು ಬೃಹಸ್ಪತಿಃ ।
ಚಕಾರಾನ್ಯಾನ್ವಿಶೇಷಾಂಸ್ತು ತಯೋಸ್ತಂತ್ರೇಷು ಬೋಧಯೇತ್ ॥

ಏವಂ ರಾಜಾ ಮಹಾಭಾಗೋ ರಾಜನೀತೌ ವಿಶೇಷತಾಂ ।
ಕುರ್ವನ್ನ ಸೀದತಿ ಸದಾ ಭೂಯಸೀಂ ಶ್ರಿಯಮಶ್ನುತೇ ॥ ೧೩೩ ॥

॥ ಇತಿ ಶ್ರೀಕಾಲಿಕಾಪುರಾಣೇ ಸಪ್ತಾಶೀತಿತಮೋಽಧ್ಯಾಯಃ ॥

---

೧೩೧. ಎಲೈ ರಾಜನೇ! ಈ ರಾಜಧರ್ಮದ ವಿಶೇಷನಿಯಮಗಳನ್ನು ನಿನಗೆ ಸಂಗ್ರಹವಾಗಿ ಹೇಳಿರುವೆನು. ಮತ್ತು, ರಾಜಕುಮಾರರಾಣಿಯರು ಗುಣಶಾಲಿಗಳಾಗುವುದಕ್ಕೆ ಅನುಸರಿಸಬೇಕಾದ ಕ್ರಮವನ್ನೂ ಹೇಳಿರುವೆನು.

೧೩೨. ಶುಕ್ರಾಚಾರ್ಯನೂ, ಬೃಹಸ್ಪತಿಯೂ ರಾಜನೀತಿರಾಜತಂತ್ರಗಳನ್ನು ಮಾಡಿರುವರು. ಹೆಚ್ಚಿನ ವಿಶೇಷಗಳನ್ನು ಅಲ್ಲಿ ನೋಡಿ ತಿಳಿದುಕೊಳ್ಳಬೇಕು.

೧೩೩. ಈರೀತಿಯಾಗಿ ರಾಜನು ರಾಜನೀತಿಯಲ್ಲಿನ ವಿಶೇಷಗಳನ್ನು ತಿಳಿದು, ಅದರಂತೆ ನಡೆದರೆ ಅವನಿಗೆ ಅಪಜಯವೆಂಬುದಿಲ್ಲ, ಶ್ರೇಯೋಭಿವೃದ್ಧಿಯೇ ಆಗುವುದು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತೇಳನೆಯ
ಅಧ್ಯಾಯವು ಮುಗಿದುದು

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇऽಷ್ಟಾಶೀತಿತಮೋऽಧ್ಯಾಯಃ ॥

॥ ಔರ್ವ ಉವಾಚ ॥

ಸದಾಚಾರೇಷು ರಾಜೇಂದ್ರ ವಿಶೇಷಾಞ್ಛೃಣು ಸಂಪ್ರತಿ ।
ಯಾನವಶ್ಯಂ ನೃಪಃ ಕುರ್ಯಾತ್ತಾನ್ಮತ್ತಃ ಸಕಲಾಞ್ಛೃಣು ॥ ೧ ॥

ಸಾಧವಃ ಕ್ಷೀಣದೋಷಾಶ್ಚ ಸಚ್ಛಬ್ದಃ ಸಾಧುವಾಚಕಃ ।
ತೇಷಾಮಾಚರಣಂ ಯತ್ತತ್ಸದಾಚಾರಃ ಸ ಉಚ್ಯತೇ ॥ ೨ ॥

ಆಗಮೇಷು ಪುರಾಣೇಷು ಸಂಹಿತಾಸು ಯಥೋದಿತಾ ।
ಸಮುದ್ದಿಷ್ಟಸದಾಚಾರಾನ್ಗೃಹ್ಣೀಯಾತ್ತಾನ್ಗೃಹಸ್ಥವತ್ ॥ ೩ ॥

ಎಂಭತ್ತೆಂಟನೆಯ ಅಧ್ಯಾಯ

೧. ಔರ್ವಮುನಿಯು ಹೇಳಿದನು-ಎಲೈ ರಾಜೇಂದ್ರನೇ, ಸತ್ಪುರುಷರು ಆಚರಿಸಬೇಕಾದ ಸದಾಚಾರಗಳನ್ನೂ, ಧರ್ಮಗಳನ್ನೂ, ಅವುಗಳ ವಿಶೇಷ ವಿಷಯಗಳನ್ನೂ ಮತ್ತು ರಾಜನು ಅವಶ್ಯವಾಗಿ ಆಚರಿಸಬೇಕಾದುದನ್ನೂ ಹೇಳುವೆನು, ಕೇಳು.

೨. ಯಾವ ದೋಷವೂ ಇಲ್ಲದ ಮನುಷ್ಯರಿಗೆ ಸಾಧುಗಳೆಂದು ಹೆಸರು. ಸತ್ ಎಂಬ ಶಬ್ದಕ್ಕೆ ಸಾಧುಗಳೆಂದು ಅರ್ಥವು. ಆದಕಾರಣ ಸದಾಚಾರವೆಂದರೆ ಸಾಧುಗಳು ಅಥವಾ ಸತ್ಪುರುಷರು ಆಚರಿಸುವ ಆಚಾರವು.

೩. ಶಾಸ್ತ್ರ, ಪುರಾಣ, ಸಂಹಿತೆ ಇವುಗಳಲ್ಲಿ ಯಾವಯಾವ ಸದಾಚಾರಗಳನ್ನು ಹೇಳಿರುವುದೋ, ಅದೆಲ್ಲವನ್ನೂ ಗೃಹಸ್ಥನಾದವನು ಅವಶ್ಯವಾಗಿ ಆಚರಿಸಬೇಕು.

ಋಷೀನ್ಯಜೇದ್ವೇದಪಾಠೈರ್ದೇವಾನ್ ಹೋಮೈಃ ಪ್ರಪೂಜಯೇತ್ ।
ಶ್ರಾದ್ಧೈಃ ಪಿತೄಂಸ್ತರ್ಪಯೇತ್ತು ಭೂತಾನಿ ಬಲಿಭಿಸ್ತಥಾ ॥ ೪ ॥

ಮೈತ್ರಂ ಪ್ರಧಾವನಂ ಸ್ನಾನಂ ದಂತಧಾವನಮುಜ್ಜನಂ ।
ಸರ್ವಂ ಗೃಹಸ್ಥವತ್ಕುರ್ಯಾನ್ನಿಷೇಕಾದ್ಯಂ ವಿಧಿಂ ತಥಾ ॥ ೫ ॥

೪. ವೇದಾಧ್ಯಯನದಿಂದ ಋಷಿಗಳನ್ನು ಸಂತೋಷಪಡಿಸಿ, ಋಷಿಋಣವನ್ನು ತೀರಿಸಬೇಕು. ದೇವತೆಗಳನ್ನು ಹೋಮಗಳಿಂದ ತೃಪ್ತಿಪಡಿಸಿ, ದೇವಋಣವನ್ನು ತೀರಿಸಬೇಕು. ಶ್ರಾದ್ಧಗಳಿಂದ ಪಿತೃಗಳನ್ನು ಸಂತೋಷಗೊಳಿಸಿ, ಪಿತೃಋಣವನ್ನು ತೀರಿಸಬೇಕು: ಬಲಿಗಳಿಂದ ಭೂತಗಳನ್ನು ತೃಪ್ತಿಪಡಿಸಬೇಕು.

ಋಣಗಳೆಂದರೇನು? ಇವು ಮನುಷ್ಯರಿಗೆ ಹೇಗೆ ಬರುವುವು? ಇವು ತೀರುವ ಕ್ರಮವೆಂತು? ಎಂಬ ವಿಚಾರವು ಯಜುರ್ವೇದದಲ್ಲಿ ಹೀಗೆ ಹೇಳಿರುವುದು. (ತೈ. ಸಂ. ಕಾಂಡ. ೬. ಅಧ್ಯಾಯ ೩.) "ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯ ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಹ್ಮಚಾರಿವಾಸೀ" ಬ್ರಾಹ್ಮಣನಾದವನು (ಇಲ್ಲಿ ಈ ವಿಚಾರವು ಬ್ರಹ್ಮ ಕ್ಷತ್ರಿಯ ವೈಶ್ಯರೆಂಬ ಮೂರು ಜಾತಿಯ ದ್ವಿಜರಿಗೂ ಅನ್ವಯಿಸುವುದು) ಹುಟ್ಟುವಾಗಲೇ ಮೂರುವಿಧವಾದ ಋಣ(ಸಾಲ)ಗಳನ್ನು ಹೊತ್ತು ಕೊಂಡೇಹುಟ್ಟುವನು ಎಂದರೆ ಹುಟ್ಟಿದ ಪ್ರತಿಯೊಬ್ಬ ದ್ವಿಜನಿಗೂ ಮೂರು ಋಣಗಳನ್ನು ತೀರಿಸಬೇಕಾದ ಕರ್ತವ್ಯವಿದ್ದೇ ಇರುವುದು. ಆ ಋಣಗಳು, ಋಷಿಋಣ, ದೇವಋಣ, ಪಿತೃಋಣ ಎಂದು ಮೂರು ವಿಧವಾಗಿರುವುವು. ಬ್ರಹ್ಮಚರ್ಯಾಶ್ರಮದಲ್ಲಿದ್ದು ವೇದಾಧ್ಯಯನ ಮಾಡುವುದರಿಂದ ಋಷಿಋಣವು ತೀರುವುದು. ಯಜ್ಞ ಯಾಗಾದಿಗಳಿಂದ ದೇವತೆಗಳನ್ನು ಆರಾಧಿಸುವುದರಿಂದ ದೇವಋಣವು ತೀರುವುದು. ಧರ್ಮಪತ್ನಿಯಲ್ಲಿ ಸಂತಾನೋತ್ಪತ್ತಿಯಿಂದ ಪಿತೃಋಣವು ತೀರುವುದು. ಆದುದರಿಂದ ಯಾವ ಮನುಷ್ಯನು ವೇದಾಧ್ಯಯನ ಮಾಡಿ, ಯಜ್ಞಾದಿ ದೇವತಾಪೂಜೆಗಳನ್ನು ಆಚರಿಸಿ ಪುತ್ರವಂತನಾಗುವನೋ ಅವನು ಈ ಮೂರು ಋಣಗಳಿಂದ ವಿಮುಕ್ತನಾಗಿ ಸ್ವರ್ಗವನ್ನು ಪಡೆಯುವನು.

೫. ಗೃಹಸ್ಥನಾದವನು ಎಲ್ಲರಲ್ಲಿಯೂ ಸೌಮ್ಯಭಾವದಿಂದ ವರ್ತಿಸಬೇಕು. ದಂತಧಾವನ, ಸ್ನಾನ, ಅಭ್ಯಂಜನ ಮೊದಲಾದ ಶರೀರಶುದ್ಧಿಗಳಿಂದ ಯಾವಾಗಲೂ

ಷಟ್ಕರ್ಮಸು ನಿಯುಂಜೀತ ರಾಜಾ ವಿಪ್ರಾ೯ ಸಮಂತತಃ ।
ತಥೈವ ಕ್ಷತ್ರಿಯಾದೀಂಶ್ಚ ಸ್ವೇ ಸ್ವೇ ಕರ್ಮಣಿ ಯೋಜಯೇತ್ ॥ ೬ ॥

ಯಃ ಸ್ವಧರ್ಮಂ ಪರಿತ್ಯಜ್ಯ ಪರಧರ್ಮಂ ಸಮಾಚರೇತ್ ।
ತಂ ಸ ತೇನ ನೃಪೋ ದಂಡಂ ಪುನಸ್ತಸ್ಮಿನ್ನಿಯೋಜಯೇತ್ ॥ ೭ ॥

ಸಾಂವತ್ಸರೇಷು ಕೃತ್ಯೇಷು ವಿಶಿಷ್ಯೈತಾ೯ ಸಮಾಚರೇತ್ ।
ಅವಶ್ಯಂ ಪಾರ್ಥಿವೋ ರಾಜ್ಞ ತಾನ್ವಿಶೇಷಾಞ್ಛೃಣುಷ್ವ ಮೇ ॥ ೮ ॥

ನಿರ್ಮಲನಾಗಿರಬೇಕು. ನಿಷೇಕವಿಚಾರದಲ್ಲಿಯೂ ಇತರ ನಿಯಮಗಳಲ್ಲಿಯೂ ಗೃಹಸ್ಥನಿಗೆ ಹೇಳಿರುವ ನಿಯಮಗಳಂತೆಯೇ ವರ್ತಿಸಬೇಕು.

೬. ರಾಜನಾದವನು ಬ್ರಾಹ್ಮಣರನ್ನು ಷಟ್ಕರ್ಮಗಳಲ್ಲಿ ಎಂದರೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಆರು ಕರ್ಮಗಳಲ್ಲಿ ನಿರತರಾಗಿರುವಂತೆ ನಿಯಮಿಸಬೇಕು. ಕ್ಷತ್ರಿಯರೇ ಮೊದಲಾದವರನ್ನು ಅವರವರ ವಿಧ್ಯುಕ್ತಕರ್ಮಗಳಲ್ಲಿ ನಿಯೋಗಿಸಬೇಕು.

ಇಲ್ಲಿ ಯಜನವೆಂದರೆ ತಾನು ಯಜ್ಞ (ಅಥವಾ ದೇವತಾಪೂಜೆ ಮೊದಲಾದವು) ಮಾಡುವುದು, ಯಾಜನವೆಂದರೆ ಇತರರಿಗೆ ಪುರೋಹಿತನಾಗಿ ಯಜ್ಞವನ್ನು ಮಾಡಿಸುವುದು, ಅಧ್ಯಯನವೆಂದರೆ ವೇದಶಾಸ್ತ್ರಾದಿಗಳ ಅಭ್ಯಾಸವು, ಅಧ್ಯಾಪನವೆಂದರೆ ವೇದಶಾಸ್ತ್ರಾದಿಗಳನ್ನು ಇತರರಿಗೆ ಉಪದೇಶಿಸುವುದು, ದಾನವೆಂದರೆ ಸತ್ಕರ್ಮಗಳಲ್ಲಿ ಈಶ್ವರ ಪ್ರೀತಿಗಾಗಿ ದ್ರವ್ಯ ಮುಂತಾದ ವಸ್ತುಗಳನ್ನು ಕೊಡುವುದು, ಪ್ರತಿಗ್ರಹವೆಂದರೆ ಇತರರು ಕೊಡುವಂತಹ ದಾನವಸ್ತುಗಳನ್ನು ಸ್ವೀಕರಿಸುವುದು. ಬ್ರಾಹ್ಮಣರು ಈ ಆರು ಕರ್ಮಗಳನ್ನು ಮಾಡಬೇಕು. ಕ್ಷತ್ರಿಯವೈಶ್ಯರು ಯಜನ, ಅಧ್ಯಯನ, ದಾನ ಎಂಬ ಮೂರು ಕರ್ಮಗಳನ್ನು ಮಾತ್ರ ಮಾಡಬೇಕು. ಉಳಿದ ಯಾಜನ, ಅಧ್ಯಾಪನ, ಪ್ರತಿಗ್ರಹಗಳಲ್ಲಿ ಅವರಿಗೆ ಅಧಿಕಾರವಿಲ್ಲ.

೭. ಯಾವನು ತನ್ನ ಧರ್ಮವನ್ನು ಬಿಟ್ಟು ಪರಧರ್ಮವನ್ನು ಆಚರಿಸುವನೋ ಅವನನ್ನು ಶಿಕ್ಷಿಸಿ, ಪುನಃ ತನ್ನ ಕರ್ಮದಲ್ಲಾಸಕ್ತನಾಗುವಂತೆ ಮಾಡಬೇಕು. ಇದು ರಾಜನ ಕರ್ತವ್ಯವು.

೮. ವಾರ್ಷಿಕ ಕರ್ಮಗಳಲ್ಲಿ ಎಂದರೆ ವರ್ಷಕ್ಕೊಂದುಸಲ ಮಾಡುವ ಕರ್ಮಗಳಲ್ಲಿ ಮುಖ್ಯವಾಗಿ ಈ ವಿಶೇಷಗಳನ್ನು ರಾಜನು ಆಚರಿಸಬೇಕು.

ಶರತ್ಕಾಲೇ ಮಹಾಷ್ಟಮ್ಯಾಂ ದುರ್ಗಾಯಾಃ ಪರಿಪೂಜನಂ ।
ನೀರಾಜನಂ ದಶಮ್ಯಾಂ ತು ಕುರ್ಯಾದ್ವೈ ಬಲವೃದ್ಧಯೇ ॥ ೯ ॥

ಪೌಷೇ ಮಾಸಿ ತೃತೀಯಾಯಾಂ ಕುರ್ಯಾತ್ಪುಷ್ಯಾಭಿಷೇಚನಂ ।
ಪೂಜಯಿತ್ವಾ ಶ್ರಿಯಂ ದೇವೀಂ ಶ್ರೀಪಂಚಮ್ಯಾಂ ನೃಪಶ್ಚರೇತ್ ॥ ೧೦ ॥

ಶ್ರೀಯಜ್ಞಂ ಧನಧಾನ್ಯಸ್ಯ ವೃದ್ಧಯೇ ನೃಪಸತ್ತಮ ।
ಜ್ಯೈಷ್ಠೇ ದಶಹರಾಯಾಂ ತು ವಿಷ್ಣೋರಿಷ್ಟಿಂ ತಥಾಚರೇತ್ ॥ ೧೧ ॥

ರವೌ ಹರಿಸ್ಥೇ ದ್ವಾದಶ್ಯಾಂ ಶಕ್ರಪೂಜಾಂ ತಥಾಚರೇತ್ ।
ವಿಶಿಷ್ಯೈತಾಂಸ್ತು ನೃಪತಿಃ ಕುರ್ಯಾದ್ಯಜ್ಞಾನ್ ಬಹುವ್ಯಯೈಃ ॥ ೧೨ ॥

ವಿಭಿಃ ಕೃತೈರ್ಬಲಂ ರಾಜ್ಯಂ ಕೋಶಶ್ಚಾಪಿ ವಿವರ್ಧತೇ ।
ಅಕೃತೇಷ್ವೇಷು ಯಜ್ಞೇಷು ದುರ್ಭಿಕ್ಷಂ ಮರಣಂ ತಥಾ ॥ ೧೩ ॥

---

೯. ಶರತ್ಕಾಲದ ದುರ್ಗಾಷ್ಟಮಿ ಎಂದು ಹೇಳಲ್ಪಡುವ ಮಹಾಷ್ಟಮಿಯಲ್ಲಿ (ಆಶ್ವಯುಜ. ಶು. ೮) ದುರ್ಗೆಯನ್ನು ಪೂಜಿಸಬೇಕು. ದಶಮಿಯಲ್ಲಿ ಬಲನೀರಾಜನ ವಿಧಿಯನ್ನು ಮಾಡಬೇಕು. ಹಾಗೆ ಮಾಡಿದರೆ ಬಲವೃದ್ಧಿಯು ಆಗುವುದು.

೧೦. ಪುಷ್ಯಮಾಸದ ತದಿಗೆಯಲ್ಲಿ ದೇವಿಗೆ ಪುಷ್ಯಾಭಿಷೇಕ ಮಾಡಿ ಪೂಜಿಸ ಬೇಕು. ಶ್ರೀ ಪಂಚಮಿಯಲ್ಲಿ ಲಕ್ಷ್ಮಿಯನ್ನು ಪೂಜಿಸಬೇಕು.

೧೧. ಜ್ಯೇಷ್ಠಶುಕ್ಲದಶಮಿಯಲ್ಲಿ ಶ್ರೀಯಜ್ಞವನ್ನೂ, ವಿಷ್ಣುಯಜ್ಞವನ್ನೂ ಮಾಡಬೇಕು. ಇದರಿಂದ ಧನಧಾನ್ಯಗಳ ಅಭಿವೃದ್ಧಿಯಾಗುವುದು.

೧೨. ಸೂರ್ಯನು ಸಿಂಹರಾಶಿಯಲ್ಲಿರುವಾಗ ದ್ವಾದಶಿಯಲ್ಲಿ ಇಂದ್ರಪೂಜೆ ಯನ್ನು ಮಾಡಬೇಕು. ಈ ಮೇಲೆಹೇಳಿದ ಕರ್ಮಗಳನ್ನು ರಾಜನು ವಿಶೇಷವಾದ ವಿಜೃಂಭಣೆಯಿಂದ ಮಾಡಬೇಕು.

೧೩. ಈ ಕರ್ಮಗಳನ್ನು ಮಾಡಿದರೆ ರಾಜ್ಯವು ಬಲವಾಗುವುದು. ಕೋಶವು ಬೆಳೆಯುವುದು. ಈ ಕರ್ಮಗಳನ್ನು ಮಾಡದಿದ್ದರೆ ದೇಶದಲ್ಲಿ ಬರಗಾಲ, ಅಕಾಲ ಮರಣ ಮೊಲಾದ ಎಲ್ಲಾ ಈತಿಬಾಧೆಗಳೂ ಪ್ರಾಪ್ತವಾಗುವವು. ಆದಕಾರಣ ಮುಖ್ಯವಾಗಿ ಇವುಗಳನ್ನು ಮಾಡಬೇಕು.

ಜಾಯಂತೇ ಚೇತಯಃ ಸರ್ವಾ ವಿಶಿಷ್ಯೈತಾಂಸ್ತತಶ್ಚರೇತ್ ।
ಶರತ್ಕಾಲೇ ಮಹಾಷ್ಟಮ್ಯಾಂ ದುರ್ಗಾಯಾಃ ಪೂಜನೇ ವಿಧಿಃ ॥ ೧೪ ॥

ಪುರಾ ಪ್ರೋಕ್ತಸ್ತು ವಿಧಿನಾ ತೇನ ಕಾರ್ಯಂ ತು ಪೂಜನಂ ।
ವಿಧಿಂ ನೀರಾಜನಸ್ಯ ತ್ವಂ ಶೃಣು ಪಾರ್ಥಿವಸತ್ತಮ ॥ ೧೫ ॥

ಕೈತೇನ ಯೇನ ಚಾಶ್ವಾನಾಂ ಗಜಾನಾಮಪಿ ಚೈಧನಂ ।
ಆಶ್ವಿನೇ ಶುಕ್ಲಪಕ್ಷೇ ತು ತೃತೀಯಾ ಸ್ವಾತಿಯೋಗಿನೀ ॥ ೧೬ ॥

ಐಶಾನ್ಯಾಂ ಸ್ವಪುರಸ್ಯೈವ ಗೃಹ್ಣೀಯಾತ್ಥಾನಮುತ್ತಮಂ ।
ನೀರಾಜನಂ ತತಃ ಕುರ್ಯಾತ್ಸಂಪ್ರಾಪ್ತೇ ದಿವಸೇಽಷ್ಟಮೇ ॥ ೧೭ ॥

ನೀರಾಜನಸ್ಯ ಕಾಲಸ್ತು ಪೂರ್ವಮುಕ್ತೋ ಮಯಾ ತವ ।
ವಿಧಾನಮಾತ್ರಂ ಶೃಣು ಮೇ ಕೃತಕೃತ್ಯೋ ಭವಿಷ್ಯಸಿ ॥ ೧೮ ॥

---

೧೪. ಶರತ್ಕಾಲದ ಮಹಾಷ್ಟಮಿಯಲ್ಲಿ ದುರ್ಗೆಯನ್ನು ಪೂಜಿಸುವ ವಿಧಿಯನ್ನು ಹಿಂದೆಯೇ ಹೇಳಿರುವುದು. ಆ ಕ್ರಮದಿಂದಲೇ ದುರ್ಗಾದೇವಿಯನ್ನು ಪೂಜಿಸಬೇಕು.

೧೫. ಎಲೈ ರಾಜೇಂದ್ರನೇ! ಅದೇ ದಶಮಿಯಲ್ಲಿ ಮಾಡಬೇಕಾದ ನೀರಾಜನ ವಿಧಿಯನ್ನು ಹೇಳುವೆನು, ಕೇಳು. ಆ ನೀರಾಜನವನ್ನು ಮಾಡಿದರೆ ಆನೆಕುದುರೆ ಗಳಿಗೆ ಅಭಿವೃದ್ಧಿಯಾಗುವುದು.

೧೬. ಆಶ್ವಯುಜ ಶುಕ್ಲಪಕ್ಷದಲ್ಲಿ ಸ್ವಾತೀನಕ್ಷತ್ರವಿರುವ ತದಿಗೆಯಲ್ಲಿ ತನ್ನ ರಾಜಧಾನಿಯ ಈಶಾನ್ಯದಿಕ್ಕಿನಲ್ಲಿ ಒಂದು ಉತ್ತಮಸ್ಥಾನವನ್ನು ಕಲ್ಪಿಸಬೇಕು.

೧೭-೧೮. ಬಳಿಕ ಅಷ್ಟಮಿಯು ಬರಲು, ಅಂದು ಪೂಜಾದಿಗಳನ್ನು ಮಾಡಿ ನೀರಾಜನವನ್ನು ಮಾಡಬೇಕು. ಅದರ ಕಾಲವನ್ನು ಹಿಂದೆಯೇ ಹೇಳಿರುವೆನು. ಈಗ ವಿಧಿಯನ್ನು ಮಾತ್ರ ಹೇಳುವೆನು, ಅದನ್ನು ಕೇಳು. ಅದರಿಂದ ಕೃತಕೃತ್ಯ ನಾಗುವೆ.

ಏಕಂ ಹಯಂ ಮಹಾಸತ್ತ್ವಂ ಸುಮನೋಹರಮೇವ ಚ ।
ಪೂಜಯೇತ್ಸಪ್ತದಿವಸಾನ್ಗಂಧಪುಷ್ಪಾಂಶುಕಾದಿಭಿಃ ॥ ೧೯ ॥

ತೃತೀಯಾಯಾಂ ಪೂಜಯಿತ್ವಾ ಆನಯೇದ್ಯಜ್ಞಮಂಟಪಂ ।
ಚೇಷ್ಟಾಂ ನಿರೂಪಯಂಸ್ತಸ್ಯ ಜಾನೀಯಾತ್ತು ಶುಭಾಶುಭಂ ॥ ೨೦ ॥

ಪರರಾಷ್ಟ್ರಾವಮರ್ದಃ ಸ್ಯಾದಶ್ವೋ ಯದಿ ಪಲಾಯತೇ ।
ಮ್ರಿಯತೇ ರಾಜಪುತ್ರಸ್ತು ಯದಿ ಚಾಶ್ರೂಣಿ ಮುಂಚತಿ ॥ ೨೧ ॥

ನೀಯಮಾನೋ ನ ಗಚ್ಛೇತ್ತು ಮಹಿಷೀಮರಣಂ ತತಃ ।
ತಥೈವ ಮುಖನಾಸಾಕ್ಷಿಶಬ್ದಂ ಕುರ್ಯಾದ್ಭಯಂ ಯದಿ ॥ ೨೨ ॥

ಯತ್ಕಾಷ್ಠಾಭಿಮುಖಃ ಕುರ್ಯಾತ್ತತ್ಕಾಷ್ಠಾಯಾಂ ಜಯೇದ್ರಿಪೂ ।
ಉತ್ಕ್ಷಿಪ್ಯ ದಕ್ಷಿಣಾಗ್ರಂ ತು ಪದಮಶ್ವೋ ಭವೇತ್ಪರಃ ॥ ೨೩ ॥

೧೯-೨೦. ತುಂಬಾ ಬಲಿಷ್ಠವೂ, ಲಕ್ಷಣವುಳ್ಳದ್ದೂ, ಮನೋಹರವೂ ಆದ ಒಂದು ಕುದುರೆಯನ್ನು ತಂದಿಗೆಯಿಂದ ಏಳುದಿವಸಗಳವರೆಗೆ ಗಂಧ, ಪುಷ್ಪ, ವಸ್ತ್ರಗಳಿಂದ ಪೂಜಿಸಿ ಕುದುರೆಯನ್ನು ಕೊನೆಯದಿನ ಯಜ್ಞಮಂಟಪಕ್ಕೆ ತರಬೇಕು. ಆಗ ಅವರ ಚೇಷ್ಟೆಗಳಿಂದ ಮುಂದಾಗುವ ಶುಭ ಮತ್ತು ಅಶುಭಗಳನ್ನು ಹೀಗೆ ತಿಳಿಯಬೇಕು.

೨೧-೨೩. ಆಗ ಆ ಕುದುರೆಯು ಅಲ್ಲಿಂದ ಓಡಿದರೆ ಶತ್ರು ಸೈನ್ಯವು ರಾಜ್ಯವನ್ನು ಮುತ್ತುವುದು. ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಿದ್ದರೆ ರಾಜಕುಮಾರನು ಮೃತನಾಗುವನು. ಬಲಾತ್ಕಾರವಾಗಿ ಎಳೆದುಕೊಂಡು ಬರುತ್ತಿದ್ದರೂ, ಆ ಕುದುರೆಯು ಬರದಿದ್ದರೆ ರಾಣಿಯ ಮರಣವಾಗುವುದು. ಮತ್ತು ಮುಖ, ಮೂಗು ಇವುಗಳಿಂದ ಶಬ್ದಮಾಡಿದರೆ ಶತ್ರುಭಯವು ಸಂಭವಿಸುವುದು. ಧೈರ್ಯದಿಂದ ಕುದುರೆಯು ಯಾವ ದಿಕ್ಕಿಗೆದುರಾಗಿ ನಿಲ್ಲುವುದೋ ಆ ದಿಕ್ಕಿನ ಶತ್ರುರಾಜರನ್ನು ಯುದ್ಧದಲ್ಲಿ ಜಯಿಸಬಹುದು. ರಾಜನೆದುರಿನಲ್ಲಿ ಬಲಗಾಲನ್ನು ಎತ್ತಿ ಕುದುರೆಯು ನಿಂತರೆ ಆಗ ರಾಜನು ಎಲ್ಲಾ ಶತ್ರುಗಳನ್ನೂ ಜಯಿಸುವನು.

ತದಾ ಯದಿ ಸಮುಸ್ತಾಂಶ್ಚ ನೃಪತಿರ್ವಿಜಯೇದ್ರಿಪೂ ।
ಪ್ರಾತರ್ನೀರಾಜನಂ ಕುರ್ಯಾದ್ದಶಮ್ಯಾಂ ನೃಪಸತ್ತಮ ॥ ೨೪ ॥

ತದಪ್ರಾಪ್ತೌ ಚ ದ್ವಾದಶ್ಯಾಂ ತಸ್ಯಾಮೇವ ಸಮಾಚರೇತ್ ।
ಕಾರ್ತಿಕೇ ಪಂಚದಶ್ಯಾಂ ವಾ ತತ್ರಾಭಾವೇ ತು ಪಾರ್ಥಿವ ॥ ೨೫ ॥

ಐಶಾನ್ಯಾಂ ಸ್ವಪುರಸ್ಯೋಚ್ಚೈರ್ಹಸ್ತಮಾನೇನ ಷೋಡಶ ।
ದಶಹಸ್ತಂ ತು ವಿಪುಲಂ ಕುರ್ಯಾದ್ವೈ ತತ್ರ ತೋರಣಂ ॥ ೨೬ ॥

ದ್ವಾತ್ರಿಂಶದ್ಧಸ್ತಮಾತ್ರಂ ತು ಹಸ್ತಷೋಡಶವಿಸ್ತೃತಂ ।
ಯಜ್ಞಾರ್ಥಂ ಮಂಡಪಂ ಕುರ್ಯಾನ್ಮಧ್ಯೇ ವೇದಿಂ ವಿನಿರ್ದಿಶೇತ್ ॥

ವೇದ್ಯಾಶ್ಚೋತ್ತರತಶ್ಚಾಶ್ವವೇದಿಂ ಕುರ್ಯಾದನುತ್ತಮಾಂ ।
ಯತ್ರ ಸಂಸ್ಥಾಪ್ಯ ಚಾಶ್ವಶ್ಚ ಪೂಜಿತವ್ಯಃ ಪುರೋಹಿತೈಃ ॥ ೨೮ ॥

ಸಜ್ಞೋದುಂಬರಶಾಖಾನಾಮರ್ಜುನಸ್ಯಾಥವಾ ನೃಪ ।
ಮತ್ಸ್ಯಶಂಖಾಂಕಿತೈಶ್ಚಕ್ರೈರ್ಧ್ವಜೈಶ್ಚಾನ್ಯೈರಭಿಭೂಷಯೇತ್ ॥ ೨೯ ॥

೨೪-೨೫. ಎಲೈ ರಾಜೇಂದ್ರನೇ ದಶಮಿಯಲ್ಲಿ ಪ್ರಾತಃಕಾಲ ನೀರಾಜನವನ್ನು ಮಾಡಬೇಕು. ಅಂದು ಸಾಧ್ಯವಾಗದಿದ್ದರೆ ಅದೇ ಶುಕ್ಲದ್ವಾದಶಿಯಲ್ಲಿ ಮಾಡಬಹುದು. ಅಥವಾ ಕಾರ್ತಿಕಶುಕ್ಲ ಪೂರ್ಣಿಮೆಯಲ್ಲಾದರೂ ನೀರಾಜನವನ್ನು ಮಾಡಬಹುದು.

೨೬. ತನ್ನ ರಾಜಧಾನಿಯ ಈಶಾನ್ಯದಿಕ್ಕಿನಲ್ಲಿ ಹದಿನಾರುಹಸ್ತಪ್ರಮಾಣವುಳ್ಳ ಒಂದು ಮಂಟಪವನ್ನು ಹತ್ತು ಹಸ್ತಗಳಷ್ಟು ಅಗಲವಾಗಿ ಮಾಡಬೇಕು.

೨೭-೨೮. ಮೂವತ್ತೆರಡು ಹಸ್ತಪ್ರಮಾಣ ಉದ್ದವಾಗಿಯೂ, ಹದಿನಾರು ಹಸ್ತಪ್ರಮಾಣ ಅಗಲವಾಗಿಯೂ ಇರುವ ಮಂಟಪವೊಂದನ್ನು ಪೂಜೆಗಾಗಿ ಮಾಡ ಬೇಕು. ಅದರ ಮಧ್ಯದಲ್ಲಿ ವೇದಿಯೊಂದನ್ನು ರಚಿಸಬೇಕು. ಆ ವೇದಿಯ ಉತ್ತರ ಭಾಗದಲ್ಲಿ ಅಶ್ವವೇದಿಯನ್ನು ದೃಢವಾಗಿ ಮಾಡಬೇಕು. ಆ ವೇದಿಯಲ್ಲಿಯೇ ಅಶ್ವ ವನ್ನು ಕಟ್ಟಿ ಅದನ್ನು ಪುರೋಹಿತರು ಪೂಜಿಸಬೇಕು.

೨೯. ಮತ್ತೀಮರ, ಅತ್ತೀಮರ, ಅಥವಾ ಅರ್ಜುನವೃಕ್ಷ ಇವುಗಳ ಕೊಂಬೆ ಗಳನ್ನು ತಂದು ಅವುಗಳಲ್ಲಿಮತ್ಸ್ಯ, ಶಂಖ, ಚಕ್ರ, ಧ್ವಜ ಇವುಗಳನ್ನು ಬರೆದು ಆ ಕೊಂಬೆಗಳಿಂದ ಯಜ್ಞಮಂಟಪವನ್ನಲಂಕರಿಸಬೇಕು. ಚಿನ್ನ, ರತ್ನ ಇವುಗಳಿಂದಲೂ ಅನೇಕಬಗೆಯ ಫಲಗಳಿಂದಲೂ ತೋರಣವನ್ನಲಂಕರಿಸಬೇಕು.

ತೋರಣಂ ಕನಕೈ ರತ್ನೈ ಸ್ತಥಾ ನಾನಾವಿಧೈಃ ಫಲೈಃ ।
ಭಲ್ಲಾತಕಂ ಶಾಲಿಪಿಷ್ಟಂ ಸಿದ್ಧಾರ್ಥಂ ಸೈಂಧವಸ್ಯ ತು ॥ ೩೦ ॥

ಕಂಠದೇಶೇ ನಿಬಧ್ನೀಯಾತ್ಪುಷ್ಟಿಶಾಂತ್ಯರ್ಥಮೇವ ಚ ।
ವೈಷ್ಣವಂ ಮಂಡಪಂ ಕೃತ್ವಾ ದಿಕ್ಪಾಲಾಂಶ್ಚ ನವಗ್ರಹಾನ್ ॥ ೩೧ ॥

ವಿಶ್ವೇ ದೇವಾಂಸ್ತು ಮಂತ್ರೇಣ ವಿಷ್ಣುಮುಖ್ಯಾನ್ಪ್ರಪೂಜಯೇತ್ ।
ಆಜ್ಯೈಸ್ತಿಲೈಶ್ಚ ಪುಷ್ಪೈಶ್ಚ ಮಿಶ್ರೀಕೃತ್ಯ ಪುರೋಹಿತಃ ॥ ೩೨ ॥

ರವೇಸ್ತು ವರುಣಸ್ಯೈವ ಪ್ರಜೇಶಸ್ಯ ತಥೈವ ಚ ।
ಪುರುಹೂತಸ್ಯ ವಿಷ್ಣೋಶ್ಚ ಹೋಮಂ ಸಪ್ತಾಹಮಾಚರೇತ್ ॥ ೩೩ ॥

ಏಕೈಕಸ್ಯ ಸಹಸ್ರಂ ವಾ ಅಷ್ಟೋತ್ತರಶತಂ ಚ ವಾ ।
ಕುರ್ಯಾತ್ತು ಪ್ರತ್ಯಹಂ ಹೋಮಂ ಚತುರ್ವರ್ಗಸ್ಯ ಸಿದ್ಧಯೇ ॥ ೩೪ ॥

ಸಮಿಧಶ್ಚಾಪಿ ಹೋತವ್ಯಾಃ ಪಾಲಾಶಾಃ ಖಾದಿರಾಸ್ತಥಾ ।
ಔದುಂಬರ್ಯಶ್ಚ ಕಾಶ್ಮರ್ಯಾ ಅಶ್ವತ್ಥಾಶ್ಚ ಪುರೋಧಸಾ ॥ ೩೫ ॥

---

೩೦. ಗೇರುಹಣ್ಣು, ಅಕ್ಕಿಹಿಟ್ಟು ಇವುಗಳನ್ನು ಕುಮರಿಯ ಕತ್ತಿನಲ್ಲಿ ಕಟ್ಟಬೇಕು. ಇದರಿಂದ ಸಿದ್ಧಿ, ಪುಷ್ಟಿ, ಶಾಂತಿ ಇವುಗಳು ಲಭಿಸುವವು.

೩೧. ವಿಷ್ಣುವನ್ನು ಪೂಜಿಸುವುದಕ್ಕಾಗಿ ಮತ್ತೊಂದು ಮಂಟಪವನ್ನು ಮಾಡಿ ಅದರಲ್ಲಿ ವಿಷ್ಣು, ದಿಕ್ಪಾಲಕರು, ನವಗ್ರಹಗಳು, ವಿಶ್ವೇದೇವತೆಗಳು ಇವರನ್ನು ಅವರವರ ಮಂತ್ರಗಳಿಂದಲೇ ಅರ್ಚಿಸಬೇಕು.

೩೨-೩೫. ತುಪ್ಪ, ಎಳ್ಳು, ಹೂವು, ಇವುಗಳನ್ನು ಮಿಶ್ರಮಾಡಿ ಅದರಿಂದ ಪುರೋಹಿತನು, ರವಿ ವರುಣ, ಬ್ರಹ್ಮ, ಇಂದ್ರ, ವಿಷ್ಣು, ಈ ದೇವತೆಗಳಿಗೆ ಹೋಮವನ್ನು ಏಳು ನದಿಗಳು ಮಾಡಬೇಕು. ಒಂದೊಂದು ದೇವತೆಗೂ ಒಂಮೊಂದುಸಾವಿರ ಅಥವಾ ನೂರೆಂಟು ಹೋಮಗಳನ್ನು ಪ್ರತಿನಿತ್ಯವೂ ಮಾಡಬೇಕು. ಹಾಗೆ ಮಾಡಿದರೆ ನಾಲ್ಕು ಪುರುಷಾರ್ಥಗಳು ಲಭಿಸುವವು. ಮುತ್ತುಗ, ಖದಿರ, (ಕಗ್ಗಲೀಮರ) ಅತ್ತಿ ಕಾಶ್ಮರ್ಯ (ಮೊರಟೀಮರ) ಅಶ್ವತ್ಥ ಇವುಗಳ ಸಮಿತ್ತುಗಳಿಂದ ಪುರೋಹಿತನು ಹೋಮಮಾಡಬೇಕು.

ಸೌವರ್ಣಾ ರಾಜತಾನ್ವಾಪಿ ಮಾರ್ತಿಕಾನ್ವಾ ಯಥೇಚ್ಛಯಾ ।
ಕುರ್ಯಾತ್ತು ಕಲಶಾನಷ್ಟೌ ಫಲಾನ್ಯುವರಯೋಜಿತಾ ॥ ೩೬ ॥

ಕ್ಷಿಪೇತ್ತೇಷು ಘಟೇಷ್ವೇವ ಸಮುಂಗಹರಿತಾಲಕಂ ।
ಚಂದನಂ ಚ ತಥಾ ಪಿಷ್ಟಂ ಪ್ರಿಯಂಗುಂ ಚ ಮನಃಶಿಲಾಂ ॥ ೩೭ ॥

ಅಂಜನಂ ಚ ಹರಿದ್ರಾಂ ಚ ಶ್ವೇತಾಂ ದಾಂತೀಂ ತಥೈವ ಚ ।
ಭಲ್ಲಾತಕಂ ಪೂರ್ಣಕಂದಂ ಸಹದೇವೀಂ ಶತಾವರೀಂ ॥ ೩೮ ॥

ವಚಾಂಸಿ ನಾಗಕುಸುಮಂ ಸೋಮರಾಜೀಂ ಸುಗುಪ್ತಿಕಾಂ ।
ತುಥ್ಥಂ ಚ ಕರವೀರಂ ಚ ತುಲಸೀದಲಮೇವ ಚ ॥ ೩೯ ॥

ಏತಾನಿ ನಿಕ್ಷಿಪೇನ್ಮಧ್ಯೇ ಕಲಶಾನಾಂ ಪುರೋಹಿತಃ ।
ಕನಕೈರಂಬುಜೈರ್ಯಜ್ಞದಾರುಭಿಃ ಸ್ರುಕ್‌ಸ್ರುವೌ ತಥಾ ॥ ೪೦ ॥

ಕರ್ತವ್ಯೇ ಶಾಂತಿಕಾಮೇನ ನೀರಾಜನವಿಧೌ ನೃಪ ।
ಏವಂ ಸಪ್ತಾಹಪರ್ಯಂತಂ ಪೂಜಾಭಿರ್ಹವನೈಸ್ತಥಾ ॥ ೪೧ ॥

೩೬-೩೯. ಚಿನ್ನ, ಬೆಳ್ಳಿ, ಅಥವಾ ಮಣ್ಣಿನಿಂದ ಎಂಟು ಕಲಶಗಳನ್ನು ಇಟ್ಟು ಅವುಗಳಮೇಲೆ ತೆಂಗಿನಕಾಯಿ, ಮಾವಿನೆಲೆ, ಇವುಗಳನ್ನಿಟ್ಟು ಪೂಜೆಗೆ ಇರಿಸಬೇಕು. ಆ ಕಲಶಗಳಲ್ಲಿ ಮಂಗಳದ್ರವ್ಯಗಳು, ಹರಿದಳ, ಚಂದನ, ಅರಿಶಿನ, ನವಣೆ, ಮಣಿಶಿಲೆ, ಕಾಡಿಗೆ, ಅರಿಶಿನ, ಬಿಳಿಯಕಂದಪುಷ್ಪ, ಗೇರುಪುಷ್ಪ, ಪೂರ್ಣಕಂದ, ಸಹದೇವೀ ಶತಾವರೀ, ವಚಾಗಂಧ, ನಾಗಸಂಪಿಗೇಹೂವು, ಸೋಮರಾಜ, ಸುಗುಪ್ತಿಕಾಪುಷ್ಪ, ಶುದ್ಧ, (ರಸಾಂಜನ) ಕರವೀರಪುಷ್ಪ (ಗನ್ನೇರಿಳೀ) ತುಲಸೀಪತ್ರ, ಇವುಗಳನ್ನು ಆ ಕಲಶಗಳ ಮಧ್ಯದಲ್ಲಿ ಹಾಕಿಪೂಜಿಸಬೇಕು.

೪೦. ಎಲೈ ರಾಜನೇ:— ಚಿನ್ನದಕಮಲಗಳಿಂದ ಆಕಲಶಗಳನ್ನರ್ಚಿಸಬೇಕು ಯಜ್ಞವೃಕ್ಷದಿಂದ (ಅಶ್ವತ್ಥ) ಸ್ರುಕ್ ಸ್ರುವ (ಹೋಮಮಾಡುವ ಸೌಟುಗಳು.) ಇವುಗಳನ್ನು ಮಾಡಬೇಕು. ಹಾಗಾದರೆ ನೀರಾಜನದಲ್ಲಿ ಶಾಂತಿಯು ಲಭಿಸುವುದು.

೪೧. ಹೀಗೆ ಹಿಂದೆಹೇಳಿದ ದೇವತೆಗಳನ್ನು ಏಳುದಿನಗಳಪರ್ಯಂತರ ರಾಜನು ಪೂಜೆಗಳಿಂದಲೂ ಹೋಮಗಳಿಂದಲೂ ಅರ್ಚಿಸಬೇಕು.

ಪೂರ್ವೋಕ್ತಾ ಪೂಜಯಿತ್ವಾ ತು ನೃಪಃ ಸಪ್ತಾಹಮಾಚರೇತ್ ।
ಯಾವನ್ನೀರಾಜನಂ ಕುರ್ಯಾತ್ತಾವದ್ರಾಜಾ ವಸೇದ್ಗೃಹೇ ॥ ೪೨ ॥

ರಾತ್ರೌ ನ ಯಜ್ಞಭೂಮೌ ತು ನಿವಸೇಚ್ಛಾಂತಿಮಿಚ್ಛುಕಃ ।
ನಾರೋಹಯೇತ್ತುರಂಗಂ ತು ಗಜಂ ವಾ ತತ್ರ ಪಾರ್ಥಿವಃ ॥ ೪೩ ॥

ಯಾವತ್ಸಪ್ತಾಹಪರ್ಯಂತಂ ತತ್ಸ್ಥಾನೇಽನ್ಯೋ ನ ವೈ ವ್ರಜೇತ್ ।
ಭಕ್ಷ್ಯೈರ್ನಾನಾವಿಧೈಶ್ಚೈವ ಮಧುಪಾಯಸಯಾವಕೈಃ ॥ ೪೪ ॥

ಮೋದಕೈರ್ವಾ ಬಲಿಂ ಕುರ್ಯಾದನ್ನವ್ಯಂಜನಸಂಯುತೈಃ ।
ಪೂರ್ವೋಕ್ತಾನಾಂ ತು ದೇವಾನಾಂ ಸಪ್ತಾಹಂ ಯಾವದುತ್ತಮಂ ॥ ೪೫ ॥

ಸಪ್ತಮೇಽಹ್ನಿ ತುರಂಗಂ ತು ಪೂಜಯೇತ್ತೋರಣಾಂತರೇ ।
ಸೂರ್ಯಪುತ್ರಾಂ ಮಹಾಬಾಹುಂ ದ್ವಿಭುಜಂ ಕವಚೋಜ್ಜ್ವಲಂ ॥ ೪೬ ॥

---

೪೨. ನೀರಾಜನಕರ್ಮವು ಮುಗಿಯುವವರೆಗೂ ರಾಜನು ಮನೆಯಲ್ಲಿಯೇ ಇರಬೇಕು. ಹೊರಗೆಲ್ಲಿಗೂ ಹೋಗಬಾರದು. ರಾಜ್ಯವು ಶಾಂತಿಸಮಾಧಾನಗಳಿಂದ ಇರಬೇಕೆಂದು ಬಯಸುವ ರಾಜನು ರಾತ್ರಿಕಾಲದಲ್ಲಿ ಯಜ್ಞಶಾಲೆಗೆ ಹೋಗಬಾರದು.

೪೩. ಆ ಏಳುದಿನಗಳಲ್ಲಿ ರಾಜನು ಕುದುರೆಯನ್ನಾಗಲೀ ಆನೆಯನ್ನಾಗಲೀ ಹತ್ತಕೂಡದು. ಆ ಯಜ್ಞಶಾಲೆಗೆ ಹೊರಗಿನವರನ್ನೂ ಬರಗೊಡಬಾರದು.

೪೪. ಅನೇಕಬಗೆಯಭಕ್ಷ್ಯಗಳಿಂದಲೂ ಜೇನುತುಪ್ಪ, ಪಾಯಸ, ಅಕ್ಕಿಯ ಹಿಟ್ಟಿನಿಂದ ಮಾಡಿದ ಕಡುಬು, ಮಹಾನ್ನ, ಮತ್ತು ಇತರ ವ್ಯಂಜನಾದಿಗಳಿಂದ ಬಲಿಪ್ರದಾನವನ್ನು ಮಾಡಬೇಕು.

೪೫-೪೬. ಹಿಂದೆ ಹೇಳಿದ ದೇವತೆಗಳನ್ನು ಏಳುದಿನಗಳವರೆಗೆ ಪೂಜಿಸಬೇಕು. ಏಳನೆಯದಿನ ಆ ಕುದುರೆಯನ್ನು ತೋರಣದ ಮಧ್ಯದಲ್ಲಿ ಪೂಜಿಸಬೇಕು. ಆ ಅಶ್ವಾಭಿಮಾನಿಪುರುಷನು ಸೂರ್ಯಪುತ್ರನು, ಪರಾಕ್ರಮಿಯು, ಎರಡು ಬಾಹುಗಳುಳ್ಳವನು, ಕವಚವನ್ನು ಧರಿಸಿರುವನು. ಬಿಳಿಯಬಟ್ಟೆಯನ್ನುಟ್ಟು ಶೋಭಿಸುತ್ತಲಿರುವನು. ಬಟ್ಟೆಯಿಂದ ತನ್ನಕೇಶಪಾಶಗಳನ್ನು ಮೇಲಕ್ಕೆತ್ತಿ ಕಟ್ಟಿರುವನು. ಎಡಗೈನಲ್ಲಿ ಬಾರ ಚಾವಟಿಯನ್ನು ಹಿಡಿದಿರುವನು, ಬಲಗೈನಲ್ಲಿ ಖಡ್ಗವನ್ನು ಹಿಡಿದಿರುವನು. ಬೆಳ್ಳಿಯ

ಜ್ವಲಂತಂ ಶುಕ್ಲವಸ್ತ್ರೇಣ ಕೇಶಾನುದ್ಗ್ರಥ್ಯ ವಾಸಸಾ ।
ಕಶಾಂ ವಾಮಕರೇ ಬಿಭ್ರದ್ದಕ್ಷಿಣಂ ತು ಕರಂ ಪುನಃ ॥ ೪೭ ॥

ಸಖಡ್ಗಂ ನ್ಯಸ್ಯ ವಾಲಾಯಾಂ ಸಿತಸೈಂಧವಸಂಯುತಂ ।
ಏವಂ ವಿಧಂ ತುರಂಗಂ ತು ಪ್ರತಿಮಾಯಾಂ ಘಟೇಽಪಿವಾ ॥ ೪೮ ॥

ಸೂರ್ಯಪೂಜಾವಿಧಾನೇನ ಪೂಜಯೇತ್ತೋರಣಾಂತರೇ ।
ಪೂಜಯಿತ್ವಾ ತುರಂಗಂ ತಂ ದ್ವಿರದಂ ವಾಪಿ ಭೂಮಿಪಃ ॥ ೪೯ ॥

ಅಹತಾಂಬರಸಂವೀತಂ ಸ್ರಕ್ಚಂದನಸಮನ್ವಿತಂ ।
ಸುವರ್ಣವಿದ್ಧನಿಸ್ತ್ರಿಂಶಂ ವಿಚಿತ್ರಂ ಕವಚಾದಿಭಿಃ ॥ ೫೦ ॥

ಯುಕ್ತಂ ತು ಹೋಮಕುಂಡಸ್ಯ ಚೈಶಾನ್ಯಾಮಶ್ವವೇದಿಕಾಂ ।
ಪೂರ್ವಂ ಕೃತಾಂ ನಯೇದಶ್ವಂ ಗಜಂ ವಾಪಿ ಪೃಥಕ್ಪೃಥಕ್ ॥ ೫೧ ॥

ನೀಯಮಾನೇ ಗಜೇ ವಾಶ್ವೇ ಪೂರ್ವೋಕ್ತಂ ತು ನಿಮಿತ್ತಕಂ ।
ಯತ್ನಾದ್ವೀಕ್ಷೇತ ನೃಪತಿಃ ಫಲಂ ಚೈವಾವಧಾರಯೇತ್ ॥ ೫೨ ॥

ಕುದುರೆಯಮೇಲೆ ಕುಳಿತಿರುವನು. ಇಂತಹ ಸ್ವರೂಪವುಳ್ಳ ಅಶ್ವಪುರುಷನನ್ನು ಪ್ರತಿಮೆ (ಮೂರ್ತಿ) ಯಲ್ಲಾಗಲೀ, ಕಲಶದಲ್ಲಿಯಾಗಲೀ, ಆ ತೋರಣಮಧ್ಯಪ್ರದೇಶದಲ್ಲಿಯಾಗಲಿ, ಸೂರ್ಯನನ್ನು ಪೂಜಿಸುವ ಕ್ರಮದಂತೆ ಪೂಜಿಸಬೇಕು.

೪೯-೫೧. ಹೀಗೆ ಕದುರೆಯನ್ನೂ ಮತ್ತೂ ಆನೆಯನ್ನೂ ಪೂಜಿಸಿ ರಾಜನು ಆ ಕುದುರೆ ಆನೆಗಳನ್ನು ನೂತನವಸ್ತ್ರಗಳಿಂದ ಅಲಂಕರಿಸಿ, ಹಾರ ಗಂಧಗಳನ್ನು ಅವುಗಳಿಗೆ ಅರ್ಪಿಸಿ, ಚಿನ್ನದ ಹಿಡಿಯುಳ್ಳ ಖಡ್ಗವನ್ನು ಅದರ ಒರೆಯೊಡನೆ ಆ ಕುದುರೆ (ಆನೆ)ಯಮೇಲಿರಿಸಿ ಕವಚಾದಿಗಳಿಂದ ವಿಚಿತ್ರವಾಗಿ ಅಲಂಕರಿಸಿ ಹೋಮ ಕುಂಡಕ್ಕೆ ಈಶಾನ್ಯದಲ್ಲಿರುವ ಅಶ್ವವೇದಿಕೆಗೆ ಆ ಕುದುರೆಯನ್ನು, ಆನೆಯನ್ನೂ ಬೇರೆ ಬೇರೆಯಾಗಿ ತರಬೇಕು.

೫೨. ಆಗ ಕುದುರೆಯನ್ನಾಗಲೀ ಆನೆಯನ್ನಾಗಲೀ ತರುವ ಕಾಲದಲ್ಲಿ ಅವು ಮಾಡುವ ಚೇಷ್ಟೆಗಳನ್ನು ರಾಜನು ನೋಡಿ, ಮುಂದೆ ಹೇಳಿದಂತೆ ಆ ಚೇಷ್ಟೆಗಳ ಶುಭಾಶುಭ ಫಲವನ್ನು ತಿಳಿದುಕೊಳ್ಳಬೇಕು.

ಹೋಮಕುಂಡಸ್ಯೋತ್ತರಸ್ಯ ವ್ಯೆಯಾಘ್ರೀ ಚರ್ಮಣಿ ಸ್ಥಿತಃ ।
ದೈವವಿದಾ ಚಾಶ್ವವಿದಾ ಸಹಿತೋ ವೀಕ್ಷ್ಯ ಸ್ಯೆಂಧವಂ ॥ ೫೩ ॥

ನೀತಾಯು ತುರಗಾಯಾಶು ಭಕ್ತಪಿಂಡೀಂ ಸುಗಂಧಿನೀಂ ।
ದದ್ಯಾತ್ಪುರೋಹಿತಸ್ತತ್ರ ಸಂಮಂತ್ರ್ಯ ಶಾಂತಿಮಂತ್ರಕೈಃ ॥ ೫೪ ॥

ಭಕ್ಷಣಾದ್ಯದಿ ಜಿಘ್ರೇತ್ತ ದಶ್ನೀಯಾದ್ವಾ ಹಯಃ ಸ ಚ ।
ತದಾ ಸ್ಯಾತ್ಸರ್ವಕಲ್ಯಾಣಂ ವಿಪರೀತಮತೋಽನ್ಯಥಾ ॥ ೫೫ ॥

ಶಾಖಾಮೌದುಂಬರೀಮಾಮ್ರೀಂ ಸಕುಶಾಂ ಚ ಘಟೋದಕೇ ।
ಆಪ್ಲಾವ್ಯಾಪ್ಲಾವ್ಯ ತುರುಗಾನ್ರಾಜಾ ಭೂಯಶ್ಚ ಸೈನಿಕಾ ॥ ೫೬ ॥

ರಥಾಂಶ್ಚ ಸಂಸ್ಪೃಶೇನ್ಮಂತ್ರೈಃ ಶಾಂತಿಕೈಃ ಪೌಷ್ಟಿಕೈಸ್ತಥಾ ।
ಸೇಚಯೇತ್ಸಹಿತೈರ್ವಿಪ್ರೈಶ್ಚ ತುರಂಗಂ ಪುರೋಹಿತಃ ॥ ೫೭ ॥

೫೩-೫೪. ಹೋಮಕುಂಡದ ಉತ್ತರಭಾಗದಲ್ಲಿ ಹುಲಿಯ ಚರ್ಮದಮೇಲೆ ಕುಳಿತು ರಾಜನು, ಜ್ಯೋಯಿಸರುಮತ್ತು ಅಶ್ವಶಾಸ್ತ್ರವನ್ನು ಬಲ್ಲ ಪಂಡಿತರು ಇವರೊಡನೆ ಆ ಕುದುರೆಯನ್ನು ನೋಡಬೇಕು. ಬಳಿಕ ವೇದಿಕೆಗೆಬಂದ ಆ ಕುದುರೆಗೆ ಪುರೋಹಿತನು ಒಳ್ಳೆಯವಾಸನೆಯುಳ್ಳ ಹರಿದ್ರಾನ್ನದ ಮುದ್ದೆಯನ್ನು ಶಾಂತಿಮಂತ್ರದಿಂದ ಅಭಿಮಂತ್ರಿಸಿ ಕೊಡಬೇಕು.

೫೫. ಆ ಅನ್ನದಮುದ್ದೆಯನ್ನು ಕುದುರೆಯು ತಿನ್ನುವ ಮೊದಲು ಮೂಸಿದರೂ, ಆಮೇಲೆ ಅದನ್ನು ತಿಂದರೂ ಸಹ ರಾಜನಿಗೆ ಸಕಲಕಲ್ಯಾಣಗಳೂ ಆಗುವುವು. ಇದಕ್ಕೆ ವಿಪರೀತವಾದರೆ ಎಂದರೆ ಮೂಸದೆಯೂ, ತಿನ್ನದೆಯೂ ಇದ್ದರೆ ಕೆಟ್ಟಫಲವಾಗುವುದು.

೫೬-೫೭. ಅತ್ತೀಚಿಗುರು, ಮಾವಿನಚಿಗುರು, ದರ್ಭೆ, ಇವುಗಳನ್ನು ಆ ಪೂಜಾಕಲಶಗಳಲ್ಲಿರುವ ಪವಿತ್ರಜಲಗಳಲ್ಲಿ ಅದ್ದಿ, ಅವುಗಳಿಂದ ಕುದುರೆಗಳನ್ನೂ, ಸೈನಿಕರನ್ನೂ, ರಥಗಳನ್ನೂ, ಸಹ ಪುರೋಹಿತನು ಬ್ರಾಹ್ಮಣರೊಡನೆ ಶಾಂತಿಕ ಮತ್ತೂ ಪೌಷ್ಟಿಕಮಂತ್ರಗಳು, ದಿಕ್ಪಾಲಕರ ಮಂತ್ರಗಳು ಮತ್ತು ನವಗ್ರಹಗಳ ಮಂತ್ರಗಳು,

ದಿಕ್ಪಾಲಾನಾಂ ಗ್ರಹಾಣಾಂ ಚ ಮುಂತ್ರೈಶ್ಚ ವೈಷ್ಣವೈಸ್ತಥಾ ।
ಬಹುಧಾ ಚಾಭಿಷಿಚ್ಯಾಥ ತತಃ ಸೌವರ್ಣದರ್ಪಣಂ ॥ ೫೮ ॥

ವೀಕ್ಷಯಿತ್ವಾ ನೃಪಂ ಚರ್ತ್ವಿಕ್ತತೋ ಮುಂತ್ರಿಣಮೇವ ಚ ।
ರಾಜಪುತ್ರಂ ತಥಾಮಾತ್ಯಾನನ್ಯಾನಪಿ ಚ ಸೈನಿಕಾ ॥ ೫೯ ॥

ಕಂಪಯೇ ದ್ವಿಜಶಾರ್ದೂಲಃ ಸರ್ವಾನೇವ ತು ದರ್ಶಯೇತ್ ।
ಚತುರಂಗಸ್ಯ ಸ್ವಸ್ಯಾಪಿ ಕೃತ್ವೈವಂ ಶಾಂತಿಪೌಷ್ಟಿಕೇ ॥ ೬೦ ॥

ಮೃಣ್ಮಯಂ ಶಾತ್ರವಂ ಕೃತ್ವಾ ಚಾಭಿಚಾರಿಕಮಂತ್ರಕೈಃ ।
ಹೃದಿ ಶೂಲೇನ ವಿದ್ಧ್ವಾ ತಂ ಶಿರಃ ಖಡ್ಗೇನ ಛೇದಯೇತ್ ॥ ೬೧ ॥

ಆಚಾರ್ಯಃ ಕವಿಕಾಃ ಪಶ್ಚಾದ್ದಿಶಿ ಮುಂತ್ರ್ಯ ಹಯಾಯ ವೈ ।
ಐಂದ್ರೈಃ ಪ್ರಭಾಕರೈರ್ಮಂತ್ರೈರ್ದದ್ಯಾದ್ವಲ್ಕ್ರೀ ಸ್ವಯಂ ಪುನಃ ॥ ೬೨ ॥

ತಮುನೇನ ತು ಮುಂತ್ರೇಣ ಸಮಾರುಹ್ಯ ನೃಪಸ್ತದಾ ।
ಗಚ್ಛೇದುತ್ತರಪೂರ್ವಾಂ ತು ದಿಶಂ ಸರ್ವಬಲೈರ್ಯುತಃ ॥ ೬೩ ॥

ವಿಷ್ಣುಮಂತ್ರಗಳು, ಇವುಗಳನ್ನು ಹೇಳುತ್ತಾ ಪ್ರೋಕ್ಷಿಸಿದ ಬಳಿಕ ರಾಜನು ಸುವರ್ಣಮಯವಾದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬನನ್ನು ನೋಡಿಕೊಳ್ಳಬೇಕು.

೫೯. ಬ್ರಾಹ್ಮಣೋತ್ತಮನಾದ ಪುರೋಹಿತನು ರಾಜನಿಗೆ ಕನ್ನಡಿಯನ್ನು ತೋರಿಸಿ, ಬಳಿಕ ಪ್ರಧಾನಮಂತ್ರಿ, ರಾಜಕುಮಾರ, ಇತರಮಂತ್ರಿಗಳು, ಸೇನಾಧಿಪತಿಗಳು, ಸೈನಿಕರು, ಇವರೆಲ್ಲರಿಗೂ ಆ ಕನ್ನಡಿಯನ್ನು ತೋರಿಸಬೇಕು.

೬೦-೬೧. ಹೀಗೆ ತನ್ನ ಸೈನ್ಯಕ್ಕೂ ಶಾಂತಿ, ಪುಷ್ಟಿ, ಕರ್ಮಗಳನ್ನು ಮಾಡಿಸಿ, ರಾಜನು ಬಳಿಕ ಮಣ್ಣಿನಿಂದ ಒಂದು ಶತ್ರುವಿಗ್ರಹವನ್ನು ಮಾಡಿ, ಅದರ ಎದೆಯಲ್ಲಿ ಆಭಿಚಾರಿಕಮಂತ್ರಗಳಿಂದ ಶೂಲವನ್ನು ಚುಚ್ಚಿ, ಖಡ್ಗದಿಂದ ಅದರ ಶಿರಸ್ಸನ್ನು ಕತ್ತರಿಸಬೇಕು.

೬೨-೬೩. ಬಳಿಕ ಆಚಾರ್ಯನು, ಕುದುರೆಯಲಗಾಮನ್ನು ಇಂದ್ರನ ಮತ್ತು ಸೂರ್ಯನ ಮಂತ್ರಗಳಿಂದ ಅಭಿಮಂತ್ರಿಸಿ, ತಾನೇ ಕುದುರೆಯ ಬಾಯಿಗೆ ಕಟ್ಟಬೇಕು. ಆ ಲಗಾಮನ್ನು ರಾಜನು ಅದೇ ಮಂತ್ರಗಳನ್ನುಚ್ಚರಿಸಿ ಹಿಡಿದು ಕುದುರೆಯನ್ನೇರಿ, ಚತುರಂಗಬಲಸಮೇತನಾಗಿ ಉತ್ತರ ಅಥವ ಪೂರ್ವದಿಗಭಿಮುಖವಾಗಿ ಹೋಗಬೇಕು.

ಋತ್ವಿಕ್ಪುರೋಹಿತಾಚಾರ್ಯಾಃ ಸರ್ವ ಏವ ನೃಪಂ ತಥಾ ।
ಅನುಗಚ್ಛೇಯುರನ್ಯಾನಿ ನಿಮಿತ್ತಾನಿ ವಿಲೋಕಿತುಂ ॥ ೬೪ ॥

ವಾದಿತ್ರಘೋಷೈಸ್ತುಮುಲೈರಾತಪತ್ರೈರ್ವೃತಸ್ತಥಾ ।
ಗಚ್ಛೇನ್ನೀರಾಜನೇ ರಾಜಾ ದಾರಯನ್ನಿವ ಮೇದಿನೀಂ ॥ ೬೫ ॥

ಮಣಿವಿದ್ರುಮಮುಕ್ತಾದಿಸ್ವರ್ಣರತ್ನೈರಲಂಕೃತಃ ।
ಕ್ರೋಶಮಾತ್ರಂ ತತೋ ಗತ್ವಾ ಪೂರ್ವದ್ವಾರೇಣ ಪಾರ್ಥಿವಃ ॥ ೬೬ ॥

ಸ್ವಪುರಂ ಪ್ರವಿಶೇದ್ವಿಪ್ರೈರ್ಯಜ್ಞಂ ಯಾಯಾತ್ಪುರೋಹಿತಃ ।
ತತ್ರ ಗತ್ವಾ ದಕ್ಷಿಣಾಂ ತು ಹಿರಣ್ಯಂ ಗಾಂ ತಥಾ ತಿಲಂ ॥ ೬೭ ॥

ದತ್ವಾ ಪಶ್ಚಾದ್ದ್ವಿಜೇಭ್ಯಸ್ತು ದದ್ಯಾದ್ದಾನಾನಿ ಶಕ್ತಿತಃ ।
ಏವಂ ನೀರಾಜನಂ ಕೃತ್ವಾ ಬಲಾನಾಂ ಚ ಮಹೀಪತಿಃ ॥ ೬೮ ॥

---

೬೪. ಆಗ ಋತ್ವಿಕ್, ಪುರೋಹಿತ, ಆಚಾರ್ಯ (ಗುರು) ಇವರೆಲ್ಲರೂ ಮಿಕ್ಕ ನಿಮಿತ್ತಗಳನ್ನು ನೋಡಲು ರಾಜನನ್ನನುಸರಿಸಿಹೋಗಬೇಕು.

೬೫-೬೬. ರಾಜನು ಹೋಗುವಾಗ ಶ್ವೇತಚ್ಛತ್ರಿಯನ್ನು ಹಿಡಿಸಿಕೊಂಡು ರತ್ನ, ಮುತ್ತು, ಹವಳ ಮೊದಲಾದುವುಗಳಿಂದಲೂ ಸ್ವರ್ಣಮಯವಾದ ಆಭರಣಗಳಿಂದಲೂ ಅಲಂಕೃತನಾಗಿ ವಾದ್ಯಘೋಷಾದಿಗಳ ಶಬ್ದದಿಂದ ಭೂಮಿಯನ್ನೇ ಛೇದಿಸುವನೋ ಎಂಬಂತೆ ಮಹಾವಿಭವದಿಂದ ನೀರಾಜನವಿಧಿಗಾಗಿ ಹೋಗಬೇಕು. ಒಂದು ಹರಿದಾರಿಯಷ್ಟು ಮಾತ್ರ ಹೋಗಿ, ಬಲಿಕ ಹಿಂತಿರುಗಿ, ನಗರದ ಪೂರ್ವದ್ವಾರದಿಂದ ತನ್ನ ಪುರವನ್ನು ಪ್ರವೇಶಮಾಡಿ ಪುರೋಹಿತ, ಬ್ರಾಹ್ಮಣರೊಡನೆ ಯಜ್ಞ ಭೂಮಿಗೆ ಹೋಗಬೇಕು.

೬೭. ಅಲ್ಲಿಗೆ ಹೋಗಿ ಪುರೋಹಿತನಿಗೂ, ಬ್ರಾಹ್ಮಣರಿಗೂ, ದಕ್ಷಿಣೆಯನ್ನೂ ಸುವರ್ಣ, ಹಸು, ಎಳ್ಳು, ಮತ್ತು ಇತರವಿಧವಾದ ಅನೇಕದಾನಗಳನ್ನು ಯಥಾ ಶಕ್ತಿಕೊಡಬೇಕು.

೬೮. ಹೀಗೆ ರಾಜನು ತನಗೂ ತನ್ನ ಸೈನ್ಯಗಳಿಗೂ ನೀರಾಜನ ಕರ್ಮವನ್ನು ಮಾಡಿದುದೇ ಆದರೆ, ಅವನು ಸ್ಥಿರವಾದ ರಾಜ್ಯಲಕ್ಷ್ಮಿಯನ್ನು ಹೊಂದಿ ಸುಖಿಸುವನು

ಪ್ರೇತ್ಯೇಹ ಸುಸ್ಥಿರಾಂ ಲಕ್ಷ್ಮೀಂ ನೃಪತಿಃ ಪ್ರಾಪ್ನುಯಾತ್ತದಾ ।
ತ್ವಮಶ್ವಾವೃತಸಂಜಾತ ಸಾಗರೋದ್ಭವ ಸೈಂಧವ ॥ ೬೯ ॥

ಯೇನ ಸತ್ಯೇನ ವಹಸೇ ಶಕ್ರಂ ತೇನೇಹ ಮಾಂ ವಹ ।
ಯೆನ ಸತ್ಯೇನ ರೇಮುಂತಂ ಯೇನ ಸತ್ಯೇನ ಭಾಸ್ಕರಂ ॥ ೭೦ ॥

ವಹಸೇ ತೇನ ಸತ್ಯೇನ ವಿಜಯಾಯು ವಹಸ್ವ ಮಾಂ ।
ಆಭ್ಯಾಂ ತು ಭೂಪ ಮಂತ್ರಾಭ್ಯಾಮಶ್ವಾರೋಹಣಮಾಚರೇತ್ ॥ ೭೧ ॥

ಆರುಹ್ಯಾಗ್ರೇ ಮಹಿಷ್ಯಾಸ್ತು ಶುದ್ಧಾಂತೇ ಲಂಬಯೇತ್ತತಃ ।
ಮಹಿಷೀ ಚ ತತೋ ಭೂಪಂ ಪರ್ಯಂಕೊಪರಿಸಂಸ್ಥಿತಂ ॥ ೭೨ ॥

ದೂರ್ವಾಕ್ಷತೈಃ ಸುಸಿದ್ಧಾರ್ಥೈಃ ಸ್ತ್ರೀಭಿಃ ಸಹ ತಮರ್ಚಯೇತ್ ।
ಕೃತೇ ತು ಭೂಮಿಗ್ರಹಣೇ ತೃತೀಯಾಯಾಂ ನಿರಾಜನೇ ॥ ೭೩ ॥

ಸೂತಕಂ ಯದಿ ಜಾಯೇತ ತತ್ರ ದುಷ್ಯತಿ ಕೇವಲಂ ।
ಸೂತಕೇ ಮೃತಕೇ ವಾಪಿ ಪಾರ್ಥಿವಸ್ತು ಯಥಾ ತಥಾ ॥ ೭೪ ॥

೬೯-೭೧. ಎಲೈ ಅಶ್ವವೇ, ನೀನು ಅಮೃತಮಥನಕಾಲವಲ್ಲಿ ಕ್ಷೀರಸಾಗರದಲ್ಲಿ ಜನಿಸಿದವನು. ಇಂದ್ರನನ್ನು ಯಾವರೀತಿ ಧರಿಸುವೆಯೋ ಹಾಗೆಯೇ ನನ್ನನ್ನು ಧರಿಸು. ಅಲ್ಲದೆ ಯಾವಸತ್ಯದಿಂದ ಸೂರ್ಯಚಂದ್ರರನ್ನು ಧರಿಸುವೆಯೋ ಆ ಸತ್ಯದಿಂದಲೇ ವಿಜಯಯಾತ್ರೆಗಾಗಿ ಹೊರಟಿರುವ ನನ್ನನ್ನೂ ವಹಿಸಿ, ವಿಜಯಪ್ರಾಪ್ತಿಯಾಗುವಂತೆ ಮಾಡು. ಈ ಎರಡು ಮಂತ್ರಗಳಿಂದ ಅಶ್ವವನ್ನು ಪ್ರಾರ್ಥಿಸಿ, ಬಳಿಕ ಅದನ್ನೇರಬೇಕು.

೭೨. ಮೊದಲು ರಾಣಿಯು ಅತಃಪುರದ ಕಡೆಗೆ ಕುದುರೆಯನ್ನೇರಿ ಹೋಗಿ, ಅಲ್ಲಿ ಮಂಚದ ಮೇಲೆ ಕುಳಿತುಕೊಳ್ಳಬೇಕು. ಬಳಿಕ ರಾಣಿಯು ಇತರಸ್ತ್ರೀಯರೊಡನೆ ಪರ್ಯಂಕಾಸೀನನಾದ ರಾಜನನ್ನು ದೂರ್ವಾಕ್ಷತೆಗಳಿಂದಲೂ ಮಂಗಳದ್ರವ್ಯಗಳಿಂದಲೂ ಪೂಜಿಸಬೇಕು.

೭೩. ತೃತೀಯೆಯಲ್ಲಿ ನೀರಾಜನವಿಧಿಯನ್ನು ಪ್ರಾರಂಭಿಸಿದಮೇಲೆ, ಮಧ್ಯದಲ್ಲಿ ಸೂತಕ ಬಂದರೆ, ಆದಿನ ಮಾತ್ರ ಆಶೌಚವನ್ನನುಷ್ಠಾನಮಾಡಬೇಕು.

೭೪. ಆದುದರಿಂದ ಜಾತಾಶೌಚ ಮೃತಾಶೌಚ ಯಾವುದು ಬಂದರೂ, ರಾಜನು ಒಲಸೀರಾಜನವನ್ನು ಮಾಡಲೇಬೇಕು. ಆಶೌಚವು ಆಕೂಡಲೇ ನಿವೃತ್ತಿಯಾಗುವುದು.

ಬಲನೀರಾಜನಂ ಕುರ್ಯಾತ್ತನ್ಮಾತ್ರಂ ಚ ವಿಶೇಷತಃ ।
ಸದ್ಯಃ ಶೌಚಂ ಭವೇದ್ರಾಜ್ಞೋ ವ್ಯವಹಾರವಿಲೋಕನೇ ॥ ೭೫ ॥

ತಥಾಧಿವಾಸನೇ ಯಜ್ಞೇ ಪರರಾಷ್ಟ್ರವಿಮರ್ದನೇ ।
ಅಯಂ ತೇ ಕಥಿತೋ ರಾಜನ್ನೀರಾಜನವಿಧಿರ್ಮಯಾ ॥ ೭೬ ॥

ಪುಷ್ಯಸ್ನಾನವಿಧಾನಂ ತು ಪಾರ್ಥಿವ ಶೃಣು ಸಾಂಪ್ರತಂ ।

॥ ಇತಿ ಶ್ರೀಕಾಲಿಕಾಪುರಾಣೇಽಷ್ಟಾಶೀತಿತಮೋಽಧ್ಯಾಯಃ ॥

---

೭೫. ವ್ಯವಹಾರವಿಮರ್ಶೆ, ಅಧಿವಾಸ, ಯಜ್ಞ, ಶತ್ರುಗಳ ಮೇಲೆ ಮುತ್ತಿಗೆ ಇವುಗಳನ್ನು ನಡೆಸುವ ಕಾಲದಲ್ಲಿ ರಾಜನಿಗೆ ಸೂತಕವು ಬಂದರೆ ಆದನ್ನು ಕೇವಲ ಸ್ನಾನಮಾಡುವುದರಿಂದ ಆಗಲೇ ನಿವೃತ್ತಿಮಾಡಿಕೊಳ್ಳಬಹುದು.

೭೬. ಎಲೈ ರಾಜನೆ! ಈ ರೀತಿಯಾಗಿ ಈ ನೀರಾಜನವಿಧಿಯನ್ನು ನಿನಗೆ ಹೇಳಿರುವೆನು. ಈಗ ಪುಷ್ಯಸ್ನಾನವಿಧಿಯನ್ನು ಹೇಳುವೆನು, ಕೇಳುವವನಾಗು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತೆಂಟನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ಶ್ರೀ ಕಾಲಿಕಾಪುರಾಣೇ ಏಕೋನನವತಿತಮೋಽಧ್ಯಾಯಃ॥

॥ ಔರ್ವ ಉವಾಚ ॥

ಶೃಣು ರಾಜನ್ ಪ್ರವಕ್ಷ್ಯಾಮಿ ಪುಷ್ಯಸ್ನಾನವಿಧಿಕ್ರಮಂ ।
ಯೇನ ವಿಜ್ಞಾತಮಾತ್ರೇಣ ವಿಘ್ನಾ ನಶ್ಯಂತಿ ಸಂತತಂ ॥ ೧ ॥

ಪೌಷೇ ಪುಷ್ಯರ್ಕ್ಷಗೇ ಚಂದ್ರೇ ಪುಷ್ಯಸ್ನಾನಂ ನೃಪಶ್ಚರೇತ್ ।
ಸೌಭಾಗ್ಯಕಲ್ಯಾಣಕರಂ ದುರ್ಭಿಕ್ಷಮರಣಾಪಹಂ ॥ ೨ ॥

ವಿಷ್ಟ್ಯಾದಿದುಷ್ಟಕರಣೇ ವ್ಯತೀಪಾತೇ ಚ ವೈಧೃತೌ ।
ವಜ್ರೇ ಶೂಲೇ ಹರ್ಷಣಾದೌ ಯೋಗೇ ತು ಯದಿ ಲಭ್ಯತೇ ॥ ೩ ॥

॥ ಎಂಭತ್ತೊಂಭತ್ತನೆಯ ಅಧ್ಯಾಯವು ॥

೧. ಔರ್ವಮುನಿಯು ಹೇಳಿದನು, ಎಲೈ ರಾಜೇಂದ್ರನೇ, ಪುಷ್ಯಸ್ನಾನದ ವಿಧಿಯನ್ನು ಹೇಳುವೆನು, ಕೇಳು. ಅದನ್ನು ತಿಳಿದಮಾತ್ರದಿಂದಲೇ ಸಕಲ ವಿಘ್ನಗಳೂ ನಾಶವಾಗುವವು.

೨. ಪುಷ್ಯಮಾಸದಲ್ಲಿ ಚಂದ್ರನು ಪುಷ್ಯನಕ್ಷತ್ರದಲ್ಲಿರುವಾಗ ಪುಷ್ಯಸ್ನಾನವನ್ನು ರಾಜನು ಮಾಡಬೇಕು. ಅದರಿಂದ ಸೌಭಾಗ್ಯ, ಕಲ್ಯಾಣಗಳು ಆಗುವುದಲ್ಲದೇ, ದೇಶದಲ್ಲಿ, ಬರಗಾಲ ಅಕಾಲಮರಣ ಇವು ಉಂಟಾಗುವುದಿಲ್ಲ.

೩-೪. ಭದ್ರಾಕರಣವೇ ಮೊದಲಾದ ಯಾವುದಾದರೂ ದುಷ್ಟಕರಣಗಳು, ವ್ಯತೀಪಾತ, ವೈಧೃತಿ, ವಜ್ರ, ಶೂಲ, ಹರ್ಷಣ, ಈ ಯಾವುದಾದರೂ ಯೋಗಗಳಿದ್ದು ತಿಥಿಗೆಯಲ್ಲಿ ಪುಷ್ಯನಕ್ಷತ್ರವಿದ್ದರೆ ಅಂದು ಭಾನು, ಶನಿ, ಮಂಗಳ, ಇದಾವುದಾದರೊಂದು

ತೃತೀಯಾಯುಕ್ತಪುಷ್ಯರ್ಕ್ಷಂ ರವಿಶೌರಿಕುಜೇsಹನಿ ।
ತದಾ ಸಮಸ್ತದೋಷಾಣಾಂ ತತ್ಸ್ನಾನಂ ಹಾನಿಕಾರಕಂ ॥ ೪ ॥

ಗ್ರಹದೋಷಾಶ್ಚ ಜಾಯಂತೇ ಯದಿ ರಾಜ್ಯೇಷು ಚೇತಯಃ ।
ತದಾ ಪುಷ್ಯರ್ಕ್ಷಮಂತ್ರೇ ತು ಕುರ್ಯಾನ್ಮಸಾಂತರೇsಪಿ ಚ ॥ ೫ ॥

ಇಯಂ ತು ಬ್ರಹ್ಮಣಾ ಶಾಂತಿರುದ್ದಿಷ್ಟಾ ಗುರುವೇ ಪುರಾ ।
ಶಕ್ರಾದಿಸರ್ವದೇವಾನಾಂ ಶಾಂತ್ಯರ್ಥಂ ಚ ಜಗತ್ಪತಿಃ ॥ ೬ ॥

ತುಷಕೇಶಾಸ್ಥಿವಲ್ಮೀಕಕೀಟದೇಶಾವಿವರ್ಜಿತೇ ।
ಶರ್ಕರಾಕೃಮಿಕೂಷ್ಮಾಂಡಬಹುಕುಷ್ಮವಿವರ್ಜಿತೇ ॥ ೭ ॥

ಕಾಕೋಲೂಕೈಶ್ಚ ಕಂಕೈಶ್ಚ ಕಾಕೋಲೈರ್ಗೃಧ್ರಶ್ವಾನಕೈಃ ।
ವರ್ಜಿತೇ ಕಂಟಕಿವನೇ ವಿಭೀತಕವಿವರ್ಜಿತೇ ॥ ೮ ॥

ವಾರವಾಗಿಯೂ ಇದ್ದರೆ, ಆ ದಿನದಲ್ಲಿ ಪುಷ್ಯಸ್ನಾನಮಾಡಿದರೆ ಸಕಲ ದೋಷಗಳೂ ನಾಶವಾಗುವುವು.

೫. ಗ್ರಹದೋಷಗಳು, ಈತಿಬಾಧೆಗಳು, ರಾಜ್ಯದಲ್ಲಿ ಉಂಟಾದರೆ ಬೇರೆ ಮಾಸ ಗಳಲ್ಲಾದರೂ ಹಿಂದೆ ಹೇಳಿದ ಯೋಗವಿರುವ ಪುಷ್ಯನಕ್ಷತ್ರವಿರುವ ದಿನದಲ್ಲಿ ಪುಷ್ಯ ಸ್ನಾನವನ್ನು ಮಾಡಬೇಕು. ಅದರಿಂದ ಶಾಂತಿಯಾಗುವುದು.

೬. ಜಗತ್ಪತಿಯಾದ ಬ್ರಹ್ಮದೇವನು, ಹಿಂದೆ ಇಂದ್ರನೇ ಮೊದಲಾದ ದೇವತೆ ಗಳಿಗೆ ಶಾಂತಿಯು ಲಭಿಸುವುದಕ್ಕಾಗಿ ಈ ಶಾಂತಿ ವಿಧಾನವನ್ನು ದೇವ ಗುರುವಾದ ಬೃಹ ಸ್ಪತಿಗೆ ಹೇಳಿರುವನು.

೭-೮ ಪುಷ್ಯಸ್ನಾನ ಪ್ರದೇಶದಲ್ಲಿ ಹೊಟ್ಟು, ಕೂದಲು, ಎಲುಬು, ಹುತ್ತ, ಹುಳುಗಳ ಗೂಡು, ಇವುಗಳಿರಬಾರದು. ಸಕ್ಕರೆ, ಕೃಮಿ, ಕುಂಬಳಬಳ್ಳಿ ಬಹುಕುಷ್ಮ ಇವುಗಳೂ, ಇರಬಾರದು. ಕಾಗೆ ಗೂಬೆ ಹದ್ದು ವಿಷಜಂತು ಮುದಿಕಾಗೆ, ರಣಹದ್ದು ನಾಯಿ ಇವುಗಳು ವಾಸವಾಗಿರಬಾರದು. ತಾರೇಗಿಡವಿರಬಾರದು, ಹಲಸಿನ ಮರಗಳು ಬೇಕಾದಷ್ಟು ಇರಬಹುದು.

ಶಿಗ್ರುಶ್ಲೇಷ್ಮಾತಕಾಭ್ಯಾಂ ತು ಜಲೌಕಾದ್ಯೈರ್ವಿವರ್ಜಿತೇ ।
ಸ್ವಸ್ಥಾನೇ ಚಂಪಕಾಶೋಕಬಕುಲಾದಿವಿರಾಜಿತೇ ॥ ೯ ॥

ಹಂಸಕಾರಂಡವಾಕೀರ್ಣೇ ಸರಸ್ತೀರೇಽಥ ವಾ ಶುಚೌ ।
ಪುಷ್ಯಸ್ನಾನಾಯ ನೃಪತಿರ್ಗೃಹ್ಣೀಯಾತ್ಸ್ಥಾನಮುತ್ತಮಂ ॥ ೧೦ ॥

ತತಃ ಪುರೋಹಿತೋ ರಾಜಾ ನಾನಾವಾದಿತ್ರನಿಃಸ್ವನೈಃ ।
ಪ್ರದೋಷಸಮಯೇ ಗಚ್ಛೇತ್ತತ್ಸ್ಥಾನಂ ಪೂರ್ವವಾಸರೇ ॥ ೧೧ ॥

ತಸ್ಯ ಸ್ಥಾನಸ್ಯ ಕೌಬೇರ್ಯಾಂ ದಿಶಿ ಸ್ಥಿತ್ವಾ ಪುರೋಹಿತಃ ।
ಸುಗಂಧಚಂದನೈಃ ಪಾನೈಃ ಕರ್ಪೂರಾದಧಿವಾಸಿತಃ ॥ ೧೨ ॥

ಗೋರೋಚನಾಭಿಃ ಸಿದ್ಧಾರ್ಥೈರಕ್ಷತೈಃ ಸಫಲಾದಿಭಿಃ ।
ಗಂಧದ್ವಾರೇತ್ಯಾದಿಭಿಸ್ತು ಮಂತ್ರೈಃ ಸರ್ವಾಧಿಸಿಕ್ತಕೈಃ ॥ ೧೩ ॥

೯-೧೦. ನುಗ್ಗೀಮರ, ಚಕ್ಕೋಮರ ಇವುಗಳು ಆ ಸ್ಥಾನದಲ್ಲಿರಕೂಡದು. ಜಿಗಣೆಯೂ ಇರಕೂಡದು. ಒಳ್ಳೆಯ ಪ್ರದೇಶವಾಗಿರಬೇಕು. ಸಂಪಿಗೆ, ಅಶೋಕ, ಬಕುಲ ಮುಂತಾದ ಉತ್ತಮ ವೃಕ್ಷಗಳು ಅಲ್ಲಿರಬೇಕು. ಹಂಸ, ಚಕ್ರವಾಕ ಈ ಪಕ್ಷಿಗಳಿಂದ ಕೂಗೊಳಿಸುತ್ತಿರುವ ಇಂತಹ ಶುದ್ಧವಾದ ಸರಸ್ಸಿನ ತೀರದಲ್ಲಿ ರಾಜನು ಪುಷ್ಯ ಸ್ನಾನಕ್ಕಾಗಿ ಉತ್ತಮವಾದ ಸ್ಥಾನವನ್ನು ಗೊತ್ತುಮಾಡಿಕೊಳ್ಳಬೇಕು.

೧೧-೧೩. ಬಳಿಕ ಪುರೋಹಿತನೂ ರಾಜನೂ ಸಹ ಅನೇಕಬಗೆಯ ಮಂಗಳ ವಾದ್ಯಗಳೊಡನೆ ಹಿಂದಿನದಿನ ಸಾಯಂಕಾಲವೇ ಪ್ರದೋಷಸಮಯದಲ್ಲಿ ಆ ಪ್ರದೇಶಕ್ಕೆ ಹೋಗಬೇಕು. ಆ ಸ್ಥಾನದ ಉತ್ತರದಿಕ್ಕಿನಲ್ಲಿ ಪುರೋಹಿತನು ಕುಳಿತುಕೊಂಡು, ಸುವಾಸನೆಯುಳ್ಳ ಚಂದನ, ಪನ್ನೀರು, ಕರ್ಪೂರ, ಗೋರೋಚನ, ಮಂತ್ರಾಕ್ಷತೆ, ಫಲಗಳು, ಮೊದಲಾದ ಮಂಗಳದ್ರವ್ಯಗಳಿಂದ "ಗಂಧದ್ವಾರಾಂ" ಎಂದು ಮೊದಲಾದ ಮಂತ್ರಗಳಿಂದ ಆ ಪ್ರದೇಶವನ್ನು ಶುದ್ಧಗೊಳಿಸಿ, ಎಲ್ಲೆಡೆಯಲ್ಲಿಯೂ ಸುವಾಸನೆಯುಂಟಾಗುವಂತೆ ಮಾಡಿ, ಬಳಿಕ ಅಲ್ಲಿ ದೇವತೆಗಳನ್ನು ಪೂಜಿಸಬೇಕು.

ಅಧಿವಾಸ್ಯ ತು ತತ್ಸ್ಥಾನಂ ಪೂಜಯೇತ್ತತ್ರ ದೇವತಾಃ ।
ಗಣೇಶಂ ಕೇಶವಂ ಶಕ್ರಂ ಬ್ರಹ್ಮಾಣಂ ಚಾಪಿ ಶಂಕರಂ ॥ ೧೪ ॥

ಉಮಯಾ ಸಹಿತಂ ದೇವಂ ಸರ್ವಾಶ್ಚ ಗಣದೇವತಾಃ ।
ಮಾತ್ಯಾಶ್ಚ ಪೂಜಯೇತ್ತತ್ರ ನೃಪತಿಃ ಸಪುರೋಹಿತಃ ॥ ೧೫ ॥

ಮಂಗಲ್ಯಾ ಕಲಶಾ ಕೃತ್ವಾ ನಾನಾನೈವೇದ್ಯಸಂಚಯಾ ।
ಪ್ರದದ್ಯಾತ್ಪಾಯಸಂ ಸ್ವಾದು ಫಲಂ ಮೋದಕಯಾವಕೌ ॥ ೧೬ ॥

ಅಧಿವಾಸ್ಯ ಚ ತತ್ಸ್ಥಾನಂ ದೂರ್ವಾಸಿದ್ಧಾರ್ಥಕಾಕ್ಷತೈಃ ।
ತತ್ಸ್ಥಾನಾಚ್ಚಾಪಿ ಭೂತಾನಿ ಸಾರಯೇನ್ಮಂತ್ರಮುಚ್ಚರ್ಯ ॥ ೧೭ ॥

ಅಪಸರ್ಪಂತು ತೇ ಭೂತಾ ಯೇ ಭೂತಾ ಭೂಮಿಪಾಲಕಾಃ ।
ಭೂಮಿನಾಮುನಿರೋಧೇನ ಪೂಜಾಕರ್ಮ ಕರೋಮ್ಯಹಂ ॥ ೧೮ ॥

ತತಃ ಕರೌ ಪುಟೀಕೃತ್ಯ ಮಂತ್ರೇಣಾನೇನ ಪಾರ್ಥಿವಃ ।
ಆವಾಹಯೇದಿಮಾನ್ದೇವಾನ್ ಪೂಜ್ಯಾನ್ ಪುಷ್ಪಾಭಿಷೇಕತಃ ॥ ೧೯ ॥

೧೪-೧೬. ಮಂಗಳಕಲಶಗಳನ್ನು ಪ್ರತಿಷ್ಠಿಸಿ, ಅವುಗಳಲ್ಲಿ ದೇವತೆಗಳನ್ನು ಆವಾಹನೆ ಮಾಡಿ ಪೂಜಿಸಬೇಕು. ಗಣೇಶ, ವಿಷ್ಣು, ಇಂದ್ರ, ಬ್ರಹ್ಮ ಇವರನ್ನೂ ಪಾರ್ವತಿಯೊಡನೆ ಶಂಕರನನ್ನೂ, ಸಕಲ ಗಣದೇವತೆಗಳನ್ನೂ, ಸಪ್ತಮಾತೃದೇವತೆಯರನ್ನೂ ಸಪು ರಾಜನು ತನ್ನ ಪುರೋಹಿತನೊಡನೆ ಅರ್ಚಿಸಬೇಕು. ಅನೇಕಬಗೆಯ ನೈವೇದ್ಯಗಳನ್ನೂ, ರುಚಿಕರವಾದ ಪಾಯಸ, ತೆಂಗಿನಕಾಯಿ, ಬಾಳೆಹಣ್ಣು, ಮೋದಕ, ಮಹಾನೈವೇದ್ಯ ಇವುಗಳನ್ನು ನೈವೇದ್ಯಮಾಡಬೇಕು.

೧೭. ಮತ್ತು ಆ ಸ್ಥಾನವನ್ನು, ದೂರ್ವ ಬಿಳಿಸಾಸುವೆ, ಅಕ್ಷತೆ ಇವುಗಳಿಂದ ಅಲಂಕರಿಸಿ ಬಳಿಕ ಆ ಸ್ಥಾನದಿಂದ ಮುಂದೆಹೇಳುವ ಮಂತ್ರವನ್ನು ಪೇಳುತ್ತಾ ಭೂತಾಪಸರಣವನ್ನು ಮಾಡಬೇಕು. (ಭೂತಗಳನ್ನು ಓಡಿಸಬೇಕು.)

೧೮-೧೯. ಈ ಭೂಮಿಯ ಪ್ರದೇಶವನ್ನು ರಕ್ಷಿಸುತ್ತಿರುವ ಭೂತಗಳು ಇಲ್ಲಿಂದ ಹೊರಟುಹೋಗಲಿ. ಈ ಭೂಮಿಗೆ ವಿರೋಧಬರದಂತೆ ನಾನು ಪೂಜಾಕರ್ಮವನ್ನು ಮಾಡುವೆನು. ಎಂಬ ಮಂತ್ರದಿಂದ ಭೂತಾಪಸರಣವನ್ನೂ ಮಾಡಿ, ಬಳಿಕ ಕೈಗಳನ್ನು

ಆಗಚ್ಛಂತು ಸುರಾಃ ಸರ್ವೇ ಯತ್ರ ಪೂಜಾಭಿಲಾಷಿಣಃ ।
ದಿಶೋ ಹಿ ಪಾಲಕಾಃ ಸರ್ವೇ ಯೇ ಚಾನ್ಯೇಽಪ್ಯಂಶಭಾಗಿನಃ ॥ ೨೦ ॥

ತತಃ ಪುಷ್ಪಾಂಜಲಿಂ ದತ್ವಾ ಪುನರ್ಮಂತ್ರಂ ಪಠೇದಿಮಂ ।
ಅದ್ಯ ತಿಷ್ಠಂತು ವಿಬುಧಾಃ ಸ್ಥಾನಮಾಸಾದ್ಯ ಮಾಮಕಂ ॥ ೨೧ ॥

ಸ್ವಪೂಜಾಂ ಪ್ರಾಪ್ಯ ಯಾತಾರೋ ದತ್ವಾ ಶಾಂತಿಂ ಮಹೀಭುಜೇ ।
ತತಸ್ತಾಂ ನೃಪತೀ ರಾತ್ರಿಂ ನಯೇತ್ತು ಸಪುರೋಹಿತಃ ॥ ೨೨ ॥

ಸ್ವಪ್ನೇ ಶುಭಾಶುಭಂ ವಿದ್ಯಾನ್ನೃಪಸ್ತು ಸಪುರೋಹಿತಃ ।
ಕೃತ್ವಾ ಪೂಜಾಂ ತು ದೇವಾನಾಂ ರಾತ್ರೌ ಸ್ಥಾನೇ ನೃಪಃ ಸ್ವಪೇತ್ ॥ ೨೩ ॥

ಶುಭಾಶುಭಫಲಂ ಸ್ವಪ್ನೇ ಜ್ಞೇಯಂ ದೋಷಜ್ಞಸಮ್ಮತೇ ।
ದುಃಸ್ವಪ್ನದರ್ಶನಂ ಚೇತ್ಸ್ಯಾತ್ತದಾಪುಷ್ಯಾಭಿಷೇಚನೇ ॥ ೨೪ ॥

ನುಗಿದುಕೊಂಡು ಇಲ್ಲಿ ನಾನು ಮಾಡುವ ಪೂಜೆಯನ್ನಪೇಕ್ಷಿಸುವ ದೇವತೆಗಳೂ, ದಿಕ್ಪಾಲಕರೂ, ಪೂಜಾಭಾಗಕ್ಕೆ ಅರ್ಹರಾದ ಇತರರೂ ಇಲ್ಲಿ ಸಂನಿಹಿತರಾಗಿ ನನ್ನ ಪೂಜೆಯನ್ನು ಸ್ವೀಕರಿಸಿ ಎಂಬ ಮಂತ್ರದಿಂದ ರಾಜನು ದೇವತೆಗಳನ್ನು ಆವಾಹನೆ ಮಾಡಬೇಕು.

೨೧. ಬಳಿಕ ಪುಷ್ಪಾಂಜಲಿಯನ್ನು ಕೊಟ್ಟು, ತಿರುಗಿ ಈ ಮಂತ್ರವನ್ನು ಹೇಳಬೇಕು. "ಈದಿನ ಈ ದೇವತೆಗಳು ನನ್ನ ಪೂಜಾಸ್ಥಾನದಲ್ಲಿ ನೆಲಸಿರಬೇಕು. ಇಲ್ಲಿದ್ದು, ನನ್ನ ಪೂಜೆಯನ್ನು ಸ್ವೀಕರಿಸಿ, ನನಗೆ ಶಾಂತಿಯನ್ನು ಕೊಟ್ಟು, ಬಳಿಕ ಇಲ್ಲಿಂದ ತೆರಳುವರಾಗಿರಿ" ಎಂದು ಪ್ರಾರ್ಥಿಸಬೇಕು.

೨೨. ಬಳಿಕ ಆ ರಾತ್ರಿಯನ್ನು ರಾಜನು ಅಲ್ಲಿಯೇ ಪುರೋಹಿತನೊಡನೆ ಕಳೆಯಬೇಕು. ಅಂದು ರಾತ್ರಿ ಸ್ವಪ್ನದಲ್ಲಿ ಆಗುವ ಶುಭಾಶುಭ ಫಲಗಳನ್ನು ತಾನೂ, ಪುರೋಹಿತನೂ ತಿಳಿದುಕೊಳ್ಳಬೇಕು.

೨೩-೨೪. ರಾತ್ರಿಯಲ್ಲಿ ದೇವತೆಗಳನ್ನು ಪೂಜಿಸಿ, ಕ್ಲುಪ್ತವಾದ ಸ್ಥಾನದಲ್ಲಿ ರಾಜನು ಮಲಗಬೇಕು. ಆ ರಾತ್ರಿಯಲ್ಲಾದ ಸ್ವಪ್ನದ ಶುಭಾಶುಭಫಲಗಳನ್ನು ಜೋಯಿಸರಿಂದ ತಿಳಿಯಬೇಕು. ಆಗ ಕೆಟ್ಟಸ್ವಪ್ನವಾದರೆ ಪುಷ್ಯಾಭಿಷೇಕದಲ್ಲಿ ನಾಲ್ಕು ರಷ್ಟು ಹೆಚ್ಚಾಗಿ ಹೋಮಮಾಡಬೇಕು. ನೂರು ಹಸುಗಳನ್ನು ದಾನಮಾಡಬೇಕು.

ಹೋಮಂ ಚತುರ್ಗುಣಂ ಕುರ್ಯಾದ್ದತ್ತ್ವಾ ಚಾಪಿ ಗವಾಂ ಶತಂ ।
ಗೋವಾಜಿಕುಂಜರಾಣಾಂ ತು ಪ್ರಾಸಾದಸ್ಯ ಗಿರೇಸ್ತಥಾ ॥ ೨೫ ॥

ಆರೋಹಣಂ ಶುಭಕರಂ ರಾಜಶ್ರೀವೃದ್ಧಿಕಾರಕಂ ।
ದಧಿದೇವಸುವರ್ಣಾನಾಂ ಬ್ರಾಹ್ಮಣಸ್ಯ ಚ ದರ್ಶನಂ ॥ ೨೬ ॥

ವೀಣಾದೂರ್ವಾಕ್ಷತಫಲಂ ಪುಷ್ಪಚ್ಛತ್ರವಿಲೇಪನಂ ।
ಶೀತಾಂಶುಚಕ್ರಶತ್ರೂಣಾಂ ಪದ್ಮಸ್ಯ ಸುಹೃದಸ್ತಥಾ ॥ ೨೭ ॥

ಲಾಭಾಃ ಕ್ಷಯಕರಾಃ ಶತ್ರೌ ರತ್ನಕಾರಸ್ಯ ಭೂಭೃತಃ ।
ದರ್ಶನಂ ಚೋಪರಾಗಸ್ಯ ನಿಗಡೇನ ಚ ಬಂಧನಂ ॥ ೨೮ ॥

ಮಾಂಸಸ್ಯ ಭೋಜನಂ ಚೈವ ಪರ್ವತಸ್ಯ ನಿವರ್ತನಂ ।
ನಾಭಿಮಧ್ಯೇ ತರೂತ್ಪತ್ತಿರ್ಮೃತಂ ಪ್ರತ್ಯನುರೋದನಂ ॥ ೨೯ ॥

ಅಗಮ್ಯಾಗಮನಂ ಕೋಪಪಂಕೇಗರ್ತಾವತೀರ್ಣತಾ ।
ಪರ್ವತಸ್ಯ ತಥಾ ನದ್ಯಾಃ ಸ್ರೋತಸಾಂ ಚೈವ ಲಂಘನಂ ॥ ೩೦ ॥

---

೨೫. ಸ್ವಪ್ನದಲ್ಲಿ ಎತ್ತು, ಕುದುರೆ, ಆನೆ, ಅರಮನೆ, ಬೆಟ್ಟ, ಮರ, ಇವು ಗಳನ್ನು ತಾನು ಹತ್ತಿದಂತೆ ಕಂಡರೆ ಅದು ಒಳ್ಳೆಯದು. ರಾಜ್ಯಲಕ್ಷ್ಮ್ಯಯನ್ನು ಅಭಿ ವೃದ್ಧಿಗೊಳಿಸುವುದು.

೨೬-೨೭. ಪೊಸರು, ದೇವತೆಗಳು, ಬ್ರಾಹ್ಮಣ, ಚಿನ್ನ, ವೀಣೆ, ದೂರ್ವಾ ಕ್ಷತೆ, ಫಲ, ಹೂವು, ಛತ್ರಿ, ಗಂಧ, ಚಂದ್ರಮಂಡಲ, ಶತ್ರು, ಕಮಲ, ಸ್ನೇಹಿತ, ಇವರುಗಳನ್ನೂ ಸ್ವಪ್ನದಲ್ಲಿ ಕಂಡರೆ ತನಗೆ ಮಂಗಳವಾಗುವುದೆಂದೂ. ಶತ್ರುವಿಗೆ ಕೆಟ್ಟದ್ದಾಗುವುದೆಂದೂ ತಿಳಿಯಬೇಕು.

೨೮-೩೨. ಮತ್ತು, ತನ್ನ ಶತ್ರುವು ಸೂರ್ಯಚಂದ್ರ ಗ್ರಹಣವನ್ನು ನೋಡು ವುದು, ಸಂಕೋಲೆಯಿಂದ ಬಂಧನ ಹೊಂದುವುದು, ಮಾಂಸವನ್ನು ತಿನ್ನುವುದು. ಪರ್ವತವನ್ನೇರಲಾರದೆ ಕೆಳಗಿಳಿಯುವುದು, ಹೊಕ್ಕಳಮಧ್ಯದಲ್ಲಿ ಮರವು ಹುಟ್ಟಿದಂತೆ ಕಾಣುವುದು, ಯಾವನೋ ಸತ್ತವನನ್ನು ಕುರಿತು ಅಳುವುದು, ತನ್ನ ಶತ್ರುವು ಸೇರ ಬಾರದ ಸ್ತ್ರೀಯಲ್ಲಿ ಕಾಮೇಚ್ಛೆಯಿಂದ ಸೇರುವುದು, ಕೆಸರು ಹಳ್ಳಗಳಲ್ಲಿ ಬೀಳುವುದು, ಬೆಟ್ಟ, ನದಿಯಪ್ರವಾಹ ಇವುಗಳಲ್ಲಿ ಹಾರಿಬೀಳುವುದು, ಅವನ ಪುತ್ರಮರಣ,

ಸ್ವಪುತ್ರಮರಣಂ ಚೈವ ಪಾನಂ ರುಧಿರಮದ್ಯಯೋಃ ।
ಭೋಜನಂ ಪಾಯಸಸ್ಯಾಪಿ ಮನುಷ್ಯಾರೋಹಣಂ ತಥಾ ॥ ೩೧ ॥

ಕಲ್ಯಾಣಸುಖಸೌಭಾಗ್ಯರಾಜ್ಯಶತ್ರುಕ್ಷಯಂ ತಥಾ ।
ಏತೇ ಸ್ವಪ್ನಾಃ ಪ್ರಕುರ್ವಂತಿ ನೃಪಸ್ಯ ನೃಪಸತ್ತಮ ॥ ೩೨ ॥

ಖರೋಷ್ಟ್ರಮಹಿಷಾಣಾಂ ಚ ಆರೋಹೋ ರಾಜ್ಯನಾಶನಃ ।
ನೃತ್ಯಗೀತಂ ತಥಾ ಹಾಸ್ಯಂ ಪಾಠಶಾಸ್ತ್ರಸ್ಯ ಶುಭಪ್ರದಃ ॥ ೩೩ ॥

ರಕ್ತವಸ್ತ್ರಪರೀಧಾನಂ ರಕ್ತಮಾಲ್ಯಾನುಲೇಪನಂ ।
ರಕ್ತಾಂ ಕೃಷ್ಣಾಂ ಸ್ತ್ರೀಯಂ ಚೈವ ಕಾಮಯೇ ನ್ಮೃತ್ಯುಮಾಪ್ನುಯಾತ್ ॥

ಕೂಪಾಂತರೇ ಪ್ರವೇಶಃ ಸ್ಯಾದ್ದಕ್ಷಿಣಾಶಾಗತಿಸ್ತಥಾ ।
ಪಂಕೇ ನಿಮಜ್ಜನಂ ಸ್ನಾನಂ ಭಾರ್ಯಾಪುತ್ರವಿನಾಶನಂ ॥ ೩೫ ॥

ಲಾಭಸ್ತಸ್ಯ ಭವೇತ್ಸ್ವಪ್ನೇ ಪುನರುತ್ಪತ್ತಿರ್ನೃಪಸ್ಯ ಚ ।
ಆದಾಯ ಗರ್ಭನಾಡೀಂ ತು ಸ ಕುಲೇ ಯಾತಿ ಖಂದುನಂ ॥ ೩೬ ॥

ಮದ್ಯ, ರಕ್ತ, ಇವುಗಳ ಪಾನ, ಪಾಯಸವನ್ನು ತಿನ್ನುವುದು, ಮನುಷ್ಯನಮೇಲೆ ಏರಿ ಸುತ್ತುಕೊಳ್ಳುವುದು, ಮೊದಲಾದ ಈ ಸ್ವಪ್ನಗಳು ರಾಜನಿಗೆ ಕಲ್ಯಾಣ, ಸುಖ, ಸೌಭಾಗ್ಯ, ರಾಜ್ಯವೃದ್ಧಿ, ಶತ್ರುನಾಶ ಇವುಗಳನ್ನುಂಟುಮಾಡುವುವು.

೩೩-೩೫. ಸ್ವಪ್ನದಲ್ಲಿ ಕತ್ತೆ, ಒಂಟೆ, ಕೋಣ, ಇವುಗಳನ್ನು ಹತ್ತುವುದು ರಾಜ್ಯನಾಶಕರವು. ನರ್ತನ ಗಾನ, ಹಾಸ್ಯ, ಓದುವುದು ಇವುಗಳು ಅನಿಷ್ಟವಾದವುಗಳು ಮತ್ತು ಕೆಂಪುಬಟ್ಟೆಯನ್ನು ಧರಿಸಿರುವುದು, ಕೆಂಪುಗಂಧವನ್ನು ಹಚ್ಚಿಕೊಂಡಿರುವುದು, ಕೆಂಪುಬಣ್ಣದ ಅಥವಾ ಕಪ್ಪುಬಣ್ಣದ ಸ್ತ್ರೀಯನ್ನು ತಾನು ಕಾಮಿಸುವುದು, ಇವುಗಳನ್ನು ಸ್ವಪ್ನದಲ್ಲಿ ಕಂಡರೆ ಮೃತ್ಯುವು ತಪ್ಪದೆ ಉಂಟಾಗುವುದು. ಭಾವಿಯಲ್ಲಿ ಬೀಳುವಿಕೆ, ದಕ್ಷಿಣದಿಕ್ಕಿನಕಡೆಗೆ ಗಮನ, ಕೆಸರಿನಲ್ಲಿ ಮುಳುಗುವಿಕೆ, ಸ್ನಾನ, ಹೆಂಡತಿ ಮಕ್ಕಳು ಸಾಯುವುದು, ಈ ರೀತಿಯಾದ ಸ್ವಪ್ನಗಳೂ ಮೃತ್ಯುವನ್ನುಂಟುಮಾಡುವುವು.

೩೬. ತಾನುತಿರುಗಿ ಹುಟ್ಟಿದಂತೆಯೂ, ಗರ್ಭನಾಡಿಯನ್ನು ತೆಗೆದುಕೊಂಡು ಅಕ್ಕಶಾಲೆಗೆ ಹೋದಂತೆಯೂ, ಸ್ವಪ್ನವಾದರೆ ಆ ರಾಜನು ಇನ್ನೊಂದು ರಾಜ್ಯವನ್ನು ಪಡೆವನಲ್ಲದೆ ಮಹಾಮಂಗಳವನ್ನೂ ಪಡೆಯುವನು.

ಸ ತು ರಾಜ್ಯಾಂತರಂ ಪ್ರಾಪ್ಯ ಮಹಾಕಲ್ಯಾಣಮಾಪ್ನುಯಾತ್ ।
ದೀರ್ಘಂ ವಿಂಶತಿಹಸ್ತಂ ತು ಹಸ್ತಷೋಡಶವಿಸ್ತೃತಂ ॥ ೩೭ ॥

ಕುರ್ಯಾತ್ತು ಲಕ್ಷಣೋಪೇತಂ ಯಜ್ಞಮಂಡಪಮುತ್ತಮಂ ।
ತತಃ ಪರೇಽಹ್ನಿ ಪೂರ್ವಾಹ್ಣೇ ಮಾತೃಣಾಂ ಪೂಜನಂ ಚರೇತ್ ॥ ೩೮ ॥

ಕುಡ್ಯಲಗ್ನಾಂ ವಸೋರ್ಧಾರಾಂ ವೃದ್ಧಿಶ್ರಾದ್ಧಂ ತಥೈವ ಚ ।
ಚಂದನಾಗರುಕಸ್ತೂರೀಧೂಪಕರ್ಪೂರಚೂರ್ಣಕೈಃ ॥ ೩೯ ॥

ಸಂಪೂಜ್ಯ ಮಂಡಲಸ್ಥಾನಂ ತಸ್ಮಿನ್ ಹ್ರೀಂ ಶಂಭವೇ ನಮಃ ।
ಅಸ್ತ್ರಾಯ ಹುಂ ಫಡಿತ್ಯೇವಂ ಲಿಖೇನ್ಮಂತ್ರದ್ವಯಂ ಪುನಃ ॥ ೪೦ ॥

ಮಂತ್ರವಿನ್ಮಂಡಲಜ್ಞಶ್ಚ ಸೂತ್ರೈಃ ಕಂಬಲಸಂಭವೈಃ ।
ಕೌಶೇಯೈರ್ವಾ ಸ್ವಸ್ತಿಕಾಖ್ಯಂ ಪ್ರಥಮಂ ಮಂಡಲಂ ಲಿಖೇತ್ ॥ ೪೧ ॥

---

೩೭. ಇಪ್ಪತ್ತು ಹಸ್ತಪ್ರಮಾಣ ಉದ್ದವಾಗಿಯೂ, ಹದಿನಾರು ಹಸ್ತಪ್ರಮಾಣ ಅಗಲವಾಗಿಯೂ ಇರುವ ಲಕ್ಷಣವಾಗಿರುವ ಒಂದು ಯಜ್ಞಮಂಡಪವನ್ನು ರಚಿಸ ಬೇಕು.

೩೮. ಬಳಿಕ ಮರುದಿನ ಪ್ರಾತಃಕಾಲದಲ್ಲಿ ಮಾತೃದೇವತೆಯರನ್ನು ಪೂಜಿ ಸಬೇಕು. ಶ್ವೇತ ಸೂತ್ರವನ್ನು ಗೋಡೆಯಸುತ್ತಲೂ ಕಟ್ಟಿ ನಾಂದೀ ಶ್ರಾದ್ಧ ವನ್ನು ಮಾಡಬೇಕು.

೩೯-೪೦. ಚಂದನ, ಅಗರು, ಕಸ್ತೂರೀ ಧೂಪ, ಕರ್ಪೂರಚೂರ್ಣ ಇವು ಗಳಿಂದ ಮಂಡಲಪ್ರದೇಶವನ್ನು ಪೂಜಿಸಿ, ಅಲ್ಲಿ 'ಹ್ರೀಂ ಶಂಭವೇ ನಮಃ' "ಅಸ್ತ್ರಾಯ ಹುಂ ಫಟ್" ಎಂಬ ಎರಡು ಮಂತ್ರಗಳನ್ನು ಬರೆಯಬೇಕು.

೪೧-೪೪. ಮಂತ್ರಶಾಸ್ತ್ರವನ್ನು ಬಲ್ಲವನೂ, ಮಂಡಲವನ್ನು ರಚಿಸುವ ವಿಧಾ ನವನ್ನು ತಿಳಿದವನೂ ಆದ ಆಚಾರ್ಯನು ರತ್ನಗಂಬಳಿಯ ನೂಲುಗಳಿಂದಲೂ ಅಥವಾ ರೇಷ್ಮೆ ನೂಲುಗಳಿಂದಲೂ ಸ್ವಸ್ತಿಕವೆಂಬ ಮಂಡಲವನ್ನು ಬರೆಯಬೇಕು. ಆ ಮಂಡಲವು ನಾಲ್ಕು ಹಸ್ತ ಪ್ರಮಾಣವುಳ್ಳದ್ದಾಗಿರುವಂತೆ ಬರೆಯಬೇಕು. ಅದರ ಮಧ್ಯದಲ್ಲಿ ಒಂದುಹಸ್ತ ಪ್ರಮಾಣವುಳ್ಳ ಕಮಲವನ್ನು ಬರೆಯಬೇಕು. ಮಂಡಲದ

ಚತುರ್ಹಸ್ತಪ್ರಮಾಣಂ ತು ಮಂಡಲಂ ವಿಲಿಖೇತ್ತತಃ ।
ಹಸ್ತಪ್ರಮಾಣಪದ್ಮಂ ತು ಮಂಡಲಸ್ಯ ಪ್ರಕೀರ್ತಿತಂ ॥ ೪೨ ॥

ದ್ವಾರಾಣಿ ಸಾರ್ಧಹಸ್ತಾನಿ ಕರ್ಣಿಕಾಕೇಸರೋಜ್ಜ್ವಲಂ ।
ಸಿತಂ ರಕ್ತಂ ಚ ಪೀತಂ ಚ ಕೃಷ್ಣಂ ಹರಿತಮೇವ ಚ ॥ ೪೩ ॥

ಶಾಲಿಚೂರ್ಣೈಶ್ಚ ಕೌಸುಂಭೈರ್ಹಾರಿದ್ರೈರ್ಹರಿದುದ್ಭವೈಃ ।
ಕುರ್ಯಾತ್ತತ್ತದ್ವರ್ಣಜನೈಶ್ಚೂರ್ಣೈ ರಾಜಾ ಮಂಡಲವೃದ್ಧಯೇ ॥ ೪೪ ॥

ಪದ್ಮಾಂತತಃ ಸಮಾರಭ್ಯ ತಾಲಂ ಪಶ್ಚಿಮಗಾಮಿನಂ ।
ಪಶ್ಚಿಮದ್ವಾರಮಧ್ಯೇ ಚ ಚತುರ್ಹಸ್ತಂ ವಿನಿರ್ದಿಶೇತ್ ॥ ೪೫ ॥

ಪ್ರತ್ಯೇಕಂ ದ್ವಾರಮಧ್ಯೇ ತು ಪದ್ಮಂ ಚೈವಾಷ್ಟಪತ್ರಕಂ ।
ಕುರ್ಯಾನ್ಮಂಡಲಭಾಗಜ್ಞಃ ಚೂರ್ಣೈರೇವ ಪೃಥಕ್ ಪೃಥಕ್ ॥ ೪೬ ॥

ಚೂರ್ಣೈಸ್ತು ಮಂಡಲಂ ಕೃತ್ವಾ ಸೂತ್ರಾಣ್ಯುತ್ಸಾರಯೇತ್ತತಃ ।
ಉತ್ಸಾರ್ಯ ಸೂತ್ರಂ ಪ್ರಥಮಂ ಮಂಡಲಂ ಪೂಜಯೇತ್ತತಃ ॥ ೪೭ ॥

ದ್ವಾರಗಳು ಅರ್ಧಹಸ್ತ ಪ್ರಮಾಣವಾಗಿರಬೇಕು. ಬಿಳುಪು, ಕೆಂಪು, ಹಳದಿ, ಕಪ್ಪು, ಹಸರು. ಈ ಬಣ್ಣಗಳಿಂದ ಕರ್ಣಿಕೆ, ಕೇಸರ, ದಳ ಇವುಗಳನ್ನು ರಚಿಸಿ, ಅಕ್ಕಿಯ ಹಿಟ್ಟು, ಕುಸುಂಬೆ (ಕೆಂಪು) ಚೂರ್ಣ, ಅರಸಿನ, ಹಸರುಚೂರ್ಣ, ಕಾಡಿಗೆಚೂರ್ಣ ಇವುಗಳಿಂದ ಆ ಮಂಡಲವನ್ನು ತುಂಬಿ ಅಲಂಕರಿಸಬೇಕು.

೪೫-೪೭. ಪದ್ಮದ ಕೊನೆಯಿಂದ ಆರಂಭಿಸಿ ಪಶ್ಚಿಮದಿಕ್ಕಿನವರೆಗೆ ತಾಲವನ್ನು ಬರೆಯಬೇಕು. ಪಶ್ಚಿಮದ್ವಾರದ ಮಧ್ಯದಲ್ಲಿ ನಾಲ್ಕುಹಸ್ತ ಪ್ರಮಾಣವುಳ್ಳ ಮತ್ತೊಂದು ತಾಲವನ್ನು ಬರೆಯಬೇಕು. ಪ್ರತಿಯೊಂದು ದ್ವಾರದ ಮಧ್ಯದಲ್ಲಿಯೂ ಪ್ರತ್ಯೇಕವಾಗಿ ಎಂಟು ದಲಗಳುಳ್ಳ ಕಮಲಗಳನ್ನು ಹಿಂದೆಹೇಳಿದ ಚೂರ್ಣಗಳಿಂದಲೇ ರಚಿಸಬೇಕು. ಚೂರ್ಣಗಳಿಂದ ಮಂಡಲವನ್ನು ಮಾಡಿ ಬಳಿಕ ಸೂತ್ರದಾರಗಳನ್ನು ಸುತ್ತಬೇಕು. ಆ ಮೇಲೆ ಮಂಡಲವನ್ನು ಪೂಜಿಸಬೇಕು.

ಭವಾನಾಯ ನಮ ಇತಿ ತತೋ ಹಸ್ತಂ ವಿಯೋಜಯೇತ್ ।
ಸಖ್ಯಾವಲಂಬಹಸ್ತಂ ತು ರಜಃಪಾತಂ ಸಮಾಚರೇತ್ ॥ ೪೮ ॥

ಮಧ್ಯಮಾನಾಮಿಕಾಂಗುಷ್ಠೈರುಪರಿಷ್ಟಾದ್ಯಥೇಚ್ಛಯಾ ।
ಅಧೋಮುಖಾಂಗುಳೀಕೃತ್ವಾ ಪಾತಯೇಚ್ಚ ವಿಚಕ್ಷಣಃ ॥ ೪೯ ॥

ಸಮಾ ರೇಖಾ ತು ಕರ್ತವ್ಯಾವಿಚ್ಛಿನ್ನಾ ಪುಷ್ಪರಂಜಿತಾ ।
ಅಂಗುಷ್ಠಪರ್ವನೈಪುಣ್ಯಾತ್ಸಮಾ ಕಾರ್ಯಾ ವಿಜಾನತಾ ॥ ೫೦ ॥

ಸಂಶಕ್ತವಿಷಮಂ ಸ್ಥೂಲಂ ವಿಚ್ಛಿನ್ನಂ ಕೃಸರಾಕೃತಂ ।
ಪರ್ಯಂತಮರ್ಪಿತಂ ಹ್ರಸ್ವಮಾಲಿಖೇನ್ನ ಕದಾಚನ ॥ ೫೧ ॥

ಸಂಶಕ್ತೇ ಕಲಹಂ ವಿದ್ಯಾದೂರ್ಧ್ವರೇಖೇ ತು ವಿಗ್ರಹಂ ।
ಅತಿಸ್ಥೂಲೇ ಭವೇದ್ವ್ಯಾಧಿರ್ನಿತ್ಯಂ ಪೀಡಾ ವಿಮಿಶ್ರಿತೇ ॥ ೫೨ ॥

೪೮-೫೦. ಬಲಗೈಯಲ್ಲಿ ಚೂರ್ಣವನ್ನು ತೆಗೆದುಕೊಂಡು 'ಭವಾನಾಯ ನಮಃ' ಎಂಬ ಮಂತ್ರದಿಂದ ಮಂಡಲದ ರೇಖೆಗಳನ್ನು ಬರೆಯಬೇಕು. ಮಧ್ಯದ ಬೆರಳು ನಾಲ್ಕನೆಯದು, ಹೆಬ್ಬೆರಳು ಇವುಗಳನ್ನು ಬಗ್ಗಿಸಿ ಅವುಗಳಿಂದ ಆ ಚೂರ್ಣಗಳನ್ನು ಸರಿಯಾಗಿ ಉದರಿಸಬೇಕು. ಗೆರೆಯು ಮಧ್ಯ ಕಿತ್ತುಹೋಗಿರಬಾರದು. ಹೆಚ್ಚು ಕಡಿಮೆ ಇಲ್ಲದೆ ಒಂದೇ ಸಮನಾಗಿರಬೇಕು. ಸಾಧಕನಾದವನು ತನ್ನ ಹೆಬ್ಬೆರಳನ್ನು ಬುದ್ಧಿವಂತಿಕೆಯಿಂದ ಚಮತ್ಕಾರವಾಗಿ ಉಪಯೋಗಿಸಿ, ರೇಖೆಗಳನ್ನು ಸಮನಾಗಿ ಬರೆದು ಅವುಗಳನ್ನು ಪುಷ್ಪಗಳಿಂದ ಅಲಂಕರಿಸಬೇಕು.

೫೧. ಮಂಡಲದ ರೇಖೆಗಳು ಒಂದಕ್ಕೊಂದು ಸೇರಿಕೊಂಡಿರಬಾರದು. ಅತಿ ದಪ್ಪನಾಗಿಯೂ ಅತಿ ಸಣ್ಣದಾಗಿಯೂ ಇರಕೂಡದು. ಮಧ್ಯವಲ್ಲಿ ಕಿತ್ತುಹೋದಂತಿರ ಬಾರದು. ರೇಖೆಗಳು ಒಂದು ಮುಖದಲ್ಲಿ ಹ್ರಸ್ವವಾಗಿಯೂ ಮತ್ತೊಂದು ಮುಖದಲ್ಲಿ ದೀರ್ಘವಾಗಿಯೂ ಇರಬಾರದು. ಅಳತೆಗೆ ಸಮನಾಗಿರಬೇಕು.

೫೨-೫೩. ರೇಖೆಗಳನ್ನು ಸೇರಿದಂತೆ ಬರೆದರೆ ಕಲಹವುಂಟಾಗುವುದು. ರೇಖೆಯು ತೀರ ಮೇಲ್ಭಾಗಕ್ಕೆ ಹೋಗಿದ್ದರೆ ಯುದ್ಧವಾಗುವುದು. ತುಂಬಾ ದಪ್ಪ ನಾಗಿದ್ದರೆ ರೋಗವುಂಟಾಗುವುದು. ಮಿಶ್ರವಾಗಿದ್ದರೆ ನಿತ್ಯವೂ ತೊಂದರೆ ಯುಂಟಾಗು

ಬಿಂದುಭಿರ್ಭಯಮಾಪ್ನೋತಿ ಶತ್ರುಪಕ್ಷಾನ್ನ ಸಂಶಯಃ ।
ಕೃಶಾಯಾಮರ್ಥಹಾನಿಃ ಸ್ಯಾಚ್ಛಿನ್ನಾಯಾಂ ಮರಣಂ ಧ್ರುವಂ ॥ ೫೩ ॥

ವಿಯೋಗೋ ವಾ ಭವೇತ್ತಸ್ಯ ಇಷ್ಟದ್ರವ್ಯಸುತಸ್ಯ ವಾ ।
ಅವಿದಿತ್ವಾ ಲಿಖೇದ್ಯಸ್ತು ಮಂಡಲಂ ತು ಯಥೇಚ್ಛಯಾ ॥ ೫೪ ॥

ಸರ್ವದೋಷಾನವಾಪ್ನೋತಿ ಯೇ ದೋಷಾಃ ಪೂರ್ವಮೀರಿತಾಃ ।
ಸಿತಸರ್ಷಪಪೂರ್ವಾಯಾ ರೇಖಾಃ ಕಾರ್ಯಾ ವಿಜಾನತಾ ॥ ೫೫ ॥

ವಿಮಲಂ ವಿಜಯಂ ಭದ್ರಂ ವಿಮಾನಂ ಶುಭದಂ ಶಿವಂ ।
ವರ್ಧಮಾನಂ ಚ ದೇವಂ ಚ ಶತಾಕ್ಷಂ ಕಾಮದಾಯಕಂ ॥ ೫೬ ॥

ರುಚಕಂ ಸ್ವಸ್ತಿಕಂ ಚೈವ ದ್ವಾದಶೈತೇ ತು ಮಂಡಲಾಃ ।
ಯಥಾಸ್ಥಾನಂ ಯಥಾಯಜ್ಞಂ ಯೋಜನೀಯಾ ವಿಚಕ್ಷಣೈಃ ॥ ೫೭ ॥

ವುದು. ಸೂನ್ನೆಯಿದ್ದರೆ ಶತ್ರುಗಳಿಂದ ಭಯವು ನಿಶ್ಚಯವಾಗಿ ಉಂಟಾಗುವುದು. ತುಂಬಾ ಚಿಕ್ಕದಾಗಿದ್ದರೆ ದ್ರವ್ಯನಾಶವಾಗುವುದು. ಕಡಿದು ಹೋಗಿದ್ದರೆ ಮರಣವೇ ಆಗುವುದು. ಅಥವಾ ಇಷ್ಟವಸ್ತು ಪ್ರವ್ಯ, ಪುತ್ರ, ಇವರುಗಳ ವಿಯೋಗವಾದರೂ ಆಗುವುದು.

೫೪. ಮಂಡಲವನ್ನು ಬರೆಯುವಕ್ರಮವನ್ನು ತಿಳಿಯದೆ, ಯಾವನು ಸ್ವೇಚ್ಛೆಯಿಂದ ಬರೆಯುವನೋ ಅವನು ಹಿಂದೆ ಹೇಳಿದ ಸಕಲ ದೋಷಗಳಿಗೂ ಪಾತ್ರನಾಗುವನು.

೫೫. ಬಿಳಿಸಾಸವೆ, ಪೂರ್ವಗಳನ್ನು ಉಪಯೋಗಿಸಿ ರೇಖೆಗಳನ್ನು ಸರಿಯಾಗಿ ರಚಿಸಬೇಕು.

೫೬-೫೭. ವಿಮಲ, ವಿಜಯ, ಭದ್ರ, ವಿಮಾನ, ಶುಭದ, ಶಿವ, ವರ್ಧಮಾನ, ದೇವ, ಶತಾಕ್ಷ, ಕಾಮದಾಯಕ, ರುಚಕ, ಸ್ವಸ್ತಿಕ, ಗಳೆಂದು ಹನ್ನೆರಡು ಮಂಡಲಗಳಿರುವುವು. ಈ ಮಂಡಲಗಳನ್ನು ಆಯಾಯ ಸ್ಥಾನ ಮತ್ತು ಕರ್ಮಗಳಿಗೆ ತಕ್ಕಂತೆ ಮಂಡಲಕ್ರಮವನ್ನು ತಿಳಿದವರು ರಚಿಸಬೇಕು.

ಸಾಗರೇ ಮಥ್ಯಮಾನೇ ತು ಪೀಯೂಷಾರ್ಥಂ ಸುರೋತ್ತಮೈಃ ।
ಪೀಯೂಷಧಾರಣಾರ್ಥಾಯ ನಿರ್ಮಿತಾ ವಿಶ್ವಕರ್ಮಣಾ ॥ ೫೮ ॥

ಕಲಾಂ ಕಲಾಂ ತು ದೇವಾನಾಮುಸಿತ್ವಾ ತೇ ಪೃಥಕ್ ಪೃಥಕ್ ।
ಯತಃ ಕೃತಾಸ್ತು ಕಲಶಾಸ್ತತಸ್ತೇ ಪರಿಕೀರ್ತಿತಾಃ ॥ ೫೯ ॥

ನವೈವ ಕಲಶಾಃ ಪ್ರೋಕ್ತಾ ನಾಮತಸ್ತಾನ್ನಿಬೋಧತ ।
ಗುಹ್ಯೋಪಗುಹ್ಯೋ ಮರುತೋ ಮುಯೂಖಶ್ಚ ತಥಾಪರಃ ॥ ೬೦ ॥

ಮನೋಹಾ ಚಾರ್ಯಭದ್ರಶ್ಚ ವಿಜಯಸ್ತನುದೂಷಕಃ ।
ಇಂದ್ರಿಯಘ್ನೋಽಥ ವಿಜಯೋ ನವಮಃ ಪರಿಕೀರ್ತಿತಃ ॥ ೬೧ ॥

ತೇಷಾಮೇವ ಕ್ರಮಾದ್ಭೂಪ ನವ ನಾಮಾನಿ ಯಾನಿ ತು ।
ಶೃಣು ತಾನ್ಯಪರಾಣ್ಯೇವ ಶಾಂತಿದಾನಿ ಸದೈವ ಹಿ ॥ ೬೨ ॥

ಕ್ಷೀತೀಂದ್ರಃ ಪೃಥಮಃ ಪ್ರೋಕ್ತೋ ದ್ವಿತಿಯೋ ಜಲಸಂಭವಃ ।
ಪವನಾಗ್ನೀ ತತೋ ದ್ವೌ ತು ಯಜಮಾನಸ್ತತಃ ಪರಃ ॥ ೬೩ ॥

೫೮-೬೧. ಹಿಂದೆ ಅಮೃತಕ್ಕಾಗಿ ದೇವತೆಗಳು ಸಮುದ್ರವನ್ನು ಕಡೆದರು. ಆಗ ವಿಶ್ವಕರ್ಮನು ಆ ಅಮೃತವನ್ನು ಪಾಕಿಡಲು ಈ ಕಲಶಗಳನ್ನು ರಚಿಸಿದನು. ಆಗ ದೇವತೆಗಳೆಲ್ಲರ ಕಲೆಗಳನ್ನು ಬೇರೆಬೇರೆಯಾಗಿ ತೆಗೆದು, ಇವುಗಳನ್ನು ನಿರ್ಮಿಸಿ ಸಿದುದರಿಂದ ಇವುಗಳಿಗೆ ಕಲಶಗಳೆಂದು ಹೆಸರಾಯಿತು. ಕಲಶಗಳು ಒಟ್ಟು ಒಂಭತ್ತಿರುವವು. ಅವುಗಳ ಹೆಸರನ್ನು ಹೇಳುವೆನು ಕೇಳಿರಿ. ಗುಹ್ಯ, ಉಪಗುಹ್ಯ, ಮರುತ, ಮುಯೂಖ, ಮನೋಹಾ, ಆರ್ಯಭದ್ರ, ವಿಜಯ, ಇಂದ್ರಿಯಘ್ನ, ವಿಜಯ, ಇವೇ ಆ ಒಂಭತ್ತು ಕಲಶಗಳ ಹೆಸರು.

೬೨-೬೫. ಆ ಕಲಶಗಳಿಗೇನೆ ಇನ್ನೂ ಬೇರೆ ಒಂಭತ್ತು ಹೆಸರುಗಳಿವೆ. ಅವು ಯಾವಾಗಲೂ ಶಾಂತಿಯನ್ನುಂಟು ಮಾಡುವವು. ಅವುಗಳನ್ನು ಹೇಳುವೆನು. ಕೇಳು. ಮೊದಲನೆಯಕಲಶವು ಕ್ಷಿತೀಂದ್ರವೆಂಬುದು ಎರಡನೆಯದು, ಜಲಸಂಭವವು. ಪವನ, ಅಗ್ನಿಯೆಂಬ ಹೆಸರುಳ್ಳವುಗಳು: ಮೂರು ನಾಲ್ಕನೆಯವು. ಯಜಮಾನವೆಂಬುದು ಐದ

ಕೋಶಸಂಭಾವನಾಭ್ಯಾಂ ತು ಷಷ್ಠಃ ಸ ಪರಿಕೀರ್ತಿತಃ ।
ಸೋಮಸ್ತು ಸಪ್ತಮಃ ಪ್ರೋಕ್ತ ಆದಿತ್ಯಸ್ತು ತಥಾಷ್ಟಮಃ ॥ ೬೪ ॥

ವಿಜಯೋ ನಾಮ ಕಲಶೋ ಯೋಽಸೌ ನವಮ ಉಚ್ಯತೇ ।
ಸ ತು ಪಂಚಮುಖಃ ಪ್ರೋಕ್ತೋ ಮಹಾದೇವಸ್ವರೂಪಧೃಕ್ ॥ ೬೫ ॥

ಘಟಸ್ಯ ಪಂಚರೂಪೇಷು ಪಂಚವಕ್ತ್ರೈಃ ಸ್ವಯಂ ತಥಾ ।
ಯಥಾ ಕಾಷ್ಠಾಂ ಸ್ಥಿತಃ ಸಮ್ಯಗ್ವಾಮದೇವಾದಿನಾಮತಃ ॥ ೬೬ ॥

ಮಂಡಲಸ್ಥಂ ತು ಪದ್ಮಾಂತಃ ಪಂಚವಕ್ತ್ರಂ ಘಟಂ ನ್ಯಸೇತ್ ।
ಕ್ಷೇತೀಂದ್ರಂ ಪೂರ್ವತೋ ನ್ಯಸ್ಯ ಪಶ್ಚಿಮೇ ಜಲಸಂಭವಂ ॥ ೬೭ ॥

ವಾಯವ್ಯೇ ವಾಯುವಂ ನ್ಯಸ್ಯ ಆಗ್ನೇಯೇ ಹ್ಯಗ್ನಿಸಂಭವಂ ।
ನೈಋರ್ತ್ಯೇ ಯಜಮಾನಂ ತು ಐಶಾನ್ಯಾಂ ಕೋಶಸಂಭವಂ ॥ ೬೮ ॥

ಸೋಮಮುತ್ತರತೋ ಯೋಜ್ಯಂ ಸೌರಂ ದಕ್ಷಿಣತೋ ನ್ಯಸೇತ್ ।
ನ್ಯಸ್ಯೈವಂ ಕಲಾಶಾಂಶ್ಚೈವ ತೇಷು ಚೈತಾ ವಿಚಿಂತಯೇತ್ ॥ ೬೯ ॥

ನೆಯಬೇಕು. ಆರನೆಯದಕ್ಕೆ ಕೋಶ, ಸಂಭಾವನ ಎಂದು ಎರಡು ಹೆಸರು. ಸೋಮವು ಏಳನೆಯದು. ಎಂಟನೆಯದು ಆದಿತ್ಯವೆಂಬುದು. ವಿಜಯವೆಂಬ ಒಂಭತ್ತನೆಯ ಕಲಶವು ಐದುಮುಖವುಳ್ಳದಾಗಿ ಮಹಾದೇವನ ಸ್ವರೂಪವನ್ನು ಧರಿಸಿರುವುದು.

೬೬. ಕಲಶದ ಐದು ರೂಪಗಳಲ್ಲಿ ವಾಮದೇವನೇ ಮೊದಲಾದ ಹೆಸರಿನಿಂದ ಶಂಕರನ ಪಂಚರೂಪಗಳನ್ನು ಆಯಾಯದಿಕ್ಕಿನಲ್ಲಿರುವಂತೆಯೇ ಪೂಜಿಸಬೇಕು.

೬೭-೬೯. ಮಂಡಲದಲ್ಲಿರುವ ಪದ್ಮದಲ್ಲಿ ಪಂಚಮುಖವುಳ್ಳ ಕಲಶವನ್ನು ಇರಿಸಬೇಕು. ಮಂಡಲದ ಪೂರ್ವದಲ್ಲಿ ಕ್ಷಿತೀಂದ್ರಕಲಶವನ್ನೂ, ಪಶ್ಚಿಮದಲ್ಲಿ ಜಲ ಸಂಭವಕಲಶವನ್ನೂ, ವಾಯವ್ಯದಲ್ಲಿ ವಾಯುಕಲಶವನ್ನೂ, ಆಗ್ನೇಯದಲ್ಲಿ ಅಗ್ನಿಕಲಶ ವನ್ನೂ, ನೈಋತ್ಯದಲ್ಲಿ ಯಜಮಾನಕಲಶವನ್ನೂ, ಈಶಾನ್ಯದಲ್ಲಿ ಕೋಶಸಂಭವ ಕಲಶ ವನ್ನೂ, ಉತ್ತರದಲ್ಲಿ ಸೋಮಕಲಶವನ್ನೂ, ದಕ್ಷಿಣದಲ್ಲಿ ಸೂರ್ಯಕಲಶವನ್ನೂ ಇರಿಸಿ ಅವುಗಳಲ್ಲಿ ಆಯಾಯ ದೇವತೆಗಳನ್ನು ಧ್ಯಾನಿಸಬೇಕು.

ಕಲಶಾನಾಂ ಮುಖೇ ಬ್ರಹ್ಮಾ ಗ್ರೀವಾಯಾಂ ಶಂಕರಃ ಸ್ಥಿತಃ ।
ಮೂಲೇ ತು ಸಂಸ್ಥಿತೋ ವಿಷ್ಣುರ್ಮಧ್ಯೇ ಮಾತೃಗಣಾಃ ಸ್ಮೃತಾಃ ॥ ೭೦ ॥

ದಿಕ್ಪಾಲಾ ದೇವತಾಃ ಸರ್ವೇ ವೇಷ್ಟಯಂತಿ ದಿಶೋ ದಶ ।
ಕುಕ್ಷೌ ತು ಸಾಗರಾಃ ಸಪ್ತ ಸಪ್ತದ್ವೀಪಾಶ್ಚ ಸಂಸ್ಥಿತಾಃ ॥ ೭೧ ॥

ನಕ್ಷತ್ರಾಣಿ ಗ್ರಹಾಃ ಸರ್ವೇ ತಥೈವ ಕುಲಪರ್ವತಾಃ ।
ಗಂಗಾದ್ಯಾಃ ಸರಿತಃ ಸರ್ವಾ ವೇದಾಶ್ಚತ್ವಾರ ಏವ ಚ ॥ ೭೨ ॥

ಕಲಶೇ ಸಂಸ್ಥಿತಾಃ ಸರ್ವೇ ತೇಷು ತಾನಿ ವಿಚಿಂತಯೇತ್ ।
ರತ್ನಾನಿ ಸರ್ವಬೀಜಾನಿ ಪುಷ್ಪಾಣಿ ಚ ಫಲಾನಿ ಚ ॥ ೭೩ ॥

ವಜ್ರಮೌಕ್ತಿಕವೈಢೂರ್ಯಮಹಾಪದ್ಮೇಂದ್ರನೀಲೈಃ ।
ಸರ್ವಧಾಮುಮುಂಬಿಲ್ವಂ ನಾಗರೋದುಂಬರಂ ತಥಾ ॥ ೭೪ ॥

ಬೀಜಪೂರಕಜಂಬೀರಕಾಶ್ಮೀರಾಮ್ರಾತದಾಡಿಮಂ ।
ಯವಂ ಶಾಲಿಂ ಚ ನೀವಾರಂ ಗೋಧೂಮಂ ಸಿತಸರ್ಷಪಂ ॥ ೭೫ ॥

೭೦-೭೨. ಕಲಶಗಳ ಮುಖದಲ್ಲಿ ಬ್ರಹ್ಮನೂ, ಕಂಠದಲ್ಲಿ ಶಂಕರನೂ, ಮೂಲದಲ್ಲಿ ವಿಷ್ಣುವೂ, ಮಧ್ಯದಲ್ಲಿ ಮಾತೃಕಾಗಣಗಳೂ ನೆಲಸಿರುವರು. ಕಲಶದ ಸುತ್ತಲೂ ಹತ್ತು ದಿಕ್ಕುಗಳಲ್ಲಿ ದಿಕ್ಪಾಲದೇವತೆಗಳಿರುವರು. ಕಲಶದ ಉದರದಲ್ಲಿ ಎಂದರೆ ಮಧ್ಯಭಾಗದಲ್ಲಿ ಸಪ್ತಸಮುದ್ರಗಳೂ, ಸಪ್ತದ್ವೀಪಗಳೂ ಇರುವವು. ಇವಲ್ಲದೆ ನಕ್ಷತ್ರಗಳು, ಗ್ರಹಗಳು, ಕುಲಪರ್ವತಗಳು, ಗಂಗೆಯೇ ಮೊದಲಾದ ನದಿಗಳು, ನಾಲ್ಕು ವೇದಗಳು ಇವುಗಳೆಲ್ಲವೂ ಕಲಶಗಳಲ್ಲಿರುವುವು. ಅವುಗಳನ್ನು ಆ ಕಲಶಗಳಲ್ಲಿ ಧ್ಯಾನಿಸಬೇಕು.

೭೩. ರತ್ನಗಳು, ಸಕಲ ಬೀಜಗಳು, ಪುಷ್ಪಗಳು, ಫಲಗಳು, ವಜ್ರ ಮತ್ತು ವೈಢೂರ್ಯ, ಕಮಲ, ಇಂದ್ರನೀಲಮಣಿ, ಸ್ಫಟಿಕ ಮುಂತಾದವುಗಳಿಂದ ಆ ಕಲಶಗಳನ್ನು ಅಲಂಕರಿಸಬೇಕು.

೭೪-೭೮. ಸಮಸ್ತವಿಧವಾದ ಪೂಜೆಗಳಲ್ಲಿಯೂ, ಈ ಫಲಪುಷ್ಪಗಳು ಉಪಯುಕ್ತವಾದವುಗಳು- ಬಿಲ್ವಪತ್ರ, ನಾಗರ, ಅತ್ತಿಪುಷ್ಪ, ಸೀಬೇಹಣ್ಣು, ನಿಂಬೇಹಣ್ಣು, ಕಾಶ್ಮೀರ, ಬಿಟ್ಟತಾವರೆ, ಮಾವು, ದಾಳಿಂಬೆ, ಜವೇಗೋಧಿ, ಅಕ್ಕಿ ನವಣೆ, ಗೋಧಿ ಬಿಳೀಸಾಸುವೆ, ಕುಂಕುಮ, ಅಗರು, ಕರ್ಪೂರ, ಬನ್ನಿ, ಗೋರೋಚನ, ಚಂದನ,

ಕುಂಕುಮಾಗರುಕರ್ಪೂರಮದನಂ ರೋಚನಂ ತಥಾ ।
ಚಂದನಂ ಚ ತಥಾ ಮಾಂಸೀಮೇಲಾಂ ಕುಷ್ಠಂ ತಥೈವ ಚ ॥ ೭೬ ॥

ಕಸ್ತೂರೀಪತ್ರಚೂರ್ಣಂ ಚ ಜಲನಿರ್ಯಾಸಕಾಂಬುಜಂ ।
ಶೈಲೇಯಂ ಬದರಂ ಜಾತೀಪತ್ರಪುಷ್ಪೇ ತಥೈವ ಚ ॥ ೭೭ ॥

ಕಾಲಶಾಕಂ ತಥಾ ಪೃಕ್ಕಾ ದೇವೀಪರ್ಣಕಮೇವ ಚ ।
ವಚಾಂ ಧಾತ್ರೀಂ ಸಮಂಜಿಷ್ಠಾಂ ತುರುಷ್ಕಂ ಮಂಗಲಾಷ್ಟಕಂ ॥ ೭೮ ॥

ದೂರ್ವಾಂ ಮೋಹನಿಕಾಂ ಭದ್ರಾಂ ಶತಮೂಲೀಂ ಶತಾವರೀಂ ।
ವರ್ಣಾಸಾಂ ಸರಲಾಂ ಕ್ಷುದ್ರಾಂ ಸಹದೇವಾಂ ಗಜಾಹ್ವಯಂ ॥ ೭೯ ॥

ಪೂರ್ಣಕೋಶಾಂ ಸಿತಾಂ ಪೀತಾಂ ಗುಂಜಾಂ ಶಿರಸಿಕಾನಲೌ ।
ವ್ಯಾಮಕಂ ಗಜದಂತಂ ಚ ಶತಪುಷ್ಪಂ ಪುನರ್ನವಾಂ ॥ ೮೦ ॥

ಬ್ರಾಹ್ಮೀಂ ದೇವೀಂ ಶಿವಾಂ ರುದ್ರಾಂ ಸರ್ವಸಂಧಾನಿಕಾಂಸ್ತಥಾ ।
ಸಮಾಹೃತ್ಯ ಶುಭಾನೇತಾರ್ ಕಲಶೇಷು ನಿಧಾಪಯೇತ್ ॥ ೮೧॥

ಜಟಾಮಾಂಸಿ, ಯಾಲಕ್ಕಿ, ಕುಷ್ಠ, ಕಸ್ತೂರೀಪತ್ರ, ಅದರಚೂರ್ಣ, ಜಲನಿರ್ಯಾಸ, ಕಮಲ, ಗೈರಿಕಾದಿಧಾತುಗಳು, ಬದರಿ, ಜಾತಿಪುಷ್ಪ, ಮತ್ತು ಪತ್ರ, ಕಾಲಶಾಕ, ಸುಂಕೇಬೇರು, ದೇವೀಪರ್ಣ, ವಚಾ, ನೆಲ್ಲಿ, ಮಂಜಿಷ್ಠಾ, ತುರುಷ್ಕ ಮಂಗಲಾಷ್ಟಕ ಪತ್ರ, ಅಥವಾಮಂಗಲಾಷ್ಟಕಪದ್ಯಗಳು ಇನೇ ಮೊದಲಾದವುಗಳಿಂದಲೂ ಕಲಶವನ್ನು ಪೂಜೆಮಾಡಬಹುದು.

೭೯- ೮೧. ದೂರ್ವ, ತಾಳೇಬೇರು, ಭದ್ರಮುಷ್ಟಿ, ಶತಾವರಿ, ಶತಮೂಲಿ, ಪಿಲ್ಲಪಿಚ್ಚರ, ವರ್ಣಾಸ, ಸರಲ, ಹೆಗ್ಗುಳ್ಳ, ಸಹದೇವ, ಗಜಪುಷ್ಪ, ಪೂರ್ಣಕೋಶ, ಶ್ವೇತಪೀಠ, ಗುಂಜಾ, ಶಿರಸಿಕ, ಅನಲವಣಿ, ಗಜದಂತ, ಶತಪುಷ್ಪ, ಪುನರ್ನವ, ಬ್ರಾಹ್ಮೀ (ಹೊನಗೊನ್ನೆ,) ದೇವೀ (ಗೋರಟಿ,) ಶಿವಾ(ಶಮೀ,)ರುದ್ರಾ, ಇವುಗಳನ್ನೂ, ಮಿಕ್ಕಪೂಜಾ ಸಾಮಗ್ರಿಗಳನ್ನೂ, ಸಂಗ್ರಹಿಸಿ, ಮಂಗಳವಾದ ಆ ವಸ್ತುಗಳನ್ನು ಕಲಶಗಳಲ್ಲಿ ಹಾಕಬೇಕು.

ಕಲಶಸ್ಯ ಯಥಾದೇಶಂ ವಿಧಿಂ ಶಂಭುಂ ಗದಾಧರಂ ।
ಯಥಾಕ್ರಮಂ ಪೂಜಯಿತ್ವಾ ಶಂಭುಂ ಮುಖ್ಯತಯಾ ಯಜೇತ್ ॥ ೮೨ ॥

ಪ್ರಾಸಾದೇನ ತು ಮಂತ್ರೇಣ ಶಂಭುಂ ತಂತ್ರೇಣ ಶಂಕರಂ ।
ಪ್ರಥಮಂ ಪೂಜಯೇನ್ಮಧ್ಯೇ ನಾನಾನೈವೇದ್ಯವೇದನೈಃ ॥ ೮೩ ॥

ದಿಕ್ಪಾಲಾನಾಂ ಘಟೇಷ್ವೇವ ದಿಕ್ಪಾಲಾನಪಿ ಪೂಜಯೇತ್ ।
ಪೂರ್ವಂ ಬಹಿಃ ಸ್ಥಾಪಿತೇಷು ಗ್ರಹಾಣಾಂ ಕಲಶೇಷು ಚ ॥ ೮೪ ॥

ನವಗ್ರಹಾನ್ಪೂಜಯೇತ್ತು ಮಾತೃಮೂರ್ತೃಘಟೇಷು ಚ ।
ಸರ್ವೇ ದೇವಾ ಘಟೇ ಪೂಜ್ಯಾ ಘಟಾಸ್ತೇಷಾಂ ಪೃಥಕ್ ಪೃಥಕ್ ॥ ೮೫ ॥

ನವೈವ ತತ್ರ ಪೂರ್ವೋಕ್ತಾಃ ಸ್ಮೃತಾ ಮುಖ್ಯತಯಾ ನೃಪ ।
ಭಕ್ಷ್ಯೈರ್ಭೋಜ್ಯೈಶ್ಚ ಪೇಯೈಶ್ಚ ಪುಷ್ಪೈರ್ನಾನಾವಿಧೈಃ ಫಲೈಃ ॥ ೮೬ ॥

---

೮೨. ಆ ಕಲಶಗಳಲ್ಲಿ ಕ್ರಮವಾಗಿ ಬ್ರಹ್ಮ, ಶಂಕರ, ವಿಷ್ಣು ಇವರನ್ನು ಅರ್ಚಿಸಬೇಕು. ಅವರಲ್ಲಿಯೂ ಶಂಕರನನ್ನು ಮುಖ್ಯವಾಗಿ ಅರ್ಚಿಸಬೇಕು.

೮೩. ಪ್ರಾಸಾದಮಂತ್ರದಿಂದ ಶಂಭುವನ್ನೂ ತಂತ್ರದಿಂದ ಶಂಕರನನ್ನೂ, ಪೂಜಿಸಿ, ಮಧ್ಯ ಮಧ್ಯದಲ್ಲಿ ಅನೇಕಬಗೆಯ ನೈವೇದ್ಯಗಳನ್ನು ಅರ್ಪಿಸಬೇಕು.

೮೪-೮೫. ದಿಕ್ಪಾಲಕರ ಕಲಶಗಳಲ್ಲಿ ಆ ದಿಕ್ಪಾಲಕರನ್ನು ಪೂಜಿಸಬೇಕು. ಮೊದಲು ಹೊರಗೆ ಸ್ಥಾಪಿಸಿದ ಗ್ರಹಗಳ ಕಲಶಗಳಲ್ಲಿ ನವಗ್ರಹಗಳನ್ನು ಅರ್ಚಿಸಬೇಕು. ಮಾತೃದೇವತೆಯರನ್ನು ಅವರ ಕಲಶಗಳಲ್ಲಿ ಪೂಜಿಸಬೇಕು. ಎಲ್ಲಾ ದೇವತೆಗಳಿಗೂ ಬೇರೆಬೇರೆಯಾಗಿಯೇ ಕಲಶಗಳನ್ನು ಇಟ್ಟು ಅವುಗಳಲ್ಲಿಯೇ ದೇವತೆಗಳನ್ನೆಲ್ಲಾ ಪೂಜಿಸಬೇಕು. ಆದರೆ ಹಿಂದೆ ಹೇಳಿದ ಒಂಭತ್ತು ಕಲಶಗಳೇ ಮುಖ್ಯವಾದವು.

೮೬-೮೯. ಪುಷ್ಯಸ್ನಾನಕ್ಕಾಗಿ ದೇವತೆಗಳನ್ನು ಪೂಜಿಸುವ ಕಾಲದಲ್ಲಿ, ಅನೇಕ ಬಗೆಯ ಭಕ್ಷ್ಯಗಳು, ಪಾನಕಗಳು, ಹೂವುಗಳು, ವಿಧವಿಧವಾದ ಹಣ್ಣುಗಳು, ಗೋಧಿ ಪರಮಾನ್ನ ಇವುಗಳನ್ನೂ ನಿವೇದಿಸಬೇಕು. ಮಂಡಲದ ದಕ್ಷಿಣಭಾಗದಲ್ಲಿ ಹೋಮ

ಯಾವಕೈಃ ಪಾಯಸೈಶ್ಚೈವ ಯಥಾಸಂಭವಯೋಜಿತೈಃ ।
ಪುಷ್ಯಸ್ನಾನಾಯ ನೃಪತಿಃ ಪೂಜಯೇತ್ಸಕಲಾ ಸುರಾ ॥ ೮೭ ॥

ದಕ್ಷಿಣೇ ಮಂಡಲಸ್ಯಾಥ ಕುಂಡಂ ನಿರ್ಮಾಯ ಪಾಯಸೈಃ ।
ಸಮಿದ್ಭಿಃ ಶಾಲಿಸಿದ್ಧಾರ್ಥೈರ್ಘೃತೈರ್ದೂರ್ವಾಕ್ಷತೈಸ್ತಥಾ ॥ ೮೮ ॥

ಕೇವಲೈಶ್ಚ ತಥೈವಾಜ್ಯೈಃ ಪೂಜಿತಾ ಸಕಲಾ ಸುರಾ ।
ಹೋಮೇನ ತೋಷಯೇದ್ವೃದ್ಧೈಃ ನೃಪಃ ಸರ್ತ್ವಿಕ್ಪುರೋಹಿತಃ ॥ ೮೯ ॥

ಹೋಮಾಂತೇ ಮಂಡಲೋದೀಚ್ಯಾಂ ವೇದಿಕಾಯಾಂ ಸಪಟ್ಟಕಂ ।
ರೋಚನಾಖ್ಯಮಲಂಕಾರಾಂಸ್ತಥಾ ಸರ್ವಾನ್ನಿಯೋಜಯೇತ್ ॥ ೯೦ ॥

ವೃದ್ಧಾವಂಗುಲಮಂಗುಲ್ಯಾ ಷಡ್ವಿಂಶಾಂಗುಳಿಕಾವಧಿ ।
ವೃತ್ತಂ ವಾ ಚತುರಶ್ರಂ ವಾ ಪದ್ಮಂ ತ್ರಿಕೋಣಸಂಜ್ಞಕಂ ॥ ೯೧ ॥

ರತ್ನೇಶಾ ಪದ್ಮಮಧ್ಯೇ ತು ಗೋಮುಷ್ಟಿಕವಿನಾಯಕೈಃ ।
ಶ್ರೀಂ ಶ್ರೀವೃಕ್ಷಂ ವರಾರೋಹಾಮುಮಾದೇವೀಂ ಶುಭಾನ್ವಿತಾಂ ॥ ೯೨ ॥

ಕುಂಡವನ್ನು ನಿರ್ಮಿಸಿ, ಅಲ್ಲಿ ಪೂಜಿಸಿದ ದೇವತೆಗಳಿಗೆಲ್ಲರಿಗೂ ಪಾಯಸ, ಸಮಿತ್ತು, ತುಪ್ಪ, ಹರಿದ್ರಾನ್ನ, (ಹವಿಸ್ಸು) ಬಿಳಿಯ ಸಾಸವೆ, ದೂರ್ವಾಕ್ಷತೆಗಳಿಂದಲೂ ಅಥವಾ ಬರೀ ತುಪ್ಪದಿಂದಲೂ ಋತ್ವಕ್ಪುರೋಹಿತರೊಡನೆ ಹೋಮವನ್ನು ಮಾಡಬೇಕು.

೯೦. ಹೋಮವಾದಮೇಲೆ ಮಂಡಲದ ಉತ್ತರಭಾಗವಲ್ಲಿರುವ ವೇದಿಕೆಯಲ್ಲಿ ತಾಂಬೂಲ, ಗೋರೋಚನ ಮತ್ತು ಸಕಲ ಅಲಂಕಾರಗಳನ್ನೂ ಇರಿಸಬೇಕು.

೯೧. ಇಪ್ಪತ್ತಾರು ಅಂಗುಲ ಪ್ರಮಾಣವುಳ್ಳ ದುಂಡನೆಯ ಅಥವಾ ಚಚ್ಚೌಕವಾದ ಮಂಡಲಗಳನ್ನೂ, ಪದ್ಮವನ್ನೂ, ಅಥವಾ ತ್ರಿಕೋಣಮಂಡಲವನ್ನೂ, ಅಲ್ಲಿ ಬರೆಯಬೇಕು.

೯೨. ಪದ್ಮದ ಮಧ್ಯದಲ್ಲಿ ನವರತ್ನಗಳು, ಹಸು, ಶಂಖ, ಗಣೇಶ ಇವುಗಳನ್ನು ಬರೆಯಬೇಕು. ಉತ್ತಮ ಸ್ತ್ರೀಯಾದ ಲಕ್ಷ್ಮೀದೇವಿ, ಶ್ರೀವೃಕ್ಷ, ಮಂಗಳಪ್ರದಳಾದ ಪಾರ್ವತಿ ಇವರನ್ನೂ ಬರೆಯಬೇಕು.

ರತ್ನೈಃ ಸರ್ವೈರಲಂಕಾರೈಃ ಪಟ್ಟಂ ಕಾರ್ಯಂ ದ್ವಿಹಸ್ತಕಂ ।
ಹಸ್ತವಿಸ್ತಾರಮುಚ್ಛ್ರಾಯಂ ಸವಹಸ್ತಂ ದಶಾಂಗುಲಂ ॥ ೯೩ ॥

ಸ್ನಾನಾರ್ಥಂ ಸಾರ್ಧಹಸ್ತಂ ಚ ಪಟ್ಟಂ ವೃತ್ತಂ ಗುಣಾನ್ವಿತಂ ।
ಶಯ್ಯಾ ಚತುರ್ಗುಣಾ ದೀರ್ಘಾ ಧನುರ್ಮಾನಂ ತು ಪೀಠಕಂ ॥ ೯೪ ॥

ಗಜಸಿಂಹಕೃತಾಟೋಪಂ ಹೇಮರತ್ನವಿಭೂಷಿತಂ ।
ಸಿಂಹಾಖ್ಯಂ ಸಾರ್ಧವಿಸ್ತಾರಂ ದಂಡಾಸನಮಥಾಪಿ ವಾ ॥ ೯೫ ॥

ವ್ಯಾಘ್ರಚಿತ್ರಕಪಟ್ಟೈರ್ವಾ ಉಪಧಾನಾನಿ ಕಾರಯೇತ್ ।
ಅನ್ಯೈರ್ವಾ ನಿರ್ಮಿತೈಶ್ಚರ್ಮಮೃದುತೂಲಕಪೂರಿತಾ ॥ ೯೬ ॥

ಶಯ್ಯಾ ದೀರ್ಘಾರ್ಧವಿಸ್ತೀರ್ಣಾ ಚತುರ್ಹಸ್ತಾ ಸುಲಕ್ಷಣಾ ।
ವಿತಸ್ತ್ಯಧಿಕಮಿಚ್ಛಂತೀ ನೃಪಸ್ಯ ಗುರುವಿದ್ಯಯಾ ॥ ೯೭ ॥

೯೩-೯೪. ಸ್ನಾನಕ್ಕಾಗಿ ರತ್ನಗಳಿಂದಲೂ, ಇತರ ಅಲಂಕಾರಗಳಿಂದಲೂ ಮಾಡಿದ ಒಂದು ತೊಟ್ಟಿಯನ್ನು ನಿರ್ಮಿಸಬೇಕು. ಅದು ಎರಡು ಹಸ್ತಪ್ರಮಾಣ ಅಗಲವಾಗಿಯೂ, ಒಂದು ಹಸ್ತದಷ್ಟು ಆಳವಾಗಿಯೂ, ಒಂಭತ್ತು ಹಸ್ತ ಹತ್ತು ಅಂಗುಲದಷ್ಟು ಉದ್ದವಾಗಿಯೂ ಇರಬೇಕು. ಇದು ದುಂಡಾಗಿಯೂ, ಲಕ್ಷಣ ವಾಗಿಯೂ ಇರಬೇಕು. ಇದಕ್ಕಿಂತಲೂ ನಾಲ್ಕರಷ್ಟು ದೊಡ್ಡದಾಗಿರುವ ಶಯ್ಯೆ ಯೊಂದನ್ನು ರಚಿಸಿ ಅದರ ಮಧ್ಯದಲ್ಲಿ ಸುವರ್ಣ ರತ್ನಖಚಿತವಾಗಿಯೂ, ಗಜ, ಸಿಂಹ ಮೊದಲಾದ ಮೃಗಗಳ ಆಕೃತಿಯಿಂದ ಮನೋಹರವಾಗಿ ಅಲಂಕೃತವಾಗಿರುವ, ಧನು ರಾಕಾರವಾದ ಪೀಠವೊಂದನ್ನು ನಿರ್ಮಿಸಬೇಕು.

೯೫. ಆ ಸಿಂಹಪೀಠದ ಅರ್ಧದಷ್ಟು ಪ್ರಮಾಣವುಳ್ಳ ದಂಡಾಕಾರವಾದ ದಂಡಾ ಸನವನ್ನಾಗಲೀ ರಚಿಸಬಹುದು. ಹುಲಿಯಚರ್ಮ, ಇಲ್ಲವೇ ಚಿತ್ರವಾದ ಬಟ್ಟೆ, ಇವು ಗಳಿಂದ ಆ ಶಯ್ಯೆಗೆ ದಿಂಬುಗಳನ್ನು ನಿರ್ಮಿಸಿರಬೇಕು.

೯೬-೯೭. ಅಥವಾ ಮೃದುವಾದ ಬೇರೆ ಚರ್ಮ, ಪತ್ತಿ ಇವುಗಳಿಂದಲೂ ದಿಂಬುಗಳನ್ನು ಮಾಡಬಹುದು. ಆ ಶಯ್ಯೆಯು ನಾಲ್ಕು ಹಸ್ತ ಪ್ರಮಾಣವಾಗಿರ ಬೇಕು. ಉದ್ದದ ಅರ್ಧದಷ್ಟು ಅಗಲವಾಗಿರಬೇಕು ಅಥವಾ ಹನ್ನೆರಡು ಅಂಗುಲ ಅಗಲವಾಗಿರಬೇಕು.

ಅರ್ಧಚಂದ್ರಸಮಂ ಕುರ್ಯಾದಾಸನಂ ಚತುರಸ್ರಕಂ ।
ಉಪಧಾನಾನಿ ಶಯ್ಯಾಯಾಃ ಕರ್ಣಾದಿಮೂಲಭೇದತಃ ॥ ೯೮ ॥

ಷೋಡಶೈವಾತ್ರ ಕಾರ್ಯಾಣಿ ವರ್ಣಚಿತ್ರ್ಯಯುತಾನಿ ಚ ।
ಯಾನಂ ಸಿಂಹಾಸನಂ ಪಟ್ಟಂ ಶಯ್ಯೋಪಕರಣಾದಿಕಂ ॥ ೯೯ ॥

ರಾಜ್ಞೋ ನೂತನಯೋಗ್ಯಂ ತದ್ವೇದ್ಯಾ ಉತ್ತರತೋ ನ್ಯಸೇತ್ ।
ತೇಷಾಂ ತು ಪಶ್ಚಿಮೇ ಸ್ವರ್ಣರತ್ನೌಘಖಚಿತೇ ವರೇ ॥ ೧೦೦ ॥

ಪರ್ಯಂಕೇ ಯಜ್ಞದಾರ್ವೌಘನಿರ್ಮಿತೇ ಮಹದಾಸ್ತರೇ ।
ಊರ್ಧ್ವಾಚ್ಛಾದನಸಂಯುಕ್ತೇ ಚರ್ಮಾವೃತಚತುಷ್ಪಯೇ ॥ ೧೦೧ ॥

ವೃಷಭಸ್ಯ ತಥೋರ್ಣಾಯಾಃ ಸಿಂಹಶಾರ್ದೂಲಯೋರಪಿ ।
ಪಾದಪೀಠೇ ರತ್ನಯುತೇ ಪಾದಾವಾರೋಪ್ಯ ಪಾರ್ಥಿವಃ ॥ ೧೦೨ ॥

ತಸ್ಮಿನ್ ಪರ್ಯಂಕಪೀಠಸ್ಥೇ ಚರ್ಮಖಡ್ಗಚತುಷ್ಟಯೇ ।
ನಾನಾಲಂಕಾರಭೂಷಾಢ್ಯಂ ನೃಪತಿಂ ರತ್ನಶಾಲಿನಂ ॥ ೧೦೩ ॥

---

೯೮. ಅರ್ಧಚಂದ್ರಾಕಾರವನ್ನು ರಚಿಸಿ ಚತುಷ್ಕೋಣವಾದ ಆಸನವನ್ನು ರಚಿಸಬೇಕು. ಶಯ್ಯೆಗೆ ಚಿತ್ರವರ್ಣವುಳ್ಳ ಹದಿನಾರು ದಿಂಬುಗಳನ್ನು ರಚಿಸಬೇಕು.

೯೯. ಯಾನ, ಸಿಂಹಪೀಠ, ಪಟ್ಟ, ಶಯ್ಯಾ, ಅದರ ಉಪಕರಣ (ದಿಂಬು ಮೊದಲಾದವುಗಳು) ಇವುಗಳನ್ನು ವೇದಿಕೆಯ ಉತ್ತರಭಾಗದಲ್ಲಿರಿಸಬೇಕು. ಆವುಗಳನ್ನು ರಾಜನು ಮುಂದೆ ಹೊಸದಾಗಿ ಧರಿಸಬೇಕು.

೧೦೦-೧೦೩. ಆ ಆಸನಗಳ ಪಶ್ಚಿಮಭಾಗದಲ್ಲಿ ಚಿನ್ನ, ರತ್ನ, ಇವುಗಳಿಂದ ಖಚಿತವಾಗಿಯೂ, ಯಜ್ಞವೃಕ್ಷದಿಂದ ನಿರ್ಮಿತವಾಗಿಯೂ, ವಿಸ್ತಾರವಾಗಿಯೂ, ಮೇಲುಹೊದಿಕೆಯುಳ್ಳದುದೂ, ವೃಷಭ, ಉರ್ಣೆ, ಸಿಂಹ, ಹುಲಿ, ಇವುಗಳ ಚರ್ಮಗಳಿಂದ ಶೋಭಿಸುವುದೂ ಆಗಿರುವಂತಹ ಪೀಠವನ್ನು ರಚಿಸಿ ರಾಜನು ಅದರ ಪಾದ ಪೀಠದಲ್ಲಿ ಕಾಲುಗಳನ್ನಿಟ್ಟು ಮೇಲೇರಿ ಕುಳಿತುಕೊಳ್ಳಬೇಕು. ಇಂತಹ ನಾಲ್ಕುವಿಧ ಚರ್ಮಗಳಿಂದ ಅಲಂಕೃತವಾದ ಪರ್ಯಂಕದಲ್ಲಿ, ಸರ್ವಾಭರಣಗಳಿಂದ ಶೋಭಿಸುವ ರಾಜನನ್ನು ಅವನ ಖಡ್ಗಸಹಿತವಾಗಿ ಕುಳ್ಳಿರಿಸಿ, ರಾಜಪುರೋಹಿತನು ಬ್ರಾಹ್ಮಣರಿಂದೊಡಗೂಡಿ ಸ್ನಾನಮಾಡಿಸಬೇಕು.

ಸ್ನಾಪಯೇದ್ಬ್ರಾಹ್ಮಣೈಃ ಸಾರ್ಧಂ ರಾಜಾನಂ ಸುಖಸಂಗತಂ ।
ಸಂವೀತಕಂಬಲಂ ಹೃಷ್ಟಂ ಬಹುವಸ್ತ್ರೈಶ್ಚ ಶೋಭಿತಂ ॥ ೧೦೪ ॥

ಕಲಶೈರ್ಬಲಿಪುಷ್ಪಾದ್ಯೈಃ ಶಾಲಿಚೂರ್ಣೈಶ್ಚ ಸ್ನಾಪಯೇತ್ ।
ಅಷ್ಟೌ ಷೋಡಶ ವಿಂಶಾಷ್ಟಶತಮಷ್ಟಾಧಿಕಂ ಚ ವಾ ॥ ೧೦೫ ॥

ಕಲಶಾನಾಂ ಸಮಾಖ್ಯಾತಾ ಅಧಿಕಸ್ಯೋತ್ತರೋತ್ತರಂ ।
ಜಯಕಲ್ಯಾಣದೈರ್ಮಂತ್ರೈರ್ಮಂಗಲೋತ್ಥೈಶ್ಚ ಶಾಂಭವೈಃ ॥ ೧೦೬ ॥

ವೈಷ್ಣವೈರಥ ದಿಕ್ಪಾಲೈರ್ಗ್ರಹಮಂತ್ರೈಶ್ಚ ಮಾತೃಕೈಃ ।
ಆಜ್ಯಂ ತೇಜಸ್ಸಮುದ್ದಿಷ್ಟಮಾಜ್ಯಂ ಪಾಪಹರಂ ಪರಂ ॥ ೧೦೭ ॥

ಆಜ್ಯಂ ಸುರಾಣಾಮಾಹಾರಮಾಜ್ಯೇ ಲೋಕಾಃ ಪ್ರತಿಷ್ಠಿತಾಃ ।
ಭೌಮಾಂತರಿಕ್ಷಂ ದಿವ್ಯಂ ವಾ ಯತ್ತೇ ಕೆಲ್ಮಷಮಾಗತಂ ॥ ೧೦೮ ॥

---

೧೦೪. ಆಗ ರಾಜನು ಕಂಬಳಿ, ಪಟ್ಟಿ ವಸ್ತ್ರ ಮೊದಲಾದವುಗಳಿಂದ ಅಲಂಕೃತನಾಗಿ ಪೀಠದಲ್ಲಿ ಕುಳಿತಿರಬೇಕು. ಪುರೋಹಿತನೂ, ಬ್ರಾಹ್ಮಣರೂ ಸಹ ಕಲಶೋದಕಗಳಿಂದಲೂ, ಪುಷ್ಪ, ಶಾಲಿಚೂರ್ಣ ಇವುಗಳಿಂದಲೂ ಆ ರಾಜನಿಗೆ ಮಂತ್ರಪೂರ್ವಕವಾಗಿ ಸ್ನಾನಮಾಡಿಸಬೇಕು.

೧೦೫. ಸ್ನಾನಮಾಡಿಸುವ ಕಲಶಗಳ ಸಂಖ್ಯೆಯು ಎಂಟು, ಹದಿನಾರು, ಇಪ್ಪತ್ತೆಂಟು, ನೂರೆಂಟು ಅಥವಾ ಅದಕ್ಕಿಂತಲೂ ಅಧಿಕವಾಗಿಯೂ ಇರಬಹುದು. ಕಲಶಸಂಖ್ಯೆ ಹೆಚ್ಚಾಗಿದ್ದಷ್ಟೂ ಅಧಿಕಫಲವು ಲಭಿಸುವುದು.

೧೦೬. ಜಯಶಬ್ದ, ಮಂಗಳ ಶಬ್ದ, ವಿಷ್ಣು, ದಿಕ್ಪಾಲಕರು, ನವಗ್ರಹಗಳು ಇವರುಗಳು ಮಂತ್ರಗಳಿಂದಲೂ, ಮಾತೃಕೆಯರ ಮಂತ್ರಗಳಿಂದಲೂ ಸ್ನಾನಮಾಡಿಸಬೇಕು.

೧೦೭-೧೦೮. ಆಜ್ಯವೇ (ತುಪ್ಪವು) ತೇಜಸ್ಸು. ಅದು ತೇಜಸ್ಸನ್ನುಂಟುಮಾಡುವುದು, ಪಾಪವನ್ನು ನಾಶಮಾಡುವುದು. ಆಜ್ಯವನ್ನು ದೇವತೆಗಳು ಸೇವಿಸುವರು. ಆಜ್ಯದಲ್ಲಿಯೇ ಸಕಲ ಲೋಕಗಳೂ ನಿಂತಿರುವುವು. ಭೂಮಿಯಿಂದಲೂ, ಅಂತರಿಕ್ಷದಿಂದಲೂ ಮತ್ತು ದೇವತಾಪಚಾರನಿಮಿತ್ತವಾಗಿ ಯಾವಯಾವ ಪಾಪವು

ಸರ್ವಂ ತದಾಜ್ಯಸಂಸ್ಪರ್ಶಾತ್ಪ್ರಣಾಶಮುಪಗಚ್ಛತು ।
ತತೋ ಪಾನೀಯಗಾತ್ರಾತ್ತು ಕಂಬಲಂ ವಸ್ತ್ರಮೇವ ಚ ॥ ೧೦೯ ॥

ಕಲಶೈಃ ಸ್ನಾಪಯೇದ್ಭೂಪಂ ಪುಷ್ಯಸ್ನಾನಾಯ ಪೂರಿತೈಃ ।
ಏಭಿರ್ಮಂತ್ರೈರ್ನರಶ್ರೇಷ್ಠ ತನುತತ್ತ್ವಾರ್ಥಸಾಧಕೈಃ ॥ ೧೧೦ ॥

ಸುರಾಸ್ತ್ವಾಮಭಿಷಿಂಚಂತು ಯೇ ಚ ಸಿದ್ಧಾಃ ಪುರಾತನಾಃ ।
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಸಾಧ್ಯಾಶ್ಚ ಸಮರುದ್ಗಣಾಃ ॥ ೧೧೧ ॥

ಆದಿತ್ಯಾ ವಸವೋ ರುದ್ರಾ ಅಶ್ವಿನೌ ಯೌ ಭಿಷಗ್ವರೌ ।
ಅದಿತಿರ್ದೇವಮಾತಾ ಚ ಸ್ವಾಹಾ ಲಕ್ಷ್ಮೀಃ ಸರಸ್ವತೀ ॥ ೧೧೨ ॥

ಕೀರ್ತಿರ್ಲಕ್ಷ್ಮೀರ್ಧೃತಿಃ ಶ್ರೀಶ್ಚ ಸಿನೀವಾಲೀ ಕುಹೂಸ್ತಥಾ ।
ದಿತಿಶ್ಚ ಸುರಸಾ ಚೈವ ವಿನತಾ ಕದ್ರುರೇವ ಚ ॥ ೧೧೩ ॥

ನಿನಗೆ ಬಂದಿರುವುದೋ ಆದೆಲ್ಲವೂ ಈ ಆಜ್ಯದ ಸ್ಪರ್ಶದಿಂದ ನಾಶವನ್ನು ಹೊಂದಲಿ ಎಂದು ಹೇಳಿ, ಆಜ್ಯದಿಂದ ಸ್ನಾನಮಾಡಿಸಬೇಕು.

೧೦೯. ಬಳಿಕ, ರಾಜನು ಧರಿಸಿರುವ ಕಂಬಳಿ, ಮಿಕ್ಕ ವಸ್ತ್ರ ಇವುಗಳನ್ನು ತೆಗೆದು, ಪುಷ್ಯಸ್ನಾನಕ್ಕೋಸ್ಕರ ಜಲವನ್ನು ತುಂಬಿ ಇರಿಸಿದ ಕಲಶಗಳಿಂದ ರಾಜನಿಗೆ ಸ್ನಾನಮಾಡಿಸಬೇಕು.

೧೧೦. ಎಲೈ ನರೋತ್ತಮನೆ! ಬಳಿಕ ಶರೀರವನ್ನು ಶುದ್ಧಿಗೊಳಿಸುವ ಈ ಮುಂದೆ ಹೇಳುವ ಮಂತ್ರಗಳಿಂದ ಅಭಿಷೇಕಮಾಡಿಸಬೇಕು.

೧೧೧. ದೇವತೆಗಳು ನಿನ್ನನ್ನು ಅಭಿಷೇಕಮಾಡಲಿ ಮತ್ತು ಅನಾದಿ ಸಿದ್ಧರು, ಬ್ರಹ್ಮ, ವಿಷ್ಣು, ರುದ್ರರು, ಸಾಧ್ಯರು, ವಾಯುಗಳು ಇವರೂ ನಿನಗೆ ಸ್ನಾನಮಾಡಿಸಲಿ.

೧೧೨. ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರು, ದೇವವೈದ್ಯರಾದ ಅಶ್ವಿನೀದೇವತೆಗಳು, ದೇವಮಾತೆಯಾದ ಅದಿತಿಯು, ಸ್ವಾಹಾದೇವೀ, ಲಕ್ಷ್ಮೀದೇವೀ, ಸರಸ್ವತೀ ಇವರೂ ನಿನಗೆ ಅಭಿಷೇಕಮಾಡಲಿ.

೧೧೩-೧೧೪. ಕೀರ್ತಿ, ಲಕ್ಷ್ಮೀ, ಧೃತಿ, ಶ್ರೀದೇವೀ, ಸಿನೀವಾಲೀ(ಪೂರ್ಣಿಮಾ) ಕುಹೂ (ಅಮಾವಾಸ್ಯೆ) ದಿತಿ, ಸುರಸಾದೇವಿ, ವಿನತೆ, ಕದ್ರುದೇವಿ, ಇವರೂ ಎಲ್ಲಾ

ದೇವಪತ್ನ್ಯಶ್ಚ ಯಾಃ ಪ್ರೋಕ್ತಾ ದೇವಮಾತರ ಏವ ಚ ।
ಸರ್ವಾಸ್ತ್ವಾಮಭಿಷಿಂಚಂತು ಸಿದ್ಧಾಶ್ಚಾಪ್ಸರಸಾಂ ಗಣಾಃ ॥ ೧೧೪ ॥

ನಕ್ಷತ್ರಾಣಿ ಮುಹೂರ್ತಾಶ್ಚ ಪಕ್ಷಾಹೋರಾತ್ರಿಸಂಧಯಃ ।
ಸಂವತ್ಸರಾ ನಿಮೇಷಾಶ್ಚ ಕಲಾಃ ಕಾಷ್ಠಾಃ ಕ್ಷಣಾ ಲವಾಃ ॥ ೧೧೫ ॥

ಸರ್ವೇ ತ್ವಾಮಭಿಷಿಂಚಂತುಕಾಲಸ್ಯಾವಯವಾಸ್ತಥಾ ।
ವೈಮಾನಿಕಾಃ ಸುರಗಣಾ ಮನವಃ ಸಾಗರೈಃ ಸಹ ॥ ೧೧೬ ॥

ಸರಿತಶ್ಚ ಮಹಾನಾಗಾ ನಾಗಾಃ ಕಿಂಪುರುಷಾಸ್ತಥಾ ।
ವೈಖಾನಸಾ ಮಹಾಭಾಗಾ ದ್ವಿಜಾ ವೈಹಾಯಸಾಶ್ಚ ಯೇ ॥ ೧೧೭ ॥

ಸಪ್ತರ್ಷಯಃ ಸದಾರಾಶ್ಚ ಧ್ರುವಸ್ಥಾನಾನಿ ಯಾನಿ ತು ।
ಮರೀಚಿರತ್ರಿಃ ಪುಲಹಃ ಪುಲಸ್ತ್ಯಃ ಕ್ರತುರಂಗಿರಾಃ ॥ ೧೧೮ ॥

ಭೃಗುಃ ಸನತ್ಕುಮಾರಶ್ಚ ಸನಕಶ್ಚ ಸನಂದನಃ ।
ಸನಾತನಶ್ಚ ದಕ್ಷಶ್ಚ ಜೈಗೀಷವ್ಯೋಽಭಿನಂದನಃ ॥ ೧೧೯ ॥

ದೇವಪತ್ನಿಯರೂ, ದೇವಮಾತೆಯರೂ, ಸಿದ್ಧರೂ, ಅಪ್ಸರೆಯರೂ ನಿನಗ ಅಭಿಷೇಕ ಮಾಡಿಸಲಿ.

೧೧೫. ನಕ್ಷತ್ರಗಳು, ಮುಹೂರ್ತ, ಪಕ್ಷ, ಹಗಲು, ರಾತ್ರಿಗಳು, ಸಂಧ್ಯಾಕಾಲಗಳು, ವರ್ಷ, ನಿಮೇಷ, ಕಲೆಗಳು (ಗಳಿಗೆ,) ಕಾಷ್ಠಾ, ಕ್ಷಣ, ಲವ, ಈ ಕಾಲದ ಅವಯವಗಳೂ ನಿನಗೆ ಶುಭಾಭಿಷೇಕವನ್ನುಂಟುಮಾಡಲಿ.

೧೧೬. ವಿಮಾನಚಾರಿಗಳಾದ ದೇವತೆಗಳು, ಚತುರ್ದಶಮನುಗಳು, ಸಮುದ್ರ ಮತ್ತು ನದಿಗಳು, ಮಹಾಸರ್ಪಗಳು, ಸರ್ಪಗಳು, ಕಿನ್ನರರು ಇವರೂ ನಿನಗೆ ಶುಭ ಸ್ನಾನವನ್ನು ಮಾಡಿಸಲಿ.

೧೧೭. ಮಹಾತಪಸ್ವಿಗಳಾದ ವೈಖಾನಸರು, ಆಕಾಶದಲ್ಲಿ ಸಂಚರಿಸಬಲ್ಲ ಬ್ರಾಹ್ಮಣೋತ್ತಮರು, ಸಪ್ತಋಷಿಗಳು, ಅವರ ಪತ್ನಿಯರು, ಧ್ರುವಸ್ಥಾನಗಳು ಇವುಗಳೆಲ್ಲವೂ ನಿನಗೆ ಅಭಿಷೇಕಮಾಡಿಸಲಿ.

೧೧೮-೧೧೯. ಮರೀಚಿ, ಬ್ರಹ್ಮ, ಅತ್ರಿ, ಪುಲಹ, ಪುಲಸ್ತ್ಯ, ಕ್ರತು, ಅಂಗಿರಸ್ಸು, ಭೃಗು, ಸನತ್ಕುಮಾರ, ಸನಕ, ಸನಾತನ, ಸನಂದನ, ದಕ್ಷಬ್ರಹ್ಮ, ಜೈಗೀಷವ್ಯಮುನಿ, ಅಭಿನಂದನ, ಇವರೂ ನಿನಗೆ ಮಂಗಳಸ್ನಾನವನ್ನುಂಟುಮಾಡಲಿ.

ಏಕತಶ್ಚ ದ್ವಿತಶ್ಚೈವ ತ್ರಿತೋ ಜಾಬಾಲಿಕಾಶ್ಯಪೌ ।
ದೂರ್ವಾಸಾ ದುರ್ವಿನೀತಶ್ಚ ಕಣ್ವಃ ಕಾತ್ಯಾಯನಸ್ತಥಾ ॥ ೧೨೦ ॥

ಮಾರ್ಕಾಂಡೇಯೋ ದೀರ್ಘತಪಾಃ ಶುನಃಶೇಫೋ ವಿದೂರಥಃ ।
ಔರ್ವಃ ಸಂವರ್ತಕಶ್ಚೈವ ಚ್ಯವನೋಽತ್ರಿಃ ಪರಾಶರಃ ॥ ೧೨೧ ॥

ದ್ವೈಪಾಯನೋ ಯವಕ್ರೀತೋ ದೇವರಾತಃ ಸಹಾತ್ಮಜಃ ।
ಏತೇ ಚಾನ್ಯೇ ಚ ಬಹವೋ ವೇದವ್ರತಪರಾಯಣಾಃ ॥ ೧೨೨ ॥

ಸಶಿಷ್ಯಾಸ್ತೇಽಭಿಷಿಂಚಂತು ಸದಾರಾಶ್ಚ ತಪೋಧನಾಃ ।
ಪರ್ವತಾಸ್ತರವೋ ನದ್ಯಃ ಪುಣ್ಯಾನ್ಯಾಯತನಾನಿ ಚ ॥ ೧೨೩ ॥

ಪ್ರಜಾಪತಿಃ ಕ್ಷಿತಿಶ್ಚೈವ ಗಾವೋ ವಿಶ್ವಸ್ಯ ಮಾತರಃ ।
ವಾಹನಾನಿ ಚ ದಿವ್ಯಾನಿ ಸರ್ವೇ ಲೋಕಾಶ್ಚರಾಚರಾಃ ॥ ೧೨೪ ॥

---

೧೨೦. ಏಕತಮುನಿ, ದ್ವಿತಮುನಿ, ತ್ರಿತಮುನಿ, ಜಾಬಾಲಿ, ಕಾಶ್ಯಪರು, ದೂರ್ವಾಸಮುನಿ, ದುರ್ವಿನೀತ, ಕಣ್ವಮುನಿ, ಕಾತ್ಯಾಯನ ಇವರೂ ನಿನ್ನನ್ನು ಅಭಿಷೇಕಮಾಡಿಸಲಿ.

೧೨೧. ಮಹಾತಪಸ್ವಿಯಾದ ಮಾರ್ಕಂಡೇಯ, ಶುನಃಶೇಫ, ವಿದೂರಥ, ಔರ್ವಮುನಿ, ಸಂವರ್ತಕ, ಚ್ಯವನ, ಅತ್ರಿ, ಪರಾಶರ ಇವರೂ ನಿನ್ನನ್ನು ಸ್ನಾನಮಾಡಿಸಲಿ.

೧೨೨. ದ್ವೈಪಾಯನಮುನಿ, (ವ್ಯಾಸ) ಯವಕ್ರೀತ, ದೇವರಾತಮುನಿ ಅವನ ಪುತ್ರರು, ಈ ಎಲ್ಲಾ ವೇದ ಮತ್ತು ತಪಸ್ಸುಗಳಲ್ಲಿ ನಿಷ್ಣಾತರಾದ ಮುನಿಗಳೂ, ಮಿಕ್ಕವರೂ ಸಹ ತಮ್ಮ ಶಿಷ್ಯರೊಂದಿಗೂ ಪತ್ನಿಯರೊಂಎಗೂ ನಿನಗೆ ಮಂಗಳಾಭಿಷೇಕವನ್ನುಂಟುಮಾಡಲಿ.

೧೨೩. ಪರ್ವತಗಳು, ವೃಕ್ಷಗಳು, ನದಿಗಳು, ಪುಣ್ಯಕ್ಷೇತ್ರಗಳು, ಪ್ರಜಾಪತಿ, ಭೂದೇವಿ, ಲೋಕಮಾತೆಯರಾದ ಗೋವುಗಳೂ ನಿನಗೆ ಮಂಗಳ ಪೌಷ್ಯಸ್ನಾನವನ್ನು ಮಾಡಿಸಲಿ.

೧೨೪-೧೨೫. ದಿವ್ಯವಾಹನಗಳು, ಸಕಲ ಲೋಕಗಳು, ಸ್ಥಾವರಜಂಗಮ ಪ್ರಾಣಿಗಳು, ಅಗ್ನಿಗಳು, ಪಿತೃದೇವತೆಗಳು, ತಾರೆಗಳು, ಮೇಘಗಳು, ಆಕಾಶ, ದಿಕ್ಕು

ಅಗ್ನಯಃ ಪಿತರಸ್ತಾರಾ ಜೀಮೂತಾಃ ಖಂದಿಶೋ ಜಲಂ ।
ಏತೇ ಚಾನ್ಯೇ ಚ ಬಹವಃ ಪುಣ್ಯಸಂಕೀರ್ತನಾಃ ಶುಭಾಃ ॥ ೧೨೫ ॥

ತೋಯೈಸ್ತ್ವಾಮಭಿಷಿಂಚಂತು ಸರ್ವೋತ್ಪಾತನಿಬರ್ಹಣೈಃ ।
ಇತ್ಯೇವಂ ಶುಭದೈರೈತೈರ್ದಿವ್ಯೈರ್ಮಂತ್ರೈಸ್ತಥಾಪರೈಃ ॥ ೧೨೬ ॥

ಸೌರೈರ್ನಾರಾಯಣೈ ರೌದ್ರೈರ್ಬ್ರಹ್ಮಶಕ್ರಸಮುದ್ಭವೈಃ ।
ಆಪೋಹಿಷ್ಠಾ ಹಿರಣ್ಯೇತಿ ಸಂಭವೇತಿ ಸುರೇತಿ ಚ ॥ ೧೨೭ ॥

ಮಾನಸ್ತೋಕೇತಿ ಮಂತ್ರೇಣ ಗಂಧದ್ವಾರೇತ್ಯನೇನ ಚ ।
ಸರ್ವಮಂಗಳಮಾಂಗಲ್ಯೇ ಶ್ರೀಶ್ಚತೇ ಗ್ರಹಯೋಗಿಭಿಃ ॥ ೧೨೮ ॥

ಇತ್ಯೇವಂ ಸ್ನಾನಮಾಸಾದ್ಯ ಗಾತ್ರಮಾವೃತ್ಯ ಕೆಂಬಲೈಃ ।
ಸರ್ವಮಂಗಳಮಂತ್ರೇಣ ವಸ್ತ್ರಂ ಕಾರ್ಪಾಸಕಂ ಧ್ರಿಯಾತ್ ॥ ೧೨೯ ॥

ಗಳು, ಜಲವು, ಈ ಎಲ್ಲಾ ಪವಿತ್ರವಸ್ತುಗಳೂ, ಮಂಗಳರೂಪಗಳೂ ಆವಂತಹ ವಸ್ತುಗಳೂ, ಸಕಲ ಅನಿಷ್ಟವನ್ನೂ ನಾಶಗೊಳಿಸುವ ಜಲಗಳಿಂದ ನಿನಗೆ ಪುಷ್ಯಾಭಿಷೇಕವನ್ನು ಮಾಡಿಸಲಿ.

೧೨೬. ಈರೀತಿಯಾಗಿ ಮಂಗಳಕರವೂ ದಿವ್ಯವೂ ಆದ ಈ ಮಂತ್ರಗಳಿಂದಲೂ ಸೌರಸೂಕ್ತ, ವಿಷ್ಣುಸೂಕ್ತ, ರುದ್ರಸೂಕ್ತ, ಇಂದ್ರಮಂತ್ರ, ಇವುಗಳಿಂದಲೂ ರಾಜನಿಗೆ ಅಭಿಷೇಕಮಾಡಿಸಬೇಕು.

೧೨೭-೧೨೮. ಮತ್ತು ಆಪೋಹಿಷ್ಠಾ, ಹಿರಣ್ಯವರ್ಣಾಃ, ಸಂಭವ, ಸುರಾಸ್ತ್ವಾಂ. ಮಾನಸ್ತೋಕೆ, ಗಂಧದ್ವಾರಾಂ, ಸರ್ವಮಂಗಳಮಾಂಗಲ್ಯೆ, ಶ್ರೀಶ್ಚತೆ ಲಕ್ಷ್ಮ್ಯೀಃ, ಈ ಮಂತ್ರಗಳಿಂದಲೂ, ನವಗ್ರಹಮಂತ್ರಗಳಿಂದಲೂ, ಅಭಿಷೇಕವನ್ನು ಮಾಡಿಸಬೇಕು.

೧೨೯. ಹೀಗೆ ಸ್ನಾನಮಾಡಿ ಕಂಬಳಿಯನ್ನು ಪೊದ್ದುಕೊಂಡು " ಸರ್ವಮಂಗಳ ಮಾಂಗಲ್ಯೆ " ಎಂಬ ಮಂತ್ರದಿಂದ ಶುದ್ಧವಾದ ನೂಲಿನಬಟ್ಟೆಯನ್ನು ಧರಿಸಿ ಆಚಮನ ಮಾಡಿ ಬಳಿಕ ದೇವತೆಗಳು, ಗುರುಗಳು, ಬ್ರಾಹ್ಮಣರು ಇವರನ್ನು ಪೂಜಿಸಬೇಕು.

ಆಚಮ್ಯ ಚ ತತೋ ದೇವಾ೯ ಗುರುಂ ವಿಪ್ರಾಂಶ್ಚ ಪೂಜಯೇತ್ ।
ಧ್ವಜಂ ಛತ್ರಂ ಚಾಮರಂ ಚ ಘಂಟಾಂ ಚಾಶ್ವಾ೯ ಗಜಾಂಸ್ತಥಾ ॥ ೧೩೦ ॥

ಮಂತ್ರಂ ಜಪ್ತ್ವಾ ಧಾರಯೇತ್ತು ತತೋ ಗಚ್ಛೇದ್ಧುತಾಶನಂ ।
ತತ್ರ ಗತ್ವಾ ವಹ್ನಿಮಧ್ಯೇ ವಹ್ನೇಃ ಶ್ರೀರ್ವೀಕ್ಷ್ಯ ಪಾರ್ಥಿವಃ ॥ ೧೩೧ ॥

ಸುನಿಮಿತ್ತಾನಿಮಿತ್ತಾನಿ ಲಕ್ಷಯೇತ್ತತ್ರ ಬಿಂದುಭಿಃ ।
ದೈವಜ್ಞಕಂಚುಕ್ಯಮಾತ್ಯವಂದಿಪೌರಜನೈರ್ವೃತಃ ॥ ೧೩೨ ॥

ವಾದಿತ್ರಘೋಷೈಸ್ತುಮುಲೈಸ್ತಥಾ ತೌರ್ಯತ್ರಿಕೈಃ ಶುಭೈಃ ।
ಕೃತ್ವಾ ಶೇಷೇ ಪುನಃ ಶಾಂತಿಮಾಶೀರ್ವಾಚ್ಯ ಚ ವೈ ದ್ವಿಜಾ೯ ॥ ೧೩೩ ॥

ಪೂರ್ಣಂ ವಿಧಾಯ ವಿಧಿವದ್ದಕ್ಷಿಣಾಂ ಕನಕಾನ್ವಿತಾಂ ।
ಧಾನ್ಯಾನಿ ಚಾಥ ವಾಸಾಂಸಿ ದತ್ವಾ ಕುರ್ಯಾದ್ವಿಸರ್ಜನಂ ॥ ೧೩೪ ॥

---

೧೩೦. ಆಮೇಲೆ ಧ್ವಜ, ಛತ್ರ, ಚಾಮರ, ಘಂಟೆ, ಆನೆ, ಕುದುರೆ, ಇವುಗಳ ಮಂತ್ರವನ್ನು ಚ್ಚರಿಸಿ ಪೂಜಿಸಿ, ಅವುಗಳೊಡನೆ ಯಜ್ಞೇಶ್ವರ (ಅಗ್ನಿ) ನ ಬಳಿಗೆ ಹೋಗಬೇಕು.

೧೩೧. ಅಗ್ನಿಯ ಬಳಿಗೆ ಹೋಗಿ ಅದರ ಮಧ್ಯದಲ್ಲಿ ಅಗ್ನಿಯ ತೇಜಸ್ಸನ್ನು ನೋಡುತ್ತಾ ಅಲ್ಲಿ ಆಗುವಂತಹ ಶುಭ ಮತ್ತು ಅಶುಭ ನಿಮಿತ್ತಗಳನ್ನು ನೋಡ ಬೇಕು.

೧೩೨. ಜೋಯಿಸ, ಕಂಚುಕಿ, ಮಂತ್ರಿಗಳು, ವಂದಿ, ಪುರಜನ ಇವರು ಗಳಿಂದ ಕೂಡಿ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು, ನೃತ್ಯಗೀತಗಳಿಂದಪೂ, ಸ್ತುತಿಪಾಠಗಳಿಂದಲೂ ಸೇವಿತನಾಗಿ, ಶುಭಾಶುಭನಿಮಿತ್ತಗಳನ್ನು ನೋಡಿ, ಶಾಂತಿ ಯನ್ನು ಮಾಡಬೇಕು.

೧೩೩-೧೩೪. ಬಳಿಕ ಬ್ರಾಹ್ಮಣರಿಂದ ಆಶೀರ್ವಚನವನ್ನು ಪಡೆದು, ಕರ್ಮ ವನ್ನು ಸಮಾಪ್ತಿಗೊಳಿಸಿ, ಬ್ರಾಹ್ಮಣರಿಗೆ ಸುವರ್ಣ, ಧಾನ್ಯಗಳು ಅಥವಾ ವಸ್ತ್ರಾದಿ ಗಳನ್ನು ದಕ್ಷಿಣೆಯಾಗಿ ಕೊಟ್ಟು, ಅವರನ್ನು ತೃಪ್ತಿಪಡಿಸಿ ಕಳುಹಿಸಬೇಕು.

ತತಃ ಶೇಷಜಲೈಃ ಸರ್ವಾನಮಾತ್ಯಾದೀ೯ ಪುರೋಹಿತಃ ।
ಸೇಚಯೇಚ್ಚತುರಂಗಂ ಚ ಬಲಂ ಚಾಪಿ ಸರಾಷ್ಟ್ರಕಂ ॥ ೧೩೫ ॥

ಏವಂ ಕೃತ್ವಾ ನೃಪಃ ಪಶ್ಚಾತ್ತ್ರಿರಾತ್ರಂ ಸಂಯತೋ ಭವೇತ್ ।
ಮಾಂಸಮೈಥುನಹೀನಂ ಚ ಕುರ್ಯಾನ್ನಾಂಗಲ್ಯಸೇವನಂ ॥ ೧೩೬ ॥

ಪುಷ್ಯನಕ್ಷತ್ರಯುಕ್ತಾ ತು ತೃತೀಯಾ ಯದಿ ಲಭ್ಯತೇ ।
ತಸ್ಯಾಂ ಪೂಜ್ಯಾ ಮಹಾದೇವೀ ಚಂಡಿಕಾ ಶಂಕರೇಣ ಹಿ ॥ ೧೩೭ ॥

ಪಾಂಚಾಲಿಕಾವಿಹಾರಾದ್ಯೈಃ ಶಿಶೂನಾಂ ಕೌತುಕೈಸ್ತಥಾ ।
ವೈವಾಹಿಕೇನ ವಿಧಿನಾ ಮೋಹಯೇಚ್ಚಂಡಿಕೇಶ್ವರೀಂ ॥ ೧೩೮ ॥

ಚತುಷ್ಪಥೇಷು ಸರ್ವೇಷು ದೇವದೇವೀಗೃಹೇಷು ಚ ।
ಪತಾಕಾಭಿರಲಂಕುರ್ಯಾದೇವಂ ಕುರ್ವನ್ನ ಸೀದತಿ ॥ ೧೩೯ ॥

---

೧೩೫. ಆಮೇಲೆ ಉಳಿದ ಕಲಶಜಲಗಳಿಂದ ಮಂತ್ರಿ ಮೊದಲಾದವರು, ಚತುರಂಗಸೈನ್ಯ, ಮಿಕ್ಕ ಪುರಜನರು ಇವರೆಲ್ಲರಿಗೂ ಪುರೋಹಿತನು ಪ್ರೋಕ್ಷಣೆಯನ್ನು ಮಾಡಬೇಕು.

೧೩೬. ಹೀಗೆ ಮಾಡಿ, ರಾಜನು ಬಳಿಕ ಮೂರು ರಾತ್ರಿ ನಿಯಮದಿಂದಿರಬೇಕು. ಸ್ತ್ರೀಸಂಗ, ಮಾಂಸಭೋಜನ ಇವುಗಳನ್ನು ಬಿಟ್ಟು ಕೇವಲ ಸಾತ್ತ್ವಿಕಾಹಾರವನ್ನು ಸೇವಿಸಬೇಕು.

೧೩೭. ಪುಷ್ಯನಕ್ಷತ್ರವುಳ್ಳ ತದಿಗೆಯು ಯಾವಾಗ ಬರುವುದೋ ಅಂದು ಮಹಾದೇವಿಯಾದ ಚಂಡಿಕೆಯನ್ನು ಶಂಕರನೊಡನೆ ಪೂಜಿಸಬೇಕು.

೧೩೮. ಗೊಂಬೆಯ ಆಟ, ಶಿಶುಗಳ ವಿಹಾರ, ಕೃತಕವಾದ ಮದುವೆ ಇವುಗಳಿಂದ ಚಂಡಿಕಾದೇವಿಯನ್ನು ಸಂತೋಷಗೊಳಿಸಬೇಕು.

೧೩೯. ನಾಲ್ಕು ರಸ್ತೆಗಳು ಸೇರುವ ಚೌಕಗಳು, ದೇವಾಲಯಗಳು, ಅರಮನೆ, ಅಂತಃಪುರ, ಇವುಗಳಮೇಲೆ ಧ್ವಜವನ್ನು ಹಾರಿಸಬೇಕು. ಹೀಗೆ ಮಾಡಿದರೆ ರಾಜನು ಅಭಿವೃದ್ಧಿಯನ್ನು ಹೊಂದುವನು.

ಏವಂ ಕೃತ್ವಾ ಶಾಂತಿಯೋಗಂ ತಥಾ ಪುಷ್ಯಾಭಿಷೇಚನಂ ।
ಚತುರಂಗೈಃ ಸಮಂ ರಾಜಾ ಭಾರ್ಯಾಭಿಸ್ತನಯೈಃ ಸಹ ॥ ೧೪೦ ॥

ರಾಜ್ಯಮಂಡಲಸಂಯುಕ್ತಃ ಪರತ್ರೇಹ ನ ಸೀದತಿ ।
ನಾತಃ ಪರತರೋ ಯಜ್ಞೋ ನಾತಃ ಪರತರೋತ್ಸವಃ ॥ ೧೪೧ ॥

ನಾತಃ ಪರತರಾ ಶಾಂತಿರ್ನಾತಃ ಪರತರಂ ಶಿವಂ ।
ಅನೇನೈವ ವಿಧಾನೇನ ನೃಪತೇರಭಿಷೇಚನಂ ॥ ೧೪೨ ॥

ಯೌವರಾಜ್ಯಾಭಿಷೇಕಂ ಚ ಕುರ್ಯಾದ್ರಾಜಪುರೋಹಿತಃ ।
ನೃಪಾಭಿಷೇಕಕರಣಮಾದೌ ಯದಿ ಸಮಾಚರೇತ್ ॥ ೧೪೩ ॥

ಅನೇನೈವ ವಿಧಾನೇನ ಸ್ಥಿರಃ ಸ್ಯಾನ್ನೃಪತಿಸ್ತದಾ ।

---

೧೪೦. ಹೀಗೆ ಶಾಂತಿಕರ್ಮವನ್ನೂ ಪುಷ್ಯಸ್ನಾನವನ್ನೂ ಮಾಡಿದ ರಾಜನು ಇಹಲೋಕವಲ್ಲಿ ಚತುರಂಗಸೈನ್ಯ, ಪತ್ನೀಪುತ್ರರಿಂದ ಕೂಡಿದವನಾಗಿ ವಿಜಯವನ್ನು ಪಡೆಯುವನು. ಪರದಲ್ಲಿ ಉತ್ತಮಗತಿಯನ್ನೈದುವನು.

೧೪೧. ಇದಕ್ಕಿಂತಲೂ ಉತ್ತಮವಾದ ಯಜ್ಞವಿಲ್ಲ. ಉತ್ಸವವಿಲ್ಲ. ಶಾಂತಿಯಿಲ್ಲ. ಇದಕ್ಕಿಂತಲೂ ಉತ್ತಮವಾವ ಮಂಗಳವಿಲ್ಲ.

೧೪೨. ಇದೇ ವಿಧಿಯಿಂದಲೇ ರಾಜಪುರೋಹಿತನು ರಾಜನಿಗೂ, ಯುವರಾಜನಿಗೂ ಅಭಿಷೇಕವನ್ನು ಮಾಡಿಸಬೇಕು.

೧೪೩. ಇದೇ ವಿಧಿಯಿಂದಲೇ ರಾಜನಿಗೆ ರಾಜ್ಯಾಭಿಷೇಕವನ್ನು ಮಾಡಿದರೆ ಆ ರಾಜನು ಬಹಳಕಾಲ ಬದುಕುವನು.

೧೪೪. ಈ ಯಜ್ಞ (ಕರ್ಮ) ವನ್ನು ಬ್ರಹ್ಮದೇವನು ಹಿಂದೆ ಇಂದ್ರನಿಗಾಗಿ

ಅಯಂ ಯಜ್ಞಃ ಸಮುದ್ದಿಷ್ಟಃ ಶಕ್ರಾರ್ಥಂ ಬ್ರಹ್ಮಣಾ ಪುರಾ।
ಏವಂ ಯಜ್ಞಂ ನೃಪಃ ಕೃತ್ವಾ ಪರತ್ರೇಹ ನ ಸೀದತಿ। ॥ ೧೪೪ ॥

॥ ಇತಿ ಶ್ರೀಕಾಲಿಕಾಪುರಾಣೇ ಏಕೋನನವತಿತಮೋಽಧ್ಯಾಯಃ ॥

ಹೇಳಿರುವನು. ಈರೀತಿಯಾಗಿ ಯಜ್ಞವನ್ನು ಮಾಡಿದ ರಾಜನು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸಿದ್ಧಿಯನ್ನು ಪಡೆದು, ಸುಖದಿಂದಿರುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಂಭತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ನವತಿತಮೋಽಧ್ಯಾಯಃ ॥

॥ ಔರ್ವ ಉವಾಚ ॥

ಅಥಾತಃ ಶೃಣು ರಾಜೇಂದ್ರ ಶಕ್ರೋತ್ಥಾನಂ ಧ್ವಜೋತ್ಸವಂ ।
ಯತ್ಕೃತ್ವಾ ನೃಪತಿರ್ಯಾತಿ ನ ಕದಾಪಿ ಪರಾಭವಂ ॥ ೧ ॥

ರವೌ ಹರಿಸ್ಥೇ ದ್ವಾದಶ್ಯಾಂ ಶ್ರವಣೇನ ಬಿಡೌಜಸಂ ।
ಆರಾಧಯೇನ್ನೃಪಃ ಸಮ್ಯಕ್ಸರ್ವವಿಘ್ನೋಪಶಾಂತಯೇ ॥ ೨ ॥

ರಾಜೋಪರಿಚರೋ ನಾಮ ವಸುನಾಮಾ ಪರಸ್ತು ಯಃ ।
ನೃಪಸ್ತೇನಾಯಮತುಲೋ ಯಜ್ಞಃ ಪ್ರಾವರ್ತಿತಃ ಪುರಾ ॥ ೩ ॥

ತೊಂಭತ್ತನೆಯ ಅಧ್ಯಾಯ.

೧. ಔರ್ವಮುನಿಯು ಹೇಳಿದನು:—ಎಲೈ ರಾಜೇಂದ್ರನೇ! ಈಗ ಇಂದ್ರನಿಗೆ ಪ್ರಿಯವಾದ ಧ್ವಜೋತ್ಸವಕ್ರಮವನ್ನು ಹೇಳುವೆನು, ಕೇಳು. ಅದನ್ನು ಮಾಡಿದರೆ ರಾಜನಿಗೆ ಎಂದೆಂದಿಗೂ ಅಪಜಯವುಂಟಾಗುವುದಿಲ್ಲ.

೨. ಸೂರ್ಯನು ಸಿಂಹರಾಶಿಯಲ್ಲಿರುವಾಗ ಶ್ರವಣನಕ್ಷತ್ರದಿಂದ ಕೂಡಿದ ದ್ವಾದಶಿಯಲ್ಲಿ ಇಂದ್ರನನ್ನು ಸಕಲ ವಿಘ್ನಗಳ ನಿವಾರಣೆಗಾಗಿ ರಾಜನಾದವನು ಆರಾಧಿಸಬೇಕು.

೩. ಹಿಂದೆ ಉಪರಿಚರನೆಂಬ ರಾಜನಿದ್ದನು. ಅವನಿಗೆ ವಸುವೆಂದು ಇನ್ನೊಂದು ಹೆಸರೂ ಇದ್ದಿತು. ಆ ರಾಜನು ಈ ಯಜ್ಞ (ಇಂದ್ರೋತ್ಸವ) ವನ್ನು ಮಾಡಲು ಪ್ರಾರಂಭಿಸಿದನು. ಆಗಿನಿಂದಲೂ ಇದು ನಡೆದುಬರುತ್ತಿರುವುದು.

ಪ್ರಾವೃಟ್ಕಾಲೇ ಚ ತಮಸಿ ದ್ವಾದಶ್ಯಾಮಸಿತೇತರೇ ।
ಪುರೋಹಿತೋ ಬಹುವಿಧೈರ್ವಾದ್ಯೈಸ್ತೂರ್ಯೈಃ ಸಮನ್ವಿತಃ ॥ ೪ ॥

ಪ್ರಥಮಂ ಶಕ್ರಕೇತ್ವರ್ಥಂ ವೃಕ್ಷಮಾಮಂತ್ರ್ಯ ವರ್ಧಯೇತ್ ।
ಸಾಂವತ್ಸರೋ ವಾರ್ಧಕಿಶ್ಚ ಕೃತಮಂಗಳಕೌತುಕಃ ॥ ೫ ॥

ಉದ್ಯಾನೇ ದೇವತಾಗಾರೇ ಶ್ಮಶಾನೇ ಮಾರ್ಗಮಧ್ಯತಃ ।
ಯೇ ಜಾತಾಸ್ತರವಸ್ತಾಂಸ್ತು ವರ್ಜಯೇದ್ವಾಸವಧ್ವಜೇ ॥ ೬ ॥

ಬಹುವಲ್ಲೀಯುತಂ ಶುಷ್ಕಂ ಬಹುಕಂಟಕಸಂಯುತಂ ।
ಕುಬ್ಜಂ ವೃಕ್ಷಾದನೀಯುಕ್ತಂ ಲತಾಚ್ಛನ್ನಂ ತರುಂ ತ್ಯಜೇತ್ ॥ ೭ ॥

ಪಕ್ಷಿವಾಸಸಮಾಕೀರ್ಣಂ ಕೋಟರೈರ್ಬಹುಭಿರ್ಯುತಂ ।
ಪವನಾನಲವಿಧ್ವಸ್ತಂ ತರುಂ ಯತ್ನೇನ ವರ್ಜಯೇತ್ ॥ ೮ ॥

೪-೫. ಮಳೆಗಾಲದ ಶುಕ್ಲಪಕ್ಷದ ರಾತ್ರಿಯಲ್ಲಿ, ಪುರೋಹಿತನು ಅನೇಕವಿಧವಾದ ವಾದ್ಯಘೋಷಗಳೊಡನೆ ಮೊದಲು ಇಂದ್ರಧ್ವಜಕ್ಕಾಗಿ ಬೇಕಾಗುವ ಮರವೊಂದನ್ನು ಮಂತ್ರಿಸಿ ಪೂಜಿಸಬೇಕು. ಪುರೋಹಿತನ ಜೊತೆಯಲ್ಲಿ ಜೋಯಿಸ, ಮತ್ತು ಬಡಗಿ ಇವರು ಮಂಗಳಸ್ನಾನಾದಿಗಳನ್ನು ಮಾಡಿಕೊಂಡು ಶುದ್ಧರಾಗಿ ಮರವನ್ನು ತರಲು ಹೊರಡಬೇಕು

೬. ಉದ್ಯಾನ, ದೇವಾಲಯ, ಶ್ಮಶಾನ, ಮಾರ್ಗಮಧ್ಯ ಇವುಗಳಲ್ಲಿರುವ ಮರಗಳು ಇಂದ್ರಧ್ವಜಕ್ಕೆ ಯೋಗ್ಯವಾದವುಗಳಲ್ಲ.

೭-೮. ಅನೇಕ ಲತೆಗಳಿಂದ ಕೂಡಿರುವುದು, ಒಣಗಿಹೋಗಿರುವುದು, ತುಂಬಾ ಮುಳ್ಳುಗಳಿರುವುದು, ಗಿಡ್ಡನಾಗಿರುವುದು, ಬದನಿಕೆಯಾಗಿರುವುದು, ಲತೆಗಳಿಂದ ಮುಚ್ಚಿಹೋಗಿರುವುದು, ಪಕ್ಷಿಗಳು ವಾಸವಾಗಿರುವುದು, ಪೊಟ್ಟರೆಗಳಿರುವುದು, ಬೆಂಕಿಯಿಂದ ಸ್ವಲ್ಪಭಾಗ ಸುಟ್ಟಿರುವುದು, ಕೊಂಬೆ ಮುರಿದುಹೋಗಿರುವುದು ಈ ವಿಧವಾದ ವೃಕ್ಷಗಳನ್ನು ಇಂದ್ರಧ್ವಜಕ್ಕಾಗಿ ಉಪಯೋಗಿಸಬಾರದು. ಇಂತಹ ಮರಗಳನ್ನು ತ್ಯಜಿಸಬೇಕು-

ನಾರೀಸಂಜ್ಞಾಶ್ಚ ಯೇ ವೃಕ್ಷಾ ಅತಿಹ್ರಸ್ವಾ ಅತಿಕೃಶಾಃ ।
ತಾ೯ ಸದಾ ವರ್ಜಯೇದ್ಧೀರಃ ಸರ್ವದಾ ಶಕ್ರಪೂಜನೇ ॥ ೯ ॥

ಅರ್ಜುನೋಽಶ್ವಕರ್ಣಶ್ಚ ಪ್ರಿಯಕೋಽಶವ ಏವ ಚ ।
ಔದುಂಬರಶ್ಚ ಪಂಚೈತೇ ಕೇತ್ವರ್ಥೇ ಉತ್ತಮಾಃ ಸ್ಮೃತಾಃ ॥ ೧೦ ॥

ಅನ್ಯೇ ಚ ದೇವದಾರ್ವಾದ್ಯಾ ಶಾಲಾದ್ಯಾಸ್ತರವಸ್ತಥಾ ।
ಪ್ರಶಸ್ತಾಸ್ತು ಪರಿಗ್ರಾಹ್ಯಾ ನಾಪ್ರಶಸ್ತಾಃ ಕದಾಚನ ॥ ೧೧ ॥

ಧೃತ್ವಾ ವೃಕ್ಷಂ ತತೋ ರಾತ್ರೌ ಸ್ಪೃಷ್ಟ್ವಾ ಮಂತ್ರಮಿಮಂ ಪಠೇತ್ ।
ಯಾನಿ ವೃಕ್ಷೇಷು ಭೂತಾನಿ ತೇಭ್ಯಃ ಸ್ವಸ್ತಿ ನಮೋಽಸ್ತು ವಃ ॥ ೧೨ ॥

ಉಪಹಾರಂ ಗೃಹೀತ್ವೇಮಂ ಕ್ರಿಯತಾಂ ವಾಸವಧ್ವಜಂ ।
ಪಾರ್ಥಿವಸ್ತ್ವಾಂ ವರಯತೇ ಸ್ವಸ್ತಿ ತೇಽಸ್ತು ನಗೋತ್ತಮಂ ॥ ೧೩ ॥

---

೯. ಸ್ತ್ರೀಯರ ಹೆಸರುಳ್ಳ ವೃಕ್ಷಗಳು, ತುಂಬಾ ಚಿಕ್ಕದಾಗಿಯೂ, ಕೃಶವಾಗಿಯೂ ಇರುವ ವೃಕ್ಷಗಳು, ಇವುಗಳನ್ನು ಇಂದ್ರಪೂಜೆಗೆ ತರಲೇಬಾರದು.

೧೦. ಅರ್ಜುನವೃಕ್ಷ, ಅಶ್ವಕರ್ಣವೃಕ್ಷ (ಹೊನ್ನೇಮರ,) ಸರ್ಜವೃಕ್ಷ (ಮತ್ತೀಮರ,) ಪ್ರಿಯಕೋಽವೃಕ್ಷ, ಔದುಂಬರವೃಕ್ಷ (ಅತ್ತೀಮರ,) ಈ ಐದು ಮರಗಳೂ ಇಂದ್ರಧ್ವಜಕ್ಕೆ ಉತ್ತಮವಾದವುಗಳು.

೧೧. ಇವಲ್ಲದೆ ದೇವದಾರು, ಸರ್ಜವೃಕ್ಷ ಮುಂತಾದ ಉತ್ತಮ ವೃಕ್ಷಗಳನ್ನೂ ಸ್ವೀಕರಿಸಬಹುದು. ಕೆಟ್ಟ ವೃಕ್ಷಗಳನ್ನು ಬಿಟ್ಟುಬಿಡಬೇಕು

೧೨-೧೩. ಬಳಿಕ ಆ ರಾತ್ರಿಯಲ್ಲಿ ಆ ಉತ್ತಮವೃಕ್ಷವನ್ನು ಸ್ಪರ್ಶಮಾಡುತ್ತಾ ಈ ಮಂತ್ರವನ್ನು ಹೇಳಬೇಕು. ಈ ಮರದಲ್ಲಿ ಯಾವ ಭೂತಗಳಿದ್ದರೂ ಅವುಗಳಿಗೆ ಸ್ವಸ್ತಿಯುಂಟಾಗಲಿ, ಅವುಗಳನ್ನು ನಮಸ್ಕರಿಸುವೆವು. ನಾವು ಕೊಡುವ ಈ ಆಹಾರವನ್ನು ತೆಗೆದುಕೊಂಡು ಅವುಗಳು ಇಂದ್ರಧ್ವಜಕ್ಕೆ ಅನುಕೂಲವಾದ ಈ ಮರದಿಂದ ಹೊರಟುಹೋಗಲಿ ಎಂದು ಪ್ರಾರ್ಥಿಸಿ, ಬಳಿಕ ವೃಕ್ಷವನ್ನು ಕುರಿತು ಎಲೈ ವೃಕ್ಷ ಶ್ರೇಷ್ಠನೇ, ನಿನ್ನ ರಾಜನು ಇಂದ್ರಧ್ವಜಕ್ಕಾಗಿ ನಿನ್ನನ್ನು ಪ್ರಾರ್ಥಿಸುತ್ತಲಿರುವನು. ನಿನಗೆ ಮಂಗಳವಾಗಲಿ' ಈ ಪೂಜೆಯನ್ನು ಸ್ವೀಕರಿಸು, ಎಂದು ಪ್ರಾರ್ಥಿಸಿ, ಪೂಜೆಮಾಡಬೇಕು.

ಧ್ವಜಾರ್ಥಂ ದೇವರಾಜಸ್ಯ ಪೂಜೇಯಂ ಪ್ರತಿಗೃಹ್ಯತಾಂ ।
ತತಃ ಪರೇಽಹ್ನಿ ತಂ ಛಿತ್ವಾ ಮೂಲಮಷ್ಟಾಂಗುಲಂ ಪುನಃ ॥ ೧೪ ॥

ಜಲೇ ಕ್ಷಿಪೇತ್ತಥಾಗ್ರಸ್ಯ ಛಿತ್ವೈವ ಚತುರಂಗುಲಂ ।
ತತೋ ನೀತ್ವಾ ಪುರದ್ವಾರಂ ಕೇತುಂ ನಿರ್ಮಾಯ ತತ್ರ ವೈ ॥ ೧೫ ॥

ಶುಕ್ಲಾಷ್ಟಮ್ಯಾಂ ಭಾದ್ರಪದೇ ಕೇತುಂ ವೇದೀಂ ಪ್ರವೇಶಯೇತ್ ।
ದ್ವಾವಿಂಶದ್ಧಸ್ತಮಾನಸ್ತು ಅಧಮಃ ಕೇತುರುಚ್ಯತೇ ॥ ೧೬ ॥

ದ್ವಾತ್ರಿಂಶತ್ತು ತತೋ ಜ್ಯಾಯಾನ್ ದ್ವಾಚತ್ವಾರಿಂಶದೇವ ಚ ।
ತತೋಽಧಿಕಃ ಸಮಾಖ್ಯಾತೋ ದ್ವಾಪಂಚಾಶತ್ತಥೋತ್ತಮಃ ॥ ೧೭ ॥

ಕುಮಾರ್ಯಃ ಪಂಚಕರ್ತವ್ಯಾಃ ಶಕ್ರಸ್ಯ ನೃಪಸತ್ತಮ ।
ಶಾಲಮಯ್ಯಸ್ತು ತಾಃ ಸರ್ವಾ ಅಪರಾಃ ಶಕ್ರಮಾತೃಕಾಃ ॥ ೧೮ ॥

---

೧೪. ಬಳಿಕ ಮರುದಿವಸ ಆ ಮರವನ್ನು ಕಡಿದು ಬುಡದಲ್ಲಿ ನಾಲ್ಕು ಅಂಗುಲವನ್ನೂ, ತುದಿಯಲ್ಲಿ ನಾಲ್ಕು ಅಂಗುಲ ಪ್ರಮಾಣದಷ್ಟು ಕಡಿದು ಆ ಮರವನ್ನು ನೀರಿನಲ್ಲಿ ಹಾಕಬೇಕು,

೧೫. ಅನಂತರ ಆ ಮರದ ತುಂಡನ್ನು ಪೂರ್ವದ್ವಾರಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ಅದರಿಂದ ಧ್ವಜವನ್ನು ಮಾಡಿ ಆ ಧ್ವಜವನ್ನು ಭಾದ್ರಪದಶುಕ್ಲ ಅಷ್ಟಮಿಯಲ್ಲಿ ಅದಕ್ಕಾಗಿ ನಿರ್ಮಿಸಿದ ವೇದಿಕೆಯಲ್ಲಿ ತಂದಿರಿಸಬೇಕು.

೧೬-೧೭. ಧ್ವಜವು ಇಪ್ಪತ್ತೆರಡು ಹಸ್ತಪ್ರಮಾಣ ಉದ್ದವಿದ್ದರೆ ಅಧಮವೆನಿಸುವುದು. ಮೂವತ್ತೆರಡು ಹಸ್ತಪ್ರಮಾಣವಿದ್ದರೆ ಉತ್ತಮವು. ನಲವತ್ತೆರಡು ಹಸ್ತಪ್ರಮಾಣವಿರುವುದು ಅದಕ್ಕಿಂತಲೂ ಉತ್ತಮವು. ಐವತ್ತೆರಡು ಹಸ್ತಪ್ರಮಾಣವುಳ್ಳ ಧ್ವಜವು ಎಲ್ಲಕ್ಕಿಂತಲೂ ಉತ್ತಮವಾದುದು.

೧೮. ಎಲೈ, ರಾಜೇಂದ್ರನೇ, ಮತ್ತೀಮರದಿಂದ ಐದು ಇಂದ್ರಕುಮಾರಿಯರನ್ನು (ಬೊಂಬೆ) ಮಾಡಬೇಕು. ಮತ್ತು ಐದುಜನ ಇಂದ್ರಮಾತೆಯರನ್ನು ಮಾಡಬೇಕು.

ಕೇತೋಃ ಪಾದಪ್ರಮಾಣೇನ ಕಾರ್ಯಾಃ ಶಕ್ರಕುಮಾರಿಕಾಃ ।
ಮಾತೃಕಾರ್ಧಪ್ರಮಾಣಂ ತು ಯಂತ್ರಹಸ್ತದ್ವಯಂ ತಥಾ ॥ ೧೯ ॥

ಏವಂ ಕೃತ್ವಾ ಕುಮಾರೀಶ್ಚ ಮಾತೃಕಾಃ ಕೇತುಮೇವ ಚ ।
ಏಕಾದಶ್ಯಾಂ ಸಿತೇ ಪಕ್ಷೇ ಯಷ್ಟಿಂ ತಾಮಧಿವಾಸಯೇತ್ ॥ ೨೦ ॥

ಅಧಿವಾಸ್ಯ ತತೋ ಯಷ್ಟಿಂ ಗಂಧದ್ವಾರಾದಿಮಂತ್ರಕೈಃ ।
ದ್ವಾದಶ್ಯಾಂ ಮಂಡಲಂ ಕೃತ್ವಾ ವಾಸವಂ ವಿಸ್ತೃತಾತ್ಮಕಂ ॥ ೨೧ ॥

ಅಚ್ಯುತಂ ಪೂಜಯಿತ್ವಾ ತು ಪಶ್ಚಾಚ್ಚಕ್ರಂ ಪ್ರಪೂಜಯೇತ್ ।
ಶಕ್ರಸ್ಯ ಪ್ರತಿಮಾಂ ಕುರ್ಯಾತ್ಕಾಂಚನೀಂ ದಾರವೀಂ ಚ ವಾ ॥ ೨೨ ॥

---

೧೯. ಇಂದ್ರಕುಮಾರಿಯರು ಕೇತುವಿನ ನಾಲ್ಕನೆಯ ಒಂದು ಭಾಗದಷ್ಟು ಪ್ರಮಾಣವುಳ್ಳವರಾಗಿರಬೇಕು. ಮಾತೃಕೆಯರು ಅದರ ಅರ್ಧಪ್ರಮಾಣವುಳ್ಳವರಾಗಿರಬೇಕು. ಮತ್ತೂ, ಅವುಗಳಿಗೆ ಕೆಳಗಿನಿಂದ ಎರಡು ಕೈಗಳನ್ನೂ ಮಾಡಿ ಜೋಡಿಸಬೇಕು.

೨೦. ಹೀಗೆ ಇಂದ್ರಕುಮಾರಿ, ಮತ್ತು ಮಾತೃಕೆಯರನ್ನೂ, ಕೇತುವನ್ನೂ, ನಿರ್ಮಿಸಿ, ಶುಕ್ಲ ಏಕಾದಶಿಯಲ್ಲಿ ಆ ಧ್ವಜದಂಡವನ್ನು ಅಧಿವಾಸಮಾಡಬೇಕು. ಅಧಿವಾಸವೆಂದರೆ ನೀರಿನಲ್ಲಿ ಕ್ಲುಪ್ತಕಾಲದವರೆಗೆ ನೆನೆಸಿ ಬಳಿಕ ಪೂಜಾದಿಗಳನ್ನು ಮಾಡುವುದು.

೨೧. "ಗಂಧದ್ವಾರಾಂ" ಎಂಬ ಮೊದಲಾದ ಮಂತ್ರಗಳಿಂದ ಆ ಧ್ವಜಯಷ್ಟಿಯನ್ನು ಅಧಿವಾಸಮಾಡಿ ಬಳಿಕ ದ್ವಾದಶಿಯಲ್ಲಿ ವಿಸ್ತಾರವಾಗಿ ಇಂದ್ರಮಂಡಲವನ್ನು ರಚಿಸಿ, ಅದರಲ್ಲಿ ಮೊದಲು ವಿಷ್ಣುವನ್ನು ಪೂಜಿಸಿ, ಬಳಿಕ ಇಂದ್ರನನ್ನು ಪೂಜಿಸಬೇಕು.

೨೨. ಚಿನ್ನದಿಂದಾಗಲೀ, ಮರದಿಂದಲಾಗಲೀ, ಇನ್ನಾವುದಾದರೂ ಉತ್ಕೃಷ್ಟ ಲೋಹದಿಂದಲಾಗಲೀ ಇಂದ್ರನ ವಿಗ್ರಹವನ್ನು ಮಾಡಬೇಕು.

ಅನ್ಯತ್ಪೈಜಸಸಂಭೂತಾಂ ಸರ್ವಾಭಾವೇತು ಮೃಣ್ಮಯೀಂ ।
ತಾಂ ಮಂಡಲಸ್ಯ ಮಧ್ಯೇ ತು ಪೂಜಯಿತ್ವಾ ವಿಶೇಷತಃ ॥ ೨೩ ॥

ತತಃ ಶುಭೇ ಮುಹೂರ್ತೇ ತು ಕೇತುಮುತ್ಥಾಪಯೇನ್ನೃಪಃ ।
ವಜ್ರಪಸ್ತ ಸುರಾರಿಘ್ನ ಬಹುನೇತ್ರ ಪುರಂದರ ॥ ೨೪ ॥

ಕ್ಷೇಮಾರ್ಥಂ ಸರ್ವಲೋಕಾನಾಂ ಪೂಜೇಯಂ ಪ್ರತಿಗೃಹ್ಯತಾಂ ॥ ೨೫ ॥

ಏಹ್ಯೇಹಿ ಸರ್ವಾಮರಸಿದ್ಧಸಂಘೈ
ರಭಿಷ್ಟುತೋ ವಜ್ರಧರಾಮರೇಶ।
ಸಮುತ್ಥಿತಸ್ತ್ವಂ ಶ್ರವಣಾದ್ಯಪಾದೇ
ಗೃಹಾಣ ಪೂಜಾಂ ಭಗವನ್ನಮಸ್ತೇ ॥ ೨೬ ॥

ಏವಮುತ್ತರತಂತ್ರೋಕ್ತೈರ್ದಹನಪ್ಲವನಾದಿಭಿಃ ।
ಇತಿ ಮಂತ್ರೇಣ ತಂತ್ರೇಣ ನಾನಾನೈವೇದ್ಯವೇದನೈಃ ।
ಅಪೂಪೈಃ ಪಾಯಸೈಃ ಪಾನೈರ್ಗುಡೈರ್ಧಾನಾಭಿರೇವ ಚ ॥ ೨೭ ॥

---

೨೩. ಆ ಮೂರ್ತಿಯನ್ನು ಮಂಡಲದಮಧ್ಯದಲ್ಲಿ ವಿಶೇಷರೀತಿಯಿಂದ ಪೂಜಿಸಬೇಕು. ಬಳಿಕ ಶುಭಮುಹೂರ್ತದಲ್ಲಿ ರಾಜನು ಆ ಇಂದ್ರಧ್ವಜವನ್ನು ಮೇಲಕ್ಕೆತ್ತಬೇಕು.

೨೪-೨೬. ಎಲೈ ಇಂದ್ರನೇ, ನೀನು ವಜ್ರಾಯುಧವನ್ನು ಧರಿಸಿರುವೆ. ನೀನು ರಾಕ್ಷಸರನ್ನು ಸಂಹಾರಮಾಡುವುದರಲ್ಲಿ ಸಮರ್ಥನು. ನಿನಗೆ ಸಹಸ್ರನಯನಗಳಿರುವವು. ಈಗ ನಾನು ಮಾಡುವಪೂಜೆಯನ್ನು ಸಕಲಲೋಕಕಲ್ಯಾಣಕ್ಕಾಗಿ ಸ್ವೀಕರಿಸು. ಓ ವಜ್ರಧರನೇ ನೀನು ಸಕಲದೇವತೆಗಳಿಗೂ ಒಡೆಯನು. ನಿನ್ನನ್ನು ಸಿದ್ಧರೇ ಮೊದಲಾದವರು ಸ್ತುತಿಸುವರು. ಈಗ ಶ್ರವಣನಕ್ಷತ್ರದ ಮೊದಲನೇ ಪಾದವು ಉದಯಿಸಿರುವದು. ಇಂತಹ ಈ ಶುಭಮುಹೂರ್ತದಲ್ಲಿ ಇಲ್ಲಿಗೆ ಬಂದು ಈ ಪೂಜೆಯನ್ನು ಸ್ವೀಕರಿಸು ಓ ಭಗವಂತನೆ, ನಿನ್ನನ್ನು ನಮಸ್ಕರಿಸುವೆನು.

೨೭. ಈರೀತಿಯಾಗಿ ಉತ್ತರತಂತ್ರದಲ್ಲಿ ಹೇಳಿರುವ ದಹನಪ್ಲವನಗಳಿಂದಲೂ ಇಲ್ಲಿ ಹೇಳಿದ ಈ ಮಂತ್ರ ಮತ್ತು ತಂತ್ರಗಳಿಂದಲೂ, ಮೋದಕ, ಪಾಯಸ, ಪಾನಕ, ಬೆಲ್ಲ, ಅರಳು, ಅನೇಕಬಗೆ ಕಜ್ಜಾಯಗಳು, ಮಹಾನ್ನ ಇವುಗಳನ್ನು ನಿವೇದಿಸಿ ಲಕ್ಷ್ಮೀ ವೃದ್ಧಿಗಾಗಿ ಇಂದ್ರನನ್ನು ಪೂಜಿಸಬೇಕು.

ವೈಷ್ಣವೈಶ್ಚೈವ ವಿವಿಧೈಃ ಪೂಜಯೇಚ್ಛ್ರೀವಿವೃದ್ಧಯೇ ।
ಘಟೇಷು ದಶದಿಕ್ಪಾಲಾ ಗ್ರಹಾಂಶ್ಚ ಪರಿಪೂಜಯೇತ್ ॥ ೨೮ ॥

ಸಾಧ್ಯಾದೀ ಸಕಲಾ ದೇವಾನಾಮೃತ್ವಿಃ ಸರ್ವಾ ಅನುಕ್ರಮಾತ್ ।
ತತಃ ಶುಭೇ ಮುಹೂರ್ತೇ ತು ಜ್ಞಾನೀ ವರ್ಧಕಿಸಂಯುತಃ ॥ ೨೯ ॥

ಕೇತೂತ್ಥಾಪನಭೂಮಿಂ ತು ಯಜ್ಞವೇದ್ಯಾಸ್ತು ಪಶ್ಚಿಮೇ ।
ವಿಪ್ರೈಃ ಪುರೋಹಿತೈಃ ಸಾರ್ಧಂ ಗಚ್ಛೇದ್ರಾಜಾ ಸುಮಂಗಲೈಃ ॥ ೩೦ ॥

ರಜ್ಜುಭಿಃ ಪಂಚಭಿರ್ಬದ್ಧಂ ಯಂತ್ರಶ್ಲಿಷ್ಟಂ ಸಮಾತೃಕಂ ।
ಕುಮಾರೀಭಿಸ್ತು ಸಂಯುಕ್ತಂ ದಿಕ್ಪಾಲಾನಾಂ ಚ ಪಟ್ಟಕೈಃ ॥ ೩೧ ॥

ಬೃಹದ್ಭಿರತಿಕಾಂತೈಶ್ಚ ನಾನಾದ್ರವ್ಯೈಃ ಸುಪೂಜಿತೈಃ ।
ಯಷ್ಠಾವನ್ಯೈರ್ಯಥಾದೇಶೇ ಯೋಜಿತೈರ್ವಸ್ತ್ರವೇಷ್ಟಿತೈಃ ॥ ೩೨ ॥

---

೨೮. ಆಮೇಲೆ ಕಲಶಗಳಲ್ಲಿ ಹತ್ತು ಜನ ದಿಕ್ಪತಿಗಳು, ನವಗ್ರಹಗಳು, ಸಾಧ್ಯರು, ಇತರ ದೇವತೆಗಳು, ಮತ್ತು ಸಪ್ತಮಾತೃಕೆಯರು ಇವರೆಲ್ಲರನ್ನೂ ಪೂಜಿಸಬೇಕು.

೨೯. ಬಳಿಕ ಶುಭಮುಹೂರ್ತದಲ್ಲಿ ಜ್ಞಾನಿಯಾದ ರಾಜನು ಬಡಗಿ, ಬ್ರಾಹ್ಮಣರು, ಪುರೋಹಿತ ಇವರೊಡನೆ ಕೂಡಿ ಮಂಗಳದ್ರವ್ಯಗಳನ್ನು ತೆಗೆದುಕೊಂಡು ಯಜ್ಞವೇದಿಕೆಯ ಪಶ್ಚಿಮದಲ್ಲಿ ಕೇತುವನ್ನು ಸ್ಥಾಪಿಸಿ ನಿಲ್ಲಿಸುವ ಭೂಮಿಗೆ ಹೋಗಬೇಕು.

೩೦-೩೨. ಅಲ್ಲಿ ಐದು ಹಗ್ಗಗಳಿಂದ ಕಟ್ಟಿ ಸಿದ್ಧವಾಗಿರುವ ಧ್ವಜವನ್ನು ಮೇಲಕ್ಕೆತ್ತಬೇಕು. ಆ ಧ್ವಜವಾದರೋ ಯಂತ್ರ, ಕೀಲು ಮೊದಲಾದವುಗಳಿಂದ ಸಜ್ಜಿತವಾಗಿರಬೇಕು. ಕುಮಾರಿಯರು, ಮಾತೃಕೆಯರು, ದಿಕ್ಪಾಲಕರು ಇವರುಗಳ ವಿಗ್ರಹಗಳಿಂದ ಅಲಂಕೃತವಾಗಿರಬೇಕು. ಅತಿ ದೊಡ್ಡದಾಗಿಯೂ, ತುಂಬ ಮನೋಹರವಾಗಿಯೂ ಇರಬೇಕು. ಅನೇಕಬಗೆಯ ಸುಗಂಧದ್ರವ್ಯಗಳಿಂದಲೂ, ಚಿತ್ರವಿಚಿತ್ರವಾದ ಅಲಂಕಾರಗಳಿಂದಲೂ, ವಿಧವಿಧ ವಸ್ತ್ರಗಳಿಂದಲೂ, ಕಿರುಗಂಟೆಗಳು, ದೊಡ್ಡ ಘಂಟೆಗಳು, ಚಾಮರಗಳು, ಜಾಲರಿಗಳು ಮೊದಲಾದ ಅನೇಕಬಗೆಯ ಅಲಂಕಾರ

ಯುಕ್ತಂ ತಂ ಕಿಂಕಿಣೀಜಾಲೈರ್ಬದ್ಧಘಂಟಾಶತೈರ್ವೃತಂ ।
ಭೂಷಿತಂ ಮುಕುರೈರುಚ್ಚೈರ್ಮಾಲ್ಯೈರ್ಬಹುವಿಧೈಸ್ತಥಾ ॥ ೩೩ ॥

ಬಹುಪುಷ್ಪೈಃ ಸುಗಂಧೈಶ್ಚ ಭೂಷಿತಂ ರತ್ನಮಾಲಯಾ ।
ಚಿತ್ರಮಾಲ್ಯಾಂಬರೈಶ್ಚೈವ ಚತುರ್ಭಿರಪಿ ತೋರಣೈಃ ॥ ೩೪ ॥

ಉತ್ಥಾಪಯೇನ್ಮಹಾಕೇತುಂ ರಾಜಕೀಯಃ ಶನೈಃ ಶನೈಃ ।
ತಮುತ್ಥಾಯ ಮಹಾಕೇತುಂ ಪೂಜಿತಂ ಮಂಡಲಾಂತರೇ ॥ ೩೫ ॥

ಪ್ರತಿಮಾಂ ತಾಂ ನಯೇನ್ಮೂಲಂ ಕೇತೋಃ ಶಕ್ರಂ ವಿಚಿಂತಯನ್ ।
ಯಜೇತ್ತಂ ಪೂರ್ವವತ್ತತ್ರ ಶಚೀಂ ಮಾತಲಿಮೇವ ಚ ॥ ೩೬ ॥

ಜಯಂತಂ ತನಯಂ ತಸ್ಯ ವಜ್ರಮೈರಾವತಂ ತಥಾ ।
ಗ್ರಹಾಂಶ್ಚಾಷ್ಟೌ ದಿಕ್ಪಾಲಾ ಸರ್ವಾಶ್ಚ ಗಣದೇವತಾಃ ॥ ೩೭ ॥

ಗಳಿಂದ ಮನೋಹರವಾಗಿ ಶೃಂಗರಿಸಲ್ಪಟ್ಟಿರಬೇಕು. ಆ ಧ್ವಜವನ್ನು ಅಲ್ಲಲ್ಲಿ ಕನ್ನಡಿಗಳಿಂದಲೂ, ಹೂವಿನಮಾಲೆಗಳಿಂದಲೂ, ರತ್ನಹಾರಗಳಿಂದಲೂ, ಸುಗಂಧದ್ರವ್ಯಗಳಿಂದಲೂ ಅಲಂಕರಿಸಬೇಕು. ಮತ್ತು ಆ ಧ್ವಜಕ್ಕೆ ವಿಚಿತ್ರ ವಸ್ತ್ರಗಳಿಂದಲೂ ನಾಲ್ಕು ತೋರಣಗಳಿಂದಲೂ ಅಲಂಕರಿಸಬೇಕು. ಇಂತಹ ದಿವ್ಯವಾದ ಮಹಾಧ್ವಜದಂಡವನ್ನು ಒಬ್ಬ ರಾಜಪುರುಷನು ಮೆಲ್ಲಮೆಲ್ಲನೆ ಮೇಲಕ್ಕೆತ್ತಬೇಕು.

೩೫. ಹೀಗೆ ಮಂಡಲದಲ್ಲಿ ಪೂಜಿಸಿರುವ ಕೇತುವನ್ನು ಮೇಲಕ್ಕೆತ್ತಿಸಿ ಅಲ್ಲಿರುವ ಇಂದ್ರಮೂರ್ತಿಯನ್ನು, ಆ ಕೇತುವಿನ ಮೂಲಕ್ಕೆ, ಇಂದ್ರನನ್ನು ಧ್ಯಾನಿಸುತ್ತಾ ತರಬೇಕು.

೩೬-೩೭, ತಿರುಗಿ ಅಲ್ಲಿ ಆ ಇಂದ್ರನನ್ನೂ, ಶಚೀದೇವಿಯನ್ನೂ ಅವನ ಸಾರಥಿಯಾದ ಮಾಲತಿಯನ್ನೂ, ಪುತ್ರನಾದ ಜಯಂತನನ್ನೂ, ವಜ್ರ ಮತ್ತು ಐರಾವತಗಳನ್ನೂ, ನವಗ್ರಹಗಳು, ದಿಕ್ಪಾಲಕರು, ಮಿಕ್ಕ ಗಣದೇವತೆಗಳು ಇವರೆಲ್ಲರನ್ನೂ ಮೋದಕ, ಪಾಯಸ ಮುಂತಾದ ನೈವೇದ್ಯಗಳಿಂದ ಪೂಜಿಸಬೇಕು.

ಅಪೂಪಾದ್ಯೈಃ ಪೂಜಯೇತ್ತು ಬಲಿಭಿಃ ಪಾಯಸಾದಿಭಿಃ ।
ಪೂಜಿತಾನಾಂ ಚ ದೇವಾನಾಂ ಶಶ್ವದ್ಧೋಮಂ ಸಮಾಚರೇತ್ ॥ ೩೮ ॥

ಹೋಮಾಂ ತೇ ತು ಬಲಿಂ ದದ್ಯಾದ್ವಾಸವಾಯ ಮಹಾತ್ಮನೇ ।
ತಿಲಂ ಘೃತಂ ಚಾಕ್ಷತಂ ಚ ಪುಷ್ಪಂ ದೂರ್ವಾಂ ತಥೈವ ಚ ॥ ೩೯ ॥

ಏತೈಸ್ತು ಜುಹುಯಾದ್ದೇವಾ ಸ್ಪೈಃ ಸ್ವೈರ್ಮಂತ್ರೈರ್ನರೋತ್ತಮ ।
ತತೋ ಹೋಮಾವಸಾನೇ ತು ಭೋಜಯೇದ್ಬ್ರಾಹ್ಮಣಾನಪಿ ॥ ೪೦ ॥

ಏವಂ ಸಂಪೂಜಯೇನ್ನಿತ್ಯಂ ಸಪ್ತರಾತ್ರಂ ದಿನೇ ದಿನೇ ।
ಬ್ರಾಹ್ಮಣೈಃ ಸಹಿತೋ ರಾಜಾ ವೇದವೇದಾಂಗಪಾರಗೈಃ ॥ ೪೧ ॥

ಸರ್ವತ್ರ ಶಕ್ರಪೂಜಾಸು ಯಜ್ಞೇಷು ಪರಿಕೀರ್ತಿತಃ ।
ತ್ರಾತಾರಮಿತಿ ಮಂತ್ರೋऽಯಂ ವಾಸವಸ್ಯ ಪ್ರಿಯಃ ಪರಃ ॥ ೪೨ ॥

---

೩೮. ಈ ಎಲ್ಲಾ ದೇವತೆಗಳನ್ನೂ ಪೂಜೆಮಾಡಿದ ಬಳಿಕ ಹೋಮಮಾಡಿ, ಆಂತ್ಯದಲ್ಲಿ ಮಹಾತ್ಮನಾದ ಇಂದ್ರನಿಗೆ ಬಲಿಯನ್ನು ಕೊಡಬೇಕು.

೩೯-೪೦. ಎಲೈ ನರೋತ್ತಮನೇ! ಎಳ್ಳು, ತುಪ್ಪ, ಅಕ್ಷತೆ, ಪುಷ್ಪ, ದೂರ್ವ ಇವುಗಳಿಂದ ದೇವತೆಗಳಿಗೆ ಅವರವರ ಮಂತ್ರಗಳಿಂದ ಹೋಮ ಮಾಡಬೇಕು. ಹೋಮವೆಲ್ಲಾ ಮುಗಿದನಂತರ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು.

೪೧. ಈರೀತಿಯಾಗಿ ರಾಜನು ಏಳುದಿನಗಳ ಪರ್ಯಂತ ನಿತ್ಯವೂ ವೇದ ವೇದಾಂಗಗಳನ್ನು ಅಧ್ಯಯನಮಾಡಿದ ಬ್ರಾಹ್ಮಣರೊಡನೆ ಕೂಡಿ ಪೂಜೆಯನ್ನು ಮಾಡಬೇಕು.

೪೨. ಎಲ್ಲ ವಿಧವಾದ ಇಂದ್ರಪೂಜೆ ಮತ್ತು ಯಾಗಗಳಲ್ಲಿ "ತ್ರಾತಾರ ಮಿಂದ್ರಂ" ಎಂಬ ಮಂತ್ರವನ್ನು ಹೇಳಬೇಕು. ಈ ಮಂತ್ರವು ಇಂದ್ರನಿಗೆ ತುಂಬ ಪ್ರಿಯವಾದುದು.

ಏವಂ ಕೃತ್ವಾ ದಿವಾಭಾಗೇ ಶಕ್ರೋತ್ಥಾಪನಮಾದಿತಃ ।
ಶ್ರಾವಣರ್ಕ್ಷಯುತಾಯಾಂ ತು ದ್ವಾದಶ್ಯಾಂ ಪಾರ್ಥಿವಃ ಸ್ವಯಂ ॥ ೪೩ ॥

ಅಂತಪಾದೇ ಭರಾಣ್ಯಾಂ ತು ನಿಶಿ ಶಕ್ರಂ ವಿಸರ್ಜಯೇತ್ ।
ಸುಪ್ತೇಷು ಸರ್ವಲೋಕೇಷು ಯಥಾ ರಾಜಾ ನ ಪಶ್ಯತಿ ॥ ೪೪ ॥

ಪಶ್ಯನ್ಮಾನುಷ್ಯಮೃತ್ಯುಮಾಪ್ನೋತಿ ರಾಜಾ ದೃಷ್ಟ್ವಾ ವಿಸರ್ಜನಂ ।
ಶಕ್ರಸ್ಯ ನೃಪಶಾರ್ದೂಲ ತಸ್ಮಾನ್ನೇಕ್ಷೇತ ತಂ ನೃಪಃ ॥ ೪೫ ॥

ವಿಸರ್ಜನಸ್ಯ ಮಂತ್ರೋಽಯಂ ಪುರಾವಿದ್ಭಿರುದೀರಿತಃ ।
ಸಾರ್ಧಂ ಸುರಾಸುರಗಣೈಃ ಪುರಂದರ ಶತಕ್ರತೋ ॥ ೪೬ ॥

ಉಪಹಾರಂ ಗೃಹೀತ್ವೇಮಂ ಮಹೇಂದ್ರಧ್ವಜ ಗಮ್ಯತಾಂ ।
ಸೂತಕೇ ತು ಸಮುತ್ಪನ್ನೇ ವಾರೇ ಭೌಮಸ್ಯ ವಾ ಶನೇಃ ॥ ೪೭ ॥

---

೪೩. ಈರೀತಿಯಾಗಿ ಶ್ರವಣನಕ್ಷತ್ರಯುಕ್ತವಾದ ದ್ವಾದಶಿಯಲ್ಲಿ ಹಗಲು ರಾಜನು ಇಂದ್ರಧ್ವಜೋತ್ಥಾಪನ ಮೊದಲಾದುದನ್ನು ಮಾಡಿ, ಪೂಜಿಸಿ, ಬಳಿಕ ರಾತ್ರೆ ಭರಣಿನಕ್ಷತ್ರದ ಕೊನೆಯ ಪಾದದಲ್ಲಿ ಇಂದ್ರನನ್ನು ವಿಸರ್ಜನೆ ಮಾಡಬೇಕು.

೪೪-೪೫. ಎಲ್ಲರೂ ಮಲಗಿ ನಿದ್ರಿಸುತ್ತಿರುವಕಾಲದಲ್ಲಿ ಇಂದ್ರವಿಸರ್ಜನೆಯನ್ನು ಮಾಡಬೇಕು. ಈ ವಿಸರ್ಜನೆಯನ್ನು ರಾಜನು ನೋಡಬಾರದು. ಪ್ರಮಾದದಿಂದ ರಾಜನು ನೋಡಿದರೆ ಆರುತಿಂಗಳೊಳಗೆ ಮೃತನಾಗುವನು. ಆದುದರಿಂದ ರಾಜನು ಇದನ್ನು ನೋಡಬಾರದು.

೪೬. ಈ ವಿಸರ್ಜನಮಂತ್ರವು ಪೂರ್ವದ ಋಷಿಗಳಿಂದ ಹೇಳಲ್ಪಟ್ಟಿರುವುದು. "ಎಲೈ ಇಂದ್ರನೇ ನೂರು ಯಾಗಗಳನ್ನು ಮಾಡಿದವನೆಂದು ನೀನು ಪ್ರಸಿದ್ಧನು. ನಾನು ಮಾಡಿದ ಈ ಪೂಜೆಯನ್ನು ಸ್ವೀಕರಿಸಿ ದೇವತೆಗಳೊಡನೆ ನಿನ್ನ ಸ್ವಸ್ಥಾನಕ್ಕೆ ತೆರಳು, ಓ ಇಂದ್ರಧ್ವಜವೇ! ನೀನು ಸಹ ಈ ಉಪಹಾರವನ್ನು ಸ್ವೀಕರಿಸಿ ಇಲ್ಲಿಂದ ತೆರಳು"ಇದು ಇಂದ್ರನನ್ನೂ ಇಂದ್ರಧ್ವಜವನ್ನೂ ವಿಸರ್ಜನೆಮಾಡುವ ಮಂತ್ರವು.

೪೭. ಆಶೌಚ ಬಂದರೂ, ಮಂಗಳ ಮತ್ತು ಶನಿವಾರಗಳಲ್ಲೂ, ಭೂಕಂಪ ಮೊದಲಾದ ಉತ್ಪಾತಗಳು ಜನಿಸಿದರೂ, ಆದಿನ ಇಂದ್ರನನ್ನು ವಿಸರ್ಜನಮಾಡ ಬಾರದು.

ಭೂಮಿಕಂಪಾದಿಕೋತ್ಪಾತೇ ವಾಸನಂ ನ ವಿಸರ್ಜಯೇತ್ ।
ಉತ್ಪಾತೇ ಸಪ್ತರಾತ್ರಂ ತು ತಥೋಪಪ್ಲವದರ್ಶನೇ ॥ ೪೮ ॥

ವ್ಯತೀತ್ಯ ಶನಿಭೌಮೌ ಚ ಹ್ಯನ್ಯರ್ಕ್ಷೇಽಪಿ ವಿಸರ್ಜಯೇತ್ ।
ಸೂತಕೇ ತ್ವಥ ಸಂಪ್ರಾಪ್ತೇ ವ್ಯತೀತೇ ಸೂತಕೇ ಪುನಃ ॥ ೪೯ ॥

ಯಸ್ಮಿನ್ ತಸ್ಮಿನ್ ದಿನೇ ಚೈವ ಸೂತಕಾಂತೇ ವಿಸರ್ಜಯೇತ್ ।
ತಥಾ ಕೇತುಂ ನೃಪೋ ರಕ್ಷೇತ್ಪತಂತಿಶಾಕುನಾ ಯಥಾ ॥ ೫೦ ॥

ನ ಕೇತೌ ನೃಪಶಾರ್ದೂಲ ಯಾವನ್ನಹಿ ವಿಸರ್ಜನಂ ।
ಶನೈಃ ಶನೈಃ ಪಾತಯೇತ್ತು ಯಥೋತ್ಥಾಪನಮಾದಿತಃ ॥ ೫೧ ॥

ಕೃತಂ ತಥಾನ್ಯಥಾ ಭಗ್ನೇ ಕೇತೌ ಮೃತ್ಯುಮವಾಪ್ನುಯಾತ್ ।
ವಿಸೃಷ್ಟಂ ಶಕ್ರಕೇತುಂ ತು ಸಾಲಂಕಾರಂ ತಥಾ ನಿಶಿ ॥ ೫೨ ॥

---

೪೮. ಉತ್ಪಾತಗಳು ಮಿಕ್ಕ ಈತಿಬಾಧೆಗಳು ಬಂದರೆ ಏಳುರಾತ್ರಿಗಳು ಕಳೆದ ಬಳಿಕ ಶನಿವಾರ ಮಂಗಳವಾರಗಳನ್ನು ಬಿಟ್ಟು, ಭರಣಿಯಲ್ಲದೆ ಬೇರೆ ನಕ್ಷತ್ರದಲ್ಲಿ ವಿಸರ್ಜನೆ ಮಾಡಬಹುದು.

೪೯. ಆಶೌಚವು ಬಂದರೆ, ಅದು ಕಳೆದಮೇಲೆ ಯಾವುದಾದರೊಂದು ಶುಭ ದಿನದಲ್ಲಿ ವಿಸರ್ಜನೆಯನ್ನು ಮಾಡಬೇಕು.

೫೦. ಎಲೈ ರಾಜೇಂದ್ರನೇ! ಅದೇರೀತಿ ಕೇತುವನ್ನು ವಿಸರ್ಜನೆ ಮಾಡುವ ವರೆಗೆ, ಅದರಮೇಲೆ ಪಕ್ಷಿಗಳು ಬಂದು ಕೂರದಿರುವಂತೆ ಅದನ್ನು ರಕ್ಷಿಸಬೇಕು.

೫೧. ಹಿಂದೆ ಹೇಗೆ ಕೇತುವನ್ನು ಮೇಲಕ್ಕೆತ್ತಲಾಯಿತೋ ಅದರಂತೆಯೇ ಮೆಲ್ಲಮೆಲ್ಲಗೆ ಅದನ್ನು ಕೆಳಗೆ ಇಳಿಸಬೇಕು. ಮಧ್ಯದಲ್ಲಿ ಅದು ಮುರಿದುಹೋದರೆ ರಾಜನಿಗೆ ಮರಣವು ಸಂಭವಿಸುವುದು.

೫೨-೫೩. "ಎಲೈ ಕೇತುವೇ! ನೀನು ಸರ್ವವಿಘ್ನವನ್ನು ನಾಶಮಾಡುವವನು, ಸಮಸ್ತಜನರಿಗೂ ಮಂಗಳವನ್ನುಂಟುಮಾಡುವವನು, ಈಗ ನಿನ್ನನು

ಕ್ಷಿಪೇದನೇನ ಮುಂತ್ರೇಣ ತ್ವಗಾಧೇ ಸಲಿನೇ ನೃಪ ।
ತಿಷ್ಠ ಕೇತೋ ಮಹಾಭಾಗ ಯಾವತ್ಸಂವತ್ಸರಂ ಜಲೇ ॥ ೫೩ ॥

ಭವ್ಯಾಯ ಸರ್ವಲೋಕಾನಾಮುಂತರಾಯವಿನಾಶಕೆ ।
ಉತ್ಥಾಪಯೇತ್ತ್ರಿಯಂಬಸ್ಯೈಃ ಸರ್ವಲೋಕಸ್ಯ ವೈ ಪುರಃ ॥ ೫೪ ॥

ರಹೋ ವಿಸರ್ಜಯೇತ್ಕೇತುಂ ವಿಶೇಷೋಽಯಂ ಪ್ರಪೂಜನೇ ।
ಏವಂ ಯಃ ಕುರುತೇ ಪೂಜಾಂ ವಾಸವಸ್ಯ ಮಹಾತ್ಮನಃ ॥ ೫೫ ॥

ಸುಚಿರಂ ಪೃಥಿವೀಂ ಭುಕ್ತ್ವಾ ವಾಸವಂ ಲೋಕಮಾಪ್ನುಯಾತ್ ।
ನ ತಸ್ಯ ರಾಜ್ಯೇ ದುರ್ಭಿಕ್ಷಂ ನಾಧಯೋ ವ್ಯಾಧಯಃ ಕ್ವಚಿತ್ ॥ ೫೬ ॥

ಸ್ಥಾಸ್ಯಂತಿ ಮೃತ್ಯುನಾರ್ಕಾಲೇ ಜನಾನಾಂ ತತ್ರ ಜಾಯತೇ ।
ತತ್ತುಲ್ಯಃ ಕೋಽಪಿ ನಾನ್ಯೋಽಸ್ತಿ ಪ್ರಿಯಃ ಶಕ್ರಸ್ಯ ಪಾರ್ಥಿವಃ ॥ ೫೭ ॥

ಈ ಜಲದಲ್ಲಿ ವಿಸರ್ಜಿಸುವೆನು. ಒಂದು ಸಂವತ್ಸರ ಪರ್ಯಂತರ ಇಲ್ಲಿ ನೆಲಸಿರು" ಎಂದು ಪ್ರಾರ್ಥಿಸಿ ಅಲಂಕಾರಸಹಿತವಾದ ಆ ಕೇತುವನ್ನು ಆಳವಾದ ನೀರಿನಲ್ಲಿ ಮುಳುಗಿಸಿ ವಿಸರ್ಜನೆ ಮಾಡಬೇಕು.

೫೪. ಈ ಕೇತುವನ್ನು ಸಕಲಜನಗಳಿದುರಿಗೆ ಮಂಗಳವಾದ್ಯಗಳೊಡನೆ ಮೇಲಕ್ಕೆತ್ತಬೇಕು. ಆದರೆ ವಿಸರ್ಜನೆಯನ್ನು ಯಾರಿಗೂ ತಿಳಿಯದಂತೆ ಏಕಾಂತದಲ್ಲಿ ಮಾಡಬೇಕು. ಇದು ಇಂದ್ರಧ್ವಜಪೂಜೆಯಲ್ಲಿನ ವಿಶೇಷವು.

೫೫. ಈರೀತಿಯಾಗಿ ಯಾವ ರಾಜನು ಮಹಾತ್ಮನಾದ ಇಂದ್ರನ ಪೂಜೆಯನ್ನು ಮಾಡುವನೋ ಅವನು ಬಹಳಕಾಲ ರಾಜ್ಯವಾಳಿ, ಕೊನೆಗೆ ಇಂದ್ರಲೋಕವನ್ನು ಪಡೆಯುವನು.

೫೬. ಆ ರಾಜನ ರಾಜ್ಯದಲ್ಲಿ ಬರಗಾಲ, ಮನೋವ್ಯಥೆ, ರೋಗಗಳು, ಉಪದ್ರವಗಳು ಮೊದಲಾದುವು ಉಂಟಾಗುವುದಿಲ್ಲ. ಜನಗಳಿಗೆ ಅಕಾಲದಲ್ಲಿ ಮರಣವುಂಟಾಗುವುದಿಲ್ಲ. ಎಲ್ಲರೂ ಪೂರ್ಣಾಯುಗಳಾಗುವರು.

೫೭. ರಾಜನಿಗೆ ಇಂದ್ರನಷ್ಟು ಪ್ರಿಯನಾದವನು ಮತ್ತಾವನೂ ಇಲ್ಲ. ಆ ಇಂದ್ರನನ್ನು ಪೂಜಿಸಿದರೆ ಸಕಲ ದೇವತೆಗಳನ್ನೂ ಪೂಜಿಸಿದಂತಾಗುವುದು. ವಿಷ್ಣುನೇ ಮೊದಲಾದವರು ಅಲ್ಲಿ ನೆಲಸಿರುವರು.

ತಸ್ಯ ಪೂಜಾ ಸರ್ವಪೂಜಾ ಕೇಶವಾದ್ಯಾಶ್ಚ ತತ್ರಗಾಃ ।
ಸಕಲಕಲುಷಹಾರಿ ವ್ಯಾಧಿದುರ್ಭಿಕ್ಷನಾಶಂ ।
ಸಕಲಭವನಿವೇಶಂ ಸರ್ವಸೌಭಾಗ್ಯಕಾರಿ
ಸುರಪತಿಗೃಹಗಾಭಿರ್ವಾರ್ಚನಂ ಶಕ್ರಕೇತೋಃ ।
ಪ್ರತಿಶರದಮನೇಕೈಃ ಪೂಜಯೇಚ್ಛ್ರೀವಿವೃದ್ಧ್ಯೈ ॥ ೫೮ ॥

॥ ಇತಿ ಶ್ರೀಕಾಲಿಕಾಪುರಾಣೇ ನವತಿತಮೋಽಧ್ಯಾಃ ॥

---

೫೮. ಈ ಇಂದ್ರಪೂಜೆಯು ಸಕಲ ಪಾಪಗಳನ್ನೂ ನಾಶಗೊಳಿಸುವುದು. ರೋಗ, ಬರಗಾಲಗಳನ್ನು ಹೋಗಲಾಡಿಸುವುದು. ಸಕಲ ಸುಖಗಳನ್ನುಂಟುಮಾಡುವುದು. ಸಮಸ್ತ ಮಂಗಳವನ್ನುಂಟುಮಾಡುವುದು. ಇಂದ್ರಲೋಕಕ್ಕೆ ಸಾಧಕವಾದುದು. ಇಂತಹ ಇಂದ್ರಧ್ವಜ ಪೂಜೆಯನ್ನು ರಾಜನಾದವನು ಪ್ರತಿ ಶರದೃತುವಿನಲ್ಲಿಯೂ ಹಿಂದೆ ಹೇಳಿದ ವಿಧಿಯಂತೆ ಸಕಲ ಸಾಮಗ್ರಿಗಳೊಡನೆ ಪೂಜಿಸಬೇಕು. ಇವರಿಂದ ಐಶ್ವರ್ಯಾಭಿವೃದ್ಧಿಯಾಗುವುದು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ತೊಂಭತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಏಕನವತಿತಮೋऽಧ್ಯಾಯಃ ॥

॥ ಔರ್ವ ಉವಾಚ ॥

ಜ್ಯೇಷ್ಠೇ ದಶಹರಾಯಾಂ ತು ವಿಷ್ಣೋರಿಷ್ಟಿಂ ನೃಪ ಶೃಣು ।
ಯೇನ ವಾ ವಿಧಿನಾ ಕುರ್ಯಾದ್ವಿಷ್ಣೋರಿಷ್ಟಿಂ ನೃಪಸ್ಸದಾ ॥ ೧ ॥

ಪ್ರತ್ಯಬ್ದಂ ಪಾರ್ಥಿವಃ ಕುರ್ಯಾತ್ಪ್ರತಿಮಾಂ ಕಾಂಚನೀಂ ಹರೇಃ ।
ಅನ್ಯತೇಜೋಮಯೀಂ ವಾಪಿ ದಾರವೀಂ ವಾ ಶಿಲಾಮಯೀಂ ॥ ೨ ॥

ತಾಂ ಪ್ರತಿಷ್ಠಾಪ್ಯ ವಿಧಿನಾ ಮಾನೋನ್ಮಾನೈಶ್ಚ ಶಿಲ್ಪಿಭಿಃ ।
ಪ್ರತಿಷ್ಠಾಂ ವಿಧಿವತ್ತಸ್ಯಾಃ ಕುರ್ಯಾದ್ವಿಪ್ರೈಃ ಪುರೋಹಿತೈಃ ॥ ೩ ॥

ತೊಂಭತ್ತೊಂದನೆಯ ಅಧ್ಯಾಯ

ಎಲೈ ರಾಜೇಂದ್ರನೇ! ಜ್ಯೇಷ್ಠಮಾಸದಲ್ಲಿ ದಶಮೀತಿಥಿಯಲ್ಲಿ ವಿಷ್ಣುಪ್ರೀತ್ಯರ್ಥವಾಗಿ ರಾಜನಾದವನು ಯಾವ ಕ್ರಮದಿಂದ ಇಷ್ಟಿಯನ್ನು ಮಾಡಬೇಕೋ ಅದನ್ನು ತಿಳಿಸುವೆನು, ಕೇಳು.

೨. ಪ್ರತಿವರ್ಷದಲ್ಲಿಯೂ, ರಾಜನಾದವನು ಚಿನ್ನದಿಂದಲಾಗಲಿ, ಬೇರೆಯ ವಿಧವಾವ ಲೋಹದಿಂದಲಾಗಲೀ, ಮರದಿಂದಲಾಗಲೀ, ಕಲ್ಲಿನಿಂದಲಾಗಲೀ ವಿಷ್ಣುವಿನ ಪ್ರತಿಮೆಯನ್ನು ಮಾಡಿಸಬೇಕು.

೩. ಆ ಪ್ರತಿಮೆಯನ್ನು ಶಿಲ್ಪಿಗಳಿಂದ ಶಾಸ್ತ್ರಕ್ರಮವಾದ ಅಳತೆಗಳಿಂದ ಸಿದ್ಧ ಪಡಿಸಿ ಬ್ರಾಹ್ಮಣರಿಂದಲೂ, ಪುರೋಹಿತರಿಂದಲೂ ಆ ಪ್ರತಿಮೆಯ ಪ್ರತಿಷ್ಠೆಯನ್ನು ಕ್ರಮವಾಗಿ ಮಾಡಿಸಬೇಕು.

ತಾಂ ಸಂಸ್ಥಾಪ್ಯ ಸುರಾಗಾರೇ ಸ್ವಯಂ ವಾ ಯತ್ನತಃ ಕೃತೇ ।
ವಾಸುದೇವಸ್ಯ ಬೀಜೇನ ಪೂರ್ವೋಕ್ತವಿಧಿನಾ ತಥಾ ॥ ೪ ॥

ಸರ್ವೋಪಚಾರೈರ್ಭಕ್ತ್ಯಾ ತು ವಾಸುದೇವಂ ಪ್ರಪೂಜಯೇತ್ ।
ಪೂಜಾಂತೇ ಸಂಸ್ಕೃತೇ ವಹ್ನೌ ಕುಂಡಮಧ್ಯೇ ಸ್ಥಿತೋ ದ್ವಿಜಃ ॥ ೫ ॥

ಆಜ್ಯೈಃ ಸಹಸ್ರಂ ಜುಹುಯಾದಾಹುತೀನಾಂ ಹರೇಃ ಪ್ರಿಯಂ ।
ಸಂಪೂಜ್ಯ ವಾಸುದೇವಂ ತು ಹೋಮಂ ಕೃತ್ವಾ ತತೋ ದ್ವಿಜಃ ॥ ೬ ॥

ನೃಪಸ್ಯಾನುಮತೇ ತಾಂ ತು ಪ್ರತಿಮಾಂ ಮಂಡಲಂ ನಯೇತ್ ।
ಪ್ರತಿಮಾಯಾಃ ಕಪೋಲೌ ದ್ವೌ ಸ್ಪೃಷ್ಟ್ವಾ ದಕ್ಷಿಣಪಾಣಿನಾ ॥ ೭ ॥

ಪ್ರಾಣಪ್ರತಿಷ್ಠಾಂ ಕುರ್ವೀತ ತಸ್ಯಾಂ ದೇವಸ್ಯ ವೈ ಹರೇಃ ।
ಕೃತಾಯಾಂ ತು ಪ್ರತಿಷ್ಠಾಯಾಂ ಪ್ರಾಣಾನಾಂ ನೃಪಸತ್ತಮ ॥ ೮ ॥

---

೪. ಆ ಪ್ರತಿಮೆಯನ್ನು ಅದಕ್ಕಾಗಿ ರಚಿಸಿರುವ ದೇವಾಲಯದಲ್ಲಿ ಪ್ರತಿಷ್ಠೆ ಮಾಡುವಾಗ ಹಿಂದೆಹೇಳಿದ ವಾಸುದೇವಬೀಜಾಕ್ಷರವೇ ಮೊದಲಾದ ಕ್ರಮಗಳಿಂದಲೂ ಎಲ್ಲಾ ವಿಧವಾದ ಉಪಚಾರಗಳಿಂದಲೂ, ಭಕ್ತಿಯಿಂದ ಪೂಜಿಸಬೇಕು.

೫-೬. ಪೂಜೆಯನ್ನು ಮಾಡಿದನಂತರ ಕುಂಡಮಧ್ಯದಲ್ಲಿರುವ ಸಂಸ್ಕೃತವಾದ ಅಗ್ನಿಯಲ್ಲಿ ದ್ವಿಜನಾದವನು ವಿಷ್ಣುವಿನ ಪ್ರೀತಿಗಾಗಿ ತುಪ್ಪದಿಂದ ಸಾವಿರ ಹೋಮವನ್ನು ಮಾಡಬೇಕು ಹೋಮವು ಮುಗಿದಮೇಲೆ ವಿಷ್ಣುವನ್ನು ಪೂಜೆಮಾಡಿ, ರಾಜನ ಅನುಜ್ಞೆಯಂತೆ ಈ ಪ್ರತಿಮೆಯನ್ನು ಮಂಡಲದಲ್ಲಿ ಇರಿಸಬೇಕು.

೭-೮. ಪ್ರತಿಮೆಯ ಎರಡು ಕಪೋಲಗಳನ್ನೂ ಬಲಗೈಯಿಂದ ಸ್ಪರ್ಶಮಾಡಿ, ವಿಷ್ಣುವಿನ ಆ ಪ್ರತಿಮೆಯಲ್ಲಿ ಪ್ರಾಣಪ್ರತಿಷ್ಠೆಯನ್ನು ಮಾಡಬೇಕು. ಎಲೈ ರಾಜಶ್ರೇಷ್ಠನೇ ಕೇಳು, ಪ್ರಾಣಪ್ರತಿಷ್ಠೆಯನ್ನು ಮಾಡಿದನಂತರ ಆ ಪ್ರತಿಮೆಯಲ್ಲಿ ವಿಷ್ಣುವಿನ ಪ್ರಾಣಗಳು ತಾವಾಗಿಯೇ ಬಂದು ನೆಲಸಿರುವುವು.

ವಿಷ್ಣುಪ್ರಾಣಾಸ್ತಾಂ ಪ್ರತಿಮಾಮಾಯಾಂತಿ ನಿಯತಂ ಸ್ವಯಂ ।
ಪ್ರಾಣೇಷ್ವಥಾಗತೇಷ್ವಸ್ಯಾಂ ದೇವತ್ವಂ ನಿಯತಂ ಭವೇತ್ ॥ ೯ ॥

ಅಕೃತಾಯಾಂ ಪ್ರತಿಷ್ಠಾಯಾಂ ಪ್ರಾಣಾನಾಂ ಪ್ರತಿಮಾಸು ಚ ।
ಯಥಾ ಪೂರ್ವಂ ತಥಾ ಭಾವಸ್ತ್ವರ್ಣಾದೀನಾಂ ನ ವಿಷ್ಣುತಾ ॥ ೧೦ ॥

ಅನ್ಯೇಷಾಮಪಿ ದೇವಾನಾಂ ಪ್ರತಿಮಾಸ್ವಪಿ ಪಾರ್ಥಿವ ।
ಪ್ರಾಣಪ್ರತಿಷ್ಠಾ ಕರ್ತವ್ಯಾ ತಸ್ಯಾ ದೇವತ್ವಸಿದ್ಧಯೇ ॥ ೧೧ ॥

ಸುವರ್ಣಂ ತು ಸುವರ್ಣಂ ಸ್ಯಾಚ್ಛಿಲಾದಾರೂ ತಥಾತಿಲಾ ।
ಅನ್ಯಚ್ಚ ಸ್ವಸ್ವರೂಪಂ ಸ್ಯಾತ್ಪ್ರಾಣಸ್ಥಾಸಮ್ಮತೇ ಸದಾ ॥ ೧೨ ॥

ವಾಸುದೇವಸ್ಯ ಬೀಜೇನ ತದ್ವಿಷ್ಣೋರಿತ್ಯನೇನ ಚ ।
ತಥೈವಾಂಗಾಂಗಿಮಂತ್ರಾಭ್ಯಾಂ ಪ್ರತಿಷ್ಠಾಮಾಚರೇದ್ಧರೇಃ ॥ ೧೩ ॥

೯-೧೦. ಪ್ರತಿಮೆಯಲ್ಲಿ ಪ್ರಾಣಗಳು ಬಂದು ನೆಲಸಿದರೆ ಆಗ ನಿಶ್ಚಯವಾಗಿಯೂ ದೇವಭಾವವು ಉಂಟಾಗುವುದು. ಪ್ರಾಣಪ್ರತಿಷ್ಠೆಯು ಮಾಡಲ್ಪಡದಿದ್ದರೆ ಚಿನ್ನವೇ ಮೊದಲಾದ ಲೋಹಗಳಿಂದ ಮಾಡಿದ ಪ್ರತಿಮೆಯಲ್ಲಿ ವಿಷ್ಣುಭಾವವು ಉಂಟಾಗುವುದಿಲ್ಲ. ಹಿಂದಿನಂತೆ ಚಿನ್ನವೇ ಮೊದಲಾದ ಲೋಹಭಾವವೇ ಇರುವುದು.

೧೧. ಎಲೈ ರಾಜನೇ ಕೇಳು, ಇತರದೇವರ ಪ್ರತಿಮೆಗಳಲ್ಲಿಯೂ ಆಯಾಯ ದೇವಭಾವವು ಉಂಟಾಗುವುದಕ್ಕಾಗಿ ಪ್ರಾಣಪ್ರತಿಷ್ಠೆಯನ್ನು ಅವಶ್ಯವಾಗಿ ಮಾಡಬೇಕು.

೧೨. ಪ್ರಾಣಪ್ರತಿಷ್ಠೆಯನ್ನು ಮಾಡದಿದ್ದರೆ ಚಿನ್ನದ ಪ್ರತಿಮೆಯಲ್ಲಿ ಯಾವಾಗಲೂ ಚಿನ್ನವೇ ಇರುವುದು. ಮತ್ತೇನೂ ಇರುವುದಿಲ್ಲ. ಅದರಂತೆ ಮರದ ಪತ್ರಿಮೆಯಲ್ಲಿ ಮರವೂ, ಕಲ್ಲಿನ ವಿಗ್ರಹದಲ್ಲಿ ಕಲ್ಲೂ ಇರುವುವು. ಹೀಗೆಯೇ ಬೇರೆಯಕಡೆಯಲ್ಲಿಯೂ ಆಯಾಯ ದ್ರವ್ಯಭಾವಗಳೇ ಇರುವವು.

೧೩. ವಿಷ್ಣುವಿನ ಪ್ರಾಣಪ್ರತಿಷ್ಠೆಯ ವಿಷಯದಲ್ಲಿ ವಾಸುದೇವಬೀಜಮಂತ್ರವಾದ ಅಂ ಎಂಬ ಮಂತ್ರದಿಂದಲೂ " ತದ್ವಿಷ್ಣೋಃ ಪರಮಂ ಪದಂ " ಎಂಬ ಮಂತ್ರದಿಂದಲೂ ಹಾಗೆಯೇ ಕಲ್ಪೋಕ್ತವಾದ ಅಂಗಮಂತ್ರ ಮತ್ತು ಪ್ರಧಾನಮಂತ್ರ ಇವುಗಳಿಂದಲೂ ವಿಷ್ಣುವಿನ ಪ್ರಾಣಪ್ರತಿಷ್ಠೆಯನ್ನು ಮಾಡಬೇಕು.

ತಥೈವ ಹೃದಯೇಂಗುಷ್ಠಂ ದತ್ವಾ ಶಶ್ವಚ್ಚ ಮಂತ್ರವಿತ್ ।
ಏಭಿರ್ಮಂತ್ರೈಃ ಪ್ರತಿಷ್ಠಾಪ್ಯ ಹೃದಯೇಽಪಿ ಸಮಾಚರೇತ್ ॥ ೧೪ ॥

ಅಸ್ಯೈ ಪ್ರಾಣಾಃ ಪ್ರತಿಷ್ಠಂತು ಅಸ್ಯೈ ಪ್ರಾಣಾಃ ಕ್ಷರಂತು ಯತ್ ।
ಅಸೌ ದೇವತ್ವ ಸಂಖ್ಯಾಯೈ ಸ್ವಾಹೇತಿ ಯಜುರುಚ್ಚರ್ಣ ॥ ೧೫ ॥

ಅಂಗಮಂತ್ರೈರಂಗಿಮಂತ್ರೈರ್ವೈದಿಕೈರಿತ್ಯನೇನ ಚ ।
ಪ್ರಾಣಪ್ರತಿಷ್ಠಾಂ ಸರ್ವತ್ರ ಪ್ರತಿಮಾಸು ಸಮಾಚರೇತ್ ॥ ೧೬ ॥

ಪ್ರತಿಮಾಪೂಜನೇ ಕುರ್ಯಾದಾತ್ಮನ್ಯಪಿ ಚ ಮಂತ್ರವಿತ್ ।
ಪ್ರಾಣಪ್ರತಿಷ್ಠಾಂ ಪ್ರಥಮಂ ಪೂಜಾಭಾಗವಿಶುದ್ಧಯೇ ॥ ೧೭ ॥

ಅಸ್ಮಿನ್ ಪ್ರಾಣಪ್ರತಿಷ್ಠಾಂ ತು ಪ್ರತಿಮಾಪೂಜನಾದೃತೇ ।
ನ ಕಶ್ಚಿತ್ತು ಬುಧಃ ಕುರ್ಯಾತ್ಕೃತ್ವಾ ಮೃತ್ಯುಮವಾಪ್ನುಯಾತ್ ॥ ೧೮ ॥

---

೧೪. ಮಂತ್ರವನ್ನು ತಿಳಿದವನು ಪ್ರತಿಮೆಯ ಹೃದಯದಲ್ಲಿ ಬಾರಿಬಾರಿಗೂ ಅಂಗುಷ್ಠವನ್ನು ಇರಿಸಿ, ಈ ಮಂತ್ರಗಳಿಂದ ಪ್ರತಿಷ್ಠೆಯನ್ನು ಮಾಡಿ, ತನ್ನ ಹೃದಯದಲ್ಲಿಯೂ ಹೀಗೆಯೇ ಮಾಡಬೇಕು.

೧೫-೧೬. ಪ್ರತಿಮೆಗಳಿಗೆ ಪ್ರಾಣಪ್ರತಿಷ್ಠೆಯನ್ನು ಮಾಡುವ ಎಲ್ಲಾ ಸಂದರ್ಭಗಳಲ್ಲಿಯೂ "ಅಸ್ಯೈ ಪ್ರಾಣಾಃ ಪ್ರತಿಷ್ಠಂತು" "ಅಸ್ಯೈ ಪ್ರಾಣಾಃ ಕ್ಷರಂತು" "ಅಸೌ ದೇವತ್ವ ಸಂಖ್ಯಾಯೈ ಸ್ವಾಹಾ" ಎಂಬ ವೇದಮಂತ್ರಗಳನ್ನೂ, ಅಂಗಮಂತ್ರ, ಪ್ರಧಾನಮಂತ್ರಗಳನ್ನೂ ಹೇಳಬೇಕು.

೧೭. ಮಂತ್ರವನ್ನು ಬಲ್ಲವನು, ಪ್ರತಿಮೆಯ ಪೂಜೆಯನ್ನು ಮಾಡುವಾಗ ಪೂಜೆಯಭಾಗವು ಶುದ್ಧಿಯಾಗುವುದಕ್ಕಾಗಿ ಮೊದಲು ತನ್ನಲ್ಲಿ ಆತ್ಮಪ್ರಾಣಪ್ರತಿಷ್ಠೆಯನ್ನು ಮಾಡಿಕೊಳ್ಳಬೇಕು

೧೮. - ಮಂತ್ರವಿಧಿಯನ್ನು ತಿಳಿಯದವನು ಪ್ರತಿಮೆಯಲ್ಲಿ ಮಾತ್ರ ಪ್ರಾಣಪ್ರತಿಷ್ಠೆಯನ್ನು ಮಾಡಿ ಪೂಜಿಸಬೇಕು. ಆತ್ಮಪ್ರಾಣಪ್ರತಿಷ್ಠೆಯನ್ನು ಮಾಡಿಕೊಳ್ಳಬಾರದು. ಹಾಗೆ ತಿಳಿಯದೆ ಮಾಡಿಕೊಂಡರೆ ಅವನಿಗೆ ಮರಣವು ಸಂಭವಿಸುವುದು.

ವಿಷ್ಣೋರಿಷ್ಟಿಮಿಮಾಂ ಕೃತ್ವಾ ದಶಮ್ಯಾಂ ಪಾರ್ಥಿವೋತ್ತಮಃ ।
ತಸ್ಯಾಮೇವ ತು ಪೂರ್ಣಾಯಾಂ ಪ್ರತಿಮಾಂ ಸ್ಥಾಪಯೇತ್ತತಃ ॥ ೧೯ ॥

ಏವಂ ದಶಹರಾಯಾಂ ತು ಕೃತ್ವೇಷ್ಟಿಂ ಪಾರ್ಥಿವೋ ಹರೇಃ ।
ಸರ್ವಾ ಕಾಮಾನವಾಪ್ನೋತಿ ನಿರ್ವಿಘ್ನೋಽಪಿ ಸ ಜಾಯತೇ ॥ ೨೦ ॥

ಶ್ರೀಪಂಚಮ್ಯಾಂ ಶ್ರಿಯಂ ದೇವೀಂ ಕುಂದೈಸ್ಸಂಪೂಜಯೇತ್ಸದಾ ।
ವಾಸವಂ ಗಜರಾಜಸ್ಥಮುಪಹಾರೈಸ್ತಥೋತ್ತಮೈಃ ॥ ೨೧ ॥

ಲಕ್ಷ್ಮ್ಯಾಸ್ತಂತ್ರಂ ಮಹಾಮಂತ್ರಂ ವಾಸವಸ್ಯ ಪುರೋದಿತಂ ।
ಅತ್ರಾಪಿ ಪೂಜನೇ ಗ್ರಾಹ್ಯಂ ಮಂಡಲಾದಿ ಯಥಾಕ್ರಮಂ ॥ ೨೨ ॥

ಏವಂ ಕೃತೇ ಪೂಜನೇ ತು ಶ್ರೀಪಂಚಮ್ಯಾಂ ವಿಶೇಷತಃ ।
ಶ್ರೀಯುತೋ ನೃಪತಿರ್ಭೂಯಾನ್ನ ಶ್ರೀಹಾನಿಮವಾಪ್ನುಯಾತ್ ॥ ೨೩ ॥

---

೧೯. ರಾಜನು ಜೇಷ್ಠಮಾಸದ ದಶಮಿಯಲ್ಲಿ ವಿಷ್ಣುದೇವತಾಕವಾದ ಇಷ್ಟಿಯನ್ನು ಮಾಡಿದನಂತರ, ಆ ಪೂರ್ಣಿಮೆಯಲ್ಲಿ ಪ್ರತಿಮೆಯನ್ನು ಸ್ಥಾಪಿಸಬೇಕು.

೨೦. ರಾಜನು ದಶಮಿಯದಿನ ಹೀಗೆ ಇಷ್ಟಿಯನ್ನು ಮಾಡಿದರೆ ಎಲ್ಲಾವಿಘ್ನವಾವ ಅಪೇಕ್ಷೆಗಳನ್ನು ಹೊಂದುವನಲ್ಲದೆ ಅವನಿಗೆ ಯಾವವಿಧವಾದ ವಿಘ್ನವೂ ಉಂಟಾಗುವುದಿಲ್ಲ.

೨೧. ಶ್ರೀಪಂಚಮಿಯಲ್ಲಿ ಯಾವಾಗಲೂ ಶ್ರೀದೇವಿಯನ್ನು ಮಲ್ಲಿಗೆಯ ಹೂವುಗಳಿಂದ ಪೂಜಿಸಬೇಕು. ಐರಾವತದಮೇಲೆ ಕುಳಿರುವ ಇಂದ್ರನನ್ನು ಉತ್ತಮವಾದ ಭಕ್ಷ್ಯಭೋಜ್ಯಗಳಿಂದ ಪೂಜಿಸಿ ತೃಪ್ತಿಪಡಿಸಬೇಕು.

೨೨. ಲಕ್ಷ್ಮಿಯನ್ನೂ, ಇಂದ್ರನನ್ನೂ ಪೂಜೆಮಾಡುವ ಕ್ರಮವೂ, ಮಂತ್ರಗಳೂ ಸಹ ಹಿಂದೆಯೇ ಹೇಳಲ್ಪಟ್ಟಿರುವುವು. ಇಲ್ಲಿಯೂ ಸಹ ಅವರಂತೆಯೇ ಮಂಡಲಾದಿ ಪೂಜಾವಿಧಾನವನ್ನು ಅನುಸರಿಸಬೇಕು.

೨೩. ಈರೀತಿಯಾಗಿ, ಅದರಲ್ಲಿಯೂ ಶ್ರೀಪಂಚಮಿಯಲ್ಲಿ ವಿಶೇಷವಾಗಿ ಪೂಜೆಯನ್ನು ಮಾಡಿದರೆ ರಾಜನು ತುಂಬಾ ಐಶ್ವರ್ಯವಂತನಾಗುವನು. ಐಶ್ವರ್ಯದ ಕುಂದುಕೊರತೆಯು ಅವನಿಗೆ ಎಂದಿಗೂ ಉಂಟಾಗುವುದಿಲ್ಲ.

ಸದಾಚಾರವಿಶೇಷೋಽಯಂ ಕಥಿತಸ್ತವ ಪಾರ್ಥಿವ ।
ನಿಷೇಧೇ ತು ವಿಶೇಷಾಂಶ್ಚ ಶೃಣು ಯೇನ ಶ್ರೀಯೇಷ್ಯತೇ ॥ ೨೪ ॥

ಅಸಂಪೂಜ್ಯ ತಥಾ ವಿಷ್ಣುಂ ಶಿವಮಗ್ನಿಂ ಪುರಂದರಂ ।
ಅದತ್ತ್ವಾ ಚ ತಥಾ ದಾನಂ ನ ಭುಂಜೀತ ನೃಪಃ ಕ್ವಚಿತ್ ॥ ೨೫ ॥

ಹಾವಯೇದಗ್ನಿಹೋತ್ರಂ ತು ನಿತ್ಯಮೇವ ಪುರೋಹಿತೈಃ ।
ಅಕೃತ್ವಾ ಚಾಗ್ನಿಹೋತ್ರಂ ತು ಭುಂಜನ್ನರಕಮಾಪ್ನುಯಾತ್ ॥ ೨೬ ॥

ನಾರಕ್ಷಿತೇ ಗೃಹೇ ರಾಜಾ ರತ್ನದೀಪವಿವರ್ಜಿತೇ ।
ಸ್ವಪೇತ್ತಥಾ ಸ್ತ್ರೀಯಾ ಸಾರ್ಧಂ ನ ಕದಾಚನ ಸಂವಿಶೇತ್ ॥ ೨೭ ॥

ಭುಕ್ತ್ವಾನ್ನಂ ಶ್ರೀಫಲಂ ನಾದ್ಯಾತ್ತಥಾ ಧಾತ್ರೀಫಲಂ ನೃಪಃ ।
ಬುದ್ಧಿಕ್ಷಯಕರಾ ಹ್ಯೇತಾ ಮಾಷ ಆಸನಮೃತ್ತಿಕಾಃ ॥ ೨೮ ॥

---

೨೪. ಎಲೈ ರಾಜನೇ! ಈರೀತಿ ಸದಾಚಾರದ ವಿಶೇಷಗಳನ್ನು ನಿನಗೆ ಹೇಳಿರುವೆನು. ಐಶ್ವರ್ಯಪ್ರಾಪ್ತಿಗಾಗಿ ಆಚರಿಸಬೇಕಾದ ವಿಶೇಷ ನಿಯಮಗಳನ್ನೂ, ನಿಷೇಧಗಳನ್ನೂ ಹೇಳುವೆನು, ಕೇಳು.

೨೫. ವಿಷ್ಣು, ಶಿವ, ಅಗ್ನಿ, ಇಂದ್ರ ಇವರುಗಳನ್ನು ಪೂಜೆಮಾಡದೆ, ದಾನವನ್ನೂ ಮಾಡದೆ, ರಾಜನಾದವನು ಯಾವಾಗಲೂ ಊಟಮಾಡಬಾರದು.

೨೬. ರಾಜನು ಪ್ರತಿದಿನವೂ ಪುರೋಹಿತರಿಂದ ಅಗ್ನಿಹೋತ್ರಹೋಮವನ್ನು ಮಾಡಿಸಬೇಕು. ಅಗ್ನಿಹೋತ್ರವನ್ನು ಮಾಡದೆ ಊಟಮಾಡಿದರೆ ನರಕವನ್ನು ಹೊಂದುವನು.

೨೭. ರಕ್ಷಣೆಯಿಲ್ಲದಿರುವ ಮನೆಯಲ್ಲಿಯೂ, ರತ್ನ ಮತ್ತು ದೀಪ ಇವುಗಳಿಲ್ಲದ ಕಡೆಯಲ್ಲಿಯೂ ರಾಜನು ಮಲಗಬಾರದು. ಅಂತಹ ಸ್ಥಳದಲ್ಲಿ ರಾಜನು ಎಂದಿಗೂ ಸ್ತ್ರೀಜೊತೆಯಲ್ಲಿರಬಾರದು.

೨೮. ಅನ್ನವನ್ನು ಊಟಮಾಡಿದಮೇಲೆ ತೆಂಗಿನಕಾಯನ್ನೂ, ನೆಲ್ಲಿಯ ಕಾಯನ್ನೂ ತಿನ್ನಬಾರದು. ಇವುಗಳೂ, ಉದ್ದು, ಮದ್ಯ, ಮಣ್ಣು ಇವುಗಳು ಬುದ್ಧಿಯನ್ನು ನಾಶಗೊಳಿಸುವವು.

ನಿಂಬಾಟರೂಷಚೂತಾಶ್ಚ ಬುದ್ಧಿವೃದ್ಧಿಕರಾ ಮತಾಃ ।
ಬುದ್ಧಿಕ್ಷಯಕರಾನ್ನಿತ್ಯಂ ತ್ಯಜೇದ್ರಾಜಾ ಚ ಭೋಜನೇ ॥ ೨೯ ॥

ಭಕ್ಷಯೇದನ್ನಪಂ ಬುದ್ಧಿವೃದ್ಧಿಹೇತುಂ ನೃಪೋತ್ತಮಃ ।
ನ ಪರ್ಯಾಯವಿಹೀನಂ ತು ಸ್ಪಾರೋಹೇದಾಸನಂ ನೃಪಃ ॥ ೩೦ ॥

ನ ಯಾನಂ ನ ಗಜಂ ನಾಶ್ವಮಾರೋಹೇದ್ಧೀನಮಾಸನೈಃ ।
ನೈಕಸ್ತು ವಿಚರೇದ್ರಾಜಾ ಕದಾಚಿದಪಿ ನಿರ್ಜನೇ ॥ ೩೧ ॥

ಮದಹೇತುಂ ನ ಭುಂಜೀಯಾತ್ಕದಾಚಿದಪಿ ಭೋಜನೇ ।
ಕದಾಚಿನ್ನಾಪಿ ಸೇವೇತ ಹ್ಯಷ್ಟಮ್ಯಾಂ ಮಾಂಸಮೈಥುನೇ ॥ ೩೨ ॥

ದರ್ಶಸ್ನಾನಂ ಗಯಾಶ್ರಾದ್ಧಂ ತಿಲೈಸ್ತರ್ಪಣಮೇವ ಚ ।
ನ ಜೀವತ್ಪಿತೃಕೋ ಭೂಪಃ ಕುರ್ಯಾತ್ಕೃತ್ವಾಘಮಾಪ್ನುಯಾತ್ ॥ ೩೩ ॥

---

೨೯. ಬೇವು, ಹಲಸು, ಮಾವು ಇವುಗಳು ಬುದ್ಧಿಯನ್ನು ಹೆಚ್ಚಿಸುವುವುಗಳು. ರಾಜನು ಊಟಮಾಡುವಾಗ ಬುದ್ಧಿಯನ್ನು ಕಡಿಮೆಮಾಡುವ ಪದಾರ್ಥವನ್ನು ಬಿಡಬೇಕು-

೩೦. ರಾಜನು ಯಾವಾಗಲೂ, ಬುದ್ಧಿಯನ್ನು ವೃದ್ಧಿಗೊಳಿಸುವ ಪದಾರ್ಥಗಳನ್ನೇ ತಿನ್ನಬೇಕು. ರಾಜನು ತನ್ನ ಮರ್ಯಾದೆಗೆ ಯೋಗ್ಯವಲ್ಲದಿರುವ ಆಸನವನ್ನು ಹತ್ತಬಾರದು.

೩೧. ರಾಜನು ಆಸನವಿಲ್ಲದಿರುವ ಮೇನಾ ಮೊದಲಾದುವುಗಳನ್ನೂ, ಆನೆಯನ್ನೂ, ಕುದುರೆಯನ್ನೂ, ಸಹ ಹತ್ತಕೂಡದು. ಜನಸಂಚಾರವಿಲ್ಲದಿರುವ ಪ್ರದೇಶದಲ್ಲಿ ಒಬ್ಬಂಟಿಕನಾಗಿ ಯಾವಾಗಲೂ ತಿರುಗಾಡಬಾರದು.

೩೨. ಮಾದಕಪದಾರ್ಥವನ್ನು ಯಾವಾಗಲೂ ಊಟಮಾಡುವಾಗ ತಿನ್ನಬಾರದು. ಅಷ್ಟಮಿಯಲ್ಲಿ ಮಾಂಸಹಾರವನ್ನೂ, ಸ್ತ್ರೀಸಂಭೋಗವನ್ನೂ, ಬಿಡಬೇಕು.

೩೩. ತಂದೆಯು ಜೀವಂತನಾಗಿದ್ದರೆ ಅಂತಹ ರಾಜನು ಅಮಾವಾಸ್ಯೆಯ ಸ್ನಾನವನ್ನೂ, ಗಯಾಶ್ರಾದ್ಧವನ್ನೂ, ತಿಲತರ್ಪಣವನ್ನೂ, ಮಾಡಬಾರದು. ಮಾಡಿದರೆ ಪಾಪವನ್ನು ಹೊಂದುವನು.

ನ ಕ್ಷೇತ್ರಜಾದೀಂಸ್ತನಯಾನ್ ರಾಜ್ಯೇ ರಾಜಾಭಿಷೇಚಯೇತ್ ।
ಪಿತೃಣಾಂ ಶುದ್ಧಯೇ ನಿತ್ಯಮೌರಸೇ ತನಯೇ ಸತಿ ॥ ೩೪ ॥

ಔರಸಃ ಕ್ಷೇತ್ರಜಶ್ಚೈವ ದತ್ತಃ ಕೃತ್ರಿಮ ಏವ ಚ ।
ಗೂಢೋತ್ಪನ್ನೋಽಪವಿದ್ಧಶ್ಚ ಭಾಗಹಾರ್ಯಸ್ತನಯಾ ಇಮೇ ॥ ೩೫ ॥

ಕಾನೀನಶ್ಚ ಸಹೋಢಶ್ಚ ಕ್ರೀತಃ ಪೌನರ್ಭವಸ್ತಥಾ ।
ಸ್ವಯಂದತ್ತಶ್ಚ ದಾಸಶ್ಚ ಷಡೇತೇ ಪುತ್ರಪಾಂಸುಲಾಃ ॥ ೩೬ ॥

ಅಭಾವೇ ಪೂರ್ವಪೂರ್ವೇಷಾಂ ಪರಾ ಸಮಭಿಷೇಚಯೇತ್ ।
ಪೌನರ್ಭವಂ ಸ್ವಯಂದತ್ತಂ ದಾಸಂ ರಾಜ್ಯೇ ನ ಯೋಜಯೇತ್ ॥ ೩೭ ॥

---

೩೪. ತನ್ನ ಪಟ್ಟಮಹಿಷಿಯಲ್ಲಿ ಜನಿಸಿದ ಔರಸಪುತ್ರನಿದ್ದರೆ, ಅವನನ್ನು ಬಿಟ್ಟು, ಇತರ ಪತ್ನಿಯರಲ್ಲಿ ಅಥವಾ ಸ್ತ್ರೀಯರಲ್ಲಿ ತನಗೆ ಜನಿಸಿದ ಮಕ್ಕಳಿಗೆ ರಾಜ್ಯಾಭಿಷೇಕವನ್ನು ಮಾಡಬಾರದು.

೩೫-೩೭. ತನ್ನ ಪತ್ನಿಯಲ್ಲಿ ತನಗೆ ಜನಿಸಿದವನು, ಇತರ ಸ್ತ್ರೀಯಲ್ಲಿ ತನಗೆ ಜನಿಸಿದವನು, ದತ್ತು ಮಾಡಿಕೊಂಡ ಮಗನು, ಪ್ರೀತಿಯಿಂದ ಪುತ್ರನಂತೆ ಸಾಕಿದ ಮಗನು, ರಹಸ್ಯವಾಗಿ (ಎಂದರೆ ಅಕ್ರಮವಾಗಿ) ಜನಿಸಿದವನು, ಮಾತಾಪಿತೃಗಳಿಂದ ಬಿಡಲ್ಪಟ್ಟು ತನ್ನ ಪೋಷಣೆಗೆ ಒಳಗಾದವನು, ಎಂದು ಪುತ್ರರಲ್ಲಿ ಆರು ವಿಧವು. ಈ ಆರು ವಿಧಪುತ್ರರೂ ಆಸ್ತಿಯ ಭಾಗಕ್ಕೆ ಅರ್ಹರು. ಮದುವೆಯಾಗದ ಕನ್ಯೆಯಲ್ಲಿ ಜನಿಸಿದವನು, ಪುತ್ರನೆಂದು ತಿಳಿದು ಪೋಷಿಸಲ್ಪಟ್ಟವನು, ಕ್ರಯಕ್ಕೆ ತೆಗೆದುಕೊಂಡು ಸಾಕಲ್ಪಟ್ಟವನು, ಬಿಟ್ಟಪತ್ನಿಯಿಂದ ಜನಿಸಿದವನು, ತಾನಾಗಿಯೇ ಮಗನಾಗಿ ಒಪ್ಪಿಬಂದವನು, ದಾಸನಾದವನು, ಈ ಆರುಜನಗಳೂ ಮಕ್ಕಳುಗಳಲ್ಲಿ ನಿಕೃಷ್ಟರಾದವರು, ಈ ಹನ್ನೆರಡು ವಿಧವಾದ ಪುತ್ರರಲ್ಲಿ ಮೊದಲು ಹೇಳಿದವರು ಉತ್ತಮವು. ಎಂದರೆ ಮೊದಲು ಹೇಳಿದ ಔರಸಪುತ್ರನು ಶ್ರೇಷ್ಠನು, ಬಳಿಕ ಎರಡನೆಯವನು. ಈರೀತಿಒಬ್ಬರಿಗಿಂತಲೂ ಮತ್ತೊಬ್ಬನು ಕನಿಷ್ಠನು. ಈ ಕ್ರಮದಂತೆ ಯಾರು ಉತ್ತಮರಾಗಿರುವರೋ ಅವರಿಗೆ ರಾಜ್ಯಾಭಿಷೇಕಮಾಡಬೇಕು. ಆದರೆ, ಕಡೆಯ ಮೂರು ಮಂದಿ ಎಂದರೆ, ಪೌನರ್ಭವ, ಸ್ವಯಂದತ್ತ, ದಾಸ ಇವರುಗಳಿಗೆ ಎಂದಿಗೂ ರಾಜ್ಯವನ್ನು ಕೊಡಬಾರದು. ಅವರು ರಾಜ್ಯಕ್ಕೆ ಅನರ್ಹರು.

ದತ್ತಾದ್ಯಾಶ್ಚಾಪಿ ತನಯಾ ನಿಜಗೋತ್ರೇಣ ಸಂಸ್ಕೃತಾಃ ।
ಆಯಾಂತಿ ಪುತ್ರತಾಂ ಸಮ್ಯಗಸ್ಯಬೀಜಸಮುದ್ಭವಾಃ ॥ ೩೮ ॥

ಪಿತುರ್ಗೋತ್ರೇಣ ಯಃ ಪುತ್ರಃ ಸಂಸ್ಕೃತಃ ಪೃಥಿವೀಪತೇಃ ।
ಆಚೂಡಾಂತಂ ನ ಪುತ್ರಸ್ಯ ಪುತ್ರತಾಂ ಯಾತಿ ಚಾನ್ಯತಃ ॥ ೩೯ ॥

ಚೂಡಾಂತಾ ಯದಿ ಸಂಸ್ಕಾರಾ ನಿಜಗೋತ್ರೇಣ ಸಂಸ್ಥಿತಾಃ ।
ದತ್ತಾದ್ಯಾಸ್ತನಯಾಸ್ತೇ ಸ್ಯುರನ್ಯಥಾ ದಾಸ ಉಚ್ಯತೇ ॥ ೪೦ ॥

ಊರ್ಧ್ವಂ ತು ಪಂಚಮಾದ್ವರ್ಷಾದ್ದತ್ತಾದ್ಯಾಂಶ್ಚ ಸುತಾನ್ನೃಪ ।
ಗೃಹೀತ್ವಾ ಪಂಚವರ್ಷೀಯಂ ಪುತ್ರೇಷ್ಟಿಂ ಪ್ರಥಮಂ ಚರೇತ್ ॥ ೪೧ ॥

ಪೌನರ್ಭವಂ ತು ತನಯಂ ಜಾತಮಾತ್ರಂ ಸಮಾನಯೇತ್ ।
ಕೃತ್ವಾ ಪೌನರ್ಭವಷ್ಟೋಮಂ ಜಾತಮಾತ್ರಸ್ಯ ತಸ್ಯ ವೈ ॥ ೪೨ ॥

೩೮-೪೦. ಹಿಂದೆ ಹೇಳಿದ ಪುತ್ರರ ಪೈಕಿ ದತ್ತುಪುತ್ರನೇ ಮೊದಲಾದವರಿಗೆ ತನ್ನ ಗೋತ್ರರೀತಿಯಿಂದ ಸಂಸ್ಕಾರಮಾಡಿದರೆ, ಅವರು ಬೇರೆ ಗೋತ್ರದವರಾದರೂ, ತನಗೆ ಪುತ್ರಭಾವವನ್ನು ಸಂಪೂರ್ಣವಾಗಿ ಹೊಂದುವರು. ಆದರೆ ಈರೀತಿ ಸಂಸ್ಕೃತನಾದ ಪುತ್ರನು ಚಾತಕರ್ಮನಾಮಕರಣಾದಿಗಳಿಂದ ಸಂಸ್ಕೃತನಾದರೂ ಪುತ್ರನಾಗುವುದಿಲ್ಲ. ಚೂಡಾಕರ್ಮವೆಂಬ ಸಂಸ್ಕಾರವನ್ನು ಮಾಡಿದನಂತರವೇ ಅವನು ರಾಜನಿಗೆ ಪುತ್ರನೆಂದು ಪರಿಗಣಿಸಲ್ಪಡುವನು. ಆದುದರಿಂದ ಚೂಡಾಕರ್ಮದವರಿಗೂ ತನ್ನ ಗೋತ್ರದರೀತಿಯಿಂದಲೇ ದತ್ತಪುತ್ರನಿಗೆ ಸಂಸ್ಕಾರಾದಿಗಳನ್ನು ಮಾಡಬೇಕು. ಹಾಗೆ ಮಾಡಿದರೆ ಮಾತ್ರವೇ ಪುತ್ರನಾಗುವನು. ಇಲ್ಲದಿದ್ದರೆ ದಾಸನಾಗುವನು.

೪೧. ಎಲೈರಾಜನೇ ಕೇಳು, ಐದು ವರ್ಷ ಅಥವಾ ಅದಕ್ಕೆ ಮೇಲ್ಪಟ್ಟ ವಯಸ್ಸಿನ ಮಕ್ಕಳನ್ನು ದತ್ತು ಮಾಡಿಕೊಳ್ಳಬೇಕು. ಅಂತಹ ಐದು ವರ್ಷದ ಬಾಲಕನನ್ನು ಸ್ವೀಕಾರಮಾಡಿ ಪುತ್ರೇಷ್ಟಿಯೆಂಬ ಸಂಸ್ಕಾರವನ್ನು ಮಾಡಬೇಕು.

೪೨-೪೩. ಪತಿಯನ್ನು ಬಿಟ್ಟವಳು, ಅಥವಾ ಪತಿಯಿಂದ ಬಿಡಲ್ಪಟ್ಟವಳು, ಇಂತಹ ಸ್ತ್ರೀಗೆ ಪುನರ್ಭೂಃ ಎಂದು ಹೆಸರು. ಅವಳಲ್ಲಿ ಜನಿಸಿದ ಪುತ್ರನಿಗೆ ಪೌನರ್ಭವ ಎಂದು ಹೆಸರು. ಪೌನರ್ಭವ ಎಂಬ ಪುತ್ರನನ್ನು ಹುಟ್ಟಿದಕೂಡಲೇ ಕರೆದುಕೊಂಡು

ಸರ್ವಾಂಸ್ತು ಕುರ್ಯಾತ್ಸಸ್ಕಾರಾನ್ ಜಾತಕರ್ಮಾದಿಕಾನ್ ನರಃ ।
ಕೃತೇ ಪೌನರ್ಭವಷ್ಟ್ವೇಮೇ ಸುತಃ ಪೌನರ್ಭವಃ ಸ್ಮೃತಃ ॥ ೪೩ ॥

ಏಕೋದ್ದಿಷ್ಟಂ ಪಿತುಃ ಕುರ್ಯಾನ್ನ ಶ್ರಾದ್ಧಂ ಪಾರ್ವಣಾದಿಕಂ ।
ಕ್ರೀತಾ ಯಾ ವನಿತಾ ಮೂಲ್ಯೈಃ ಸಾ ದಾಸೀತಿ ನಿಗದ್ಯತೇ ॥ ೪೪ ॥

ತಸ್ಯಾಂ ಯೋ ಜಾಯತೇ ಪುತ್ರೋ ದಾಸಃ ಪುತ್ರಸ್ತು ಸ ಸ್ಮೃತಃ ।
ನ ರಾಜ್ಞೋ ರಾಜ್ಯಭಾಕ್ ಸ ಸ್ಯಾದ್ವಿಪ್ರಾಣಾಂ ನಾಪಿ ಶ್ರಾದ್ಧಕೃತ್ ॥

ಅಧಮಸ್ಸರ್ವಪುತ್ರೇಭ್ಯಸ್ತಂ ತಸ್ಮಾತ್ಪರಿವರ್ಜಯೇತ್ ।
ಪುರಾಣಂ ಧರ್ಮಶಾಸ್ತ್ರಾಣಿ ಸಂಹಿತಾಶ್ಚ ಮುನೀರಿತಾಃ ॥ ೪೬ ॥

ನಾಧ್ಯಾಪಯೇನ್ನೃಪಃ ಶೂದ್ರೈರ್ವಿಹಿತಾನಿ ಯದೃಚ್ಛಯಾ ।
ಯಸ್ಯ ರಾಜ್ಯೇ ಸದಾ ಶೂದ್ರಾಃ ಪುರಾಣಂ ಸಂಹಿತಾಂ ತಥಾ ॥ ೪೭ ॥

ಬಂದು, ಅವನಿಗೆ "ಪೌನರ್ಭವಷ್ಟ್ವೇಮ" ಎಂಬ ಇಷ್ಟಿಯನ್ನು ಮಾಡಿ, ಜಾತ ಕರ್ಮವೇ ಮೊದಲಾದ ಸಂಸ್ಕಾರಗಳೆಲ್ಲವನ್ನೂ ಮಾಡಬೇಕು. ಪುನರ್ಭವ ಎಂಬ ಇಷ್ಟಿಯನ್ನು ಮಾಡಿದ್ದರಿಂದ ಅವನು ಪೌನರ್ಭವನೆನಿಸಿಕೊಳ್ಳುವನು.

೪೪-೪೫. ಪೌನರ್ಭವನಾದವನು ತಂದೆಗೆ ಏಕೋದ್ದಿಷ್ಟಶ್ರಾದ್ಧವನ್ನು ಮಾಡ ಬೇಕು. ಪಾರ್ವಣಶ್ರಾದ್ಧವೇ ಮೊದಲಾದುದನ್ನು ಮಾಡಬಾರದು. ಯಾವ ಸ್ತ್ರೀ ಯನ್ನು ಕ್ರಯಕ್ಕೆ ತೆಗೆದುಕೊಳ್ಳುವನೋ ಅವಳು ದಾಸಿ ಎನಿಸಿಕೊಳ್ಳುವಳು. ಅವಳಲ್ಲಿ ಹುಟ್ಟಿದ ಪುತ್ರನು ದಾಸೀಪುತ್ರನೆನಿಸಿಕೊಳ್ಳುವನು. ಅವನು ರಾಜ್ಯದಲ್ಲಿ ಪಟ್ಟಾಭಿ ಷೇಕಕ್ಕೆ ಅರ್ಹನಲ್ಲ. ಬ್ರಾಹ್ಮಣರಲ್ಲಿ ಆ ದಾಸೀಪುತ್ರನಾದವನು ಶ್ರಾದ್ಧಮಾಡಲು ಯೋಗ್ಯನಲ್ಲ. ಓಗಿರುವುದರಿಂದ ಅವನು ಎಲ್ಲಾ ಮಕ್ಕಳಿಗಿಂತಲೂ ಅಧಮನು. ಆದ್ದರಿಂದ ಅವನನ್ನು ಸರ್ವ ಕರ್ಮಗಳಲ್ಲಿಯೂ ಬಿಡಬೇಕು.

೪೬-೪೭. ಮುನಿಗಳು ಮಾಡಿರುವ ಪುರಾಣವನ್ನೂ, ಧರ್ಮಶಾಸ್ತ್ರಗಳನ್ನೂ, ಮತ್ತು ಸಂಹಿತಾಗ್ರಂಥಗಳನ್ನೂ ಸಹ ರಾಜನು ಯಾವಾಗಲೂ ಶೂದ್ರರಿಂದ ಪಾಠ ವನ್ನು, ಹೇಳಿಸಕೂಡದು. ಯಾವ ರಾಜ್ಯದಲ್ಲಿ ಶೂದ್ರರು ಎಂದರೆ ಅನರ್ಹರು ಪುರಾಣವನ್ನೂ, ಸಂಹಿತೆಯನ್ನೂ ಯಾವಾಗಲೂ ಪಠಿಸುವರೋ ಆ ರಾಜನಿಗೂ, ಅವನ ವಂಶದವರಿಗೂ, ರಾಷ್ಟ್ರದ ಜನರಿಗೂ ಆಯುಃಕ್ಷೀಣವಾಗುವುದು.

ಪಠಂತಿ ಸ್ಯಾತ್ಸಹೀನಾಯುಃ ರಾಜಾ ರಾಷ್ಟ್ರೇಣ ಸಾನ್ವಯಃ ।
ಮೋಹಾದ್ವಾ ಕಾಮತಃ ಶೂದ್ರಃ ಪುರಾಣಂ ಸಂಹಿತಾಂ ಸ್ಮೃತಿಂ ॥ ೪೮ ॥

ಪಠನ್ನರಕಮಾಪ್ನೋತಿ ಪಿತೃಭಿಸ್ಸಹ ಪಾಪಕೃತ್ ।
ಶೂದ್ರೇಭ್ಯೋ ವಿಹಿತಂ ಯತ್ತು ಯಚ್ಚ ಮಂತ್ರ ಉದಾಹೃತಃ ॥ ೪೯ ॥

ತದ್ಧಿ ಪ್ರವಚನಾದ್ರಾಜ್ಯಂ ದ್ವಯಂ ಶೂದ್ರೈಃ ಸದೈವ ಹಿ ।
ನ ಯೋಜಯೇನ್ನೃಪಶ್ಶೂದ್ರಂ ವ್ಯವಹಾರಸ್ಯ ದರ್ಶನೇ ॥ ೫೦ ॥

ನಿಯೋಜ್ಯ ತತ್ರ ತಂ ಭೂಪಃ ತಾಮಿಸ್ರೇ ಣೇನ ಪಚ್ಯತೇ ।
ಹೀನಾಯುಶ್ಚ ಭವೇಲ್ಲೋಕೇ ರಾಜಾ ವಾಪಿ ಸಹಾಯಜಃ ॥ ೫೧ ॥

ಕಾಣಂ ವ್ಯಂಗಮಪುತ್ರಂ ವಾ ನಾಭಿಜ್ಞಮಜಿತೇಂದ್ರಿಯಂ ।
ನ ಹ್ರಸ್ವಂ ವ್ಯಾಧಿತಂ ವಾಪಿ ನೃಪಃ ಕುರ್ಯಾತ್ಪುರೋಹಿತಂ ॥ ೫೨ ॥

---

೪೮. ಶೂದ್ರನಾದವನು ಅಜ್ಞಾನದಿಂದಾಗಲಿ, ಇಚ್ಛಾಪೂರ್ವಕವಾಗಿಯಾಗಲಿ, ಪುರಾಣವನ್ನೂ, ಸಂಹಿತೆಯನ್ನೂ, ಸ್ಮೃತಿಯನ್ನೂ ಪಠಿಸಿದ್ದಾದರೆ ಅವನು ಪಾಪಿಯಾಗಿ ತನ್ನ ಪಿತೃಗಳೊಡನೆ ನರಕವನ್ನು ಪೊಂದುವನು.

೪೯-೫೧. ಶೂದ್ರರಿಗಾಗಿಯೇ ಯಾವ ಶಾಸ್ತ್ರವು ವಿಹಿತವಾಗಿರುವುದೋ, ಯಾವ ಮಂತ್ರವು ಹೇಳಲ್ಪಟ್ಟಿರುವುದೋ, ಅವುಗಳನ್ನು ಮಾತ್ರ ಶೂದ್ರರು ಉಪದೇಶ ಮೂಲಕವಾಗಿ ಹೊಂದಿ ಅನುಷ್ಠಾನಮಾಡಬಹುದು. ರಾಜನು ಶೂದ್ರನನ್ನು ಧರ್ಮ ವಿಚಾರದಲ್ಲಿಯೂ, ನ್ಯಾಯವಿಚಾರದಲ್ಲಿಯೂ ನೇಮಿಸಬಾರದು. ಹಾಗೆ ತಿಳಿದು ಅಥವಾ ತಿಳಿಯದೆ ಶೂದ್ರನನ್ನು ಸೇರಿಸಿದರೆ ಅವನೊಡನೆಯೇ ತಾನೂ ತಾಮಿಸ್ರ ವೆಂಬ ನರಕಕ್ಕೆ ಹೋಗಿ ಶಿಕ್ಷೆಯನ್ನು ಅನುಭವಿಸುವನು ಮತ್ತು ಲೋಕದಲ್ಲಿ ತಾನು ರಾಜನೇ ಆದಾಗ್ಯೂ ಆ ಶೂದ್ರನಿಗೆ ಅಂತಹ ವಿಚಾರಗಳಲ್ಲಿ ಸಹಾಯವಾಡುವುದರಿಂದ ಆಯುಸ್ಸು ಕಡಿಮೆಯಾಗುವುದು.

೫೨. ಧೂರೆಯು, ಕುರುಡನನ್ನೂ, ಅಂಗಹೀನನನ್ನೂ, ಮಕ್ಕಳಿಲ್ಲದವನನ್ನೂ, ದಡ್ಡನನ್ನೂ, ಇಂದ್ರಿಯನಿಗ್ರಹವಿಲ್ಲದವನನ್ನೂ, ಕುಳ್ಳನನ್ನೂ, ರೋಗಿಯನ್ನೂ ಕೂಡ ಪುರೋಹಿತನನ್ನಾಗಿ ಮಾಡಿಕೊಳ್ಳಬಾರದು.

ಕೃಪಣಸ್ಯ ಧನಂ ರಾಜಾ ನ ಗೃಹ್ಣೀಯಾತ್ಕದಾಚನ ।
ನ ದ್ವಿಜಾನಾಂ ತಥಾ ದದ್ಯಾದ್ಧನಾನಿ ವಿಪುಲಾನ್ಯಪಿ ॥ ೫೩ ॥

ನಾರೋಹೇತ್ಕಾಮುಕೋನ್ಮತ್ತಗಜಂ ರಾಜಾ ಕದಾಚನ ।
ಆರುಹ್ಯ ಕಾಮುಕಂ ತತ್ತು ಪರತ್ರೇಹ ವಿಷೀದತಿ ॥ ೫೪ ॥

ಅನಾಯುಷ್ಯಂ ನ ಕುರ್ಯಾತ್ತು ಕರ್ಮ ಭೂಪಃ ಕದಾಚನ ।
ಸತತಂ ಚಾಯುಷೋ ವೃದ್ಧೌ ಯತೇತ ಸಕಲೈರ್ಜನೈಃ ॥ ೫೫ ॥

ನ ಕ್ರೂರವಾರೇ ನಾಷ್ಟಮ್ಯಾಂ ನ ಷಷ್ಠ್ಯಾಂ ನೃಪಸತ್ತಮಃ ।
ಅಂಜನಾಭ್ಯಂಜನೇ ಕುರ್ಯಾತ್ತಾಂಬೂಲಸ್ಯಾಪಿ ಭೋಜನಂ ॥ ೫೬ ॥

ಅತಿಸೂಕ್ಷ್ಮಂ ತಥಾ ಪೂರ್ಣಂ ಗ್ರಹಣಂ ಚಂದ್ರಸೂರ್ಯಯೋಃ ।
ನಾಲೋಕಯೇತ್ಸ್ವಯಂ ರಾಜಾ ರಕ್ತಂ ಸೂರ್ಯಂ ತಥೈವ ಚ ॥ ೫೭ ॥

---

೫೩. ರಾಜನು ಲೋಭಿಯ ಧನವನ್ನು ಯಾವಾಗಲೂ ತೆಗೆದುಕೊಳ್ಳ ಬಾರದು. ಬ್ರಾಹ್ಮಣರಿಗೆ ದ್ರವ್ಯವನ್ನು ಮಿತಿಮೀರಿ ಕೊಡಬಾರದು.

೫೪. ರಾಜನು ಮದಿಸಿದ ಮತ್ತು ಹತೋಟಿಯಿಲ್ಲದಿರುವ ಆನೆಯನ್ನು ಯಾವಾ ಗಲೂ ಹತ್ತಬಾರದು. ಹಾಗೆ ಹತ್ತಿದರೆ ಇಹಪರಲೋಕಗಳಲ್ಲಿ ದುಃಖವನ್ನನುಭವಿ ಸುವನು.

೫೫ ರಾಜನಾದವನು ಆಯುಸ್ಸನ್ನು ನಾಶಪಡಿಸುವ ದುಷ್ಕೃತ್ಯವನ್ನು ಯಾವಾಗಲೂ ಮಾಡಬಾರದು. ಆಯುರ್ವೃದ್ಧಿಗಾಗಿ ಸರ್ವರೊಡನೆ ಪ್ರಯತ್ನ ಪಡಬೇಕು.

೫೬. ರಾಜನು ಕ್ರೂರವಾವ ದಿವಸವಲ್ಲಿಯೂ, ಅಷ್ಟಮಿ, ಷಷ್ಠಿ, ಈ ದಿನಗ ಳಲ್ಲಿಯೂ ನೇತ್ರಾಂಜನವನ್ನು ಉಪಯೋಗಿಸಬಾರದು. ಅಭ್ಯಂಜನವನ್ನೂ ಮಾಡ ಬಾರದು. ತಾಂಬೂಲವನ್ನೂ ಹಾಕಿಕೊಳ್ಳಬಾರದು.

೫೭. ರಾಜನು ಅಲ್ಪಗ್ರಾಸ ಮತ್ತು ಪೂರ್ಣಗ್ರಾಸವೆಂಬ ಎಂದಿನ ಒಟ್ಟಳ ಸೂಕ್ಷ್ಮವಾದ ಮತ್ತು ಬಹಳ ಪೂರ್ಣವಾಗಿರುವ ಚಂದ್ರಸೂರ್ಯರ ಗ್ರಹಣವನ್ನು ನೋಡಬಾರದು. ಕೆಂಪಗಿರುವ ಸೂರ್ಯನನ್ನೂ ಸಹ ಉಪದೇಶಪೂರ್ವಕವಾಗಿ ನೋಡಬಾರದು.

ಉತ್ಪಾತಂ ಜಾಯತೇ ಯತ್ತು ದಿವ್ಯಂ ಭೌಮಂ ಚ ನಾಭಸಂ ।
ನೇಕ್ಷೇತ ಯತ್ನಾನ್ನೃಪತಿರ್ದೃಷ್ಟ್ವಾ ನಾದ್ಯಾತ್ತ್ರ್ಯಹಂ ಪುನಃ ॥ ೫೮ ॥

ಸರ್ವದಾ ಮಂಗಲಂ ರತ್ನಂ ಧಾರಯೇತ್ಸಪ ದೂರ್ವಯಾ ।
ಅವಸ್ತ್ರಾ ಚ್ಛಾದಿತಂ ಗಾತ್ರಂ ನ ಖಿಪ್ರೇಭ್ಯಃ ಪ್ರದರ್ಶಯೇತ್ ॥ ೫೯ ॥

ನ ತೋಯೇಷು ಮುಖಂ ಪಶ್ಯೇನ್ನಾದ್ಯಾನ್ಮಾಂಸಾನಿ ಪರ್ವಸು ।
ನಾರೋಹಯೇತ್ಪರಂ ಚೋಷ್ಟ್ರಂ ನ ವಾಮಾಮಪಿ ಗುರ್ವಿಣೀಂ ॥ ೬೦ ॥

ಏವಂ ನರಯುತೋ ರಾಜಾ ಚತುರಂಗಂ ವಿವರ್ಧಯನ್ ।
ಆತ್ಮಾನಂ ಸತತಂ ರಕ್ಷೇ ಸದಾ ವೀರ್ಯಂ ವಿವರ್ಧಯೇತ್ ॥ ೬೧ ॥

ಬೀಜಕ್ಷಯಕರಂ ನಿತ್ಯಂ ಭಕ್ಷ್ಯಂ ಭೋಜ್ಯಂ ಚ ಪಾನಕಂ ।
ವರ್ಜಯೇತ್ ಕ್ಷಾರಶಾಕಾದ್ಯಾ ಬಹ್ವಾಮ್ಲಂ ಬಹುತಿಕ್ತಕಂ ॥ ೬೨ ॥

---

೫೮. ರಾಜನು ಭೂಮಿಯಲ್ಲಾಗಲಿ, ಆಂತರಿಕ್ಷದಲ್ಲಾಗಲಿ, ಸಂಭವಿಸುವ ಉತ್ಪಾತವನ್ನು ಪ್ರಯತ್ನಪೂರ್ವಕವಾಗಿ ನೋಡಬಾರದು. ಅದನ್ನು ನೋಡಿದರೆ ಮೂರುದಿನಗಳವರಿಗೂ ಊಟಮಾಡಬಾರದು.

೫೯. ಯಾವಾಗಲೂ ಗರಿಕೆಯೊಡನೆ ಮಂಗಳಕವಾದ ರತ್ನವನ್ನು ಧರಿಸ ಬೇಕು. ವಸ್ತ್ರವೇ ಮೊದಲಾದ್ದನ್ನು ಹೊದಿಯದೇ ನಗ್ನಾವಸ್ಥೆಯಲ್ಲಿರುವ ತನ್ನ ಬರಿಯ ಶರೀರವನ್ನು ಬ್ರಾಹ್ಮಣರಿಗೆ ಯಾವಾಗಲೂ ತೋರಿಸಬಾರದು.

೬೦. ನೀರಿನಲ್ಲಿ ಮುಖವನ್ನು ನೋಡಿಕೊಳ್ಳಬಾರದು. ಪರ್ವಕಾಲಗಳಲ್ಲಿ ಮಾಂಸವನ್ನು ತಿನ್ನಬಾರದು. ಕತ್ತೆ, ಒಂಟೆ ಇವುಗಳಮೇಲೆ ಕುಳಿತುಕೊಳ್ಳಬಾರದು. ಗರ್ಭಿಣಿಯಾದ ಹೆಂಗಸನ್ನೂ, ಕೆಟ್ಟನಡತೆಯುಳ್ಳ ಸ್ತ್ರೀಯನ್ನೂ ಸಂಭೋಗೇಚ್ಛೆಯಿಂದ ನೋಡಬಾರದು.

೬೧. ರಾಜನಾದವನು ಮೇಲೆ ಹೇಳಿದ ಕ್ರಮದಿಂದ ಯೋಗ್ಯನಾದ ಮನುಷ್ಯ ನೊಡನೆ ಕೂಡಿ ಸರ್ವದಾ ಸೇನೆಯನ್ನು ಹೆಚ್ಚಿಸುತ್ತಾ ತನ್ನ ರಕ್ಷಣಾರ್ಥವಾಗಿ ದಿನೇ ದಿನೇ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರಬೇಕು.

೬೨. ದಿನೇದಿನೇ ಶಕ್ತಿಯನ್ನು ನಾಶಮಾಡುವ ಆಹಾರದ್ರವ್ಯಗಳನ್ನೂ, ಭೋಗ್ಯವಸ್ತುಗಳನ್ನೂ, ಪೇಯವನ್ನೂ, ಹೆಚ್ಚಾದ ಉಪ್ಪನ್ನೂ, ತರಕಾರಿಯೇ ಮೊದ ಲಾದವುಗಳನ್ನೂ, ಬಹಳ ಹುಳಿ, ಬಹಳ ಕಹಿ ಇವುಗಳನ್ನೂ ಸಹ ಬಿಡಬೇಕು.

ಕಾಂಸ್ಯರಾಜತಪಾತ್ರಸ್ಥಂ ಪೋಯಂ ನದ್ಯಾಶ್ಚ ವರ್ಧನಂ ।
ಮೂತ್ರವೃದ್ಧಿಕರಂ ವೀರ್ಯಕ್ಷಯಕಾರಿ ವಿವರ್ಜಯೇತ್ ॥ ೬೩ ॥

ತಾಮ್ರಾಯಃಸ್ವರ್ಣಶೀಸಾನಾಂ ಪಾತ್ರಸ್ಥಂ ಫಲಚರ್ಮಣೋಃ ।
ಶುಕ್ರವೃದ್ಧಿಕರಂ ಪೋಯಂ ತದುಪಾಸೀತ ಯತ್ನತಃ ॥ ೬೪ ॥

ಸರ್ವಮೂಲೇಷು ಕೃತ್ಯೇಷು ಸದಾಚಾರೇಷು ನಿಷ್ಠಿತಃ ।
ಭುಕ್ತ್ವೇಹ ವಿವಿಧಾ ಭೋಗಾನೈಂದ್ರಂ ಸ್ಥಾನಂ ವ್ರಜೇತ್ಪರಂ ॥ ೬೫ ॥

॥ ಮಾರ್ಕಂಡೇಯ ಉವಾಚ ॥

ಏವಮೌರ್ವಸ್ತು ಸಗರಂ ಶಶಾಸ ಮುನಿಪುಂಗವಃ ।
ಶಾಸ್ತ್ರಾಣಿ ಚೈವ ಸರ್ವಾಣಿ ಸದಾಚಾರಾಂಶ್ಚ ಗೃಹ್ಯಕಾ ॥ ೬೬ ॥

ಬಹುಶಃ ಕಥಯಾಮಾಸ ಸಗರಾಯ ಮಹಾತ್ಮನೇ ।
ತನ್ನಾಸ್ತಿ ಯತ್ಪುರೋರ್ವೇಣ ಕಥಿತಂ ಸಗರಾಯ ನ ॥ ೬೭ ॥

---

೬೩. ಕಂಚು, ಬೆಳ್ಳಿಯಪಾತ್ರೆ, ಇವುಗಳಲ್ಲಿರುವ ನೀರನ್ನೂ, ನದಿಯಲ್ಲಿ ಹೊಸದಾಗಿ ಬಂದಿರುವ ನೀರನ್ನೂ, ಮೂತ್ರವನ್ನು ಹೆಚ್ಚಿಸುವ ಮತ್ತು ಶಕ್ತಿಯನ್ನು ಕಡಿಮೆಮಾಡುವ ಪಾನಪದಾರ್ಥಗಳನ್ನೂ ಬಿಡಬೇಕು.

೬೪. ತಾಮ್ರ, ಕಬ್ಬಿಣ, ಚಿನ್ನ, ಸೀಸ ಇವುಗಳ ಪಾತ್ರೆಯಲ್ಲಿಯೂ, ಹಣ್ಣು, ಚರ್ಮ, ಇವುಗಳಲ್ಲಿಯೂ ಇರುವ ನೀರು ಧಾತುವನ್ನು ವೃದ್ಧಿಪಡಿಸುವುದು. ಆದ್ದರಿಂದ ಅದನ್ನು ಪ್ರಯತ್ನಪೂರ್ವಕವಾಗಿ ತಂದು ಉಪಯೋಗಿಸಬೇಕು.

೬೫. ಸಮಸ್ತ ಕಾರ್ಯಗಳಿಗೂ ಆಧಾರಭೂತವಾದ ಸತ್ಯಮಾರ್ಗಚರಣೆ ಮತ್ತು ಸದಾಚಾರಗಳಲ್ಲಿ ನಿರತನಾಗಿ ಅವುಗಳನ್ನು ಅನುಷ್ಠಾನಮಾಡುವ ರಾಜನು ಈ ಲೋಕದಲ್ಲಿ ಸಮಸ್ತ ಭೋಗಗಳನ್ನು ಅನುಭವಿಸಿ, ಪರಲೋಕದಲ್ಲಿ ಇಂದ್ರನ ಲೋಕವನ್ನು (ಸ್ವರ್ಗ) ಪಡೆಯುವನು.

೬೬-೬೭. ಮಾರ್ಕಂಡೇಯಮುನಿಯು ಹೇಳಿದನು :—ಈ ರೀತಿಯಾಗಿ ಔರ್ವಮುನಿಯು ಸಗರರಾಜನಿಗೆ ಸಮಸ್ತ ಶಾಸ್ತ್ರಗಳನ್ನೂ, ಸದಾಚಾರವಿಚಾರಗಳನ್ನೂ, ಗೃಹಕಾರ್ಯಗಳನ್ನೂ ವಿಸ್ತಾರವಾಗಿ ಉಪದೇಶಿಸಿದನು. ಈ ಸದಾಚಾರವಿಷಯಗಳಲ್ಲಿ ಔರ್ವಮುನಿಯು ಹೇಳದೆ ಬಿಟ್ಟಿರುವ ವಿಷಯವು ಯಾವುದೂ ಇಲ್ಲ.

ರಾಜನೀತಿಃ ಸತಾಂ ನೀತಿರ್ಯಚ್ಚಾನ್ಯಚ್ಛಾಸ್ತ್ರಸಂಭವಂ ।
ಸಂಹಿತಾಸು ಪುರಾಣೇಷು ಯಚ್ಚಾಗಮುಚಯೇ ಸ್ಥಿತಂ ॥ ೬೮ ॥

ಸರ್ವಂ ಶುಶ್ರಾವ ಸಗರೋ ಮುಖಾದೌರ್ವಸ್ಯ ಧೀಮತಃ ।
ತೇಷಾಂ ತು ಕಥಿತಂ ಕಿಂಚಿದುದ್ಧೃತ್ಯ ದ್ವಿಜಸತ್ತಮಾಃ ॥ ೬೯ ॥

ವಿಷ್ಣುಧರ್ಮೋತ್ತರೇ ಪೂರ್ವಂ ಮಯಾ ರಹಸಿ ಭಾಷಿತಂ ।
ರಾಜನೀತಿಂ ಸದಾಚಾರಂ ವೇದವೇದಾಂಗಸಂಗತಂ ॥ ೭೦ ॥

ರಹಸ್ಯಂ ಸತತಂ ವಿಷ್ಣೋರ್ವೀಕ್ಷಧ್ವಂ ದ್ವಿಜಸತ್ತಮಾಃ ।
ಯಚ್ಚಾನುದಿತಮನ್ಯತ್ರ ಗದಿತಂ ವಾ ಸಸಂಶಯಂ ॥ ೭೧ ॥

ಸಂಶಯಚ್ಛೇದನಂ ತೇಷು ಯುಷ್ಮಭ್ಯಂ ಕಥಿತಂ ದ್ವಿಜಾಃ ।

---

೬೮. ರಾಜನೀತಿ, ಸತ್ಪುರುಷರನೀತಿ, ಇದರಂತೆ ಇರುವ ಶಾಸ್ತ್ರಗಳಲ್ಲಿ ಹೇಳಿರುವ ಬೇರೆಯ ನೀತಿ ಮತ್ತು ಸಂಹಿತಾ, ಪುರಾಣ, ಆಗಮಗಳು ಇವುಗಳಲ್ಲಿ ಹೇಳಿರುವ ಅನೇಕ ನೀತಿಗಳು ಇವೆಲ್ಲವನ್ನೂ ಸಗರಚಕ್ರವರ್ತಿಯು ಬುದ್ಧಿವಂತನಾದ ಔರ್ವಮಹಾ ಮುನಿಯಿಂದ ಕೇಳಿ ತಿಳಿದುಕೊಂಡನು.

೬೯-೭೦. ಎಲೈ ಬ್ರಾಹ್ಮಣೋತ್ತಮರೇ ಕೇಳಿರಿ :—ಮೇಲೆ ಹೇಳಿದ ನೀತಿಗಳಲ್ಲಿ ಕೆಲವು ಭಾಗವನ್ನು ಮಾತ್ರ ನಾನು ಬೇರೆಯಾಗಿ ತೆಗೆದು "ವಿಷ್ಣುಧರ್ಮೋತ್ತರ" ವೆಂಬ ಗ್ರಂಥದಲ್ಲಿ ರಹಸ್ಯವಾಗಿ ಹೇಳಿರುವೆನು. ಅದುದರಿಂದ ರಾಜನೀತಿಯನ್ನೂ, ಸದಾಚಾರವನ್ನೂ ತಿಳಿಸುವ ವೇದವೇದಾಂಗಗಳಿಗೆ ಸಂಗ್ರಹರೂಪದಿಂದಿರುವ ವಿಷ್ಣು ರಹಸ್ಯವೆಂಬ ಗ್ರಂಥವನ್ನು ನೀವುಗಳು ಓದಿ ತಿಳಿದುಕೊಳ್ಳಿರಿ.

೭೧. ಯಾವುದು ಬೇರೆಕಡೆಯಲ್ಲಿ ಎಲ್ಲಿಯೂ ಹೇಳಲ್ಪಟ್ಟಿಲ್ಲವೋ ಅಥವಾ ಸಂದೇಹಕ್ಕೆ ಆಸ್ಪದವಾಗಿರುವಂತೆ ಹೇಳಿರುವುದೋ ಅಂತಹ ವಿಷಯಗಳನ್ನು ಮಾತ್ರ ಇಲ್ಲಿ ನಿಮಗೋಸ್ಕರವಾಗಿ, ಅವುಗಳ ಸಂಶಯವು ಹೋಗುವಂತೆ, ವಿಶದವಾಗಿ ಹೇಳಿರುತ್ತೇನೆ.

ಅನುಕ್ತಸಂಶಯಚ್ಛೇದಿ ಪುರಾಣಂ ಕಾಳಿಕಾಹ್ವಯಂ ॥ ೭೨ ॥
ಯೋಽಭ್ಯಸೇತ್ಸತತಂ ವಿಪ್ರಃ ಸ ವೇದಾನಾಂ ಫಲಂ ಲಭೇತ್ ।

॥ ಇತಿ ಶ್ರೀಕಾಲಿಕಾಪುರಾಣೇ ಏಕನವತಿತಮೋಽಧ್ಯಾಯಃ ॥

---

೭೨. ಎಲ್ಲಿಯೂ ಹೇಳದಿರುವ ಅನೇಕ ವಿಷಯಗಳ ಸಂಶಯವನ್ನು ಈ ಕಾಳಿಕಾಪುರಾಣ ಪಠನದಿಂದ ಪರಿಹರಿಸಿಕೊಳ್ಳಬಹುದು. ಇಂತಹ ಉತ್ತಮ ಪುರಾಣವನ್ನು ಅಧ್ಯಯನಮಾಡುವ ಬ್ರಾಹ್ಮಣನು ಸಮಸ್ತ ವೇದಾಧ್ಯಯನವನ್ನು ಮಾಡಿದ ಫಲವನ್ನು ಹೊಂದುವನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ತೊಂಭತ್ತೊಂದನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ದ್ವಿನವತಿತಮೋऽಧ್ಯಾಯಃ ॥

ಋಷಯಃ ಊಚುಃ

ಸಂಕ್ಷೇಪತಃ ಸದಾಚಾರಂ ವಿಶೇಷಂ ರಾಜನೀತಿಷು ॥
ಶ್ರುತಸ್ತ್ವದ್ವಚನಾದೌರ್ವಃ ಸಗರಾಯ ಯಥೋಕ್ತವಾನ್ ॥ ೧ ॥

ವಿಷ್ಣುಧರ್ಮೋತ್ತರೇ ತಂತ್ರೇ ಬಾಹುಲ್ಯಂ ಸರ್ವತಃ ಪುನಃ
ಪ್ರಷ್ಟವ್ಯಸ್ತು ಸದಾಚಾರೇ ಪ್ರಷ್ಟವ್ಯಾಸ್ತೇ ಪ್ರಸಾದತಃ ॥ ೨ ॥

ಭೂಯೋ ನಸ್ಸಂಶಯೋ ಯೋऽಸ್ತಿ ತದನುಕ್ತಂ ತ್ವಯಾ ಪುರಾ ।
ಛಿಂದಿ ವಿಪ್ರೇಂದ್ರ ಪೃಚ್ಛಾಮಃ ಪರಂ ಕೌತೂಹಲಂ ಹಿ ನಃ ॥ ೩ ॥

ತೊಂಭತ್ತೆರಡನೆಯ ಅಧ್ಯಾಯ

೧-೩. ಋಷಿಗಳು ಹೇಳಿದರು :—ಸದಾಚಾರವನ್ನು ಸಂಕ್ಷೇಪವಾಗಿಯೂ, ರಾಜನೀತಿಯಲ್ಲಿರುವ ವಿಶೇಷವಿಷಯಗಳನ್ನೂ, ಔರ್ವಮುನಿಯು ಸಗರರಾಜನಿಗೆ ಹೇಳಿದಂತೆ ಆ ವಿಷಯಗಳನ್ನೆಲ್ಲಾ ನೀನು ನಮಗೆ ವಿವರಿಸಿರುವೆ. ಇದನ್ನೆಲ್ಲಾ ಈಗ ನಾವು ಕೇಳಿದೆವು. ವಿಷ್ಣುಧರ್ಮೋತ್ತರವೆಂಬ ತಂತ್ರದಲ್ಲಿ ಸದಾಚಾರಕ್ರಮವು ವಿಶೇಷ ರೀತಿಯಲ್ಲಿ ವಿವರಿಸಿರುವದು. ಅದನ್ನು ಅಲ್ಲಿ ನೋಡಿ ತಿಳಿದುಕೊಳ್ಳಬಹುದು. ಹಾಗೆ ತಿಳಿದುಕೊಳ್ಳಬೇಕಾದರೂ ನಿನ್ನ ಅನುಗ್ರಹವಿದ್ದರೆ ಮಾತ್ರ ಸಾಧ್ಯವು. ಎಲೈ ಬ್ರಾಹ್ಮಣೋತ್ತಮನೇ! ನೀನು ಇದುವರಿಗೆ ಹೇಳದೇಯಿರುವ ಅನೇಕ ವಿಷಯಗಳಲ್ಲಿ ನಮಗೆ ಇನ್ನೂ ಎಷ್ಟೋ ಸಂಶಯಗಳಿರುವವು. ಅವುಗಳನ್ನು ಪರಿಹಾರಮಾಡಬೇಕೆಂದು ನಿನ್ನನ್ನು ಕೇಳುವೆವು. ಈ ವಿಷಯಗಳನ್ನು ಕೇಳಬೇಕೆಂದು ನಮಗೆ ಬಹು ಕುತೂಹಲವಿರುವುದು. ಆದುದರಿಂದ ನಮ್ಮ ಸಂಶಯಗಳನ್ನು ಪರಿಹರಿಸಿ, ನಾವು ಕೇಳುವ ವಿಷಯಗಳನ್ನು ವಿಶದವಾಗಿ ತಿಳಿಯಹೇಳು.

ಅಪುತ್ರಸ್ಯ ಗತಿರ್ನಾಸ್ತಿ ಶ್ರೂಯತೇ ವೇದಲೋಕಯೋಃ ।
ವೇತಾಲಭೈರವೌ ಯಾತೌ ಪುರಾ ವೈ ತಪಸೇ ಗಿರಿಂ ॥ ೪ ॥

ಪೂರ್ವಂ ತ್ವಕೃತದಾರೌ ತೌ ತಯೋಃ ಪುತ್ರಾ ನ ಚ ಶ್ರುತಾಃ ।
ನ ಜಾತಾಪ್ಯಥವಾ ಜಾತಾ ಯದಿ ನಾನಾ ದ್ವಿಜೋತ್ತಮ ॥ ೫ ॥

ತೇಷಾಂ ತು ಸಮ್ಯಗಿಚ್ಛಾಮಿ ಶ್ರೋತುಂ ಸಂಸ್ಥಾನಮುತ್ತಮಂ ।

॥ ಮಾರ್ಕಂಡೇಯ ಉವಾಚ ॥

ಅಪುತ್ರಸ್ಯ ಗತಿರ್ನಾಸ್ತಿ ನಿಶ್ಚಿತಂ ಮುನಿಸತ್ತಮಾಃ ॥ ೬ ॥

ಸ್ವಪುತ್ರೈರ್ಭ್ರಾತೃಪುತ್ರೈರ್ವಾ ಪುತ್ರವಂತೋ ಹಿ ಸ್ವರ್ಗತಾಃ ।
ಜಾತಾಪತ್ಯೌ ಚ ತೌ ವಿಪ್ರಾ ಧೀರೌ ವೇತಾಲಭೈರವೌ ॥ ೭ ॥

ತಯೋರ್ವಂಶಾ ಪ್ರವಕ್ಷ್ಯಾಮಿ ಶೃಣುಧ್ವಂ ಚ ಮಹರ್ಷಯಃ ।
ಸಮ್ಯಕ್ಸಿದ್ಧಿಮವಾಪ್ಯೈವ ಯದಾ ವೇತಾಲಭೈರವೌ ॥ ೮ ॥

೪-೫. ಮಕ್ಕಳಿಲ್ಲದವರಿಗೆ ಗತಿ ಇಲ್ಲವೆಂದು ವೇದದಲ್ಲಿಯೂ ಮತ್ತು ಲೋಕ ವ್ಯವಹಾರದಲ್ಲಿಯೂ ಪ್ರಸಿದ್ಧವಾಗಿರುವುದು. ವೇತಾಲಭೈರವರಿಬ್ಬರೂ ಮೊದಲು ಮದುವೆಯನ್ನು ಮಾಡಿಕೊಳ್ಳದೆ ಹಾಗೆಯೇ ತಪಸ್ಸಿಗಾಗಿ ಹೊರಟುಹೋದರು. ಅವರ ಮಕ್ಕಳು ಯಾರು ಎಂಬುದು ಗೊತ್ತಿಲ್ಲ. ಈಚೆಗೆ ಅವರಿಗೆ ಮದುವೆಯಾಗಿ ಮಕ್ಕಳು ಹುಟ್ಟಿದರೆ ? ಹುಟ್ಟಲಿಲ್ಲವೇ ? ಅಥವಾ ಬಹಳಮಂದಿ ಮಕ್ಕಳು ಆದರೆ ? ಈ ವಿಷಯವನ್ನು ಕೇಳಲಿಚ್ಛಿಸುವೆವು. ಆದುದರಿಂದ ಅದನ್ನು ನಮಗೆ ತಿಳಿಸು.

೬-೭. ಮಾರ್ಕಂಡೇಯನು ಹೇಳಿದನು :—ಎಲೈ ಮುನಿಶ್ರೇಷ್ಠರೇ ! ಕೇಳಿರಿ. ಮಕ್ಕಳಿಲ್ಲದವನಿಗೆ ಗತಿಯಿಲ್ಲವೆಂಬುದು ನಿಶ್ಚಯವು. ಅವರು ತಮ್ಮತಮ್ಮ ಅಣ್ಣ ತಮ್ಮಂದಿರ ಮಕ್ಕಳುಗಳಿಂದ ಪುತ್ರವಂತರೆಂದೆನಿಸಿಕೊಂಡು ಸ್ವರ್ಗಕ್ಕೆ ಹೋಗಿರುವರು. ಧೀರರಾದ ವೇತಾಲಭೈರವರಿಬ್ಬರಿಗೂ ಮಕ್ಕಳಿರುವರು. ಅವರಿಬ್ಬರ ವಂಶವನ್ನೂ ಹೇಳುವೆನು, ಕೇಳಿ.

೮-೯. ಈ ವೇತಾಲಭೈರವರು ತಪಸ್ಸಿನಿಂದ ಸಿದ್ಧಿಯನ್ನು ಪಡೆದು ಕೈಲಾಸಕ್ಕೆ ಹೋಗಿ ಶಿವಸಾನ್ನಿಧ್ಯದಲ್ಲಿ ಸಂತೋಷದಿಂದಿದ್ದರೆಂಬುದನ್ನು ಬಲ್ಲಿರಷ್ಟೆ ? ಆಗ ಮಹಾ

ಹರಸ್ಯ ಮಂದಿರಂ ಪ್ರಾಪ್ತೌ ಕೈಲಾಸಂ ಪ್ರತಿ ಹರ್ಷಿತೌ ।
ತದಾ ಹರಸ್ಯ ವಚನಾನ್ನಂದೀ ತೌ ರಹಸಿ ದ್ವಿಜಾಃ ॥ ೯ ॥
ಪ್ರಾಹೇದಂ ವಚನಂ ತಥ್ಯಂ ಸಾಂತ್ವಯನ್ನಿವ ಜೋಧಕೃತ್ ।

॥ ನಂದ್ಯುವಾಚ ॥

ಅಪುತ್ರೌ ಪುತ್ರಜನನೇ ಭವಂತೌ ಶಂಕರಾತ್ಮಜೌ ॥ ೧೦ ॥
ಯತತಾಂ ಜಾತಪುತ್ರಸ್ಯ ಸರ್ವತ್ರ ಸುಲಭಾ ಗತಿಃ ।
ಪುನ್ನಾಮನರಕಂ ಪುತ್ರವಿಹೀನಃ ಪರಿಪಶ್ಯತಿ ॥ ೧೧ ॥
ನ ತಪೋಭಿರ್ನ ಧರ್ಮೇಣ ತಂ ಮೋಚಯಿತುಮೀಶ್ವರಃ ।
ಕೇವಲಾತ್ಪುತ್ರಜನನಾತ್ತಸ್ಮಾನ್ಮೋಕ್ಷಃ ಪ್ರಜಾಯತೇ ॥ ೧೨ ॥
ತದುತ್ಪಾದಯತಂ ಪುತ್ರಾ ಭವಂತೌ ದೇವಯೋನಿಷು ।
ಅಮರ್ತ್ಯತಾ ತು ಯುವಯೋಃ ಕ್ಷೀರಪಾನಾದಜಾಯತ ॥ ೧೩ ॥
ಕಾತ್ಯಾಯನ್ಯಾಸ್ತತಃ ಪುತ್ರಾನಮರ್ತ್ಯಾಃ ಸ್ವಸಮಾಯುತಃ ।
ತಸ್ಮಾದ್ಯಥಾ ತಥಾ ಪುತ್ರಾನುತ್ಪಾದ್ಯ ಸುರಯೋನಿಷು ॥ ೧೪ ॥
ಪ್ರಿಯೌ ಭವಂತೌ ಶಿವಯೋಃ ಭವತಂ ನಚಿರಾದಿತಿ ।

॥ ಮಾರ್ಕಂಡೇಯ ಉವಾಚ ॥

ತಸ್ಯೇತಿವಚನಂ ಶ್ರುತ್ವಾ ನಂದಿನಃ ಪ್ರೀತಮಾನಸೌ ॥ ೧೫ ॥

ದೇವನ ಅಪ್ಪಣೆಯಂತೆ ನಂದಿಕೇಶ್ವರನು ಆ ವೇತಾಲಭೈರವರಿಗೆ ಮೃದುವಾದ ಮಾತಿನಿಂದ ಹೀಗೆ ಹೇಳಿದನು.

೧೦-೧೪. ನಂದಿಯು ಹೇಳಿದನು:—ಈಶ್ವರನ ಮಕ್ಕಳಾದ ನೀವಿಬ್ಬರೂ ಅಪುತ್ರವಂತರು ಎಂದರೆ, ಮಕ್ಕಳಿಲ್ಲದವರು. ಪುತ್ರವಂತರಿಗೆ ಮಾತ್ರ ಎಲ್ಲಾ ಕಡೆಯಲ್ಲಿಯೂ ಪ್ರವೇಶವು ಸುಲಭವಾದ್ದರಿಂದ ನೀವುಗಳು ಪುತ್ರರನ್ನು ಪಡೆಯಲು ಪ್ರಯತ್ನಮಾಡಿರಿ. ಮಕ್ಕಳಿಲ್ಲದವನನು ಪುತ್ ಎಂಬ ನರಕವನ್ನು ಹೊಂದುವನು. ತಪಸ್ಸಿನಿಂದಲೂ, ಧರ್ಮದಿಂದಲೂ ಅವನಿಗೆ ಆ ನರಕದಿಂದ ಬಿಡುಗಡೆಯಿಲ್ಲ. ಈಶ್ವರನೂ ಸಹ ಅವನನ್ನು ಅವರಿಂದ ಬಿಡಿಸಲಾರನು. ಆದರೆ ಅವನಿಗೆ ಮಗನು ಹುಟ್ಟಿದಮಾತ್ರದಿಂದಲೇ ಮೋಕ್ಷವು ಉಂಟಾಗುವುದು. ಆದುದರಿಂದ ನೀವಿಬ್ಬರೂ ದೇವತಾಸ್ತ್ರೀಯರಲ್ಲಿ ಮಕ್ಕಳನ್ನು ಉತ್ಪಾದನೆ ಮಾಡಿ. ಕಾತ್ಯಾಯನೀದೇವಿಯ ಎದೆಹಾಲನ್ನು ನೀವು ಕುಡಿದಿರುವಕಾರಣ ನೀವು ಮನುಷ್ಯರಿಗಿಂತಲೂ ಅಧಿಕರಾದವರು. ಆದಕಾರಣ ದೇವಯೋ

ಏವಮೇವ ಕರಿಷ್ಯಾವೋ ನಂದಿನಂ ಚೇತ್ಯಭಾಷತಾಂ ।
ತತಸ್ತೌ ಸತತಂ ಕೃತ್ವಾ ನಂದಿನೋ ವಚನಂ ಪೃದಿ ॥ ೧೬ ॥

ಅಚೇಷ್ಟತಾಂ ಸ್ವಪುತ್ರಾರ್ಥೇ ವ್ರಜಂತೌ ತಾವಿತಸ್ತತಃ ।
ಅಥೈಕದಾ ಭೈರವೋಽಸಾವೂರ್ವಶೀಮಪ್ಸರೋ ವರಾಂ ॥ ೧೭ ॥

ಹಿಮವತ್ಪರ್ವತಪ್ರಸ್ಥೇ ದದರ್ಶ ಸುಮನೋಹರಾಂ ।
ಅಥ ತಾಂ ಕಾಮುಕೋ ಭೂತ್ವಾ ಯಯಾಚೇ ಸುರತೋತ್ಸವಂ ॥ ೧೮ ॥

ವೇಶ್ಯಾಭಾವಾಚ್ಚ ಸುಪ್ರೀತಾ ಸಾ ಯಥೇಚ್ಛಮುವಾಚ ತಂ ।
ತತಸ್ತಸ್ಯಾಂ ಭೈರವಸ್ತು ಚಕಾರ ಸುರತೋತ್ಸವಂ ॥ ೧೯ ॥

ಪ್ರೀತಾಯಾಮುರ್ವಶೀದೇವ್ಯಾಂ ಸುಪ್ರೀತೋಽಭೂಚ್ಚ ಕೇಳಿಭಿಃ ।
ಸುಪ್ರೀತಾಯಾಮಥೋರ್ವಶ್ಯಾಂ ತೇಜೋಽಭಿಭೈರ್ಭೈರವಸ್ಯ ತು ॥ ೨೦ ॥

ನಿಯಲ್ಲಿ ಎಂದರೆ ದೇವತಾಸ್ತ್ರೀಯರಲ್ಲಿ ಮಕ್ಕಳನ್ನು ಪಡೆದು, ಪಾರ್ವತೀಪರಮೇಶ್ವರರ ಪ್ರೀತಿಯನ್ನು ಬೇಗನೆ ಸಂಪಾದಿಸಿ.

೧೫-೧೬. ಹೀಗೆ ಹೇಳಿದ ನಂದಿಯ ಮಾತನ್ನು ಕೇಳಿ, ಅವರಿಬ್ಬರೂ ಸಂತೋಷದಿಂದ ಹಾಗೆಯೇ ಮಾಡುತ್ತೇವೆಂದು ನಂದಿಗೆ ಹೇಳಿ, ಮಕ್ಕಳನ್ನು ಪಡೆಯಲು ಏನು ಮಾಡಬೇಕೆಂದು ನಂದಿಯ ಮಾತನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ಅಲ್ಲಲ್ಲಿ ಸಂಚರಿಸುತ್ತಿದ್ದರು.

೧೭-೧೮. ಹೀಗಿರಲೊಂದುದಿನ ಈ ಭೈರವನು ಅಪ್ಸರಸ್ತ್ರೀಯರಲ್ಲಿ ಶ್ರೇಷ್ಠಳಾಗಿಯೂ, ಮನೋಹರಳಾಗಿಯೂ ಇರುವ ಊರ್ವಶಿಯನ್ನು ಹಿಮವತ್ಪರ್ವತದ ತಪ್ಪಲಿನಲ್ಲಿ ಕಂಡು ಅವಳಲ್ಲಿ ಕಾಮೇಚ್ಛೆಯಿಂದ ಅವಳ ಸಂಗಡ ವಿಹರಿಸಲು ಊರ್ವಶಿಯನ್ನು ಕೇಳಿದನು. ಅವಳು ವೇಶ್ಯೆಯಾದ ಪ್ರಯುಕ್ತ ಸಂತೋಷದಿಂದ ಒಪ್ಪಿ ಯಥೇಚ್ಛವಾಗಿ ನನ್ನಲ್ಲಿ ವಿಹರಿಸಬಹುದೆಂದಳು.

೧೯-೨೦. ಬಳಿಕ ಭೈರವನು ಊರ್ವಶಿಯಲ್ಲಿ ರತಿಕ್ರೀಡೆಯನ್ನೆಸಗಲು ಆದರಿಂದ ಇಬ್ಬರಿಗೂ ಸಂತೋಷವುಂಟಾಯಿತು. ಭೈರವನ ತೇಜಸ್ಸಿನಿಂದ ಊರ್ವಶಿಯಲ್ಲಿ ಬಾಲಸೂರ್ಯನಂತೆ ಪ್ರಕಾಶಮಾನನಾದ ಓರ್ವ ಪುತ್ರನು ಆ ಕೂಡಲೆ ಜನಿಸಿದನು.

ಸದ್ಯೋ ಜಾತೋಽಭವತ್ಪುತ್ರೋ ಬಾಲಸೂರ್ಯಸಮಪ್ರಭಃ ।
ತಂ ತು ಪುತ್ರಂ ಪರಿತ್ಯಜ್ಯ ಯಯೌ ಸ್ವಸ್ಥಾನಮೂರ್ವಶೀ ॥ ೨೧ ॥

ಆದಾಯ ತನಯಂ ಪಶ್ಚಾದ್ಭೈರವಃ ಸ್ವಪದಂ ಯಯೌ ।
ಸಂಸ್ಕೃತ್ಯ ತನಯಂ ತತ್ತು ಭೈರವೋ ಮೋದಸಂಯುತಃ ॥ ೨೨ ॥

ಸುರೇಶಮಿತಿ ತಂ ನಾಮ್ನಾ ಚಕಾರ ಸ ಗಣಾಧಿಪಃ ।
ಅಥ ತಂ ಜಾತವಯಸಂ ಶಕ್ರಸೂರ್ಯಸಮಪ್ರಭಂ ॥ ೨೩ ॥

ವಿದ್ಯಾಧರಾಧಿಪತ್ಯೇ ತು ಸುರೇಶಮಭ್ಯಷೇಚಯತ್ ।
ಸ ತು ವಿದ್ಯಾಧರಾಧ್ಯಕ್ಷಸ್ತನಯಾಮತಿಸುಂದರೀಂ ॥ ೨೪ ॥

ಯೇವಮೇ ಗಂಧರ್ವರಾಜಸ್ಯ ಧೃತರಾಷ್ಟ್ರಾಹ್ವಯಸ್ಯ ಚ ।
ತಸ್ಯಾಂ ತಸ್ಯ ಸುತೋ ಜಜ್ಞೇ ರುರುರ್ನಾಮ ಮನೋಹರಃ ॥ ೨೫ ॥

ರುರೋಸ್ತು ತನಯೋ ಬಾಹುರ್ಮೈನಾಕ್ಯಾಮಭ್ಯಜಾಯತ ।
ಬಾಹೋಸ್ತು ಪುತ್ರಾಶ್ಚತ್ವಾರಸ್ತಪನೋಂಗದ ಈಶ್ವರಃ ॥ ೨೬ ॥

೨೧-೨೨. ಊರ್ವಶಿಯು ಆ ಪುತ್ರನನ್ನು ಅಲ್ಲಿಯೇ ಬಿಟ್ಟು ತನ್ನ ಸ್ಥಾನಕ್ಕೆ ಹೊರಟುಹೋದಳು. ಆಮೇಲೆ ಗಣಾಧಿಪತಿಯಾದ ಭೈರವನು ಆ ಮಗುವನ್ನು ತನ್ನ ವಾಸಸ್ಥಳಕ್ಕೆ ಕರೆದುಕೊಂಡುಹೋಗಿ, ಸಂತೋಷದಿಂದ ಆ ಬಾಲಕನಿಗೆ ಜಾತಕರ್ಮಾದಿ ಸಂಸ್ಕಾರವನ್ನು ಮಾಡಿ, ಸುರೇಶನೆಂಬ ನಾಮಕರಣವನ್ನು ಮಾಡಿದನು.

೨೩. ಇಂದ್ರಸೂರ್ಯರಂತೆ ತೇಜಃಶಾಲಿಯಾದ ಆ ಸುರೇಶನು ಪ್ರಾಪ್ತವಯಸ್ಕನಾಗಲು, ಭೈರವನು ಅವನಿಗೆ ವಿದ್ಯಾಧರರಾಜಾಧಿಪತ್ಯದಲ್ಲಿ ಪಟ್ಟಾಭಿಷೇಕಮಾಡಿದನು.

೨೪-೨೫. ಆ ವಿದ್ಯಾಧಿಪನಾದ ಸುರೇಶನು ಧೃತರಾಷ್ಟ್ರನೆಂಬ ಗಂಧರ್ವರಾಜನ ಬಹುಸುಂದರಿಯಾದ ಮಗಳನ್ನು ಮದುವೆಮಾಡಿಕೊಂಡನು. ಅವಳು ರುರು ಎಂದು ಹೆಸರುಳ್ಳ ಒಬ್ಬ ಕುಮಾರನನ್ನು ಹೆತ್ತಳು.

೨೬. ರುರುವಿನ ಮಗನು ಬಾಹು ಎಂಬುವನು. ಈ ಬಾಹು ಎಂಬುವನಿಗೆ ಮೇನಕೆಯ ಮಗಳಾದ ಚಾರ್ವತಿ ಎಂಬುವಳಲ್ಲಿ ತಪನ, ಅಂಗದ, ಈಶ್ವರ, ಕುಮುದ ಎಂದು ನಾಲ್ಕುಜನ ಮಕ್ಕಳು ಜನಿಸಿದರು. ಇವರಲ್ಲಿ ಕಡೆಯವನಾದ ಕುಮುದನೆಂಬುವನು ಬಹು ಸುಂದರನಾಗಿದ್ದನು.

ಕುಮುದೋಽಭೂತ್ಕನೀಯಾಂಸ್ತು ಚಾರ್ವಂತ್ಯಾಂ ತು ಮನೋಹರಃ ।
ಕುಮುದಸ್ಯ ಸುತೋ ಜಜ್ಞೇ ದೇವಸೇನೋ ಮಹಾಬಲಃ ॥ ೨೬ ॥

ಸ ದೇವಸೇನಃ ಪೃಥಿವೀಮವತೀರ್ಯ ಮನೋಹರಃ ।
ಮಾಂಧಾತುರ್ಯೌವನಾಶ್ವಸ್ಯ ತನಯಾಂ ಕೇಶಿನೀಂ ಮುಹುಃ ॥ ೨೮ ॥

ವರಯಾಮಾಸ ಭಾರ್ಯಾರ್ಥೇ ಮೃದ್ವಂಗೀಮಪ್ಸರಸ್ಸಮಾಂ ।
ಯೌವನಾಶ್ವೋಽಪಿ ಮಾಂಧಾತಾ ಶಕ್ರಸ್ಯ ವಚನಾದ್ದದೌ ॥ ೨೯ ॥

ಕೇಶಿನೀಂ ತನಯಾಂ ಸ್ವೀಯಾಂ ದೇವಸೇನಾಯ ವಾಂಛಯಾ ।
ಕೇಶಿನೀಮುಪಯಮ್ಯಾಥ ದೇವಸೇನಸ್ತಯಾ ಸಹ ॥ ೩೦ ॥

ವಾರಾಣಸ್ಯಾಂ ಶಂಭುಪುರ್ಯಾಂ ಹರಮಾರಾಧಯಚ್ಛಿವಂ ।
ಆರಾಧಿತೋ ಹರಃ ಪ್ರೀತಸ್ತಸ್ಯೇಷ್ಟಂ ಪ್ರದದೌ ವರಂ ॥ ೩೧ ॥

ಸೋಽಪ್ಯಾದದೇ ಹರಾತ್ತಸ್ಮಾದಿಷ್ಟಮೇವ ವರತ್ರಯಂ ।
ಯಾವಚ್ಚ ಸೂರ್ಯೋ ತಪತಿ ತಾವತ್ಸ್ಥಾಸ್ಯತಿ ಸಂತತಿಃ ॥ ೩೨ ॥

೨೬-೨೮. ಕುಮುದನಿಗೆ ಬಹಳ ಬಲಿಷ್ಠನಾದ ದೇವಸೇನನೆಂಬ ಮಗನು ಹುಟ್ಟಿದನು. ಇವನು ಬಹು ಸುಂದರನಾಗಿದ್ದನು. ಯೌವನಾಶ್ವನ ಮಗನಾದ ಮಾಂಧಾತೃವೆಂಬ ರಾಜನಿಗೆ ಅಪ್ಸರಸ್ತ್ರೀಯಂತೆ ಸುಂದರಿಯೂ, ಮೃದುವಾದ ಅವಯವಗಳುಳ್ಳ ಕೇಶಿನಿಯೆಂಬ ಪುತ್ರಿಯೋರ್ವಳಿದ್ದಳು. ಈ ಕೇಶಿನಿಯನ್ನು ದೇವಸೇನನು ವರಿಸಿ ವಿವಾಹವಾದನು.

೨೯-೩೦. ಆ ಮಾಂಧಾತೃರಾಜನು ದೇವಸೇನನಿಗೆ ತನ್ನ ಮಗಳಾದ ಕೇಶಿನಿಯನ್ನು ಇಂದ್ರನ ಮಾತಿನಂತೆ ಕೊಟ್ಟು ವಿವಾಹಮಾಡಿದನು. ದೇವಸೇನನು ಕೇಶಿನಿಯನ್ನು ಮದುವೆಮಾಡಿಕೊಂಡು ಅವಳೊಡನೆ ಕಾಶೀನಗರದಲ್ಲಿ ಮಂಗಳಕರನಾದ ಶಿವನನ್ನು ಪೂಜಿಸಿದನು.

೩೧-೩೩. ದೇವಸೇನನ ಆರಾಧನೆಯಿಂದ ಈಶ್ವರನು ಸಂತುಷ್ಟನಾಗಿ ಅವನಿಗೆ ಬೇಕಾದ ವರವನ್ನು ಕೊಟ್ಟನು. ಆ ದೇವಸೇನನೂ ಕೂಡ ತನಗೆ ಬೇಕಾದ ಮೂರು ವರಗಳನ್ನು ಕೇಳಿಕೊಂಡನು. ಸೂರ್ಯನು ಇರುವವರಿವಿಗೂ ತನ್ನ ವಂಶವು

ಅಸ್ಯಾನೇವ ನಗರ್ಯಾಂ ಮೇ ಮದ್ವಂಶಸ್ಯಾಪಿ ರಾಜತಾ ।
ಪ್ರಸನ್ನೋ ಮಮ ವಂಶೇ ತ್ವಂ ನಿತ್ಯಮೇವ ಭವಿಷ್ಯಸಿ ॥ ೩೩ ॥
ಇತ್ಯಾದಾಯ ವರಂ ಸೋಽಪಿ ದೇವಸೇನೋ ಮಹಾಕೃತೀ ।
ಶಂಕರಸ್ಯ ಪ್ರಸಾದೇನ ಚಿರಂ ತಾಂ ಬುಭುಜೇ ಪುರೀಂ ॥ ೩೪ ॥
ದೇವಸೇನೋಽಥ ಕೇಶಿನ್ಯಾಂ ಜನಯಾಮಾಸ ಪುತ್ರಕಾ ।
ಯಾಂಯಂ ಶೃಣುತ ಸಸ್ತೈತಾನ್ನಾಮತಃ ಕೀರ್ತಿತಾಂಸ್ತಥಾ ॥ ೩೫ ॥
ಸುಮನಾ ವಸುದಾನಶ್ಚ ಋತುಧ್ವಗ್ಯವನಃ ಕೃತೀ ।
ನೀಲೋ ವಿವೇಕೋ ಜ್ಯೇತೇ ನೈ ಸರ್ವಶಾಸ್ತ್ರವಿಶಾರದಾಃ ॥ ೩೬ ॥
ಸರ್ವೇ ವಂಶಕರಾಃ ಪುತ್ರಾ ದೇವಸೇನಸ್ಯ ಸತ್ತಮಾಃ ।
ಅಥ ಕಾಲೇ ತು ಸಂಪ್ರಾಪ್ತೇ ದೇವಸೇನೋಽಪಿ ಭಾರ್ಯಯಾ ॥ ೩೭ ॥
ಪುತ್ರೇಷು ರಾಜ್ಯಂ ನಿಕ್ಷಿಪ್ಯ ಯಾತೋ ವಿಧ್ಯಾಧರಕ್ಷಯಂ ।
ತತಸ್ತೇ ತಸ್ಯ ತನಯಾಃ ಕೃತ್ವಾ ಸುಮನಸಂ ನೃಪಂ ॥ ೩೮ ॥

ನಡೆದುಬರುತ್ತಿರುವಂತೆಯೂ, ಕಾಶೀಪಟ್ಟಣದಲ್ಲಿ ತನ್ನ ವಂಶದವರೇ ರಾಜರಾಗಿರುವಂತೆಯೂ, ತನ್ನ ವಂಶದವರ ವಿಷಯದಲ್ಲಿ ಶಿವನು ಯಾವಾಗಲೂ ಪ್ರಸನ್ನನಾಗಿರುವಂತೆಯೂ ಮೂರು ವರಗಳನ್ನು ಈಶ್ವರನಿಂದ ಕೇಳಿಕೊಂಡನು.

೩೪. ಪುಣ್ಯಾತ್ಮನಾದ ಆ ದೇವಸೇನನು ಈರೀತಿ ವರಗಳನ್ನು ಪಡೆದುಕೊಂಡು ಶಿವನ ಅನುಗ್ರಹದಿಂದ ಆ ಕಾಶೀಪಟ್ಟಣದಲ್ಲಿ ಬಹಳಕಾಲದವರಿಗೂ ರಾಜ್ಯವಾಳಿದನು.

೩೫-೩೬. ದೇವಸೇನನು ಕೇಶಿನಿಯಲ್ಲಿ ಏಳುಜನ ಮಕ್ಕಳನ್ನು ಪಡೆದನು. ಅವರುಗಳ ಹೆಸರನ್ನು ಹೇಳುವೆನು ಕೇಳಿರಿ. ಸುಮನಾಃ, ವಸುದಾನ, ಋತುಧ್ವಕ್, ಯವನ, ಕೃತೀ, ನೀಲ, ವಿವೇಕ ಎಂಬ ಈ ಏಳು ಜನಗಳೂ ದೇವಸೇನನ ಮಕ್ಕಳುಗಳು. ಇವರೆಲ್ಲರೂ ಸರ್ವಶಾಸ್ತ್ರವಿಶಾರದರು ಮತ್ತು ವಂಶವೃದ್ಧಿಮಾಡುವವರು.

೩೭. ಹೀಗೆ ಕೆಲವುಕಾಲವು ಕಳೆಯಲು, ಕೊನೆಯಲ್ಲಿ ದೇವಸೇನನು ತನ್ನ ರಾಜ್ಯವನ್ನು ಮಕ್ಕಳಿಗೆ ಕೊಟ್ಟು, ತನ್ನ ಹೆಂಡತಿಯೊಡನೆ ವಿದ್ಯಾಧರರಲ್ಲಿ ಐಕ್ಯವನ್ನು ಹೊಂದಿದನು.

೩೮. ಅನಂತರದಲ್ಲಿ ವಸುದಾನನೇ ಮೊದಲಾದ ದೇವಸೇನನ ಮಕ್ಕಳೆಲ್ಲರೂ ಸೇರಿ ಸುಮನಸ್ಸೆಂಬ ಜ್ಯೇಷ್ಠನನ್ನು ರಾಜನನ್ನಾಗಿ ಮಾಡಿಕೊಂಡು, ಉತ್ತಮವಾದ ಐಶ್ವರ್ಯವನ್ನು ಅನುಭವಿಸುತ್ತಿದ್ದರು.

ವಸುದಾನಾದಯಸ್ಸರ್ವೇ ಬುಭುಜುಶ್ಚೋತ್ತಮಾಂ ಶ್ರಿಯಂ ।
ಜಾತಾಃ ಸುಮನಸಃ ಪುತ್ರಾಸ್ತ್ರಯಶ್ಶೂರಾ ಮಹಾಬಲಾಃ ॥ ೩೯ ॥

ಸುಮತಿಶ್ಚ ವಿರೂಪಶ್ಚ ಸತ್ಯಃ ಶಸ್ತ್ರಾಸ್ತ್ರಪಾರಗಾಃ ।
ಸುಮತೇರಭವತ್ಕನ್ಯಾ ಸುತಸ್ಸತ್ಯಸ್ಯ ಡಿಂಡಿಮಃ ॥ ೪೦ ॥

ವಿರೂಪಸ್ಯಾಭವದ್ಗಾಧಿರ್ಗಾಧೇರ್ಮಿತ್ರೋಽಭವತ್ಸುತಃ ।
ತೇಷಾಂ ಕಲ್ಪೋಽಭವದ್ರಾಜಾ ಕಲ್ಪಾತ್ತು ವಿಜಯೋಽಭವತ್ ॥ ೪೧ ॥

ಯೋ ವಿಜಿತ್ಯ ಕ್ಷಿತಿಂ ಸರ್ವಾನ್ಪಾರ್ಥಿವಾನ್ಭೂರಿತೇಜಸಃ ।
ಶಕ್ರಸ್ಯಾನುಮತೇ ಚಕ್ರೇ ಖಾಂಡವಂ ಶತಯೋಜನಂ ॥ ೪೨ ॥

ಯತ್ಸವ್ಯಸಾಚೀ ಹ್ಯದಹತ್ಪಾಂಡುಪುತ್ರಃ ಪ್ರತಾಪವಾನ್ ।
ಆವಹತ್ಪರಮಾಂ ಪ್ರೀತಿಂ ಜ್ವಲನಸ್ಯ ಮಹಾತ್ಮನಃ ॥ ೪೩ ॥

೩೯-೪೧. ಆ ಸುಮನಸ್ಸೆಂಬ ರಾಜನಿಗೆ ಸುಮತಿ, ವಿರೂಪ, ಸತ್ಯ, ಎಂದು ಮೂರುಜನ ಮಕ್ಕಳು ಜನಿಸಿದರು. ಇವರೆಲ್ಲರೂ ಬಹಳ ಬಲಿಷ್ಠರೂ, ಶೂರರೂ, ಶಸ್ತ್ರಾಸ್ತ್ರ ಪ್ರಯೋಗಗಳಲ್ಲಿ ನಿಪುಣರೂ ಆಗಿದ್ದರು. ಸುಮತಿಗೆ ಕನ್ಯೆಯೋರ್ವಳು ಜನಿಸಿದಳು. ಸತ್ಯನಿಗೆ ಡಿಂಡಿಮ ಎಂಬ ಮಗನು ಹುಟ್ಟಿದನು. ವಿರೂಪನಿಗೆ ಗಾಧಿ ಎಂಬ ಮಗನೂ, ಗಾಧಿಗೆ ಮಿತ್ರನೆಂಬ ಮಗನೂ ಆದರು. ಅವರಪ್ಪಿಕೆ ಕಲ್ಪನೆಂಬುವನು ರಾಜನಾದನು. ಆ ಕಲ್ಪನೆಂಬ ರಾಜನಿಂದ ವಿಜಯನೆಂಬುವನು ಹುಟ್ಟಿದನು.

೪೨-೪೩. ಆ ವಿಜಯನು ಭೂಮಿಯಲ್ಲಿದ್ದ ರಾಜರೆಲ್ಲರನ್ನೂ ಜಯಿಸಿ, ಬಹಳ ತೇಜಶ್ಶಾಲಿಯಾದ ಇಂದ್ರನ ಅನುಮತಿಯಿಂದ ಒಂದುನೂರುಯೋಜನ ವಿಸ್ತಾರವಾಗಿರುವ ಖಾಂಡವ ವನವನ್ನು ನಿರ್ಮಿಸಿದನು. ಈ ಖಾಂಡವವನವನ್ನು ಪಾಂಡುವಿನ ಮಗನೂ, ಶೂರನೂ, ಆದ ಅರ್ಜುನನೆಂಬುನು ಅಗ್ನಿಗೆ ದಹಿಸಲು ಕೊಟ್ಟನು. ಅದರಿಂದ ಅವನು ಮಹಾಮಹಿಮೆಯುಳ್ಳ ಅಗ್ನಿಯ ಪ್ರೀತಿಗೆ ಪಾತ್ರನಾದನು.

॥ ಋಷಯ ಊಚುಃ ॥

ಕಥಂ ಸ ಖಾಂಡವಂ ಚಕ್ರೇ ವಿಜಯಃ ಶತಯೋಜನಂ ।
ತದ್ವಯಂ ಶ್ರೋತುಮಿಚ್ಛಾಮಃ ಕಥಯಸ್ವ ತಪೋಧನ ॥ ೪೪ ॥

॥ ಮಾರ್ಕಂಡೇಯ ಉವಾಚ ॥

ಸೋಮವಂಶೇಽಭವದ್ರಾಜಾ ಮಹಾಬಲಪರಾಕ್ರಮಃ ।
ಧೀರಃ ಸುದರ್ಶನೋ ನಾಮ ಚಾಮರೂಪಃ ಪ್ರತಾಪವಾ ॥ ೪೫ ॥

ಸ ವೈ ಹಿಮವತೋ ನಾತಿದೂರೇ ಭಂಕ್ತ್ವಾ ಮಹಾವನಂ ।
ಸಿಂಹಾ ವ್ಯಾಘ್ರಾ ಸಮುತ್ಸಾರ್ಯ ಕ್ವಚಿಚ್ಚಾಪಿ ತಪೋಧನಾ ॥ ೪೬ ॥

ಖಾಂಡವೀಂ ನಾಮ ನಗರೀಮುಕರೋತ್ತತ್ರ ಶೋಭನಾಂ ।
ತ್ರಿಂಶದ್ಯೋಜನವಿಸ್ತೀರ್ಣಾಮಾಯತಾಂ ಶತಯೋಜನಾಂ ॥ ೪೭ ॥

ಉಚ್ಚಪ್ರಾಕಾರಸಂಯುಕ್ತಾಂ ಸಾಟ್ಟಾಲಾಂಬುದತೋರಣಾಂ ।
ನಿಮ್ನಾಭಿರತಿದೀರ್ಘಾಭಿಃ ಪರಿಖಾಭಿಃ ಸಮಾವೃತಾಂ ॥ ೪೮ ॥

---

೪೪. ಋಷಿಗಳು ಕೇಳಿದರು:—ಎಲೈ ತಪೋಧನನೇ, ವಿಜಯನು ನೂರು ಯೋಜನ ವಿಸ್ತಾರವುಳ್ಳ ಖಾಂಡವವನವನ್ನು ಹೇಗೆ ನಿರ್ಮಿಸಿದನು? ಎಂಬುವನ್ನು ನಮಗೆ ಹೇಳು. ನಾವುಗಳು ಅದನ್ನು ಕೇಳಲಪೇಕ್ಷಿಸುವೆವು.

೪೫-೪೬. ಮಾರ್ಕಂಡೇಯಋಷಿಯು ಹೇಳಿದನು: — ಚಂದ್ರವಂಶದಲ್ಲಿ ಬಹಳ ಶಕ್ತಿವಂತನೂ, ಪರಾಕ್ರಮಶಾಲಿಯೂ, ಧೈರ್ಯಶಾಲಿಯೂ, ಸುಂದರನೂ ಆದ ಸುದರ್ಶನನೆಂಬ ರಾಜನು ಹಿಮವತ್ಪರ್ವತದ ಹತ್ತಿರದಲ್ಲಿದ್ದ ದೊಡ್ಡ ಕಾಡನ್ನು ನಾಶ ಪಡಿಸಿ, ಅಲ್ಲಿದ್ದ ಸಿಂಹಗಳನ್ನೂ, ಹುಲಿಗಳನ್ನೂ ಓಡಿಸಿ, ಋಷಿಗಳನ್ನು ಬೇರೆಯಕಡೆಯಲ್ಲಿ ವಾಸಮಾಡುವಂತೆ ಮಾಡಿ, ಆ ಪ್ರದೇಶದಲ್ಲಿ ರಮ್ಯವಾದ ಖಾಂಡವೀ ಎಂಬ ನಗರವನ್ನು ನಿರ್ಮಿಸಿದನು.

೪೭-೪೮. ಮೂವತ್ತು ಯೋಜನ ವಿಸ್ತೀರ್ಣವಾಗಿಯೂ, ನೂರುಯೋಜನ ಉದ್ದವಾಗಿಯೂ ಇದ್ದ ಆ ಪಟ್ಟಣವು ಎತ್ತರವಾದ ಕೋಟೆಕೊತ್ತಲಗಳಿಂದಲೂ, ಮೇಘಮಂಡಲದನ್ನು ಸ್ಪರ್ಶಿಸುವಂತೆ ಅತ್ಯುನ್ನತವಾದ ಮಹಾದ್ವಾರಗಳಿಂದಲೂ, ಆಳವಾಗಿಯೂ, ಉದ್ದವಾಗಿಯೂ ಇರುವ ಆಗಳುಗಳಿಂದಲೂ ಶೋಭಿಸುತ್ತಲಿತ್ತು.

ಅಧೃಷ್ಯಾಮುಪರೈರ್ವೀರೈರ್ನಾನಾಜನಸಮಾವೃತಾಂ ।
ದೀರ್ಘಿಕಾಭಿಶ್ಚೋಪವನೈರ್ಬಹುಭಿಶ್ಚಾಪ್ಸರೋ ಗಣೈಃ ॥ ೪೯ ॥

ಆಕೀರ್ಣಾಂ ಚ ತಥಾರಾಮೈರುತ್ತಮೈರಪಿ ಮಾನವೈಃ ।
ಸೋತ್ಸವಾಃ ಸತತಂ ಯತ್ರ ಜನಾ ದೇವಾ ದಿವಿ ಸ್ಥಿತಾಃ ॥ ೫೦ ॥

ಸ್ಪರ್ಧಂತೇ ಸ್ಮ ಮುದಾ ಯುಕ್ತಾ ಆದ್ಯಾಭೋಗಸಮನ್ವಿತಾಃ ।
ಸ ವೈ ಸುದರ್ಶನೋ ರಾಜಾ ಖಾತ್ವಾ ಭೂಮಿಂ ವಿದಾರ್ಯ ಚ ॥ ೫೧ ॥

ಗಂಗಾಂ ಕನಖಲಾಂ ದೇವೀಂ ವಾಹಯಾಮಾಸ ಖಾಂಡವೀಂ ।
ಸಂಪ್ಲಾವ್ಯ ಖಾಂಡವೀಮಧ್ಯಂ ತೇನ ಖಾತೈಶ್ಚ ವರ್ತ್ಮಭಿಃ ॥ ೫೨ ॥

ವಕ್ರಾನುವಕ್ರಗಾ ಭೂತ್ವಾ ಯಾತಿ ಸೀತಾ ನದೀಂ ಪ್ರತಿ ।
ಸ ಜಿತ್ವಾ ಸಕಲಾನ್ ಭೂಪಾನ್ ವಿತ್ತಾನ್ ವಾಹತ್ಯ ಭೂರಿಶಃ ॥ ೫೩ ॥

ಮತ್ತು ಆ ನಗರಿಯು ಶೂರರಾದ ಶತ್ರುಗಳಿಗೂ ದುರ್ಭೇದ್ಯವಾಗಿದ್ದಿತು. ಅನೇಕ ಸರೋವರಗಳು, ಉದ್ಯಾನವನಗಳು, ಅಪ್ಸರಸ್ತ್ರೀಯರು ಇವರುಗಳಿಂದ ಆ ನಗರವು ರಮ್ಯವಾಗಿ ಕಂಗೊಳಿಸುತ್ತಿತ್ತು. ಅಲ್ಲಿ ನಾನಾಬಗೆಯ ಜನರು ವಾಸವಾಗಿದ್ದರು. ಅವರೆಲ್ಲರೂ ತಮ್ಮತಮ್ಮ ಧರ್ಮಗಳಲ್ಲಿ ನಿರತರಾಗಿ ಸಂತೋಷದಿಂದ ಅನೇಕ ಭೋಗೈಶ್ವರ್ಯಾದಿಗಳನ್ನು ಅನುಭವಿಸುತ್ತಾ ಸ್ವರ್ಗದಲ್ಲಿರುವ ದೇವತೆಗಳನ್ನು ಮೀರಿಸುವಂತಿದ್ದರು.

೫೧. ಆ ಸುದರ್ಶನರಾಜನು ಭೂಮಿಯನ್ನು ಆಳವಾಗಿ ಅಗಿಯಿಸಿ, ಕನಖಲಾ ಎಂಬ ಗಂಗಾನದಿಯನ್ನು ರಾಜಧಾನಿಯಾದ ಖಾಂಡವೀನಗರಿಯ ಸಮೀಪದಲ್ಲಿ ಹರಿಯುವಂತೆ ಮಾಡಿದನು. ಆ ನದಿಯು, ಅಗೆದ ಪ್ರದೇಶಗಳಲ್ಲಿ ವಕ್ರವಕ್ರವಾಗಿ ಹರಿಯುತ್ತಾ ಸೀತಾನದಿಯನ್ನು ಸೇರಲು ಹರಿದುಹೋಗುತ್ತಿರುವುದು.

೫೨-೫೩. ಇದಲ್ಲದೆ, ಆ ರಾಜನು ಅನೇಕ ದೇಶಗಳ ರಾಜರನ್ನು ಗೆದ್ದು ಬಹಳವಾಗಿ ದ್ರವ್ಯಶೇಖರಮಾಡಿ, ಆ ದ್ರವ್ಯಗಳನ್ನೂ, ಬಗೆಬಗೆಯ ರತ್ನಗಳನ್ನೂ ತನ್ನ ರಾಜಧಾನಿಯಾದ ಖಾಂಡವೀನಗರಿಯಲ್ಲಿ ರಾಶಿರಾಶಿಯಾಗಿ ಸೇರಿಸಿ ಇಟ್ಟಿದ್ದನು.

ರಾಶೀಚಕಾರ ಖಾಂಡವ್ಯಾ ಮಧ್ಯೇ ರತ್ನೈರನೇಕಶಃ ।
ಅನ್ಯೇಷಾಂ ನಗರೇಭ್ಯಸ್ತು ಜನಾನಾನೀಯ ಭೂಪತಿಃ ॥ ೫೪ ॥

ಖಾಂಡವ್ಯಾಂ ವಾಸಯಾಮಾಸ ಹತ್ವಾದಪಿ ಸುದರ್ಶನಃ ।
ದೇವದಾನವಗಂಧರ್ವಾ ಜಿತ್ವಾ ಜಿತ್ವಾ ಯುಧಾ ಕೃತೀ ॥ ೫೫ ॥

ದೇವವೃಕ್ಷಂ ದೇವರತ್ನಂ ದೇವೀಂ ಚಾಪಿ ತಥೌಷಧೀಂ ।
ಖಾಂಡವ್ಯಾಂ ರೋಹಯಾಮಾಸ ಸ ಭೂಪಾಲಃ ಸುದರ್ಶನಃ ॥ ೫೬ ॥

ಅಸಹಿಷ್ಣುಸ್ತತೋ ಜಿಷ್ಣುರ್ನೃಪತಿಂ ತಂ ಸುದರ್ಶನಂ ।
ಕೃತಾಪಚಾರಂ ಬಹುಧಾ ದೇವಾನಾಂ ಚ ತಥಾ ನೃಣಾಂ ॥ ೫೭ ॥

ವಾರಾಣಸೀಪುರಪತಿಂ ವೀರಂ ವಿಜಯಶಾಲಿನಂ ।
ಸಂಧಾಯ ಕೃತಸಾಚಿವ್ಯಂ ತದ್ವೈರೇ ಸಮುಯೋಜಯತ್ ॥ ೫೮ ॥

---

೫೪. ಇತರ ನಗರಗಳಲ್ಲಿ ವಾಸಿಸುವ ಜನರನ್ನೂ ಬಲಾತ್ಕಾರವಿಂದ ಕರೆದು ಕೊಂಡುಬಂದು ಅವರನ್ನು ಖಾಂಡವೀನಗರದಲ್ಲಿ ವಾಸಮಾಡುವಂತೆ ಮಾಡಿದನು.

೫೫-೫೬. ಕುಶಲನಾದ ಸುದರ್ಶನರಾಜನು, ದೇವತೆಗಳು, ದಾನವರು, ಗಂಧರ್ವರು ಇವರನ್ನು ಯುದ್ಧದಲ್ಲಿ ಗೆದ್ದು, ದೇವೋದ್ಯಾನಕ್ಕೆ ಯೋಗ್ಯವಾದ ವೃಕ್ಷ ಗಳನ್ನೂ, ದೇವತೆಗಳು ಧರಿಸುವ ರತ್ನಗಳನ್ನೂ, ದೇವಯೋಗ್ಯವಾದ ಮೂಲಿಕೆ ಯನ್ನೂ ಸಹ ತೆಗೆದುಕೊಂಡುಬಂದು ಖಾಂಡವೀನಗರದ ಉದ್ಯಾನಗಳಲ್ಲಿ ನೆಟ್ಟು ಅಭಿವೃದ್ಧಿಗೊಳಿಸಿದನು.

೫೭-೫೮. ದೇವತೆಗಳಿಗೂ, ಮನುಷ್ಯರಿಗೂ ಸುದರ್ಶನರಾಜನಿಂದ ಆದ ಅಪ ಕಾರಗಳನ್ನು ನೋಡಿ ಇಂದ್ರನಿಗೆ ಸಹಿಸಲಿಲ್ಲ. ಆದುದರಿಂದ ವಾರಾಣಸೀ ಎಂಬ ಕಾಶೀನಗರಕ್ಕೆ ಅಧಿಪತಿಯೂ, ಶೂರನೂ ಆದ ವಿಜಯನೆಂಬ ರಾಜನೊಡನೆ ಮಂತ್ರಾ ಲೋಚನೆ ಮಾಡಿ ಸುದರ್ಶನರಾಜನಮೇಲೆ ಅವನಿಗೆ ದ್ವೇಷ ಹೆಚ್ಚುವಂತೆ ತಂತ್ರ ಮಾಡಿದನು.

ವಿಜಯೋ ವಿವರಂ ಪ್ರಾಪ್ಯ ಮಹಾಬಲಪರಾಕ್ರಮಃ ।
ಸುದರ್ಶನಸ್ಯ ನೃಪತೇರವಸ್ಕಂದಮಥಾಕರೋತ್ ॥ ೫೯ ॥

ನಾಸಹತ್ಸೋ ಹ್ಯವಸ್ಕಂದಂ ವಿಜಯಸ್ಯ ಸುದರ್ಶನಃ ।
ಚತುರಂಗಬಲೇನಾಶು ಯುದ್ಧಾಯಾಭಿಮುಖೋಽಭವತ್ ॥ ೬೦ ॥

ವಿಜಯೋ ರಥಮಾರುಹ್ಯ ನಿಯೋಜ್ಯ ಚತುರಂಗಿಣೀಂ ।
ಸೇನಾಂ ಸುದರ್ಶನಂ ಯೋದ್ಧುಂ ಸಮ್ಮುಖೋಽಭವದಂಜಸಾ ॥ ೬೧ ॥

ತದಾ ಮಹಾಯುದ್ಧಮಾಸೀದ್ವಿಜಯೇನ ಮಹಾತ್ಮನಾ ।
ಸುದರ್ಶನಸ್ಯ ನೃಪತೇರ್ವೃತ್ರವಾಸವಯೋರ್ಯಥಾ ॥ ೬೨ ॥

ಸುದರ್ಶನಸ್ಯ ಸೇನಾನೀ ರುಮಣ್ವಾನ್ನಾಮ ವೀರ್ಯವಾ ।
ಕಾಂಚನಂ ರಥಮಾರುಹ್ಯ ವಿಜಯಂ ಸಮ್ಮುಖೋಽಭ್ಯಯಾತ್ ॥ ೬೩ ॥

---

೫೯. ಬಳಿಕ ಪರಾಕ್ರಮಶಾಲಿಯಾದ ಆ ವಿಜಯರಾಜನು ಸಮಯವನ್ನು ಕಾಯುತ್ತಿದ್ದು, ಸುದರ್ಶನರಾಜನನ್ನು ಎದುರಿಸಲು ತನ್ನ ಸೇನೆಯನ್ನು ಸಜ್ಜುಗೊಳಿಸಿ ಖಾಂಡವೀಪುರದಬಳಿ ತಂದು ನಿಲ್ಲಿಸಿದನು.

೬೦-೬೧. ಸುದರ್ಶನರಾಜನೂ ಸಹ ವಿಜಯರಾಜನ ಸೇನಾನಿವೇಶವನ್ನು ನೋಡಿ ಸಹಿಸದೆ, ತಾನೂ ಬೇಗನೆ ಚತುರಂಗಸೇನೆಯೊಡನೆ ಕೂಡಿಬಂದು ಯುದ್ಧಕ್ಕೆ ಅಭಿಮುಖನಾದನು. ತನ್ನ ಸೇನೆಯನ್ನು ಯುದ್ಧಮಾಡಲು ನಿಯೋಗಿಸಿ ತಾನೂ ರಥವನ್ನು ಹತ್ತಿ ಸುದರ್ಶನನೊಡನೆ ವೇಗವಾಗಿ ಯುದ್ಧಮಾಡಲು ಎದುರಾದನು.

೬೨. ಆಗ ಸುದರ್ಶನ ರಾಜನಿಗೂ, ಮಹಾತ್ಮನಾದ ವಿಜಯರಾಜನಿಗೂ ಸಹ, ವೃತ್ರಾಸುರನಿಗೂ, ಇಂದ್ರನಿಗೂ ಹಿಂದೆ ನಡೆದ ಯುದ್ಧದಂತೆ, ದೊಡ್ಡ ಯುದ್ಧವು ನಡೆಯಿತು.

೬೩. ರುಮಣ್ವನೆಂಬ ಪೆಸರಿನಿಂದ ಪ್ರಸಿದ್ಧನಾದ ಮಹಾಪರಾಕ್ರಮಶಾಲಿಯಾದ ಸುದರ್ಶನರಾಜನ ಸೇನಾಪತಿಯು ಚಿನ್ನದರಥವನ್ನು ಹತ್ತಿಕೊಂಡು ವಿಜಯನ ಸಂಗಡ ಯುದ್ಧಮಾಡಲು ಎದುರಾಗಿ ನಡೆದನು.

ಅಕ್ಷೌಹಿಣ್ಯಸ್ತು ಸಪ್ತಾಸ್ಯ ಪರಿವಾರ್ಯ ಸಮಂತತಃ ।
ವ್ಯಧಮತ್ತಾಂ ಶತ್ರುಸೇನಾಂ ಯಾವತೀಮುದ್ಯತಾಯುಧಃ ॥ ೬೪ ॥

ವಿಜಯಸ್ಯ ಚ ಸೇನಾನೀಃ ಸಂಜಯಃ ಸ ರಿಪುಂಜಯಃ ।
ನಾಗಾನೀಕೇನ ಜಗ್ರಾಹ ರುಮಣ್ವಂತಂ ಸಸೈನಿಕಂ ॥ ೬೫ ॥

ತಯೋರ್ಮಹದಭೂದ್ಯುದ್ಧಂ ಸೇನಾನ್ಯೋರ್ವೀರಯೋರ್ಮಹತ್ ।
ನವರ್ಷ ಶರವರ್ಷೇಣ ರುಮಣ್ವಾನಥ ಸಂಜಯಂ ॥ ೬೬ ॥

ಕುರ್ವಂಶ್ಚಾಪಿ ಮಹಾನಾದಂ ಗಜಂ ದೃಷ್ಟ್ವೈವ ಕೇಸರೀ ।
ರುಮಣ್ವಾನಥ ವಿಂಶತ್ಯಾ ಬಾಣೈರ್ವಿಧ್ವಾಥ ಸಂಜಯಂ ॥ ೬೭ ॥

ಕ್ಷುರಪ್ರೇಣ ಧನುಸ್ತಸ್ಯ ಚಿಚ್ಛೇದ ಕೃತಹಸ್ತವತ್ ।
ಸೋಽಪಿ ಕಾರ್ಮುಕಮಾದಾಯ ತದಾನ್ಯತ್ಸಂಜಯಸ್ತ್ರಿಭಿಃ ॥ ೬೮ ॥

---

೬೪. ಇವನ ಏದು ಅಕ್ಷೌಹಿಣೀಸೇನೆಯು ಆಯುಧವನ್ನು ಹಿಡಿದುಕೊಂಡು ಸಿದ್ಧವಾಗಿ ಎಲ್ಲಾಕಡೆಯಲ್ಲಿಯೂ ಸುತ್ತಿಕೊಂಡು ಶತ್ರುಸೇನೆಯನ್ನು ಮುತ್ತಿತು.

೬೫. ಶತ್ರುಗಳನ್ನು ಜಯಿಸುವುದರಲ್ಲಿ ಸಮರ್ಥನಾದ ಸಂಜಯನೆಂಬ ಹೆಸರುಳ್ಳ ವಿಜಯರಾಜನ ಸೇನಾಪತಿಯು, ಸೇನೆಯೊಡನೆ ತನ್ನಮೇಲೆ ಬಿದ್ದುಬರುತ್ತಿರುವ ಸುದರ್ಶನನ ಸೇನಾಪತಿಯಾದ ರುಮಣ್ವಂತನೆಂಬುವನ ಕೂಡ, ತನ್ನ ಆನೆಗಳ ಸೇನೆಯೊಡನೆ ಯುದ್ಧಮಾಡಲು ಸಿದ್ಧವಾದನು.

೬೬. ಆ ಇಬ್ಬರು ಶೂರಸೇನಾಪತಿಗಳಿಗೂ ಘೋರವಾದ ಯುದ್ಧವು ನಡೆಯಿತು. ರುಮಣ್ವಂತನು ಸಂಜಯನಮೇಲೆ ಬಾಣಗಳ ಮಳೆಯನ್ನು ಕರೆದನು.

೬೭. ಸಿಂಹವು ಆನೆಯನ್ನು ಕಂಡಕೂಡಲೆ ಘರ್ಜಿಸುವಂತೆ ಆರ್ಭಟವನ್ನು ಮಾಡುತ್ತಾ, ರುಮಣ್ವಂತನು ಸಂಜಯನನ್ನು ಇಪ್ಪತ್ತು ಬಾಣಗಳಿಂದ ಹೊಡೆದು, ಹಸ್ತಲಾಘವದಿಂದ ಒಂದು ಪರಿತವಾದ ಬಾಣವನ್ನು ಬಿಟ್ಟು ಆ ಸಂಜಯನ ಧನುಸ್ಸನ್ನು ಕತ್ತರಿಸಿದನು.

೬೮-೭೦. ಆಗ ಸಂಜಯನು ಮತ್ತೊಂದು ಧನುಸ್ಸನ್ನು ತೆಗೆದುಕೊಂಡು ಬಾಣಗಳಿಂದ ಪ್ರಹರಿಸಿ ತನ್ನ ಕೈಯಲ್ಲಿನ ಭಲ್ಲಿಯಿಂದ ತಕ್ಷಣವೇ ರುಮಣ್ವಂತನ ಧನು

ಬಾಣೈರ್ವಿವ್ಯಾಧ ಭಲ್ಲೇನ ಧನುಶ್ಚಿಚ್ಛೇದ ತತ್‌ಕ್ಷಣಾತ್ ।
ಶತಾನ್ಯಷ್ಟೌ ಚ ನಾಗಾನಾಂ ಸಹಸ್ರಾಣಿ ಚ ಪಂಚಷಟ್ ॥ ೬೯ ॥

ಪತ್ತೀನಾಂ ವಾಜಿನಾಂ ತ್ರೀಣಿ ಸಹಸ್ರಾಣಿ ಸಮುಂತತಃ ।
ಸಂಜಯೋ ನಿಜಘಾನಾಶು ಬಾಣವರ್ಷೈಃ ಸುದಾರುಣೈಃ ॥ ೭೦ ॥

ಅಥಾನ್ಯದ್ಧನುರಾದಾಯ ರುಮಣ್ವಾ ಕುಪಿತೋ ಭೃಶಂ ।
ಭಲ್ಲೇನ ಸಾರಥೇಸ್ತಸ್ಯ ಶಿರಃ ಕಾಯಾದಪಾಹರತ್ ॥ ೭೧ ॥

ಹಯಾಂಶ್ಚಾಸ್ಯ ಚತುರ್ಭಿಸ್ತು ಬಾಣೈರ್ನಿನ್ಯೇ ಯಮಕ್ಷಯಂ ।
ಚತುರಃ ಪಂಚಭಿರ್ಬಾಣೈರವಿಧ್ಯಚ್ಚಾಪಿ ಸಂಜಯಂ ॥ ೭೨ ॥

ಸಂಜಯೋಽಪ್ಯತಿವೇಗೇನ ಗದಾಮಾದಾಯ ತತ್‌ಕ್ಷಣಾತ್ ।
ಅವತೀರ್ಯ ರಥೋಪಸ್ಥಾದ್ರುಮಣ್ವಂತಮಧಾವತ ॥ ೭೩ ॥

ಸ ಧಾವಂತಂ ಸಂಜಯಂ ತಂ ರುಮಣ್ವಾ ದ್ರುತಹಸ್ತವತ್ ।
ಶರವರ್ಷೇಣ ಸಂಭಾವ್ಯ ವಾರಯಾಮಾಸ ಸಂಜಯಂ ॥ ೭೪ ॥

ಸ್ಸನ್ನು ಕತ್ತರಿಸಿದನು. ಮತ್ತು ಎಂಟುನೂರು ಆನೆಗಳನ್ನೂ, ಎಂಟುಸಾವಿರ ಕುದುರೆಗಳನ್ನೂ, ಮೂರುಸಾವಿರ ಕಾಲಾಳುಗಳನ್ನೂ ಸಹ ಸುತ್ತಲೂ ಕ್ರೂರವಾದ ಬಾಣಗಳಿಂದ ಚೆನ್ನಾಗಿ ಪ್ರಹರಿಸಿದನು.

೭೧-೭೨. ಇದರಿಂದ ರುಮಣ್ವಂತನು ತುಂಬಾ ಕೋಪಗೊಂಡು ಧನುಸ್ಸನ್ನು ತೆಗೆದುಕೊಂಡು, ಅದಕ್ಕೆ ಭಲ್ಲೆಯನ್ನು ಸೇರಿಸಿ ಆ ಸಂಜಯನ ಸಾರಥಿಯ ತಲೆಯನ್ನು ಕತ್ತರಿಸಿಹಾಕಿದನು. ಅವನ ನಾಲ್ಕು ಕುದುರೆಗಳನ್ನೂ ನಾಲ್ಕು ಬಾಣಗಳಿಂದ ಸಂಹಾರಮಾಡಿ, ಸಂಜಯನನ್ನು ಐದು ಬಾಣಗಳಿಂದ ಹೊಡೆದನು.

೭೩-೭೪. ಸಂಜಯನಾದರೋ ಬಹಳ ವೇಗವಿಂದ ಆ ಕ್ಷಣದಲ್ಲಿಯೇ ತನ್ನ ಗದೆಯನ್ನು ತೆಗೆದುಕೊಂಡು ರಥದಿಂದ ಇಳಿದು, ರುಮಣ್ವಂತನನ್ನು ಹರಿಸಿಕೊಂಡು ಓಡಿಬಂದನು. ರುಮಣ್ವಂತನು ತನಗೆ ಅಭಿಮುಖವಾಗಿ ಓಡಿಬರುತ್ತಿರುವ ಸಂಜಯನನ್ನು ನೋಡಿ ತನ್ನ ಹಸ್ತಕೌಶಲ್ಯದಿಂದ ಅವನಮೇಲೆ ಬಾಣಗಳ ಮಳೆಯನ್ನು ಸುರಿಸಿ ಅವನನ್ನು ತಡೆದನು.

ಗದಾಯಾ ಭ್ರಾಮಣೇನಾಸೌ ನಿವಾರ್ಯ ಶರವರ್ಷಣಂ ।
ಆಸಸಾದ ರುಮಣ್ವಂತಂ ಕೇಸರೀವ ಮಹಾಗಜಂ ॥ ೭೫ ॥

ಆಸಾದ್ಯ ತಾಂ ಗದಾಂ ಗುರ್ವೀಮಾವಿಧ್ಯಾತೀವಸಂಜಯಃ ।
ಏಕೇನೈವ ಪ್ರಹಾರೇಣ ಸರಥಂ ತಂ ವ್ಯಪೋಥಯತ್ ॥ ೭೬ ॥

ಸ ಪಪಾತ ಮಹಾವೀರಃ ಪೃಥಿವ್ಯಾಂ ಗದಯಾ ಹತಃ ।
ವಜ್ರಾಹತೋ ಯಥಾ ಸಾಲಃ ಪ್ರಸ್ಫುಲ್ಲೋ ವನಮಧ್ಯಗಃ ॥ ೭೭ ॥

ರುಮಣ್ವಂತಂ ನಿಪತಿತಂ ದೃಷ್ಟ್ವಾ ರಾಜಾ ಸುದರ್ಶನಃ ।
ಶೋಕಕೋಪಸಮಾವಿಷ್ಟಃ ಸಧೂಮ ಇವ ಪಾವಕಃ ॥ ೭೮ ॥

ಜಜ್ವಾಲಾಕುಲದೇಹೋಽಪಿ ಕ್ರೋಧೇನಾತೀವಸಂಯುತಃ ।
ಆರುಹ್ಯ ಜವನೈರಶ್ವೈರ್ಯುಕ್ತಂ ವೈಯ್ಯಾಘ್ರಕೈತ್ತಿನಾ ॥ ೭೯ ॥

೭೫-೭೬. ಗದೆಯನ್ನು ಚಮತ್ಕಾರವಾಗಿ ತಿರುಗಿಸುವದರಿಂದಲೇ ಬಾಣಗಳ ಮಳೆಯನ್ನು ಈ ಸಂಜಯನು ತಪ್ಪಿಸಿಕೊಂಡು, ಸಿಂಹವು ದೊಡ್ಡ ಆನೆಯನ್ನು ಹರಿಸಿ ಕೊಂಡುಬಂದಂತೆ ರುಮಣ್ವಂತನ ಹತ್ತಿರಕ್ಕೆ ಬಂದು, ಭಾರವಾದ ಆ ಗದೆಯನ್ನು ಜಿನ್ನಾಗಿ ತಿರುಗಿಸಿ, ರಥದಲ್ಲಿ ಕುಳಿತಿರುವ ಅವನನ್ನು ಅಪ್ಪಳಿಸಿದನು.

೭೭. ಕಾಡಿನ ಮಧ್ಯದಲ್ಲಿ ಅರಳಿರುವ ಮತ್ತಿಯಮರವು ವಜ್ರಾಯುಧದ ಏಟಿನಿಂದ ಬೀಳುವಂತೆ, ಬಹಳ ಶೂರನಾದ ಆ ರುಮಣ್ವಂತನು ಗದೆಯ ಏಟಿನಿಂದ ಭೂಮಿಯಲ್ಲಿ ಬಿದ್ದನು.

೭೮-೮೦. ಸುದರ್ಶನರಾಜನು ತನ್ನ ಸೇನಾಧಿಪತಿಯಾದ ರುಮಣ್ವಂತನು ಬಿದ್ದುದನ್ನು ಕಂಡು ದುಃಖವೂ, ಕೋಪವೂ ಇಮ್ಮಡಿಸಲು, ಹೊಗೆಯಿಂದ ಕೂಡಿದ ಬೆಂಕಿಯು ಥಟ್ಟನೆ ಹತ್ತಿಕೊಂಡು ಪ್ರಕಾಶಮಾನವಾಗಿ ಉರಿಯುವಂತೆ ಮಹಾಕ್ರೋಧದಿಂದ ಜ್ವಲಿಸತೊಡಗಿದನು. ಬಳಿಕ ವೇಗಶಾಲಿಗಳಾಗಿರುವ ಕುದುರೆಗಳನ್ನು ಕಟ್ಟಿ, ಹುಲಿಯಚರ್ಮದಿಂದಲೂ, ಅನೇಕವಿಧವಾದ ಸುವರ್ಣಾಭರಣಗಳಿಂದಲೂ, ಸಿಂಹಧ್ವಜದಿಂದಲೂ ಅಲಂಕರಿಸಲ್ಪಟ್ಟ ರಥವನ್ನು ಹತ್ತಿಕೊಂಡು, ತನ್ನ ಕೈಯಲ್ಲಿರುವ

ರಥಂ ಕಾಂಚನಚಿತ್ರಾಂಗಂ ಸಿಂಹಧ್ವಜವಿಭೂಷಿತಂ ।
ಆಮುಕ್ತೋ ಧನುರಾದಾಯ ವಿಸ್ಫಾರ್ಯ ಚ ಪುನಃ ಪುನಃ ॥ ೮೦ ॥

ಸಸೈನ್ಯಃ ಸಂಜಯಂ ರಾಜಾ ಸಮಾದ್ರವತ ವೇಗವಾನ್ ।
ಅಥಾಸ್ಯ ನಿಶಿತೈಃ ಶಸ್ತ್ರೈಃ ಸೇನಾಮುಗ್ರಗತಾಂ ಭೃಶಂ ॥ ೮೧ ॥

ನ್ಯಹನತ್ಸಕಲಾನ್ ರಾಜಾ ಮೃಗಾನಿವ ಮೃಗಾಧಿಪಃ ।
ಏಕಾಮಕ್ಷೌಹಿಣೀಮುಗ್ರಗಾಮಿನೀಂ ವಿಪುಲೌಜಸಾಂ ॥ ೮೨ ॥

ಕ್ರೋಶದ್ವಯೇನ ನ್ಯಹನತ್ತಮಾಂಸೀವ ದಿವಾಕರಃ ।
ಹತ್ವಾ ಚಾಕ್ಷೌಹಿಣೀಮೇಕಾಮಾಸಾದ್ಯ ಸಂಜಯಂ ನೃಪಃ ॥ ೮೩ ॥

ಬಾಣೈಃ ಷಷ್ಟ್ಯಾ ತು ವಿವ್ಯಾಧ ಧ್ವಜಮೇಕೇನ ಚಿಚ್ಛಿದೇ ।
ಸಂಜಯೋಽಪ್ಯಥ ವಿಂಶತ್ಯಾ ಹೃದಿ ವಿದ್ಧ್ವಾ ಸುದರ್ಶನಂ ॥ ೮೪ ॥

ಧನುಸ್ಸಿಗೆ ಹೆದೆಯನ್ನೇರಿಸಿ ಅದನ್ನು ಆಗಾಗ ಎಳೆಯುತ್ತಾ, ಸೇನಾಸಮೇತನಾಗಿ ಬಹುಬೇಗನೆ ಸಂಜಯನ ಸಂಗಡ ಯುದ್ಧಮಾಡಲು ಸಿದ್ಧವಾದನು.

೮೦. ಅನಂತರದಲ್ಲಿ ಸಿಂಹವು ಮೃಗಗಳನ್ನು ಕೊಲ್ಲುವಂತೆ ಸುದರ್ಶನರಾಜನು ಹರಿತವಾದ ಬಾಣಗಳಿಂದ ಶತ್ರುಗಳ ಸೇನೆಯನ್ನೂ ಮತ್ತು ತನ್ನಮುಂದೆ ಬಂದವರನ್ನೂ, ಎಲ್ಲರನ್ನೂ ಸಹ ಚೆನ್ನಾಗಿ ಹೊಡೆದು ಕೊಂದನು.

೮೨-೮೩. ಮತ್ತು ಆ ಸುದರ್ಶನರಾಜನು ಮಹಾವೀರರಿಂದ ತುಂಬಿ, ಎರಡು ಹರಿದಾರಿಯವರಿವಿಗೂ ವ್ಯಾಪಿಸಿ ತನ್ನ ಎದುರಿನಲ್ಲಿ ಯುದ್ಧಸನ್ನದ್ಧವಾಗಿ ನಿಂತಿರುವ ಒಂದು ಅಕ್ಷೌಹಿಣೀಸೇನೆಯನ್ನೂ ಸಹ, ಸೂರ್ಯನು ಕತ್ತಲೆಯನ್ನು ನಾಶಮಾಡುವಂತೆ ನಾಶಮಾಡಿ, ಸಂಜಯನ ಸಮೀಪಕ್ಕೆ ಧಾವಿಸಿ ಬಂದು, ಅವನನ್ನು ಅರವತ್ತು ಬಾಣಗಳಿಂದ ಪ್ರಹರಿಸಿದನು.

೮೪-೮೫. ಬಳಿಕ ಸಂಜಯನು ತನ್ನ ಹಸ್ತಕೌಶಲ್ಯವನ್ನು ಪ್ರದರ್ಶಿಸಿ, ಇಪ್ಪತ್ತು ಬಾಣಗಳಿಂದ ಸುದರ್ಶನರಾಜನ ಎದೆಯನ್ನೂ, ಒಂದು ಬಾಣದಿಂದ ಅವನ ಲಲಾಟ

ಲಲಾಟೇ ಸ್ಮೇಕಬಾಣೇನ ಸ್ರಾವಿಧ್ಯತ್ಕೃತಹಸ್ತವತ್ ।
ಕ್ಷುರಪ್ರೇಣಾಸ್ಯ ಕೋದಂಡಂ ಛಿತ್ವಾ ರಾಜ್ಞಃ ಪ್ರತಾಪವಾ ॥ ೮೫ ॥

ಸಾರಥಿಂ ದಶಭಿರ್ಬಾಣೈಃ ಪುನರ್ವಿವ್ಯಾಧ ಸಂಜಯಃ ।
ಕೋದಂಡಮನ್ಯಮಾದಾಯ ತದಾ ರಾಜಾ ಸುದರ್ಶನಃ ॥ ೮೬ ॥

ಶರವರ್ಷೇಣ ತೀವ್ರೇಣ ವವರ್ಷಾತೀವ ಸಂಜಯಂ ।
ತಯೋರ್ಮಹದಭೂದ್ಯುದ್ಧಂ ಮುನಿವಿಸ್ಮಯಕಾರಕಂ ॥ ೮೭ ॥

ಶಸ್ತ್ರೈರಸ್ತ್ರೈರ್ಭೃಶಂ ತೀಕ್ಷ್ಣೈರ್ಬಲಿವಾಸವಯೋರಿವ ।
ತತಸ್ಸುದರ್ಶನೋ ರಾಜಾ ಭಲ್ಲೇನಾಸ್ಯ ದೃಢಂ ಧನುಃ ॥ ೮೮ ॥

ಚಿಚ್ಛೇದ ಸಾರಥಿಂ ಚಾಸ್ಯ ಜಘಾನ ನಿಶಿತೈಃ ಶರೈಃ ।
ಸ್ವಯಂ ಸಂಯಮ್ಯ ವಾಹಾ ಸ ಸಂಜಯಃ ಪರವೀರಹಾ ॥ ೮೯ ॥

ಧನುರನ್ಯತ್ಸಮಾದಾಯ ಪರಿವಾರ್ಯ ಸುದರ್ಶನಂ ।
ವಿವ್ಯಾಧ ದಶಭಿರ್ಬಾಣೈರ್ಧನುರಪ್ಯಚ್ಛಿನದ್ದೃಢಂ ॥ ೯೦ ॥

ವನ್ನೂ ಗುರಿಯಿಟ್ಟು ಹೊಡೆದನು. ಇದಲ್ಲದೆ ಹರಿತವಾದ ಬಾಣದಿಂದ ಅವನ ಧನುಸ್ಸನ್ನು ಕತ್ತರಿಸಿ, ಕತ್ತು ಬಾಣಗಳಿಂದ ಸಾರಥಿಯನ್ನೂ ಮರ್ದಿಸಿದನು.

೮೬-೮೭. ಇದನ್ನು ಲೆಕ್ಕಿಸದೆ ಸುದರ್ಶನನು ಬೇರೆ ಧನುಸ್ಸನ್ನು ತೆಗೆದು ಕೊಂಡು, ಸಂಜಯನಮೇಲೆ ಎಡಬಿಡದಂತೆ ತೀವ್ರಬಾಣಗಳ ಮಳೆಯನ್ನೇ ಸುರಿಸಿದನು, ಕ್ರೂರವಾದ ಬಾಣಗಳಿಂದಲೂ, ಅಸ್ತ್ರಗಳಿಂದಲೂ ಇವರು ಮಾಡುತ್ತಿದ್ದ ಯುದ್ಧವು, ಹಿಂದೆ ಬಲಿಚಕ್ರವರ್ತಿಗೂ, ಇಂದ್ರನಿಗೂ ನಡೆದ ಯುದ್ಧದಂತೆ ಮುನಿಗಳೂ ಸಹ ವಿಸ್ಮಯವನ್ನುಂಟುಮಾಡುವುದಾಗಿತ್ತು.

೮೮. ಹೀಗೆ ಯುದ್ಧವು ನಡೆಯುತ್ತಿರುವಾಗ, ಸುದರ್ಶನನು ಭಲ್ಲಿಯಿಂದ ಸಂಜಯನ ಗಟ್ಟಿಯಾದ ಧನುಸ್ಸನ್ನು ಕತ್ತರಿಸಿದನು. ಮತ್ತು ಇವನ ಸಾರಥಿಯನ್ನು ಹರಿತವಾದ ಬಾಣಗಳಿಂದ ಹೊಡೆದನು.

೮೯-೯೦. ಇದನ್ನು ಕಂಡು ಶತ್ರುಮರ್ದನನಾದ ಸಂಜಯನು ತಾನೇ ಕುದುರೆಗಳನ್ನು ನಡೆಸುತ್ತಾ, ಮುರಿದುಹೋದ ಧನುಸ್ಸನ್ನು ಬಿಸುಟು, ಬೇರೊಂದು ಧನು

ಶರಾಸನಾಂತರಂ ರಾಜಾ ಸಮಾದಾಯ ಸುದರ್ಶನಃ ।
ಸಂಜಯಸ್ಯ ಚತುರ್ವಾಹಾಞ್ಛರೈರ್ನಿನ್ಯೇ ಯಮಕ್ಷಯಂ ॥ ೯೦ ॥

ಮುಷ್ಟೌ ಧನುಶ್ಚ ಚಿಚ್ಛೇದ ತಂ ಚ ವಿವ್ಯಾಧ ಪಂಚಭಿಃ ।
ವಿರಥಶ್ಛಿನ್ನವಾಹಶ್ಚ ಸಂಜಯಃ ಖಡ್ಗಚರ್ಮಣೀ ॥ ೯೨ ॥

ಆದಾಯ ಸಮ್ಮುಖಂ ರಾಜ್ಞೋಽಭ್ಯದ್ರವತ್ಕುಪಿತೋ ಭೃಶಂ ।
ತಸ್ಯ ಚಾಪಂ ತತಃ ಖಡ್ಗಂ ಕ್ಷುರಪ್ರೇಣ ಸುದರ್ಶನಃ ॥ ೯೩ ॥

ದ್ವಿಧಾ ಚಿಚ್ಛೇದ ಭಲ್ಲೇನ ಚರ್ಮ ಚಾಪ್ಯಚ್ಛಿನತ್ತದಾ ।
ಅಥ ದ್ರುತಂ ತದೋಪೇತ್ಯ ಸಂಜಯಃ ಸ್ಯಂದನೋತ್ತಮಂ ॥ ೯೪ ॥

ಸುದರ್ಶನಸ್ಯ ಸೂತಂ ತು ಕರಾಭ್ಯಾಂ ಪಾತಯತ್ ಕ್ಷಿತೌ ।
ರಥಾಭ್ಯಾಶಗತಸ್ಯಾಸ್ಯ ಸಂಜಯಸ್ಯ ಸುದರ್ಶನಃ ॥ ೯೫ ॥

ಸ್ಸನ್ನು ತೆಗೆದುಕೊಂಡು, ಸುದರ್ಶನನ್ನು ಸುತ್ತುಗಟ್ಟಿ, ಹತ್ತು ಬಾಣಗಳಿಂದ ಅವನನ್ನು ಚೆನ್ನಾಗಿ ಮುರ್ದಿಸಿ, ಅವನ ಧನುಸ್ಸನ್ನು ಕತ್ತರಿಸಿದನು.

೯೧. ಸುದರ್ಶನರಾಜನು ಕೂಡಲೇ ಬೇರೆಯ ಧನುಸ್ಸನ್ನು ತೆಗೆದುಕೊಂಡು ಸಂಜಯನ ರಥದ ನಾಲ್ಕು ಕುದುರೆಗಳನ್ನು ಬಾಣಗಳಿಂದ ಹೊಡೆದು ಕೊಂದು, ಧನುಸ್ಸನ್ನು ಹಿಡಿಗೆ ಸರಿಯಾಗಿ ಕತ್ತರಿಸಿ, ಅವನನ್ನು ಐದು ಬಾಣಗಳಿಂದ ಹೊಡೆದನು.

೯೨-೯೩. ಕುದುರೆಗಳು ಸತ್ತುಹೋದಮೇಲೆ ರಥದಲ್ಲಿ ಕುಳಿತು ಉಪಯೋಗವಿಲ್ಲವೆಂದು ರಥವಿಂದಿಳಿದು ಆ ಸಂಜಯನು ಕತ್ತಿ ಗುರಾಣಿಗಳನ್ನು ಧರಿಸಿ, ಕೋಪಾವಿಷ್ಟನಾಗಿ ಸುದರ್ಶನರಾಜನಮೇಲೆ ನುಗ್ಗಿ ಬಂದನು. ಅಷ್ಟರಲ್ಲಿಯೇ ಸುದರ್ಶನನು ಅವನ ಧನುಸ್ಸನ್ನೂ, ಕತ್ತಿಯನ್ನೂ ತನ್ನ ಬಾಣಗಳಿಂದ ಕತ್ತರಿಸಿ ಗುರಾಣಿಯನ್ನು ಭಲ್ಲೆಯಿಂದ ಎರಡುಭಾಗವಾಗಿ ಸೀಳಿದನು.

೯೪. ಆಗ ಸಂಜಯನು ಬೇಗನೆ ಸುದರ್ಶರಾಜನ ಶ್ರೇಷ್ಠವಾದ ರಥಕ್ಕೆ ನೆಗೆದು, ಅವನ ಸಾರಥಿಯನ್ನು ತನ್ನ ಕೈಯಿನಿಂದ ಹೊಡೆದು ನೆಲಕ್ಕೆ ಬೀಳುವಂತೆ ಕೆಡವಿದನು.

೯೫-೯೬. ತನ್ನ ರಥದ ಸಮೀಪಕ್ಕೆ ಬಂದ ಸಂಜಯನನ್ನು ಸುದರ್ಶನನು ಭೂಮಿಗೆ ಬೀಳುವಂತೆ ಹೊಡೆದು ಕೆಡವಿ, ತನ್ನ ಕೈಯ್ಯಲ್ಲಿದ್ದ ಖಡ್ಗದಿಂದ ಅವನ ಶಿರಸ್ಸನ್ನು ಕತ್ತರಿಸಿದನು. ಹೀಗೆ ಶಿರಶ್ಛೇದನ ಮಾಡಿದಕೂಡಲೆ, ಅರಣ್ಯದಲ್ಲಿರುವ

ಶಿರಶ್ಚಿಚ್ಛೇದ ಖಡ್ಗೇನ ತತೋಽಸೌ ನ್ಯಪತದ್ಭುವಿ ।
ಸ ಪಪಾತ ತದಾ ತಸ್ಯ ರಥಾಭ್ಯಾಶೇ ಮಹಾಬಲಃ ॥ ೯೬ ॥

ಕೃತ್ತಃ ಪರಶುನಾರಣ್ಯೇ ಪುಷ್ಪಿತಃ ಸಾಲವೃಕ್ಷವತ್ ।
ಸಂಜಯಂ ಪತಿತಂ ದೃಷ್ಟ್ವಾ ವಿಜಯಃ ಕ್ರೋಧಮೂರ್ಛಿತಃ ॥ ೯೭ ॥

ಮಹತಾ ಶಂಖನಾದೇನ ನಾದಯಂಸ್ತು ನಭಸ್ಥಲಂ ।
ರಥೇನ ಸ್ವರ್ಣಚಿತ್ರೇಣ ವ್ಯಾಘ್ರಚರ್ಮವಿರಾಜಿತಾ ॥ ೯೮ ॥

ಕೇತುನಾ ವೃಷಭೇಣಾಥ ಯೋಜನಾರ್ಧೋಚ್ಛ್ರಿತೇನ ಚ ।
ನಾದಯನ್ ಕಕುಭಸ್ಸರ್ವಾ ರಥೌಘಪರಿವೇಷ್ಟಿತಃ ॥ ೯೯ ॥

ವಿಮುಂಚ್ಯ ಶರವರ್ಷಾಣಿ ಸ ಸಸಾದ ಸುದರ್ಶನಂ ।
ಆಸಾದ್ಯ ತಂ ನೃಪಂ ಭೂಪೋ ವಿಜಯಃ ಪರವೀರಹಾ ॥ ೧೦೦ ॥

ಹೃದಿ ವಿದ್ಧ್ವಾ ತ್ರಿಭಿರ್ಬಾಣೈಸ್ತಿಷ್ಠ ತಿಷ್ಠೇತಿ ಚಾಬ್ರವೀತ್
ಸುದರ್ಶನೋಽಪಿ ವಿಜಯಂ ನದಂತಂ ಕುಂಜರೋಪಮಂ ॥ ೧೦೧ ॥

ಪುಷ್ಪಿತವಾದ ವೃಕ್ಷವು ಕೊಡಲಿಯಿಂದ ಕಡಿಯಲ್ಪಟ್ಟು ಬೀಳುವಂತೆ, ಬಲಶಾಲಿಯಾದ ಸಂಜಯನು ರಥದ ಸಮೀಪದಲ್ಲಿ ಭೂಮಿಯಮೇಲೆ ಬಿದ್ದನು.

೯೭-೯೯. ಸಂಜಯನು ಬಿದ್ದುದನ್ನು ನೋಡಿ ವಿಜಯರಾಜನು ಮಹಾ ಕೋಪಾನ್ವಿತನಾಗಿ, ಭೂಮ್ಯಂತರಿಕ್ಷಗಳನ್ನು ಭೇದಿಸುವಂತೆ ಶಂಖಧ್ವನಿಮಾಡುತ್ತಾ, ಸುವರ್ಣಾಭರಣಗಳಿಂದಲೂ, ಹುಲಿಯಚರ್ಮದಿಂದಲೂ, ಅರ್ಧಯೋಜನದವರಿಗೂ ಕಾಣಿಸುತ್ತಿರುವ ಎತ್ತರವಾದ ವೃಷಭಧ್ವಜದಿಂದಲೂ ಅಲಂಕೃತವಾದ ರಥದಲ್ಲಿ ಕುಳಿತು, ದಶದಿಕ್ಕುಗಳೂ ಪ್ರತಿಧ್ವನಿಗೈಯ್ಯುವಂತೆ ಆರ್ಭಟಿಸುತ್ತಾ, ಸುತ್ತಲೂ ಅನೇಕ ರಥಗಳಿಂದ ಕೂಡಿ, ಬಾಣಗಳ ಮಳೆಯನ್ನೇ ಸುರಿಸುತ್ತಾ, ಸುದರ್ಶನರಾಜನ ಸಮೀಪ ವನ್ನೈದಿದನು.

೧೦೦. ಶತ್ರುವೀರರನ್ನು ನಾಶಮಾಡುವ ವಿಜಯರಾಜನು ಆ ಸುದರ್ಶನ ರಾಜನ ಹತ್ತಿರಕ್ಕೆ ಬಂದು ಅವನ ಎದೆಗೆ ಮೂರು ಬಾಣಗಳಿಂದ ಹೊಡೆದು ನಿಲ್ಲುನಿಲ್ಲು ಎಂದು ಘರ್ಜಿಸಿದನು.

೧೦೧-೧೦೨. ಸುದರ್ಶನರಾಜನೂ ಕೂಡ ಹೀಗೆ ಆನೆಯಂತೆ ಗರ್ಜಿಸುತ್ತಿರುವ ವಿಜಯರಾಜನನ್ನು ಹತ್ತು ಬಾಣಗಳಿಂದ ಹೊಡೆದು, ಅವನ ಧನುಸ್ಸನ್ನು ಕತ್ತರಿಸಿ,

ದಶಭಿರ್ನಿಶಿತೈರ್ಬಾಣೈರ್ವಿದ್ಧ್ವಾ ಚಿಚ್ಛೇದ ತದ್ಧನುಃ ।
ಅಥೈನಂ ಛಿನ್ನಧನ್ವಾನಂ ಜತ್ರುದೇಶೇ ತ್ರಿಭಿಃ ಶರೈಃ ॥ ೧೦೨ ॥

ನಿರ್ಭಿದ್ಯಾಥ ಮಹಾನಾದಂ ನನಾದ ಸ ಸುದರ್ಶನಃ ।
ಸೋಽನ್ಯದ್ಧನುಸ್ಸಮಾದಾಯ ಕಂಕಪತ್ರೈಸ್ತ್ರಿಭಿಶ್ಶರೈಃ ॥ ೧೦೩ ॥

ವಿವ್ಯಾಧ ಹೃದಯೇ ವೀರೋ ವಿಜಯೋಽಪಿ ಸುದರ್ಶನಂ ।
ತತಸ್ತಂ ನೃಪಮುದ್ದಿಶ್ಯ ಮಹಾಶಕ್ತಿಂ ಸುದೀಪಿತಾಂ ॥ ೧೦೪ ॥

ನಾಗಕನ್ಯಾಂ ಕೋಪಯುಕ್ತಾಂ ಲೇಲಿಹಾನಾಮಿವಾತುಲಾಂ ।
ಸ್ವರ್ಣದಂಡಾಂ ಸುತೀಕ್ಷ್ಣಾಗ್ರಾಂ ತೈಲಧೌತಾಂ ಸುನಿರ್ಮಲಾಂ ॥ ೧೦೫ ॥

ಸಮುದ್ಯಮ್ಯಾಥ ಚಿಕ್ಷೇಪ ವಿಜಯಃ ಶಾತ್ರವಂ ಪ್ರತಿ ।
ಸುದರ್ಶನಸ್ಯ ಹೃದಯೇ ಸಾ ಶಕ್ತಿಃ ಪ್ರವಿವೇಶ ಹ ॥ ೧೦೬ ॥

ದನು. ಹೀಗೆ ಧನುಸ್ಸಿಲ್ಲದೆ ಬರೀಕೈಯಿಂದ ನಿಂತಿರುವ ವಿಜಯನನ್ನು ಪುನಃ ಮೂರು ಬಾಣಗಳಿಂದ ಕಂಕಳಿಗೆ ಗುರಿಯಿಟ್ಟು ಹೊಡೆದು ದೊಡ್ಡದಾಗಿ ಸಿಂಹನಾದವನ್ನು ಮಾಡಿದನು.

೧೦೩. ಆ ಶೂರನಾದ ವಿಜಯರಾಜನೂ ಕೂಡ ಬೇರೆಯ ಧನಸ್ಸನ್ನು ತೆಗೆದುಕೊಂಡು, ಹದ್ದಿನಗರಿಯನ್ನು ಕಟ್ಟಿರುವ ಮೂರು ಬಾಣಗಳಿಂದ ಸುದರ್ಶನರಾಜನ ಎದೆಗೆ ಹೊಡೆದನು.

೧೦೪-೧೦೫. ಅನಂತರ ವಿಜಯರಾಜನು, ಮಹಾಪ್ರಕಾಶಮಾನವಾಗಿಯೂ, ನಾಗಕನ್ಯೆಯಂತೆ ಮಹಾಕೋಪದಿಂದ ಕೂಡಿ, ವಿಷಕಾರುತ್ತಿರುವುದೂ, ಚೆನ್ನದಹಿಡಿಯಿಂದ ಥಳಥಳಿಸುತ್ತ ಬಹು ಹರಿತವಾಗಿರುವುದೂ, ಎಣ್ಣೆಯಿಂದ ಚೆನ್ನಾಗಿ ಶುದ್ಧಗೊಳಿಸಲ್ಪಟ್ಟು ಕೊಳೆಯಿಲ್ಲದೆ ಮಿರುಗುತ್ತಿರುವುದೂ ಆದ ಮಹಾಶಕ್ತಿಯೆಂಬ ಬಲವಾದ ಆಯುಧವನ್ನು ತೆಗೆದುಕೊಂಡು, ತನ್ನ ಶತ್ರುವಾದ ಸುದರ್ಶನರಾಜನನ್ನು ಎತ್ತಿ ಹೊಡೆದನು.

೧೦೬. ಆ ಶಕ್ತ್ಯಾಯುಧವು ಸುದರ್ಶನರಾಜನ ಹೃದಯವನ್ನು ಪ್ರವೇಶಿಸಿತು. ಆಗ ಆ ರಾಜನು ಜ್ಞಾನಶೂನ್ಯನಾಗಿ ರಥದ ಮಧ್ಯದಲ್ಲಿ ಕೆಳಮುಖನಾಗಿ ಕೂತುಕೊಂಡನು.

ಸ ವಿಪ್ವಲೋ ರಥೋಪಸ್ಥೇ ಹ್ಯಧೋವಕ್ತ್ರ ಉಪಾವಿಶತ್ ।
ತಸ್ಮಿನ್ ಮೋಹಸಮಾಪನ್ನೇ ನೃಪತೌ ಚ ಸುದರ್ಶನೇ ॥ ೧೦೭ ॥

ತಸ್ಯಾಗ್ರತಸ್ತಥಾ ಪಾರ್ಶ್ವೇ ಯೇ ಸ್ಥಿತಾಸ್ತತ್ರ ಸೈನಿಕಾಃ ।
ತಾನ್ ಸರ್ವಾನಹನದ್ರಾಜಾ ಕ್ಷಣಮಾತ್ರಾದ್ವಿಜೋತ್ತಮಾಃ ॥ ೧೦೮ ॥

ರಥಾನ್ ದಶಸಹಸ್ರಾಣಿ ತಾವಂತ್ಯೇವ ಚ ದಂತಿನಾಂ ।
ಪಂಚ ವಿಂಶಸಹಸ್ರಾಣಿ ವಾಜಿನಾಂ ಚ ತರಸ್ವಿನಾಂ ॥ ೧೦೯ ॥

ಲಕ್ಷದ್ವಯಂ ತು ಪತ್ತೀನಾಂ ಕ್ಷಣಮಾತ್ರಾದಪೋಥಯತ್ ।
ಸ ತು ಲಬ್ಧ್ವಾ ತತಸ್ಸಂಜ್ಞಾಂ ಧನುರಾದಾಯ ವೈ ದೃಢಂ ॥ ೧೧೦ ॥

ಶರವರ್ಷೇಣ ವಿಜಯಂ ವವರ್ಷ ಸ ಸುದರ್ಶನಃ ।
ನಿವಾರ್ಯ ಶರವರ್ಷೇಣ ವಿಜಯಂ ತು ಸುದರ್ಶನಃ ॥ ೧೧೧ ॥

ಭಲ್ಲೇನ ಕಾರ್ಮುಕಂ ಸಜ್ಯಂ ತಸ್ಯ ಚಿಚ್ಛೇದ ತತ್ ಕ್ಷಣಾತ್ ।
ಸಾರಥೇಸ್ತು ಶಿರಃ ಕಾಯಾದ್ಭಲ್ಲೇನಾಪಾಹರತ್ತತಃ ॥ ೧೧೨ ॥

೧೦೭-೧೦೯. ಎಲೈ ಬ್ರಾಹ್ಮಣೋತ್ತಮರೇ ಕೇಳಿರಿ :-ಆ ಸುದರ್ಶನರಾಜನು ಮೂರ್ಛೆಯನ್ನು ಹೊಂದಿ ನಿಶ್ಚೇಷ್ಟಿತನಾಗಿರಲು, ವಿಜಯರಾಜನು ಅವನ ಮುಂದು ಗಡೆಯಲ್ಲಿಯೂ, ಪಕ್ಕಗಳಲ್ಲಿಯೂ ಇದ್ದ ಸೈನಿಕರೆಲ್ಲರನ್ನೂ, ಹತ್ತು ಸಾವಿರ ರಥಗಳನ್ನೂ, ಅಷ್ಟೇ ಆನೆಗಳನ್ನೂ, ವೇಗಶಾಲಿಗಳಾಗಿರುವ ಇಪ್ಪತ್ತೈದುಸಾವಿರ ಕುದುರೆಗಳನ್ನೂ, ಎರಡುಲಕ್ಷ ಕಾಲಾಳುಗಳನ್ನೂ ಸಹ ಒಂದುಕ್ಷಣಕಾಲದಲ್ಲಿ ಸಂಹಾರಮಾಡಿದನು.

೧೧೦-೧೧೨. ಇಷ್ಟರಲ್ಲಿ ಸುದರ್ಶನರಾಜನು ಎಚ್ಚತ್ತು, ಗಟ್ಟಿಯಾದ ತನ್ನ ಧನುಸ್ಸನ್ನು ತೆಗೆದುಕೊಂಡು ವಿಜಯರಾಜನಮೇಲೆ ಬಾಣಗಳ ಮಳೆಯನ್ನು ಸುರಿಸಿ, ಶತ್ರುವು ಕರೆಯುತ್ತಿರುವ ಬಾಣವೃಷ್ಟಿಯನ್ನು ತಡೆದು ತಪ್ಪಿಸಿಕೊಂಡು, ಆಕ್ಷಣ ದಲ್ಲಿಯೇ ಅವನ ಸಜ್ಜಿತವಾದ ಧನುಸ್ಸನ್ನು ಭಲ್ಲೆಯಿಂದ ಕತ್ತರಿಸಿದನು. ಹಾಗೆಯೇ ಅವನ ಸಾರಥಿಯ ತಲೆಯನ್ನು ಭಲ್ಲೆಯಿಂದ ಕತ್ತರಿಸಿ, ಅವನ ನಾಲ್ಕು ಕುದುರೆಗಳನ್ನು ಕೊಂದನು.

ಹಯಾಂಶ್ಚ ಚತುರಶ್ಚಾಸ್ಯ ಪ್ರೇಷಯಾಮಾಸ ಮೃತ್ಯವೇ ।
ಅಥೈನಂ ವಿರಥಂ ಭೂಪಂ ದಶಭಿಃ ಕಂಕಪತ್ರಿಭಿಃ ॥ ೧೧೩ ॥

ವಿವ್ಯಾಧ ಹೃದಯೇ ಭೂಯೋ ನನಾದ ಚ ಸುದರ್ಶನಃ ।
ಸ ಛಿನ್ನಧನ್ವಾ ವಿರಥೋ ಗದಾಮಾದಾಯ ವೇಗವಾನ್ ॥ ೧೧೪ ॥

ವಿಜಯೋ ವಿಜಯಾಕಾಂಕ್ಷೀ ಸುದರ್ಶನಮುಧಾವತ ।
ಆಪತಂತಂ ಮಹಾವೀರಂ ಬಾಣವರ್ಷೈಸ್ಸುದರ್ಶನಃ ॥ ೧೧೫ ॥

ವವರ್ಷ ವರ್ಷಾಸು ಯಥಾ ವಾರಿದಃ ಪೃಥಿವೀಧರಂ ।
ವಿಜಯಃ ಶರವೃಷ್ಟಿಂ ತಾಂ ಪ್ರಾಚ್ಛಾದ್ಯ ಸ್ವಶರೇಣ ವೈ ॥ ೧೧೬ ॥

ಗದಯಾ ತಂ ರಥಾರೂಢಮಾಸಸಾದ ತು ತತ್ಕ್ಷಣಾತ್ ।
ಆಸಾದ್ಯ ತಂ ಮಹಾವೀರಂ ವಿಜಯೋಽಥ ಸುದರ್ಶನಂ ॥ ೧೧೭ ॥

---

೧೧೩. ಅನಂತರದಲ್ಲಿ ಸುದರ್ಶನರಾಜನು, ರಥವಿಲ್ಲದೆ ಸುಮ್ಮನೆ ನಿಂತಿರುವ ವಿಜಯರಾಜನನ್ನು ಹತ್ತು ಬಾಣಗಳಿಂದ ಎಚೆಗೆ ಹೊಡೆದು ಪುನಃ ಸಿಂಹನಾದವನ್ನು ಮಾಡಿದನು.

೧೧೪. ರಥವೂ, ಧನುಸ್ಸೂ ಇಲ್ಲದಿದ್ದರೂ, ವಿಜಯರಾಜನು ಬೇಗನೆ ತನ್ನ ಗದೆಯನ್ನು ತೆಗೆದುಕೊಂಡು ವಿಜಯಾಭಿಲಾಷೆಯಿಂದ, ಸುದರ್ಶನರಾಜನನ್ನು ಹರಿಸಿ ಕೊಂಡು ಓಡಿಬಂದನು.

೧೧೫, ತನ್ನಮೇಲೆ ಬೀಳಲು ಬರುತ್ತಿರುವ ವಿಜಯರಾಜನಮೇಲೆ ಸುದರ್ಶನ ರಾಜನು ಮಳೆಗಾಲದಲ್ಲಿ ಮೋಡವು ಬೆಟ್ಟದಮೇಲೆ ನುಳೆಯನ್ನು ಸುರಿಸುವಂತೆ ಬಾಣ ಗಳ ವೃಷ್ಟಿಯನ್ನು ಸುರಿಸಿದನು.

೧೧೬-೧೧೭. ವಿಜಯರಾಜನು ಆ ಬಾಣಗಳ ಮಳೆಯನ್ನು ತನ್ನ ಬಾಣಗ ಳಿಂದ ತಪ್ಪಿಸಿಕೊಂಡು, ಗದೆಯನ್ನು ಧರಿಸಿ, ರಥದಲ್ಲಿ ಕುಳಿತುಕೊಂಡಿರುವ ಸುದರ್ಶನ ರಾಜನ ಹತ್ತಿರಕ್ಕೆ ಆಕ್ಷಣದಲ್ಲಿ ನುಗ್ಗಿಬಂದು, ತಾನು ಹಿಡಿದಿದ್ದ ಗದಾಯುಧದಿಂದ ಅವನ ತಲೆಗೆ ಬೀಸಿ ಹೊಡೆದು ಅವನನ್ನು ಭೂಮಿಯಲ್ಲಿ ಕೆಡವಿದನು.

ಶೀರ್ಷೇ ಪ್ರಹೃತ್ಯ ಗದಯಾ ಪಾತಯಾಮಾಸ ಭೂತಲೇ ।
ಗಿರೇಃ ಶೃಂಗಂ ಯಥಾ ತುಂಗಂ ವಜ್ರಾಶನಿವಿದಾರಿತಂ ॥ ೧೧೮ ॥

ತಥಾ ಸುದರ್ಶನೋ ರಾಜಾ ದಾರಿತೋ ಗದಯಾಽಪತತ್ ।
ತಸ್ಮಿನ್ನಿಪತಿತೇ ವೀರೇ ಸೇನಾಭಿಸ್ತಸ್ಯ ಸೈನಿಕಾಃ ॥ ೧೧೯ ॥

ಭಯಾತ್ಸಂಪ್ರಾದ್ರವಂಸ್ತಸ್ಮಾದ್ದಿಶಶ್ಚ ಪ್ರದಿಶಸ್ತಥಾ ।
ನಷ್ಟೇಷು ತಸ್ಯ ಸೈನ್ಯೇಷು ವಿಜಯಃ ಖಾಂಡವೀಂ ಪುರೀಂ ॥ ೧೨೦ ॥

ಪ್ರವಿಶ್ಯ ದದೃಶೇ ತತ್ರ ರಾಶೀಭೂತಾ ಗಿರೀನಿವ ।
ಸುವರ್ಣಾನಾಂ ಚ ರತ್ನಾನಾಂ ಸಂಚಯಾ ಬಹುಶಃ ಪುನಃ ॥ ೧೨೧ ॥

ದೃಷ್ಟ್ವಾ ಸರಾಂಸಿ ತತ್ರೈಷ ಪ್ರಫುಲ್ಲಕಮಲಾನಿ ಚ ।
ಹಂಸಕಾರಂಡವಾನಾದ್ಯೈರ್ನಾದಿತಾನಿ ಸಮಂತತಃ ॥ ೧೨೨ ॥

ರಾಶೀಕೃ ಸುವರ್ಣರತ್ನಾನಾಂ ಪರ್ವತಾನಿವ ವಿಸ್ತೃತಾ ।
ಪುಷ್ಪಿತಾ ದೇವವೃಕ್ಷಾಂಶ್ಚ ಭ್ರಮದ್ಭ್ರಮರಭೂಷಿತಾ ॥ ೧೨೩ ॥

---

೧೧೮. ವಜ್ರಾಯುಧವೂ, ಸಿಡಿಲೂ, ಇವುಗಳ ಏಟಿನಿಂದ ಬಿಟ್ಟದ ಎತ್ತರವಾದ ಶಿಖರವು ಸೀಳಿಹೋಗಿ ಕೆಳಗೆ ಬೀಳುವಂತೆ, ಸುದರ್ಶನರಾಜನು ಗಧಾಯುಧದ ಏಟಿನಿಂದ ಸೀಳಿಹೋಗಿ ಭೂಮಿಯಲ್ಲಿ ಬಿದ್ದನು.

೧೧೯. ತಮ್ಮ ರಾಜನಾದ ಸುದರ್ಶನನು ಭೂಮಿಯಲ್ಲಿ ಬೀಳಲು, ಅದನ್ನು ಕಂಡು ಅವನ ಸೈನಿಕರೆಲ್ಲರೂ ಭಯದಿಂದ ದಿಕ್ಕುದಿಕ್ಕುಗಳಿಗೆ ಓಡಿಹೋದರು.

೧೨೦-೧೨೧. ಶತ್ರುಸೇನೆಯು ಎಲ್ಲವೂ ಓಡಿಹೋದನಂತರ ವಿಜಯರಾಜನು ಖಾಂಡವೀನಗರವನ್ನು ಪ್ರವೇಶಿಸಿ, ಆ ಪಟ್ಟಣದಲ್ಲಿ ಬೆಟ್ಟದಂತೆ ರಾಶಿರಾಶಿಯಾಗಿ ಬಿದ್ದಿದ್ದ ರತ್ನಸುವರ್ಣಗಳನ್ನು ನೋಡಿದನು.

೧೨೨-೧೨೩. ಆ ನಗರದಲ್ಲಿ ವಿಕಸಿತವಾದ ಕಮಲಗಳಿಂದಲೂ, ಹಂಸಕಾರಂಡವಾದಿ ಪಕ್ಷಿಗಳ ಕಲಕಲಧ್ವನಿಯಿಂದಲೂ, ಕಂಗೊಳಿಸುವ ಅನೇಕ ಸರೋವರಗಳಿದ್ದವು. ಸುವರ್ಣರತ್ನಗಳು ಲೆಕ್ಕವಿಲ್ಲದೆ ಬೆಟ್ಟದಂತೆ ರಾಶಿರಾಶಿಯಾಗಿ ಬಿದ್ದಿದ್ದವು. ಝೇಂಕಾರಮಾಡುತ್ತಿರುವ ದುಂಬಿಗಳಿಂದ ಸೊಬಗನ್ನು ಬೀರುತ್ತಿರುವ ಅನೇಕ ದೇವವೃಕ್ಷಗಳು ಅರಳಿದ ಪುಷ್ಪಗಳಿಂದ ಕಂಗೊಳಿಸುತ್ತಿದ್ದವು. ಆ ನಗರದ ರಾಜವೀಧಿಗಳಲ್ಲಿ

ಪ್ರಾಸಾದಾ ವಿಪುಲಾಶ್ಚುಭ್ರಾ ಕೈಲಾಸಸದೃಶಾ ಗಜಾ ।
ಪ್ರಸ್ಫುಟಾಂಶ್ಚ ಸುಗಂಧಾದ್ಯಾ ಪ್ರತಿಗೇಹೇ ವ್ಯವಸ್ಥಿತಾ ॥ ೧೨೪ ॥

ಉತ್ಫುಲ್ಲನಯನೋ ರಾಜಾ ವಿಜಯಃ ಪರವೀರಹಾ ।
ಮೇನೇಽಮರಾವತೀಂ ತಾಂ ತು ಪುರೀಂ ಕ್ಷಿತಿಗತಾಮಿವ ॥ ೧೨೫ ॥

ತಂ ವೀಕ್ಷಂತಂ ನರಪತಿಂ ನಗರೀಂ ತಾಂ ಸುರೇಶ್ವರಃ ।
ಸಮೇತ್ಯ ವಿಜಯಂ ಪ್ರಾಹ ಸಾಂತ್ವಯ್ಯ ಶ್ಲಕ್ಷ್ಣಯಾ ಗಿರಾ ॥ ೧೨೬ ॥

॥ ಇಂದ್ರ ಉವಾಚ ॥

ರಾಜನ್ಮಹಾವನಮಿದಮಾಸೀದ್ದೇವಗಣಾವೃತಂ ।
ನ ಚ ಗಂಧರ್ವಯಕ್ಷಾಣಾಂ ಮುನೀನಾಂ ಚ ಮನೋಹರಂ ॥ ೧೨೭ ॥

ಸರ್ವಾನುತ್ಸಾರ್ಯ ದೇವಾದೀನ್ಮಮ ಚಾಪ್ಯಪ್ರಿಯೇ ರತಃ ।
ಭಂಕ್ತ್ವಾ ವನಮಿದಂ ಗುಹ್ಯಮುತ್ಸಾದ್ಯ ಚ ತಪೋಧನಂ ॥ ೧೨೮ ॥

ಖಾಂಡವೀಂ ನಗರೀಂ ಚಕ್ರೇ ಹತಾದ್ರಾಜಾ ಸುದರ್ಶನಃ ।
ತದಿದಂ ಪುನರೇವ ತ್ವಂ ವನಂ ಕುರು ನರೋತ್ತಮ ॥ ೧೨೯ ॥

ವಿಸ್ತಾರವಾಗಿಯೂ, ಶುಭ್ರವಾಗಿಯೂ ಇರುವ ಅರಮನೆಗಳೂ, ಆ ಮನೆಗಳಲ್ಲಿ ಘಮ ಘಮಿಸುವ ಸುವಾಸನೆಯನ್ನು ಬೀರುತ್ತಿರುವ ಸುಗಂಧದ್ರವ್ಯಗಳೂ, ಗಜಶಾಲೆಯಲ್ಲಿ ಕೈಲಾಸಪರ್ವತದಂತೆ ಬೃಹದಾಕಾರವಾದ ಗಜಗಳೂ ಹೇರಳವಾಗಿದ್ದವು. ಇವುಗಳನ್ನೆಲ್ಲಾ ನೋಡಿ ಆ ವಿಜಯರಾಜನು ಅಚ್ಚರಿಗೊಂಡು, ಇದೇನು, ಇಂದ್ರನ ಅಮರಾವತಿಯೇ ಭೂಮಿಗೆ ಬಂದಿರುವುದೋ ಎಂದು ಭ್ರಾಂತನಾದನು.

೧೨೬. ಆ ನಗರವನ್ನು ನೋಡಿ ಆಶ್ಚರ್ಯಪಡುತ್ತಿರುವ ಆ ವಿಜಯರಾಜನ ಹತ್ತಿರಕ್ಕೆ ಇಂದ್ರನು ಬಂದು, ಮೃದುವಾದ ಮಾತುಗಳಿಂದ ಅವನನ್ನು ಸಮಾಧಾನಗೊಳಿಸಿ ಹೀಗೆ ಹೇಳಿದನು.

೧೨೭-೧೩೦. ಇಂದ್ರನಿಂತೆಂದನು:—ಎಲೈ ರಾಜನೇ ಕೇಳು, ಈ ಪ್ರದೇಶವು ಹಿಂದೆ ದೇವತೆಗಳ ವಾಸಸ್ಥಾನವಾಗಿದ್ದಿತು. ಆಗ ಇಲ್ಲಿ ಗಂಧರ್ವರೂ, ಯಕ್ಷರೂ ಮುನಿಗಳೂ ಇವರಾರೂ ಇರಲಿಲ್ಲ. ಈರೀತಿ ಮನೋಹರವಾಗಿಯೂ ಇರಲಿಲ್ಲ. ಗಹನ

ತತ್ರಾಹಂ ವಿಪರಿಷ್ಯಾಮಿ ತಕ್ಷಕೇಣ ಸಮಂ ರಹಃ ।
ಮುನೀನಾಂ ಚ ತಪಃಸ್ಥಾನಮತುಲಂ ತೇ ಪ್ರಸಾದತಃ ॥ ೧೩೦ ॥

ಭವಿಷ್ಯತಿ ಚ ಯಕ್ಷಾಣಾಂ ಕಿನ್ನರಾಣಾಂ ಚ ಪಾರ್ಥಿವ ।
॥ ಮಾರ್ಕಂಡೇಯ ಉವಾಚ ॥
ಏತಚ್ಛ್ರುತ್ವಾ ವಚಸ್ತಸ್ಯ ಶಕ್ರಸ್ಯ ವಿಜಯಸ್ತದಾ ॥ ೧೩೧ ॥

ವನಮೇವಾಕರೋತ್ತತ್ತು ಖಾಂಡವೀಂ ಶಕ್ರಗೌರವಾತ್ ।
ಗಚ್ಛಂತು ಭೋ ಯಥಾಸ್ಥಾನಂ ಪ್ರಜಾಸ್ಸರ್ವಾ ಯಥೇಚ್ಛಯಾ ॥ ೧೩೨ ॥

ಯೇಷಾಂ ವಾಂಛಾಸ್ತಿ ಲೋಕಾನಾಂ ಮದ್ರಾಜ್ಯಗಮನೇ ಪುನಃ ।
ವಾರಾಣಸೀಂ ತೇ ಗಚ್ಛಂತು ಮಯೈವ ಪ್ರತಿಪಾಲಿತಾಂ ॥ ೧೩೩ ॥

ತತಸ್ತಸ್ಯ ವಚಃ ಶ್ರುತ್ವಾ ಜನಾಃ ಕೇಚಿನ್ನಿಜಾಸ್ಪದಂ ।
ಜಗ್ಮುರ್ವಾರಣಾಸೀಂ ಕೇಚಿದ್ವಿಜಯೇನಾಭಿಪಾಲಿತಾಂ ॥ ೧೩೪ ॥

ನಾದ ದೊಡ್ಡ ಅರಣ್ಯಪ್ರದೇಶವಾಗಿತ್ತು. ಇಂತಹ ಪ್ರದೇಶದಲ್ಲಿದ್ದ ದೇವತೆಗಳನ್ನೂ, ತಪಸ್ವಿಗಳನ್ನೂ ಇಲ್ಲಿಂದ ಓಡಿಸಿ, ಈ ಸುದರ್ಶನರಾಜನು ಖಾಂಡವೀ ಎಂಬ ನಗರವನ್ನು ಇಲ್ಲಿ ಬಲತ್ಕಾರದಿಂದ ನಿರ್ಮಿಸಿದನು. ಇವನ ಈ ದುಷ್ಕೃತ್ಯವು ನನಗೂ ಸರಿಬೀಳಲಿಲ್ಲ. ಆದುದರಿಂದ ಎಲೈ ರಾಜಶ್ರೇಷ್ಠನೇ ಕೇಳು, ಮೊದಲು ಕಾಡಾಗಿದ್ದ ಈ ಪ್ರದೇಶವನ್ನು ನೀನುಪುನಃ ಕಾಡನ್ನಾಗಿಯೇಮಾಡು. ನಾನು ಆ ವನದಲ್ಲಿ ತಕ್ಷಕನೊಡನೆ ಏಕಾಂತವಾಗಿವಿಹರಿಸುವೆನು. ನಿನ್ನ ಅನುಗ್ರಹದಿಂದ ಈ ವನಪ್ರದೇಶವು ಮುನಿಗಳಿಗೆ ತಪೋವನವಾಗಿಯೂ, ಕಿನ್ನರರಿಗೆ ವಿಹಾರಸ್ಥಾನವಾಗಿಯೂ ಆಗುವುದು.

೧೩೧. ಮಾರ್ಕಂಡೇಯಮುನಿಯು ಹೇಳಿದನು:—ಇಂದ್ರನು ಹೇಳಿದ ಈ ಮಾತನ್ನು ಕೇಳಿ ವಿಜಯರಾಜನು, ಅವನ ಮಾತಿನಮೇಲೆ ಗೌರವದಿಂದ ಅದನ್ನು ಮತ್ತೆ ವನವನ್ನಾಗಿಯೇ ಮಾಡಿದನು.

೧೩೨-೧೩೪. ಮತ್ತು ವಿಜಯರಾಜನು ಆ ಖಾಂಡವೀನಗರದಲ್ಲಿದ್ದ ಪ್ರಜೆಗಳನ್ನು ಕುರಿತು:—ಎಲೈ ಪ್ರಜೆಗಳಿರಾ! ಈಗ ನೀವು ಈ ನಗರವನ್ನು ಬಿಟ್ಟು ನಿಮ್ಮ ಇಚ್ಛೆಬಂದಿಡೆಗೆ ಹೋಗಬಹುದು. ನನ್ನ ರಾಜ್ಯದಲ್ಲಿ ಬಂದು ನೆಲೆಸುವ ಅಪೇಕ್ಷೆ

ತತೋ ಧನಾನಾಂ ತಾ೯ ರಾಶೀ೯ ರತ್ನಾನಾಂ ಚ ಪೃಥಕ್ಪೃಥಕ್ ।
ಮಣೀನಾಂ ಕನಕಾನಾಂ ಚ ರೂಪ್ಯಾನಾಂ ವಿಜಯಸ್ತಥಾ ॥ ೧೩೫ ॥

ವಿವಿಧೈರ್ವಾಹಯಾಮಾಸ ಪುರೀಂ ವಾರಾಣಸೀಂ ಪ್ರತಿ ।
ಗಂಧರ್ವಾಣಾಂ ಚ ದೇವಾನಾಂ ಯದಾ ನೀತಂ ಹಠಾತ್ಪುರಾ ॥ ೧೩೬ ॥

ರತ್ನದಾರ್ವಾದಿಕಂ ಯತ್ತು ವಿಜಯಂ ತತ್ಪ್ರಸಾದ್ಯ ಚ ।
ತೈಸ್ತೈರ್ನೀತಂ ಚ ಖಾಂಡವ್ಯಾಃ ಸ್ವಸ್ಥಾನಂ ಪ್ರತಿ ಹರ್ಷಿತೈಃ ॥ ೧೩೭ ॥

ತ್ರಿಂಶದ್ಯೋಜನವಿಸ್ತೀರ್ಣಾಂ ಶತಯೋಜನಮಾಯತಾಂ ।
ತಾಂ ಪುರೀಂ ವಿಜಯಶ್ಚಕ್ರೇ ನ ಚಿರಾದೇವ ವೈ ವನಂ ॥ ೧೩೮ ॥

ತಸ್ಮಿನ್ಖಾಂಡವಕೃಷ್ಣಸ್ಯ ಸಂಮತ್ಯಾ ತಕ್ಷಕಃ ಸಹಿತೋ ಗಣೈಃ ।
ಉವಾಸ ಸುಚಿರಂ ತತ್ರ ತತೋಽಭೂನ್ನಿರ್ಜನಂ ವನಂ ॥ ೧೩೯ ॥

ಯುಳ್ಳವರು ನನ್ನ ನಗರವಾದ ಕಾಶೀನಗರಕ್ಕೆ ಬಂದು ಆಲ್ಲಿ ನೆಲೆಸಿರಿ ಎಂದು ಹೇಳಲು, ಆ ರಾಜನ ಮಾತುಗಳನ್ನು ಕೇಳಿದವರಲ್ಲಿ ಕೆಲವರು ಅವರವರ ವಾಸಸ್ಥಳಕ್ಕೆ ಹಿಂತಿರುಗಿ ಬೋದರು. ಮತ್ತೆ ಕೆಲವರು ವಿಜಯನಿಂದ ರಕ್ಷಿತವಾದ ಕಾಶೀನಗರವನ್ನು ಸೇರಿದರು.

೧೩೫. ಬಳಿಕ ವಿಜಯನು ಅಲ್ಲಿ ರಾಶಿರಾಶಿಯಾಗಿ ಬಿದ್ದಿದ್ದ ಧನಗಳನ್ನೂ, ರತ್ನಗಳನ್ನೂ, ಸುವರ್ಣರತ್ನಖಚಿತವಾದ ಆಭರಣಗಳನ್ನೂ, ಬೆಳ್ಳಿಯ ವಸ್ತುಗಳನ್ನೂ ಸಹ ಅನೇಕವಿಧವಾದ ಆಡ್ಡಿಗಳಮೇಲೆ ಕಾಶೀನಗರಕ್ಕೆ ತೆಗೆಸಿಕೊಂಡುಹೋದನು.

೧೩೬-೧೩೭. ಹಿಂದೆ ಗಂಧರ್ವರಿಂದಲೂ, ದೇವತೆಗಳಿಂದಲೂ, ಬಲಾತ್ಕಾರವಾಗಿ ತಂದ ಅನೇಕಬಗೆಯ ರತ್ನಾದಿಗಳನ್ನೂ, ಮರದ ಸಾಮಾನುಗಳನ್ನೂ, ಇತರ ಅಮೂಲ್ಯವಸ್ತುಗಳನ್ನೂ ಸಹ ವಿಜಯರಾಜನು, ಅವರವರ ಪದಾರ್ಥಗಳನ್ನು ಅವರವರಿಗೆ ಹಿಂದಕ್ಕೆ ಕೊಟ್ಟನು. ಅವರು ಆ ವಸ್ತುಗಳನ್ನು ತೆಗೆದುಕೊಂಡು ವಿಜಯರಾಜನನ್ನು ಅಭಿನಂದಿಸಿ, ಸಂತೋಷದಿಂದ ತಮ್ಮತಮ್ಮ ಸ್ಥಾನಗಳಿಗೆ ತೆರಳಿದರು.

೧೩೮. ಮೂವತ್ತುಯೋಜನ ಅಗಲವೂ, ನೂರುಯೋಜನ ಉದ್ದವೂ ಇರುವ ಆ ನಗರವನ್ನು ವಿಜಯನು ಮತ್ತೆ ವನವನ್ನಾಗಿ ಮಾಡಿದನು.

೧೩೯. ಆ ಕಾಡಿನಲ್ಲಿ ಇಂದ್ರನ ಅನುಮತಿಯಿಂದ ತಕ್ಷಕನು ತನ್ನ ಗುಂಪಿನ ವರೊಡನೆ ಬಹಳಕಾಲದವರಿವಿಗೂ ವಾಸಮಾಡಿದಕಾರಣ ಅದು ಜನಸಂಚಾರರಹಿತವಾದ ವನವಾಗಿ ಪರಣಮಿಸಿತು.

ತತ್ರ ದೇವಾಃ ಸಗಂಧರ್ವಾಃ ಕ್ರೀಡಂತೇಽಪ್ಸರಸಾಂ ಗಣಾಃ ।
ಆಶಂಸಂತಶ್ಚ ವಿಜಯಂ ರಣೇಷು ವಿಜಯಾವಪಂ ॥ ೧೪೦ ॥

ಅಷ್ಟಾವಿಂಶತಿಮೇ ಪ್ರಾಪ್ತೇ ಯುಗೇ ದ್ವಾಪರಶೇಷತಃ ।
ವಹ್ನಿರ್ಬ್ರಾಹ್ಮಣರೂಪೇಣ ಭಿಕ್ಷಾಂ ಜಿಷ್ಣುಮಯಾಚತ ॥ ೧೪೧ ॥

ದಾತುಮಂಗೀಕೃತೇ ಭಿಕ್ಷಾಂ ತದಾ ಪಾಂಡುಸುತೇನ ವೈ ।
ವಹ್ನಿಃ ಸ್ವರೂಪಮಾಸ್ಥಾಯ ಜಿಷ್ಣುಂ ವಚನಮಬ್ರವೀತ್ ॥ ೧೪೨ ॥

ಅಹಮಗ್ನಿಃ ಪಾಂಡುಪುತ್ರ ಯಜ್ಞಭಾಗಾಭಿಭೋಜನಾತ್ ।
ವ್ಯಾಧಿತೋಽಹಂ ತತೋ ವ್ಯಾಧಿಂ ಮಮ ತ್ವಂ ನಾಶಯಾಧುನಾ ॥ ೧೪೩ ॥

ಖಾಂಡವಂ ನಾಮ ವಿಪಿನಂ ಸಪಕ್ಷಿಮೃಗರಾಕ್ಷಸಂ ।
ಯದಿ ತ್ವಂ ಮಾಂ ಭೋಜಯಿತುಂ ಶಕ್ನೋಷಿ ಶ್ವೇತವಾಹನ ॥ ೧೪೪ ॥

---

೧೪೦. ಯುದ್ಧದಲ್ಲಿ ವಿಜಯಶಾಲಿಯಾದ ಆ ವಿಜಯರಾಜನನ್ನು ದೇವತೆಗಳು ಬಹಳವಾಗಿ ಪ್ರಶಂಸೆಮಾಡಿದರು ಮತ್ತು ಆ ವನದಲ್ಲಿ ಗಂಧರ್ವರೂಪನೆಯೂ, ಅಪ್ಸರಸ್ತ್ರೀಯರೂಪನೆಯೂ ಸಹಿತರಾಗಿ ಯಥೇಚ್ಛವಾಗಿ ವಿಹರಿಸುತ್ತಿದ್ದರು.

೧೪೧-೧೪೪. ಇಪ್ಪತ್ತೆಂಟನೆಯ ದ್ವಾಪರಯುಗದ ಅಂತ್ಯಭಾಗದಲ್ಲಿ ಅಗ್ನಿಯು ಬ್ರಾಹ್ಮಣರೂಪದಿಂದ ಬಂದು ಅರ್ಜುನನ್ನು ಭಿಕ್ಷೆಬೇಡಿದನು. ಆಗ ಅರ್ಜುನನು ಭಿಕ್ಷೆಯನ್ನು ಕೊಡಲು ಒಪ್ಪಿದಕೂಡಲೇ, ಅಗ್ನಿಯು ತನ್ನ ನಿಜರೂಪವನ್ನು ಪ್ರಕಟಿಸಿ, ಅರ್ಜುನನ್ನು ಕುರಿತು ಎಲೈ ಪಾಂಡುಪುತ್ರನೇ! ನಾನು ಅಗ್ನಿಯು. ನನಗೆ ಯಜ್ಞದಲ್ಲಿ ಹವಿರ್ಭಾಗವನ್ನು ತಿಂದು ಅಜೀರ್ಣವಾಗಿ ಅದರಿಂದ ರೋಗವು ಬಂದಿವೆ. ಈಗ ನೀನು ನನ್ನ ಆ ರೋಗವನ್ನು ಪರಿಹರಿಸು. ಪಕ್ಷಿ, ಮೃಗ, ರಾಕ್ಷಸ ಇವರುಗಳಿಂದ ಕೂಡಿದ ಖಾಂಡವವೆಂದು ಹೆಸರುಳ್ಳ ಈ ಅರಣ್ಯವನ್ನು ನಾನು ಆಹಾರವಾಗಿ ಉಪಯೋಗಿಸಲು ನೀನು ನನಗೆ ಅವಕಾಶವನ್ನು ಕೊಟ್ಟರೆ, ಅದರ ಭಕ್ಷಣದಿಂದ ನನ್ನ ಈ ಈ ರೋಗವು ಬೇಗನೆ ವಾಸಿಯಾಗುವುದು. ಪೂರ್ವದಲ್ಲಿ ವಿಜಯನೆಂಬ ರಾಜನು ಖಾಂಡವೀ ಎಂಬ ಹೆಸರಿನ ಒಂದು ನಗರವನ್ನು ನಾಶಪಡಿಸಿ ಆ ಪ್ರದೇಶದಲ್ಲಿ ವನವಾಗುವಂತೆ ಮಾಡಿದ್ದರಿಂದ ಅವಕ್ಕೆ ಖಾಂಡವವನವೆಂದು ಹೆಸರುಬಂದಿತು. ಎಲೈ ಶ್ವೇತವಾಹನನೇ! ನನಗೋಸ್ಕರವಾಗಿಯೇ ದೇವರು ಈ ವನವನ್ನು ನಿರ್ಮಿಸಿರುವ

ತದಾ ಮಮು ಹ್ಯಸೌ ವ್ಯಾಧಿರಪಯಾಸ್ಯತಿ ನೋ ಚಿರಾತ್ ।
ಪುರಾ ತು ವಿಜಯೋ ರಾಜಾ ಖಾಂಡವೀಂ ನಾಮ ತಾಂ ಪುರೀಂ ॥ ೧೪೫ ॥

ಭಂಕ್ತ್ವಾ ವನಂ ಯತಶ್ಚಕ್ರೇ ತೇನ ತತ್ಖಾಂಡವಂ ವನಂ ।
ಮದರ್ಥಂ ದೇವವಿಹಿತಂ ವನಂ ತು ಶ್ವೇತವಾಹನ ॥ ೧೪೬ ॥

ವಿರೋಧಾತ್ತತ್ತು ಶಕ್ರಸ್ಯ ನ ಸ್ವಯಂ ಭೋಕ್ತುಮುತ್ಸಹೇ ।
ತಸ್ಮಾತ್ತ್ವಾಹಿ ಮಹಾಭಾಗ ವನೇ ತಸ್ಮಿನ್ನಿಯೋಜಯ ॥ ೧೪೭ ॥

ಯಥಾಹಂ ಸಕಲಂ ಭೋಕ್ತುಂ ಶಕ್ನೋಮಿ ತ್ವತ್ಪ್ರಸಾದತಃ ।
ತಸ್ಯ ತದ್ವಚನಂ ಶ್ರುತ್ವಾ ಸವ್ಯಸಾಚೀ ಮಹಾಬಲಃ ॥ ೧೪೮ ॥

ದಾಹಯಾಮಾಸ ವಿಪಿನಂ ತತ್ಸರ್ವಂ ಪ್ರಾಣಿಸಂಯುತಂ ।
ದೇವಕೀತನಯೇನಾಸೌ ವಾಸುದೇವೇನ ಪಾಲಿತಃ ॥ ೧೪೯ ॥

ಖಾಂಡವಂ ದಾಹಯಾಮಾಸ ಜ್ವಲನಸ್ಯ ಹಿತೇ ರತಃ ।
ಸುಪ್ರೀತಃ ಪ್ರದದೌ ತಸ್ಮಾದರ್ಜುನಾಯ ಮಹಾತ್ಮನೇ ॥ ೧೫೦ ॥

ನೆಂದು ತಿಳಿಯುತ್ತೇನೆ. ಇಂದ್ರನ ಸಂಗಡ ವಿರೋಧಬರುವುದರಿಂದ ನಾನಾಗಿಯೇ ಆ ವನವನ್ನು ಸುಡಲಾರೆನು. ಅದುದರಿಂದ ಮಹಾನುಭಾವನಾದ ನೀನು ಆ ವನವನ್ನು ನಾನು ದಹಿಸುವಂತೆ ಅವಕಾಶವನ್ನು ಕಲ್ಪಿಸು. ನಿನ್ನ ಅನುಗ್ರಹದಿಂದ ಈ ವನವೆಲ್ಲ ವನ್ನೂ ನಾನು ಸುಡಲು ಶಕ್ತನಾಗುವೆನು. ಆದುದರಿಂದ ಈ ಕಾರ್ಯವನ್ನು ನೆರವೇರಿಸಿಕೊಟ್ಟು ನನ್ನನ್ನು ರಕ್ಷಿಸಬೇಕು ಎಂದು ಕೇಳಿಕೊಂಡನು.

೧೪೫-೧೫೦. ಅಗ್ನಿಯು ಹೇಳಿದ ಈ ಮಾತನ್ನು ಕೇಳಿ ಮಹಾಪರಾಕ್ರಮಿಯೂ, ದೇವಕೀನಂದನನಾದ ಶ್ರೀಕೃಷ್ಣನಿಂದ ಪಾಲಿತನೂ ಆದ ಅರ್ಜುನನು, ಹಾಗೆಯೇ ಆಗಲೆಂದೊಪ್ಪಿ, ಪ್ರಾಣಿಸಮೂಹದಿಂದ ಕೂಡಿದ ಆ ಖಾಂಡವವನವನ್ನು ಅಗ್ನಿಗೆ ಕೊಟ್ಟು ಅದನ್ನು ಅವನಿಂದ ಸುಡಿಸಿದನು. ಅರ್ಜುನನು ಮಾಡಿದ ಈ ಉಪಕಾರದಿಂದ ಅಗ್ನಿಯು ಸುಪ್ರೀತನಾಗಿ ಅರ್ಜುನನಿಗೆ ದೇವನಿರ್ಮಿತವಾದ ವರುಣನಲ್ಲಿದ್ದ ಗಾಂಡೀವವೆಂಬ ಧನುಸ್ಸನ್ನೂ, ಅಕ್ಷಯವಾದ ಎರಡು ಬತ್ತಳಿಕೆಗಳನ್ನೂ, ಬೆಳ್ಳಿಯಂತೆ ಹೊಳೆಯುತ್ತಿರುವ ಶ್ವೇತಾಶ್ವಗಳನ್ನು ಕಟ್ಟಿದ ರಥವೊಂದನ್ನೂ ಕೊಟ್ಟನು. ಆ ರಥದ ಮೇಲ್ಭಾಗದಲ್ಲಿ ಸ್ವಯಂ ಹನುಮಂತನೇ ಅಧಿಷ್ಠಿತನಾಗಿ ವಾನರಧ್ವಜರೂಪದಿಂದ ನೆಲ

ವಹ್ನಿರ್ಧನುಶ್ಚ ಗಾಂಡೀವಂ ವಾರುಣಂ ದೇವನಿರ್ಮಿತಂ ।
ಅಕ್ಷಯ್ಯೇ ಚೇಷುಧೀ ದಿವ್ಯೇ ರೂಪ್ಯಾಭಾಂಶ್ಚ ತುರೋ ಹಯಾನ್ ॥ ೧೫೧ ॥
ಹನೂಮತಾಧಿಷ್ಠಿತಂ ತು ಮಹಾಂತಂ ವಾನರಧ್ವಜಂ ।
ಖಡ್ಗಂ ಚ ತ್ರಿಶಿಖಂ ತೀಕ್ಷ್ಣಂ ದಹನಸ್ಸವ್ಯಸಾಚಿನೇ ॥ ೧೫೨ ॥
ನೀರೋಗಶ್ಚಾಭವದ್ವಹ್ನಿಸ್ತದಾ ಜಿಷ್ಣು ಪ್ರಸಾದತಃ ।
ತೈರ್ಬಾಣೈಸ್ತೇನ ಧನುಷಾ ತೇನ ಖಡ್ಗೇನ ಕೇತುನಾ ॥ ೧೫೩ ॥
ತದಶ್ವಸ್ಯಂದನೇನಾಪಿ ವಿಜಿಗ್ಯೇ ಫಾಲ್ಗುನೋ ರಿಪೂನ್ ।
ಏವಂ ಭೈರವವಂಶೇಷು ಸಂಜಾತೋ ವಿಜಯೋ ನೃಪಃ ॥ ೧೫೪ ॥
ಖಾಂಡವಂ ನಾಮ ವಿಪಿನಂ ಚಕಾರ ಸುಮಹಾಕೃತೀ ।
ವಿಜಯಸ್ಯ ಸುತಾ ಜಾತಾಸ್ತ್ರಯೋದಶ ಮಹಾಬಲಾಃ ॥ ೧೫೫ ॥
ದ್ಯುತಿರ್ಮಾನ್ ಸೌಮ್ಯದರ್ಶೀಚ ಭೂರಿಃ ಪ್ರದ್ಯುಮ್ನ ಏವ ಚ ।
ಕ್ರತುಸ್ತುಂಡೋ ವಿರೂಪಾಕ್ಷೋ ವಿಕ್ರಾಂತೋಽಥ ಧನಂಜಯಃ ॥ ೧೫೬ ॥
ಪ್ರಹರ್ಷಃ ಪ್ರಬಲಃ ಕೇತುಸ್ತಥೋಪರಿಚರೋಽಪರಃ ।
ಏಷಾಂ ರಾಜಾಽಭವದ್ವೀರಃ ಶೇಷೋಪರಿಚರಸ್ತು ಯಃ ॥ ೧೫೭ ॥

ಸಿದ್ದನು. ಇಂತಹ ದೊಡ್ಡದಾದ ರಥವನ್ನೂ, ಮೂರು ಅಲಗುಗಳಿಂದ ಕೂಡಿ ತುಂಬ ಹರಿತವಾದ ಖಡ್ಗವೊಂದನ್ನೂ ಸಹ ಅಗ್ನಿಯು ಅರ್ಜುನನಿಗೆ ಕೊಟ್ಟನು.

೧೫೨. ಆಗ ಅರ್ಜುನನ ಅನುಗ್ರಹದಿಂದ ಅಗ್ನಿಯ ರೋಗವೆಲ್ಲವೂ ವಾಸಿಯಾಗಿ ಆರೋಗ್ಯವುಳ್ಳವನಾದನು. ಅರ್ಜುನನೂ ಸಹ ಅಗ್ನಿಯು ಕೊಟ್ಟ ಬಾಣ, ಬತ್ತಳಿಕೆ, ಧನುಸ್ಸು, ಕತ್ತಿ, ಅಶ್ವಯುಕ್ತವಾದ ರಥ ಇವುಗಳ ಸಹಾಯದಿಂದ ಮುಂದೆ ಶತ್ರುಗಳನ್ನು ಜಯಿಸುವವನಾದನು.

೧೫೪. ಈರೀತಿಯಾಗಿ ಭೈರವನ ವಂಶದಲ್ಲಿ ಹುಟ್ಟಿದ ಮಹಾತ್ಮನಾದ ವಿಜಯನೆಂಬ ರಾಜನು ಖಾಂಡವ ಎಂಬ ಹೆಸರಿನ ವನವನ್ನು ನಿರ್ಮಿಸಿದನು.

೧೫೫-೧೫೭. ಈ ವಿಜಯರಾಜನಿಗೆ ಬಹಳ ಬಲಿಷ್ಠರಾದ ಹದಿಮೂರುಮಂದಿ ಮಕ್ಕಳಾದರು. ದ್ಯುತಿರ್ಮಾ, ಸೌಮ್ಯದರ್ಶೀ, ಭೂರಿ, ಪ್ರದ್ಯುಮ್ನ, ಕ್ರತು, ತುಂಡ, ವಿರೂಪಾಕ್ಷ, ವಿಕ್ರಾಂತ, ಧನಂಜಯ, ಪ್ರಹರ್ಷ, ಪ್ರಬಲ, ಕೇತು, ಉಪರಿಚರ ಎಂದು ಅವರ ಹೆಸರುಗಳು. ಇವರಲ್ಲಿ ಕಡೆಯವನಾದ ಉಚರಿಚರನೆಂಬುವನು ರಾಜನಾಗಿದ್ದನು.

ವಾರಾಣಾಸ್ಯಾಂ ನಗರ್ಯಾಂ ಯೋ ಯಜ್ಞಾನಾಂ ಪುರಾಕರೋತ್ ।
ಲಕ್ಷಯಜ್ಞಕರಃ ಕೋಽಪಿ ನಾಸೀನ್ನಾಪಿ ಭವಿಷ್ಯತಿ ॥ ೧೫೮ ॥

ರಾಜಾ ಕ್ಷಿತೌ ಮಹಾಭಾಗೋ ಯಥೋಪರಿಚರಸ್ತಥಾ ।
ಏವಂ ಸೂತಿಪ್ರಸೂತೈಶ್ಚ ವ್ಯಾಪ್ತಂ ಸರ್ವಮಿದಂ ಜಗತ್ ॥ ೧೫೯ ॥

ಚಿರೇಣ ತಾರ್ಕ್ಷ್ಯ ಕಃ ಸಂಖ್ಯಾತುಂ ಶಕ್ನೋತೀತಿ ಭುವಿ ಮಾನವಃ ।
ಕ್ರಮಾದ್ಭೈರವವಂಶೇನ ವ್ಯಾಪ್ತಂ ಲೋಕತ್ರಯಂ ತ್ವಿದಂ ॥ ೧೬೦ ॥

ಏವಂ ವಃ ಕಥಿತಂ ವಿಪ್ರಾಃ ಸಂತಾನಂ ಭೈರವಸ್ಯ ತು ।
ಯೇಷಾಂ ಶ್ರುತ್ವಾ ಕಥಾಮಾತ್ರಂ ನಾಪುಣ್ಯೋ ಜಾಯತೇ ನರಃ ॥ ೧೬೧ ॥

ಇದಂ ಯಃ ಕೀರ್ತಯೇತ್ಪುಣ್ಯಂ ಚರಿತಂ ವಿಜಯಸ್ಯ ತು ।
ಸತತಂ ವಿಜಯಸ್ತಸ್ಯ ಜಾಯತೇ ನ ಪರಾಭವಃ ॥ ೧೬೨ ॥

---

೧೫೮. ಪೂರ್ವದಲ್ಲಿ ಈ ಉಪರಿಚರರಾಜನು ಕಾಶೀನಗರದಲ್ಲಿ ಒಂದುಲಕ್ಷ ಯಜ್ಞಗಳನ್ನು ಮಾಡಿದನು. ಈ ಉಪರಿಚರರಾಜನು ಮಾಡಿದಂತೆ ಭೂಮಿಯಲ್ಲಿ ಲಕ್ಷಯಜ್ಞವನ್ನು ಮಾಡಿದವನು ಹಿಂದೆ ಯಾರೂ ಇರಲಿಲ್ಲ. ಮುಂದೆ ಹುಟ್ಟುವುದೂ ಇಲ್ಲ.

೧೫೯-೧೬೦. ಹೀಗೆಯೇ ಮಕ್ಕಳು, ಮೊಮ್ಮಕ್ಕಳು ಇವರುಗಳಿಂದ ಪ್ರಪಂಚವು ತುಂಬಿರುತ್ತದೆ. ಭೂಮಿಯಲ್ಲಿ ಯಾವ ಮನುಷ್ಯನು ತಾನೇ ಅವರೆಲ್ಲರನ್ನೂ ಲೆಕ್ಕಮಾಡಿಯಾನು? ಭೈರವನ ವಂಶದವರಿಂದ ಈ ಮೂರುಲೋಕವೂ ಕ್ರಮವಾಗಿ ತುಂಬಿಹೋಗಿರುವುದು.

೧೬೧. ಎಲೈ ಬ್ರಾಹ್ಮಣೋತ್ತಮನೇ! ಈರೀತಿಯಾಗಿ ನಿಮಗೆ ಭೈರವನ ವಂಶವನ್ನು ಹೇಳಿರುವೆನು. ಈ ಕಥೆಯನ್ನು ಕೇಳಿದಮಾತ್ರದಿಂದಲೇ ಮನುಷ್ಯನು ಪುತ್ರವಂತನಾಗುವನು.

೧೬೨. ವಿಜಯರಾಜನ ಪುಣ್ಯಕರವಾದ ಈ ಚರಿತ್ರೆಯನ್ನು ಯಾರು ಹೇಳುವರೋ ಅವರಿಗೆ ಯಾವಾಗಲೂ ಜಯವು ಉಂಟಾಗುವುದೇ ಹೊರತು ಅಪಜಯವು ಎಂದಿಗೂ ಉಂಟಾಗುವುದಿಲ್ಲ.

ಏಕಾಗ್ರಮನಸಾ ಯಸ್ತು ಶೃಣುಯಾದಿದಮುತ್ತಮಂ ।
ತಸ್ಯ ವಂಶಸ್ಯ ವಿಚ್ಛೇದೋ ನ ಕದಾಚಿದ್ಭವಿಷ್ಯತಿ ॥ ೧೬೩ ॥

॥ ಇತಿ ಶ್ರೀಕಾಲಿಕಾಪುರಾಣೇ ದ್ವಿನವತಿತಮೋಽಧ್ಯಾಯಃ ॥

---

೧೬೩. ಯಾವ ಮನುಷ್ಯನು ಉತ್ತಮವಾದ ಈ ಭೈರವನ ಚರಿತ್ರೆಯನ್ನು ಏಕಾಗ್ರಮನಸ್ಸಿನಿಂದ ಕೇಳುವನೋ ಅವನ ವಂಶದ ನಾಶವು ಯಾವಾಗಲೂ ಉಂಟಾಗುವುದಿಲ್ಲ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ತೊಂಭತ್ತೆರಡನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ

॥ ಶ್ರೀಕಾಲಿಕಾಪುರಾಣೇ ತ್ರಿನವತಿತಮೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ವೇತಾಲಸ್ಯ ಚ ಸಂತಾನಂ ಶೃಣ್ವಂತು ಮುನಿಸತ್ತಮಾಃ ।
ಯಚ್ಛ್ರುತ್ವಾ ಸರ್ವಪಾಪೇಭ್ಯಸ್ತತ್ಕ್ಷಣಾದೇವ ಹೀಯತೇ ॥ ೧ ॥

ದಕ್ಷಸ್ಯ ತನಯಾ ಚಾಭೂತ್ಸುರಭಿರ್ನಾಮ ನಾಮತಃ ।
ಗವಾಂ ಮಾತಾ ಮಹಾಭಾಗ ಸರ್ವಲೋಕೋಪಕಾರಿಣೀ ॥ ೨ ॥

ತಸ್ಯಾಂ ತು ತನಯಾ ಜಜ್ಞೇ ಕಶ್ಯಪಾತ್ತು ಪ್ರಜಾಪತೇಃ ।
ನಾಮ್ನಾ ಸಾ ರೋಹಿಣೀ ಶುಭ್ರಾ ಸರ್ವಕಾಮದುಘಾ ನೃಣಾಂ ॥ ೩ ॥

ತೊಂಭತ್ತಮೂರನೆಯ ಅಧ್ಯಾಯ

೧. ಮಾರ್ಕಂಡೇಯಮುನಿಯು ಹೇಳಿದನು—ಎಲೈ ಶ್ರೇಷ್ಠರಾದ ಋಷಿಗಳಿರಾ, ಭೈರವನಸಂತತಿಯನ್ನು ಕೇಳಿದಿರಷ್ಟೆ. ಈಗ ವೇತಾಳನ ಸಂತತಿಯನ್ನು ಹೇಳುವೆನು, ಕೇಳಿ. ಅದನ್ನು ಕೇಳಿದರೆ, ಕೇಳಿದವನು ಆಕ್ಷಣದಲ್ಲಿಯೇ ಸಮಸ್ತಪಾಪರಹಿತನಾಗುವನು.

೨. ದಕ್ಷಬ್ರಹ್ಮನಿಗೆ ಸುರಭಿ ಎಂಬ ಮಗಳಿದ್ದಳು. ಆ ಸುರಭಿಯು ಸಮಸ್ತ ಗೋವುಗಳಿಗೂ ತಾಯಿಯು ಮತ್ತು ಲೋಕಗಳಿಗೆಲ್ಲ ಬಹು ಉಪಕಾರಿಯಾಗಿದ್ದಳು.

೩. ಆ ಸುರಭಿಯಲ್ಲಿ ಕಶ್ಯಪಬ್ರಹ್ಮನಿಂದ ರೋಹಿಣೀ ಎಂಬ ಪುತ್ರಿಯು ಜನಿಸಿದಳು. ಆ ರೋಹಿಣಿಯ ಶುಭ್ರವರ್ಣವುಳ್ಳವಳಾಗಿ, ಜನರಿಗೆ ಸರ್ವಕಾಮಗಳನ್ನೂ ಕೊಡುವವಳಾಗಿದ್ದಳು.

ತಸ್ಯಾಂ ಜಜ್ಞೇ ಶುನಶ್ಶೇಫಾನ್ಮುನೇರಿತಿ ತಪೋಧನಾತ್ ।
ಕಾಮಧೇನುರಿತಿ ಖ್ಯಾತಾ ಸರ್ವಲಕ್ಷಣಸಂಯುತಾ ॥ ೪ ॥

ಸಾ ಸಿತಾಭ್ರಪ್ರತೀಕಾಶಾ ಚತುರ್ವೇದಚತುಷ್ಪದಾ ।
ಸ್ವನೈಶ್ಚತುರ್ಭಿರ್ಧರ್ಮಾರ್ಥಕಾಮಪ್ರಸವಕಾರಿಣೀ ॥ ೫ ॥

ಸಾ ಸುವರ್ಣಶರೀರಾ ತು ಕಾಲೇನ ಮಹತಾ ಸತೀ ।
ನಿರ್ಮಲಂ ಯೌವನಂ ಪ್ರಾಪ ಕಾಮಧೇನುರ್ಮನೋಹರಂ ॥ ೬ ॥

ತಾಂ ಚರಂತೀಂ ಮೇರುಪೃಷ್ಠೇ ಚಾರುರೂಪಾಂ ಸುಲಕ್ಷಣಾಂ ।
ದದರ್ಶ ಸ ತು ವೇತಾಲಃ ಕಾಮುಕಶ್ಚಾಭ್ಯಪದ್ಯತ ॥ ೭ ॥

ತಂ ಕಾಮುಕಂ ಚ ವೇತಾಲಂ ವಿದಿತ್ವಾ ಕಾಮಧೇನುಕಾ ।
ಪಶುಧರ್ಮಾತ್ಸ್ವಯಂ ಭೇಜೇ ತಂ ಪುತ್ರಂ ಶಶಭೃದ್ಧೃತಃ ॥ ೮ ॥

೪-೫. ಆ ರೋಹಿಣಿಯಲ್ಲಿ ಶುನಶ್ಶೇಫನೆಂಬ ಮುನಿಯ ದೆಸೆಯಿಂದ ಸರ್ವಲಕ್ಷಣ ಸಂಪೂರ್ಣವಾದ ಕಾಮಧೇನುವು ಹುಟ್ಟಿತು. ಆ ಕಾಮಧೇನುವಿನ ಶರೀರವು ಸ್ವಚ್ಛವಾದ ಬಿಳಿಯ ಮೇಘದಂತೆ ಪ್ರಕಾಶಿಸುತ್ತಿತ್ತು. ಈ ಕಾಮಧೇನುವಿಗೆ ನಾಲ್ಕು ವೇದಗಳೇ ನಾಲ್ಕು ಕಾಲುಗಳು. ತನ್ನ ನಾಲ್ಕು ಮೊಲೆಗಳಿಂದ ಮನುಷ್ಯರಿಗೆ ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಉಂಟುಮಾಡಿ ಕೊಡುತ್ತಿತ್ತು.

೬-೭. ಬಹುಕಾಲ ಕಳೆದಮೇಲೆ ಆ ಕಾಮಧೇನುವು ಯೌವನಾವಸ್ಥೆಯನ್ನು ಹೊಂದಿ, ಸುವರ್ಣದಂತೆ ಬೆಳಗುವ ಶರೀರಕಾಂತಿಯಿಂದ ಬಹುಮನೋಹರವಾಗಿ ಒಪ್ಪುತ್ತಿತ್ತು. ಇಂತಹ ಸುಂದರಾಕಾರದಿಂದಲೂ, ಸಲ್ಲಕ್ಷಣಗಳಿಂದಲೂ ಕೂಡಿದ ಆ ಕಾಮಧೇನುವು ಮೇರುಪರ್ವತದ ತಪ್ಪಲಿನಲ್ಲಿ ಓಡಾಡುತ್ತಿರುವುದನ್ನು ಒಂದುದಿನ ವೇತಾಳನು ನೋಡಿ ಕಾಮಪರವಶನಾದನು,

೮. ವೇತಾಲನು ಕಾಮೇಚ್ಛೆಯಿಂದಿರುವುದನ್ನು ಕಾಮಧೇನುವು ತಿಳಿದು, ಶಿವ ಪುತ್ರನಾದ ಅವನ ಬಳಿಗೆ ಪಶುಧರ್ದುದಂತೆ ತಾನೇ ಬಂದಿತು.

ಸೋಽವಾಪ ತಸ್ಯಾಂ ಪರಮಮಾಮೋದಂ ಶಂಕರಾತ್ಮಜಃ ।
ಸಾ ಚಾಪಿ ಪರಮಾಂ ತಸ್ಮಿನ್ಮುದಮಾಪಾತಿಹರ್ಷಿತಾ ॥ ೯ ॥

ತಯೋಃ ಪ್ರವೃತ್ತೇ ಸುರತೇ ತಸ್ಯಾಂ ಗರ್ಭೋಽಭವತ್ತದಾ ।
ಕಾಲೇ ಪ್ರಾಪ್ತೇ ತು ಸುಷುವೇ ಕಾಮಧೇನುರ್ಮಹಾವೃಷಂ ॥ ೧೦ ॥

ಸೋಽಚಿರೇಣೈವ ಕಾಲೇನ ಸುಮಹಾ ವೃಷಭೋಽಭವತ್ ।
ಮಹಾಕಕುದಸಂಯುಕ್ತಶ್ಚಾರುಶೃಂಗದ್ವಯಾನ್ವಿತಃ ॥ ೧೧ ॥

ಉತ್ಕ್ಷಿಪ್ಯ ವಿಚಲತ್ಕರ್ಣಯುಗಲೋ ದೀರ್ಘವಾಲಧಿಃ ।
ಕಕುದೇನ ಚ ಶೃಂಗಾಭ್ಯಾಂ ಕರ್ಣಾಭ್ಯಾಂ ಸ ಸಿತಾಭ್ರವತ್ ॥ ೧೨ ॥

ವಿಚಲದ್ದದೃಶೇ ದೇವೈಃ ಶೃಂಗೈರಿವ ಸಿತಾಚಲಃ ।
ವೇತಾಲಸ್ತ್ವಕರೋತ್ತಸ್ಯ ನಾಮ ಶೃಂಗ ಇತಿ ದ್ವಿಜಾಃ ॥ ೧೩ ॥

---

೯. ಶಂಕರನ ಪುತ್ರನಾದ ಆ ವೇತಾಳನು ಆ ಕಾಮಧೇನುವಿನಲ್ಲಿ ರತಿಕ್ರೀಡೆಯನ್ನೆಸಗಿ ಬಹಳ ಸಂತೋಷವನ್ನು ಹೊಂದಿದನು. ಆ ಕಾಮಧೇನವೂ ಕೂಡ ಅವನಲ್ಲಿ ಬಹಳ ಅನುರಾಗದಿಂದ ಸಂತೋಷಗೊಂಡಿತು.

೧೦. ಆಗ ಅವರಿಬ್ಬರಿಗೂ ಉಂಟಾದ ಸಂಭೋಗದಲ್ಲಿ ಆ ಕಾಮಧೇನವು ಗರ್ಭವನ್ನು ಧರಿಸಿ, ಕೆಲವುದಿನಗಳು ಕಳೆದನಂತರ ದೊಡ್ಡದಾದ ವೃಷಭವೊಂದನ್ನು ಪ್ರಸವಿಸಿತು.

೧೧. ಆ ಹೋರಿಕರುವು ಸ್ವಲ್ಪಕಾಲಕಳೆಯುವುದರಲ್ಲಿಯೇ ದೊಡ್ಡ ಹಿಳಿಲುನಿಂದಲೂ, ಸುಂದರವಾದ ಎರಡು ಕೊಂಬುಗಳಿಂದಲೂ ಕೂಡಿ, ನೋಡುವುದಕ್ಕೆ ಬಹಳ ಚೆನ್ನಾಗಿರುವ ದೊಡ್ಡವೃಷಭವಾಯಿತು.

೧೨-೧೩. ಆ ವೃಷಭವು ತನ್ನ ಎರಡು ಕಿವಿಗಳನ್ನು ಮೇಲಕ್ಕೆ ಎತ್ತಿಕೊಂಡು ಅತ್ತಿತ್ತ ಆಡಿಸುತ್ತಿತ್ತು. ಉದ್ದವಾದ ಬಾಲ, ಹಿಳಲು, ಕೊಂಬುಗಳು, ಕಿವಿಗಳು, ಇವುಗಳಿಂದ ಕೂಡಿ ಸುಂದರವಾದ ಶರೀರದಿಂದ ಅತ್ತಿತ್ತ ಸಂಚರಿಸುವುದನ್ನು ದೇವತೆಗಳು ನೋಡಿ, ಇದು ಶಿಖರಗಳಿಂದ ಕೂಡಿದ ಶ್ವೇತಪರ್ವತದಂತಿರುವುದೆಂದು ಕೊಂಡರು. ವೇತಾಲನು ಆ ವೃಷಭಕ್ಕೆ ಶೃಂಗವೆಂದು ಹೇಸರಿಟ್ಟನು.

ಸ ತು ಶೃಂಗೋ ಜ್ಞಾನಶಾಲೀ ಸಮಾರಾಧಯದೀಶ್ವರಂ ।
ಸೋಽಪಿ ತುಷ್ಟೋ ವರಂ ತಸ್ಮೈ ದದಾವಿಷ್ಟಂ ಪರಃ ಪ್ರಭುಃ ॥ ೧೪ ॥

ತಮೇವ ವಾಹನಂ ಚಕ್ರೇ ಕೃತ್ವಾ ದೇವತನುಂ ವೃಷಂ ।
ಸ ಚಿರಾಯುಶ್ಚ ಬಲವಾ೯ ಪೃಥಿವೀಧಾರಣೇ ಕ್ಷಮಃ ॥ ೧೫ ॥

ಶೃಂಗೋ ನಾಮ ಮಹಾತೇಜಾಃ ಕೇತುಸ್ತೋಽಸ್ಯಭವತ್ಪ್ರಭೋಃ ।
ಶೃಂಗೋ ಭೂತ್ವಾ ಮತೋ ಯಸ್ಮಾಚ್ಛಂಕರಸ್ಯ ಮಹಾತ್ಮನಃ ॥ ೧೬ ॥

ಅತೋ ಭೃಂಗ ಇತಿ ಖ್ಯಾತಿಮಥ ಪ್ರಾಪ ಮಹೇಶ್ವರಃ ।
ಸ ತು ಶೃಂಗೋ ಮಹಾದೇವೇ ಧ್ಯಾನಾಸಕ್ತೇ ಕ್ವಚಿತ್ ಕ್ವಚಿತ್ ॥ ೧೭ ॥

ವರುಣಸ್ಯ ಗೃಹಂ ಗತ್ವಾ ಸುರಭೇಸ್ತನಯಾಸ್ತು ಯಾಃ ।
ರೂಪಯೌವನಸಂಪನ್ನಾ ಭೇಜೇಽಲಂ ಸುರತೇನ ತಾಃ ॥ ೧೮ ॥

---

೧೪. ಆ ಶೃಂಗನಾದರೋ ಉತ್ತಮವಾದ ಜ್ಞಾನದಿಂದ ಕೂಡಿದ್ದಾಗಿ ಶಿವನನ್ನು ಭಕ್ತಿಯಿಂದ ಸೇವಿಸಿತು. ಸರ್ವೇಶ್ವರನಾದ ಶಿವನೂ ಕೂಡ ಸಂತುಷ್ಟನಾಗಿ ಆ ಶೃಂಗನಿಗೆ ಬೇಕಾದ ವರವನ್ನು ಕೊಟ್ಟನು.

೧೫. ಈಶ್ವರನು ಆ ವೃಷಭಕ್ಕೆ ದೇವಶರೀರವನ್ನು ಅನುಗ್ರಹಿಸಿ, ಅದನ್ನು ತನ್ನ ವಾಹನವಾನ್ನಾಗಿ ಮಾಡಿಕೊಂಡನು. ಆ ಶೃಂಗವಾದರೋ ಮಹಾಬಲಶಾಲಿಯಾಗಿ ಭೂಮಿಯನ್ನೂ ಸಹ ಅನಾಯಾಸದಿಂದ ಹೊರುವಷ್ಟು ಶಕ್ತಿಯುಳ್ಳದ್ದಾಗಿತ್ತು. ಈಶ್ವರನ ಅನುಗ್ರಹದಿಂದ ದೀರ್ಘಾಯುವನ್ನು ಪಡೆದು, ಮಹಾತೇಜಸ್ವಿಯಾಗಿ ಪ್ರಭುವಾದ ಶಂಕರನ ಧ್ವಜವೆನಿಸಿಕೊಂಡಿತು.

೧೬. ಆ ವೃಷಭವು ಮಹಾಮಹಿಮನಾದ ಈಶ್ವರನಿಗೆ ತುಂಬಾ ಪ್ರೀತಿಪಾತ್ರವಾಗಿತ್ತು. ಆದಕಾರಣ ಮಹೇಶ್ವರನು ಈ ಶೃಂಗನೆಂಬ ವೃಷಭವು ಭೃಂಗನೆಂದು ಪ್ರಸಿದ್ಧಿಯನ್ನು ಹೊಂದಲಿ ಎಂದು ನುಡಿದನು.

೧೭-೧೮. ಈಶ್ವರನು ಧ್ಯಾನಾಸಕ್ತನಾಗಿರುವಾಗ ಆ ಶೃಂಗನೆಂಬ ವೃಷಭವು ವರುಣನ ಮನೆಗೆ ಹೋಗಿ ರೂಪ ಯೌವನಗಳಿಂದ ಕೂಡಿರುವ ಸುರಭಿಯ ಪುತ್ರಿಯರಲ್ಲಿ ಯಥೇಚ್ಛವಾಗಿ ಸುರತಕ್ರೀಡೆಯನ್ನು ಮಾಡುತ್ತಿತ್ತು.

ವರುಣಸ್ಯ ಗೃಹೇ ಗಾವಃ ಸರ್ವಲಕ್ಷಣಸಂಯುತಾಃ ।
ತಿಷ್ಠಂತಿ ಸತತಂ ವಿಪ್ರಾಸ್ತಾಸು ತಾಸು ಸುತಾಃ ಪುನಃ ॥ ೧೯ ॥

ಬಹವಸ್ತು ಸಮುತ್ಪನ್ನಾಸ್ತೇಷಾಂ ಸೂತಿಪ್ರಸೂತಿಭಿಃ ।
ಸರ್ವಂ ಜಗದಿದಂ ವ್ಯಾಪ್ತಂ ತೇಭ್ಯೋ ಯಜ್ಞಂ ಪ್ರವರ್ತತೇ ॥ ೨೦ ॥

ಆಜ್ಯೇನ ದೇವಾಸ್ತುಷ್ಯಂತಿ ಯಜ್ಞಾ ಆಜ್ಯೇ ಪ್ರತಿಷ್ಠಿತಾಃ ।
ಯಜ್ಞಾಧೀನಮಿದಂ ಸರ್ವಂ ಜಗತ್ಸ್ಥಾವರಜಂಗಮಂ ॥ ೨೧ ॥

ತದಾಜ್ಯಂ ತು ಗವಾಧೀನಂ ತತಃ ಸರ್ವಂ ಗವಿ ಸ್ಥಿತಂ ।
ತದಿದಂ ಸಕಲಂ ವಿಶ್ವಂ ಗವಾಧೀನಂ ದ್ವಿಜೋತ್ತಮಾಃ ॥ ೨೨ ॥

ವೇತಾಲಸ್ಯ ಚ ತಾ ಗಾವೋ ವಂಶ್ಯಾಃ ಸರ್ವಪ್ರಿಯಾಸ್ಸದಾ ।
ಯ ಇದಂ ಶೃಣುಯಾನ್ನಿತ್ಯಂ ವೇತಾಲಸ್ಯ ಮಪಾತ್ಮನಃ ॥ ೨೩ ॥

---

೧೯. ಎಲೈ ಬ್ರಾಹ್ಮಣರೇ ಕೇಳಿ, ವರುಣನ ಮನೆಯಲ್ಲಿ ಸಮಸ್ತ ಶುಭಲಕ್ಷಣಗಳಿಂದ ಕೂಡಿದ ಗೋವುಗಳು ಯಾವಾಗಲೂ ಇರುವುವು. ಆ ಹಸುಗಳಲ್ಲಿ ಅನೇಕ ಮಕ್ಕಳುಗಳು ಹುಟ್ಟಿದವು.

೨೦. ಸುರಭಿಯ ವಂಶದ ಹಸುಗಳಿಗೆ ಬಹಳಮಂದಿ ಮಕ್ಕಳೂ, ಅವರ ಮಕ್ಕಳು, ಮೊಮ್ಮಕ್ಕಳು ಆದರು. ಇವರುಗಳಿಂದ ಈ ಪ್ರಪಂಚವೆಲ್ಲವೂ ತುಂಬಿರುವುದು. ಅವುಗಳಿಂದಲೇ ಯಜ್ಞವು ನಡೆಯುತ್ತಿರುವುದು.

೨೧-೨೨. ಆಜ್ಯದಿಂದ (ತುಪ್ಪ) ದೇವತೆಗಳು ಸಂತೋಷಪಡುವರು. ಆಜ್ಯದಲ್ಲಿಯೇ ಯಜ್ಞಗಳು ನೆಲಸಿರುವುವು ಎಂದರೆ ಆಜ್ಯವೇ ಯಜ್ಞಕ್ಕೆ ಬೇಕಾದ ಮುಖ್ಯ ವಸ್ತುವು. ಅದಿಲ್ಲದಿದ್ದರೆ ಯಜ್ಞವೇ ನಡೆಯುವುದಿಲ್ಲ. ಈ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಯಜ್ಞಾಧೀನವಾಗಿಮವುದು. ಈ ಯಜ್ಞಕ್ಕೆ ಮುಖ್ಯಕಾರಣವಾದ ಆಜ್ಯವು ಗೋವಿನ ಅಧೀನವಾಗಿರುವುದರಿಂದ, ಸಮಸ್ತಪ್ರಪಂಚವೂ ಗೋವಿನಿಂದಲೇ ಬದುಕಿರುವುದು. ಆದುದರಿಂದ, ಎಲೈ ಬ್ರಾಹ್ಮಣಶ್ರೇಷ್ಠರೇ, ಈ ಸಮಸ್ತಪ್ರಪಂಚವೂ ಗೋವುಗಳಿಗೆ ಅಧೀನವಾಗಿರುವುದು.

೨೩. ಲೋಕದಲ್ಲಿ ಇಷ್ಟು ಪ್ರಸಿದ್ಧಿಯನ್ನು ಹೊಂದಿರುವ ಹಸುಗಳು ವೇತಾಲನ ವಂಶಕ್ಕೆ ಸೇರಿದವುಗಳು. ಈ ಗೋವುಗಳು ಸಮಸ್ತಜನರಿಗೂ ಉಪಯೋಗ

ವಂಶಾನಾಂ ಜನ್ಮ ವಿಪ್ರೇಂದ್ರಾಃ ಸ ಸುಖೀ ಬಲವಾನ್ಭವೇತ್ ।
ನ ಗಾವೋ ನಾಪಿ ವಿಭವಾಸ್ತಸ್ಯ ನಶ್ಯಂತಿ ಪೈ ಕ್ವಚಿತ್ ।
ನ ಚ ಭೂತಪಿಶಾಚಾದ್ಯಾಸ್ತಂ ಪಶ್ಯಂತಿ ಕದಾಚನ ॥ ೨೪ ॥

ವೇತಾಲಸ್ಸತತಂ ತಸ್ಯ ರಕ್ಷಾಮಾಚರತಿ ಸ್ವಯಂ ।
ಇತಿ ವಃ ಕಥಿತಂ ವಿಪ್ರಾ ಯಥಾ ವೇತಾಲಭೈರವೌ ॥ ೨೫ ॥

ಜನಯಾಮಾಸತುಃ ಪುತ್ರಾ ವಿಚ್ಛಿನ್ನಾಃ ಸಂಶಯಶ್ಚ ವಃ ।
ಯಥಾ ಚ ಕಾಲಿಕಾದೇವೀ ಮೋಹಯಾಮಾಸ ಶಂಕರಂ ॥ ೨೬ ॥

ಯಥೋತ್ಪನ್ನಾ ಶರೀರಾರ್ಧಂ ಕೃತಂ ಶಂಭೋರ್ಯಥಾ ತಥಾ ।
ಕಾಳಿಕಾಯೈ ನಮಸ್ತುಭ್ಯಮಿತಿ ಯೋ ಭಾಷತೇ ಸ್ವಯಂ ॥ ೨೭ ॥

ವಾಗಿರುವುವು. ಎಲೈ ಬ್ರಾಹ್ಮಣೋತ್ತಮರೇ ಕೇಳಿರಿ, ಮಹಾಮಹಿಮನಾದ ವೇತಾಲನ ವಂಶವನ್ನೂ, ಅದು ವೃದ್ಧಿಗೊಂಡ ಕ್ರಮವನ್ನೂ ಯಾರು ನಿತ್ಯವೂ ಕೇಳುವರೋ ಅವರು ಯಾವಾಗಲೂ ಸುಖಿಗಳೂ, ಬಲಶಾಲಿಗಳೂ ಆಗುವರು.

೨೪. ವೇತಾಲನ ವಂಶಕಥನವನ್ನು ಕೇಳಿದವನ ಹಸುಗಳಾಗಲೀ, ಐಶ್ವರ್ಯಗಳಾಗಲೀ ಕೊಂಚವೂ ನಾಶವನ್ನು ಹೊಂದುವುದಿಲ್ಲ. ಭೂತಪ್ರೇತಪಿಶಾಚಾದಿಗಳು ಅವನ ದೃಷ್ಟಿಗೇ ಗೋಚರವಾಗುವುದಿಲ್ಲ.

೨೫. ತನ್ನ ವಂಶವನ್ನು ಕೇಳುವವರಿಗೆ ವೇತಾಲನೇ ಸ್ವಯಂ ಸಂರಕ್ಷಣೆಯನ್ನು ಮಾಡುವನು. ಎಲೈ ಬ್ರಾಹ್ಮಣರೇ ಕೇಳಿರಿ, ವೇತಾಲಭೈರವರು ಸಂತತಿಯನ್ನು ಪಡೆದ ವಿವರವನ್ನು ಹೇಳಿದೆನು. ನಿಮ್ಮ ಸಂಶಯವೂ ಪರಿಹಾರವಾಯಿತು.

೨೬. ಕಾಳಿಕಾದೇವಿಯು ಹೇಗೆ ಶಂಕರನನ್ನು ಮೋಹಿಸಿದಳೋ, ಆ ಪರಶಿವನ ಅರ್ಧಾಂಗಿಯಾಗಿ ಹೇಗೆ ಆದಳೋ, ಅದೆಲ್ಲವನ್ನೂ ನಿಮಗಾಗಿ ಹೇಳಿದ್ದಾಯಿತು.

೨೭. "ಎಲೈ ಕಾಳಿಕಾದೇವಿಯೇ, ನಿನಗೆ ನಮಸ್ಕಾರವು" ಎಂದಿಷ್ಟನ್ನು ಮಾತ್ರ ಯಾವ ಪುರುಷನು ಭಕ್ತಿಯಿಂದ ಹೇಳುವನೋ, ಮುಕ್ತಿಯು ಅಂತಹ ಮನುಷ್ಯನ ಕರಗತವಾಗಿರುವುದು. ಧರ್ಮಾರ್ಥಕಾಮಗಳೂ ಅವನ ಅಧೀನವಾಗಿರುವವು.

ತಸ್ಯ ಹಸ್ತೇ ಸ್ಥಿತಾ ಮುಕ್ತಿಸ್ತ್ರಿವರ್ಗಸ್ತು ವಶಾನುಗಃ ।
ಇತಿ ವಃ ಕಥಿತಂ ಪುಣ್ಯಂ ಪುರಾಣಂ ಕಾಳಿಕಾಭ್ವಯಂ ॥ ೨೮ ॥

ಮಂತ್ರಯಂತ್ರಮಯಂ ಶುದ್ಧಂ ಜ್ಞಾನದಂ ಕಾಮದಂ ಪರಂ ।
ಇತಿ ಗುಹ್ಯತಮಂ ಲೋಕೇ ವೇದೇಷು ಚ ತಥಾ ದ್ವಿಜಾಃ ॥ ೨೯ ॥

ದೇವಗಂಧರ್ವಸಿದ್ಧಾದ್ಯೈಃ ಸ್ಪೃಹಣೀಯಮಿದಂ ಸದಾ ।
ಅಧೀತಂ ಚ ಶ್ರುತಂ ಮತ್ತೋ ವಸಿಷ್ಠೇನ ಮಹಾತ್ಮನಾ ॥ ೩೦ ॥

ಇದಂ ಪುರಾಣಮಮೃತಂ ಕಾಳಿಕಾಭ್ವಯಮುತ್ತಮಂ ।
ತೇನ ಗುಪ್ತಮಿದಂ ಸರ್ವಂ ಕಾಮರೂಪೇ ಸುರಾಲಯೇ ॥ ೩೧ ॥

ತದಿದಾನೀಂ ಸಮಾಖ್ಯಾತಂ ವ್ಯಕ್ತೀಕೃತ್ಯ ಮಹರ್ಷಯಃ ।
ಯುಷ್ಮಾಭಿರಪಿ ನೋ ದೇಯಂ ಗೋಪ್ಯಂ ಲೋಕೇಷು ಸರ್ವದಾ ॥ ೩೨ ॥

೨೮-೨೯. ಈರೀತಿಯಾಗಿ ಕಾಳಿಕಾಪುರಾಣವೆಂಬ ಮಹಾಪುಣ್ಯಪ್ರದವಾದ ಈ ಪುರಾಣವನ್ನು ನಿಮಗೆ ಹೇಳಿದ್ದಾಯಿತು. ಇದರಲ್ಲಿ ಮಂತ್ರಯಂತ್ರವಿಧಾನಗಳೂ, ತತ್ತ್ವಜ್ಞಾನಬೋಧನೆಯೂ ತುಂಬಿರುವವು. ಈ ಪುರಾಣಶ್ರವಣದಿಂದ ಚಿತ್ತ ಶುದ್ಧಿಯೂ, ಜ್ಞಾನಪ್ರಾಪ್ತಿಯೂ, ಅಭೀಷ್ಟಸಿದ್ಧಿಯೂ ಲಭಿಸುವವು. ಎಲೈ ದ್ವಿಜರೇ ಈ ಪುರಾಣವು ಸರ್ವ ವೇದಗಳ ರಹಸ್ಯವು. ಪ್ರಪಂಚದಲ್ಲಿ ಅತಿಗೂಢವಾಗಿರುವುದು. ಇಂತಹ ದಿವ್ಯ ಪುರಾಣವನ್ನು ಕೇಳಲು ದೇವಗಂಧರ್ವಸಿದ್ಧರೇ ಮೊದಲಾದವರು ಬಹಳ ಆಸೆಪಡುವರು.

೩೦-೩೧. ಮಹಾಮಹಿಮನಾದ ವಸಿಷ್ಠಮುನಿಯು ಅಮೃತದಂತೆ ಉತ್ತಮವಾದ ಈ ಕಾಲಿಕಾಪುರಾಣವನ್ನು ನನ್ನಲ್ಲಿ ಅಧ್ಯಯನಮಾಡಿ ತಿಳಿದುಕೊಂಡನು. ಆ ಮುನಿಯು ಇದನ್ನು ದೇವತೆಗಳಿಗೆ ವಾಸಸ್ಥಾನವಾದ ಕಾಮರೂಪವೆಂಬ ಸ್ಥಳದಲ್ಲಿ ರಹಸ್ಯವಾಗಿ ಇರಿಸಿರುವನು.

೩೨. ಎಲೈ ಮಹರ್ಷಿಗಳಿರಾ ಕೇಳಿರಿ, ರಹಸ್ಯವಾಗಿರಿಸಿದ್ದ ಈ ಪುರಾಣವನ್ನು ನಾನು ನಿಮಗೋಸ್ಕರ ಪ್ರಕಟಮಾಡಿ ಹೇಳಿರುವೆನು. ನೀವುಗಳೂ ಕೂಡ, ಲೋಕದಲ್ಲಿ ಇದನ್ನು ಯಾರಿಗೂ ಉಪದೇಶಮಾಡಕೂಡದು. ರಹಸ್ಯವಾಗಿಯೇ ಇರಬೇಕು.

ಶಠಾಯ ಚಲಚಿತ್ತಾಯ ನಾಸ್ತಿಕಾಯಾಜಿತಾತ್ಮನೇ ।
ಭಕ್ತಿಶ್ರದ್ಧಾವಿಹೀನಾಯ ನ ದಾತವ್ಯಂ ಕದಾಚನ ॥ ೩೩ ॥

ಇದಂ ಸಕೃತ್ಪಠೇದ್ಯಸ್ತು ಪುರಾಣಂ ಕಾಳಿಕಾಭ್ವಯಂ ।
ಸ ಕಾಮಾನಖಿಲಾ ಪ್ರಾಪ್ಯ ಶೇಷೇಽಮೃತಮವಾಪ್ನುಯಾತ್ ॥ ೩೪ ॥

ಮುಂದಿರೇ ಲಿಖಿತಂ ಯಸ್ಯ ಪುರಾಣಮಿದಮುತ್ತಮಂ ।
ಸದಾ ತಿಷ್ಠತಿ ನೋ ತಸ್ಯ ವಿಘ್ನಃ ಸಂಜಾಯತೇ ದ್ವಿಜಾಃ ॥ ೩೫ ॥

ಯೋಽಧೀತೇಽಹನ್ಯಹನ್ಯೇತದ್ಗುಹ್ಯಂ ತಂತ್ರಮಿದಂ ಪರಂ ।
ಅಧೀತಾಃ ಸಕಲಾವೇದಾಸ್ತೇನೇಜ್ಯ ದ್ವಿಜಸತ್ತಮಾಃ ॥ ೩೬ ॥

ತಸ್ಮಾನ್ನೈವಾಧಿಕೋಽನ್ಯೋಽಸ್ತಿ ಕೃತಕೃತ್ಯೋ ವಿಚಕ್ಷಣಃ ।
ಸ ಸುಖೀ ಬಲವಾ ಲೋಕೇ ದೀರ್ಘಾಯುರಪಿ ಜಾಯತೇ ॥ ೩೭ ॥

---

೩೩. ದುಷ್ಟನಿಗೂ, ಚಂಚಲಮನಸ್ಸುಳ್ಳವನಿಗೂ, ನಾಸ್ತಿಕನಿಗೂ, ಜಿತೇಂದ್ರಿಯನಲ್ಲದವನಿಗೂ, ಭಕ್ತಿಶ್ರದ್ಧೆಯಿಲ್ಲದವನಿಗೂ ಸಹ ಇದನ್ನು ಯಾವಾಗಲೂ ಹೇಳಲೇಬಾರದು.

೩೪. ಯಾವನು ಕಾಲಿಕಾಪುರಾಣವೆಂಬ ಈ ಗ್ರಂಥವನ್ನು ಒಂದುಸಲವಾದರೂ ಓದುವನೋ ಅವನು ಸಮಸ್ತ ಇಷ್ಟಾರ್ಥಗಳನ್ನೂ ಹೊಂದಿ. ಕಡೆಗೆ ಅಮರತ್ವವನ್ನು ಪಡೆಯುವನು.

೩೫. ಎಲೈ ಬ್ರಾಹ್ಮಣಶ್ರೇಷ್ಠರೇ ಕೇಳಿರಿ, ಯಾವನ ಮನೆಯಲ್ಲಿ ಕೈಯಿಂದ ಬರೆದ ಈ ಪುರಾಣವಪುಸ್ತಕವು ಇರುವುದೋ ಅವನಿಗೆ ಯಾವಾಗಲೂ ವಿಘ್ನಗಳು ಉಂಟಾಗುವುದೇ ಇಲ್ಲ.

೩೬-೩೭. ಉತ್ತಮವಾಗಿಯೂ, ರಹಸ್ಯವಾಗಿಯೂ, ಇರುವ ಈ ತಂತ್ರವನ್ನು ಯಾವನು ಪ್ರತಿದಿನವೂ ಓದುವನೋ, ಅವನು ಸಮಸ್ತ ವೇದಾಧ್ಯಯನಮಾಡಿದ ಫಲವನ್ನು ಹೊಂದುವನು. ಅವನಿಗಿಂತ ಬುದ್ಧಿವಂತನೂ, ಕೃತಕೃತ್ಯನೂ, ಅಧಿಕನೂ ಆದ ಪುರುಷನು ಮತ್ತೊಬ್ಬನಿಲ್ಲ. ಅವನು ಈ ಲೋಕದಲ್ಲಿ ಸುಖಿಯೂ ,ಬಲಶಾಲಿಯೂ, ಆಗುವನಲ್ಲದೆ ದೀರ್ಘಾಯುಷ್ಯವುಳ್ಳವನೂ ಆಗುವನು.

ಯೋ ಲೋಕವಿಶಸ್ಯತತಂ ಬಿಭರ್ತಿ
ಯಃ ಪಾಲಯತ್ಯಂತಕರಸ್ತಥಾಂತೇ ।
ಇದಂ ಸಮಸ್ತಂ ಭ್ರಮಮಭ್ರಮಂ ವಾ
ಯದೀಯರೂಪಂ ಚ ನಮೋಽಸ್ತು ತಸ್ಮೈ ॥ ೩೮ ॥

ಪ್ರಧಾನಪುರುಷೋ ಯಸ್ಯ ಪ್ರಪಂಚೋ ಯೋಗಿನಾಂ ಹೃದಿ ।
ಯಃ ಪುರಾಣಾಧಿಪೋ ವಿಷ್ಣುಃ ಪ್ರಸೀದತು ಸ ವಃ ಸ್ಥಿತಃ ॥ ೩೯ ॥

ಯೋ ಹೇತುರುಗ್ರಃ ಪುರುಷಃ ಪುರಾಣಃ
ಸನಾತನಃ ಶಾಶ್ವತ ಈಶ್ವರಃ ಪರಃ ।
ಪುರಾಣಕೃದ್ವೇದಪುರಾಣವೇದ್ಯಃ
ಪ್ರಸ್ತೌಮಿ ತಂ ನೌಮಿ ಪುರಾಣಶೇಷೇ ॥ ೪೦ ॥

---

೩೮. ಯಾವ ಜಗದೀಶ್ವರನು ಯಾವಾಗಲೂ ಈ ಜಗತ್ತನ್ನು ಸೃಷ್ಟಿಮಾಡಿ, ರಕ್ಷಿಸಿ, ಕೊನೆಯಲ್ಲಿ ನಾಶಮಾಡುವನೋ, ಮತ್ತು ಯಾವ ಪರಮಾತ್ಮನ ರೂಪಗಳೇ ಆದ ಈ ದೃಶ್ಯಾದೃಶ್ಯಸ್ವರೂಪಂಚವೆಲ್ಲವೂ ಬರಿಯ ಭ್ರಮೆಯೇ ಅಥವಾ ಯಥಾರ್ಥವೇ ಎಂಬುದನ್ನು ಸಹ ತಿಳಿಯಲು ಯಾರಿಗೂ ಸಾಧ್ಯವಿಲ್ಲವೋ, ಅಂತಹ ಮಹಾಮಹಿಮೆಯುಳ್ಳ ಪರಮೇಶ್ವರನಿಗೆ ನಮಸ್ಕಾರವು.

೩೯. ಯೋಗಿಗಳ ಹೃದಯದಲ್ಲಿ ಸದಾ ಧ್ಯಾನಿಸಲ್ಪಡುವ ಪ್ರಪಂಚಸ್ವರೂಪನೂ, ಪ್ರಧಾನಪುರುಷನೂ, ಪುರಾಣಗಳಿಗೆಲ್ಲಕ್ಕೂ ಅಧಿಪತಿಯೂ ಆಗಿರುವ ವಿಷ್ಣುವು ನಿಮಗೆ ಪ್ರಸನ್ನನಾಗಲಿ.

೪೦. ಈಶ್ವರನು ಪ್ರಪಂಚಕ್ಕೆ ಕಾರಣನಾಗಿರುವನು. ಉಗ್ರನೆಂದು ಪ್ರಸಿದ್ಧನು. ಪ್ರಕೃತಿಪುರುಷ ಎಂಬೆರಡುವಸ್ತುಗಳಲ್ಲಿ ಪುರುಷನೆಂದು ಪ್ರಸಿದ್ಧಿಯನ್ನು ಹೊಂದಿರುವನು. ಎಲ್ಲಕ್ಕೂ ಆದಿಯು. ಇವನಿಗೆ ನಾಶವೆಂಬುದಿಲ್ಲ. ಸದಾಕಾಲವಲ್ಲಿಯೂ ಇದ್ದೇ ಇರುವನು. ಎಲ್ಲಕ್ಕೂ ಅಧಿಪತಿಯಾಗಿರುವನು. ಎಲ್ಲರಿಗಿಂತಲೂ ಉತ್ಕೃಷ್ಟನು. ಪುರಾಣಗಳನ್ನು ರಚಿಸಿದವನು. ವೇದಪುರಾಣಗಳಿಂದಲೇ ತಿಳಿಯಲ್ಪಡತಕ್ಕವನು. ಈ ರೀತಿಯಾಗಿರುವ ಈಶ್ವರನನ್ನು ಈಪುರಾಣದ ಕೊನೆಯಲ್ಲಿ ನನಗೆ ಮಂಗಳವನ್ನುಂಟುಮಾಡುವುದಕ್ಕೋಸ್ಕರ ಸ್ತೋತ್ರಮಾಡಿ ನಮಸ್ಕಾರಮಾಡುತ್ತೇನೆ.

ಇತಿ ಸಕಲಜಗದ್ಬಿಭರ್ತಿ ಯಾಸಾಂ
ಮಧುರಿಪುಮೋಹಕರೀ ರಮಾಸ್ವರೂಪಾ ।
ರಮಯತಿ ಚ ಹರಂ ಶಿವಾಸ್ವರೂಪಾ
ವಿತರತು ವೋ ವಿಭವಂ ಶುಭಾನಿ ಮಾಯಾ ॥ ೪೧ ॥

॥ ಇತಿ ಶ್ರೀಕಾಲಿಕಾಪುರಾಣೇ ತ್ರಿನವತಿತಮೋಽಧ್ಯಾಯಃ ॥

ಸಮಾಪ್ತಮೇತಚ್ಚ ಪುರಾಣಂ
॥ ಶುಭಂ ಭೂಯಾತ್ ॥

---

೪೧. ಯಾವ ದೇವಿಯ ರೂಪವು ಸಮಸ್ತವಾದ ಜಗತ್ತನ್ನು ರಕ್ಷಿಸಿ ಪೋಷಿಸುವುದೋ, ಲಕ್ಷ್ಮೀ ಎಂಬ ರೂಪದಿಂದ ವಿಷ್ಣುವನ್ನು ಮೋಹಗೊಳಿಸುವುದೋ, ಪಾರ್ವತೀರೂಪದಿಂದ ಶಿವನನ್ನು ಸಂತೋಷಗೊಳಿಸುವುದೋ, ಅಂತಹ, ಮಾಯಾ ಎಂಬ ಹೆಸರಿನಿಂದ ಪ್ರಸಿದ್ಧಳಾದ ದೇವಿಯು ನಿಮಗೆ (ನಮಗೆ) ಸಮಸ್ತ ಸನ್ಮಂಗಳಗಳನ್ನೂ, ವಿಭವಾದ್ಯೈಶ್ವರ್ಯಗಳನ್ನೂ ಕೊಟ್ಟು ರಕ್ಷಿಸಲಿ.

ಇಂತು ಶ್ರೀ ಕಾಳಿಕಾಪುರಾಣದಲ್ಲಿ ತೊಂಭತ್ತಮೂರನೆಯ
ಅಧ್ಯಾಯವು ಮುಗಿದುದು.

॥ ಕಾಳಿಕಾಪುರಾಣವು ಸಮಾಪ್ತವಾದದು ॥
॥ ಮಂಗಳಂ ॥

Printed by G. BASAPPA, proprietor,
SREE BASAVESWARA ELECTRIC PRESS,
Devaraj Market Buildings, Mysore.